ವಿಶ್ವಾಸದಾಯಕ
ಆಯುರ್ವೇದ
ಔಷಧಗಳಿಗೆ
ವಿಶ್ವಾಸದ ಸಂಸ್ಥೆ:
ನಾಯಕ
ಆಯುರ್ವೇದಾಶ್ರಮ
ಕಟೀಲಾಡಿ. ದ. ಕ.

ನವಯುಗ

ಮೇಲ್ದರ್ಜೆಯ
ಉಪಾಹಾರ
ಮಂದಿರ
ಉಡುಪಿ
ಶ್ರೀಕೃಷ್ಣ ವಿಲಾಸ
ಕಾರವಾರ

ಸಂಪುಟ ೫೧
ಸಂಚಿಕೆ ೪೮
NAVAYUGA
3-8-1972

(ಅಲ್ಪಸುತ-ಬಹುಮತ-ಸರ್ವಾನುಮತದ ನಿರ್ಣಯ)

ರಾಜ್ಯಕ್ಕೆ ಕರ್ನಾಟಕ ಹೆಸರು

ನಮ್ಮ ರಾಜ್ಯದ ಹೆಸರು ಬದಲಾಯಿಸಬೇಕೆಂಬ ನಿರ್ಧಾರವನ್ನು ಸಚಿವ ಸಂಪುಟ ಪ್ರಕಟಿಸಿ ಒಂದೆರಡು ತಿಂಗಳುಗಳು ಸಂದವು. ಈ ನಡುವೆ ಹೇಗೆ ಪುನರ್ನಾಮಕರಣ ಮಾಡಬೇಕೆಂಬುದರ ಬಗೆಗೆ ಸಾರ್ವಜನಿಕ ಚರ್ಚೆಯೂ ನಡೆಯಿತು. ಕರ್ನಾಟಕವೆಂಬ ಹೆಸರು ಮತ್ತೆ ನಾಲಿಗೆ ತುದಿಯಲ್ಲಿ ಕುಣಿದಾಡಿತು. ಕೆಲವರು ಕನ್ನಡ ನಾಡೆಂದರು, ಕೆಲವರು ಮೈಸೂರು-ಕರ್ನಾಟಕವೆಂದರು. ಆದರೆ, ಮೈಸೂರೇ ಇರಲಿಯೆಂದವರು ಕಡಿಮೆ, ಇಲ್ಲವೇ ಇಲ್ಲ ವೆಂದರೂ ಸಲ್ಲುತ್ತದೆ.

ರಾಜ್ಯದ ಆಳುವ ಕಾಂಗ್ರೆಸ್‌ನ ಶಾಸಕರು ಸಭೆಸೇರಿ ಹೊಸ ಹೆಸರಿನ ಬಗ್ಗೆ ಚರ್ಚೆ ನಡೆಸಿದರು. ಚರ್ಚೆಯೇನೋ ಮುಕ್ತ ಮನಸ್ಸಿನಿಂದಲೇ ನಡೆಯಿತು; ಕರ್ನಾಟಕವೆಂದೇ ಪುನರ್ನಾಮಕರಣ ಮಾಡಲು ಮತ್ತು ಈ ಸಂಬಂಧದ ಅಧಿಕೃತ ನಿರ್ಣಯವೊಂದನ್ನು ಮುಖ್ಯಮಂತ್ರಿಗಳು ಮಂಡಿಸಲು ನಿರ್ಧಾರ ಮಾಡಿತು. ನಿರ್ಧಾರವು ಸರ್ವಾನುಮತದ್ದೇ ಆದರೂ ಸರ್ವರೂ ಇದನ್ನು ಹೃದಯದಿಂದ ಅಪ್ಪಿಕೊಂಡರೆಂದರೆ ಕೆಂಡಿತಕ್ಕೂ ತಪ್ಪಾಗುತ್ತದೆ.

ರಾಜ್ಯದಲ್ಲಿನ ಆಳುವ ಕಾಂಗ್ರೆಸ್ ಶಾಸಕರ ಸಂಖ್ಯೆ ಒಟ್ಟು ೧೫೦. ಇವರಲ್ಲಿ ಸಭೆಯಲ್ಲಿ ಹಾಜರಿದ್ದವರು ಕೇವಲ ೧೧೯. ಇದು ಎರಡು ಮೂರನೆ ಅಂಶಕ್ಕಿಂತ ಹೆಚ್ಚೆಂಬುದು ನಿಜ. ಆದರೆ, ಹೆಸರಿನ ಬದಲಾವಣೆಯಂತಹ ಪ್ರಮುಖ ಪ್ರಶ್ನೆಯ ಬಗ್ಗೆ ನಿರ್ಧಾರವಾಗಲಿದ್ದ ಸಭೆಯಲ್ಲಿ ಅನುಪಸ್ಥಿತರಾದ ಶಾಸಕರು ಹೆಸರಿಗೇನೂ ಮಹತ್ವ ನೀಡದಿರುವುದು ಸೂಚಿಸಿದ ಸಂಗತಿಯಲ್ಲವೇನು? ಕೆಲವೊಂದು ಶಾಸಕರಿಗೆ ಅನಿವಾರ್ಯ ಕಾರಣಗಳಿಂದ ಸಭೆಯಲ್ಲಿ ಭಾಗವಹಿಸುವುದು ಅಸಾಧ್ಯವಾಗಿರಬಹುದು. ಆದರೆ, ಈ ಸಭೆಯಲ್ಲಿ ಎಲ್ಲ ಸದಸ್ಯರೂ ಹಾಜರಿದ್ದಿರಬೇಕಾಗಿದ್ದುದು ಅವರ ಆದ್ಯಕರ್ತವ್ಯವಾಗಿತ್ತು. ಮಸೂದೆಗಳ ಮೇಲೆ ಮತದಾನವು ತುರುಸಿನಲ್ಲಿರುವಾಗ ಶಾಸನಸಭೆಗಳಲ್ಲಿ ಹಾಜರಿರುವುದು, ಕೈ ಎತ್ತುವುದು ನೂತ್ರವೇ ತನ್ನ ಕೆಲಸವೆಂದು ತಿಳಿದಿರುವುದು ಸರಿಯೇ? ಪಕ್ಷದ ನಿರ್ಣಯ ಎರಡೂವರೆ ಕೋಟಿ ಕನ್ನಡಿಗರ ಮೇಲೆ ಹೇರಲ್ಪಡುವುದೆಂಬುದರ ಕಡೆಗೂ ಶಾಸಕರ ಗಮನವಿರಬೇಡವೆ?

ಸಭೆಯಲ್ಲಿ ಹಾಜರಿದ್ದ ೧೧೯ ಶಾಸಕರ ಒಲವಾದರೂ ಹೇಗಿತ್ತೆಂಬುದು ವಿಚಾರಣೀಯ. ಇವರಲ್ಲಿ ೧೧ ಮಂದಿ ಸದಸ್ಯರು ತಟಸ್ಥರು. ಅಂದರೆ, ಇವರು ಯಾವ ಹೆಸರನ್ನಾದರೂ ಒಪ್ಪಿಕೊಳ್ಳಲು ಸಿದ್ಧರು. ಹೆಸರು ಕರೆಯುವುದಕ್ಕೆ ನೂತ್ರವಾಗಿರುವಾಗ ಯಾವುದಾದರೇನು ಎಂಬ ತಾತ್ಪರ್ಯಭಾವನೆಯವರು. ಹೆಸರಿನ ಬಗೆಗೆ ತಮ್ಮದೇ ಆದ ನಿಶ್ಚಿತ ನಿಲುಮೆಯಿಲ್ಲದವರು; ಇವ್ವರೂ ಅದನ್ನು ಅಭಿವ್ಯಕ್ತಪಡಿಸಲಾಗದಂತೆ ನಾಲಿಗೆಮುರಿಸಿಕೊಂಡವರು. ಈ ಬಗೆಯ ಶಾಸಕರಿಂದ ಜನತೆಯನ್ನು ಭಗವಂತನೇ ಕಾಪಾಡಬೇಕು. ಮುಖ್ಯ ಮಂತ್ರಿ ದೇವರಾಜ ಅರಸರೂ 'ಪಕ್ಷದ ನಿರ್ಧಾರವನ್ನು ಒಪ್ಪುವೆ, ಎಂದು ಹೇಳಿ ಬಹುಮತವನ್ನು ಮನ್ನಿಸುವ ಉದಾರತೆ ತೋರಿಸಿದರೂ ತನ್ನ ನಿಲುಮೆಯನ್ನು ಪೂರ್ತ ಬಹಿರಂಗ ಪಡಿಸಲು ಹಿಂಜರಿದರೆಂಬಾಗೆ ಆ ೧೧ ಜನರದ್ದೇನು ಮಹಾ?

ಕನ್ನಡದ ಸುಸ್ಪಷ್ಟಿದ್ದ ಕವಿ-ವಾರ್ತಾನಿಕ ಡಾ| ಡಿ. ವಿ. ಗುಂಡಪ್ಪನವರು ರಾಜ್ಯದ ಹೆಸರು ಮೈಸೂರು-ಕರ್ನಾಟಕವಿರಲಿ ಎಂದು ಸೊತ್ತ ನೊದಲು ಪತ್ರಿಕೆಗಳಲ್ಲಿ ಅಭಿಪ್ರಾಯ ಮೂಡಿಸಿದರು. ಇದೇ ಮೂದಲಿಯ ಜಮ್ಮು-ಕಾಶ್ಮೀರನೆಂಬ ಇನ್ನೊಂದು ರಾಜ್ಯ ಭಾರತದಲ್ಲಿದೆಯೆಂಬುದು ಸತ್ಯ. ಈ ದ್ವಿನಾಮ ಪರಂಪರೆಯನ್ನು ಬೆಳೆಸುವುದಕ್ಕೆ ಬಹುಮಂದಿ ಶಾಸಕರು ತಮ್ಮ ಒಲವನ್ನು ಹೊಂದಿದರು. ಕ್ರಾಯಃ ಈ ರೂಪದಲ್ಲಾದರೂ "ಮೈಸೂರು" ಜೀವ ಪಡೆದು ಕೊಂಡಿರಲಿ ಎಂಬುದಿವರ ನಿಜಾಭಿಪ್ರಾಯವೆಂಬಿರಹುದು.

'ಕನ್ನಡ ನಾಡು' ಎಂಬ ಹೆಸರೂ ರಾಜ್ಯ ಶಾಸಕರ ಬೆಂಬಲ ಪಡೆಯಿತು. ಹೀಗೆ ಉಳಿದ ೯೯ ಶಾಸಕರು 'ಕರ್ನಾಟಕ'ಕ್ಕೇ ಕೈ ಮೆತ್ತಿದರು. ನಿರ್ಣಯ ನೊದಲಿಗೆ ಬಹುಮತದಿಂದ. (ಬಳಿಕ ಸರ್ವಾನುಮತದಿಂದ-ಪ್ರತಾಸತ್ತೆಯ ಸರ್ವಸಂಪ್ರದಾಯದಂತೆ) ಮಂಜೂರಾಯ್ತು. ಇಷ್ಟೇನು ಇಷ್ಟರಲ್ಲೇ ಈ ಸಂಬಂಧದ ಅಧಿಕೃತ ಗೊತ್ತುವಳಿ ಶಾಸನ ಸಭೆಗಳಲ್ಲಿ ಹೊಂಡಿತಮಾಗಲಿದೆ.

ವಿರೋಧ ಪಕ್ಷಗಳಲ್ಲಿ ಹೆಚ್ಚಿನವು ಕರ್ನಾಟಕ ಪರವಾಗಿಯೇ ಇರುವುದರಿಂದ ಪಕ್ಷೇತರರಲ್ಲಿ ಮೈಸೂರು ವಾದಿಗಳೇ ಉಳಿದಿಲ್ಲವಾದುದರಿಂದ ಯಾವ ಹೆಚ್ಚಿನ ಚರ್ಚೆಯಿಲ್ಲದೇನೇ ನಿರ್ಣಯ ಸ್ವೀಕೃತವಾಗುವ ನಿರೀಕ್ಷೆಯಿದೆ.

೧೯೧ ಮಂದಿ ಆಳುವ ಕಾಂಗ್ರೆಸ್ ಶಾಸಕರಲ್ಲಿ ೯೯ ಶಾಸಕರ ಬೆಂಬಲ ಮಾತ್ರ (ಇದು ನಾಚಿಕೆಗೇಡು?) ಪಡೆದ ಈ ಹೊಸ ಹೆಸರಿನ ಬಗೆಗೆ ಶಾಸನ ಸಭೆಗಳಲ್ಲೂ ಇದೇ ಆಸನ್ನೆ ಬರಲಾರದು. ಹಿಂದೆಲ್ಲ ಈ ಬಗ್ಗೆ ಮತಸ್ವಾತಂತ್ರ್ಯದ ಬೇಡಿಕೆ ಮುಂದೆ ಬಂದಿತ್ತು; ಈ ಬೇಡಿಕೆಯೆಂದಾಗಿಯೇ ಕರ್ನಾಟಕದ ಕೂಗು ನಿರ್ಬಲವಾಗಿತ್ತು.

ಈ ಚರಿತ್ರಾರ್ಹ ಸಭೆಯಲ್ಲಿ ಮೈಸೂರು ವಾದಿಗಳು ನಿಸ್ತೇಜರಾಗಿದ್ದರು. ತಾವು ಬಯಸುವ ಹೆಸರನ್ನು ಉಳಿಸಿಕೊಳ್ಳುವುದು ಸಾಧ್ಯವಿಲ್ಲವೆಂದು ಅವರ ಮನಸ್ಸಿಗೆ ನಾಟಿಹೋಗಿತ್ತು. ಆದುದರಿಂದ ಅವರು ಮೈಸೂರು-ಕರ್ನಾಟಕ ಅಥವಾ ಕನ್ನಡ ನಾಡುಗಳಿಗೆ ಬೆಂಬಲ ನೀಡಿ ತಮ್ಮ ಕರ್ನಾಟಕ ವಿರೋಧವನ್ನು ಉಳಿಸಿಕೊಂಡರು; ಇವರ ಪಾತು ಉದ್ವೇಗಕರವಾಗಿಯೂ ಇತ್ತು.

'ಹಳೆಯ ಮೈಸೂರಿಗ'ರಾದ ಶ್ರೀ ಪುಟ್ಟುಸ್ವಾಮಿ ಮತ್ತು ಜಿ. ವೆಂಕಟಪ್ಪ ನೊದಲಾದ ಕೆಲವರು ಹಿಂದಿನಂತೆಯೇ ಮತಸ್ವಾತಂತ್ರ್ಯವನ್ನು ಬೇಡಿದರು! "ಇನ್ನೂ ಕೆಲವರು" ಈ ಬಗ್ಗೆ ಅವಸರವೇಕೆನೆಂದು ಸವಾಲೊಡ್ಡಿದರು. ಪಕ್ಷದ ಪ್ರಧಾನ ಕಾರ್ಯದರ್ಶಿಗಳಲ್ಲಿ ಒಬ್ಬರಾದ ಶ್ರೀ ವೆಂಕಟ್ಯಮಣರು ಹೈಕಮಾಂಡಿನ ನಿರ್ಧಾರಕ್ಕೆ ಒಪ್ಪಿಸಿಬಿಟ್ಟು, ಇಂದಿರಾ ಶಂಖದಿಂದಲೇ ನೀರು ಸುರಿಯಲಿ ಎಂದರು.

'ಕರ್ನಾಟಕ'ದ ಬಗ್ಗೆ ಆಪಸ್ವರ ಹಿಂದೆಯೂ ಇತ್ತು. ಇಂದಿಗೂ ಉಳಿದುಬಂತು. ಆದರೆ ಅಂದಿಗೂ ಇಂದಿಗೂ ಒಂದು ಅಂತರ. ಅಂದು ಆಪಸ್ವರವನ್ನು ಕೇಳುವ ಕಿವಿಗಳಿದ್ದುವು ಧ್ವನಿಕರ ಮೇಲೆ ಅನುಕಂಪ ತೋರುವ ಅಂತಃಕರಣಗಳಿದ್ದರು. ಆದರೆ, ಇಂದು ಆಪಸ್ವರವೆಬ್ಬಿಸುವವರು ಪಕ್ಷಪಥದಲ್ಲಿ ನಿಸ್ಸೈಯಿಲ್ಲದವರಾಗುತ್ತಾರೆ, ಪ್ರತಿಗಾಮಿಗಳಾಗುತ್ತಾರೆ.

ಏನೇ ಆಗಲಿ, ರಾಜ್ಯಕ್ಕೆ ನ್ಯಾಯುವಾದ ಹೆಸರು ಇಡುವ ಸುಮುಹೂರ್ತ ಬರಲಿದೆಯೆಂದು ಹಿಗ್ಗಬಹುದು. ●

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
166 ಶಾಖೆಗಳಿಂದ ಹೆಬ್ಬರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
(ಸ್ಥಾಪನೆ: 1931)
ರಿಜಿಸ್ಟರ್ಡ್ ಆಫೀಸು:- ಹೈಫ್ ಹೌಸ್ ಹಿಲ್ ರೋಡ್, ಮಂಗಳೂರು-3.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1.
ಎಮ್. ಸುಂದರ್‌ರಾಮ್ ಶೆಟ್ಟಿ,
ಚೇಯರ್‌ಮೆನ್.

ಕಥಾ ಪ್ರಪಂಚ

ದ್ರೋಹ

—ಶ್ರೀಮತಿ ಯಶೋದಾ ಎನ್. ಜೆನ್ನಿ.

ನಾವು ಆ ಊರಿಗೆ ಬಂದ ಆರಂಭದಲ್ಲೇ ನ್ನೊದಲು ಪರಿಚಯವಾದ ವತ್ಸಲಾಳೊಂದಿಗೆ ಕೆಲವೇ ದಿನಗಳಲ್ಲಿ ಗಾಢವಾದ ಸ್ನೇಹವೂ ಬೆಂಟಾಯಿತು. ಡಾಕ್ಟರರ ಮಡದಿಯಾಗಿದ್ದರೂ ವತ್ಸಲಾಳ ನಿರಾಡಂಬರ ಸರಳ ನಡವಳಿಕೆ, ಬಿಚ್ಚು ಮನಸ್ಸಿನ ಸಂಭಾಷಣೆ ಎಂತವರನ್ನೂ ಮೆಚ್ಚಿಸುವಂತಿದ್ದವು ಮನೆಯ ಕೆಲಸಗಳನ್ನೆಲ್ಲ ಮುಗಿಸಿದ ಮೇಲೆ ನನಗಾಗಿ ಕಾಯುತ್ತಿದ್ದ ವತ್ಸಲಾ ಭೇಟಿಯೂ ಪ್ರತಿನಿತ್ಯವೂ ಒಂದು ಘಂಟೆ ಹರಟೆ ಹೊಡೆಯುತಿದ್ದರಿ ನಮ್ಮಿಬ್ಬರಲ್ಲಿ ಯಾರಿಗೂ ಸಮಾಧಾನವಿರುತ್ತಿರಲಿಲ್ಲ. ಮಾತು ಘುಗಿಸಿ ನಾನು ಮನೆ ಸೇರಿದ ಮೇಲೆ ವತ್ಸಲಾಳ ಪತಿಯ ಆಗಮನವಾಗುತ್ತಿತ್ತು. ಅಮೇಲೆ ಅವರಿಬ್ಬರೂ ಉಪಾಹಾರ ಮುಗಿಸಿ ವಿಹಾರಕ್ಕೋ ಚಿತ್ರಮಂದಿರಕ್ಕೋ ಹೋಗಿ ಬರುತ್ತಿದ್ದರು.

ವತ್ಸಲಾಳ ಸೌಜನ್ಯಶೀಲ ನಡತೆಯನ್ನೂ ನಿಷ್ಕಪಟ ಸ್ವಭಾವವನ್ನೂ ನಾನು ಮೆಚ್ಚಿಕೊಂಡೆನಾದರೂ ಆಕೆಯ ಒಂದು ಗುಣ ಮಾತ್ರ ನನಗೆ ಬೇರಸ ಬರಿಸುತ್ತಿತ್ತು. ಆ ವಳಲ್ಲಿರುವ ಒಂದು ಸಣ್ಣದೋಷವೆಂದರೆ ತನ್ನ ಪತಿಯ ಗೊತ್ತುಗುರಿಯಿಲ್ಲದ ಗುಣವರ್ಣನೆ. ವತ್ಸಲಾ ಅದನ್ನಾರಂಭಿಸಿದಳೆಂದರೆ ಅಲೆಗೆ ಬೇರೆಲ್ಲ ವಿಚಾರಗಳೂ ಮರೆತು ಕೇವಲ ಪತಿಯೊಬ್ಬನೇ ಇಡೀ ಪ್ರಪಂಚದಲ್ಲಿ ಮೆರೆದಾಡುತ್ತಿರುವ ಏಕೈಕ ವ್ಯಕ್ತಿ ಎಂಬಷ್ಟರ ಮಟ್ಟಿಗೂ ಅವಳ ಭಾವಾವೇಶ ಬೆಳೆದು ಕೇಳುತ್ತಿರುವವರು ಎದ್ದು ಹೊರಟರೂ ಅವಳಿಗದರ ಪರಿವೆಯಿರುತ್ತಿರಲಿಲ್ಲ. ಹಿಂದೂ ಸ್ತ್ರೀಗೆ 'ಪತಿಯೇ ಪರದೈವ' ವೆಂಬ ತತ್ವವೇ ಪ್ರಧಾನವೆನಿಸಿದರೂ ತಮ್ಮ ಪತಿಯ ನೇಲಿನ ಪ್ರೀತಿ ವಿಶ್ವಾಸಗಳ ಬಣ್ಣನೆ ಅನ್ಯಸ್ತ್ರೀಯಿದಿರು ಯಾವಾಗಲೂ ಹಾಡಿಹೊಗಳುತ್ತಿರುವುದರ ಔಚಿತ್ಯವಾದರೂ ಏನು? ಸಾಮಾನ್ಯವಾಗಿ ಹೆಚ್ಚಿನ ಹೆಣ್ಣು ಮಕ್ಕಳು ತಮ್ಮ ಕೈಹಿಡಿದವನನ್ನು ಮೆಚ್ಚುತ್ತಾರೆ, ಪ್ರೀತಿಸುತ್ತಾರೆ. ದಾಂಪತ್ಯವೆಂದ ಮೇಲೆ ಅದರಲ್ಲಿ ಪ್ರೀತಿ, ಸ್ನೇಹಕಾತರ ಆತುರಗಳೂ ಸೇರಿಕೊಂಡಿರುತ್ತವೆ. ಎಂದ ಮೇಲೆ ವತ್ಸಲಾ ಮಾತ್ರ ಈವರೆಗೆ ಅಂತಹ ಆದರ್ಶ ಪುರುಷ ಉತ್ತಮ ಪತಿಯನ್ನು ಯಾರೂ ಎಲ್ಲೂ ಕಂಡಿಲ್ಲವೆಂಬಂತೆ ಮಾತನಾಡುತ್ತಿರುವುದು ಹಾಸ್ಯಾಸ್ಪದವಲ್ಲವೇ? ಆಕೆಗಾದರೋ ಮಾತಿನ ಮಧ್ಯೆ ಯಾವುದಾದರೂ ನೆವದಿಂದ ತನ್ನನಿಯನ ಸ್ತುತಿ ಗೈಯದಿದ್ದರೆ ಸಮಾಧಾನವೇ ಇರುತ್ತಿರಲಿಲ್ಲ. ಒಂದೇ ಧಾಟಿಯ ವಿವಿಧ ಮಾತುಗಳಲ್ಲಿ ಕೆಲವನ್ನು ಇಲ್ಲಿ ಸ್ಮರಣೆಗೆ ತಂದು ಕೊಳ್ಳಬಹುದು.

"ನೋಡು ವಸುಧಾ, ಇಂದು ನಮ್ಮ ಡಾಕ್ಟ್ರು ಏನಂದ್ರು ಗೊತ್ತಾ? ನೀನು ತುಂಬಾ ವೀಕಾಗಿದ್ದೀ ನಿನಗಾಗಿ ಸ್ಪೆಷಲ್ ಟಾನಿಕ್ ತರಿಸಿಕೊಡ್ತೇನೆ" ಎನ್ನುತ್ತಾ ದಿನೇ, ದಿನೇ, ದಪ್ಪವಾಗುತ್ತಿದ್ದ ತನ್ನ ದುಂಡಗಿನ ತೋಳನ್ನು ದಿಟ್ಟಿಸುತ್ತಾ ನುಡಿಯುವಳು.

"ಅವರು ನಿನ್ನೆ ಏನಂದ್ರು ಗೊತ್ತಾ? ಯಾವ ಜೇಷಂಟೇ ಕಾದಿರ್ಲಿ. ಸಂಜೆಯ ಆರು ಗಂಟೆಗೆ ಎಲ್ಲಿದ್ರು ನಿನ್ನ ಬಳಿ ಹಾರಿ ಬರ್ತೀನಿ ಅಂದ್ರು."

'ಅವರಿಗೆ ಆಪ್ತ್ರೆಯಲ್ಲೂ ನಂದೇ ನೆನಪಂತೆ. ನನ್ನನ್ನು ಬಿಟ್ಟು ಒಂದು ದಿನವೂ ಇರೋಕಾಗೊಲ್ಲವಂತೆ. ನನ್ನ ಮುಖ ಸ್ವಲ್ಪ ಬಾಡಿದ್ರೆ ಅವರ ನುನಸ್ಸಿನ ಸ್ವಾಸ್ಥ್ಯವೇ ಕೆಟ್ಟು ಹೋಗುತ್ತದಂತೆ.'

ಇಂತಹ ನೂರು ಮಾತುಗಳನ್ನು ಪ್ರತಿನಿತ್ಯವೂ ಕೇಳಿ ಕೇಳಿ ನನಗೆ ಬೇಸರವೆನಿಸಿದರೂ ನನಗರಿವಿಲ್ಲದೆಯೇ ಅವಳ ಆದರ್ಶ ದಾಂಪತ್ಯದ ವಿಚಾರದಲ್ಲಿ ಮೆಚ್ಚುಗೆ ಮೂಡಿತ್ತು. ಆಕೆಯ ಪತಿಯ ಗುಣಗಾನ ಕೇಳಿ ಅವನಲ್ಲಿ ತನ್ನಿಂದ ತಾನೇ ಗೌರವ ಮೂಡಿತ್ತು. ನಿಜವಾಗಿಯೂ ಆಕೆ ಪುಣ್ಯವಂತೆ. ಎಷ್ಟೋ ಮಂದಿ ಪುರುಷರು ಸದಾಕಾಲವೂ ತಮ್ಮ ಮಡದಿಯ ಮೇಲೆ ಸಿಡಿಮಿಡಿಗೊಳ್ಳುತ್ತಾ ಹಗಲಿರುಳು ಕಲಹವನ್ನೆಬ್ಬಿಸುತ್ತಾ ತಾವೂ ಅತೃಪ್ತಿ ಅಶಾಂತಿಯಿಂದ ತೊಳಲಾಡುವುದಲ್ಲದೆ ಅವನನ್ನೇ ನಂಬಿ ಮೆಚ್ಚಿ ಬಂದ ಹೆಣ್ಣನ್ನು ಜೀವನದಲ್ಲೇ ಜುಗುಪ್ಸೆಗೊಳ್ಳುವಂತೆ ಬಾಳಿನ್ನೇ ಕಣ್ಣೀರಲ್ಲಿ ಕಳೆಯುವಂತೆ ಮಾಡುತ್ತಿಲ್ಲವೇ? ಪತಿ ಪತ್ನಿಯನ್ನು ಪ್ರೇಮಿಸುವುದು ಕರ್ತವ್ಯವೇನೋ ಹೌದು. ಆದರೆ ಮನಃಪೂರ್ವಕವಾಗಿ ಮಡದಿಯನ್ನು ಹೃದಯದಲ್ಲಿಟ್ಟು ಆರಾಧಿಸುವಷ್ಟು ಪವಿತ್ರ ಪ್ರೇಮ ಎಷ್ಟು ಮಂದಿ ಪುರುಷರಲ್ಲಿದ್ದೀತು? ವತ್ಸಲಾಳ ಪತಿಯ ಪತ್ನೀ ವಾತ್ಸಲ್ಯ ಕೇಳಿ ನಾನು ಸಂತೋಷಪಟ್ಟೆ.

ವತ್ಸಲಾ ನಿಜವಾಗಿಯೂ ಭಾಗ್ಯವಂತೆ. ಡಾಕ್ಟರನ ಕೈಹಿಡಿದರೂ ಆತ ಅವಳಿಗೆ ಸ್ವಲ್ಪವೂ ಬೇಸರವಾಗದಂತೆ ನೋಡಿಕೊಳ್ಳುತ್ತಿದ್ದ.

ವಾಸಕ್ಕೆ ಸುಂದರಗೃಹ, ಪ್ರೀತಿ, ವಿಶ್ವಾಸಗಳಿಂದ ನೋಡಿಕೊಳ್ಳುತ್ತಿದ್ದ ಯೋಗ್ಯ ಪತಿ, ಬಯಸಿದ್ದೆಲ್ಲವನ್ನೂ ಕೊಡುಕೊಳ್ಳುವ ಶ್ರೀಮಂತಿಕೆ, ಹೆಣ್ಣಾಗಿ ಇದಕ್ಕಿಂತ ಹೆಚ್ಚಿನ ಭಾಗ್ಯವೇನು ಬೇಕು?

ವತ್ಸಲಾಳ ಪತಿ ರಾಜೇಶ್ ಹತ್ತಿರದ ಸರಕಾರಿ ಆಸ್ಪತ್ರೆಯಲ್ಲಿ ಡಾಕ್ಟರನಾಗಿದ್ದರೂ ಆಸ್ಪತ್ರೆಯಲ್ಲಿ ಅನಿಯಮಿತವಾಗಿ ಕೆಲಸ ಮಾಡುವುದನ್ನು ಬಿಟ್ಟು ಬೇರೆ ಹೊತ್ತಿನಲ್ಲಿ ಯಾವ ರೋಗಿಗಳನ್ನೂ ನೋಡುತ್ತಿರಲಿಲ್ಲ; ಆ ಬಗ್ಗೆ ವತ್ಸಲಾಳೇ ವಿವರಣೆ ನೀಡುತ್ತಿದ್ದಳು. "ಅವರು ಯಾವಾಗಲೂ ಅಷ್ಟೇ. ನಿಯಮಿಸಿದ ವೇಳೆಗಿಂತ ಅರ್ಧ ಗಂಟೆ ಹೆಚ್ಚು ಹೊರಗೆ ಕಳೆಯೋಲ್ಲ. ಯಾಕೇಂದ್ರೆ ಕೊನೆಗೆ ನಾನು ಡಾಕ್ಟ್ರನ್ನು ಮದುವೆಯಾಗಿ ಬೇಸರ ಬಂದುಹೋಯ್ತು ಅಂತ ಪಶ್ಚಾತ್ತಾಪ ಪಡಬಾರದು ಅಂತ?

ಅವಳ ಅಪರಿಮಿತ ಸ್ವಾರ್ಥ ಕೆಲವೊಮ್ಮೆ ನನಗೆ ಅತಿಯಾಯಿತೆಂದೆನಿಸಿದರೂ ಮಡದಿಯನ್ನು ಆಪ್ಪೊಂದು ಅಕ್ಕರೆಯಿಂದ ಹೂವಿನಂತೆ ಕಾಪಾಡುವ ವ್ಯಕ್ತಿಯ ಕೈ ಹಿಡಿದ ಆಕೆ ಧನ್ಯೆ ಎಂದೂ ಕಾಣಿಸುತ್ತಿತ್ತು.

ಅಂದು ಸಂಜೆ ನಾನು ವತ್ಸಲಾಳೊಡನೆ ಭೂತು ಮುಗಿಸಿ ಮನೆ ಸೇರಿದ್ದೆ. ಆಕೆ ತನ್ನ ಪತಿಯೊಂದಿಗೆ ಸಿನಿಮಾಕ್ಕೆ ತೆರಳಿದ್ದಳು. ಆವರ ಮನೆಯ ಅಡುಗೆಯಾಕೆಯೂ ಕಜ್ಜಲಾದ ಮೇಲೆ ಮನೆಗೆ ಹೋಗುತ್ತಿದ್ದುದರಿಂದ ಮನೆಗೆ ಬೀಗ ಹಾಕಿಯೇ ಸಂಜೆ ಹೊರಗೆ ಹೋಗುತ್ತಿದ್ದರು. ಹೊರಗಿನಿಂದ ಅಪರಿಚಿತ ಸ್ತ್ರೀಯೊಬ್ಬಳು ನಮ್ಮ ಮನೆಯಿದಿರು ಬಂದು ನಿಂತುದನ್ನು ನಾನು ನೋಡಿ ಬಾಗಿಲು ತೆಳೆದು ಬಂದೆ.

"ಇಲ್ಲಿ ಡಾಕ್ಟ್ರ ಮನೆ ಯಾವುದೆಂದು?" ಎಂದಳಾಕೆ. ಸುಮಾರು ಇಪ್ಪತ್ತೈದರ ಯುವತಿ. ಬಡತನವೇ ಎದ್ದು ಕಾಣಿಸುವಂತಿದ್ದ ಉಡುಗೆ ತೊಡುಗೆಗಳು. ಬಾಡಿದ ಮುಖ, ಕಾಂತಿಹೀನವಾದ ಕಣ್ಣುಗಳು. ಯಾರೀಕೆ? ಎಂಬ ಯೋಚಿಸುತ್ತಿದ್ದಂತೆ ಯಾರಿಗೋ ಸಮೀಪದಲ್ಲಿ ಅನಿವಾರ್ಯವಿರಬಹುದೇನೋ ಎಂದು ಭಾವಿಸಿಸುತ್ತಿರಬಹುದೆ.

"ಡಾಕ್ಟ್ರ ಮನೆ ಅದೇ ಆಸಿರು ಗೋಡೆ ಕಾಣಿಸುತ್ತದಲ್ಲ, ಆದ್ರೆ ಅವರೀಗ ಸಿನಿಮಾಕ್ಕೆ ಹೋಗಿದ್ದಾಕ್ಷಿ ಬರುವುದು ಆತ್ರಿಯಷ್ಟಾಗುತ್ತೆ."

"ಓ.....ಹೌದೇ? ತುಂಬಾ ಹೊತ್ತಾದೀತೇನೋ...."ಎನ್ನುತ್ತಾ ಒಳ ಬಂದು ಕುರ್ಚಿಯಲ್ಲಿ ಕುಳಿತು ಬಿಟ್ಟಳಾಕೆ. ಕೈಯಲ್ಲೊಂದು ಚೀಲ ಬೇರೆ ಇದೆ. ರಾಜೇಶ್ ಡಾಕ್ಟರರ ಪರಿಯದ ಪರಿಚಯವಿದ್ದವರ್ಯಾರೂ ಅವರನ್ನು ಕರೆಯಲು, ಕಾಯಲು ಬರುತ್ತಿರಲಿಲ್ಲ. ಏಕೆಂದರೆ ಎಂತಹ ಪರಿಸ್ಥಿತಿಯಲ್ಲೂ ಅವರು ಎಲ್ಲೆಂದರಲ್ಲಿಗೆ ಇನ್ನೂ ಹೋಗುವವರಲ್ಲವೆಂಬುದು ಎಲ್ಲರೂ ಅರಿತ ವಿಚಾರ.ಹಾಗಿರುವಾಗ ಈಕೆ ಬರಲು ಹೊತ್ತಿದೆಯೆಂಬುದನ್ನರಿತೂ ಯಾಕೆ ಕುಳಿತಿದ್ದಾಳೆ? ಸಿನಿವೂದಿಂದ ಹನ್ನೊಂದು ಗಂಟೆಗೆ ಹಿಂದಿರುಗಿ ಕೊನೆಗೆ ಅವರು ಬರಲಾಗುವುದಿಲ್ಲವೆಂದರೆ ಇವಳೇನು ಮಾಡುತ್ತಾಳೆ?

"ಅವರು ಬಂದರೂ ಹಾಗೆಲ್ಲ ಕರೆದಲ್ಲಿ ಹೊರಡುವುದಿಲ್ಲಮ್ಮ, ನೀವು ಬೇರೆಯಾದ್ರೂ ಡಾಕ್ಟ್ರನ್ನು ನೋಡುವುದೊಳ್ಳೆಯದು" ಎಂದೆ.

"ಇಲ್ಲ. ನನಗೆ ಇವರನ್ನೇ ನೋಡಬೇಕಾಗಿದೆ."

"ಹಾಗಾದರೆ ಸರಿ. ಕೂತ್ಕೊಳ್ಳಿ"

ಡಾಕ್ಟರರ ನುನೆ ಅಡುಗೆಯಾಕೆ ಸದ್ಯ ಎಲ್ಲಿಗೋ ಹೋಗಿದೇಕೆಂದೆನ್ನುತ್ತಿದ್ದಳು. ಈಕೆ ಆ ಕೆಲಸಕ್ಕಾಗಿ ಬಂದಿರಬಹುದೇನೋ. ಹೊರ ಮಾತುಕತೆಯಾದರೂ ವಿಷಯ ತಿಳಿದು ಬಂದೀತಬಹುದು. ಬಡತನವೇ ಕಷ್ಟ ಪಾಪ!

'ಈಗ ಅವರೊಂದಿಗೆ ಅವಳೂ ಇನ್ನಾಕೇನಮ್ಮ?'

'ಅವಳೂ ಅಂದರೆ....?'

'ಅವರ ಹೆಂಡತಿ....'

' ಹೂಂ. ಹೌದು. ವತ್ಸಲಾ. ವತ್ಸಲನ್ನು ಬಿಟ್ಟು ಅವರಿರೋದಾದ್ರು ಹೇಗಮ್ಮ?' ಎಂದೆ ನಾನು ನಗುತ್ತಾ.

' ಹೂಂ. ಹೌದೇ ? ಏನೋಮ್ಮ ಅವಳ ಅದೃಷ್ಟ ಹೇಗಿದೆಯೋ ನೋಡ್ಬೇಕು' ಎ

(ಮುಂದಿನದೇ ಪುಟ ನೋಡಿರಿ)

ಅರವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ನುತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು, (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಸ್ಥಾಪನೆ: 1921

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ನಾಡಪತ್ರಿಕೆ
ಉಡುಪಿ, ದ. ಕ.

NAVAYUGA

(Published every Thursday)

UDIPI, S. K.

ಸಂಪುಟ 51
ಸಂಚಿಕೆ 48

ಸಂಸ್ಥಾಪಕರು:
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು:
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 12
ಎರಡು ವರ್ಷಗಳಿಗೆ ರೂ. 20
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ ೦–೫೫

ಚಿಕ್ಕ ಜೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಠ ನಾಲ್ಕು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಭಾರತ ಜನನಿಯ ತನುಜಾತೆ ಜಯ ಹೇ ಕರ್ನಾಟಕ ಮಾತೆ

ರಾಜ್ಯದ ಹೆಸರು ಅಧಿಕೃತವಾಗಿ 'ಕರ್ನಾಟಕ'ವೆಂದು ರಾಜ್ಯದ ವಿಧಾನ ಸಭೆ ನಿರ್ಣಯ ಸ್ವೀಕರಿಸಿತು. ಆಳುವ ಕಾಂಗ್ರೆಸ್ ಶಾಸಕರ ಸಭೆಯಲ್ಲಿ ಈ ಸಂಬಂಧದ ನಿರ್ಣಯ ಅಂಗೀಕರಿಸುವಾಗ ಕಂಡುಬಂದಿದ್ದ ನಿರುತ್ಸಾಹ ಆಥವಾ ಕಡಿಮೆ ಉತ್ಸಾಹ ವಿಧಾನಸಭೆಯಲ್ಲಿ ಅತ್ಯುತ್ಸಾಹವಾಗಿ ಪರಿಣಾಮಗೊಂಡದ್ದೊಂದು ಭಾರಿ ವಿಶೇಷ. ಕೆಲವು ಮೂಲೆಗಳಲ್ಲಿ ಅತ್ಯಂತ ಮನೋಜ್ಞವೆನಿಸಿದ್ದರೂ ಅದು ಹಠ್ಯಾಯವಾಗಿ ಬಹಿರಂಗವಾಗಿದ್ದರೂ ನಿಷ್ಪ್ರಯೋಜಕವೆಂಬುದನ್ನು ಎಲ್ಲರೂ ಮನಗಂಡಿರುವುದರಿಂದ, ಬದಲಾದ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳುವಲ್ಲಿ ತುಸು ತಡವಾಗಿಯಾದರೂ ಅವರು ಮುಂಪಾದರೆಂದು ಸಂತೋಷಪಡಬೇಕು. ಶ್ರೀ ದೇವರಾಜ ಅರಸುರವರೂ ತಮ್ಮ ಹಿಂದಿನ ನಿಲುಮೆಯನ್ನು ಬದಲಾಯಿಸಿಕೊಳ್ಳಲು ತಯಾರಾದುದೇ ಎಲ್ಲರ ನಿಲುಮೆಯಲ್ಲಿ ಪರಿವರ್ತನೆಯಾಗಲು ಪ್ರೇರಕ ಶಕ್ತಿಯಾಯಿತೆಂದು ಬೇರೆ ಹೇಳಬೇಕಾಗಿಲ್ಲ.

ಕರ್ನಾಟಕದ ಬಗ್ಗೆ ಒಂದು ಶತಮಾನಕ್ಕೂ ಮಿಗಿಲಾದ ಆಂದೋಲನ ನಡೆಯುತ್ತಿತ್ತು. ಗಡಿಜಿಲ್ಲೆ ಕನ್ನಡ ಭಾಷಾ ಪ್ರದೇಶಗಳು ಒಂದಾಗುವ ಪ್ರಯತ್ನ ಬಹುಮಟ್ಟಿಗೆ ಯಶ ಪಡೆದರೂ 'ಕರ್ನಾಟಕ'ವೆಂಬ ಹೆಸರಿಗೆ ತೀವ್ರವಾದ ವಿರೋಧ ವಿತ್ತು. ಆ ಸಮಯದಲ್ಲಿ ಮೈಸೂರಿನ ಮುಖ್ಯ ಮಂತ್ರಿಯಾಗಿದ್ದ ಶ್ರೀ ಕೆಂಗಲ್ ಹನುಮಂತಯ್ಯನವರು ರಾಜ್ಯ ಪುನರ್ವಿಂಗಡಣೆಗೆ ಮೈಸೂರಿನ ಶಾಸನಸಭೆಯನ್ನು ಒಪ್ಪಿಸಲು ಪಟ್ಟ ಶ್ರಮ ಅಷ್ಟು–ಇಷ್ಟು ಅಲ್ಲ. ಆದರೆ, ಈ ಒಪ್ಪಿಗೆಗಾಗಿ ಅವರು ಕರ್ನಾಟಕವೆಂಬ ಹೆಸರನ್ನು ಬಿಟ್ಟುಕೊಡಬೇಕಾಯ್ತು. ಅಂದಿನಿಂದಲೂ ರಾಜ್ಯದ ಹೆಸರಿನ ಬಗೆಗೆ ಜಿಜ್ಞಾಸೆಯೇಳುತ್ತಲೇ ಇತ್ತು. ಆಳುವ ಪಕ್ಷ ಹಲವು ಬಾರಿ ಹೆಸರು ಬದಲಾಯಿಸಲು ಮನಸ್ಸಿನಲ್ಲೇ ನಿರ್ಧಾರ ಮಾಡಿದ್ದೂ ಉಂಟು. ಪಕ್ಷ ಒಡೆದುಹೋದೀತೆಂಬ ಭಯದಿಂದ ಅದು ಎಲ್ಲರನ್ನೂ ಸಮಾಧಾನಪಡಿಸುತ್ತ ಬಂತು; ರಾಜ್ಯಕ್ಕೆ ಮೈಸೂರೆಂಬ ಹೆಸರೇ ಮುಂದುವರೆಯಿತು. ಆದರೆ, ಮೈಸೂರಿನ ಪ್ರಬಲ ಸಮರ್ಥಕರಿಗೂ ಬಹುಕಾಲದ ವರೆಗೆ ಈ ಹೆಸರನ್ನು ಉಳಿಸಿಕೊಳ್ಳುವುದು ಅಸಾಧ್ಯವೆಂದು ತಿಳಿದಿತ್ತು. ಕನ್ನಡಿಗರ ಧಮನಿ ಧಮನಿಗಳಲ್ಲಿ ಕರ್ನಾಟಕಪ್ರಜ್ಞೆ ಬಗೆಗೆ ಅಭಿಮಾನ ಬೆಳೆಯುತ್ತಿರುವುದರ ಪರಿಣಾಮವಿತ್ತು. ಕಾಲಕ್ರಮದಲ್ಲಿ ಬಹುಮತದ ಮುಂದೇ ಜನಾಭಿಪ್ರಾಯದ ಮುಂದೆ ಅವರು ತಲೆ ತಗ್ಗಿಸಿಯೇ ಬಿಟ್ಟರು; ತಮ್ಮ ತ್ಯಾಗ ಮನೋನೈತ್ರಿಯನ್ನು ಪ್ರದರ್ಶಿಸಿದರು. ಬದಲಾಗುತ್ತಿರುವ ವಾತಾವರಣದಲ್ಲಿ ತಾವೂ ಸೇರಿಕೊಂಡರು; ರಾಜ್ಯದ ಹೆಸರು ಕರ್ನಾಟಕವೆಂದು ಸರ್ವಾನುಮತದಿಂದ ನಿರ್ಧಾರವಾಗಲು ಇವರು ಸಂಪೂರ್ಣ ನೆರವು ನೀಡಿದರು.

ಇಲ್ಲಿ ಒಂದು ಮಾತು ಮರೆಯಬಾರದು. ರಾಜ್ಯದ ಹೆಸರು ಮೈಸೂರಿನಿಂದ ಕರ್ನಾಟಕಕ್ಕೆ ಬದಲಾದುದು. ಮೈಸೂರಿನ ಬಗೆಗೆ ದ್ವೇಷದಿಂದಲ್ಲ, ಅಥವಾ ಮೈಸೂರು ಸರಿಯಾದ ಹೆಸರಲ್ಲವೆಂಬುದರಿಂದಲೂ ಅಲ್ಲ. ಮೈಸೂರು ಒಂದು ನಗರದ ಅಥವಾ ಒಂದು ಅರಸೊತ್ತಿಗೆಯ ಹೆಸರಾಗಿ ಉಳಿದಿಲ್ಲ. ಅದು ಮಲ್ಲಿಗೆಯ ಕಂಪಿನಂತೆ ಎಲ್ಲೆಲ್ಲೂ ಹರಡಿದೆ. ಆದರೆ, ಬಹುಸಮಯದವರೆಗೆ 'ಮೈಸೂರು' ಪುಟ್ಟ ಸಂಸ್ಥಾನವಾಗಿ ಉಳಿದು ಬಂದು ವಿಶಾಲ ರಾಜ್ಯ ರೂಪುಗೊಂಡಾಗ, ಮೂನಸಿಕ ಏಕತೆಗೆ ಆ ಹೆಸರು ಅತಂಕ ತರುತಿತ್ತು ಎಂಬುದು ಮಾತ್ರ ಸತ್ಯ. ಇದಕ್ಕೆ ಕರ್ನಾಟಕ ಪರವಾದಿಗಳ ಬಹುಮತವೇ ಕಾರಣವಿರಬಹುದು. ಇದಂದಲೇ ರಾಜ್ಯವನ್ನು ವಿಭಜಿಸಬೇಕೆಂದು ಆರ್ಭಟಿಸಿದವರೂ ಇದ್ದರು. ತುಂಡು ತುಂಡುಗಳನ್ನು ಒಂದುಗೂಡಿಸಿದ ಮೇಲೆ ಆದನ್ನು ಮತ್ತೆ ತುಂಡರಿಸಬೇಕೆಂಬುದು ಭಾವೋದ್ವೇಗದ ಮಾತಷ್ಟೆ. "ಮೈಸೂರು ವಾದಿ"ಗಳು ಗಡಿಜಿಲ್ಲೆಗಳಲ್ಲಿ ತಮ್ಮ ಉದಾರತೆ ತೋರಿಸಿದರು. ಅಂದು ಇಪರಿಗೆ ಶ್ರೀ ಕೆಂಗೆಲ್ಲರ ನಾಯಕತ್ವವಿತ್ತು. ಇಂದು ಇವರು ತ್ಯಾಗದ ಪರಾಕಾಷ್ಠೆಯನ್ನು ಪ್ರದರ್ಶಿಸಿದರು–ಇವರಿಗೆ ಶ್ರೀ ಅರಸುರವರ ಮಾರ್ಗದರ್ಶನವಿತ್ತು. ಇವರಿಬ್ಬರ ನಡುವೆ 'ಕರ್ನಾಟಕ'ದ ಬಗೆಗಿದ್ದ 'ಪ್ರಬಲ ವಿರೋಧ'ವನ್ನು ನಿರ್ಬಲ ಮಾಡುವಲ್ಲಿ ಶ್ರೀಗಳಾದ ಎಸ್ಸೆನ್, ಜಕ್ತಿ, ವೀರೇಂದ್ರರೂ ನೆರವಾಗಿದ್ದಾರೆ. ಇವರೆಲ್ಲರನ್ನೂ ಇತರರೆಲ್ಲರನ್ನೂ ಈ ಸಂದರ್ಭದಲ್ಲಿ ಸ್ಮರಿಸಿ ಕೊಳ್ಳಬೇಕು. ಮುಂದಿನ ನವಂಬರ ೧೧ರಿಂದ ಕರ್ನಾಟಕವೆಂದು ರಾಜ್ಯವನ್ನು ಅಧಿಕೃತವಾಗಿ ಕರೆಯುವಂತೆ ಸಂವಿಧಾನ ತಿದ್ದುಪಡಿ ಕ್ಷಿಪ್ರವಾಗಲೆಂದು ಹಾರೈಸಬೇಕು. ಅದೇ ರೀತಿ ಪರರಾಜ್ಯಗಳ ಕನ್ನಡ ನೆಲವೂ ಕರ್ನಾಟಕವಾಗಲೆಂದು ಬಯಸಬೇಕು.

ಮಧ್ಯಪ್ರಾಚ್ಯಕ್ಕೆ ಶಾಂತಿಯಿಲ್ಲ

ಎರಡು ವ್ಯಕ್ತಿಗಳಲ್ಲಿ ಭಿನ್ನಾಭಿಪ್ರಾಯ ಮೂಡುವುದು ಅಸಹಜವಲ್ಲ. ಆದರೆ, ಪೂರ್ವಾಗ್ರಹ, ಭಾವೋದ್ವೇಗ ಮತ್ತು ತಪ್ಪು ತಿಳುವಳಿಕೆಗಳಿಂದ ಇದು ಹೆಚ್ಚಾಗುತ್ತದೆ. ವಾಸ್ತಾವಾಂಶಗಳನ್ನು ಆರಿತುಕೊಳ್ಳಲು ಮುಂದಾದಂತೆ ಇವು ದೂರವಾಗುತ್ತ ಬರುವುದು ಸಾಧ್ಯವಾಗುತ್ತದೆ. ಭಾರತ–ಪಾಕಿಸ್ತಾನಗಳ ನಡುವಾದ ಕೃಂಗ ಸಮ್ಮೇಳನದ ಆಗು ಹೋಗುಗಳನ್ನು ಮನವರಿಕೆಮಾಡಿಕೊಳ್ಳುವಾಗ ಈ ಸತ್ಯಸಂಗತಿ ಮುಂದಬ್ಬಿಗುತ್ತದೆ. ವ್ಯಕ್ತಿಗಳಿಗೆ ಸಂಬಂಧಿಸಿದಂತೆ ರಾಷ್ಟ್ರಗಳಿಗೂ ಇದು ಹೊಂದಿಕೊಳ್ಳುತ್ತದೆಂದು ಧೈರ್ಯವಾಗಿ ಹೇಳಬಹುದಾಗುತ್ತದೆ. ಮಧ್ಯ ಪ್ರಾಚ್ಯದಲ್ಲಿ ಇಸ್ರೇಲ್ ಮತ್ತು ಐಗುಪ್ತಗಳ ನಡುವೆ ತಲೆದೋರಿರುವ ಬಿಕ್ಕಟ್ಟು ಖ್ರುಶ್ಚೆವ್ ಬಿಂದುವಿನಲ್ಲಿತ್ತು. ಐಗುಪ್ತದ ಅಧ್ಯಕ್ಷ ಸಾದತ್ ರಷ್ಯದಿಂದ ಯಥೇಷ್ಟ ಸೈನಿಕ ನೆರವು ಬೇಡಿದರು. ಅದು ದೊರೆಯದಾಗ ದೇಶದಲ್ಲಿದ್ದ ರಷ್ಯನ್ ಸೈನಿಕ ತಂತ್ರಜ್ಞರನ್ನು ಹೊರಗಟ್ಟಿದರು. ಇದರ ಬಿನ್ನೆಲೆಯೇನು? ವಾಸ್ತವಾಂಶಗಳನ್ನು ಪರಿಗಣನೆಗೆ ತಂದುಕೊಂಡು ಎರಡೂ ರಾಷ್ಟ್ರಗಳ ವಿವಾದಗಳನ್ನು ತಾವಿಬ್ಬರೇ ಬಗೆಹರಿಸಿ ಬಿಡಲೆಂಬುದೆ? ಅಥವಾ ತನ್ನ ಬೇಡಿಕೆಯನ್ನು ಮನ್ನಿಸದ ಸೋವಿಯತ್ತಿನ ಮೇಲೆ ಪ್ರತೀಕಾರ ತೋರಿಸುವುದು ಮಾತ್ರವೆ? ಅದೇನಿದ್ದರೂ ಶ್ರೀ ಸಾದತ್ತರ ನಿರ್ಣಯವನ್ನು ಇಸ್ರಾಯೇಲಿನ ಪ್ರಧಾನಿ ಗೋಲ್ಡ್‌ಮಾರ್ ಸ್ವಾಗತಿಸಿ ನೇರ ಸಂಧಾನಕ್ಕೆ ಕರೆ ನೀಡಿದರು. ಸಂಯೋಜಕಾಲುವೆಯನ್ನು ನೌಕಾ ಸಂಚಾರಕ್ಕೆ ಮುಕ್ತವಾಗಿರಿಸಬೇಕೆಂಬ ನೆಲೆಯಲ್ಲಿ ಸಂಧಾನಕ್ಕೆ ಆಹ್ವಾನವಿತ್ತರು. ಆದರೆ, ಇದರಿಂದ ಮಧ್ಯ ಪ್ರಾಚ್ಯದ ಬಿಕ್ಕಟ್ಟು ಖಂಡಿತಾ ಪರಿಹಾರಗೊಳ್ಳುವುದಿಲ್ಲವೆಂದು ಸಾದತ್ ತಿದ್ದಪ್ಪಿ ತಿರಸ್ಕರಿಸಿದರು. 'ನೇರ ಸಂಧಾನವೆಂದರೆ ಶರಣಾಗತಿ' ಎಂಬ ಅವರ ವಾದವಿರಬೇಕೆಂದೆ ಕಾಣಿಸುತ್ತದೆ. ಹಾಗಾದಲ್ಲಿ ರಷ್ಯನ್ ತಜ್ಞರನ್ನು ಹೊರಕ್ಕಟ್ಟಿದ ಸಾದೆತ್ತರ ಸತ್ಕಾರ್ಯ ಪ್ರತೀಕಾರ ಮಾತ್ರವೆನ್ನಲು ಬೇಕಾಗುತ್ತದೆ. ರಶ್ಯನ್ ಶಕ್ತಿಯು ಹೊರ ಹೋದರೆ ತಾನು ಸಂಧಾನಕ್ಕೆ ಪ್ರಯತ್ನಿಸುವುದಾಗಿ ಅಮೆರಿಕ ಹೇಳಿಕೊಂಡದ್ದುಂಟು. ಈಗ ನೇರ ಸಂಧಾನವನ್ನು ತಿರಸ್ಕರಿಸಿದ ಸಾದತ್ ಅಮೆರಿಕೆಯು ಮಧ್ಯೆ ಪ್ರವೇಶಿಸಿ ತನ್ನ ಮೂಸವುಳಿಸಬೇಕೆಂದು ಬಯಸಿದಂತಿದೆ. ಅಂದರೆ, ಅಮೆರಿಕೆಗೆ ಅವರು ಶರಣಾಗಿದ್ದಾರೆಂದು ಹೇಳಬೇಕಾಗುತ್ತದೆ. ಆದರೆ, ಸಂಪೂರ್ಣ ಇಸ್ರಾಯೇಲ್ ಪರವಾಗಿರುವ ಅಮೆರಿಕೆಯಿಂದ ಐಗುಪ್ತಕ್ಕೆ ಎಷ್ಟರ ಮಟ್ಟಿನ ಲಾಭವಾದೀತು–ಸತ್ಯ ಹೇಳುವುದಾದರೆ, ಐಗುಪ್ತ ಪೂರ್ವಾಗ್ರಹ ತೊಡೆದು ಹಾಕಿ ನೇರ ಮಾತಿಗೆ ತೊಡಗುವುದರಿಂದಲೇ ಶಾಂತಿ ಸಾಧ್ಯವಾದೀತೆನಿಸುತ್ತದೆ.

●●

ಬಂಟರ ಯಾನೆ ನಾಡವರ ಸಂಘ ಮುಂಬಾಯಿ

ಈ ಸಂಘದ 44ನೇ ವಾರ್ಷಿಕ ಮಹಾಸಭೆಯು ಇದೇ ತಾ. 9-7-72ರಂದು ಗೋಖಲೆ ರೋಡ್ ನೊರ್ತ್‌ನಲ್ಲಿರುವ ಕಿಟ್ಟಿ ಭಂಡಾರಿ ಹೋಲಿನಲ್ಲಿ ಡಾ| ಎಚ್. ಬಾಲಕೃಷ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ಭಾರಿಯ ವಿಜೃಂಭಣೆಯಿಂದ ಜರಗಿತು.

ಹೊಸ ವರ್ಷದ ಆಡಳಿತ ಸಮಿತಿಗೆ ಡಾ| ಜಿ ಜನಾರ್ದನ ಭಾಜಿಕೃಷ್ಣ ಶೆಟ್ಟಿ ಅಧ್ಯಕ್ಷ, ಶ್ರೀಗಳಾದ ವೈ ರಘು ಶೆಟ್ಟಿ ಉಪಾಧ್ಯಕ್ಷ, ಹೆಜಮಾಡಿ ವಿಠಲ ಶೆಟ್ಟಿ ಗೌರವ ಪ್ರ. ಕಾರ್ಯದರ್ಶಿ, ಆಜ್ರಕಾರು ಸಂಜೀವಶೆಟ್ಟಿ ಗೌರವ ಉಪಕಾರ್ಯದರ್ಶಿ, ಶಂಕರ್ ಶೆಟ್ಟಿ ಗೌರವ ಕೋಶಾಧಿಕಾರಿ, ಕೃಷ್ಣ ಶೆಟ್ಟಿ ಗೌರವ ಉಪ ಕೋಶಾಧಿಕಾರಿ ಮತ್ತು ಸಂಘವು ನಡೆಯಿಸುತ್ತಿರುವ ಕರ್ನಾಟಕ ಧರ್ಮಾರ್ಥ ರಾತ್ರಿ ಶಾಲೆಯ ಸಮಿತಿಗೆ ಶ್ರೀ ಮೂಲೂರು ದೇಜು ಶೆಟ್ಟಿ, ಚೀಯರ್ ಪೇರ್ಸನ್, ಡಾ ಮಣ್ಣ ಶೆಟ್ಟಿ ಕಾರ್ಯದರ್ಶಿ, ಕೆ. ರಾಘವ ಶೆಟ್ಟಿ ಕೋಶಾಧಿಕಾರಿ, ಮತ್ತು ಇತರ 27 ಮಂದಿಯನ್ನು ಆದಳಿತ ಸಮಿತಿಯ ಸದಸ್ಯರನ್ನಾಗಿಯೂ, ಸರ್ವಾನುಮತದಿಂದ ಚುನಾಯಿಸಲಾಯಿತು. ಸಭಿಕರ ಮತ್ತು ಆಧ್ಯಕ್ಷರ ಭಾಷಣದ ನಂತರ ಕಾರ್ಯದರ್ಶಿಯವರು ಧನ್ಯವಾದವನ್ನು ಅರ್ಪಿಸಿ ಸಭೆಯು ಮುಕ್ತಾಯವಾಯಿತು.

ಬರುವ ವಾರ ರಜೆ

ಸ್ವಾತಂತ್ರ್ಯ ವಿಶೇಷ ಸಂಚಿಕೆಯ ಕೆಲಸಗಳಿಗಾಗಿ ಬರುವ ಗುರುವಾರ (ತಾ.10.8.72ಕ್ಕೆ) ಸಂಚಿಕೆಯನ್ನು ನಿಲ್ಲಿಸಲಾಗಿದೆ. ಗ್ರಾಹಕರು ದಯಮಾಡಿ ಗಮನಿಸಬೇಕಾಗಿ ವಿನಂತಿ.

ಮೆನೇಜರ್, ನವಯುಗ.

ಗೇಹರಾಜ್ಯದಲ್ಲಿ–

ಕುಟುಂಬದಲ್ಲೊಬ್ಬನಿ(ಳಿ)ಗೇ ಉದ್ಯೋಗ?

"ಇಂದಿನ ದಿನ ಸುದಿನಾ ಅದು ನಾಳೆಗೆ ಎಂದರೆ...."

"ಏನೇ ಇದು? ಈ ಹೊತ್ತಿನಲ್ಲೂ...."

"ಏನೂ ಇಲ್ಲಾನ್ನಿ. ಹೀಗೇ ಭಾರಿ ಬೋರೆನ್ನಿಸ್ತು,...."

"ಅಲ್ವೆ, ನಮ್ಮ ರಾಜ್ಯಕ್ಕೆ ಕೊನೆಗೂ ಕರ್ನಾಟಕವೆಂಬ ಹೆಸರು ಬಂತಲ್ಲಾ...."

"ಬಂತು ಎಲ್ಲಿ, ಬರಲಿದೆ..."

'ಯಾಕೆ ನಾಗಂತೀಯಾ?

"ಅಲ್ರಿ, ಸಂಸತ್ತು ಸಂವಿಧಾನ ತಿದ್ದುಪಡಿಯಾಪದೆ ಅದೆಲ್ಲಿ ಜಾರಿಗೆ ಬರುತ್ತೆ?"

'ಅದೆಲ್ಲ ಫೈನಲ್ ಸಂಗ್ತಿ. ಅದು ಆಗಿಯೇ ಆಗುತ್ತೇನ್ನು. ಇದು ಪ್ರಜಾಪ್ರಭುತ್ವ ಅನ್ನೋದಕ್ಕೆ ಈಗ ಮತ್ತೊಂದು ಉದಾಹರಣೆ ಸಿಕ್ತು.....'

'ಯಾಕೆ?'

"ಅಲ್ವೆ, ಬಹುದಿನಗಳಿಂದ ಕನ್ನಡ ಜನತೆ ಕಟ್ಟಿಕೊಂಡಿದ್ದ ಕನಸು ಇದೀಗ ನನಸಾಗುವ ದಿನೆಯಲ್ಲಿದೆ....'

'ಅದು ಹೌದು. ಆದರೆ ನೋಡಿ, ಮೊಜಿ ಗರ್ವನರ ಜನರಲ್ ರಾಜಾಜಿಗೆ ಈ ಹೆಸರೇನೂ ಪಸಂದಾದಂತಿಲ್ಲ....'

'ಯಾಕೆ?'

"ಅವರು ಹೇಳ್ತಾರೆ—ಕರ್ನಾಟಕ ಅನ್ನೋದು ಒಂದು ರಾಜ್ಯದ ಹೆಸರಾಗಿರಲಿಲ್ಲ, ಭಾಷೆಯ ಹೆಸರಾಗಿರಲಿಲ್ಲ. ಭಾವಾವೇಶಕ್ಕೊಳಗಾಗಿ ಪರಂಪರೆಗೆ ಯೋಗ್ಯವಾದ ಮೈಸೂರನ್ನು ಕೈಬಿಟ್ಟದ್ದು ನ್ಯಾಯವಲ್ಲ...."

'ಕನ್ನಡವೆಂಬುದು ಭಾಷೆಯ ಹೆಸರು, ರಾಜ್ಯದ ಹೆಸರು,...ಕನ್ನಡಮೆನಿಸ್ಪಾ ನಾಡು ಚೆಲ್ವಾಯ್ತು...ಅಂತ ಅಂಡಯ್ಯ ಹಾಡಿದ್ದಾನೆ. 'ಕನ್ನಡ ದೊಳ್ ಕಬ್ಬಮಂ ಬರೆಯಲಾಗದು' ಎಂದೋ ಏನೋ ಅವನೇ ಹೇಳಿದ್ದಾನೆ..'

"ಹೌದೂನ್ನಿ. ಅದು ಕನ್ನಡ, ಕರ್ನಾಟಕವಲ್ಲ....."

"ಓ, ಇದು ಕನ್ನಡದ ಸಂಸ್ಕೃತರೂಪ.... ಸಂಸ್ಕೃತ ಭಾಷೆಯಲ್ಲಿ ಕರ್ನಾಟಕದ ಉಲ್ಲೇಖ ಬೇಕಾದಷ್ಟಿದೆಯಲ್ಲಾ? ನುತ್ತೆನೋಡು, ಭರತ ಮಂಡಲದ ಮಧ್ಯದೊಳಗೆ ಮೆರೆಯುತಿಹ ಕರ್ನಾಟ ದೇಶದಿ.... ಎಂದು ಗೋವಿನ ಕಥೆ ಹಾಡ.ತ್ತದಲ್ಲಾ..?"

'ಅದು ಕರ್ನಾಟಕದ ಅಚ್ಚು. ಆದರೆ, ಕರ್ನಾಟಕ ಅಂಬೋದು ಕನ್ನಡ ಭಾಷೆಯ ಹೆಸರಲ್ಲ. ಯಾವ ಭಾಷೆಯಲ್ಲಿ ಯಾವ ರಾಜ್ಯಕ್ಕೆ ಹೆಸರೇ ಇಲ್ಲವೋ ಅದಕ್ಕೆ ಯಾವ ಹೆಸರಿದ್ದರೇನು?'

'ತಡೆ ತಡೆ ಕರ್ನಾಟಕ ಸಂಗೀತ....'

'ನೋಡಿ, ಅದೂ ಸಂಸ್ಕೃತವೇ. ಕರ್ನಾಟಕದ ತದ್ಭವರೂಪ ಕನ್ನಡವೆಂದು ಕಲಿಸುವ ನಾಡಿಗೆ ತನ್ನದೇ ಆದ ಹೆಸರಿಲ್ಲವೆಂದ ಮೇಲೆ, ದಾಸ್ಪೆ ನಾತ್ಯ ಸಂಗೀತಕ್ಕೆ ಕರ್ನಾಟಕ ಸಂಗೀತವೆಂಬುದು ಪರ್ಯಾಯನಾಮವೆಂದ ಮೇಲೆ ಮಹಿಷಾಸುರ ಮರ್ದಿನಿಯು ಹಿನ್ನೆಲೆಯಿರುವ ಮೈಸೂರೇ ಉಚಿತವೆನ್ನುತ್ತಾರೆ ರಾಜಾಜಿ."

'ಇರಬಹುದು. ಆದರೆ, ನಮ್ಮ ರಾಜ್ಯಕ್ಕೆ ಏನು ಹೆಸರಿಡ ಬೇಕೆಂದು ನಿರ್ಧರಿಸುವವರು ನಾವು ತಾನೆ? ಮತ್ತೂ ಒಂದು ಮಾತು. ನಮ್ಮ ನಾಡಿನ ಹೆಸರು ಕನ್ನಡವೇ ಇತ್ತು, ಅದೇ ಸಂಸ್ಕೃತೀಕರಣವಾಗಿ ಕರ್ಣಾಟಕವಾಯ್ತು ಎನ್ನುವ ವಾದವೂ ಇದೆ ತಾನೆ? ನಮ್ಮ ನಡೆ ನುಡಿ ಸಂಸ್ಕೃತೀಕರಣವಾದಂತೆ ನಾಡಿನ ಹೆಸರೂ ಹಾಗಾಗಿ ಕರ್ನಾಟಕವೆಂದಾದರೆ ತಪ್ಪೇನು? ಪಾಣಿನಿಯ ಅಷ್ಟಾಧ್ಯಾಯಿಯಂತೆ ಈ ಶಬ್ದೋತ್ಪತ್ತಿ ಅಸಾಧ್ಯ. ಕನ್ನಾಡೋ ಕನ್ನಡವೋ ಕರ್ಣಾಟಕವೆಂದು ಸಂಸ್ಕೃತೀಕರಣಗೊಂಡು, ಈಗ ಕನ್ನಡೀಕೃತವಾಗಿ ಕರ್ನಾಟಕವಾಯ್ತು ಎಂದು ಏಕೆ ತಿಳಿಯ ಬಾರದು?"

"ತಿಳಿದುಕೊಳ್ಳುವುದಕ್ಕೆ ಏನೂ ತಿಳಿದುಕೊಳ್ಳ ಬಹುದೂನ್ನಿ. ಅದು ಹೋಗಲಿ ಬಿಡಿ."

'ಮತ್ತೇನು?'

"ನೋಡಿ, ಬೆಂಗಳೂರು ವಿಶ್ವವಿದ್ಯಾಲಯದ ಕಾಲೇಜುಗಳಲ್ಲಿ ಕನ್ನಡ ಮಾಧ್ಯಮದ ವಿರುದ್ಧ ಶಿಕ್ಷಕರೇ ಪ್ರಚಾರ ನಡೆಸುತ್ತಿದ್ದಾರಂತೆ..."

"ಅಲ್ಲೀಂತೇನು? ಇದು ಎಲ್ಲೆಡೆಯೂ ಹರಡಿರುವ ಸೋಂಕು ರೋಗ."

'ಇದಕ್ಕೆ ಕಾರಣವೇನೂಂತೆ?'

"ಮತ್ತೇನ್ನೇನು? ಕನ್ನಡ ಮಾಧ್ಯಮದ ತರಗತಿ ಆರಂಭವಾದರೆ ತಾವು ಕನ್ನಡದಲ್ಲೇ ಉಪನ್ಯಾಸ ಮಾಡಬೇಕು; ಆಗ ತಪ್ಪುಕನ್ನಡದ ಹಳಸಿದ ಹೂರಣ ಹೊರ ಬಿದ್ದು ನಾರ ತೊಡಗುತ್ತದೆ ಎಂಬ ಭಯ....."

'ಅಂದರೆ, ತಮ್ಮ ಸೌಲಭ್ಯಕ್ಕೆಂದು ವಿದ್ಯಾರ್ಥಿಗಳ ಹೆಬ್ಬಯಕೆಗೆ ತಣ್ಣೀರೆರೆಯುತ್ತಾರೆ...."

"ಹ್ಞೂ...."

'ಅಲ್ರಿ, ಹಾಗಾದರೆ ಕನ್ನಡ ಮಾಧ್ಯಮ ಆಗುವುದು ಹೇಗೆ ಸಾಧ್ಯ?'

'ನೋಡಮ್ಮ, ಬಲಾತ್ಕಾರವಿಲ್ಲದೆ ನೆಮ್ದೀಕದಲ್ಲಿ ಏನೇನೂ ನಡೆಯುವುದಿಲ್ಲ. ಆದ್ದರಿಂದ ಈ ಸಂಬಂಧ ಯಾವುದಾದರೂ ಒಂದು ರೀತಿಯ ಬಲಾತ್ಕಾರ ಶಿಕ್ಷಕರ ಮೇಲಿರಬೇಕೆನಿಸುತ್ತಿದೆ....'

"ಯಾವ ರೀತಿಯದ್ದು?"

'ಅದನ್ನು ತಜ್ಞರು—ಕನ್ನಡ ಮಾಧ್ಯಮ ಪ್ರೇಯರು, ಕನ್ನಡದ ಸಾಚಾ ಅಭಿಮಾನಿಗಳು ನಿರ್ಧರಿಸಬೇಕು...'

'ನೋಡಿ, ನಮ್ಮ ದೇವರಾಜ ಅರಸು ಮೊದಲಿಗೆ ವಾರ್ಷಿಕ ೧೨ ಸಾವಿರ ಆದಾಯವಿರುವವರಿಗೆ ಭೂಮಿ ಹೊಂದುವ ಅಧಿಕಾರವಿರಬಾರದು ಎಂದರು. ಈಗ ಆ ವಿಷಯ ಸದ್ಯಕ್ಕೆ ಕೈ ಬಿಡಲಾಗಿದೆಯೆನ್ನುತ್ತಾರೆ....'

'ಹೌದು....'

'ಅದೇಕೇಂತ?'

"ಅಲ್ವೆ, ಹತ್ತೆಕರೆ ಭೂಮಿಯಲ್ಲಿ ನಾಲ್ಕಾರು ಸಾವಿರಗಳಿಸಿ ಏದು ಹೊಟ್ಟೆಗಳನ್ನು ತುಂಬುವುದು, ಮಕ್ಕಳ ವಿದ್ಯಾಭ್ಯಾಸ, ಮದುವೆ—ಮುಂಜಿ, ಇತ್ಯಾದಿ ಇತ್ಯಾದಿ ಮಾಡುವುದು ಕಷ್ಟ ಸಾಧ್ಯವೆಂದರಬಹುದು...."

'ಅದು ಬಿಡಿ. ಕೆಲವು ಕುಟುಂಬಗಳಿಗೆ ಭೂಮಿಯೂ ಇಲ್ಲ, ಸಾವಿರ ರೂಪಾಯಿ ಆದಾಯವೂ ಇಲ್ಲ...'

'ಹ್ಞೂಂ....ಅದಕ್ಕೇ ಭೂಮಿಯಿಲ್ಲದವರಿಗೆ ಭೂಮಿ, ಉದ್ಯೋಗವಿಲ್ಲದವರಿಗೆ ಉದ್ಯೋಗ ಕೊಡಿಸುವ ಯೋಜನೆ.'

'ಸರಿನ್ನಿ. ಈಗ ಒಂದು ಮಾತ್ರ ಹೇಳ್ತೀನಿ ...'

'ಹೇಳಮ್ಮ....'

"ಒಂದು ಕುಟುಂಬಕ್ಕೆ ಹತ್ತೆಕರೆ ತರೀ ಭೂಮಿಯನ್ನು ಗರಿಷ್ಠ ಮಿತಿಯೆಂದು ಗೊತ್ತು ಮಾಡಿದ ಮೇಲೆ ಹೆಚ್ಚಿನ ಭೂಮಿಯನ್ನು ಕಿತ್ತುಕೊಂಡು ಭೂಹೀನರಿಗೆ ಕೊಡುತ್ತಾರೆ. .."

'ಹೌದು....'

'ಹಾಗೇನೇ ಒಂದು ಕುಟುಂಬಕ್ಕೆ ಒಬ್ಬನಿಗೆ ಉದ್ಯೋಗವೆಂದು ಯಾಳಿದವರ ಉದ್ಯೋಗ ಬಿಡಿಸಿ ನಿರುದ್ಯೋಗಿಗಳಿಗೇಕೆ ಕೊಡಬಾರದಮ್ಮ?'

'ಕೋಟ್ಯಧೀಶಾಯಿಯ ಸಲಹೆಯಿದು. ಅತ್ಯಂತ ಕ್ರಾಂತಿಕಾರಿ. ಆದರೆ ನೋಡು, ಇದನ್ನು ಯಾವ ಕ್ರಾಂತಿಕಾರಿ ವಿಚಾರಕನೂ ಬಿಡುವುದಿಲ್ಲ...."

'ಯಾಕೇಂತ?'

'ನನಗೇನು ಗೊತ್ತು? ಈಗ ಮುಂದೆ ಬರುತ್ತಲ್ಲ. ಇನ್ನಾಪ್ತರೂ ತಲೆಯೆತ್ತಿದವರು ತಲೆ ಹಾಳುತ್ತಿದ್ದಾರೋ ನೋಡೋಣ. ಬದಲಿ ಆಸ್ತಿಗೆ ಪಿತ್ರಾರ್ಜಿತ ಆಸ್ತಿಯನ್ನು ಅಂತ್ಯಸಂಸ್ಕಾರಿಯವರು ಆದಾಯಕ್ಕೆ ಮಿತಿ ಹಾಕ್ಲಲು ಒಪ್ಪಿವುದಿಲ್ಲ.'

'ಅಣೇ ಯಾಕೇಂತ?'

'ಪ್ರಾಯಃ ತಮಗೇ ಇದು ಗಂಡಾಂತರ ತಂದೀತೆಂಬ ಭಯವಿರಲೂ ಬಹುದು. ಅಥವಾ ಅದು ಪರಿಣಾಮಕಾರಿಯಾಗಲಾರದೆಂಬ ಭಯವೂ ಇರಬಹುದು.'

'ಅಥವಾ ಏನಾದರೂ ತಾಂತ್ರಿಕ ಅಡಚಣೆಯೆ?'

'ಛೆ, ಅಂತಹುದಾದರೆ, ಸಂವಿಧಾನವನ್ನು ತಿದ್ದಿಬಿಡಬಹುದಲ್ಲಾ?'

'ಅದು ಸರಿ.'

'ನೋಡು, ಇದುವರೆಗೆ ಐ.ಎ.ಎಸ್. ಮತ್ತು ಐ.ಪಿ.ಸಿ.ಗಳ ಸೇವೆಯಲ್ಲಿ ವಿವಾಹಿತ ಮಹಿಳೆಯರಿಗೆ ಸ್ಥಾನವಿರಲಿಲ್ಲ....'

'ಸೇರುವಾಗ ಅವಿವಾಹಿತೆಯಿದ್ದು ಆ ಬಳಿಕ ವಿವಾಹಿತೆಯಾದರೆ?'

'ಅಂತಹ ಸಂದರ್ಭಗಳಲ್ಲಿ ಆಕೆ ರಾಜೀನಾಮೆ ನೀಡಬೇಕಿತ್ತು.'

'ಓ....'

(ಒಂಭತ್ತನೇ ಪುಟ ನೋಡಿರಿ)

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ-ಮದ್ದು

ಬೆಲೆ: ರೂ. 2–00

❖ ❖ ❖

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ ರೂ. 2–00

❖ ❖ ❖

Letter Writing Made Easy

ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರಸಂಕಲನ

ಬೆಲೆ ರೂ. 1-50.

ಪುಸ್ತಕ ಬೇಕಾದವರು ಅಯಾಯ ಪುಸ್ತಕದ ಬೆಲೆಯೊಂದಿಗೆ 60 ಪೈಸೆ ಬುಕ್ ಪೋಸ್ಟ್ ವೆಚ್ಚ ಸೇರಿಸಿ ಮನಿಯಾರ್ಡರು ಮಾಡುವುದು. ವಿಶೇಷ ಅಂಚೆವೆಚ್ಚ ತಗಲುವುದರಿಂದ ವಿ. ಪಿ. ಮಾಡುವುದಿಲ್ಲ.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್)
ಉಡುಪಿ, ದ.ಕ.

ನವಯುಗದ 52ನೇ ಹೊಸ ವರ್ಷ
ಚಂದಾದಾರರಲ್ಲಿ ವಿನಂತಿ

ಇದೇ ಅಗೋಸ್ತು ತಿಂಗಳಾಂತ್ಯಕ್ಕೆ 'ನವಯುಗ'ದ 51ನೆಯ ವರ್ಷ ಮುಗಿದು ಸಪ್ಟಂಬರ ತಿಂಗಳಿಂದ 52ನೆಯ ಹೊಸ ವರ್ಷಾರಂಭವಾಗುತ್ತದೆ. ಚಂದಾ ಅವಧಿ ಮುಗಿದ ಚಂದಾದಾರರೂ ಚಂದಾ ಬಾಕಿ ಇರುವವರೂ ದಯಮಾಡಿ ತಮ್ಮ ಬಾಕಿಯನ್ನು ಆದಷ್ಟು ತ್ವರಿತವಾಗಿ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ಅಪೇಕ್ಷಿಸುತ್ತೇವೆ. ಚಂದಾಹಣವನ್ನು ಮನಿಯಾರ್ಡರು ಮೂಲಕ, ಯಾ ಇಂಡಿಯನ್ ಪೋಸ್ಟಲ್ ಆರ್ಡರು ಮೂಲಕ ಕಳಿಸಬಹುದು. ಇಲ್ಲವೆ ಸಿಂಡಿಕೇಟ್ ಬ್ಯಾಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಜಮಾವಣೆ ಮಾಡಬಹುದು. ಹಾಗೆ ಜಮಾವಣೆ ಮಾಡುವಾಗ ತಮ್ಮ ಚಂದಾ ನಂಬ್ರ ಮತ್ತು ವಿಳಾಸವನ್ನು ತಿಳಿಸಬೇಕಾಗಿ ಕೋರುತ್ತೇವೆ.

ಮೆನೇಜರ್.

ಶ್ರೀ ಕೆ. ಕೆ. ಶೆಟ್ಟಿ ಎಂ. ಪಿ., ಅವರ ಪುಸ್ತಕಗಳು

ಕುಶಲವ	(ನಾಟಕ)	0–50
ಸಂಶಯ ಪಿಶಾಚಿ	,,	0–75
ವ್ಯಭಿಚಾರಿಣಿ ಯೂರು	,,	1–00
ದೇಶಭಕ್ತ	,,	1–25
ಪ್ರೇಮವಿಜಯ	,,	1–00
ಚಿತ್ತಾಲಗದೆ	,,	0–60
ಹೆಂಡ್ತಿ ಗಂಡಸಾದರೆ (ಪ್ರಹಸನ)		0–35
ಪುರುಷವಧೆ	,,	0–25
ಮುಂದಿನ ಜೀವನ (ಪ್ರಬಂಧ)		0–25
ಸನ್ಯಾಸಿಯ ಸೋಗಿನಲ್ಲಿ (ಕಥೆ)		0–75

ವಿ. ಪಿ. ಮಾಡುವುದಿಲ್ಲ; ಪುಸ್ತಕದ ಬೆಲೆಯೊಂದಿಗೆ 0–50 ಪೈಸೆ ಹೆಚ್ಚಿಗೆ ಸೇರಿಸಿ ಮುಖ್ಯ ಯಾರ್ಡರು ಮಾಡಿದರೆ ಪುಸ್ತಕವನ್ನೆ ಬುಕ್ ಪೋಸ್ಟ್ ಮಾಡಿ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್)
ಉಡುಪಿ, ದ. ಕ.

ದಟ್ಟದರಿದ್ರರ ನಟ್ಟನಡುವೆ

ಸುಸಂಪನ್ನ ಆದರ್ಶ ಪರಿವಾರ

ನಮ್ಮ ದೇಶದಲ್ಲಿ ಅತ್ಯಂತ ಕಳವಳಯ ಸಿಹ್ಞನ-ಮೂಸ ಪಡೆದಿರುವ ಕ್ಷೇತ್ರವೆಂದರೆ, ಶಿಕ್ಷಣ ರಂಗ. ಸ್ವಾತಂತ್ರ್ಯ ಪೂರ್ವ ಕಾಲದಲ್ಲಿ ಶಿಕ್ಷಣವು ಕೆಲವೇ ವರ್ಗದ ಮಿಸಲು ಅಧಿಕಾರವೆಂಬಂತೆ ನಡೆದು ಬಂದಿತ್ತು; ಆದು ಶ್ರೀಮಂತರ ಕೈಗೆ ಮಾತ್ರ ನಿಲುಕುತ್ತಿತ್ತು. ಆಂದಿನಿಂದ ಈ ಇಪ್ಪತ್ತೈದು ವರ್ಷಗಳಲ್ಲಿ ಶಿಕ್ಷಣದ ವಿಸ್ತಾರ ಯಥೇಚ್ಛವಾಗಿದೆ; ಅದರಲ್ಲಿ ಸುಧಾರಣೆ ಸೂಡುವ ನೂರು ಪ್ರಯತ್ನಗಳು ನಿರಂತರವಾಗಿ ಸಾಗಿವೆ. ಅಂದ ಮಾತ್ರಕ್ಕೆ ಅವೆಲ್ಲವೂ ಪರಿಪೂರ್ಣವಾಗಿವೆ; ಪರ್ಯಾಪ್ತವಾಗಿವೆಯೆಂದು ಹೇಳಲಾಗದು.

"ಶಿಕ್ಷಣ"ವೊಂದು ಬೆಳೆಯುತ್ತಿರುವ ರಂಗ. ಪಾಠಶಾಲೆ-ಕಾಲೇಜುಗಳೂ ಅಧ್ಯಾಪಕರೂ ವಿದ್ಯಾರ್ಥಿಗಳೂ ಇಂದು ಹಿಂದಿನಂತಿದ್ದರೆ ಏನೇನೂ ಸಾಲದು. ಜ್ಞಾನ ಭಂಡಾರ ಅಕ್ಷಯವಾಗಿ ಬೆಳೆದು ಬರುತ್ತಿದೆ; ಶಿಕ್ಷಣದ ಉದ್ದೇಶಗಳ ಬಗೆಗೆ, ಬೋಧನೆಯ ಬಗೆಗೆ ಶಾಲೆ-ಕಾಲೇಜುಗಳ ಬಗೆಗೆ ಹೊಸ ಹೊಸ ದೃಷ್ಟಿ ಮೂಡುತ್ತಿದೆ. ಆದುದರಿಂದ ದೇಶ—ಕಾಲ ವಾತಾವರಣಗಳಿಗನುಸಾರವಾಗಿ ಎಲ್ಲೆಡೆಯೂ ದೃಷ್ಟಿ ಬದಲಾಗುವುದು ಅನಿವಾರ್ಯ.

ವಿದ್ಯಾರ್ಥಿಗಳ ಸಂಖ್ಯೆಯಂತೆ ಅಧ್ಯಾಪಕರ ಸಂಖ್ಯೆಯು ಇಂದು ಬೆಳೆದಿದೆ. ಶಿಕ್ಷಣಾಲಯಗಳೂ ಹೆಚ್ಚಿನವೆ. ವಿದ್ಯಾರ್ಥಿಯು ಕನಿಷ್ಠ ಕಲಿತುಕೊಳ್ಳ ಬೇಕಾದ ವಿಷಯ ಪ್ರಮಾಣ ಗೊತ್ತಾಗಿದೆ; ಶಿಕ್ಷಕ ವರ್ಗದ ಕನಿಷ್ಠ ವಿದ್ಯಾರ್ಹತೆಯೂ ಗೊತ್ತಾಗಿದೆ. ಶಿಕ್ಷಣಾಲಯಗಳ ಕನಿಷ್ಠ ಆವಶ್ಯಕತೆಗಳಿಗೂ ಸಾಕಷ್ಟು ನಿಯಮಗಳಿವೆ. ವಿದ್ಯಾರ್ಥಿ ಸೇರಿಸಿಗ ಅಂಕಗಳನ್ನು ಪಡೆದುಕೊಳ್ಳದಿದ್ದರೆ ಅನುತ್ತೀರ್ಣನಾಗುತ್ತಾನೆ; ಶಿಕ್ಷಕನು ಕನಿಷ್ಠ ಶಿಕ್ಷಣಾರ್ಹತೆ ಹೊಂದಿರದಿದ್ದರೆ ನೇಮಕವಾಗದು; ಶಿಕ್ಷಣಾಲಯಗಳು ಕನಿಷ್ಠ ಆವಶ್ಯಕತೆಗಳನ್ನು ಪೂರಯ್ಸಿಕೊಳ್ಳದಿದ್ದರೆ, ಅವಕ್ಕೆ ಮಂಜೂರಾತಿ ದೊರೆಯುವುದಿಲ್ಲ.

ಆದರೆ, ಈ ಕನಿಷ್ಠತೆಯ ನಿಯಮಗಳನ್ನು ನಾವು ಸಡಿಲು ಬಿಡುತ್ತ ಬಂದಿದ್ದೇನೆ. ಪ್ರಾಯಃ ಸದ್ಯಕ್ಕೆ ಶಿಕ್ಷಕರ ಶಿಕ್ಷಣಾರ್ಹತೆಯೊಂದನ್ನು ಬಿಟ್ಟು ಉಳಿದೆರಡು ಅಂಶಗಳಲ್ಲಿ ಬಹಳವಾಗಿ ಗೊಂದಲವಿದ್ದಿದೆ. ಕೃಪಾಂಕಗಳನ್ನು ನೀಡಿ ಅನುತ್ತೀರ್ಣನನ್ನು ಉತ್ತೀರ್ಣನೆಂದು ಘೋಷಿಸುವುದು ನಮ್ಮ ಪರಿಪಾಠ. ಹಾಗೆಯೇ 'ವಿಶೇಷ ಪರಿಸ್ಥಿತಿ'ಗಳಿಂದಾಗಿ ಕನಿಷ್ಠಾವಶ್ಯಕತೆಗಳಲ್ಲದೇನೇ ಮಂಜೂರಾತಿ ದೊರೆಯುತ್ತಿದೆ.

ಸದ್ಯದಲ್ಲೇ ಕೇಂದ್ರ ಸರಕಾರದವರು ಪ್ರತಿ ಜಿಲ್ಲಾ ಕೇಂದ್ರದಲ್ಲೂ ಒಂದೊಂದು ಮಾದರಿ ಪ್ರೌಢ ಶಾಲೆಯನ್ನು ತೆರೆಯುತ್ತಾರೆಂಬುದನ್ನು ಕೇಳುವಾಗ ಈಯೆಲ್ಲ ವಿಚಾರಗಳು ನೆನಪಾಗುತ್ತವೆ. ವಿವಿಧ ರಾಜ್ಯ ಸರಕಾರಗಳಿಗೆ ಪ್ರೌಢ ಶಾಲೆಗಳು ಹೇಗಿರಬೇಕು ಎಂಬುದನ್ನು ಪ್ರತ್ಯಕ್ಷವಾಗಿ ತಿಳಿಸಿ ಕೊಡುವ ಸದುದ್ದೇಶದಿಂದ ಇಂತಹ ಶಾಲೆಗಳು ಆರಂಭವಾಗಲಿವೆಯೆಂದು ಹೇಳಲಾಗುತ್ತದೆ.

ವಿಚಾರವೇನೋ ಒಳ್ಳೆಯದೇ. ಈಗಾಗಲೇ ಪ್ರತಿರಾಜ್ಯದಲ್ಲೂ ಕೆಲವೊಂದು ಕೇಂದ್ರೀಯ ಶಾಲೆಗಳು ನಡೆದು ಬಂದಿವೆ. ಕೇಂದ್ರ ಸರಕಾರದ ಸಂಪನ್ಮೂಲಗಳು ವಿಶಾಲವಾಗಿರುವುದರಿಂದ ಇವು ಒಳ್ಳೆಯ ರೀತಿಯಲ್ಲೇ ನಡೆದು ಬರುತ್ತಿವೆ. ಇನ್ನು ನಿಯೋಜಿತ ಮಾದರಿ ಶಾಲೆಗಳೂ ಈ ಕೇಂದ್ರೀಯ ಶಾಲೆಗಳ ಮಾದರಿಯಲ್ಲೇ ಇರುವುದಾದರೆ, ಜಿಲ್ಲೆಗೊಂದು ಹೆಚ್ಚಿನ ಒಳ್ಳೆಯ ಶಾಲೆ ದೊರಕಿತೆಂದು ಸಂತೋಷ ಪಡಬಹುದು. ರಾಜ್ಯ ಸರಕಾರಗಳಿಗೋ ಖಾಸಗಿ ಆಡಳಿತ ವರ್ಗದವರಿಗೋ ಪ್ರೌಢ ಶಾಲೆಗಳು ಹೇಗಿರಬೇಕೆಂದು ಪ್ರತ್ಯಕ್ಷ ತೋರಿಸಿ ಕೊಡುವುದೇ ಕೇಂದ್ರ ಸರಕಾರದ ಉದ್ದೇಶ್ಯವಾಗಿದ್ದರೆ ಅದೂ ಈಡೇರಬಹುದು.

ತನ್ನ ಮಗು ಹಾಲು ಬೆಣ್ಣೆ ಮೊಸರು ಇತ್ಯಾದಿ ಇತ್ಯಾದಿ ಪೌಷ್ಟಿಕವಾದ, ಆರೋಗ್ಯಕರವಾದ ಆಹಾರ ಸೇವಿಸಬಾರದೆಂದು ಯಾವ ತಾಯ್ತಂದೆಯವರೂ ಬಯಸುವುದಿಲ್ಲ. ಆದರೆ ಗಂಜಿ ನೀರನ್ನೂ ಮಕ್ಕಳಿಗೆ ಕುಡಿಸಲು ಅಶಕ್ತರಾದವರು ಹಾಲು ಮೊಸರನ್ನೆಲ್ಲಿ ಪಡೆದಾರು? ಸಂತಾನ ಬಾಹುಳ್ಯ ಸೀಮಿತ ಸಂಪನ್ಮೂಲವುಳ್ಳ ನೂರು ಕುಟುಂಬಗಳ ನಡುವೆ 'ಆದರ್ಶ ಪರಿಹಾರ' ಪೊಂದನ್ನು ನೆಲಸುವುದರಿಂದ ಏನು ಪ್ರಯೋಜನವಾದೀತು?

ರಾಜ್ಯ ಪ್ರೌಢ ಶಾಲೆಗಳ ಆಡಳಿತ ವರ್ಗಕ್ಕೆ ತಮ್ಮ ಶಾಲೆಗಳ ಕೊರತೆಯ ಬಗೆಗೆ ಪೂರ್ಣ ಪ್ರಜ್ಞೆಯಿದೆ; ಅವನ್ನು ತುಂಬುವ ಲವಲವಿಕೆಯೂ ಇದೆ; ಆದರೆ, ಸಾಕಷ್ಟು ಸಂಪನ್ಮೂಲಗಳ ಅಭಾವದಿಂದ ಅವು ನರಳುತ್ತಿರುವುದನ್ನು ಗಮನಿಸಬೇಕು. ಆದರೂ ಇದ್ದ ಬಿದ್ದುವುಗಳನ್ನೇ ಯಥಾಯೋಗ್ಯವಾಗಿ ಬಳಸಿ ಉತ್ತಮ ರೀತಿಯಿಂದ ನಡೆದು ಬರುತ್ತಿರುವ ಹಲವಾರು ಖಾಸಗಿ ಶಾಲೆಗಳಿವೆ; ಕೆಲವಾದರೂ ಸರಕಾರಿ ಶಾಲೆಗಳಿವೆ. ಆಂಕರೆ, ಸಾಕಷ್ಟು ಆರ್ಥಿಕ ನೆರವು ದೊರೆತಿರೆ ಕೇಂದ್ರೀಯ ಶಾಲೆಗಳನ್ನೂ ನಿಯೋಜಿತ ಮಾದರಿ ಶಾಲೆಗಳನ್ನೂ ಮೆಟ್ಟಿ ನಿಲ್ಲಬಲ್ಲ ಪ್ರೌಢಶಾಲೆಗಳು ಈಗಲೇ ನಮ್ಮಲ್ಲಿವೆಯೆಂಬುದು ನಿರ್ವಿವಾದ.

ನಮ್ಮ ದೇಶದಲ್ಲಿ ಸೇವಾಭಾವ ಪ್ರಾಥಮಿಕ ಶಾಲೆಗಳಿಗೆ ತಕ್ಕ ಕಟ್ಟಡವಿಲ್ಲ; ಇರುವ ಕಟ್ಟಡಗಳೂ ಅಪರಿಪೂರ್ಣ. ಪ್ರೌಢ ಶಾಲೆಗಳಾಗುವಾಗ ಈ ಪರಿಸ್ಥಿತಿ ತುಸು ಸುಧಾರಿಸಿ, ಸೇವಾಕರ ಗಡುವಿನಲ್ಲಿದೆ. ಇದು ಕಟ್ಟಡಗಳ ವಿಷಯವಾಯ್ತು. ಇನ್ನು ಪೀಠೋಪಕರಣಗಳು, ಸ್ಥಾಂಥಾಲಯ, ಪ್ರಯೋಗ ಶಾಲೆ, ಕ್ರೀಡಾಂಗಣ ಇತ್ಯಾದಿ ಇತ್ಯಾದಿಗಳ ಪಟ್ಟಿ ಚಿಂತಾಜನಕವೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಏಕವತ್ತಾ ವರ್ಷಗಳಿಗೂ ಹಿಂದೆ ಶಾಲೆ ಪ್ರಾರಂಭವಾದಾಗ ಇದ್ದ ಕಟ್ಟಡ ಪಾರಂಪರೆ-ಪಾರಂಪರೆ-ಂಪರೆಯಿಲ್ಲದೆ ಇವೆ. ಮುರಿದ ಪೀಠೋಪಕರಣಗಳು; ಹರಿದ ಪುಸ್ತಕಗಳಿಂದ ಕೂಡಿದ ಗ್ರಂಥಾಲಯ... ...ಇವು ಪ್ರಾಥಮಿಕ ಶಾಲೆಗಳ ಗೋಳಿನ ಕಥೆ. ಪ್ರೌಢ ಶಾಲೆಗಳು

(ಎಂಟನೇ ಪುಟ ನೋಡಿರಿ)

ವಿಜಯ ಬ್ಯಾಂಕಿನ ತ್ರಿವಳಿ ಸೌಲಭ್ಯ ಯೋಜನೆ



ಇಂದೇ ಕೂಡಿಡಿ

1. ತಿಂಗಳು ತಿಂಗಳಿಗೆ ನಿಶ್ಚಿತ ವರಮಾನ
2. ಪೂರ್ತಿ ರೇವಣಿ ವಾಪಾಸ್ ಮೇಲೆ
3. ಬೋನಸ್ ಕೂಡಾ

ವಿವರಗಳಿಗೆ ನಿಮ್ಮ ಹತ್ತಿರದ ಶಾಖೆಯಲ್ಲಿ ವಿಚಾರಿಸಿ

ವಿಜಯ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಕಚೇರಿ: ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.
ಆಡಳಿತ ಕಚೇರಿ: ರೇಸ್‌ಕೋರ್ಸ್ ರೋಡ್, ಬೆಂಗಳೂರು-1.

ಚೇರ್‌ಮನ್ : ಎಂ. ಸುಂದರ್‌ರಾಮ್ ಶೆಟ್ಟಿ

OBM-2390 KAN

ವಿಜಯ ಬ್ಯಾಂಕಿನೊಂದಿಗೆ ಹೆಚ್ಚಿನ ವ್ಯವಹಾರ
ಎಂದರೆ ಹೆಚ್ಚಿನ ಸೌಲಭ್ಯ

ಮುಷ್ಕರಗಳು

- ನಿತ್ಯವೂ ವೃತ್ತಪತ್ರಿಕೆಗಳನ್ನು ಓದುವವರಿಗೆ 'ಬಂಗಾಳ ಬಂದ್' 'ಅಹಮ್ಮದಾಬಾದಿನಲ್ಲಿ ಹರತಾಳ', ಮುಂಬೈಯಲ್ಲಿ ಕಾರ್ಮಿಕರ ಮುಷ್ಕರ, ಕೇರಳದಲ್ಲಿ ಅಧ್ಯಾಪಕರ ವಿದ್ಯಾರ್ಥಿಗಳ ಪ್ರತಿಭಟನೆ, ಫ್ರಾನ್ಸಿನಲ್ಲಿ ಫೇರಾಪೋ, ಜೆ. ಜೆ. ಎಸ್. ನಲ್ಲಿ ಲಾಕೌಟ್ ಇತ್ಯಾದಿ ಸುದ್ದಿಗಳು ತೀರ ಪರಿಚಿತವಾಗಿರಲು ಸಾಕು. ನಿತ್ಯವೂ ವೃತ್ತಪತ್ರಿಕೆಗಳಲ್ಲಿ ಇಂತಹ ಹೆಜ್ಜೆಜಾರು ಸುದ್ದಿಗಳು ಬರುತ್ತಲೇ ಇರುತ್ತವೆ. ರೇಡಿಯೋಗಳಲ್ಲಿಯೂ ಇಂತಹ ಸಮಾಚಾರಗಳು ತೀರಾ ಸಾಮಾನ್ಯ. ನಮ್ಮಲ್ಲಿ ಯೆಚ್ಚಿನ ಜನರು ಇಂತಹ ಸಮಾಚಾರಗಳತ್ತ ಹೆಚ್ಚಿನ ಗಮನ ಕೊಡುವುದಿಲ್ಲ ಎಂಬುದು ಹೌದು, ಮುಷ್ಕರ, ಹೊರಗೀಲಿ, ಫೇರಾಪೋಗಳು ಭಾರತೀಯರ ಅದರಲ್ಲೂ ವಿಶೇಷವಾಗಿ ಭಾರತೀಯ ಕಾರ್ಮಿಕರ ಜೀವನದಲ್ಲಿ ಹಾಸುಹೊಕ್ಕಾಗಿ ಬರುತ್ತಿದೆ. ಮುಷ್ಕರ, ಫೇರಾಪೋಗಳು ದಿನ ನಿತ್ಯವೂ ನಡೆಯುತ್ತಿರುವುದರಿಂದ ಅವುಗಳತ್ತ ಗಮನ ಹೋಗುವುದಿಲ್ಲ. ನಾವು ಮೂರು ಮುಖ್ಯ ವಿಷಯಗಳನ್ನು ಇಲ್ಲಿ ಗಮನಿಸಬಹುದು. ಭಾರತದ ಆರ್ಥ ವ್ಯವಸ್ಥೆಯಲ್ಲಿ ಆಡಳಿತದಲ್ಲಿ ಅವ್ಯವಸ್ಥೆಗಳು ಹೇರಳವಾಗಿವೆ. ಕಾರ್ಮಿಕ ಅಶಾಂತಿ ಹೆಚ್ಚುತ್ತಲಿವೆ. ಈ ಅಶಾಂತಿಗಳ ಅಧಿಕ್ಯದಿಂದ ಆವು ನಿತ್ಯವೂ ಕಳಚಿದ ಸಮಾಚಾರಗಳಾಗಿವೆ. ಮುಷ್ಕರ, ಬಂದ್‌ಗಳ ವಿಷಯ ಹಳೆಯದಾದರೂ ನಮಗೆ ಒಂದು ವಿಷಯ ಸ್ಪಷ್ಟವಾಗಿ ಅರ್ಥವಾಗಿರುವುದಿಲ್ಲ.ಈ ಮುಷ್ಕರ, ಹೊರಗೀಲಿ, ಫೇರಾಪೋಗಳೆಂದರೇನು? ಅವುಗಳಲ್ಲಿ ಎಷ್ಟು ಪ್ರಭೇದಗಳಿವೆ? ಯಾಕೆ ಈ ಪ್ರತಿಭಟನೆಗಳು. ಕಾಯದೆ ಇವುಗಳನ್ನು ಹೇಗೆ ವಿವರಿಸುತ್ತದೆ?

ಮುಷ್ಕರಗಳೆಂದರೇನು?

ಸಾಮಾನ್ಯವಾಗಿ ಮುಷ್ಕರವೆಂದರೆ ತಮ್ಮ ಕೆಲವು ಬೇಡಿಕೆಗಳನ್ನು ಪೂರೈಸಲಿಚ್ಛವಿಲ್ಲದ ಯಜಮಾನನ ಮುಂದಿಟ್ಟು ಅವು ಈಡೇರುವ ವರೆಗೆ ಕೆಲಸಗಳನ್ನು ನಿಲ್ಲಿಸಿಬಿಡುವದು ಎಂದು ತಿಳಿಯಲಾಗಿದೆ. ಆದರೆ ಕಾಯದೆಯ ದೃಷ್ಟಿಯಲ್ಲಿ ಕೇವಲ ಕೆಲಸವನ್ನು ನಿಲ್ಲಿಸಿಬಿಡುವದು ಮುಷ್ಕರ ಎನ್ನಿಸಿಕೊಳ್ಳುವದಿಲ್ಲ. "ಕೈಗಾರಿಕಾ ವಿವಾದ ಕಾನೂನಿನಲ್ಲಿ ಮುಷ್ಕರದ ವ್ಯಾಖ್ಯೆಯನ್ನು ಹೀಗೆ ವಿವರಿಸಲಾಗಿದೆ: "ಒಂದು ಕೈಗಾರಿಕೆಯಲ್ಲಿನ ಹಲವು ಅಥವಾ ಎಲ್ಲ ಕೆಲಸಗಾರರು ಒಟ್ಟುಗೂಡಿ ಕೆಲಸವನ್ನು ನಿಲ್ಲಿಸುವದು ಅಥವಾ ಒಟ್ಟು ತಿಳುವಳಿಕೆಯ ಮೇಲೆ ಕೆಲಸ ಮಾಡಲು ನಿರಾಕರಿಸುವದು ಅಥವಾ ಕೆಲಸವನ್ನು ಸ್ವೀಕರಿಸದಿರುವದು ಅಥವಾ ಕೆಲಸದಲ್ಲಿ ಮುಂದುವರಿಯದಿರುವದು ಮುಷ್ಕರವೆನ್ನಿಸಿಕೊಳ್ಳುತ್ತದೆ."

ಮುಷ್ಕರದಲ್ಲಿ ಮೂರು ಮುಖ್ಯ ಅಂಶಗಳಿವೆ: i) ಕೆಲಸಗಾರರ ಸಮೂಹ; ii) ಕೆಲಸದ ನಿಲುಗಡೆ ಅಥವಾ ನಿರಾಕರಣೆ; iii) ಸಾಮೂಹಿಕ ಕೃತಿ. ಕೇವಲ ಒಬ್ಬ ಕೆಲಸಗಾರ ಕೆಲಸ ಮಾಡಲು ನಿರಾಕರಿಸಿದರೆ ಅಥವಾ ಕೆಲಸ ನಿಲ್ಲಿಸಿದರೆ ಅದನ್ನು ಮುಷ್ಕರ ಎಂದು ಕರೆಯಲಾಗುವದಿಲ್ಲ. ಅಥವಾ ಎಲ್ಲಾ ಕೆಲಸಗಾರರೂ ಸಾಮೂಹಿಕವಾಗಿ ಕೆಲಸ ಮಾಡಲು ನಿರಾಕರಿಸಿದರೆ ಅಥವಾ ಕೆಲಸವನ್ನು ನಿಲ್ಲಿಸಿದರೆ ಅದು ಮುಷ್ಕರ ಎಂದು ಕರೆಯಲ್ಪಡಬಹುದು. ಕೆಲಸದ ನಿರಾಕರಣೆ ಅಥವಾ ನಿಲ್ಲಿಸುವಿಕೆ — ಒಂದು ಘಂಟೆ ಇರಬಹುದು ಒಂದು ದಿನವಿರಬಹುದು, ಅಥವಾ ಹಲವು ದಿನಗಳಿರಬಹುದು. ಅಂದರೆ ಕೆಲಸ ನಿರಾಕರಣೆಯ ಅವಧಿ ಮುಖ್ಯವಲ್ಲ. ಮುಷ್ಕರದಲ್ಲಿ ಸಾಮೂಹಿಕ ಕೃತಿ ಇರಲೇ ಬೇಕು. ಕೇವಲ ಒಬ್ಬನು ಗೈರ ಹಾಜರಾದರೆ ಅದು ಮುಷ್ಕರವಲ್ಲ. ಯಜಮಾನನ ಅಪ್ಪಣೆ ಪಡೆದು ಗೈರ ಹಾಜರಾದರೆ ನಾವದನ್ನು ಮುಷ್ಕರವೆಂದು ಕರೆಯಲಾಗದು. ಎಲ್ಲಾ ಅಥವಾ ಹಲವು ಕೆಲಸಗಾರರು ಸಾಮೂಹಿಕ ತಿಳುವಳಿಕೆಯ ಮೇಲೆ ಕೆಲಸ ಮಾಡದಿದ್ದರೆ ಅದು ಮುಷ್ಕರವೆಂದು ಕರೆಯಿಸಿಕೊಳ್ಳುವದು. ಸಾಮೂಹಿಕ ತಿಳುವಳಿಕೆ ಇಲ್ಲದೇ ಸಾಮೂಹಿಕ ಗೈರು ಹಾಜರಿ ಇದೆಯೊದರೆ ಅದು ಮುಷ್ಕರವೇ? ಉದಾಹರಣೆಗೆ ಬೆಂಗಳೂರಿನಲ್ಲಿ ಭಾರತ ಹಾಗೂ ಇಂಗ್ಲೆಂಡಿನ ನಡುವೆ ಟೆಸ್ಟ್ ಕ್ರಿಕೆಟ್ ಪ್ರಾರಂಭವಾಯಿತೆನ್ನಿ. ಆಗ ಯಾವುದಾದರೊಂದು ಕಾರ್ಖಾನೆಯ ಕಾರ್ಮಿಕರು ಯಾವ ಪೂರ್ವ ವಿಚಾರ ವಿನಿಮಯಗಳಿಲ್ಲದೇ ಒಂದು ದಿನ ಎಲ್ಲರೂ ಕ್ರಿಕೆಟ್ ಆಟ ನೋಡಲು ಹೋಗಬಹುದು. ಕೆಲಸ ತಪ್ಪಿಸಿಕೊಳ್ಳಬಹುದು. ಇಂಥ ಸಂದರ್ಭದಲ್ಲಿ ಈ ಗೈರ ಹಾಜರಿಯನ್ನು ಮುಷ್ಕರವೆಂದು ಪರಿಗಣಿಸಲಾಗುವದಿಲ್ಲ.

ಮುಷ್ಕರವಾಗಬೇಕಾದರೆ ಅದಕ್ಕೆ ಯಾವುದಾದರೂ ಕಾರಣವಿರಲೇಬೇಕೆ ಎಂಬುದು ವಿಚಾರಿಸಲೇ ಬೇಕಾದ ಪ್ರಶ್ನೆ. "ಕೈಗಾರಿಕಾ ವಿವಾದ ಕಾನೂನಿನ ವ್ಯಾಖ್ಯೆಯಲ್ಲಿ ಇಂತಹ ಉದ್ದೇಶಗಳು ಇರಲೇಬೇಕೆಂದು ಸೂಚಿಸಿಲ್ಲ. ಆದರೆ "ಮುಂಬೈ ಕೈಗಾರಿಕಾ ಸಂಬಂಧಗಳ ಕಾನೂನಿ"ನ (1946)ಮುಷ್ಕರದ ವ್ಯಾಖ್ಯೆಯಲ್ಲಿ ಇಂತಹ ಕಾರಣಗಳು ಅಗತ್ಯವೆಂದು ಪರಿಗಣಿಸಲಾಗಿದೆ. ಕೈಗಾರಿಕಾ ವಿವಾದದ ಪರಿಣಾಮವಾಗಿ, ಒಂದು ಕೈಗಾರಿಕೆಯ ಕೆಲಸಗಾರರು ಒಟ್ಟುಗೂಡಿ ಕೆಲಸವನ್ನು ಮಾಡಲು ಕೆಲಸದಲ್ಲಿ ಮುಂದುವರಿಯಲು ನಿರಾಕರಿಸಿದರೆ ಕೆಲಸವನ್ನು ಪೂರ್ಣ ಅಥವಾ ಭಾಗಶಃ ನಿಲ್ಲಿಸಿದರೆ ಅದು ಮುಷ್ಕರವೆನ್ನಿಸಿಕೊಳ್ಳುತ್ತದೆ. ಕೆಲಸದ ಭಾಗಶಃ ಅಥವಾ ಪೂರ್ಣ ನಿಲುಗಡೆ ಕೈಗಾರಿಕಾ ವಿವಾದದ ಕಾರಣದಿಂದಾಗಿರಬೇಕೆಂಬುದನ್ನು ನಾವು ಗಮನದಲ್ಲಿಡಬೇಕು. ಕೈಗಾರಿಕಾ ವಿವಾದಕ್ಕೆ ಕೆಲಸದ ಅವಧಿ, ಸಂಬಳ, ಸೌಕರ್ಯ, ರಜಾದಿನಗಳು, ಸೇವಾವಧಿ, ಬೋನಸ್ (ಉಚಿತಾರ್ಥ) ಮುಂತಾದ ಕಾರಣಗಳಿರಬಹುದು.

ನಾವು ಗಮನಿಸಬೇಕಾದ ಇನ್ನೊಂದು ಮುಖ್ಯ ಅಂಶವೆಂದರೆ ಮುಷ್ಕರ ಪ್ರತಿಭಟನೆಯು ಒಂದು ವಿಧಾನ. ಮುಷ್ಕರಗಳು ಆಡಳಿತ ವರ್ಗದವರ, ಯಜಮಾನರ ವಿರುದ್ಧ ಪ್ರತಿಭಟನೆಗಳು. ಪ್ರತಿಭಟನೆಯಿಲ್ಲದಿದ್ದರೆ ಮುಷ್ಕರಗಳು ಹೇಗಾಗಬೇಕು?

ಕೆಲಸದ ಭಾಗಶಃ ನಿಲುಗಡೆ ಅಥವಾ ಭಾಗಶಃ ನಿರಾಕರಣೆ ಮುಷ್ಕರದ ವ್ಯಾಖ್ಯೆಯಲ್ಲಿ ಸೇರಿದೆಯೆ? ಒಂದು ಸ್ಥಾವರದ (Establishment) ಒಂದಷ್ಟು ಕೆಲಸಗಾರರು ಕೆಲಸವನ್ನು ಭಾಗಶಃ ಸ್ಥಗಿತಗೊಳಿಸಬಹುದು ಅಥವಾ ಭಾಗಶಃ ನಿರಾಕರಿಸಬಹುದು. ಇಂತಹ ಭಾಗಶಃ ನಿರಾಕರಣೆ, ನಿಲುಗಡೆಗಳನ್ನು ಮುಷ್ಕರಗಳೆಂದು ಪರಿಗಣಿಸಬೇಕೆಂದು ಅನೇಕ ಕೋರ್ಟಿನ ನಿರ್ಣಯಗಳು ತಿಳಿಸಿವೆ.

ಒಂದು ಕಾರಖಾನೆಯಲ್ಲಿ, ಬ್ಯಾಂಕಿನಲ್ಲಿ, ಕಾಲೇಜಿನಲ್ಲಿ ಅಥವಾ ಇನ್ನಿತರ ಉದ್ಯೋಗಗಳಲ್ಲಿ ಕಾರ್ಮಿಕರ ಉದ್ಯೋಗದ ಅವಧಿ ಮೊದಲೇ ನಿರ್ಧರಿಸಲ್ಪಟ್ಟಿರುತ್ತದೆ. ಇಂಥಲ್ಲಿ ಆಡಳಿತ ವರ್ಗದವರು ನಿಯತ ಕಾಲಕ್ಕಿಂತಲೂ ಹೆಚ್ಚು ವೇಳೆ ಕೆಲಸ ಮಾಡಲು (overtime work) ಕಾರ್ಮಿಕರನ್ನು ಕೇಳಿಕೊಂಡಾಗ, ಅವರು ಕೆಲಸಮಾಡಲು ನಿರಾಕರಿಸಿದರೆ ಅದು ಮುಷ್ಕರವೆನ್ನಿಸಿಕೊಳ್ಳಲಾರದು. ಯಾಕೆಂದರೆ ಇಂತಹ ಹೆಚ್ಚುವರಿ ಕೆಲಸಗಳನ್ನು ಮಾಡಲೇಬೇಕೆಂದು ಒತ್ತಾಯ ಮಾಡುವ ಹಾಗಿಲ್ಲ. ಕಾರ್ಮಿಕರು ಮನಸ್ಸಿದ್ದರೇ ಮಾಡಬಹುದು. ಆದರೆ ಆಡಳಿತ ವರ್ಗ ಹಾಗೂ ಕೆಲಸಗಾರರ ನಡುವಿನ ಸಾಮಾನ್ಯ ಒಪ್ಪಂದದಂತೆ ಅವರು ಹೆಚ್ಚು ವೇಳೆ ಕೆಲಸ ಮಾಡಬೇಕಾಗಿದ್ದರೆ ಆಗ ಆವನ್ನು ಮುಷ್ಕರವೆಂಪು ಪರಿಗಣಿಸಲೂ ಬಹುದು.

ಮುಷ್ಕರವೆಂದರೇನು? ಎಂಬ ಪ್ರಶ್ನೆಗೆ ನಾವು ಹೀಗೆ ಉತ್ತರ ಕೊಡಬಹುದು. ಒಂದು ಅಥವಾ ಹಲವು ಕೈಗಾರಿಕಾ ವಿವಾದ ಕಾರಣದಿಂದಾಗಿ ಒಂದು ಅಥವಾ ಅನೇಕ ಸ್ಥಾವರಗಳ ಕಾರ್ಮಿಕರು ಸಾಮೂಹಿಕವಾಗಿ ಆಡಳಿತ ಮಂಡಳಿ ಅಥವಾ ಮೂಲಿಕರ ವಿಚಾರಗಳನ್ನು ಪ್ರತಿಭಟಿಸುವ ಸಲುವಾಗಿ ತಮ್ಮ ನಿತ್ಯದ ಕೆಲಸದ ಅವಧಿಯಲ್ಲಿ ಭಾಗಶಃ ಅಥವಾ ಪೂರ್ಣವಾಗಿ ಕೆಲಸ ನಿಲ್ಲಿಸಿದರೆ, ಕೆಲಸಮಾಡಲು ನಿರಾಕರಿಸಿದರೆ ಅಥವಾ ಕೆಲಸವನ್ನು ಸ್ವೀಕರಿಸದಿದ್ದರೆ ಕೆಲಸದಲ್ಲಿ ಮುಂದುವರಿಯದಿದ್ದರೆ ಅಜನ್ನು ನಾವು ಮುಷ್ಕರವೆಂದು ಕರೆಯಬಹುದು. ಇಲ್ಲಿ ಕಾರ್ಮಿಕರು ಅಂದರೆ ಕೇವಲ ಕಾರ್ಖಾನೆಗಳಲ್ಲಿ ದೈಹಿಕ ಶ್ರಮ ಮಾಡುವವರು ಎಂದು ಅರ್ಥಮಾಡದೇ, ದೈಹಿಕ ಶ್ರಮ, ಬೌದ್ಧಿಕ ಶ್ರಮ ಮಾಡುವವರೆಲ್ಲರೂ ಕಾರ್ಮಿಕರೆಂದು ತಿಳಿಯಬೇಕು. ಕಾರ್ಮಿಕ ವಿವಾದವೆಂದರೆ ಕೇವಲ ಕಾರ್ಖಾನೆಗಳ ಮೂಲಕ ಅಥವಾ ಆಡಳಿತ ವರ್ಗ ಹಾಗೂ ಕಾರ್ಮಿಕರ ನಡುವಿನ ವಿವಾದವೆಂದು ಸೀಮಿತಗೊಳಿಸದೇ ಸ್ವಲ್ಪ ವಿಸ್ತಾರವಾದ ಅರ್ಥದಲ್ಲಿ ತಿಳಿಯುವದಗತ್ಯ.

ಮುಷ್ಕರದ ಪ್ರಭೇದಗಳು:-

ಮುಷ್ಕರದಲ್ಲಿ ಅನೇಕ ವಿಧಗಳಿವೆ. ಅನೇಕ ಹೊಸ ವಿಧದ ಮುಷ್ಕರಗಳು ಅವಿಷ್ಕಾರವಾಗುತ್ತಲೇ ಇವೆ. ಕಾರ್ಮಿಕರು ಹೊಸ ಹೊಸ ವಿಧದ ಪ್ರತಿಭಟನೆಯನ್ನು ಪ್ರಾರಂಭಿಸುತ್ತಾರೆ. ಈ ಮುಷ್ಕರಗಳನ್ನೆಲ್ಲ ಬೇರೆ ಬೇರೆಯೆಂದು ಪೂರ್ಣವಾಗಿ ವಿಂಗಡಿಸುವದು ಕಷ್ಟಸಾಧ್ಯ.ಆದರೂ ಸಾಮಾನ್ಯ ಮುಷ್ಕರಗಳು (General Strikes) ಸಹಾನುಭೂತಿ ಮುಷ್ಕರಗಳು (Sympathetic Strikes) ರಾಜಕೀಯ ಮುಷ್ಕರಗಳು (Political Strikes) ಹರತಾಳಗಳು (Hartals) ಬಂದ್‌ಗಳು (Bundhs) ಮುಂತಾಗಿ ಅನೇಕ ವಿಧಗಳಿವೆ. ಇವುಗಳಲ್ಲಿ ಸಾಮಾನ್ಯ ಮುಷ್ಕರಗಳು ನೇರವಾಗಿ ಶ್ರಮಿಕರ ಕೆಲಸದ ಪರಿಸ್ಥಿತಿ, ಬೇಡಿಕೆಗಳಿಗೆ ಸಂಬಂಧಿಸಿದ್ದಾದರೆ ರಾಜಕೀಯ ಮುಷ್ಕರಗಳು, ಹರತಾಳಗಳಲ್ಲಿ ಬೇಡಿಕೆಗಳಿಗೂ ಅವರ ಮುಷ್ಕರಗಳಿಗೂ ವಿಶೇಷ ಸಂಬಂಧಗಳಿರುವದಿಲ್ಲ. ತಮಗೆ ಅಪ್ರತ್ಯಕ್ಷವಾಗಿ ಸಂಬಂಧಿಸಿದ ವಿಷಯುಗಳಿಗೆ ಮುಷ್ಕರಗಳನ್ನು ಕಾರ್ಮಿಕರು ಪ್ರಾರಂಭಿಸಬಹುದು. ಇವುಗಳಲ್ಲದೇ ಒಳಗುಳಿ ಮುಷ್ಕರ (Stay-in-Strikes) ಉಪವಾಸ ಮುಷ್ಕರ (Hunger Strikes) ಸಾಂಕೇತಿಕ ಮುಷ್ಕರ (Token Strikes) ಮಿಂಚಿನ ಮುಷ್ಕರ (Lightening Strikes) ನಿಯಮಕ್ಕೆ ಕೆಲಸ (Work-to-rule Strikes) ಮಂದನಡೆ (go-slow) ತಡೆಗಾವಲು (Picketing) ಹಾಗೂ ಬಹಿಷ್ಕಾರ (Boycotts) ಇತ್ಯಾದಿ ಅನೇಕ ಪ್ರಭೇದಗಳಿವೆ.

ಸಾಮಾನ್ಯ ಮುಷ್ಕರಗಳು ಅಥವಾ

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಸರ್ವ ಮುಷ್ಕರಗಳು–(Genaral-Strikes)

ನಿರ್ದಿಷ್ಟ ವ್ಯಕ್ತಿ ಗುಂಪುಗಳಿಂದ ನಿರ್ದಿಷ್ಟ ಯಜಮಾನನ ವಿರುದ್ಧ ಪ್ರತಿಭಟನೆ ಇಲ್ಲದೇ ಎಲ್ಲ ಯಜಮಾನರ ವಿರುದ್ಧ, ಸಾಮೂಹಿಕ ಪ್ರತಿಭಟನೆ ಇದ್ದರೆ ಅದು ಸಾಮಾನ್ಯ ಮುಷ್ಕರ ಎನ್ನಿಸಿಕೊಳ್ಳುತ್ತದೆ. ಹರತಾಳ, ಬಂದ್‌ಗಳು ಇಂತಹ ಜಾತಿಗೆ ಸೇರಿದವುಗಳು. ಸಾರ್ವಜನಿಕರಿಗೆ ತೊಂದರೆ ಕೊಡುವುದೇ ಉದ್ದೇಶವೋ ಎನ್ನುವಷ್ಟರ ಮಟ್ಟಿಗೆ ಇಂತಹ ಮುಷ್ಕರಗಳು ತೊಂದರೆದಾಯಕವಾಗುತ್ತಲಿವೆ. ಅಂಗಡಿಗಳು, ಹೋಟೆಲುಗಳು, ಆಫೀಸುಗಳು, ಸ್ಕೂಲು, ಕಾಲೇಜು, ಸಾಗಾಣಿಕೆ ವ್ಯವಸ್ಥೆಗಳು, ಜಸ್ಟ್ ತ್ರೈಗಳು ಇತ್ಯಾದಿ ನಿತ್ಯಜೀವನದ ಅಂಗಗಳು ಒಂದು ಶಬ್ದಕ್ಕೆ ಆಥವಾ ವ್ಯಕ್ತಿಗೆ ಅಥವಾ ಒಂದು ಬೇಡಿಕೆ ನಿಲುವಿಗೆ ಬೆಂಬಲ ಸೂಚಿಸಲು ಅವರ ಕರೆಯ ಮೇರೆಗೆ ತಮ್ಮ ನಿತ್ಯಕೆಲಸಗಳನ್ನು ಸ್ವಯಂ ಪ್ರೇರಣೆಯಿಂದ ಸ್ಥಗಿತ ಗೊಳಿಸಿದರೆ ಅದು ಹರತಾಳ ಎನ್ನಿಸಿಕೊಳ್ಳುತ್ತದೆ. ಅಥವಾ ಕೆಲವು ವೇಳೆ ಬಲವಂತ (Force) ಇದ್ದರೆ ಅದು ಬಂದ್ (Bundh) ಎನ್ನಿಸಿಕೊಳ್ಳಬಹುದು. ಕಾರ್ಮಿಕರು ಸಾಮೂಹಿಕವಾಗಿ (As a whole) ಕೆಲವು ಬೇಡಿಕೆಗಳನ್ನು ಮುಂದಿಟ್ಟು ಅಥವಾ ರಾಜಕೀಯ ಕಾರಣಗಳಿಗಾಗಿ ಇಂತಹ ಮುಷ್ಕರಗಳು ನಡೆಯಬಹುದು.

ರಾಜಕೀಯ ಮುಷ್ಕರಗಳು:—

ಮುಷ್ಕರಗಳಿಗೆ ಆರ್ಥಿಕ, ಕೈಗಾರಿಕಾ ವಿವಾದ, ಕೆಲಸದ ಸ್ಥಿತಿಗತಿಗಳ ಸುಧಾರಣೆಯ ಬೇಡಿಕೆಗಳನ್ನು ಹೊರತುಪಡಿಸಿ ಕೇವಲ ರಾಜಕೀಯ ಕಾರಣ ಕಾರಣವಾಗಿದ್ದರೆ ಅಂಥವುಗಳನ್ನು ರಾಜಕೀಯ ಮುಷ್ಕರಗಳೆನ್ನಬಹುದು. ಸರಕಾರದ ಮೇಲೆ ಒತ್ತಡ ತರುವದು ಇಂತಹ ಮುಷ್ಕರಗಳ ಉದ್ದೇಶ. ಪಾಕಿಸ್ತಾನ ಬಾಂಗ್ಲಾದೇಶಕ್ಕೆ ಮಾನ್ಯತೆ ಕೊಡಬೇಕೆಂದು ನಮ್ಮ ಕಾರ್ಮಿಕರು ಮುಷ್ಕರ ಹೂಡಿದರೆ, ಅದು ರಾಜಕೀಯ ಮುಷ್ಕರ. ವಿವಿಧ ರಾಜಕೀಯ ಪಕ್ಷಗಳು ಕೆಲವು ವೇಳೆ ಕಾರ್ಮಿಕ ಮುಷ್ಕರಗಳನ್ನು ಸಂಘಟಿಸುವದುಂಟು. ಇಂತಹವುಗಳನ್ನು ರಾಜಕೀಯ ಮುಷ್ಕರ ಎಂದು ಕರೆಯುವುದು ದುಸ್ತರ. ಯಾಕೆಂದರೆ ಇಲ್ಲಿ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸುವದು, ಅವರ ಹಿತಾಶಕ್ತಿಗಳನ್ನು ಕಾಪಾಡುವದು ಮುಖ್ಯ. ಯಾವ ರಾಜಕೀಯ ಪಕ್ಷ ಮುಂದಾಳ್ತನ ವಹಿಸಿದೆ ಎಂಬುದು ಮುಖ್ಯವಲ್ಲ.

ಸಹಾನುಭೂತಿ ಸಂಪು

ಕೆಲಸಗಾರರು ಇತರರಿಗೆ ಸಹಾನುಭೂತಿ ತೋರಿಸುವ ಸಲುವಾಗಿ ಕೆಲಸಕ್ಕೆ ಗೈರು ಹಾಜರಾಗುತ್ತಾರೆ. ಇಲ್ಲ ಕೇವಲ ಅನುಕಂಪೆಯೇ ಮುಖ್ಯ ಕಾರಣ. ಈ ಅನುಕಂಪೆಗೆ ಅಪ್ರತ್ಯಕ್ಷ—ಕಾರಣಗಳಿರ ಬಹುದು. ಅಥವಾ ಮುಷ್ಕರ ಹೂಡಿದ ಕಾರ್ಮಿಕರ ಬೇಡಿಕೆ ಅನರಿಗೆ ಅಪ್ರತ್ಯಕ್ಷವಾಗಿ ಪ್ರಯೋಜನಕಾರಿಯಾಗಿರ ಬಹುದು. ಇಂತಹ ಸಹಾನುಭೂತಿ ಸಂಪುಗಳಲ್ಲಿ ಮುಷ್ಕರ ಹೂಡುವ ಕಾರ್ಮಿಕರಿಗೆ ನಿರ್ದಿಷ್ಟ ಬೇಡಿಕೆಗಳಿರುವದಿಲ್ಲ. ಅಥವಾ ಅವು ಕೈಗಾರಿಕಾ ವಿವಾದಗಳಿಂದ ಉದ್ಭವವಾದವೂ ಆಲ್ಲ. ಸಹಾನುಭೂತಿ ಸಂಪುಗಳನ್ನು ಮುಂಬೈ ಕೈಗಾರಿಕಾ ಸಂಬಂಧಗಳ ಕಾನೂನಿನ ಪ್ರಕಾರ ಮುಷ್ಕರವೆಂದು ಪರಿಗಣಿಸುವದು ಕಷ್ಟ ಸಾಧ್ಯ. ಆದರೆ ಕೈಗಾರಿಕಾ ವಿವಾದ ಕಾನೂನಿನ ಪ್ರಕಾರ ಇವು ಮುಷ್ಕರಗಳೇ.

ಉಪವಾಸ ಮುಷ್ಕರವೆಂದರೆ ಒಬ್ಬ ಅಥವಾ ಹಲವು ಕೆಲಸಗಾರರು ತಮ್ಮ ಕೆಲಸದ ಸ್ಥಳದ ಎದುರು ಅಥವಾ ಮೂಲ ಕಛೇರಿ ಅಥವಾ ಸಂಬಂಧಿಸಿದ ಅಧಿಕಾರಿಯ ಮನೆಯ ಎದುರು ನಿರ್ದಿಷ್ಟ ಅಥವಾ ಅನಿರ್ದಿಷ್ಟ ಅವಧಿಯವರೆಗೆ ಆಹಾರ ಸೇವಿಸದೇ ಕುಳಿತಿರುವದು. ಉಪವಾಸ ಮಾಡುವದು ಅಪರಾಧವಲ್ಲ. ಆದರೆ ಅದು ಆತ್ಮಹತ್ಯೆಯ ಪ್ರಯತ್ನವಾಗಿದ್ದರೆ ಕಾಯ್ದೆಯ ದೃಷ್ಟಿಯಲ್ಲಿ ಅಪರಾಧ. ಸಾಮಾನ್ಯವಾಗಿ ಉಪವಾಸ ಮುಷ್ಕರಗಳು ಶಾಂತಿಯುತವಾಗಿರುತ್ತವೆ. ಆದರೆ ಉಪವಾಸ ಹೂಡಿದವರು ಮರಣಹೊಂದಿದರೆ ಶಾಂತಿ ಭಂಗವಾಗುತ್ತದೆ. ಸತ್ಯವಾದ ಹಾಗೂ ನ್ಯಾಯವಾದ ಬೇಡಿಕೆಗಳನ್ನು ಮುಂದಿಟ್ಟು ನೈತಿಕ ಸ್ಥೈರ್ಯದ ಮೇಲೆ ಸತ್ಯಾಗ್ರಹ ಹೂಡುತ್ತಿದ್ದ ಗಾಂಧೀಜಿಯವರ ಈ ಅಸ್ತ್ರ ಇಂದು ವಿಶ್ವತರೂಪ ತಾಳಿ ಗಾಂಧೀ ಮಾರ್ಗವನ್ನೇ ಪ್ರಶ್ನಿಸ ತೊಡಗಿದೆ.

ಸಾಂಕೇತಿಕ ಮುಷ್ಕರಗಳು ಕೇವಲ ಕೆಲವು ಘಂಟೆಗಳ ಅವಧಿಯದಾಗಿರ ಬಹುದು; ಒಂದೆರಡು ಅಥವಾ ಹಲವುದಿನಗಳೂ ಇರಬಹುದು. ಇದು ಮುಂದೆ ಬರಬಹುದಾದ ಗಂಭೀರ ಪ್ರತಿಭಟನೆಯ ಪೂರ್ವ ಸೂಚನೆ. ಸಾಂಕೇತಿಕ ಮುಷ್ಕರಗಳಲ್ಲಿ ತಮ್ಮ ಕೆಲಸಗಳನ್ನು ಸ್ವಲ್ಪ ಅವಧಿಯ ವರೆಗೆ ನಿಲ್ಲಿಸಬಹುದು ಅಥವಾ ಪ್ರತಿಭಟನಾ ಸೂಚಕವಾಗಿ ಬಿಲ್ಲೆ (Badges)ಗಳ ಗಳನ್ನು ಅಥವಾ ಇನ್ನಿತರ ಸಂಕೇತಗಳನ್ನು, ಪಟ್ಟಿಗಳನ್ನು ಧರಿಸಿ ಕೆಲಸ ಮುಂದುವರಿಸುತ್ತಿರಬಹುದು.

ಪೂರ್ವಸೂಚನೆ ಇಲ್ಲದೇ ಒಮ್ಮಿಂದೊಮ್ಮೆ ರಜತರೇಪೆಯುಂತೆ ಮಿಂಚಿ ಮಾಯವಾಗುವ ಅಲ್ಪಾವಧಿಯ ಮುಷ್ಕರಗಳು ಮಿಂಚಿನ ಮುಷ್ಕರಗಳು. ಹಲವು ನಿಮಿಷ ಅಥವಾ ಒಂದೆರಡು ಘಂಟೆಗಳ ಅವಧಿಯ ವರೆಗೆ ಈ ಮುಷ್ಕರಗಳು ನಡೆದು ಆ ನೇಲೆ ಕೆಲಸಗಳು ಯಥಾಪ್ರಕಾರ ನಡೆಯತೊಡಗುತ್ತವೆ.

ಕೆಲವು ಬಾರಿ ಕಾರ್ಮಿಕರನ್ನು ಕಾಯದೆ ನಿಯಮಗಳಲ್ಲಿ ಉಲ್ಲೇಖಿಸಲ್ಪಟ್ಟದ್ದಕ್ಕಿಂತ ಹೆಚ್ಚು ಕೆಲಸ ಮಾಡಲು ಕೇಳಿಕೊಂಡರೆ ಅದು ಅವರಿಗೆ ಹಿಂಸೆಯಾಗಿರಬಹುದು ಅಥವಾ ಕಾರ್ಮಿಕರು ಹಾಗೂ ಆಡಳಿತ ವರ್ಗದವರ ಮಧ್ಯೆ ಸಾಕಷ್ಟು ಸೌಹಾರ್ದ ವಾತಾವರಣವಿರದೇ ಒಳಗೊಳಗೇ ದುಮಿನುಮಿಸುವ ಸಂದರ್ಭಗಳಿರಬಹುದು. ಇಂತಹ ಸಂದರ್ಭಗಳಲ್ಲಿ ಕಾರ್ಮಿಕರು ಅಪ್ರಧಾನ, ಅತಿ ಸೂಕ್ಷ್ಮ ನಿಯಮಗಳು ಅಥವಾ ಯಾವುದು ಸಾಮಾನ್ಯವಾಗಿ ನಿತ್ಯ ಆಚರಣೆಯಲ್ಲಿಲ್ಲವೋ ಇಂತಹ ನಿಯಮಗಳ ಪ್ರಕಾರ ಕೆಲಸ ಮಾಡಬಹುದು. ಅಥವಾ ಕಾಯ್ದೆಯಲ್ಲಿ ಹೇಳಿದ್ದಕ್ಕಿಂತ ಸ್ವಲ್ಪವೂ ಹೆಚ್ಚು ಕೆಲಸ ಮಾಡಲು ನಿರಾಕರಿಸಬಹುದು. ಇದು ನಿಯಮಕ್ಕೆ ಕೆಲಸ (Work to Rule).

ಒಳಗುಳಿ (Stay-in-Strikes) ಮುಷ್ಕರಗಳೆಂದರೆ ಕಾರ್ಮಿಕರು ಕೆಲಸದ ಸ್ಥಳದಲ್ಲಿಯೇ ಕುಳಿತು ಕೆಲಸ ಮಾಡಲು ನಿರಾಕರಿಸುವದು. ಕುಳಿತಿರು ಮುಷ್ಕರ ಅಥವಾ ಬೈಠಕ್ ಮುಷ್ಕರ (Sit-down Strikes), ಲೇಖನಿ ಕೆಳಗೆ ಮುಷ್ಕರ (pen-down Strikes) ಉಪಕರಣ ಕೆಳಗೆ (tool-down Strikes) ಮುಷ್ಕರ—ಇವು ಒಳಗುಳಿ ಮುಷ್ಕರದ ಅಂತರ್ಭೇದಗಳು. ಬೇಡಿಕೆ ಈಡೇರುವ ವರೆಗೆ ಕೆಲಸದ ಸ್ಥಳದಿಂದ ಕದಲದೇ ಅಲ್ಲಿಯೇ ಭೂಮಿಯ ಮೇಲೆ ಕುಳಿತಿರುವ ಧರಣಿ ಮುಷ್ಕರವು ಕೂಡ ಇಂತಹವುಗಳಲ್ಲೊಂದು.

ಮಂದ ನಡೆ (go slow) ಮುಷ್ಕರದ ಇನ್ನೊಂದು ವಿಧಾನ. ಇಲ್ಲಿ ಕೆಲಸದ ನಿರಾಕರಣೆ ಅಥವಾ ನಿಲುಗಡೆ ಇಲ್ಲ. ಕೆಲಸವನ್ನು ಉದ್ದೇಶ ಪೂರ್ವಕವಾಗಿ ಮಂದಗತಿಯಿಂದ ಮಾಡಲಾಗುತ್ತದೆ. ಕೈಗಾರಿಕಾ ವಿವಾದದ ಕಾನೂನಿನ ವ್ಯಾಖ್ಯೆಯಂತೆ ಮಂದಗಡಿ ಮುಷ್ಕರವಲ್ಲ. ಸುಪ್ರೀಂ ಕೋರ್ಟಿನ ಅಭಿಪ್ರಾಯವೆಲ್ಲಿ ಇದು ಒಂದು ತೀವ್ರ ಅಯೋಗ್ಯ ವರ್ತನೆ. ಮಂದ ನಡೆಯಲ್ಲಿ ನಿತ್ಯವ ವೇಗದಲ್ಲಿ ಉತ್ಪಾದನೆ ನಡೆಯದೆ ಒಟ್ಟು ಉತ್ಪಾದನೆ ಕಡಿಮೆಯಾಗಿ ಉತ್ಪಾದಕನಿಗೆ ಹಾನಿಯುಂಟಾಗುತ್ತದೆ. ಅಲ್ಲದೇ ಉತ್ಪಾದನ ಯಂತ್ರಗಳು ತಮ್ಮ ಸಾಮರ್ಥ್ಯಕ್ಕನುಗುಣವಾಗಿ ಕೆಲಸ ಮಾಡುವುದಿಲ್ಲ.

ಮುಷ್ಕರಗಳಲ್ಲಿ ತಡೆಗಾವಲು (pic-keting) ಕೂಡ ಮುಖ್ಯವಾದದ್ದು. ತಡೆಗಾವಲುಗಳೆಂದರೆ ಕೆಲವು ಮುಷ್ಕರಗಾರರು ತಮ್ಮ ಉದ್ಯೋಗದ ಸ್ಥಳದ ಎದುರು ಕುಳಿತು ತಮ್ಮ ಸಹೋದ್ಯೋಗಿಗಳಿಗೆ ಕೆಲಸ ಮಾಡದಂತೆ ಬೋಧಿಸುವದು ಅಥವಾ ನಿಶಾನೆ ಪತಾಕೆಗಳನ್ನು ಹಿಡಿದು ಘೋಷಣೆಗಳನ್ನು ಕೂಗುತ್ತ ಕೆಲಸವಸ್ಥಳದ ಅವಾರದಲ್ಲಿ ತಿರುಗಾಡುವದು; ಬೇಡಿಕೆಗಳನ್ನು ದೊಡ್ಡದೊಡ್ಡ ಫಲಕಗಳಲ್ಲಿ ಬರೆದು ಸಾರ್ವಜನಿಕ ಲಕ್ಷ್ಯವನ್ನು ಸೆಳೆಯಲಾಗುತ್ತದೆ

ಸಾಮೂಹಿಕ ಉಳಿ(Mass Leave) ಮುಷ್ಕರದ ಇನ್ನೊಂದು ವಿಧಾನ. ತಮ್ಮ ಬೇಡಿಕೆ ಈಡೇರುವ ವರೆಗೆ ಕಾರ್ಮಿಕರೆಲ್ಲರೂ ರಜಾ ರ್ಜಿಯನ್ನು ಸಲ್ಲಿಸಿ ಕೆಲಸದಿಂದ ದೂರವಿರುತ್ತಾರೆ. ಆಡಳಿತ ವರ್ಗ ರಜೆಯನ್ನು ಮಂಜೂರು ಮಾಡಲಿ ಅಥವಾ ಬಿಡಲಿ ಅದಕ್ಕೆ ಅವರು ಕಾಯುವದಿಲ್ಲ. ಅವರ ಅಪ್ಪಣೆ ಪಡೆಯದೇ ಗೈರಹಾಜರಾಗುತ್ತಾರೆ.

ಇತ್ತೀಚೆಗೆ ಇನ್ನೊಂದು ವಿಧಾನ ಪ್ರಜ್ಞಾಪೂರ್ವಕವಾಗಿ ತೊಡಗಿದೆ. ಇದನ್ನು ನಾವು ಮುಷ್ಕರದ ಪ್ರಬೇಧವೆಂದು ಕರೆಯುವ ಹಾಗಿಲ್ಲವಾದರೂ ಇದು ಪ್ರತಿಭಟನೆಯ ಒಂದು ವಿಧವಾಗತೊಡಗಿದೆ. ಯಾವುದೊಂದು ವಿಚಾರ, ನಿರ್ಣಯ ಒಂದು ರಾಜಕೀಯ ಪಕ್ಷಕ್ಕೆ, ಕಾರ್ಮಿಕರಿಗೆ ಅಗ್ರಾಹ್ಯವಾಗಿದ್ದರೆ ಅಥವಾ ಇನ್ನಾವುದೂ ವಿಚಾರವಾಗಿ ಸರಕಾರದ ಹಾಗೂ ಆಡಳಿತವರ್ಗದ ಗಮನ ಸೆಳೆಯಬೇಕಾದಾಗ ಸಾರ್ವಜನಿಕರ ಅಥವಾ ಸಂಬಂಧಿಸಿದ ಕಾರ್ಮಿಕರ ಸಭೆ ಸಂಗ್ರಹಣೆಯನ್ನು ಮಾಡುವದು, ಇದನ್ನು ಸಾರ್ವಜನಿಕ ಅಭಿಪ್ರಾಯ ಸಂಗ್ರಹಣೆ ಎಂದು ಕರೆಯ ಬಹುದಾದರೂ ಆ ಗ್ರಾಹ್ಯ ವಿಷಯದ ಪ್ರತಿಭಟನಾರ್ಥವಾಗಿ ಇಂತಹ ಅಭಿಪ್ರಾಯ ಸಂಗ್ರಹಣೆ ನಡೆಯುವದರಿಂದ ಇದನ್ನೂ ನಾವು ಮುಷ್ಕರದ ನವೀನ ವಿಧಾನಗಳಲ್ಲಿ ಒಂದೆಂದು ಪರಿಗಣಿಸ ಬಹುದೇನೋ?

ಬಹಿಷ್ಕಾರ (Boy cott)ದಲ್ಲಿ ಸಮಾಜವನ್ನೂ ಜನರನ್ನೂ ತಪ್ಪಿತಸ್ಥ ಯಜಮಾನನೊಡನೇ ಯಾವ ಸಂಪರ್ಕವನ್ನೂ ಇಟ್ಟುಕೊಳ್ಳಬಾರದೆಂದು ಕೇಳಿಕೊಳ್ಳುವದು. ಅಥವಾ ಉತ್ಪಾದನೆಗೆ ಬೇಕಾದ ಕಚ್ಚಾ ಸಾಮಾಗ್ರಿ, ಇತರೆ ಅವಶ್ಯಕ ವಸ್ತುಗಳು ದೊರೆಯದಂತೆ ಘೋಷಣೆಯು ಅಥವಾ ಅವರ ವಸ್ತುಗಳಿಗೆ ಘೋರುಕಟ್ಟೆಯಲ್ಲಿ ಬಹಿಷ್ಕಾರ ಹಾಕುವದು.

ಕೊನೆಯ ತರಹದ ಮುಷ್ಕರವೊಂದನು ಳೆದು ಉಳಿದೆಲ್ಲ ತರಹದ ಮುಷ್ಕರಗಳೂ ಭಾರತದಲ್ಲಿ ನಿತ್ಯದ ಮಾತಾಗಿದೆ. ಇವುಗಳಲ್ಲದೇ ಹೊಸ ಹೊಸ ವಿಧಾನಗಳೂ ಪ್ರಾರಂಭವಾಗುತ್ತಲಿವೆ. ನಮಗೆಲ್ಲರಿಗೂ ತಿಳಿದಿರುವಂತೆ ನಮ್ಮ ದೇಶದಲ್ಲಿ ವಿದ್ಯಾರ್ಥಿಗಳು, ಅಧ್ಯಾಪಕರು, ಸರಕಾರದ ವಿವಿಧ ದರ್ಜೆಯ ನೌಕರರು, ಅಂಚೆ-ತಂತಿ, ಆಸ್ಪತ್ರೆ, ಸಾಗಾಣಿಕೆ ಮುಂತಾದ ಅಗತ್ಯ ಸೇವೆಯಲ್ಲಿರುವವರು ಬ್ಯಾಂಕ್ ನೌಕರರು, ಎಲ್ಲ ತರಹದ ಕಾರ್ಮಿಕರು, ಪೋಲೀಸರು, ರೈತರು ಇತ್ಯಾದಿ ಎಲ್ಲರೂ ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ತರಹದ ಮುಷ್ಕರಗಳನ್ನು ನಡೆಯಿಸಿದ್ದಾರೆ. ಆಡಳಿತ ವರ್ಗದವರೂ ಕೂಡ ಸರಕಾರದ ನೀತಿಯ ವಿರುದ್ಧ ಮುಷ್ಕರ ಮಾಡಿದ್ದುಂಟು. ಕಾರ್ಮಿಕ ಸಂಘಗಳ ಬೆಳವಣಿಗೆಯೊದಂತೆಲ್ಲ ಮು

(ಒಂಭತ್ತನೇ ಪುಟ ನೋಡಿರಿ)

ಸಂಪರ್ಕಿಸಿರಿ — ಸಂತೃಪ್ತರಾಗಿರಿ!!
ಬ್ಲೂಜಾಗರಾ ವಜ್ರಗಳಿಗೆ ಅಧುನಿಕ ಫೇಶನ ಚಿನ್ನಾಭರಣಗಳಿಗೆ ಹೆಸರಾಂತ
ಎಸ್. ಎಲ್. ಶೇಟ್ಸ್ ಡೈಮಂಡ್ ಹೌಸ್
ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ನುತ್ತು ಉಡುಗೊರೆ ವಸ್ತುಗಳಿಗೂ
ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್
=ಎಲ್ಲಾ ತರಹ ಫೊಟೋಗ್ರಫಿಕ್ ವಸ್ತುಗಳಿಗೆ=
ಏಡಿಯಲ್ ಫೊಟೋ ಹೌಸ್ PHONE: 3131
ಅಗ್ಫಾ ಕೊಡಕ್, ಇಲ್‌ಫೋರ್ಡ್ ಸೆವರ್ಟ್ ಮತ್ತು ಹಿಂದು ಫಿಲ್ಮುಗಳ
ಅಧಿಕೃತ ಮಾರಾಟಗಾರರು.
ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1
Tele: GOLDKING Estd: 1947 Phone: 3242 Res: 3272

ಕವಲುದಾರಿ ಕೆಂಪುದೀಪ–

ಶ್ರೀ ಕೆಂಗೆಲ್ಲರ ಬೆಂಗಳೂರ್ವಾಸ

ಶ್ರೀ ಕೆಂಗೆಲ್ ಹನುಮಂತಯ್ಯ ಅವರಿಗೆ ಕೊನೆಗೂ ಪ್ರಧಾನಿ ಗಾಂಧಿಯವರು ಅರ್ಧಚಂದ್ರ ಪ್ರಯೋಗ ಮಾಡಿಯೇ ಬಿಟ್ಟರು.

ಸಚಿವ ಸಂಪುಟದ ತ್ಯಾಗಯಜ್ಞಶಾಲೆಯಲ್ಲಿ ಕುಳಿತಿದ್ದ ಅವರ ಕುಂಭಸ್ಥಳಕ್ಕೆ ನಿಶ್ಚಲವಾಯ್ತು.

ಸದ್ಯ ಶ್ರೀ ಕೆಂಗೆಲ್ ಒಬ್ಬರಿಂದಷ್ಟೇ ರಾಜನಾಮೆ ಪ್ರಧಾನಿ ಬೇಡದೆ. ಶ್ರೀಹಕ್ ಚೌಧರಿಯಿಂದಲೂ ಬೇಡಿ ಹಿಡಿಸಿಕೊಂಡಿದ್ದು ಪ್ರಧಾನ. ಇಲ್ಲವಾದರೆ ಶ್ರೀ ಕೆಂಗೆಲ್ ಏಕಮೇವಾದ್ವಿತೀಯರಾಗಿ ಹೋಗುತಿದ್ದರು.

ಆದರೂ ಏಕಮೇವಾದ್ವಿತೀಯರಾಗುವ ಯೋಗ ಶ್ರೀ ಕೆಂಗೆಲ್ಲರಿಗೆ ಬಹು ನುಟ್ಟಿಗೆ ಇದೆ. ಅವರ ಗ್ರಹಬಲ ಹೇಗಿದೆಯೋ?

ಶ್ರೀ ಹಕ್ ಚೌಧರಿಗೆ ರಾಜ್ಯಪಾಲ ಪದವಿಯೋ ರಾಯಭಾರಿ ಹುದ್ದೆಯೋ ದೊರೆಯಲಿದೆಯೆಂದು ವದಂತಿ. ಹಾಗು ನಿಜವಾದರೆ ಶ್ರೀ ಕೆಂಗೆಲ್ ಏಕಮೇವಾದ್ವಿತೀಯರೇ ಸರಿ.

ಶ್ರೀ ಕೆಂಗೆಲ್ಲರು ಅಂತಹ ನಿಷ್ಕ್ರಿಯ ಹುದ್ದೆಗಳಿಗೆ ಮರುಳಾಗುವವರಲ್ಲ. ಒಂದೊಮ್ಮೆ ಅವರು ಅಜ್ಞಾತವಾಸಕ್ಕೆ ಹೋಗಲು ಸಿದ್ಧರಾಗಿರುತಿದ್ದರೆ, ಅದ್ದೂರಿಯಿಂದ ಬೀಳ್ಕೊಡಲು ಶ್ರೀಮತಿ ಗಾಂಧಿ ಅದೆಂದೋ ತುದಿಗಾಲಲ್ಲಿ ನಿಂತಿದ್ದರು.

ಅಂದರೆ ಶ್ರೀ ಕೆಂಗೆಲ್ಲರನ್ನು ಡಿಲ್ಲಿಯಿಂದ ಮತ್ತೆ ಬೆಂಗಳೂರಿನ ರೇಲು ಹತ್ತಿಸಿದ್ದು ಆಪರ ತಪ್ಪಲ್ಲ.

ಪ್ರಧಾನಿ ಗಾಂಧಿಯವರು ಶ್ರೀ ಕೆಂಗೆಲ್ಲರನ್ನು ವಿದೇಶೀ ರಾಜಧಾನಿಗಳಿಗೆ ವಿಮಾನನೇರಿಸಲು, ವಿರಾಜ್ಯ ರಾಜಧಾನಿಗಳ ಕೇಲು ಹತ್ತಿಸಲು ಎಂದೋ ಸಿದ್ಧರಿದ್ದರು.

ಆದರೆ, ತಾನಿರುವುದು ಒಂದೋ ಡಿಲ್ಲಿಯಲ್ಲಿ, ಇಲ್ಲ ಬೆಂಗಳೂರಿನಲ್ಲಿ ಎಂಬ ತಮ್ಮ ಖಡಾಖಂಡಿತನಕ್ಕೆ ಅಂಟಿ ಕೂತಿದ್ದರಿಂದ ಬೆಂಗಳೂರಿಗೇ ಅವರನ್ನು ನಿರಾಡಂಬರವಾಗಿ ಕಳಿಸಿಕೊಟ್ಟರು.

ಇಲ್ಲಿ ಪ್ರಧಾನಿ ಗಾಂಧಿಯದ್ದೇನೂ ತಪ್ಪಿಲ್ಲ. ಶ್ರೀ ಕೆಂಗಲ್ ನಿರಪರಾಧಿ.

ಅವರ ಸ್ಥಾನಕ್ಕೆ ಶ್ರೀ ಪೈಯವರನ್ನು ಶ್ರೀಮತಿ ಗಾಂಧಿ ಆರಿಸಿದ್ದರು.

ಶ್ರೀ ಕೆಂಗೆಲ್ಲರು ಬೆಂಗಳೂರಿನವರಾದರೆ ಶ್ರೀ ಪೈಯವರು ಮಂಗಳೂರಿನವರು. ಅವರು ತಂಪು ಹವೆ ತಿಂದವರಾದರೆ ಇವರು ಉಪ್ಪು ಹವೆ ಮೆದ್ದವರು. ಅವರು ರಾಜಕೀಯದಲ್ಲಿ ಆಯುಷ್ಯ ಸವೆಸಿದರೆ, ಇವರು ಎಲ್ಲೆಡೆಯೂ ಅನುಭವ ಪಡೆದವರು.

ಇದೊಂದು ಭೇದ ಬಿಟ್ಟು ಇನ್ನೊಂದು ಅಂತರವೆಂದರೆ ಅವರು ಅರುವತ್ತು ನಿರಿದವರು, ಇವರು ಐವತ್ತಕ್ಕೆ ಬಂದವರು.

ವಿಧಾನಸೌಧವಾಗಲಿ ಸಂಸತ್ ಭವನವಾಗಲಿ ಯಾವುಗೂ ಸ್ಥಿರವಲ್ಲ.

ಶ್ರೀ ಕೆಂಗಲ್ಲರಿಗೆ ಇದರಿಂದ ಕುಗ್ಗೂ ಇಲ್ಲ, ಹೆಗ್ಗೂ ಇಲ್ಲ. ಆದರೆ, ಅವರ ಅನುಯಾಯಿಗಳಿಗೆ ತಾತ್ಕಾಲಿಕ ಕುಗ್ಗು; ವಿರೋಧಿಗಳಿಗೆ ತಾತ್ಕಾಲಿಕ ಹಿಗ್ಗು

ಮನುಷ್ಯಸಾಧವ ಮುಖ್ಯವಾಗಿ ರಾಜ್ಯಕಾರಣಿ— ಅಜಾತಶತ್ರುವಾಗಲಾರನೆಂಬುದರಿಂದ ಶ್ರೀ ಕೆಂಗಲ್ಲರಿಗೂ ಆಗಡವರು ಇದ್ದಾರೆಂಬುದನ್ನು ಒಪ್ಪಿಕೊಳ್ಳಬೇಕು.

ಈ ಹಿಗ್ಗು—ಕುಗ್ಗುಗಳು ಕೇವಲ ತಾತ್ಕಾಲಿಕ. ಧರ್ಮರಾಯು ತಾತ್ಕಾಲಿಕವಾಗಿ ನರಕ ಕಂಡಂತೆ, ದುರ್ಯೋಧನ ಸ್ವರ್ಗ ಕಂಡಂತೆ.

ಶ್ರೀ ಕೆಂಗೆಲ್ ಸುಮ್ಮನಿರ ಬಹುದು, ಜನ ಸಂಪರ್ಕ ಹೊಂದಿ ಜನಸೇವೆಯಲ್ಲಿ ಶೇಷಾಯುಷ್ಯ ವ್ಯತೀತಗೊಳಿಸ ಬಹುದು. ದೇವರು ಅದಕ್ಕೆ ಬೇಕಾದ ಶಕ್ತಿಯನ್ನೂ ಬುದ್ಧಿಯನ್ನೂ ಅವರಿಗೆ ಕೊಟ್ಟಿದ್ದಾನೆ.

ರಾಜ್ಯಕಾರಣಿಯೆಂದಾದ ಮೇಲೆ ಅನುಯಾಯಿಗಳಿರಲೇ ಬೇಕು ತಾನೆ? ಅನುಯಾಯಿಗಳು ಇಲ್ಲದೆ ಹೋದರೆ ಅವನು ರಾಜ್ಯಕಾರಣಿ ಎಂತಾದಾನು?

ಈ ಅನುಯಾಯಿಗಳು ಶ್ರೀ ಕೆಂಗಲ್ಲರನ್ನು ಸುಮ್ಮನೆ ಸೇವಾನಿರತರಾಗಿರಲು ಬಿಟ್ಟಾರೆ? ಹಾಗೆ ಬಿಟ್ಟುಹೋದರೆ, ಶ್ರೀ ಕೆಂಗಲ್ಲರಿಗೆ ರಾಜ್ಯಕೀಯನೇ ಮರೆತುಹೋದೀತು.

ಆದುದರಿಂದಲೇ ಶ್ರೀ ಕೆಂಗಲ್ಲರ ಬೆಂಗಳೂರು ವಾಸ ಶ್ರೀ ದೇವರಾಜ ಅರಸರಿಗೊಂದು ಕುತ್ತ.

ಆದರೆ ಸದ್ಯ ಶ್ರೀ ಅರಸು ಇಳಿಯಲಾರದಷ್ಟು ಮೇಲೇರಿ ಉರುಳಲಾರದಷ್ಟು ಭದ್ರವಾಗಿಕೂತಿದ್ದಾರೆ.ಆದುದರಿಂದ ಅವರ ಮೇಲೆ ಯಾರದ್ದೂ ಏನೂ ನಡೆಯದು.

ಗ್ರಹಗತಿ ವಕ್ರಿಸಿದಾಗ ಶ್ರೀ ಅರಸು ಪತನಕ್ಕೆ ಶ್ರೀ ಕೆಂಗೆಲ್ಲರೇ ಬೇಕೆಂದಿಲ್ಲ; ಯಾರಾದರೂ ಉರುಳಿಸಿಯಾರು.

ಆದುದರಿಂದ ಶ್ರೀ ಕೆಂಗೆಲ್ಲರ ಬೆಂಗಳೂರು ನಿವಾಸಕ್ಕೆ ಯಾರೂ ಸೊಪ್ಪು ಹಾಕಬೇಕಾಗಿಲ್ಲ. ಎಷ್ಟಾದರೂ ಹಳೆಯ ಹುಲಿ.

ಅದಾಗಿ ವಿಶ್ರಾಂತಿ ಪಡೆಯದಿದ್ದರೆ, ಬಲಾತ್ಕಾರವಾಗಿ ವಿಶ್ರಾಂತಿಪಡಿಸುತ್ತಾರೆ. ಇಂದಿರಾ ರಾಜ್ಯ ನಡೆದು ಬಂದ ದಾರಿಯಿದೆ. ●

ನೋಟೀಸು

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

R. E. P. 733/68
O. S. 255/64

S. ಮಹಾಬಲ ಶೆಟ್ಟಿ
—ಟ್ರಾನ್ಸ್‌ಫರ್ ಅರ್ಜಿದಾರ

ಪುಟ್ಟಮ್ಮ ಸಕ್ರಿ (ಪೋತಿ)ಕೂಡಾ —ಎದ್ರಿರು

2ನೇ ಎದ್ರಿ ಸಂಜೀವ ಶೆಟ್ಟಿ, ಚಿಕ್ಕಮ್ಮ ಶೆಟ್ತಿರ ಮಗ.

4ನೇ ಎದ್ರಿ ಚಂದಮ್ಮ ಶೆಟ್ತಿ, 6ನೇ ಎದ್ರಿ ಅಚ್ಚಮ್ಮ ಶೆಟ್ತಿ, –ಪುಟ್ಟಮ್ಮ ಸೆಟ್ತಿರ ಮಕ್ಕಳು,

2ನುತ್ತು 6ನೇ ಎದ್ರಿರು ಕುಂದಾಪುರ ತಾಲೂಕು ಕೆದೂರು ಗ್ರಾಮದ ಸಂಕದ ಬಾಡದಲ್ಲಿರುವನರು. 4ನೇ ಎದ್ರಿ ಸಕ್ರಿ ಗ್ರಾಮದ ಬೆಳಗೋಡಲ್ಲಿರುವನ.

ಮೇಲಿನ ಎದ್ರಿರಿಗೆ ಈ ಮೂಲಕ ತಿಳಿಸುವುದೇನೆಂದ್ರೆ,

ಟ್ರಾನ್ಸ್‌ಫರ್ ಅರ್ಜಿದಾರನು ಎದ್ರಿರ ಮೇಲೆ ನಡೆಸಿದ ಮೇಲಿನ ಅನ್ಸುಚಾರಿಯಲ್ಲಿ ಜಪ್ತು ಮಾಡಿದ ಸ್ಥಿರಾಸ್ತಿಯ ನಿಲಂ ಶರ್ತ ನಿರ್ಣಯದ ಬಗ್ಗೆ ತಾ. 24.8.72ಕ್ಕೆ ಇದೆ ಆ ಕುರಿತು ಆಕ್ಷೇಪ ವಿದ್ದಲ್ಲಿ ಸಕ್ರಿ ದಿನ ಹಗಲು 11ಗಂಟೆಗೆ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ಏಕಪಕ್ಷೀಯವಾಗಿ ತೀರ್ಮಾನಿಸಲಾದೀತು.

(ಕೋರ್ಟು ಹುಕುಂ ಪ್ರಕಾರ)

G. Kushala Hegde
ಅರ್ಜಿದಾರನ ಕಡೆ ಎಡ್ವೋಕೇಟ್

ಕುಂದಾಪುರ, ತಾರೀಕು, 25.7.72

ನಿಮಗೆ ಬೇಕಾಗುವ
ಸುಲಕ್ಷಣವಾದ, ನೀಲಿಪ್ರಕಾಶದ, ಕಲೆಗಳಿಲ್ಲದ,

ಉತ್ತಮ ವಜ್ರಗಳು

ಕೊಲಿಟಿಯಲ್ಲಿ, ಸ್ಯಾಜಿನಲ್ಲಿ, ಕ್ರಯದಲ್ಲಿ ಸರಿಹೋಲಿಸಿ
ಈಗಿನ ನ್ಯಾಯ ಬೆಲೆಗೆ ಧರ್ಮಕಾಂತಾ ಕೆರೆಟು ತೂಕವಲ್ಲಿ
ಮುಂದಾಗಿ ಹಿಮ್ಮಂದ ಪಡೆಯಬಹುದು.

ವಾಸುದೇವ ಪೈಸ್ ಜುವೆಲ್ಲರೀಸ್
ರಥಬೀದಿ—ಉಡುಪಿ, ದ. ಕ.

ಸುಸಂಪನ್ನ ಆದರ್ಶ ಪರಿವಾರ

(ಐದನೇ ಪುಟದಿಂದ)

ಇದಕ್ಕಿಂತ ತುಸು ಉತ್ತಮವಿರಬಹುದು ಆಷ್ಟೆ. ಆದರೆ ಅವುಗಳದ್ದು ಕಣ್ಣೀರ ಕತೆ.

ಮೂದರಿ ಶಾಲೆಗಳು ಮಾದರಿ ತೋರಿಕೆ ಬಹುದು; ಅವು ಮೂದರಿಯಾಗಿಯೇ ನಡೆದು ಬರಬಹುದು. ಅವುಗಳಿಂದ ಇತರ ಶಾಲೆಗಳೂ ತಮಗೆ ತಿಳಿಯದ ಕೆಲವು ವಿಷಯಗಳನ್ನಾದರೂ ತಿಳಿದುಕೊಳ್ಳಬಹುದು; ಆದರೆ, ತಮ್ಮ ತಿಳುವಳಿಕೆಯನ್ನು ಕಾರ್ಯರೂಪಕ್ಕೆಳಿಸಲು ಅವು ಸಂಪನ್ಮೂಲಗಳನ್ನು ಎಲ್ಲಿಂದ ತರಬೇಕು? ಕೇಂದ್ರ ಸರಕಾರದ ಬೊಕ್ಕಸ ದೊಡ್ಡದು; ರಾಜ್ಯ ಸರಕಾರಕ್ಕೂ ಬೊಕ್ಕಸವಿದೆ. ಜನ ತೆರಿಗೆ ತೆತ್ತು ಅದನ್ನು ತುಂಬಿಸುತ್ತಿದೆ. ಖಾಸಗಿ ಸಂಸ್ಥೆಯವರು ಏನು ಮಾಡಬೇಕು?

ರಾಜ್ಯದ ಶಿಕ್ಷಣ ಶಾಖೆ ದಕ್ಷ ರೀತಿಯಲ್ಲಿ ಕೆಲಸ ಮಾಡಿದರೆ, ಆದರ ಅಂಕೆಯಲ್ಲಿನ ಶಾಲೆಗಳಲ್ಲಿ ಸಾಕಷ್ಟು ಸುಧಾರಣೆ ತರುವುದು ಸಾಧ್ಯ. ಹಣದಿಂದಲೇ ದಕ್ಷತೆ ತರುವುದು ಸಾಧ್ಯವಿಲ್ಲವೆಂಬುದನ್ನು ಒಪ್ಪ ಬೇಕಾದರೂ ದಕ್ಷತೆ ನಿರ್ಣಯಿಸುವಾಗ ಆದುವೇ ಮಹತ್ವದ ಪಾತ್ರ ವಹಿಸುತ್ತದೆಂಬುದನ್ನು ಮರೆಯುವುದೆಂತು? ಮೂದರಿ ಶಾಲೆಗಳಿಗೆ ನೆಚ್ಚಮಾಡುವ ಲಕ್ಷಾಂತರ ರೂಪಾಯಿಗಳನ್ನು ಇರುವ ಶಾಲೆಗಳಿಗೇನೇ ನೀಡಿದರೆ ಹೇಗೆ? ●

ಸಾಕ್ಷರತಾ ಪ್ರಮಾಣದಲ್ಲಿ ಏರಿಕೆ

ಕಳೆದ ದಶಕದಲ್ಲಿ ಓದುಬರಹ ಬಲ್ಲವರ ಸಂಖ್ಯೆ ನೂರಕ್ಕೆ 24.03ರಿಂದ 29.34ಕ್ಕೆ ಏರಿದೆ.

ನೂರಕ್ಕೆ 60ರಷ್ಟು ಮಂದಿ ಸುಶಿಕ್ಷಿತರಿರುವ ಕೇರಳ ರಾಜ್ಯಕ್ಕೆ ಸಾಕ್ಷರತೆಯ ದೃಷ್ಟಿಯಿಂದ ದೇಶದಲ್ಲಿ ಪ್ರಥಮ ಸ್ಥಾನ ದೊರೆತಿದೆ. ನಂತರದ ಸ್ಥಾನ ತಮಿಳುನಾಡಿಗೆ.

ಕೇಂದ್ರಾಡಳಿತ ಪ್ರದೇಶಗಳ ಪೈಕಿ ಚಂಡೀಗಢದಲ್ಲಿ ಅತಿಹೆಚ್ಚು ಮಂದಿ ಸಾಕ್ಷರಿಗಳಿದ್ದಾರೆ. ದೆಹಲಿ, ಗೋವಾ, ದಮನ್ ಮತ್ತು ದಿಯು ಈ ವಿಷಯದಲ್ಲಿ ಎರಡನೆಯ ಸ್ಥಾನಪಡೆದಿವೆ.

ಮಹಿಳೆಯರಲ್ಲಿ ಸಾಕ್ಷರತಾ ಪ್ರಮಾಣ ಹೆಚ್ಚಿದೆ. 1961ರಲ್ಲಿ ನೂರಕ್ಕೆ 12.95ರಷ್ಟು ಮಹಿಳೆಯರು ಸಾಕ್ಷರಿಗಳಾಗಿದ್ದರು. 1971ರಲ್ಲಿ ಈ ಪ್ರಮಾಣ ನೂರಕ್ಕೆ 18.44 ರಷ್ಟಿತ್ತು. ಸಾಕ್ಷರಿಗಳಾದ ಪುರುಷರ ಶೇಕಡಾವಾರು ಪ್ರಮಾಣವು ಈ ಅವಧಿಯಲ್ಲಿ 34.45ರಿಂದ 39.51ಕ್ಕೆ ಏರಿದೆ. ●

ಮುಷ್ಕರಗಳು

(ಏಳನೇ ಪುಟದಿಂದ)

ಷ್ಕರಗಳ ಸಂಖ್ಯೆ ಹೆಚ್ಚುತ್ತಲಿವೆ.

ಶೋಚನೀಯ ವಿಷಯವೆಂದರೆ ಇಂತಹ ಮುಷ್ಕರಗಳಲ್ಲಿ ಹಿಂಸಾಚಾರ, ದೊಂಬಿ ಸಾರ್ವಜನಿಕ ಆಸ್ತಿ ಪಾಸ್ತಿಗಳ ಲೂಟಿ, ಪೋಲೀಸ್ ಠಾಗೂ ಸೈನ್ಯದ ನೆರವು, ಜನತೆ ಪೋಲೀಸ್ ದೌರ್ಜನ್ಯದ ಬಗ್ಗೆ ಆರೋಪ ಹೊರಿಸಿ ನ್ಯಾಯಾಂಗ ವಿಚಾರಣೆಗೆ ಸರಕಾರವನ್ನು ಒತ್ತಾಯಿಸುವುದು ಸಾಮಾನ್ಯವಾಗಿದೆ. ಶಾಂತಿಯುತ ಮುಷ್ಕರಗಳು ಅಪ್ರಯೋಜಕಗಳು, ಫಲಕಾರಿಯಲ್ಲ. ಹಿಂಸಾಚಾರದಿಂದಲೇ ಆಡಳಿತವರ್ಗದವರ ಅಥವಾ ಸರಕಾರದ ಗಮನ ಸೆಳೆಯಲು ಸಾಧ್ಯ ಎನ್ನುವ ಭಾವನೆ ಬಲವಾಗತೊಡಗಿದಂತೆ ತೋರುತ್ತದೆ. ನಮ್ಮ ಸರಕಾರಗಳೂ ಕೂಡ ಹಿಂಸಾಚಾರಗಳು ನಡೆದಾಗಲೇ ಎಚ್ಚೆತ್ತು ತಮ್ಮ ಗಮನವನ್ನು ಅತ್ತ ಹರಿಸುತ್ತವೆ. ಗಮನಿಸಬೇಕಾದ ಅಂಶವೆಂದರೆ ನಮ್ಮ ದೇಶದ ಮುಷ್ಕರಗಳಲ್ಲಿ ಸಾಮಾನ್ಯವಾಗಿ ರಾಜಕೀಯ ಪಕ್ಷಗಳ, ರಾಜಕೀಯ ವ್ಯಕ್ತಿಗಳ ಕೈವಾಡವಿರುತ್ತದೆ. ಸ್ವಾರ್ಥಸಾಧಕ, ಲೋಭಿ ರಾಜಕಾರಣಿಗಳು ಹಲವು ವೇಳೆ ಕಾರ್ಮಿಕರನ್ನು ವಿದ್ಯಾರ್ಥಿಗಳನ್ನು ತಮ್ಮ ಕೆಲಸಕ್ಕಾಗಿ ಉಪಯೋಗಿಸುತ್ತಾರೆ. ಸ್ಥಾಪಿತ ಕಾರಣಗಳಿಗಾಗಿ ಅನೇಕ ದಿನಗಳವರೆಗೆ ಮುಷ್ಕರ ನಡೆಯುವದುಂಟು. ಮುಷ್ಕರ ಮಾಡುವವರು ದೇಶದ ಹಿತ, ಆರ್ಥ ವ್ಯವಸ್ಥೆಯ ಬಗ್ಗೆ ಹೆಚ್ಚು ಗಮನ ಕೊಡದೇ ಸಂಘಶಕ್ತಿಯ ದುರುಪಯೋಗ ಮಾಡಿಕೊಳ್ಳುತ್ತಿರುವಂತೆ ಅನೇಕ ವೇಳೆ ಭಾಸವಾಗುತ್ತದೆ. ಇಲ್ಲದೇ ನಮ್ಮಲ್ಲಿ ರಾಷ್ಟ್ರೀಯ ಪ್ರಜ್ಞೆಯ ಅಭಾವವಿದೆಯೇ ಎಂಬ ಸಂಶಯ ಮೂಡುತ್ತದೆ.

ಮುಷ್ಕರಗಳು ನಡೆಯುವಾಗ ನಾವು ಗಮನಿಸಿಲ್ಲ ಅಪೇಕ್ಷಣಾದ ಇನ್ನೊಂದು ಅಂಶವೆಂದರೆ ಸರಕಾರ ಅಥವಾ ಸಂಬಂಧಿಸಿದ ಕೈಗಾರಿಕೋದ್ಯಮಿಗಳು ಆಗ ಮಧ್ಯಪ್ರವೇಶ ನಿರ್ಣಯ ಕೈಕೊಳ್ಳಲು ಅಸಮರ್ಥರಾಗಿ ಕಾರ್ಮಿಕರ ಬೇಡಿಕೆಯ ನೆಚ್ಚಿದ ಜೀವಿಗೆ ಉತ್ಪಾದನೆಯಲ್ಲಿ ಮೋತಾಗಲನ್ನು ಅನುಭವಿಸುತ್ತಿರುತ್ತಾರೆ. ತೀಕ್ಷ್ಣ ನಿರ್ಣಯಗಳಿಂದ ಇವುಗಳಲ್ಲಿ ಒಂದನ್ನು ತಪ್ಪಿಸಲು ಅಥವಾ ಕಡಿಮೆ ಮಾಡಲು ಸಾಧ್ಯ ಸಣ್ಣಾಗ್ಯೂ ಆ ದಿಶೆಯಲ್ಲಿ ಸಾಕಷ್ಟು ಪ್ರಯತ್ನ ತತ್ಕ್ಷಣ ನಡೆಯುವುದಿಲ್ಲ.

ಇತ್ತೀಚಿನ ಮುಷ್ಕರಗಳಲ್ಲಿ ಇನ್ನೊಂದು ಅಂಶವನ್ನು ನಾವು ಗಮನಿಸಬಹುದು. ಕಾರ್ಮಿಕರು ತಮ್ಮ ಬೇಡಿಕೆಗಳಿಂದ ಒಂದಿನಿತೂ ಹಿಂದೆ ಸರಿಯಲಾರದಿಲ್ಲ ಸರಕಾರ ಅಥವಾ ಆಡಳಿತ ವರ್ಗ ಅವರಿಗೆ ಮಣಿಯಲೇಬೇಕು. ಅಷ್ಟೂ ಅವರು ಬೇಡಿದ್ದನ್ನೆಲ್ಲ ಒಪ್ಪಿಕೊಳ್ಳಲೇಬೇಕು. ಕಾರ್ಮಿಕರು ಉಚಿತಾರ್ಥ, ಪ್ರಾವಿಡೆಂಟ್ ಫಂಡ್,ಅಥವಾ ಸಂಬಳ ಸಾರಿಗೆಗಳ ಬಗ್ಗೆ ಮುಷ್ಕರ ಹೂಡುವದು ಸಾಮಾನ್ಯವಾದರೂ ತಮ್ಮ ದಕ್ಷತೆಯ ಹೆಚ್ಚಳದ ಬಗ್ಗೆ ಪ್ರಯತ್ನಿಸುವದಿಲ್ಲ. ಕಾರ್ಮಿಕರು ತಮ್ಮ ಹಕ್ಕಿನ ಅರಿವು ಮಾಡಿಕೊಂಡಿದ್ದಾರೆಯೇ ಹೊರತು ಅವರ ಕರ್ತವ್ಯದ ಅರಿವು ಕಡಿಮೆ. ಒಟ್ಟಿನಲ್ಲಿ ಹೇಳಬೇಕಾದರೆ ಮುಷ್ಕರಗಳು ಕಾರ್ಮಿಕ ಚಳುವಳಿಯ ಒಂದು ಪ್ರಮುಖ ಅಸ್ತ್ರವಾದರೂ ಅದರ ಉಪಯೋಗ ನಮ್ಮ ದೇಶದಲ್ಲಿ ತಪ್ಪಾಗಿ ನಡೆಯುತ್ತಿದೆ.

—ಶ್ರೀ ಆರ್. ವಿ. ಹೆಗಡೆ, ಎಂ.ಎ.

●●

ಗೇಹರಾಜ್ಯದಲ್ಲಿ....

(ನಾಲ್ಕನೇ ಪುಟದಿಂದ)

'ಆದರೆ, ಈಗ ಆ ನಿಯಮವನ್ನು ತೆಗೆದುಹಾಕಿದ್ದಾರೆ. ಅಂದರೆ ಸ್ತ್ರೀ—ಪುರುಷರ ನಡುವಣ ಸೇವಾನಿಯಮಗಳಲ್ಲಿ ಸಮಾನತೆ ತಂದಿದ್ದಾರೆ.'

'ಹ್ಞೂಂ.....ನೋಪ್ಪ....'

'ಏನು?'

'ಮತ್ತೇನಿಲ್ಲ. ಹೆಂಡತಿ.ಗಂಡಿರು ಹೊರಗಡೆ ಸಂಪಾದನೆ ಮಾಡತೊಡಗಿದರೆ, ಅವರ ಮಕ್ಕಳು ಆಯಾಗಳ ಮೇಲ್ವಿಚಾರಣೆಯಲ್ಲಿ ಬೆಳೆದರೆ, ಅವುಗಳ ಮೇಲೆ ಆಯಾಳ ಪ್ರಭಾವನೇ ಹೆಚ್ಚು ಬೀಳಬಹುದಲ್ಲವೆ?'

'ಅದಕ್ಕೇ ನೋಡು, ಸುಧಾರಿತ ದೇಶಗಳಲ್ಲಿ ನರ್ಸರಿ ಶಾಲೆಗಳು....'

'ಅಂಪರೆ, ತಾಯ್ತಂದೆಗಳ ಪ್ರೀತಿನಾಟ ಆಲ್ಲಿಯೂ ದೊರೆಯುವುದಿಲ್ಲ...'

'ಹ್ಞೂಂ.... ಮಗುವನ್ನು ಹಡೆಯುವವ್ಯರ ಮಟ್ಟಿಗೆ ತಾಯ್ತಂದೆಗಳ ಪ್ರಭಾವವಿದೆ ತಾನೆ?'

'ಅದೂ ಕೆಲವೆಡೆಯಿಲ್ಲವಂತೆ....'

'ಯಾರಿಗೆ ಯಾರಿಂದ ಮಗು ಹುಟ್ಟುತ್ತೋ ಅವರೇ ಅದರ ತಾಯ್ತಂದೆಗಳು....'

'ಹೆಣ್ಣಾಂ....'

'ಏನು?'

'ಏನೂ ಇಲ್ಲ ಬಿಡಿ.'

'ಬಿಡೋದು ಯಾಕೆ?'

'ಹಾಗಾದ್ರೆ ಹಿಡಿದುಕೊಳ್ಳಿ....'

'ಏನನ್ನು?'

'ಏನು ಬೇಕೋ ಅದನ್ನು....'

—ಗೋರಾ.

●●

ಸ್ವಾತಂತ್ರ್ಯ ಹೋರಾಟಗಾರರ ವಿವರ ಸಂಗ್ರಹಣೆ

ಭಾರತ ಸ್ವಾತಂತ್ರ್ಯದ ಬೆಳ್ಳಿ ಹಬ್ಬವನ್ನು ಈ ಆಗಷ್ಟ್ ೧೫ರಿಂದ ಮೊದಲ್ಗೊಂಡು ಒಂದು ವರ್ಷ ಕಾಲ ದೇಶಾದ್ಯಂತ ಆಚರಿಸಲಾಗುವುದು.

ಈ ಸಂದರ್ಭದಲ್ಲಿ, ವಿಶಾಲ ಕರ್ನಾಟಕದ ಸ್ವಾತಂತ್ರ್ಯ ಹೋರಾಟಗಾರರ ಪರಿಚಯವನ್ನೊಳಗೊಂಡ ಪುಸ್ತಕವನ್ನು ಪ್ರಕಟಿಸಲು ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ನಿರ್ಧರಿಸಿದೆ.

ದೇಶದ ಸ್ವಾತಂತ್ರ್ಯಕ್ಕಾಗಿ ಸರ್ವತ್ಯಾಗವನ್ನು ಮಾಡಿ, ಕಷ್ಟಕೋಟಲೆಗಳನ್ನು ಸಹಿಸಿದ ಸ್ವಾತಂತ್ರ್ಯ ಹೋರಾಟಗಾರರ ಜೀವನ ಪರಿಚಯವು ನಮ್ಮ ಇಂದಿನ ಯುವಜನಾಂಗಕ್ಕೆ ಸ್ಫೂರ್ತಿದಾಯಕವಾದೀತು. ಕರ್ತವ್ಯದ ಹಾದಿ ತೋರಲು ನೆರವಾದೀತು.

ಆದುದರಿಂದ, ಭಾರತ ಸ್ವಾತಂತ್ರ್ಯ ಸಮರಗಳಲ್ಲಿ ಭಾಗವಹಿಸಿದ ರಾಜ್ಯದ ಎಲ್ಲರೂ ತಮ್ಮ ಪರಿಚಯ, ಸತ್ಕಾರ್ಯಹದ ಸಂದರ್ಭ, ಶಿಕ್ಷೆ ಇತ್ಯಾದಿಗಳ ವಿವರಗಳನ್ನೂ ತಮ್ಮ ಇತ್ತೀಚಿನ ಭಾವಚಿತ್ರ (ಪಾಸ್ ಪೋರ್ಟ್ ಸೈಜಿನದು) ಹೊಂದಿಗೆ ಕಾರ್ಯದರ್ಶಿ, ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ, ಎಡ್ವರ್ಡ್ ರಸ್ತೆ, ಬೆಂಗಳೂರು-1 ಇವರಿಗೆ ಆಗಷ್ಟ್ ತಿಂಗಳ ದಿನಾಂಕ 10ರೊಳಗಾಗಿ ಕಳುಹಿಸಿಕೊಡಬೇಕಾಗಿ ವಿನಂತಿಸಲಾಗಿದೆ.

ಸ್ವಂತ ಉದ್ಯೋಗಕ್ಕಾಗಿ ಕೆನರಾ ಬ್ಯಾಂಕು ನಿಮಗೆ ಸಹಾಯ ಮಾಡುವುದು

ಸ್ವಂತ ಉದ್ಯೋಗ ಮಾಡುವ ಆಕಾಂಕ್ಷೆ ಇರುವ ಅನುಭವಸ್ಥ ಮತ್ತು ಸಾಹಸಿಕ ಜನರಿಗೆ ಅಥವಾ ಚಾಲ್ತಿಯಲ್ಲಿರುವ ತಮ್ಮ ವ್ಯವಹಾರವನ್ನು ಅಭಿವೃದ್ಧಿಗೊಳಿಸ ಬೇಕೆಂಬ ಇಚ್ಛೆ ಇರುವವರಿಗೆ ಸಹಾಯ ಮಾಡುವ ಉತ್ತಮ ಪರಂಪರೆಯನ್ನು ಕೆನರಾ ಬ್ಯಾಂಕು ಹಲವಾರು ವರ್ಷಗಳಿಂದ ರೂಪಿಸಿಕೊಂಡು ಬಂದಿದೆ.

ವಿವರಗಳಿಗೆ ನಿಮಗೆ ಸಮೀಪದ ನಮ್ಮ ಶಾಖೆಯ ಸಂಪರ್ಕ ಬೆಳೆಸಿರಿ

ಕೆನರಾ ಬ್ಯಾಂಕ್

ಪ್ರಧಾನ ಕಚೇರಿ: ಬೆಂಗಳೂರು—2

ಕಲಾಕೃತಿ ಚೋರರ ಮೇಲೆ ಕಣ್ಣು

ಮುತ್ತು ರತ್ನಗಳಿಗಲ್ಲ, ಭಾರತದ ಪುರಾತನ ಕಲಾಕೃತಿಗಳಿಗೆ ಅಮೇರಿಕಾ ಜನತೆ ಮನಸೋತಿದ್ದಾರೆ. ಅವಾರ ಹಣತೆತ್ತು ಈ ಕಲಾಕೃತಿಗಳನ್ನು ಕೊಳ್ಳಲು ಅವರು ಇಂದು ಸಿದ್ಧ. ಭಾರತೀಯ ಸಂಜಾತರಾದ ಅಮೇರಿಕಾ ನಾಗರೀಕ ನಾಪ್ಲಿ ಹೀರಾಮೋತ್ ಎಂಬುವರ ಗಮನಕ್ಕೆ ಪ್ರಥಮಬಾರಿಗೆ ಭಾರತೀಯ ಕಲಾಕೃತಿಯೊಂದನ್ನು ಅಮೇರಿಕಾಕ್ಕೆ ಕೊಂಡೊಯ್ದ. ಅದರಲ್ಲಿ ಅಡಗಿದ್ದ ಭವ್ಯ ಕಲಾಕೌಶಲ್ಯ ಅಮೇರಿಕನ್ನರನ್ನು ಆಕರ್ಷಿಸಿತು. ಭಾರತೀಯ ಪುರಾತನ ಕಲಾಕೃತಿಗಳ ಮೇಲಿನ ಮೋಹ ಏರಿತು. ಇದರಿಂದಾಗಿ ನಮ್ಮ ನಾಡಿನಲ್ಲಿ ಕೆಲವು ಸಮಸ್ಯೆಗಳೂ ತಲೆದೋರಿದವು.

ಭಾರತದ ಕಲಾಕೃತಿಗಳನ್ನು ಹೊಸದು ರಾಸೆಯಿಂದ ಕೆಲವು ನೀತಿಭ್ರಷ್ಟರು ವಿದೇಶಗಳಿಗೆ ಕಳ್ಳ ಸಾಗಣೆ ಮಾಡುವುದನ್ನು ಪ್ರಾರಂಭಿಸಿದರು ಈ ಬಗ್ಗೆ ದೇಶವಿದೇಶಗಳಲ್ಲಿ ಇರುವ ಕಾನೂನಿನ ವಿರುದ್ಧ ಅಪಸು ವ್ಯಾಪಾರ ನಡೆಸಲು ತೊಡಗಿದ್ದಾರೆ.

ಪುರಾತನ ಕಲಾಕೃತಿಗಳು ಭಾರತದ ಭವ್ಯ ಸಾಂಸ್ಕೃತಿಕ ಪರಾಗೂ ಐತಿಹಾಸಿಕ ಹಿರಿಮೆಯ ಸಂಕೇತ. ಜೀವದ ಪೂರ್ವ ಕಲಾವೈಭವವನ್ನು ಎತ್ತಿಹಿಡಿಯುವ ಈ ಕಲಾಕೃತಿಗಳು ಅಮೂಲ್ಯವಾದವಾಗಿದ್ದು ಅದರ ಕಳ್ಳಸಾಗಣೆ ದೇಶಕ್ಕೆ ನಷ್ಟ ತರುವಂತಹದ್ದು. ಇದರಿಂದಾಗಿ ಕಲಾಕೃತಿಗಳ ಕಳ್ಳ ಸಾಗಣೆಯನ್ನು ತಡೆಯಲು ಕೇಂದ್ರ ತನಿಖಾ ಶಾಖೆ ತೀವ್ರ ಪ್ರಯತ್ನ ನಡೆಸಿತು. ಕಲಾಕೃತಿಗಳ ಕಳ್ಳಸಾಗಣೆಯಲ್ಲಿ ತೊಡಗಿದ್ದ ಸಂಸ್ಥೆಗಳು ಮತ್ತು ವ್ಯಕ್ತಿಗಳನ್ನು ಪತ್ತೆ ಹಚ್ಚುವ ಕಾರ್ಯದಲ್ಲೂ ತನ್ನ ಕಾರ್ಯಚಟುವಟಿಕೆಯನ್ನು ಆರಂಭಿಸಿತು. ಗಿರ್ಹಾರ್ನಲ್ಲಿ ಪ್ರಥಮ ಬಾರಿಗೆ ತನಿಖಾ ಶಾಖೆ ಅಮೇರಿಕಾದಲ್ಲಿದ್ದ ಭಾರತದ "ಶಿವಪಾರ್ವತಿ" ಯರ ಪ್ರತಿಮೆಯನ್ನು ಕಂಡುಹಿಡಿಯಿತು. ಇದೊವರೆ ಅಡಿ ಎತ್ತರದ ಈ ಪ್ರತಿಮೆ ಮೆಸರ್ಸ್ ಎವರೆಟ್ ಡಿ. ರಾಸಿಗಾನ ನ್ಯೂಯಾರ್ಕಿನ ಮಳಿಗೆಯಲ್ಲಿ ಪ್ರದರ್ಶಿಸಲಾಗಿದ್ದು ಇದರ ಬೆಲೆ ೫೦,೦೦೦ ಡಾಲರ್‌ಗಳೆಂದು ಪ್ರಕಟಿಸಲಾಗಿತ್ತು. 'ಶಿವಪಾರ್ವತಿ'ಯರ ಈ ಪ್ರತಿಮೆಯನ್ನು ನವದೆಹಲಿಯ ದೊಡ್ಡ ವಾಣಿಜ್ಯ ಸಂಸ್ಥೆಯಾದ ಮೆಸರ್ಸ್ ನಾರಂಗ್ಸ್ ಆವರು ಅಮೇರಿಕಾದ ಎವರಿಟ್ ಡಿ. ರಾಸಿಗಾ ಸಂಸ್ಥೆಗೆ ೧೫,೦೦೦ ಡಾಲರ್‌ಗಳಿಗೆ ಮಾರಿದ್ದರು. ತನಿಖೆಯ ನಂತರ "ಶಿವಪಾರ್ವತಿ"ಯರ ಪ್ರತಿಮೆಯು ಕಳ್ಳಸಾಗಣೆಯಲ್ಲಿ ತೊಡಗಿದ ಸಂಸ್ಥೆ ಮತ್ತು ವ್ಯಕ್ತಿಗಳ ಮೇಲೆ ಕಾನೂನು ಕ್ರಮ ನಡೆದಿದೆ. ಆ ಪ್ರತಿಮೆ ಮಧ್ಯಭಾರತಕ್ಕೆ ಸೇರಿದ್ದು, ೧೦ನೆಯ ಶತಮಾನದ್ದೆಂದು ಹೇಳಲಾಗಿದೆ

ಹಿಮಾಚಲ ಪ್ರದೇಶದ ಚಂಬಾಕ್ಕೆ ಸೇರಿದ "ವಿಷ್ಣು"ವಿನ ಪ್ರತಿಮೆಯೊಂದನ್ನು ಕಳೆದ ವರ್ಷ ಕಂಡುಹಿಡಿಯಲಾಯಿತು. ಮುಂಬೈ, ಕಲ್ಕತ್ತಾ, ಮತ್ತು ದೆಹಲಿಯ ಪೋಲೀಸ್ ಇಲಾಖೆಗಳ ಸಹಕಾರದೊಂದಿಗೆ 'ವಿಷ್ಣು'ದೇವರ ವಿಗ್ರಹವನ್ನು ಮುಂಬೈನಲ್ಲಿ ಪತ್ತೆ ಹಚ್ಚಲಾಯಿತು.

ರಾಜಾಸ್ಥಾನದ ಭಾರತಪುರದ ದೋಲ್‌ಪುರ ದೇವಾಲಯಕ್ಕೆ ಸೇರಿದ ಶ್ರೀರಾಮದೇವರ ವಿಗ್ರಹವೊಂದು ಕಳ್ಳಸಾಗಣೆ ಕಾರಣಕ್ಕಾಗಿಯೇ ನಾಪತ್ತೆಯಾಗಿತ್ತು. ಕಲಾಕೃತಿ ಚೋರರನ್ನು ಕೆಲ ದಿನಗಳಲ್ಲಿಯೇ ಪತ್ತೆ ಮಾಡಲಾಯಿತು. ಎರಡೂವರೆ ಅಡಿ ಎತ್ತರದ ಹಾಗೂ ಎಂಟು ಲೋಹಗಳಿಂದ ಕೂಡಿದ ಈ ಕಲಾಕೃತಿ ಕಳುವಾದಾಗ ವಿವಿಧ ಕಲಾಕೃತಿ ವ್ಯಾಪಾರಿಗಳ ಮೇಲೆ ಕೇಂದ್ರ ತನಿಖಾ ಶಾಖೆಯವರು ಕಣ್ಣಿಟ್ಟರು. ಪ್ರತಿಮೆಯ ವ್ಯಾಪಾರದ ಸುಳಿವು ದೊರೆತ ತಕ್ಷಣದಲ್ಲಿಯೇ ಅದನ್ನು ವಶ ಪಡಿಸಿಕೊಳ್ಳಲಾಯಿತು.

ಇತ್ತೀಚೆಗೆ ಖಜರಾಹೋದ ದೇವಾಲಯದಲ್ಲಾ 'ಅಪ್ಸರಾ' ಭವ್ಯ ಕಲಾಕೃತಿಯೊಂದು ಕಳುವಾಯಿತು. ಈ ಸಂದರ್ಭದಲ್ಲಿಯೂ ಕೇಂದ್ರ ತನಿಖಾ ಇಲಾಖೆಯ ನೆರವು ಪಡೆದು ಶೀಘ್ರದಲ್ಲಿ ಕಳ್ಳರನ್ನು ಹಿಡಿಯಲಾಯಿತು. "ಅಪ್ಸರಾ" ವಿದೇಶೀಯರ ಕೈಸೇರುವ ಮುನ್ನವೇ ಪತ್ತೆಯಾಯಿತು. "ಅಪ್ಸರಾ" ವಿಗ್ರಹವನ್ನು ವಿದೇಶಕ್ಕೆ ಕಳುಹಿಸುವ ಸಲುವಾಗಿ ಖಜರಾಹೋ ಬಳಿಯ ನದಿಯ ತೀರದಲ್ಲಿ ನೀರೊಳಗೆ ಹೂತಿಟ್ಟಿದ್ದರು. ಅದನ್ನು ಕಂಡು ಹಿಡಿದು ವಿಗ್ರಹವನ್ನು ವಶಪಡಿಕೊಳ್ಳಲಾಯಿತು.

ಕೇಂದ್ರ ತನಿಕಾ ಶಾಖೆಯ ವಾರ್ತಾ ವಿಭಾಗ ಕಲಾಚೋರರ ಬಗ್ಗೆ ಸುದ್ದಿಯನ್ನು ಸಂಗ್ರಹಿಸುತ್ತಿದೆ. ಇದರ ಫಲವಾಗಿ ಪುರಾತನ ಕಲಾಕೃತಿಗಳ ಕಳ್ಳಸಾಗಣೆ ಇದೀಗ ಕಡಿಮೆಯಾಗುತ್ತಿದೆ. ●

ಅತ್ಯಧಿಕ ಬೇಸಾಯ ಉತ್ಪಾದನೆ

ಭಾರತ ಕೃಷಿಪ್ರಧಾನ ರಾಷ್ಟ್ರ. ಇಲ್ಲಿನ ಒಟ್ಟು ಉತ್ಪಾದನೆಯಲ್ಲಿ ಬೇಸಾಯ ಉತ್ಪಾದನೆ ಪ್ರತಿವರ್ಷ ಶೇಕಡ 44.5ರಷ್ಟಿರುವುದು. 1970-71ರಲ್ಲಿ ಭಾರತದಲ್ಲಿದ್ದು 18,755 ಕೋಟಿ ರೂ.ಗಳು ಬೆಲೆ ಬಾಳುವ ಬೇಸಾಯ ಉತ್ಪಾದನೆಯಾಗಿತ್ತು.

1970-71ರಲ್ಲಿ ಆಹಾರಧಾನ್ಯಗಳ ಉತ್ಪಾದನೆ 107.81 ದಶಲಕ್ಷ ಟನ್‌ಗಳಷ್ಟಿದ್ದು ಅದು 1969-70ರ ಉತ್ಪಾದನೆಗಿಂತ ಶೇಕಡ 8.4ರಷ್ಟು ಹೆಚ್ಚಿತ್ತು. 1969-70ರಲ್ಲಿ ರಾಷ್ಟ್ರದ ಆಹಾರಧಾನ್ಯಗಳ ಉತ್ಪಾದನೆ 99.50 ದಶಲಕ್ಷಗಳಷ್ಟಿತ್ತು.

ಈ ಹೆಚ್ಚಿದ ಆಹಾರಧಾನ್ಯಗಳ ಉತ್ಪಾದನೆಯೂ ಸೇರಿದಂತೆ ವಾರ್ಷಿಕ ಬೇಸಾಯ ಅಭಿವೃದ್ಧಿ ಕ್ರೀಕಡ 5.6ರಷ್ಟು ಏರಿದೆ.

ಸಜ್ಜೆ ಮತ್ತು ಮೆಕ್ಕೆ ಜೋಳ ಇವುಗಳಲ್ಲಿ ಕಳೆದ ವರ್ಷ ಅತ್ಯಧಿಕ ಉತ್ಪಾದನೆ ಕಂಡುಬಂದಿದೆ. ●

ರಾಷ್ಟ್ರೀಕರಣದ ವಾರ್ಷಿಕೋತ್ಸವ

ಸಿಂಡಿಕೇಟ್ ಬ್ಯಾಂಕಿನ ಭದ್ರಾವತಿ ಶಾಖೆಯಲ್ಲಿ ಬ್ಯಾಂಕ್ ರಾಷ್ಟ್ರೀಕರಣದ ಸೂರನೆಯ ವಾರ್ಷಿಕೋತ್ಸವವನ್ನು ಆಚರಿಸಲಾಯಿತು. ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರಖಾನೆಯ ಮೆನೇಜಿಂಗ್ ಡೈರೆಕ್ಟರ್ ಶ್ರೀ ಎಸ್ ಕೆ ವಾರಿಯರ್ ಅಧ್ಯಕ್ಷತೆ ವಹಿಸಿದ್ದರು. ರಾಷ್ಟ್ರೀಕರಣದ ಬಳಿಕ ಬ್ಯಾಂಕು ಕೃಷಿಕ ರಂಗಗಳಲ್ಲಿ ಉಳಿತಾಯ ಕೂಡಿಸಿದಂತೆ ಕಾರ್ಮಿಕ ಕೂಡುವಲ್ಲಿ ಕೂಡಿಸಲು ಆಕಕ್ಕವಾಯ್ತು ಎಂದ ಆವರು ನಗರ ಪ್ರದೇಶದಲ್ಲಿ ಉಳಿತಾಯವನ್ನು ಹೆಚ್ಚುಪ್ರಾಮ ಅವಶ್ಯವೆಂದು ಸಲಹೆ ನೀಡಿದರು. ಮುಖ್ಯ ಅತಿಥಿಯಾಗಿ ಬಂದಿದ್ದ ಡಿಪ್ಯುಟಿ ಕಮಿಷನರ್ ಶ್ರೀ ವಿ ಬಾಲಸುಬ್ರಹ್ಮಣ್ಯಂ ಬ್ಯಾಂಕಿನ ಸರ್ವಾಂಗೀಣ ಪ್ರಗತಿಯನ್ನು ಪ್ರಶಂಸಿಸಿ ಆದು ಇಡಿಯ ದೇಶದಲ್ಲೇ ದಕ್ಷ ಪರಿಪೂರ್ಣ ಸೇವೆ ಸಲ್ಲಿಸುತ್ತಿರುವುದಕ್ಕೆ ಸಂತೋಷ ವ್ಯಕ್ತಪಡಿಸಿದರು. ಶ್ರೀಗಳಾದ ಜಿ. ಕೃಷ್ಣ ಭಟ್, ಎಸ್. ಕೆ. ಸಂಜೀವಪ್ಪ, ವಾಸುದೇವ ಉಡುಪ, ನಾರಾಯಣ ಪೈವ್ ಸುಬ್ರಮಣಿ ಮತ್ತು ನುಲ್ಲೇಶಪ್ಪನವರು ಮೂತಾಡಿ ರೈತ, ಪ್ರತಿಪರ ಮತ್ತು ಸಣ್ಣ ಕೈಗಾಗಿ ಕೋದ್ಯಮಿಗಳಿಗೆ ಬ್ಯಾಂಕು ನೀಡುತ್ತಿರುವ ಸೇವೆಯನ್ನು ಮೆಚ್ಚಿಕೊಂಡರು. ಶಾಖಾ ಮೆನೇಜರ ರಾವ ಶ್ರೀ ಪಿ. ಪಿ. ಪಂಡೆಯವರು ಅರಂಭಿಕ ಭಾಷಣದಲ್ಲಿ ಸ್ವಾಗತಿಸಿ, ಬ್ಯಾಂಕಿನ ನೂರು ಬಗೆಯ ಜನೆಯ –ಹೊಸ ಜೀವನ ಯೋಜನೆಗಳನ್ನು ಸ್ಮರಿಸಿ, ರಾಷ್ಟ್ರೀಕರಣಾನಂತರದ ಅವಧಿಯಲ್ಲಿ ಬ್ಯಾಂಕು ಅಭಿವೃದ್ಧಿಗೊಂದ ಬಗೆಯನ್ನು ವಿವರಿಸಿದರು. ಕೊನೆಯಲ್ಲಿ ಕೃಷಿ ಅಧಿಕಾರಿ ಶ್ರೀ ಮೋಹನರೂ ಸಹಚಿಸಿದರು ವಂದನಾರ್ಪಣೆ ಗೆಯ್ದರು.

ಗೇಣಿದಾರರ ಸಮಿತಿಯ ಸರ್ವ ಸದಸ್ಯರ ಸಭೆ

ತಾ. 24–7–1972ರಂದು ಉಡುಪಿ ತಾಲೂಕಿನ ಬೈಕಾಡಿ ಗ್ರಾಮದ ಹಯರ್‌ಯೆಲಿಮೆಂಟ್ರಿ ಶಾಲಾ ಪರಿಸರದಲ್ಲಿ ಶ್ರೀ ಬಿ. ಭಾಸ್ಕರ್ ಡಿ. ಸೋಜಾರವರ ಅಧ್ಯಕ್ಷತೆಯಲ್ಲಿ ಗೇಣಿದಾರರ ಸಮಿತಿಯ ಸರ್ವಸದಸ್ಯರ ಸಭೆ ಸೇರಿತು. ಸಮಿತಿಯ ಕಾರ್ಯದರ್ಶಿ ಶ್ರೀ ಬೈಕಾಡಿ ಶೀನಪ್ಪ ಸೆಟ್ಟಿಯವರು ಸದಸ್ಯರನ್ನುದ್ದೇಶಿಸಿ ಮಾತಾಡುತ್ತಾ ತಾ. 31–7–72ರಂದು ದ ಕ. ಜಿಲ್ಲಾ ಡಿಪ್ಯುಟಿ ಕಮಿಷನರರವರ ಕೋರ್ಟಿನಲ್ಲಿ ಒಯರಿಂಗಿಗೆ ಇರುವ ಗೇಣಿದಾರರ ಅರ್ಜಿಗಳ ಕುರಿತಾಗಿಯೂ ತಾ. 15–5–72ರಂದು ಉಡುಪಿ ತಾಲೂಕು ತಹಶಿಲ್ದಾರರವರು ಪ್ರಕಟಿಸಿದ 1970ರಿಂದ 75 ನೆ ಇಸ್ವಿವರೆಗಿನ ಯೆಕ್ತೆವಾರು ಕೃಷಿ ಉತ್ಪನ್ನ ನಿರ್ಣಯದ ಕುರಿತು ವಿವರಿಸಿ, ಮೈಸೂರು ಯೆಸೆಂಬ್ಲಿಗೆ ಚುನಾಯಿತರಾದ ಆಳುವ ಕಾಂಗ್ರೆಸ್ ಪಕ್ಷದ ಸದಸ್ಯರು ಯೆಸೆಂಬ್ಲಿ ಸದಸ್ಯರಿಗೆ ತಿಂಗಳೊಂದರ ರೂ. 200ನ್ನು ಹೆಚ್ಚಿಸುವ ನಿರ್ಧಾರ ಮಾಡಿದ ಕುರಿತು ನಿರಾಶೆ ವ್ಯಕ್ತಪಡಿಸಿದರು. ಮುತ್ತೂ ಈ ಬಗ್ಗೆ ಈ ಸಭೆಯಲ್ಲಿ ಒಂದು ನಿರ್ಣಯವನ್ನು ಸರ್ವಾನುಮತದಿಂದ ಮಂಜೂರು ಮಾಡಲಾಯ್ತು.

ಮಂಗಳೂರಲ್ಲಿ ಸಿಂಡಿಕೇಟ್ ಬೇಂಕಿನ ರಾಷ್ಟ್ರೀಕರಣದ ತೃತೀಯ ವಾರ್ಷಿಕೋತ್ಸವ

ಮಂಗಳೂರಿನ ಸಿಂಡಿಕೇಟ್ ಬೇಂಕಿನ ಎಲ್ಲ ಶಾಖೆಗಳು ಸೇರಿ ಹಂಪನಕಟ್ಟೆ ಶಾಖೆಯಲ್ಲಿ ಏರ್ಪಡಿಸಿದ ಬ್ಯಾಂಕ್ ರಾಷ್ಟ್ರೀಕರಣದ ತೃತೀಯ ವಾರ್ಷಿಕೋತ್ಸವ ಸಮಾರಂಭವು ಕಾರ್ಪರೇಶನ್ ಬೇಂಕ್‌ನ ಚೆಯರ್‌ಮೇನ್ ಶ್ರೀ ಎಂ. ಆರ್. ಕಾಮತ್‌ರ ಅಧ್ಯಕ್ಷತೆಯಲ್ಲಿ ನೆರವೇರಿತು. ಬ್ಯಾಂಕಿನ ರೀಜನಲ್ ಡೆವಲಪ್‌ಮೆಂಟ್ ಮೆನೇಜರ್ ಶ್ರೀ ಎಚ್ ಎನ್ ಕಾಮತರು ಆರಂಭದಲ್ಲಿ ಸ್ವಾಗತಿಸಿದರು. ಸಭಿಕರಲ್ಲಿ ವಿವಿಧ ನಗರ್‌ಗಳವರು ಮೂತಾಡಿ ಬ್ಯಾಂಕ್‌ರಾಷ್ಟ್ರೀಕರಣದ ನಂತರದ ತಮ್ಮ ಅನುಭವಗಳನ್ನು ವಿವರಿಸಿ ಬ್ಯಾಂಕ್ ಸಾಧಿಸಿದ ಪ್ರಗತಿಗೆ ಸಲ್ಲಿಸಿದ ಸೇವೆಗೆ ಅಭಿನಂದನೆಗಳನ್ನು ಸಲ್ಲಿಸಿದರು ಶ್ರೀ ಎಂ ಆರ್ ಕಾಮತರು ಮೂತಾಡುತ್ತಾ ದ ಕ. ಜಿಲ್ಲೆಯ ಬ್ಯಾಂಕುಗಳು ರಿಸರ್ವ್ ಬ್ಯಾಂಕಿನ ವೈಸ್ಯಿಯಲ್ಲಿ ಅತೀ ಉನ್ನತ ಸ್ಥಾನದಲ್ಲಿರೆಯೆಂದೂ ಹಾಗೂ ರಾಷ್ಟ್ರೀಕರಣದ ಉದ್ದೇಶಗಳನ್ನು ಸಾಧಿಸುವಲ್ಲಿ ಸಫಲತೆಯನ್ನು ಹೊಂದಿರೆಯೆಂದರು. ರಿಸರ್ವ್ ಬೇಂಕಿನ ವೃತ್ತಿಯಲ್ಲಿ ಸಿಂಡಿಕೇಟ್ ಬೇಂಕ್ ಒಂದು ವಿಶಿಷ್ಟ ಸ್ಥಾನ ಗಳಿಸಿದ್ದು ರಾಷ್ಟ್ರೀಕರಣ ಉದ್ದೇಶ ಸಾಧನೆಯಲ್ಲಿ ಆದರ ಪಾತ್ರ ಶ್ಲಾಘನೀಯವೆಂದರು.

ಈ ಸಂದರ್ಭದಲ್ಲಿ ಬೇಂಕಿನ ಕಸ್ಟೋಡಿಯನ್‌ರಾಗಿದ್ದ ಶ್ರೀ ಟಿ. ಎ ಪೈಯವರು ಕೇಂದ್ರ ಸಚಿವರಾದುದಕ್ಕೆ ಸಂತೋಷ ವ್ಯಕ್ತಪಡಿಸಲಾಯಿತು.ಕಾರ್ಪ್ಸ್‌ರೇಟ್ ಶಾಖೆಯ ಮೆನೇಜರ್ ಶ್ರೀ ಪಿ. ಆರ್. ನಾಯಕರು ಕೊನೆಯಲ್ಲಿ ವಂದಿಸಿದರು.

ನವಯುಗ

ರಾಷ್ಟ್ರೀಯ ವಾರಪತ್ರಿಕೆ

ಮಾನ್ಯರೆ,

'ನವಯುಗ'ದ ಹೊನ್ನಹಬ್ಬದ ಅವಸರದಲ್ಲಿ (1972) ನಮ್ಮ **ಸ್ವಾತಂತ್ರ್ಯದ ರಜತೋತ್ಸವವನ್ನೂ** ಆಚರಿಸುವ ಶುಭ ಸಂದರ್ಭ ಈ ಆಗಸ್ಟ್ 1972. ಈ ಮಹೋತ್ಸವದ ನೇಳೆ ಎಂದಿಗಿಂತಲೂ ಮಿಗಿಲಾದ ಪೂರ್ಣತೆ, ಸೌಂದರ್ಯಗಳಿಂದ ರಾಜಿಸಲಿರುವ **ವಿಶೇಷ ಸಂಚಿಕೆ**ಯನ್ನು 'ನವಯುಗ'ವು ಪ್ರಕಟಿಸಲಿದೆ ಎಂಬುದನ್ನು ತಮ್ಮ ಮುಂದಿಡಲು ಸಂತೋಷವಾಗುತ್ತದೆ.

ಸ್ವಾತಂತ್ರ್ಯ ಪೂರ್ವದ ಕನಸುಗಳು, ಕನಸು ನನಸಾದ ಬಗೆ, ಸ್ವಾತಂತ್ರ್ಯಾ ನಂತರದಲ್ಲಿ ನಮ್ಮ ಅಪೂರ್ವ ಸಾಧನೆಗಳು ಹಾಗೂ ನಮ್ಮ ನಿತ್ಯ ಜೀವನದಲ್ಲಾನ ಸುಧಾರಣೆಗಳನ್ನು ಕುರಿತ ಹಲವಾರು ಲೇಖನಗಳು ಈ ಸಂಚಿಕೆಯಲ್ಲಿ ಬರಲಿವೆ. ಈ ತನಕವೂ ಇಂತಹ ವಿಶೇಷಾಂಕಗಳ ಯಶಸ್ಸಿನಲ್ಲಿ ಸಾಲುದಾರರು ನಮ್ಮ ನೆಚ್ಚಿನ ಬರಹಗಾರರ ವರ್ಗ ಮತ್ತು ಜಾಹೀರಾತುಗಳನ್ನಿತ್ತು ಸಹಕರಿಸಿದ ಸಂಘ-ಸಂಸ್ಥೆಗಳು. ಹಿಂದಿನಂತೆಯೇ ಈ ಬಾರಿಯೂ ಇವರುಗಳೆಲ್ಲ ಸಹಕಾರವನ್ನೀಯುವರೆಂಬ ತುಂಬು ಭರವಸೆಯಿಂದ ಆವರನ್ನು ಪ್ರಾರ್ಥಿಸುತ್ತಲಿದ್ದೇನೆ. ಈ ಜನಪ್ರಿಯ ಪ್ರಮುಖ ಪತ್ರಿಕೆಯು ಅಸಂಖ್ಯ ಜನರ ಕೈ ಸೇರುತ್ತ ತಮ್ಮ ಉದ್ದಿಮೆ, ವ್ಯವಹಾರಗಳ ನೈಜ ದರ್ಶನವನ್ನು ಎಲ್ಲರಿಗೂ ಒದಗಿಸುವುದು. ಆ ಪ್ರಯುಕ್ತ ದಯವಿಟ್ಟು ಆದಷ್ಟು ತ್ವರಿತವಾಗಿ ತಮ್ಮ ಜಾಹೀರಾತನ್ನು ಕಳುಹಿಸಿ ಸಹಕರಿಸಿರಿ. ಜಾಹೀರಾತುಗಳ ವಿವರಗಳನ್ನು ಕೆಳಗೆ ಕೊಡಲಾಗಿದೆ.

ಜಾಹೀರಾತುಗಳ ದರಗಳು

ಪೂರ್ತಿ ಪುಟ... ರೂ 200/- ಹಿಂಬದಿಯ ರಕ್ಷಾಪತ್ರ ...ರೂ 500/-
ಅರ್ಧ ಪುಟ... ರೂ. 125/- ಮುಂಗಡೆಯ ರಕ್ಷಾಪತ್ರದ ಒಳಪುಟ ರೂ.400/-
ಕಾಲು ಪುಟ... ರೂ. 65/- ಹಿಂಬದಿಯ ರಕ್ಷಾಪತ್ರದ ಒಳಪುಟ ರೂ.300/-

ಆಕಾರದ ವಿವರ

ಪುಟದ ಸೈಜ 15" × 10" ಆಚ್ಚಿನ ಜಾಗ 13" × 8"
(37.5 ಸೆ. ಮೀ × 25 ಸೆ. ಮೀ.) (32.5 ಸೆ. ಮೀ × 20. ಮೀ)

ಪ್ರಕಟಣೆಯ ತಾರೀಕು: 15—8—1972.

ದ್ರೋಹ

(ಎರಡನೇ ಪುಟದಿಂದ)

ನ್ನುತ್ತಿದ್ದಂತೆ ಆಕೆಯ ಕಣ್ಣಾಗಳು ತುಂಬಿ ಬಂದವು. ನಾನು ವಿಸ್ಮಿತಳಾಗಿ ಕೇಳಿದೆ.

'ನಿಮಗೆ.... ನಿನಗೇನಾದ್ರು ಸಂಬಂಧವೇ?'

'ಸಂಬಂಧ? ಹೌದಮ್ಮ, ನನ್ನ ಕೈಹಿಡಿದು ಆಮೇಲೆ ಒಂದೇ ವರ್ಷದಲ್ಲಿ ಕೈಬಿಟ್ಟ ಪತಿಯೇ ಅವರು ನೋಡಿ.' ಮುಂದೆ ಮಾತನಾಡಲಾಗದೆ ಸ್ವರ ಕಂಪಿಸಿ ಮೌನ ನಿಲ್ಲಿಸಿದಳು.

"ಆ್ಞಾಂ.... ಹೌದೇ ? ದಿಗ್ಭ್ರಮೆಗೊಂಡು ಕೇಳಿದೆ ನಾನು.

'ಹೌದಮ್ಮ, ಯಾಕೆ ನಂಬಿಗೆಯೂಗೋಲ್ವೆ? ಹೌದು. ಆ ಡಾಕ್ಟರರ ಮಟ್ಟಕ್ಕೂ ನನ್ನ ಈ ಹರಕು ವೇಷಕ್ಕೂ ಎಲ್ಲಿಯ ಜೋಡಿ, ಅಲ್ವಾ? ನೀವು ಇವಳೊಬ್ಬಳು ಹುಚ್ಚಿ ಎಂದು ಕೊಳ್ತೀರೇನೋ. ಕೇಳಿ, ಹೇಗೂ ಸಮಯವಿದೆ. ನನ್ನ ಕತೆನೆಲ್ಲ ಹೇಳ್ತೇನೆ." ಎನ್ನುತ್ತಾ ಆಕೆ ತನ್ನ ಚರಿತ್ರೆಯನ್ನು ಆರಂಭಿಸಿದಳು.

ಶಾಂತಳ ತಂದೆಗೆ ಆಕೆಯೊಬ್ಬಳೇ ಮಗಳು. ತಕ್ಕಮಟ್ಟಿಗೆ ಆಸ್ತಿ, ಸ್ವಂತ ಮನೆಯಿದ್ದ ಆತನಿಗೆ ತನ್ನ ಒಬ್ಬಳೇ ಮಗಳಿಗೆ ಯೋಗ್ಯಪತಿ ದೊರೆಯಬೇಕೆಂಬ ಬಯಕೆ. ಆದ್ದರಿಂದಲೇ ಮೊದಲೇ ಮುಂದಾಲೋಚನೆಯಿಂದ ಎಸ್.ಎಸ್. ಎಲ್.ಸಿ. ಮುಗಿಸಿದ ದೂರದ ಸಂಬಂಧಿ ಬಡವ ರಾಜೇಶನನ್ನು ಡಾಕ್ಟರನನ್ನಾಗಿ ಮಾಡಿ ತಳಿಯನನ್ನಾಗಿ ಮಾಡಿಕೊಳ್ಳುವ ಹೆಬ್ಬಯಕೆಯಿಂದ ತನ್ನ ಸಂಪತ್ತೆಲ್ಲವನ್ನೂ ಧಾರೆಯೆರೆದು ಓದಿಸಿ ಅದರೊಂದಿಗೇ ಮಗಳ ಮದುವೆಯನ್ನೂ ಮುಗಿಸಿ ಸಂತೃಪ್ತಿಯಿಂದ ಇದ್ದರು. ಶಾಂತ ಕೂಡಾ ಡಾಕ್ಟರ್ ಪತಿ ದೊರೆತನೆಂದು ತುಂಬ ಸಂತಸ, ಸಂಭ್ರಮಗಳಿಂದ ಉಬ್ಬಿದಳು. ಆದರೆ ಮದುವೆಯೂಗಿ ಕೆಲವೇ ತಿಂಗಳುಗಳಲ್ಲಿ ರಾಜೇಶ್ನ ವರ್ತನೆ ಶಾಂತಳ ಕನಸುಗಳೆಲ್ಲವನ್ನೂ ನುಚ್ಚುನೂರಾಗಿ ಮಾಡಿತು. ಆತ ಕೇವಲ ಕರ್ತವ್ಯಕ್ಕೆ ಕಟ್ಟುಬಿದ್ದಂತೆ ಶಾಂತಳ ಕೈ ಹಿಡಿದಿದ್ದನಲ್ಲದೆ ಆಕೆಯಲ್ಲಿ ಒಲುಮೆಯೆನ್ನೂ ಇರಲಿಲ್ಲ. ಮೊದ ಮೊದಲು ನಿಧಾನವಾಗಿ ಪತಿಯ ವರ್ತನೆ ಸರಿಹೋದೀತೆಂಬ ಆಸೆಯಿಟ್ಟು ಕೊಂಡಿದ್ದ ಶಾಂತಾಳಿಗೆ ಕ್ರಮೇಣ ಪರಿಸ್ಥಿತಿಯ ಕಠೋರತೆಯ ಅರಿವುಂಟಾಯಿತು. ರಾಜೇಶ ಮುಚ್ಚಿದಯನ್ನೂ, ಮಾತನಾಡಿಸಿ ತಾತ್ಸಾರದಿಂದ ಕಾಣುತ್ತಾ ಹೆಚ್ಚಿನ ಹೊತ್ತು ಮನೆಯ ಹೊರಗೇ ಕಳೆಯುವುದಾರಂಭಿಸಿದ. ಮದುವೆಯಾಗಿ ಒಂದೇ ವರ್ಷದಲ್ಲಿ ದೂರದ ಬೆಂಗಳೂರಿನ ಆಸ್ಪತ್ರೆಗೆ ಪರ್ಮನೆಂಟಾಗಿ ನಿಯಮಿಸಿಕೊಂಡು ನಿಧಾನವಾಗಿ ಮೂಟೆಮಾಡಿ ಕರೆಸಿಕೊಳ್ಳುವನೆಂಬ ಆಸೆಯ ಕಾಗದವನ್ನೇ ಹಾಕಲಿಲ್ಲ. ಶಾಂತಳ ತಂದೆ ಪಟ್ಟ ಸರ್ವಸ್ವವನ್ನೂ ಮಗಳ ಸುಖಕ್ಕಾಗಿ ತುಲಿ ಕೊಟ್ಟರೂ ಆಕೆ ಕಣ್ಣೀರಿನಲ್ಲೇ ಜೀವನ ಕಳೆಯುವಂತಾಯಿತೇ ಎಂದು ಕೊರಗಿ ಕೊರಗಿ ಹಾಸಿಗೆ ಹಿಡಿದರು. ತಾಯಿ, ಶಾಂತ ಚಿಕ್ಕವಳಿರುವಾಗಲೇ ತೀರಿಕೊಂಡಿದ್ದರು. ಕೊನೆಗೊಮ್ಮೆ ಬೆಂಗಳೂರಿಗೆ ಬಂದ ಯೋಧೋ ಮಹನೀಯರು ರಾಜೇಶ ಪುನಃ ಬೇರೊಬ್ಬಾಕೆಯನ್ನು ಕಟ್ಟಿ ಕೊಂಡಿರುವುದಾಗಿ ಖಾತ್ರಿ ತಂದರು. ಸರಿ ಆ ಮೇಲೆ ಮಲಗಿದ ತಂದೆ ಅಲ್ಲೇ ನರಳಿ ನರಳಿ ಅಸು ತೊರೆದರು. ಶಾಂತಾ ದೂರದ ಸಂಬಂಧಿಯೊಬ್ಬರ ಮನೆಯಲ್ಲಿ ತಾತ್ಕಾಲಿಕವಾಗಿ ಆಶ್ರಯ ಪಡೆದಳು. ಆದರೂ ಆವಳಿಗಾಸೆ, ಒಂದಲ್ಲ, ಒಂದು ದಿನ ತನ್ನ ಪತಿ ಬಂದೇ ಬಂದಾರು, ತನ್ನನ್ನು ಕರೆದುಕೊಂಡು ಹೋದಾರು, ಎಂದು. ಇಲ್ಲ. ವರ್ಷ ನಾಲ್ಕು ಕಳೆದರೂ ಅವಳಾಸೆ ಫಲಿಸಲಿಲ್ಲ. ಈಗ ಆ ದೂರದ ಸಂಬಂಧಿಯೂ ಬಹಳ ಕಷ್ಟದಲ್ಲಿದ್ದುದರಿಂದ ಇನ್ನು ಮುಂದೆ ನಿನ್ನ ದಾರಿ ನೀನು ನೋಡಿಕೋ ಎಂದು ಬಯ್ದು ಹೊರಗೆ ಹಾಕಿದುದರಿಂದ ಬೆಂಗಳೂರಿಗೆ ಬರುವವರೊಂದಿಗೆ ಹೇಗೋ ಬಂದು ರಾಜೇಶನ ಮನೆ ಯಾರಿಂದಲೋ ಕೇಳಿ ತಿಳಿದು ಬಂದಿದ್ದಾಳೆ. ಆದರೆ ಅವಳಿಗೆಂತಹ ನಿರಾಶೆ! ಆಕೆಗೆ ಹೆಚ್ಚೇನೂ ಬೇಡ ಹೊಟ್ಟೆ, ಬಟ್ಟೆಗೆ ಕೊಟ್ಟು ಆಶ್ರಯ ಕೊಟ್ಟರೆ ಸರಿ. ಆಕೆ ಪತಿಯಿಂದ ಇನ್ನೇನನ್ನೂ ನಿರೀಕ್ಷಿಸುವ ಸ್ಥಿತಿಯಲ್ಲಿಲ್ಲ

ಎಲ್ಲವನ್ನೂ ಹೇಳಿದ ಶಾಂತಾ ಕೊನೆಗೆಂದಳು. "ಹೆಣ್ಣು ಹೆಣ್ಣಿಗೇ ಈ ರೀತಿ ದ್ರೋಹ ಮಾಡುತ್ತಿರುವುದು ಯಾವ ನ್ಯಾಯ ಹೇಳಿ? ಒಬ್ಬಳನ್ನು ಅಗ್ನಿ ಸಾಕ್ಷಿಯಾಗಿ ಕೈಹಿಡಿದು ಅರ್ಧದಲ್ಲೇ ಕೊರಳು ಕೊಯ್ದರೂ ಆವನನ್ನೇ ಮರುಳು ಮಾಡಿ ಸುಖಿಸುವುದು ಹೆಣ್ಣಿಗೆ ಭೂಷಣವೇ?'

ವತ್ಸಲಾ ಆದರ್ಶ ದಾಂಪತ್ಯ ಪ್ರೀತಿಯ ಪತಿ ಎಂದು ಹಗಲಿರುಳು ಜಂಭ ಕೊಚ್ಚಿ ಕೊಳ್ಳುತ್ತಿರುವಾಕೆ ಇಸ್ಟೇ ಏನು?

ನನ್ನ ದೃಷ್ಟಿ ಶಾಂತಾಳನ್ನೂ ಆಕೆಯ ಪಕ್ಕದಲ್ಲೇ ವತ್ಸಲಾಳನ್ನೂ ನಿಲ್ಲಿಸಿ, ಹೋಲಿಸಿ ನೋಡಿದಾಗ ಎಷ್ಟೊಂದು ಅಂತರ ಈ ಇಬ್ಬರೊಳಗೆ ಎಂದುಕೊಂಡೆ!

ಜೀವನ ಸಂಪೂರ್ಣ ಸುಖ ಸಂತೋಷಗಳನ್ನು ಹೀರಿಕೊಂಡು ಸಂತೃಪ್ತಿಯಿಂದ ನಲಿದಾಡುವ ನಗುಮೊಗದ ವತ್ಸಲಾಳಿಗೂ ಬಾಳೆಲ್ಲ ಕಹಿ ದುಃಖಗಳನ್ನುಂಡು ಜೀವಲು ಮುಖದಿಂದ ಕಂಗೆಟ್ಟ ಶಾಂತಾಳಿಗೂ ಎಲ್ಲಿಯ ಹೋಲಿಕೆ?

ಇದರಲ್ಲಿ ತಪ್ಪು ಯಾರದು?

ಆದರ್ಶ ಪತಿಯೆಂದು ಮೆರೆದಾಡುತ್ತಿರುವ ರಾಜೇಶನಿಗೆ ತನ್ನಿಂದಾಗಿ ಒಂದು ಜೀವ ಹಗಲಿರುಳು ಪರಿತಪಿಸುತ್ತಾ ಬೆಂದು ಹೋಗುವುದೆಂಬ ಪಾಪವೂ ಇರಲಾರದೇ?

ಸುಖ ದಾಂಪತ್ಯವೆಂದು ಸಮಾಜಕ್ಕೆಲ್ಲವೂ ಅದನ್ನೇ ಸ್ತುತಿಸುತ್ತಿರುವ ವತ್ಸಲಾಳಿಗೆ ತನ್ನ ಪತಿಯ ದ್ರೋಹಕ್ಕೆ ತಾನೂ ಸಹಭಾಗಿನಿಯೆಂಬ ಯೋಚನೆಯೂ ಸುಳಿಯಲಾರದೇ?

ಸ್ವಭಾವತಃ ಕೋಮಲ ಹೃದಯಿಯೂ ಗಿರ ಭೇಕಾದ ಹೆಣ್ಣು ಮತ್ತೊಂದು ಹೆಣ್ಣಿಗೆ ಇದಕ್ಕಿಂತ ದೊಡ್ಡ ಅನ್ಯಾಯ, ಅಪರಾಧಗಳನ್ನು ನೂತುವುದು ಸಾಧ್ಯವೇ?

ನಾನು ಮೌನವಾಗಿ ಒಳ ಹೊಕ್ಕು ನೊಂದು ಬೆಂದ ಜೀವಕ್ಕೆ ಒಂದು ಲೋಟ ಕಾಫಿಯನ್ನೂ ನಾಲ್ಕು ಬಾಳೆಯ ಹಣ್ಣುಗಳನ್ನೂ ತಂದಿತ್ತೆ?

ತುಸು ಹೊತ್ತಿನಲ್ಲಿ ದಾರಿಯುದ್ದಕ್ಕೂ ನಗುತ್ತಾ ಬಂದ ವತ್ಸಲಾಳ ಧ್ವನಿ ಕೇಳಿತು. ಆದರೊಂದಿಗೇ ಮನೆಯ ಬಾಗಿಲು ತೆರೆಯಿತು.

"ಹೋಗ್ತೇನಮ್ಮ" ಎನ್ನುತ್ತಾ ಆಕೆ ಎದ್ದು ನಿಂತಾಗ ನಾನು ನಿರುತ್ತಳಾಗಿ ನಿಂತಿದ್ದೆ. ನನಗರಿವಿಲ್ಲದೆಯೇ ನನ್ನ ದೃಷ್ಟಿ, ಮನಸ್ಸು ಪಕ್ಕದ ಮನೆಯತ್ತ ಹೊರಳಿತು. ಕಿವಿಗಳು ಕುತೂಹಲದಿಂದ ಕಾತರದಿಂದ ಅವರ ಸಂಭಾಷಣೆಯನ್ನಾಲಿಸತೊಡಗಿದವು.

"ನೀನ್ಯಾಕೆ ಬಂದೆ ಇಲ್ಲಿ? ಹೊರಡಾಚೆ. ನಿನ್ನನ್ನಾರು ಇಲ್ಲಿಗೆ ಕರೆಸಿದರು?"

"ದಮ್ಮಯ್ಯ. ನನಗೆ ಹೆಚ್ಚೇನೂ ಬೇಡ. ಬರೇ ಒಂದು ಆಶ್ರಯಕೊಟ್ಟು ಕಾಪಾಡಿ"

'ಥೂ. ಹೋಗಾಚೆ. ನಿನ್ನಂತಹ ಹುಚ್ಚಿಗೆ ಆಶ್ರಯ ಕೊಟ್ಟರೆ ನೋಡಿದವರು ನಕ್ಕಾರು. ಬೇಗ ಇಲ್ಲಿಂದ ಹೋಗು. ನನ್ನ ವಾಲಿನ ಕಣ್ಣಿ."

'ತಂಗೀ ನೀನಾದರೂ ಇವರಿಗೆ ಹೇಳಮ್ಮ. ನಾನು ...ನಾನು.....ಇವರ ಕೈಹಿಡಿದ ಪತ್ನಿ...'

"ನನ್ನನ್ನು ನಮ್ಮನೆ ತಂಗಿ ಎಂದು ಕರೆದು ಆಪಮಾನ ಪಡಿಸ್ಬೇಡ. ನಿಮ್ಮ ಸಂಬಂಧ ನನಗಂತಮ ಅಂತ ನನಗೇನೂ ಗೊತ್ತಿಲ್ಲ ಸುಖವಾಗಿದ್ದ ಸಮ್ಮನ್ನು ನೀನು ಬಂದು ಗೊಂದಲಪಡಿಸಿ ಗೋಳಾಡಿಸ್ಬೇಡ.'

'ನೀನಿಗ ಹೊಗ್ತೀಯೊ? ಅಲ್ಲ ಹೊರಡತಕ್ಕೇನೆ? ಮಾತಿಲ್ಲ ಕತೆಯಿಲ್ಲ. ನನೋ ನಿನ್ನ ತಂದೆ ಕೊಡಿಸಿದ ವೋನದ ಜಾಲಕ್ಕೆ ಸುರುಳಾಗಿ ಮದುವೆ ಮಾಡ್ಕ ಮಾಡಿದ ಮಾತ್ರಕ್ಕೆ ನನ್ನ ಭವಿಷ್ಯವನ್ನೇ ಹಾಳುಮಾಡಿಕೊಳ್ಳಲೆ? ಅಬ್ಬ....ನಿನ್ನ ವೇಷವೇ! ನಿನಗೂ ನನಗೂ ಎಳ್ಳಷ್ಟು ಹೊತೆ....ಎಂತಾ ಸಂಬಂಧ...ನಿನಗೆಂದು ಭ್ರಾಂತಿ ಇಲ್ಲೆ. ನೀನು ಎಲ್ಲಾದರೂ ಸತ್ತುಕೋ. ಇಲ್ಲೋ ತೆಗೆದುಕೋ ಈ ಹಣ. ಇವನ್ನು ತಗೊಂಡು ಎಲ್ಲಾದರೂ ಹೋಗಿ ಹೋಗು."

ಮತ್ತೆ ಅಳುವ ಧ್ವನಿ...ಬಾತೇರ್ನ ರೇಗಿದ ಧ್ವನಿ...ಬಾಗಿಲು ಹಾತೆದ ಶಬ್ದ.... ಹೊರಗೆ ನೆರಳು ಸರಿದಂತೆ ಇತೆದ ಶಬ್ದ....

ಬಾತ್ರಿ ಬೀರೀ ನಿದ್ದೆಯಿಲ್ಲದೆ ಕಳೆದು ಹೋದಾತಿ ಬೆಳತ್ತಾ ಮಂಜಾನೆ ಆಲಸ್ಯದಿಂದಲೇ ಎದ್ದು ಎಂದಿನಂತೆ ವತ್ಸಲಾಳ ಮನೆ ಮತ್ತ ಬಿಸ್ಕಿಟಾಗಿ ಅಲ್ಲಿಗೆ ನುಗ್ಗುತ್ತಾ ರಾಜೇಶನೊಂದಿಗೆ ಕರಟೆ ಹೊಡೆಯುತ್ತಿದ್ದಾಕೆ ನಾನು ಎಂದೂ ನಡೆಯದೇ ಇಲ್ಲಿ. ತಮ್ಮಂತಹ ನಾಗರಿಕ ಸಮಾಜದ ಮಂದಿಗೂ ಇಲ್ಲಿ ಎಂಥಂತಹ ರೀತಿಯಲ್ಲಿವ್ವವನ್ನು ನೋಡಿ ನಾನು ತಿರಸ್ಕಾರದಿಂದ ಬಾಗಿಲಿಕ್ಕಿ ಒಳಗೆ ಬಂದೆ.

●●

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ನಾನಾ ವಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ವರ್ಗ, ಊಗಿಗೆ ಮತ್ತು ವಿವಿಧ ರಶೀದಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ಪುತ್ತೂರು ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟಿನಲ್ಲಿ

O. S. 69/1970

ಕೋಡಂಬೂರು ಶಂಭಟ್ಟ —ವಾದಿ

—Vs—

ಕೋಚಪ್ಪ ರೈ ಕೂಡಾ —ಪ್ರತಿವಾದಿರು

22ನೇ ಪ್ರತಿವಾದಿ ನೀಲಮ್ಮ, ಸಾಂತಪ್ಪ ರೈ ಯನರ ವಿಧವೆ, 23ನೇ ಪ್ರತಿವಾದಿ T. S. ಕಿಟ್ಟಣ್ಣ ರೈ, S/o ಸಾಂತಪ್ಪ ರೈ, 24ನೇ ಪ್ರತಿವಾದಿ ರಮೇಶ ರೈ, S/o ನೀಲಮ್ಮ— ಎಲ್ಲರೂ ಲೇಬರರ್ಸ್ ಕ್ವಾರ್ಟರ್ಸ್, B—ಬ್ಲೋಕ್, ಭಾರತ ಇಲೆಕ್ಟ್ರೋನಿಕ್ಸ್, ಬೆಂಗಳೂರು, ಎಂಬಲ್ಲಿ ವಾಸಿಸುವವರು ಇವರೀಗೆ—

ಮೇಲಿನ ದಾವೆಯು ನಿಮ್ಮ ಹಾಜರಾತಿ ಬಗ್ಗೆ ತಾ. 19-8-1972ಕ್ಕೆ ವ್ಯಾದೆಯಾಗಿರುತ್ತದೆ. ಆ ದಿನಸ ಹಗಲು 11ಗಂಟೆಗೆ ನೀವು ಮೇಲಿನ ಕೋರ್ಟಿನಲ್ಲಿ ಖುದ್ದಾಗಿ ಯಾ ವಕೀಲರ ಮುಖಾಂತರ ಹಾಜ್ರಾಗಿ ಉದಾಹರಿಸಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರು ಹಾಜರಿಯಲ್ಲಿ ಕೋರ್ಟಿನವರಿಗೆ ಯುಕ್ತ ಕಂಡಂತೆ ಮುಂದುವರಿಸಲಾದೀತು.

(ಕೋರ್ಟ್ ಹ್ಯುಂ ಪ್ರಕಾರ)

ಎ. ಸಿ. ಗೌರೀಶಂಕರ

ವಾದಿ ಕಡೆ ಎಡ್ವೊಕೇಟ್

ಪುತ್ತೂರು, ದ ಕ. ತಾ. 25-7-1972

ಸೇಫ್ ಡಿಪಾಜಿಟ್ ಲಾಕರ್

ನಿಮ್ಮ ಆಭರಣಗಳಿಗೂ,
ಅತಿ ಮುಖ್ಯ ಪತ್ರಗಳಿಗೂ,
ಇತರ ಬೆಲೆಬಾಳುವ ವಸ್ತುಗಳಿಗೂ
ಇಲ್ಲಿವೆ

ESTD. 1906

ಕಾರ್ಪೊರೇಷನ್ ಬ್ಯಾಂಕ್ ಲಿಮಿಟೆಡ್

ಭೂತಪೂರ್ವ

(ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಲಿಮಿಟೆಡ್)

ರಥಬೀದಿ, ಮಂಗಳೂರು — ಫೋನ್ ನಂ. 5057

ಕಂಕನಾಡಿ, ಮಂಗಳೂರು — ಫೋನ್ ನಂ. 7313

ಪುತ್ತೂರು, ಫೋನ್ ನಂ. 164

NAVAYUGA 3-8-1972
Registered with the Registrar of News Papers for India under No. R. N. 3646/'57

REGD. No B. G. 176
LICENCE No. 33
Licensed to Post without Prepayment

ಶ್ರೀಸಾಮಾನ್ಯನ ಸಂಪತ್ತಿನಲ್ಲಿ

ಆಕಾಶವಾಣಿ ಸ್ವಾಯತ್ತವಾಗಲಿ

ಈವರೆಗೆ ಜೂನ್ ತಿಂಗಳ ಹನ್ನೊಂದನೆಯ ದಿನಾಂಕ ನಿಮ್ಮ ದೇಶವಾದ್ಯಂತ ಎಲ್ಲಾ ಆಕಾಶವಾಣಿ ನಿಲಯಗಳವರು ಜನಸಂಘದವರು ಬಿಳಲಿಳಿ ನಡೆಸಿ, ಆಕಾಶವಾಣಿಯನ್ನು ಸ್ವಾಯತ್ತ ಸಂಸ್ಥೆಯಾಗಿ ಪರಿವರ್ತಿಸಬೇಕೆಂದು ಒತ್ತಾಯಿಸಿ ಆಕಾಶವಾಣಿ ಜವಳಿವಾಣಿಯಾಗಲೆಂದು ಘೋಷಿಸಿದರು. ಚಂಡೀಗಢದಲ್ಲಿ ಈ ಜಳವಳಿಯಲ್ಲಿ ಎರಡು ಸಾವಿರಕ್ಕೂ ಮಿಕ್ಕಿ ಕಾರ್ಯಕರ್ತರಲ್ಲಿ ನೂರು ಮಂದಿ ಮಹಿಳೆಯರೂ ಕೂಡಾ ಭಾಗವಹಿಸಿದ್ದರು.

ಜನತೆಗೆ ಉತ್ತಮ ಮನರಂಜನೆ, ವಾರ್ತಾ ಪ್ರಸಾರ, ವಿಚಾರ ದೃಷ್ಟಿ, ಶಿಕ್ಷಣ ಪ್ರಜೋದನೆಗಳೊಂದಿಗೆ ತಾತ್ಕಾಲಿಕ ಸಮಸ್ಯಾ ಪರಿಹಾರಗಳ ನಿವಾರಣೆಗೆಂದು ದೇಶದ ಜನತೆ ಆಕಾಶವಾಣಿಯಲ್ಲಿ ಅಭಿವಾನ ವಿಟ್ಟಿದ್ದರೂ ಅದು ಎಷ್ಟು ಅಸಮರ್ಪಕ ರೀತಿಯಲ್ಲಿ ಸೇವೆ ಮಾಡುತ್ತಿದೆ ಎಂಬುವಕ್ಕೆ ಪ್ರತಿ ಪತ್ರಿಕೆಗಳಕ್ಕೂ ಬರುವ ಮಾರುವ್ಯ ಟೀಕೆಗಳೇ ಉದಾಹರಣೆ. ಸ್ವಾತಂತ್ರ್ಯಾನಂತರದ ದಶಕಗಳಲ್ಲಿ ಆಕಾಶವಾಣಿ ಒಳ್ಳೆಯ ಸೇವೆ ಮಾಡಿಲ್ಲವೆಂದಲ್ಲ; ಮಾಡಿತ್ತು. ಆದರೆ ಒಂದು ದೃಷ್ಟಿಯಲ್ಲಿ ಈಗ ಅಡಳಿತ ಪಕ್ಷದ ಕೈವಾರಿಯೂದ ಅದು ವೈಯುಕ್ತಿಕ ಸುದ್ದಿ ಪ್ರಸಾರದ ಗುತ್ತಿಗೆಯೆಸಿಸಿದ್ದು ನಿಜ. ಜನಸಂಘ ಆರೋಪಿಸಿರುವಂತೆ, 'ಆಕಾಶವಾಣಿಯು ಆಗಾಧ ವಾರ್ತಾ ಪ್ರಸಾರವನ್ನು ರಾಷ್ಟ್ರದ ಮೂಲೆ ಮೂಲೆಯಲ್ಲೂ ಏಕೈಕ ಪರಿಣಾಮಕಾರಿ ಸಾಧನವಾಗಿ ಬಿತ್ತರಿಸಿ, ಅಕ್ಷರವರಿಯದ ಮೂಢರನ್ನು ತಪ್ಪು ದಾರಿಗೆಳೆಯುತ್ತಿದೆ.'

1964ರಲ್ಲಿ ಇಂದಿರಾ ಗಾಂಧಿಯವರು ವಾರ್ತಾ ಮಂತ್ರಿಯಾಗಿದ್ದಾಗ ಆಕಾಶವಾಣಿ ನ್ಯವಸ್ಥಾ ಪುನರ್ರಚನಾ ಘಟನೆಗಾಗಿ ಸ್ಥಾಪಿಸಲ್ಪಟ್ಟ, "ಚಂದಾ ಸಮಿತಿ" ಆಕಾಶವಾಣಿ ಒಂದು ಸ್ವಾಯತ್ತ ಸಂಸ್ಥೆಯಾಗ ಬೇಕೆಂದು ಶಿಫಾರಸು ಮಾಡಿದ್ದರೂ ಅವಸ್ಸನ್ನು ಗಮನಕ್ಕೆ ತಂದಿರಲಿಲ್ಲ–ನಮ್ಮ ಸರಕಾರ. ದಿ| ಜವಾಹರಲಾಲ್ ನೆಹರೂರವರಿಗೆ ಕೂಡಾ ಇದೇ ಹಂಬಲವಿತ್ತಲ್ಲದೆ ಆಕಾಶವಾಣಿಯು ದೆಹಲಿ ಕೇಂದ್ರ ಇಂಗ್ಲೆಂಡಿನಿಂದ ಪ್ರಸಾರವಾಗುವ ಬಿ.ಬಿ.ಸಿ.ಯಂತೆಯೇ ಸ್ವತಂತ್ರ ವಾರ್ತಾ ವಾಹಕವಾಗ ಬೇಕೆಂದಿತ್ತು.

ಸ್ವೀಡನ್ನಿನ ಆಕಾಶವಾಣಿ ಕೇಂದ್ರಗಳು ಸರಕಾರಿ ಇಲಾಖೆಯ ಮೂಲಕ ನಡೆಯುತ್ತಿದೆ, ಬ್ರಾಡ್‌ಕಾಸ್ಟಿಂಗ್ ಕಾರ್ಪೋರೇಷನ್ನಿನ ವ್ಯಾಪ್ತಿಯೊಳಗಿದ್ದು, ಏಕಸತ್ತಾಧಿಕಾರವನ್ನು ಹೊಂದಿದೆ. ನಮ್ಮ ದೇಶದಲ್ಲೂ ಇದೇ ಪದ್ಧತಿ ಬಳಕೆಗೆ ಬರುವುದರಿಂದ ಒಳ್ಳೆಯ ಸಾಹಿತ್ಯ, ಶೈಕ್ಷಣಿಕ ಮತ್ತು ಇತರ ಉಪಯುಕ್ತ ವಿಚಾರ ಪ್ರಸಾರಗಳನ್ನೂ ನಿರೀಕ್ಷಿಸಬಹುದು.

ಜಳವಳಿಯಲ್ಲಿ ಭಾಗವಹಿಸಿದ ಜನಸಂಘದ ಉಪಾಧ್ಯಕ್ಷೆ ಶ್ರೀ ಪರಮೇಶ್ವರನ್ ತರು ಧರಣಿ ಸತ್ಯಾಗ್ರಹ ಹೂಡಿ, "ಬದಲಾಗುತ್ತಿರುವ ರಾಜಕೀಯ ಜಾಲದಿಂದ ಆಕಾಶವಾಣಿಯನ್ನು ದೂರವಿಡ್ಡು, ಮನರಂಜನೆಗೆ, ಜನಶಿಕ್ಷಣಕ್ಕೆ ಪ್ರೌಢ್ಯ ಮಾಧ್ಯಮವಾಗಿ ಸಾಮಾಜಿಕ ಹೊಣೆಯನ್ನು ನಿರ್ವಹಿಸಬೇಕೆಂದು ಬಯಸಿ, ಆಕಾಶವಾಣಿಯನ್ನು ವ್ಯಕ್ತಿ ಪ್ರತಿಷ್ಠೆಯನ್ನು ಸಂಪೂರ್ಣ ನಿಗ್ರಹಿಸಬೇಕೆ"ಂದು ಹೇಳಿದ್ದಾರೆ. ನಿಜ; ಸುದ್ದಿ ಪ್ರಸಾರದಲ್ಲಿ ಆಕಾಶವಾಣಿ ವಹಿಸಿರುವ ಪಕ್ಷಪಾತ ನಿಜಕ್ಕೂ ಅಕ್ಷಮ್ಯ. ಅದು ಜನತೆಯ ಸೇವಕನೇ ಹೊರತು, ಒಂದು ಪಕ್ಷಕ್ಕೆ ವಿಜಯ ಸಾಧಿಸಲು ಬಳಸುವ ಪ್ರಚಾರ ಸಾಧನವಾಗಬೇಕಾದರೆ ಈ ಸ್ವತಂತ್ರ ಭಾರತ ಕಮ್ಯೂನಿಸ್ಟ್ ಮೂಸೆಯಲ್ಲಿದೆಯೇ ಅಲ್ಲ, ಫಾಕಿಸ್ತಾನದಲ್ಲೇ? ಗಾಳಿಯೂದಿದ ಹೆಂಡಿನಂಥ ಸುದ್ದಿಯಿಂದ ಜನತೆಯನ್ನು ಮರುಳುಗೊಳಿಸುವುದು ಸರಿ ಅಲ್ಲ.

ಹಿಂದೆ ರಂಗನಾಥ ದಿವಾಕರರು ಕೇಂದ್ರ ವಾರ್ತಾ ಸಚಿವರಾಗಿದ್ದಾಗ ರೇಡಿಯೋದಲ್ಲಿ ಭಕ್ತಿಗೀತೆಗಳ ಪ್ರಸಾರಕ್ಕೆ, ವಂದೇ ಮಾತರಂ ಬಿತ್ತರಕ್ಕೆ ಎಡೆಯಿತ್ತರು. 1962ರ ಚೀನಾ-ಭಾರತದ ಸಂಗ್ರಾಮದ ಕಾಲದಲ್ಲಿ ಪ್ರಸಾರಕ್ಕಾರಂಭವಾದ ಜನ—ಗಣ—ಮನ ರಾಷ್ಟ್ರಗೀತೆಯನ್ನು ಒಂದು ನೆವನದಲ್ಲಿ ಪ್ರಧಾನಿಯವರು ನಿಲ್ಲಿಸಿಬಿಟ್ಟರು.

ಆಕಾಶವಾಣಿ ಜನತೆಯ ಪ್ರತಿಧ್ವನಿಯಾಗಿ 'ಜನತಾ ವಾಣಿ' ಆಗಬೇಕು. ಪ್ರಧಾನಿಯವರು ಹಾಗೆ ಹೇಳಿದರು, ಹೀಗೆ ಹೇಳಿದರೆಂದು ಸುದ್ದಿಗೆ ಉಪ್ಪುಖಾರ ಹಚ್ಚಿ, ಕಾಮಾಲೆ ಕಣ್ಣಿನಿಂದ ನೋಡುವುದನ್ನು ಬಿಡಬೇಕು. ಪ್ರಚಾರಕ್ಕಾಗಿ ಪತ್ರಿಕೆಗಳಿವೆ. ಹಣ ಕೊಟ್ಟು ಜಾಹೀರಾತು ಹಾಕಿಸಿದರೆ ಸಣ್ಣ ಪತ್ರಿಕೆಗಳೂ ಉಳಿಯುತ್ತವೆ. ಜನತಾ ಸೇವೆಯ ನೆಪದಲ್ಲಿ ಸ್ವಾರ್ಥಸಾಧನೆಯ ಪ್ರಚಾರವನ್ನು ರಾಷ್ಟ್ರೀಯ ಸೊತ್ತಾಗಿರುವ ಆಕಾಶವಾಣಿಯಲ್ಲಿ ಪುಕ್ಕಟೆ ಬಿತ್ತರಿಸುವುದು ಖಂಡನಾರ್ಹ. ಆಕಾಶವಾಣಿಯಲ್ಲಿರುವ ಜಾತೀಯತೆ, ನೀರಸ ಕಾರ್ಯಕ್ರಮ, ವ್ಯಕ್ತಿ ಪ್ರತಿಷ್ಠೆಗಳು ಸಮೂಲಾಗ್ರ ನಾಶ ಹೊಂದಲಿ.

ಈಗ ಸರಕಾರಕ್ಕಿಂತ ದಕ್ಷ ರೀತಿಯಲ್ಲಿ ನಮ್ಮ ಶ್ರೀಸಾಮಾನ್ಯ ಆಡಳಿತ ನಡೆಸಬಲ್ಲನೆಂಬುದಕ್ಕೆ ಸರಕಾರ ರಾಷ್ಟ್ರೀಕರಣ ಮಾಡಿರುವ ಉದ್ದಿಮೆಗಳು ಮೊದಲಿದ್ದುದಕ್ಕಿಂತಲೂ ಅಸಾಫಲ್ಯ ಹೊಂದಿರುವುದೇ ಸಾಕ್ಷಿ. ಆಕಾಶವಾಣಿ ಸ್ವಾಯತ್ತ ಸಂಸ್ಥೆಯಾಗಬೇಕೆಂಬ ಪ್ರಜೆಗಳ ಬಹು ದಿನದ ಬಯಕೆ ಈಡೇರಬೇಕು. ಚೀನಾ, ರಷಿಯದಂಥ ಕಮ್ಯೂನಿಸ್ಟ್ ರಾಷ್ಟ್ರಗಳ ಸರ್ವಾಧಿಕಾರಿಗಳು ಜನತೆಯ ನೆಪಮಾತ್ರದಲ್ಲಿ ಅಧಿಕಾರವನ್ನು ವಶಪಡಿಸಿಕೊಂಡಿದ್ದರೆ ನಮ್ಮ ಪ್ರಜಾಪ್ರಭುತ್ವ ಅದನ್ನು ಧಿಕ್ಕರಿಸಿದೆಯಲ್ಲವೆ?

—ಶ್ರೀ ಹ. ರಾಮಕೃಷ್ಣ ಶಾಸ್ತ್ರಿ.

●●

ನೀನು ಯಾರೆ ?

ಲೇ, ನೀನು ಯಾರೆ ?
ನೆನಪಾಗಿ ಕಾಡುವ ನಿನಗೆ
ಕಕ್ಕಸಿನಲ್ಲೂ ಗಕ್ಕನೆ ದೂರಾಗುತ್ತಿ !
ಕನಸಿನಲ್ಲೂ ಬಂದು ಕಾಡುತ್ತಿ;
ನನ್ನ ಮನೆ ಮುಂದಿರುವ ಹೂ-
ತೋಟಕಿಂತಿ ಸುತ್ತಾಡಿಸಲೂ,
ಕಾಣುವುದು ನಿನ್ನ ಮುಖ್ಖು ಮುಖ-
ಗುಲಾಬಿ ಹೂವಾಗಿ ಅರಳಿ, ಸುಳ್ಳಿನೆಯ,
ಪರಿಮಳವಾಗಿ ಹರಡಿ, ಸಂಪನೆಯ
ಮೊಗ್ಗಾಗಿ ಮಿನುಗಿ ಅಯ್ಯೋಮ್ಮೆ,
ಇಲ್ಲೊಮ್ಮೆ ನಾನಿನ್ನ ಕಂಡಿರಬಹುದು.
ನೀನು ಚೆಲುವಾಗಿ, ಬಳುಕುವ ಬಳ್ಳಿ-
ಸುಳಿದಿರಿ ಬಹುದು ನನ್ನೆದುರು
ನಾನು ಕೆರುನಗೆ ಸೂಚಿ ನಿನ್ನ ನೋಡಿ,
ನಕ್ಕು ನುಡಿದಿರಬಹುದು. ಆಪ್ಪಕ್ಕೆ-
ನನ್ನ ಮನವನು ಹೊಕ್ಕು ನೀನೆಷ್ಟೂ
ಭೂತದ ಹಾಗೆ ಕಾಡಬಹುದೇನೇ ?
ಮದುವೆಯ ವಯಸ್ಸಾದರೂ ಮನಸ್ಸು-
ಆಗದ ಬ್ರಹ್ಮಚಾರಿ ಕಣೆ ನಾನು.
ನಲ್ಲೆಯ ನೆರಳನ್ನೂ ಕಾಣದನನು.
ನಿನ್ನೆ ಮನ ಕೆಡಿಸಿರುವ ನಿನ್ನದೇ-
ಬೆಳ್ಳಿ ನಗು ಮತ್ತೆಲ್ಲಿಯೂ ನಾನು ಕಂಡುಬಿಡಲ್ಲ
ಕಣ್ಣು ಮುಚ್ಚಿದರೂ ತೆರೆದೇ ಇದ್ದರೂ-
ನಿನ್ನೆ ಮುಖ ಕಾಣುವುದು ನನ್ನೆ ಭ್ರಮೆಯೇ ?
ಅಲ್ಲ ನೀನೆಸಗೆ ಬೀಸಿದ ಬಲೆಯೇ ?
ಹಗಲಿರುಳು ನಗೆಯೂಗಿ ನೆನಪಾಗಿ
ಕಾಡುತಿಹ ನೀನಾರು ? ನಿನ್ನ-
ಹೆಸರೇನು ಹೇಳೆ !

—ಶ್ರೀ ರಾಧಾಕೃಷ್ಣ ಪುತ್ತೂರು

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

R. R. G. 59/72

ಮೂಧನ ಉಪಾಧ್ಯಾಯ —ಅರ್ಜಿದಾರ
ಕೊರಪ್ಪೊಳು ಹೆಂಗ್ಸು —ಎದ್ರಿ

ಬೆಳ್ತಂಗಡಿ ತಾಲ್ಲೂ ಮೇಲಂತಬೆಟ್ಟು ಗ್ರಾಮದ ಸುದ್ಕಾರ್ತು ಎಂಬಲ್ಲಿರುವ ಸೋಮ ಮೂಲ್ಯರ ಮಗಳು ವ ಪಕೀರ ಮೂಲ್ಯನ ಹೆಂಡತಿ ಕೊರಪ್ಪೊಳು ಹೆಂಗ್ಸು, ಪೋಷ್ಟು: ಮೇಲಂತಬೆಟ್ಟು, ಪ. ಕ. ಇವರಿಗೆ—

ಅರ್ಜಿದಾರರು ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ ನಿಮ್ಮಿಂದ 31-8-1971ಕ್ಕೆ ಬರತಕ್ಕ ಗೇಣಿ ವಸೂಲಿ ನಿಮ್ಮೆ ದಾಕ್ಲು ಮಾಡಿದ ಮೇಲ್ಕಾಣಿಸಿದ ಅರ್ಜಿಯು ತಾ 5-9-72ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇರುವುದರಿಂದ ಆ ದಿವ್ಸ ಬೆಳಿಗ್ಗೆ 11ಗಂಟೆಗೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ಹಾಜ್ರಾಗಿ ಉದಾವರಿಸತಕ್ಕದ್ದು. ತಪ್ಪಿದ್ದಲ್ಲಿ ಕೋರ್ಟಿನವರಿಗೆ ಯುಕ್ತ ಕಂಡಂತೆ ನುಂಯವರಿಸಲಾದೀತು.

(By order of Court)
Pulu Narayana Bhat
Advocate for Applicant

ಬೆಳ್ತಂಗಡಿ, 24—7—72

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾಗಿ ಎರಡು ರಾಷ್ಟ್ರೀಯ ಹೆದ್ದಾರಿಗಳ ಸುಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಶ್ರೀ ಮೃತ್ಯುಂಜಯ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮುಂಬೈ-೨೫

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ
ಬೆಲೆ 0-75 ಪೈಸೆ ಮಾತ್ರ.
ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.
ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್) ಉಡುಪಿ, ದ. ಕ.

Edited, Printed & Published by K. H. Shetty at the Navayuga Press, Udipi, S. India

ನವಯುಗ

ಸ್ವಾತಂತ್ರ್ಯ ವಿಶೇಷಾಂಕ ೧೯೭೨



NAVAYUGA

INDEPENDECE DAY SPECIAL 1972

೫೦ ಪೈಸೆ

Made out of the finest Materials

MANGALORE GANESH BEEDIES

Smokers cannot afford to miss them

Daily Sales Exceed 4 Crore Beedies

Head office:

MANGALORE GANESH BEEDI WORKS

VINOBA ROAD :: MYSORE-5

Telephone : 20241

Telegrams : AROMA

ಸ್ವಾತಂತ್ರ್ಯ ವಿಶೇಷಾಂಕ 1972

ಸಂಪುಟ: ೫೧ ಸಂಚಿಕೆ: ೪೯

ಸಂಪಾದಕ
ಕೆ. ಹೊಸ್ಮನ್ಯ ಕೆಟ್ಟಿ

ನವಯುಗ

ರಜತೋತ್ಸವದ ಶುಭದಿನದಲ್ಲಿ-ನಮ್ಮ ಸಾಧನೆಗೆ ಆತ್ಮ ವಿಶ್ವಾಸವನ್ನು ಮೂಡಿಸಬೇಕು.

ಇಪ್ಪತ್ತೈದು ವರ್ಷಗಳ ಸ್ವತಂತ್ರರಾಗಿ, ನಾವು ವಿದೇಶಿ ಶೋಷಣೆಯ ಜುಂಗಮುಷ್ಟಿಯಿಂದ ಮುಕ್ತರಾಗಿ ನಮ್ಮ ವರ್ತಮಾನ ಭವಿಷ್ಯಗಳೆರಡನ್ನೂ ರೂಪಿಸುವ ಹೊಣೆಯನ್ನು ನಾವು ನಮ್ಮ ತಲೆಯ ಮೇಲೆ ಹೊತ್ತುಕೊಳ್ಳಲು ಇಪ್ಪತ್ತೈದು ವರ್ಷಗಳು ಕಳೆದವು. ಸೌಭಾಗ್ಯವೆಂದು ನಮ್ಮ ಸ್ವಾತಂತ್ರ್ಯದ ರಜತೋತ್ಸವವನ್ನು ಆಚರಿಸುತ್ತಿದ್ದೇವೆ. ಇದು ಪರಮ ಪವಿತ್ರವಾದ ಸುದಿನ. ಈ ಗಳಿಗೆಯಲ್ಲಿ ನಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಸಾವಿರಾರು ಚೇತನವಾದಿ, ನುಂದವಾದಿ, ಸಮತೋಲನವಾದಿಗಳೆಲ್ಲರ ಪವಿತ್ರಾತ್ಮಗಳನ್ನು ಮನಸಾ ಸ್ಮರಿಸಿಕೊಂಡು ಅವರ್ಕೆ ನಮ್ಮ ಹಾರ್ದಿಕ ಕೃತಜ್ಞತೆಗಳನ್ನು ಸಮರ್ಪಿಸಿ ಶರಣೆನ್ನುವುದು ಸಂಪೂರ್ಣ ಸಮಂಜಸ. ಆ ಬಳಿಕ ಸ್ವಾತಂತ್ರ್ಯದ ಶೈಶವದಲ್ಲಿ, ಬಾಲ್ಯದಲ್ಲಿ ದೇಶವನ್ನು ಒಂದು ಗೂಡಿಸುವಲ್ಲಿ, ಮುನ್ನಡೆಸುವಲ್ಲಿ ವೃಥಾ ಸಂಕಲ್ಪದಿಂದ ಬೆವರು-ನೆತ್ತರೊಂದು ಮಾಡಿದ, ನಮ್ಮೆಲ್ಲರ ಹಿತಚಿಂತನೆಯನ್ನೇ ತಮ್ಮ ಹಿತಚಿಂತನೆಯೆಂದು ಭಾವಿಸಿದ ದೇಶ ಪುನಾರಚನೆಯ ಹೋರಾಟಗಾರರೆಲ್ಲರಿಗೂ ಕೃತಜ್ಞತೆ ಸಲ್ಲಬೇಕು. ದೇಶದ ಈ ಕಾಲದ ನಾಯಕಾಗ್ರಗಣಿಗಳೂ ಅಭಿನಂದನೀಯರೇ.

೧೯೪೭ರ ಆಗಸ್ಟದಿಂದ ೧೯೭೨ರ ಆಗಸ್ಟದವರೆಗೆ ಇಪ್ಪತ್ತೈದು ವರ್ಷಗಳ ಕಾಲಾವಧಿಯ ಕಂಪಕವಿದೆ. ಒಂದು ರಾಷ್ಟ್ರದ ಜೀವನದಲ್ಲಿ ಈ ಕಾಲಮಾನ ಅತ್ಯಂತ ಪ್ರಭಾವಶಾಲಿಯಲ್ಲವೆನ್ನುವ ವಾದ ಕೆಲವರದ್ದಿದ್ದರೂ ನಮ್ಮ ದೇಶದ ಮಟ್ಟಿಗೆ ಈ ಮಾತು ಅನ್ವಯಿಸಲಾರದು. ನಾವು ಈ ಕಾಲು ಶತಮಾನದಲ್ಲಿ ಬಹುಮುಖೀನ ಬೆಳೆದು ಬಂದಿರುವುದು ನಮಗೇ ಮನವರಿಕೆಯಾಗುತ್ತದೆ. ನಮ್ಮ ಜೀವನದ ಮಟ್ಟವೆಂದು ಎಷ್ಟರಮಟ್ಟಿಗೆ ಏರಿದೆ? ನಮ್ಮ ಅವಶ್ಯಕತೆಗಳು ಎಷ್ಟರ ಮಟ್ಟಿಗೆ ಪೆಚ್ಚಿವೆ? ನಮ್ಮ ಆಲೆ-ಆಕಾಂಕ್ಷೆಗಳ ಗಾತ್ರವೆಷ್ಟು ಬೆಳೆದು ನಿಂತಿದೆ? ಇಂದು ನಮ್ಮ ಅವಶ್ಯಕತೆ ದಿನ ಬಳಕೆಯ ವಸ್ತುವಾಗಿರುವ ಕಾಫಿ-ಬ್ರೆಡ್ಡುಗಳನ್ನೇ ತೆಗೆದು ಕೊಂಡಿರಿ, ಇಪ್ಪತ್ತೈದು ವರ್ಷಗಳ ಹಿಂದೆ ಇದು ಭೋಗದ ವಸ್ತುಗಳೆಂಬ ಭಾವನೆಯಿತ್ತೆಂಬುದನ್ನು ಮರೆತು ಬಿಡುವುದು ಹೇಗೆ? ಆ ಕಾಲದಲ್ಲಿ ಕಾಲೇಜು ವಿದ್ಯಾಭ್ಯಾಸವೆಂಬುದು ಬೆರಳೆಣಿಕೆಯ ಶ್ರೀಮಂತರ ಮಕ್ಕಳಿಗೆ ಮಾತ್ರ ದೊರೆಯುತಿತ್ತು. ಆದರೆ, ಇಂದು ಈ ಪರಿಸ್ಥಿತಿ ದೂರವಾಗಿಲ್ಲವೆ? ಪ್ರಯಾಣ ಸೌಲಭ್ಯಗಳು, ಅಂಚೆ-ತಂತಿ ವ್ಯವಹಾರ, ಶಿಕ್ಷಣ, ಆರೋಗ್ಯ, ಯಾತಾಯಾತ ವಸತಿ ಮೊದಲಾದ ನಾಗರಿಕತೆಯ ವಿವಿಧ ಅಂಗಗಳು ನಮ್ಮ ಜೀವನಕ್ರಮದ ಮೇಲೆ, ನಮ್ಮ ಸಂಸ್ಕೃತಿಯ ಮೇಲೆ ಪರಿಣಾಮ ಬೀರಿಲ್ಲವೆ? ಪ್ರಗತಿ ಅಥವಾ ಬೆಳವಣಿಗೆಯೆಂದರೆ, ಕೂಡಿಟ್ಟ ಸಂಪತ್ತೆಂದು ಅರ್ಥವಾಗುವುದಿಲ್ಲ; ಅದು ಬಳಸುತ್ತಿರುವ ಸಂಪತ್ತೇ ಆಗಿದೆ.

ದೇಶದಲ್ಲಿ ಇಪ್ಪತ್ತೈದು ವರ್ಷಗಳ ಕಾಲದಲ್ಲಿ ಮಹತ್ತರವೆನಿಸಿದ ಕ್ರಾಂತಿ ಸಾಧನೆಯಾಗಿದೆ-ಗಾಂಧೀ ತ್ರಾತ ತೋರಿಸಿದ ಅಹಿಂಸಾತ್ಮಕ ವಿಧಾನದಲ್ಲಿ. ಈ ಕ್ರಾಂತಿಯ ಪರಿಣಾಮವಾಗಿ ನಮ್ಮ ಆಹಾರೋತ್ಪಾದನೆ ದ್ವಿಗುಣಿತವಾಗಿದೆ. ವಿದ್ಯುತ್ತಿನ ಉತ್ಪಾದನೆ ಹತ್ತುಪಟ್ಟು ಹೆಚ್ಚಿದೆ. ಲೋಹದ ಉತ್ಪಾದನೆ ನಾಲ್ಕು ಪಾಲು ಅಧಿಕಗೊಂಡಿದೆ. ಕೈಗಾರಿಕೆ ಮುಮ್ಮುಡಿಯಾಗಿದೆ. ಪ್ರತಿ ವ್ಯಕ್ತಿಗೆ ಅಂದು ದೊರೆಯುತ್ತಿದ್ದ ವ್ಯಕ್ತಿ ಸೌಲಭ್ಯಗಳ ಮೂಸ ಒಂದು ಎಂದು ಇಟ್ಟುಕೊಳ್ಳುವುದಾದರೆ, ಈ ಇಪ್ಪತ್ತೈದು ವರ್ಷಗಳಲ್ಲಿ ಅದು ಎರಡಾಗಿರುವುದು ಕಡಿಮೆ ಮಹತ್ವದ ಸಂಗತಿಯಲ್ಲ. ಅರಿಂದ ೧೧ ವರ್ಷದ ಮಕ್ಕಳಲ್ಲಿ ಇಂದು ಸೇ. ೮೦ರಷ್ಟು ಪ್ರಾಥಮಿಕ ಶಾಲೆಗಳಲ್ಲಿ ಹೆಸರು ನೊಂದಾಯಿಸಿವ್ವಾರೆ. ಶಾಲೆಗೆ ಹೋಗುವ ಮಕ್ಕಳ ಸಂಖ್ಯೆ ಸುಮಾರು ಎಂಟೂವರೆ ಕೋಟಿಯನ್ನು ತಲುಪಿ ಅಂದಿಗಿಂತ ಮೂರು ಪಾಲು ಹೆಚ್ಚಿದೆ. ನಮ್ಮ ಹಳ್ಳಿಗಳಲ್ಲಿ ಅಂದು ಒಂದಕ್ಕೆ ಮಾತ್ರ ವಿದ್ಯುತ್ತಿನ ಸೌಲಭ್ಯವಿತ್ತು; ಇಂದು, ಹನ್ನೆರಡು ಹಳ್ಳಿಗಳಿಗೆ ಈ ಸೌಲಭ್ಯ ದೊರೆಯುವಂತಾಗಿದೆ. ಆಹಾರಾಭ್ಯಾಸ- ಆರೋಗ್ಯಾಭ್ಯಾಸಗಳಿಂದಾಗಿ ನಮ್ಮ ಸರಾಸರಿ ಆಯುರ್ಮಾನವೇ ಇಮ್ಮಡಿಗೆ ಹತ್ತಿರವಾಗಿದೆ. ನಮ್ಮ ಸಾಧನೆಯನ್ನು ನಾವು ಅಭಿಮಾನದಿಂದ ನೋಡಬೇಕು. ನೋಡಿ ಹೆಮ್ಮೆ ಪಡಬೇಕು.

ಮೊದಲೇ ಹಿಂದುಳಿದ ದೇಶ, ಅದರ ಜೊತೆಗೆ ಏರುತ್ತಿರುವ ಜನಸಂಖ್ಯೆ ಮತ್ತು ಪ್ರಗತಿ ಕುಂಠಿಕನೆನಿಸಿದ ನೈಸರ್ಗಿಕ ಹಾಗೂ ಲೌಕಿಕ ಸನ್ನಿವೇಶಗಳಿಂದ ನಮ್ಮ ಪ್ರಗತಿಯು ನಮ್ಮ ನಿರೀಕ್ಷೆಯ ಅತಿ ಸಾಧನೆಯಾಗಿಲ್ಲವೆಂಬ ಕೊರಗು ಇದೆ, ಆದರೆ; ಕಷ್ಟ ಕಾರ್ಪಣ್ಯಗಳೆಲ್ಲವನ್ನೂ ರಾತ್ರಿ ಬೆಳಗಾಗುವುದರೊಳಗೆ ಹೊರ ದಬ್ಬುವುದು ಯಾರಿಂದಲೂ ಅಸಾಧ್ಯ. ಪ್ರಗತಿಗೆ ದೈರ್ಘ್ಯತೆಯೆಂಬ ಜೇಕು, ಗುರಿವಲಯಿಟ್ಟುವ ಬಗ್ಗೆ ಆತ್ಮ ನಿರ್ವಾಸಬೇಕು ನಮ್ಮ ಕಾಲಾಶತಮಾನದ ಸಾಧನೆ ನಮಗೆ ಇಂತಹ ವಿಶ್ವಾಸವನ್ನು ಮೂಡಿಸುತ್ತಿಲ್ಲವೆ? ಪೂರ್ವಾಗ್ರಹ ಪೀಡಿತರಾಗದೆ ಹೇಳುವುದಾದರೆ, ಈ ಪ್ರಶ್ನೆಗೆ ಸಕಾರಾತ್ಮಕ ಉತ್ತರ ದೊರೆತೇ ದೊರೆಯುತ್ತದೆ. ದೇಶದಲ್ಲಿ ಶಿಕ್ಷಣ ಪ್ರಸಾರವು ವಿಸ್ತರಿಸಿದಂತೆ, ಜ್ಞಾನಸಾಧನಗಳು ಹೆಚ್ಚಿದಂತೆ ಈಗಾಗಲೇ ಬೇರು ಬಿಟ್ಟಿರುವ ಪ್ರಜಾತಂತ್ರ ಮತ್ತಷ್ಟು ದೃಢವಾಗಿಯೇ ಆಗುತ್ತದೆ.

ಕರ್ತವ್ಯನಿಷ್ಠ
ಶ್ರೀ ಕೆ. ಕೆ. ಪೈ

ಸ್ವಯಂ ಪ್ರತಿಭೆ. ಅನುಭವ, ಆಸಕ್ತಿ ಮತ್ತು ನಿಷ್ಠೆಯ ದುಡಿಮೆಗೆ ಹೆಸರಾದ ವ್ಯಕ್ತಿ ಶ್ರೀ ಕೆ.ಕೆ.ಪೈ. ಅವರಲ್ಲಿರುವ ಈ ಅನುಪಮಗುಣಗಳೇ ಅವರನ್ನು ಬ್ಯಾಂಕಿನ ಕಸ್ಟೋಡಿಯನ್ ಹುದ್ದೆಯನ್ನು ಕೊಡ ಮೂಡಿದುವೆಂದರೆ ಅತ್ಯರ್ಥವಲ್ಲ. ಬ್ಯಾಂಕಿನ ಬಾಲ್ಯದಲ್ಲಿ ಡಾ|| ಟಿ.ಎ ಎ. ಪೈಯವರ ದಕ್ಷ ಮಾರ್ಗದರ್ಶನ, ತಾರುಣ್ಯದಲ್ಲಿ ಶ್ರೀ ಟಿ.ಎ.ಪೈಯವರ ಅವಿಸ್ಮರಣೀಯ ನಾಯಕತ್ವದಲ್ಲಿ ಬೆಳೆದು ಬಂದ ಸಿಂಡಿಕೇಟ್ ಬ್ಯಾಂಕ್ ಶ್ರೀ ಕೆ. ಕೆ. ಪೈಯವರ ಸೂತ್ರಧಾರತನದಲ್ಲಿ ತನ್ನ ಪರಂಪರೆಯನ್ನು ಉಳಿಸಿಕೊಂಡಿದ್ದು ಮಾತ್ರವಲ್ಲ, ಬೆಳೆಸಿಕೊಂಡೂ ಇದೆ.

ಶ್ರೀ ಕೆ.ಕೆ. ಪೈಯವರಲ್ಲಿ ಇಂದ್ರಜಾಲ ಶಕ್ತಿಯಿದೆ ಎನ್ನುವವರೂ ಇವ್ವಾರೆ. ರಾಷ್ಟ್ರೀಕರಣಾನಂತರ ಬ್ಯಾಂಕಿನ ಜೀವಣಿ, ಜೀವಣಿವಾರರು, ನೀಡಿದ ಸಾಲ, ರಾಜೆಗಳು ಎಲ್ಲ ಸಂಖ್ಯೆಯೂ ಸುಮಾರು ಇಮ್ಮಡಿಗೆ ಹತ್ತಿರವಾಗಿದೆ.ಇಲ್ಲವೇ ವಿಸ್ತರಿಸಿದೆ. ಇದನ್ನು ಜಾದುವೆಂದು ಕರೆಯುವುದಾದರೆ, ಅದು ಶ್ರೀ ಪೈಯವರಲ್ಲಿದ್ದೇ ಇದೆ. ಶ್ರೀ ಪೈಯವರು ಬ್ಯಾಂಕಿಂಗಿನ ಎಲ್ಲ ರಂಗಗಳಲ್ಲೂ ಸುಳಿಸುಳಿದು ಬೇಕಾದಂಥ ಬಂದವರು. ಸ್ವಪರಿಶ್ರಮ- ಮತ್ತು ಸ್ವಶಕ್ತಿತ್ವಗಳಿಂದ ರೂಪಿತರಾದವರು. ಅಪಾರ ಅನುಭವ ಅವರಿಗೆ ಒಂದೊಂದು ಕ್ಷೇತ್ರದಲ್ಲಲ್ಲ, ಎಲ್ಲ ಕ್ಷೇತ್ರಗಳಲ್ಲೂ. ಆದುದರಿಂದಲೇ ಬಹುಜನಪ್ರಿಯರು, ಜನನಾಯಕರೂ ಹೌದು.

ಪ್ರಜಾಸತ್ತೆಯಲ್ಲಿ ಪೌರ ಪ್ರಜ್ಞೆ ಬೆಳೆಯಬೇಕು. ಪೌರನಿಗೆ ಕೆಲವು ಅಧಿಕಾರಗಳಿರುವಂತೆಯೇ ಜವಾಬ್ದಾರಿಗಳೂ ಇವೆ. ತನ್ನ ಕರ್ತವ್ಯಗಳನ್ನು ನಿರ್ವಂಚನೆಯಿಂದ ನಿರ್ವಹಿಸದ ಪೌರನಿಗೆ ಅಧಿಕಾರಗಳು ಸಿಗಲಾರವು. ಈ ದೃಷ್ಟಿಯಿಂದ ಶ್ರೀ ಪೈಯವರು ಉತ್ತಮ ಪೌರರು. ಅವರು ಒಂದು ನಿಮಿಷವನ್ನಾದರೂ ವ್ಯರ್ಥ ಹಾಳುಮಾಡುವವರಲ್ಲ; ತನ್ನನ್ನು ಬ್ಯಾಂಕಿಗೆ ಸಮರ್ಪಿಸಿಕೊಂಡು ಅದರ ಪುರೋಭಿವೃದ್ಧಿಗಾಗಿ ಅಹರ್ನಿಶಿ ದುಡಿಯುವವರು. 'ತಾವೇಕೆ ಇಷ್ಟೊಂದು ಕಾಳಜಿ ವಹಿಸುತ್ತೀರಿ? ತಮ್ಮೊಬ್ಬರಿಂದಲೇ ಉದ್ದೇಶ ಯಶಸ್ವಿಯಾಗುವುದೆ?' ಎಂದು ಯಾರಾದರೂ ಕೇಳಿದರೆ, 'ನಾನು ನನ್ನ ಆತ್ಮವನ್ನು ವಂಚಿಸಲಾರೆ; ನನಗಿದರಿಂದ ತೃಪ್ತಿ ದೊರೆಯುತ್ತದೆ' ಎಂದು ಶ್ರೀ ಪೈಯವರು ಹೇಳುವಾಗ ಶಿವಾಜಿಯಲ್ಲೇ ಶೀಲವಿಲ್ಲವಾದರೆ ಆತನ ಪ್ರಜೆಗಳಲ್ಲಿ ಎಲ್ಲಿಂದ ಬರಬೇಕು ಎಂದ ಛತ್ರಪತಿ ಶಿವಾಜಿಯ ಉದ್ಗಾರ ನೆನಪಿಗೆ ಬರುತ್ತದೆ. ತಮ್ಮಂಥಹ ಹತ್ತು ಜನರು ಸರಕಾರಿ ಕಛೇರಿಗಳಲ್ಲಿರುತ್ತಿದ್ದರೆ, ದೇಶದ ಆಡಳಿತ ವ್ಯವಸ್ಥೆಗೇ ಹೊಸ ತಿರುವು ಮೂಡುತ್ತಿತ್ತು ಎಂದು ಶ್ರೀಸಾಮಾನ್ಯನ ಹೃದಯ ಮಾರ್ದುಡಿಯಲೇ ಬೇಕಾಗುತ್ತದೆ.

ಶ್ರೀ ಪೈಯವರು ಸಿಂಡಿಕೇಟ್ ಎಗ್ರಿಕಲ್ಚರಲ್ ಕೌಂಡೇಶನ್ನಿನ ಅಧ್ಯಕ್ಷರೂ ಆಗಿದ್ದಾರೆ. ಈಗ ಅವರು ಇದೇ ಮಾದರಿಯ ಆಲಿಲಭಾರತ ಮಂಡಳಿಯೊಂದರ ಸದಸ್ಯರಾಗಿ ನೇಮಕರಾಗಿದ್ದಾರೆ. ಭಾರತೀಯ ಕೃಷಿ ಸಂಶೋಧನಾ ಮಂಡಳಿಯು ಇತ್ತೀಚೆಗೆ ಸಂಘಟಿಸಿದ ಸಣ್ಣ ಹಿಡುವಳಿಗಳ ಸಮರ್ಪಕ ನಿರ್ವಹಣೆಯ ರಾಷ್ಟ್ರೀಯ ಅಧ್ಯಯನ ತಂಡಕ್ಕೆ; ಈ ಹೊಸ ಮಂಡಳಿ. ಶ್ರೀ ಪೈಯವರೂ ಅವರ ಆಡಳಿತೆಯಲ್ಲಿರುವ ಬ್ಯಾಂಕೂ ಕೃಷಿ ರಂಗದಲ್ಲಿ ಸಲ್ಲಿಸಿದ ಸೇವೆ ಪ್ರಾತಃಸ್ಮರಣೀಯವಾದುದು. ಶ್ರೀ ಪೈಯವರನ್ನು ಅಧ್ಯಯನ ತಂಡ ಸದಸ್ಯರಾಗಿ ಪಡೆದು ನಮ್ಮನ್ನಾವ್ಪೆಂದು ಹೇಳಬಹುದು.

ಶ್ರೀಮತಿ ಇಂದಿರಾ ಗಾಂಧಿಯವರ ನಾಯಕತ್ವದಲ್ಲಿ ದೇಶ ಹೊಸದೀಕ್ಷೆ ಹೊತ್ತು ನುಗ್ಗುವೆಯಲಾರಂಭಿಸಿವೆ ದೇಶದ ಹಲವು ಜಟಿಲ ಸಮಸ್ಯೆಗಳನ್ನು ಪರಿಹರಿಸುವ ಯಥಾರ್ಥ ಪ್ರಯತ್ನದಲ್ಲಿ ಆಕೆ ನಿರತರಾಗಿದ್ದಾರೆ. ಇವುಗಳೆಲ್ಲ ಯಶಗಳಸಬೇಕು - ಆಗ ನಮ್ಮ ಪ್ರಗತಿಮಾರ್ಗ ಭವಿಷ್ಯತ್ತಿಗೊಂದು ಉತ್ತೇಜನ ದೊರಕಿ, ನಾವು ಬೇಗನೇ ಗುರಿ ತಲಪುವುದು ಸಾಧ್ಯವಾಗುತ್ತದೆ. ಪ್ರತಿಯೊಬ್ಬ ಭಾರತೀಯನಿಗೂ ಕನಿಷ್ಠ ಆವಶ್ಯಕತೆಗಳನ್ನು ಒದಗಿಸುವುದು ನಮ್ಮ ಗುರಿಯಾಗಬೇಕು. ಮುಂದಿನ ವರ್ಷಗಳಲ್ಲಿ ನಮ್ಮ ಸಾಧನೆ ಈ ಮುಖವಾಗಿ ಹರಿಯಬೇಕು. ನಮ್ಮಲ್ಲಿ ನಮ್ಮ ಶಕ್ತಿಯಲ್ಲಿ ನಮಗೆ ಹುಟ್ಟಿದ ನಂಬುಕೆಯಿಂದ ಹೋರಾಡಿ ನಾವು ಶಪಥಗೈದಲ್ಲಿ ಅಜೇಯರೆನಿಸಿಕೊಂಡೆವು; ಇದೇ ಆತ್ಮ ವಿಶ್ವಾಸದಿಂದ ದುಡಿದುಪ್ರಗತಿಯ ಏಣಿಯೇರಿ ನಾವು ಯಶಗಳಸಬೇಕು.

ಜೈಹಿಂದ್ ●

ನವಯುಗ ಸ್ವಾತಂತ್ರ್ಯ ಸಂಚಿಕೆ ೧೯೭೨

ದಕ್ಷಿಣ ಕನ್ನಡದ ಅಮೋಘ ಕೊಡುಗೆ

ಶ್ರೀ ಎಂ. ವಾಸುದೇವ ರಾವ್

ನಮ್ಮ ರಾಷ್ಟ್ರದ ಸ್ವಾತಂತ್ರ್ಯ ಸಮರವು ಸುಮಾರು ಒಂದು ಶತಮಾನ ಕಾಲ ನಡೆಯಿತು. ಆದರೆ ರಾಜಕೀಯ ರಂಗದಲ್ಲಿ ಮಹಾತ್ಮಾ ಗಾಂಧೀಜಿಯವರ ಪ್ರವೇಶಾನಂತರ ಮಾತ್ರವೇ ಅದಕ್ಕೊಂದು ರಾಷ್ಟ್ರ ವ್ಯಾಪಕ, ಜನಜಾಗೃತಿಯ ಸ್ವರೂಪ ಬಂತು. ಆವರು ರಾಷ್ಟ್ರೀಯ ಕಾಂಗ್ರೆಸಿನ ಧುರೀಣರಾದ ಮೇಲೆ, ಅವರ ನೇತೃತ್ವದಲ್ಲಿ ನಮ್ಮ ರಾಜಕೀಯ ಬಿಡುಗಡೆಗಾಗಿ 1920 ರಿಂದ ನಡೆದ ಚರಿತ್ರಾರ್ಹವಾದ ಹೋರಾಟದ ಅನೇಕ ಘಟ್ಟಗಳಲ್ಲಿ, 1920–22ರ ಸಹನಯ ಕಾಯದೆ ಭಂಗ, 1930–32ರ ಉಪ್ಪಿನ ಸತ್ಯಾಗ್ರಹ ಮತ್ತು ಅದರ ಉತ್ತರಕಾಂಡ; 1940–41ರ ವೈಯಕ್ತಿಕ ಸತ್ಯಾಗ್ರಹ ಮತ್ತು ಕೊನೆಯದಾದ 1942ರ (ಭಾರತದಿಂದ ತೊಲಗಿರಿ— "ಚಲೇಜಾವ್") ಚಳವಳಿ — ಇವು ಮಹತ್ವದವು. ಭಾರತದ ಇತರೆಡೆಗಳಂತೆ ದಕ್ಷಿಣ ಕನ್ನಡ ಜಿಲ್ಲೆಯೂ ಈ ಹೋರಾಟದ ಎಲ್ಲ ಘಟ್ಟಗಳಲ್ಲೂ ಭಾಗವಹಿಸಿತ್ತಷ್ಟೇ ಅಲ್ಲ, 'ಗಾಂಧಿ ಜಿಲ್ಲೆ' ಎಂಬ ಕೀರ್ತಿಯನ್ನೂ ಗಳಿಸಿತ್ತು. ಆ ಹೋರಾಟದ ದಿನಗಳಲ್ಲಿ ಮಹಾತ್ಮಾಜಿಯವರ ಆದೇಶವಂತೆ ಕಣಕ್ಕೆ ಧುಮುಕಿದವರು ಸಾವಿರಾರು ಮಂದಿ; ಅವರು ಅನುಭವಿಸಿದ ಕಷ್ಟ ನಷ್ಟಗಳೂ, ನೋವು ನಲಿವುಗಳೂ ಹೇರಳ. ಅನೇಕರು ಲಾಕಿ ಏಟು, ಗೋಲಿಬಾರು, ಸಜೆ, ಫಿಸೇಧ, ದಿಗ್ಬಂಧನಗಳಿಗೊಳಗಾದರು; ಉದ್ಯೋಗ ಅಥವಾ ಆರ್ಥಿಕ ನಷ್ಟಗಳೂ ಬೇರೆ. ಹಾಗೆ ಭಾಗವಹಿಸದೆ ಇದ್ದರೂ ದೇಶ ಪ್ರೇಮ ಪ್ರೇರಿತರಾಗಿ ಎಲ್ಲ ವರ್ಗಗಳ, ಎಲ್ಲ ವೃತ್ತಿಗಳ ಅಸಂಖ್ಯ ಜನರು ಅಪ್ರತ್ಯಕ್ಷವಾಗಿಯೂ, ವಿಧಾಯಕ ಕಾರ್ಯಕ್ರಮಗಳಿಂದಲೂ, ಇತರ ಪ್ರೋತ್ಸಾಹ—ಸಹಕಾರಗಳಿಂದಲೂ ಆ ಹೋರಾಟಕ್ಕೆ

ದೇಶವ್ಯಾಪಿಯಾಗಿ ಸ್ವಾತಂತ್ರ್ಯ ಸಮರ ಹರಡಿದಾಗ ದಕ್ಷಿಣ ಕನ್ನಡವೊಂದು ಅದಕ್ಕೆ ಅಸಾವಾದವಾಗಿರಲಿಲ್ಲ. ಶ್ರೀ ಕಾರ್ನಾಡು ಸದಾಶಿವರಾಯರು ದೇಶಭಕ್ತರಾಗಿ ತನ್ನ ಸರ್ವಸ್ವವನ್ನೂ ಸಮರ್ಪಣೆ ಗೆಯ್ದ ಇತಿಹಾಸದ ಸ್ಮರಣೆಯನ್ನು ಅದು ಮಾಡದಿಲ್ಲ.

ಸದಾ ನೆರವು ನೀಡುತ್ತಾ ಬಂದಿದ್ದರೆಂಬುದನ್ನೂ ಮರೆಯಲಾಗದು. ಆ ಹೋರಾಟದ ಅವಧಿಯೇ ರಾಷ್ಟ್ರಭಕ್ತಿ ಪೋಷಕ ಸಾಹಿತ್ಯ ನಿರ್ಮಾಣದ ಕಾಲವೂ ಆಗಿತ್ತೆಂಬುದು ಇನ್ನೊಂದು ಗಮನಾರ್ಹ ವಿಷಯ. ಕಾರ್ಮಿಕರ ಮತ್ತು ಮಹಿಳೆಯರ ಜಾಗೃತಿ ಕಾರ್ಯಗಳು ಮುನ್ನಡೆದುದು ಆಗಲೇ. ಈ ಬಗೆಯಲ್ಲಿ ಸಮಗ್ರ ರಾಷ್ಟ್ರೀಯ ಜೀವನವು ಸ್ವಾತಂತ್ರ್ಯದ ಹೆಂಬಲದಲ್ಲಿದ್ದುದು ಆ ಹೋರಾಟದ ಅಂತಿಮ ಯಶಸ್ಸಿನ ಕಾರಣಗಳಲ್ಲೊಂದು; ಅಂತರ್ ರಾಷ್ಟ್ರೀಯ ಪರಿಸ್ಥಿತಿಯು ಮತ್ತೊಂದು. ಹೇಗೂ ಕಾಲಾನುಗಾಮಿ ಬಂತು; 1947ರಲ್ಲಿ ಭಾರತ ಸ್ವತಂತ್ರ ರಾಷ್ಟ್ರವಾಯಿತು. ಇಂದು (15-8-1972) ನಮ್ಮ ಸ್ವಾತಂತ್ರ್ಯೋದಯದ ಬೆಳ್ಳಿಯ ಹಬ್ಬದ ದಿನ. ಈ ಸಂದರ್ಭದಲ್ಲಿ ಹಿನ್ನೋಟ ಮುನ್ನೋಟಗಳೆರಡೂ ಅಗತ್ಯ. ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟದಲ್ಲಿ ಭಾಗವಹಿಸಿದವರ, ರಾಷ್ಟ್ರಕ್ಕಾಗಿ ತ್ಯಾಗ ಮಾಡಿದವರ ಉಪಕಾರ ಸ್ಮರಣೆ ಹಿನ್ನೋಟದ ಅಂಶ; ಭಾರತದ ಭದ್ರತೆ ಮತ್ತು ಸಂಪನ್ನತೆಗಳಿಗಾಗಿ ದುಡಿಮೆ ಮುನ್ನೋಟದ ಭಾಗ. ನಮ್ಮ ಜಿಲ್ಲೆಯನ್ನಷ್ಟೇ ಗಮನದಲ್ಲಿರಿಸಿದರೆ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲುಗೊಂಡವರಲ್ಲಿ ಅಗ್ರಗಣ್ಯರಾದವರು ಹಲವರು.

ದಿವಂ. ದೇಶಭಕ್ತ ಕಾರ್ನಾಡು ಸದಾಶಿವರಾಯರು

ರಾಷ್ಟ್ರೀಯ ಇತಿಹಾಸದ ಮಟಗಳಲ್ಲಿ ದಕ್ಷಿಣ ಕನ್ನಡಕ್ಕೊಂದು ಸ್ಥಾನ ದೊರಕಿಸಿದವರಲ್ಲಿ ತ್ಯಾಗಮೂರ್ತಿ ದಿವಂ. ದೇಶಭಕ್ತ ಕಾರ್ನಾಡು ಸದಾಶಿವ (1881–1937) ರಾಯರೇ ಮೊತ್ತ ಮೊದಲಿಗರು. ನಮ್ಮ ಜಿಲ್ಲೆಯಲ್ಲಿ "ದೇಶ ಭಕ್ತ"ರೆಂಬ ಅಭಿಧಾನ ಅವರೊಬ್ಬರಿಗೇ ಇಂದಿಗೂ ಮೀಸಲು. ಶ್ರೀಯುತರು ಆಗರ್ಭ ಶ್ರೀಮಂತ ಮನೆತನದಲ್ಲಿ ಜನಿಸಿದರು. ತನ್ನ ಎಲ್ಲ ಸಂಪತ್ತನ್ನೂ ದೇಶಕ್ಕಾಗಿ ಧಾರೆ ಎರೆದರು. ಅವರ ಜೀವನಪು ಮೂಸುವ ಪ್ರೀತಿ, ಗಾಂಧಿ ಭಕ್ತಿ, ಉಜ್ವಲ ರಾಷ್ಟ್ರಾಭಿಮಾನಗಳ ತ್ರಿವೇಣಿ ಸಂಗಮವೆನಿಸಿತ್ತು. ಸಮರ್ಪಣ ಭಾವನೇ ಅವರ ಜೀವನಾದರ್ಶ.

1881ನೆಯ ಎಪ್ರಿಲ್ ತಿಂಗಳಲ್ಲಿ ಯುಗಾದಿಯ ಹಬ್ಬದ ದಿನ ಅವರ ಜನನವಾಯಿತು. ತಂದೆ ರಾಮಚಂದ್ರ ರಾವ್ ಮಂಗಳೂರಿನ ಸಾರಸ್ವತ ಸಮಾಜಕ್ಕೆ ಸೇರಿದ ಪ್ರತಿಷ್ಠಿತ ನೇಕಾರರು. ತಾಯಿ ರಾಧಾಬಾಯಿಯವರು ಶಾಧ್ವಿ, ಕರುಣಾ ಮೂರ್ತಿ, ಮತ್ತು ಧೈರ್ಯಶಾಲಿ. ಸದಾಶಿವರಾಯರು ವಿದ್ಯಾರ್ಥಿಯಾಗಿದ್ದಾಗಲೇ ಸದಾ ಬಡ ಹುಡುಗರಿಗೆಯೆಂತಾಗಿ ಅವರ ಸುಖ ದುಃಖಗಳಲ್ಲಿ ತಾನೂ ಪಾಲುಗಾರನೆಂಬ ಭಾವ ನೆಯುಳ್ಳವನಾಗಿದ್ದರು. ಮಂಗಳೂರಿನ ಗಣಪತಿ ಹೈಸ್ಕೂಲ್, ಗವರ್ನಮೆಂಟ್ ಕಾಲೇಜ್ ಮತ್ತು ಪುಣ್ಯಾಸಿಲ್ ಪ್ರೆಸಿಡೆನ್ಸಿ ಕಾಲೇಜು ಗಳಲ್ಲಿ ಅವರ ವ್ಯಾಸಂಗ ಸಾಗಿತು. ಮುಂದೆ ಮುಂಬೈನಲ್ಲಿ ನ್ಯಾಯಶಾಸ್ತ್ರ ತೀಕ್ಷ್ಣ ಪಡೆದು, ಮಂಗಳೂರಿಗೆ ಬಂದು ವಕೀಲ ವೃತ್ತಿಗೆ ಸೇರಿಕೊಂಡ ಮೇಲೆ ಅವರ ಚಟುವಟಿಕೆಗಳ ಕ್ಷೇತ್ರ ಬಹಳ ವಿಸ್ತಾರಗೊಂಡಿತು. ಸುಟ್ಟು ಸಿರಿತನದೆ ಜೊತೆಗೆ ಕೈತುಂಬ ಸಂಪಾದನೆ, ಅಕ್ಷರಶಃ ಸಹಧರ್ಮಿಣಿಯೂ ಆದ ಪತ್ನಿ ಶಾಂತಾಬಾಯಿ ಇವರ ನೆರವು—ಇವೆಲ್ಲವೂ ಅವರು ಕೈಗೊಂಡ ಸಾಮಾಜಿಕ ಸುಧಾರಣಾ (ಪ್ರಶೇಷತಃ ಅಬಲೆಯರ ಮತ್ತು ಹಿಂದುಳಿದ ವರ್ಗಗಳ ಸೇವೆ) ಕಾರ್ಯಗಳಿಗೆ ಸಹಾಯಕವಾದವು. ಪತ್ನಿ ಶಾಂತಾಬಾಯಿಯವರೆಲ್ಲ ಸಹಕಾರದಿಂದ ಸ್ತ್ರೀಯರಿಗೆ ಉಚಿತ ಮತ್ತು ಉಪಯುಕ್ತ ಶಿಕ್ಷಣ ವ್ಯವಸ್ಥೆ ನೀಡುವ 'ಮಹಿಳಾ ಸಭೆ'ಯ ಉದಯವಾಯಿತು.

ದಕ್ಷಿಣ ಆಫ್ರಿಕೆಯ ಸತ್ಯಾಗ್ರಹದಲ್ಲಿ ಆ ದಾಗಲೇ ವಿಜಯಿಯಾಗಿ ಮಹಾತ್ಮಾ ಗಾಂಧೀಜಿಯವರು ಭಾರತಕ್ಕೆ ಬಂದಿದ್ದರು. ಆಗ (1917) ಸದಾಶಿವರಾಯರು ಗಾಂಧೀಜಿಯವರಿಗೊಂದು ಪತ್ರ ಬರೆದರು. ಅದು ಗಾಂಧೀಜಿಯವರ ಅದ್ಭುತ ಕಾರ್ಯಶಕ್ತಿಯನ್ನು ಕಂಡುಕೊಂಡ ಸದಾಶಿವರಾಯರ ರಾಜಕೀಯ ದೂರದೃಷ್ಟಿಯ ಸೂಚಕವಾಗಿತ್ತು. ಅಂದಿನಿಂದ ಬೆಳೆದು ಬಂದ ಗಾಂಧೀಜಿ-ಸದಾಶಿವರಾಯರ ಗಾಢ ಸ್ನೇಹವು ಜೀವನಪೂವಿಡೀ ಮುಂದುವರಿಯಿತು. 1919ನೆಯ ವರ್ಷ ಕಾಂಗ್ರೆಸ್ ಇತಿಹಾಸದಲ್ಲಿ ಚಿರಸ್ಮರಣೀಯ ವರ್ಷ. ಗಾಂಧೀಜಿ ರೌಲೆಟ್ ಸುಸೂದೆಯ ವಿರುದ್ಧ ರಾಷ್ಟ್ರವ್ಯಾಪ್ತಿಯ ಅಸಹಕಾರದ ಕರೆಕೊಟ್ಟರು. ಆ ಕರೆಗೆ ಓಗೊಟ್ಟು ಸತ್ಯಾಗ್ರಹ ಪ್ರತಿಜ್ಞೆಗೆ ಮೊಟ್ಟ ಮೊದಲು ಸಹಿ ಹಾಕಿದವರು ಕಾರ್ನಾಡು ಸದಾಶಿವರಾಯರು. ಆವರ ಸಮಾಜಸೇವಾ ಕಾರ್ಯಗಳೊಡನೆ ರಾಜಕೀಯ ಚಳವಳಿಪ್ತ ಸೇರಿಕೊಂಡಿತು. ಮುಂಬೆ 1920ರಲ್ಲಿ ಅಸಹಕಾರ ಚಳವಳವನ್ನು (ಪಡಶಿಕ್ಷ ಕ್ಷೇತ್ರ, ನ್ಯಾಯಾಲಯ, ಶಾಲೆ ಕಾಲೇಜ್—ಬಹಿಷ್ಕಾರ, ಸ್ವ

(ಮೂಲತ್ತೀಲಿನ ಸಂಚಿ ನೋಡಿರಿ)

ಕುಂದಾಪುರ 2nd Adl. ಮುನ್ಸಿಫ್ ಕೋರ್ಟಿನಲ್ಲಿ

R. R. C. 1044/1970

ಅರ್ಜಿದಾರ —ಕುಸ್ಪಯ್ಯ ಯೂನ ನೆಂಕಟ್ರಮಣ ಬ್ಯಾರಿ

ಎದ್ರಿರು —ಶಾಂತಾರಾನು ಕೂಡಪ

ಕುಂದಾಪುರ ತಾಲ್ಲು ಕೋಟೇಶ್ವರ ಗ್ರಾಮದಲ್ಲಿರುವನರು ಗೋವಿಂದ ಕಾಮತ್ತರ ಮಗ ಶಾಂತಾರಾನು! ಗೋವಿಂದ ಕಾಮತ್ತರ ಪತ್ನಿಯೆ ಶ್ರೀಮತಿ ಜಾಯಿ! ಮತ್ತು ಗೋವಿಂದ ಕಾಮತ್ತರ ಮಕ್ಕಳು ಗಿರಿಜ ಭಾಗೀರಥಿ! ಕೂಡಾ ಕಜನರಿಗೆ ಈ ಮೂಲ್ಕ ತಿಳಿಯ ಪಡಿಸುವುದೇನೆಂದರೆ,

ಅರ್ಜಿದಾರರಿಗೆ ಎದ್ರಿಂದ ಕಳೆದ ಪ್ಲಸಿಗ ಸಂವತ್ಸರಕ್ಕೆ ಬರತಕ್ಕ ಗೇಣಿ ಬಾಕಿ ಬರೆಮೂಡಿ ಕೊಳ್ಳುವರೆ ಅರ್ಜಿದಾರನು ಎದ್ರಿರ ಮೇಲೆ ದಾಖ್ಲು ಮಾಡಿದ ಮೇಲಿನ ಅರ್ಜಿಯು ತಾ. 30-8-72ಕ್ಕೆ ತನ್ನಿಗೆ ಇರುತ್ತದೆ. ಆ ಕುರಿತು ಯೇನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿನ್ನ ಮೇಲಿನ ಕೋರ್ಟು ಮುಂದೆ ಹಗಲು 11ಗಂಟೆಗೆ ಹಾಜ್ರಾಗಿ ಜ್ಞಾಪೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿಯದೆ.

N. S. Parameshwariah
Advocate for Petitioner
Date, 1—8—72
Coondapur,

ಸ್ವತಂತ್ರ ಭಾರತದ ಭವ್ಯ ಭವಿಷ್ಯ ಉಜ್ವಲವಾಗಲಿ !
ದೇಶದಲ್ಲೆಲ್ಲಾ ಸುಖ-ಶಾಂತಿ-ನೆಮ್ಮದಿ ಪ್ರಜ್ವಲಿಸಲಿ !!

—ಸ್ವಾತಂತ್ರ್ಯದ ಬೆಳ್ಳಿಹಬ್ಬದ ಸುಸಂದರ್ಭದಲ್ಲಿ
ನಮ್ಮ ಶುಭ ಹಾರೈಕೆ

ನಮ್ಮ ದೇಶಕ್ಕೆ ಉಜ್ವಲ ಸಂಸ್ಕೃತಿ ಇದೆ-
ಆಯುರ್ವೇದಕ್ಕೆ ಅತಿ ಪ್ರಾಚೀನತೆಯಿದೆ

ನಮ್ಮ ಆಯುರ್ವೇದ ಔಷಧಿಗಳ ತಯಾರಿಕೆಯಲ್ಲಿ
ಶಾಸ್ತ್ರೋಕ್ತ ಗುಣಮಟ್ಟವಿದೆ.
ಇದುವೇ ಜನಪ್ರಿಯತೆಯ ಮೂಲಾಧಾರವಾಗಿದೆ.

ದಿ ನ್ಯೂ ಭುವನೇಂದ್ರ
ಆಯುರ್ವೇದಿಕ್ ಫಾರ್ಮೆಸಿ

ಕಟಪಾಡಿ, ದ. ಕನ್ನಡ

ಶಾಸ್ತ್ರೋಕ್ತ ಆಯುರ್ವೇದ ಔಷಧಗಳ
ಬೃಹನ್ನಿರ್ಮಾಣ ಸಂಸ್ಥೆ

ತಿಷ್ಠಿತ ನೇಕಾರರು. ತಾಯಿ ರಾಧಾಬಾಯಿಯವರು ಸಾಧ್ವಿ, ಕರುಣಾ ಮೂರ್ತಿ, ಮತ್ತು ಧೈರ್ಯಶಾಲಿ. ಸದಾಶಿವರಾಯರು ವಿದ್ಯಾರ್ಥಿಯಾಗಿದ್ದಾಗಲೇ ಸದಾ ಬಡ ಹುಡುಗರಿಗೆಯೆಂತಾಗಿ ಅವರ ಸುಖ ದುಃಖಗಳಲ್ಲಿ ತಾನೂ ಪಾಲುಗಾರನೆಂಬ ಭಾವ ನೆಯುಳ್ಳವನಾಗಿದ್ದರು. ಮಂಗಳೂರಿನ ಗಣಪತಿ ಹೈಸ್ಕೂಲ್, ಗವರ್ನಮೆಂಟ್ ಕಾಲೇಜ್ ಮತ್ತು ಪುಣ್ಯಾಸಿಲ್ ಪ್ರೆಸಿಡೆನ್ಸಿ ಕಾಲೇಜು ಗಳಲ್ಲಿ ಅವರ ವ್ಯಾಸಂಗ ಸಾಗಿತು. ಮುಂದೆ ಮುಂಬೈನಲ್ಲಿ ನ್ಯಾಯಶಾಸ್ತ್ರ ತೀಕ್ಷ್ಣ ಪಡೆದು, ಮಂಗಳೂರಿಗೆ ಬಂದು ವಕೀಲ ವೃತ್ತಿಗೆ ಸೇರಿಕೊಂಡ ಮೇಲೆ ಅವರ ಚಟುವಟಿಕೆಗಳ ಕ್ಷೇತ್ರ ಬಹಳ ವಿಸ್ತಾರಗೊಂಡಿತು. ಸುಟ್ಟು ಸಿರಿತನದೆ ಜೊತೆಗೆ ಕೈತುಂಬ ಸಂಪಾದನೆ, ಅಕ್ಷರಶಃ ಸಹಧರ್ಮಿಣಿಯೂ ಆದ ಪತ್ನಿ ಶಾಂತಾಬಾಯಿ ಇವರ ನೆರವು—ಇವೆಲ್ಲವೂ ಅವರು ಕೈಗೊಂಡ ಸಾಮಾಜಿಕ ಸುಧಾರಣಾ (ಪ್ರಶೇಷತಃ ಅಬಲೆಯರ ಮತ್ತು ಹಿಂದುಳಿದ ವರ್ಗಗಳ ಸೇವೆ) ಕಾರ್ಯಗಳಿಗೆ ಸಹಾಯಕವಾದವು. ಪತ್ನಿ ಶಾಂತಾಬಾಯಿಯವರೆಲ್ಲ ಸಹಕಾರದಿಂದ ಸ್ತ್ರೀಯರಿಗೆ ಉಚಿತ ಮತ್ತು ಉಪಯುಕ್ತ ಶಿಕ್ಷಣ ವ್ಯವಸ್ಥೆ ನೀಡುವ 'ಮಹಿಳಾ ಸಭೆ'ಯ ಉದಯವಾಯಿತು.

ದಕ್ಷಿಣ ಆಫ್ರಿಕೆಯ ಸತ್ಯಾಗ್ರಹದಲ್ಲಿ ಆ ದಾಗಲೇ ವಿಜಯಿಯಾಗಿ ಮಹಾತ್ಮಾ ಗಾಂಧೀಜಿಯವರು ಭಾರತಕ್ಕೆ ಬಂದಿದ್ದರು. ಆಗ (1917) ಸದಾಶಿವರಾಯರು ಗಾಂಧೀಜಿಯವರಿಗೊಂದು ಪತ್ರ ಬರೆದರು. ಅದು ಗಾಂಧೀಜಿಯವರ ಅದ್ಭುತ ಕಾರ್ಯಶಕ್ತಿಯನ್ನು ಕಂಡುಕೊಂಡ ಸದಾಶಿವರಾಯರ ರಾಜಕೀಯ ದೂರದೃಷ್ಟಿಯ ಸೂಚಕವಾಗಿತ್ತು. ಅಂದಿನಿಂದ ಬೆಳೆದು ಬಂದ ಗಾಂಧೀಜಿ-ಸದಾಶಿವರಾಯರ ಗಾಢ ಸ್ನೇಹವು ಜೀವನಪೂವಿಡೀ ಮುಂದುವರಿಯಿತು. 1919ನೆಯ ವರ್ಷ ಕಾಂಗ್ರೆಸ್ ಇತಿಹಾಸದಲ್ಲಿ ಚಿರಸ್ಮರಣೀಯ ವರ್ಷ. ಗಾಂಧೀಜಿ ರೌಲೆಟ್ ಸುಸೂದೆಯ ವಿರುದ್ಧ ರಾಷ್ಟ್ರವ್ಯಾಪ್ತಿಯ ಅಸಹಕಾರದ ಕರೆಕೊಟ್ಟರು. ಆ ಕರೆಗೆ ಓಗೊಟ್ಟು ಸತ್ಯಾಗ್ರಹ ಪ್ರತಿಜ್ಞೆಗೆ ಮೊಟ್ಟ ಮೊದಲು ಸಹಿ ಹಾಕಿದವರು ಕಾರ್ನಾಡು ಸದಾಶಿವರಾಯರು. ಆವರ ಸಮಾಜಸೇವಾ ಕಾರ್ಯಗಳೊಡನೆ ರಾಜಕೀಯ ಚಳವಳಿಪ್ತ ಸೇರಿಕೊಂಡಿತು. ಮುಂಬೆ 1920ರಲ್ಲಿ ಅಸಹಕಾರ ಚಳವಳವನ್ನು (ಪಡಶಿಕ್ಷ ಕ್ಷೇತ್ರ, ನ್ಯಾಯಾಲಯ, ಶಾಲೆ ಕಾಲೇಜ್—ಬಹಿಷ್ಕಾರ, ಸ್ವ

(ಮೂಲತ್ತೀಲಿನ ಸಂಚಿ ನೋಡಿರಿ)

ಬೇಕಾಗಿದ್ದಾರೆ

ಹಂಗಾರಕಟ್ಟೆ ಚೇತನಾ ಹೈಸ್ಕೂಲಿನಲ್ಲಿ ಸಂಸ್ಕೃತ ಕಲಿಸಲು ದಿನಾಂಕ ಆಸಪಿಗೆ ಹಂಗಾವಿ ಆಧ್ಯಾಪಕರೊಬ್ಬರು ಬೇಕಾಗಿದ್ದಾರೆ. 14-8-72ರೊಳಗೆ, ಅರ್ಜಿ ಕಳುಹಿಸಬೇಕು. ಪ್ರಾಥಮಿಕ ಲನ್ನು ಜಿಲ್ಲಾ ವಿದ್ಯಾಧಿಕಾರಿಗಳಿಗೆ ಕಳುಹಿಸ ಬೇಕು. ಹೈಸ್ಕೂಲಿನಲ್ಲಿ ತಾ. 16-8-1972ರ ಮಧ್ಯಾಹ್ನ 3ಗಂಟೆಗೆ ಭೇಟಿಗೆ ಬರಬೇಕು. ಸಂಗೀತ ಅಥವಾ ನೃತ್ಯ ಯೋಗ್ಯತೆಗಳಿರುವವಕ್ಕೆ ಆ ದ್ಯತೆಯಿದೆ.

ಹರಕೆ

ಕವಿ: ಶ್ರೀ ಕಯ್ಯಾರ
ಕಿಞ್ಞಣ್ಣ ರೈ, ಎಂ. ಎ.

ಸ್ವಾತಂತ್ರ್ಯ ಲಾಭಕ್ಕಾಗಿ ರಾಷ್ಟ್ರದ ಜನತೆ ಎಂತಪ ತ್ಯಾಗಸಹನೆಯ ಸಂಗ್ರಾಮ ಹೂಡಿತು; ಆಪರ ಫಲವಾಗಿ ಸ್ವಾತಂತ್ರ್ಯ ಬಂತು; ಬಂದಮೇಲೆ ಇಂದು ಸ್ವಾತಂತ್ರ್ಯ ದಿಂದ ಆವ ಲಾಭಕ್ಕಾಗಿ, ಪದವಿ ಸ್ಥಾನ ಮಾನಗಳಿಗಾಗಿ ಹೋರಾಟ ನಡೆಯುತ್ತಿರುವು ದನ್ನು ನಾವು ಕಾಣುತ್ತೇವೆ; ಈ ಸಂದರ್ಭದಲ್ಲಿ ದೇಶ ಪ್ರೇಮಿಯ ಚಿಂತಾಗತಿ ಹೇಗಿರ ಬೇಕೆಂದು ಸ್ವಾತಂತ್ರ್ಯ ರಜತೋತ್ಸವವನ್ನು ಆಚರಿಸುವ ವೇಳೆಗೆ ನಾವು ಮರಳಿ ಯೋಚಿಸಬೇಡವೆ?

೧

ಸ್ವಾತಂತ್ರ್ಯ ವೃಂದಾವನದೊಳೆಸೆವ ಸಸಿ
ತುಲಸಿ
ಆಗಿ,-ನಾ ದೇವಪೂಜೆಯ ಬಯಸಲೊಲ್ಲೆ;
ತಾಯ್ನಾಡ ತೋಟದಲಿ ಹೂಚಿಗುರು
ಹೆಚ್ಚಿಸುವ
ಗೊಬ್ಬರದ ಪುಡಿಯಾದರದೆ ಭಾಗ್ಯಬಲ್ಲೆ !

೨

ಸ್ವಾತಂತ್ರ್ಯನೆಂದೆನದ ವರಕಲ್ಪ ತರುವಾಗಿ
ಅಚಲಾಮರಧಾಮಿನಿ ತಣಿಸಲೆಳಸಿ;
ಎನ್ನ ತಾಯ್ನೆಲದ ಬಡವನ
ಗಂಟಲಾರುತಿರೆ
ಗಂಜಿ ತೆಳಿಯೂಗುವೀ ಭಾಗ್ಯದಾಸೆ !

೩

ಸ್ವಾತಂತ್ರ್ಯ ಮುಧುಪಾನ ಮುದಿತಪಟ್ಟದ
ನೆನಸಿ
ಯೋಗಕ್ಷೇತ್ರವು ಹೆಂಕೃತಿಯು
ಸೋಂಕದಿರಲಿ;
ತಾಯ್ನೆಲವ ಮುತ್ತಿಡುವ
ಕಟ್ಟಿರುವೆ ಸಾಲಾಗಿ
ನೀರವಂ ಜೀವನಂ ಸಾಗುತಿರಲಿ !

೪

ಯಾರಿಗೂ ಪಾಲಿಡದ ಯಾರನೂತಿನಬಿಡದ
ಧನಕನಕ ರತ್ನರಾಶಿಯ ರಾಜ್ಯ ಬಯಸಿ;
ಎನ್ನ ತಾಯ್ನಾಡ ಸೋದರನ ದೀನಾನನದ
ಕಣ್ಣೀರ ಕಳೆಯಬಲ್ಲೆನೆ? ತೀರ್ಥ-ಒರೆಸೆ !

೫

ಬುದ್ಧಿಯಲಿ ಸಂಪತ್ಸಮೃದ್ಧಿಯಲಿ
ವೃದ್ಧಿಯಲಿ
ಶುದ್ಧಮಾನವನೆಂಬ ಜನ್ಮಬೇಡ;
ಬಿಡುಗಡೆಯ ದಾರಿಯಲಿ ಬಿದ್ದ ಕೊಳಿ
ಕೆಸರನ್ನೆ
ಹೆಕ್ಕುವಾಹಕ್ಕೆನಗೆ ಪುಣ್ಯ ನೋಡ !

೬

ಎಲ್ಲಿಯೋ ವೈಕುಂಠದಲ್ಲಿಯೋ
ಜಸಿಸಿದರು
ದೇವತ್ವ ದೊರಕಿದರು ಬಯಸಲಾರೆ;
ಇಲ್ಲಿಯೇ ತಾಯ್ನಾಡಿನಲ್ಲಿಯೇ
ಹುಟ್ಟುವೆನು
ಕ್ರಿಮಿಕೀಟವಾದರೂ ಕೊರಗು ತೋರೆ!

೭

ಸ್ವಾತಂತ್ರ್ಯ ಸ್ವರ್ಗ ಸೋಪಾನ
ಸಾವಿರವೇರಿ
ಸೌಖ್ಯನಂದನ ವಿಹಾರದೊಳಿಷ್ಟನಿಲ್ಲ;
ತಾಯ್ನೆಲದ ಗದ್ದೆ ಕೆಸರಿನ ತೀರ್ಥದೊಳೆ
ಮಿಂದು
ಪುಣ್ಯ ಪುಳಕಿತನಪ್ಪೆ ನಿಸ್ಪವಿಲ್ಲ !

೮

ಸ್ವಾತಂತ್ರ್ಯ ಸಾಮ್ರಾಜ್ಯ ಸಾರ್ವಭೌಮತೆ
ಪಡೆದು
ಅಧಿಕಾರ ತಾಂಡವಂ ನೆನೆಯಲೊಲ್ಲೆ;
ತಾಯ್ನಾಡ ಹಿಡಿಮಣ್ಣ
ಸ್ವರ್ಣ ಪರ್ವತವಾಗಿ
ಗೈವಬಲಬೇಕೆನಗೆ ದುಡಿತದಲ್ಲೆ !

೯

ಸ್ವಾತಂತ್ರ್ಯ ಹಿಮಗಿರಿಯ
ಗೌರಿಶಂಕರವೇರಿ
ಲೋಕನಾಕವ ಬೆರಗುಗೊಳಿಸಲೆಳಸಿ;
ಬಿಡುಗಡೆಯ ತಗ್ಗು ಗದ್ದೆಯ ಹುಣಿಯ
ಹುಲ್ಲಾಗಿ
ಗೋವು ಮೇವಿನ ಬದುಕಿಗೊದಗುವಾಸೆ !

೧೦

ಸ್ವಾತಂತ್ರ್ಯ ಲೋಕ ಸಂಚಾರಿ ವಾಯು
ವಿಹಾರಿ
ಪುಷ್ಪಕ ವಿಮಾನಯೂನವೊಳಾಸೆಯಿಲ್ಲ;
ಧರಣಿ ಜನನಿಯ ಪುಣ್ಯಪಾದಧೂಳಿಯ
ಹೊರುವ
ತಿರುಕನೆನ್ನೆಯ ಭಾಗ್ಯ ಯಾರು ಬಲ್ಲ !

೧೧

ಸ್ವಾತಂತ್ರ್ಯ ಧರಣಿ ಭಾರತ ಹೊತ್ತ
ಶೇಷನೆನೆನೆ
ಗರ್ವಾಂಧಕಾರ ಮನ ಮುಸುಕದಿರಲಿ;
ಬಿಡುಗಡೆಯ ಬಂಡಿಯೆಳೆಯುವ
ಹುರಿಯು ಹಗ್ಗದಲಿ
ಕಿರು ಕಣ್ಣಿಯೆನಿಸುವೆನು ಪುಣ್ಯವಿರಲಿ !

೧೨

ಕಾಶಿಯೋ, ರಾಮೇಶ್ವರವೊ, ಗಂಗೆ,
ತುಂಗೆಯೋ,
ತೀರ್ಥಯಾತ್ರಾಟನದ ಪುಣ್ಯವೊಲ್ಲೆ;
ತಾಯ್ನೆಲದ ಹೊಲದ ನೇಗಿಲ ಕುಳ್ಳದ
ಹಾದಿಯಲಿ
ಕೆಸರಿನೊಳೆ ಕುಸಿಯುವೆನು-ಧನ್ಯನಲ್ಲೆ !

೧೩

ಸ್ವಾತಂತ್ರ್ಯ ಗಗನದಲಿರಲಿ
ಚಂದ್ರತಾರಾಳಿ
ಜ್ವಲಿಸುವಂತಿರಿ ಬೆಳಗಲಾಸೆಯಿಲ್ಲ;
ಮಾತೃಭೂಮಿಯದು
ಅನಾಡಾಂಧಕಾರದಲಿ
ಮಿಂಚುಸುಳಿವಾಗಿ ಮಿನುಗಿಸೆ ನಲ್ಲ !

೧೪

ಸ್ವಾತಂತ್ರ್ಯ ಜಾಗರ ತಿಮಿಂಗಿಲಂ ತಾನಾಗಿ
ಸುಖಸಿಂಹಕುಲನ ಗಿಳಂಕರಿಸಲೆಳಸಿ;
ಬಿಡುಗಡೆಯ ತೊಟ್ಟಿ ಕೆರೆಯ ಹಸಿರು
ಹಾವಸೆಯೂಗಿ,
ಹರಿಹರಿದು ಹೋದರೂ ಕೋವಸನೆನಿಸೆ !

೧೫

ವೇದ ಶಾಸ್ತ್ರ ಪುರಾಣ ಕಾವ್ಯೇತಿಹಾಸಗಳ
ಜೀರ್ಣಿಸಿದ ಪ್ರಾಜ್ಞಸಿದ ಪಾಂಡಿತ್ಯಬೇಡ;
ಎನ್ನ ತಾಯ್ನಾಡ ನಿರ್ಭಾಗ್ಯ
ಸೋದರನೊಡನೆ
ನಲ್ ಮಾತನಾಡುವೆನು—ನಿತ್ಯಸೋಡ !

೧೬

ವ್ಯಾಸ ವಾಲ್ಮೀಕಿ ಹೋಮರ ಡಾಂಟೆ,
ಸಂಸಜೊಲು
ಕಾವ್ಯ ಸಾಮ್ರಾಜ್ಯದೆಜಡೆತನ ಬಯಸಿಲ್ಲ;
ಶುಕವಾಗಿ ಪಿಕವಾಗಿ ಕಿರುದುಂಬಿ
ಮಲಿಯೂಗಿ
ತಾಯ್ನಾಡನುತಿಸೆ ದಿನದಿನದನಿಯೆನು !

೧೭

ವಿಶ್ವವಿಶದ ಚರಿತ್ರ ಗ್ರಂಥ ಸಂಪುಟದಲ್ಲಿ
ಸ್ವರ್ಣವರ್ಣದಿ ನಾಮದುಲ್ಲೇಖವೊಲ್ಲೆ !
ತಾಯ್ನಾಡ ನೆಲದಲ್ಲಿ ಹಿಡಿಮಣ್ಣ
ಹುಡಿಯಲ್ಲಿ
ಬೆರೆವ ಭಾಗ್ಯವೆ ಸಾಕು-ಸಾಯುಜ್ಯವಿಲ್ಲೆ!

(ಮೂವತ್ತಾರನೇ ಪುಟ ನೋಡಿರಿ)

ಕರ್ನಾಟಕ ರಾಜ್ಯಕ್ಕೆ
ಕರ್ನಾಟಕ ಸಂಸ್ಕೃತಿಗೆ
ಶತಮಾನಗಳ ಇತಿಹಾಸವಿದೆ
ಸೇವಾಪಥದಲ್ಲಿ ಮುನ್ನಡೆಯುತ್ತಿರುವ
ಕರ್ಣಾಟಕ ಬ್ಯಾಂಕ್
ಇದಕ್ಕೆ ಐದು ದಶಕಗಳ ಇತಿಹಾಸವಿದೆ.
ಕರ್ನಾಟಕದ ಜನತೆಗೆ
ಸ್ವಾತಂತ್ರ್ಯ ಬೆಳ್ಳಿ ಹಬ್ಬದ ಸುಸಂದರ್ಭದಲ್ಲಿ
ರಾಜ್ಯದ ಹೊಸ ಹೆಸರನ್ನು ಹುಟ್ಟಿನಿಂದಲೇ ತಳೆದ
ಕರ್ಣಾಟಕ ಬ್ಯಾಂಕ್ ಇದರ ಶುಭಾಶಯಗಳು
ದೇಶದ ಸ್ವಾತಂತ್ರ್ಯ ಚಿರಾಯುವಾಗಲಿ
ಕರ್ಣಾಟಕ ಬ್ಯಾಂಕ್ ಲಿಮಿಟೆಡ್
ಸ್ಥಾಪಿತ: 1924
ರಿ. ಆಫೀಸು:— ಮಂಗಳೂರು-3

60 ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ ತೊಡಗಿರುವ
ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧ ದ್ರವ್ಯಗಳೂ ಸಹಾ

ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್

ನಂಜನಗೂಡು. (ಮೈಸೂರು ಸ್ಟೇಟ್)

ಶಾಖೆಗಳು:- ಮೈಸೂರು, ಬೆಂಗಳೂರು ಮತ್ತು ಮಂಗಳೂರು.

ನೆನಪಿನ ತುಣುಕು—
ನಮ್ಮ ಬಾಳಿನ ಸುವರ್ಣ ಕ್ಷಣಗಳು

ಕಾಲು ಶತಮಾನದ ಹಿಂದೆ ಆಗಸ್ಟ್ 14–15 ಭಾರತ ಸ್ವಾತಂತ್ರ್ಯ ಪಥದಲ್ಲಿ ಅಡಿ ಇಟ್ಟಿತು. ನಮ್ಮ ಪಾಲಿಗೆ ಇದೊಂದು ಬಹು ದೊಡ್ಡ ಹೆಜ್ಜೆ. 1942ರಲ್ಲಿ ಕಾಂಗ್ರೆಸ್ ಬ್ರಿಟಿಷರ ವಿರುದ್ಧ ಆರಂಭಿಸಿದ 'ಚಲೇಜಾವ್' ಚಳವಳಿಯ ಪರಾಕಾಷ್ಠೆ ಈ ಸಮರೂಂಭ.

ಲಾರ್ಡ್ ವೆಥಿಕ್ಲಲಾರೆನ್ಸ್ ಅವರು ಮುಖಂಡರಾಗಿದ್ದ ಬ್ರಿಟಿಷ್ ಸಚಿವ ಸಂಪುಟ ಭಾರತಕ್ಕೆ ಸ್ವಾತಂತ್ರ್ಯ ಅಧಿಕಾರ ಹಸ್ತಾಂತರಕ್ಕೆ ಸಂವಿಧಾನಾತ್ಮಕ ಅಡಿಪಾಯವನ್ನು ಸಿದ್ಧಗೊಳಿಸಿತು. ಪ್ರಾಂತೀಯ ಶಾಸನ ಸಭೆಗಳಿಂದ ಆಯ್ಕೆಗೊಂಡ 650 ಮಂದಿ ಸಂವಿಧಾನ ಸಭಾ ಸದಸ್ಯರು ಡಾ| ರಾಜೇಂದ್ರ ಪ್ರಸಾದರ ಅಧ್ಯಕ್ಷತೆಯಲ್ಲಿ ಸಭೆ ಸೇರಿದರು. ಮಧ್ಯರಾತ್ರಿಗೆ ಪ್ರಮಾಣ ವಚನವನ್ನು ಸ್ವೀಕರಿಸಿದರು.

ಈ ಸಂಬಂಧದಲ್ಲಿ ನಿರ್ಣಯವೊಂದನ್ನು ಮಂಡಿಸಿದ ನೆಹರೂ ಅವರು ನಾವೀಗ ನಮ್ಮ ದೇಶದ ಭವಿತವ್ಯವನ್ನು ರೂಪಿಸಿಕೊಳ್ಳುತ್ತಿದ್ದೇವೆ ಎಂದು ನುಡಿದರು. ಬಳಿಕ ಈ ಕೆಳಗೆ ವಿವರಿಸಿರುವ ನಿರ್ಣಯವನ್ನು ಸಭೆಯಲ್ಲಿ ಮಂಡಿಸಲಾಯಿತು.

ಮಧ್ಯ ರಾತ್ರಿ ಸೂಚಕವಾಗಿ ಗಡಿಯಾರದ ಗಂಟೆ 12ನೆಯ ಗಂಟೆ ಬಾರಿಸಿದಾಗ ಸಂವಿಧಾನ ಸಭೆಯಲ್ಲಿ ಎಲ್ಲಾ ಸದಸ್ಯರು ನಾವು ಈ ಕೆಳಗಿನಂತೆ ದೃಢಸಂಕಲ್ಪ ಮಾಡುವೆವು:

'ತ್ಯಾಗ ಬಲಿದಾನಗಳ ಮೂಲಕ ಭಾರತದ ಜನತೆ ಸ್ವಾತಂತ್ರ್ಯಗಳಿಸಿರುವ ಈ ಗಂಭೀರ ಸಮಾರಂಭದಲ್ಲಿ, ಭಾರತದ ಸಂವಿಧಾನ ಸಭೆಯ ಸದಸ್ಯನಾದ ನಾನು–ಪುರಾತನ ರಾಷ್ಟ್ರವಾದ ಭಾರತ ವಿಶ್ವರಾಷ್ಟ್ರಗಳ ಸಮುದಾಯದಲ್ಲಿ ಯುಕ್ತ ಸ್ಥಾನವನ್ನು ಪಡೆಯುವಂತೆ ಮಾಡಲು, ವಿಶ್ವಶಾಂತಿ ಹಾಗೂ ವಿಶ್ವದ ಜನತೆಯ ಶ್ರೇಯೋಭಿವೃದ್ಧಿಗಾಗಿ ಸ್ವಪ್ರೇರಣೆಯಿಂದ ಸಂಪೂರ್ಣವಾಗಿ ಶ್ರಮಿಸುವ ಧ್ಯೇಯವನ್ನು, ಸಾಧಿಸಲು, ದೇಶ ಹಾಗೂ ಜನತಾ ಸೇವೆಗೆ ಸಮರ್ಪಣಾಭಾವದಿಂದ ಶ್ರಮಿಸುವುದಾಗಿ ವಿನಮ್ರತೆಯಿಂದ ಸಂಕಲ್ಪ ಮಾಡುತ್ತೇನೆ.'

ಈ ನಿರ್ಣಯವನ್ನು ಪ್ರಶಂಸಿಸುತ್ತ ನೆಹರೂ ಅವರು 'ನಮ್ಮ ಈ ದೃಢ ಸಂಕಲ್ಪವನ್ನು ಪ್ರಬಲ ರೀತಿಯಲ್ಲಿ ನೆರವೇರಿಸುವ ಸಮಯ ಬರುತ್ತದೆ. ಮಧ್ಯರಾತ್ರಿಯ ಸಮಯದಲ್ಲಿ–ಇಡೀ ವಿಶ್ವ ಗಾಢ ನಿದ್ರೆಯಲ್ಲಿರುವ ಸಮಯದಲ್ಲಿ ಭಾರತ ಜಾಗೃತಗೊಂಡು ಸ್ವಾತಂತ್ರ್ಯ ಪಡೆಯುಲಿದೆ. ಇತಿಹಾಸದಲ್ಲಿ ಅಪರೂಪವಾದ ಸಂದರ್ಭ ಬರುತ್ತದೆ. ಗತಕಾಲದಿಂದ ನಾವು ಹೊಸ ಯುಗದಲ್ಲಿ ಪದಾರ್ಪಣ ಮಾಡುತ್ತೇನೆ. ಆಗ ಯುಗವೊಂದು ಪರಿಸಮಾಪ್ತಿಗೊಳ್ಳುತ್ತದೆ. ಹೊಸ ಯುಗವೊಂದು ಆರಂಭವಾಗುತ್ತದೆ. ಆಗ ದೀರ್ಘಕಾಲ ದಮನಗೊಂಡ ಆತ್ಮ ಜಾಗೃತಿಗೊಂಡು ಅದರ ವಾಣಿಗೆ ಬಲ ಬರುತ್ತದೆ. ಈ ಸುವರ್ಣ ಸಂದರ್ಭದಲ್ಲಿ ಭಾರತ ದೇಶದ ಜನತೆಯ ಸೇವೆಗಾಗಿ ಹಾಗೂ ಮಾನವ ಜನಾಂಗದ ಹಿತಸಾಧನೆಗಾಗಿ ನಾವು ಸಂಪೂರ್ಣ ಸಮರ್ಪಣಾ ಭಾವದಿಂದ ದೃಢ ಸಂಕಲ್ಪ ಮಾಡುವುದು ಸಮಂಜಸವಾಗಿದೆ.

ಉತ್ತರ ಪ್ರದೇಶದ ಚೌಧುರಿ ಕಲಿಕುಜಮಾನ್ ಅವರು ಈ ನಿರ್ಣಯವನ್ನು ಅನುಮೋದಿಸಿದರು.

ಇದಕ್ಕೆ ಮುಂಚೆ ಸಂವಿಧಾನ ಸಭೆಯ ಅಧ್ಯಕ್ಷ ಡಾ| ರಾಜೇಂದ್ರ ಪ್ರಸಾದ್ ಅವರು, ತಮ್ಮ ಉದ್ಘಾಟನಾ ಭಾಷಣದಲ್ಲಿ ಭಾರತ ಸ್ವಾತಂತ್ರ್ಯದ ಗುರಿಯನ್ನು ಈ ಡೇರಿಸಿ ಕೊಟ್ಟದ್ದಕ್ಕಾಗಿ ಆ ಸರ್ವಶಕ್ತನಾದ ಭಗವಂತನನ್ನು ಅಭಿನಂದಿಸಿದರು. ಮಹಾತ್ಮಾ ಗಾಂಧೀಜಿಯವರಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು.

ಗಾಂಧೀಜಿ ಕಳೆದ 30ವರ್ಷಗಳಿಂದಲೂ ನಮಗೆ ದಾರಿದೀಪ, ಮಾರ್ಗದರ್ಶಕ, ಹಾಗೂ ದಾರ್ಶನಿಕ ಎಂದು ಡಾ| ರಾಜೇಂದ್ರ ಪ್ರಸಾದರು ನುಡಿದರು.

ಮಧ್ಯರಾತ್ರಿ ಗಡಿಯಾರ ಹನ್ನೆರಡು ಗಂಟೆ ಬಾರಿಸಿದ ಕೂಡಲೇ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರೂ ಎದ್ದು ನಿಂತರು. ಪ್ರಮಾಣವಚನ ಸ್ವೀಕರಿಸಿದರು. ಅಧ್ಯಕ್ಷರು ಪ್ರತಿಜ್ಞಾವಚನವನ್ನು ಓದಿ ಹೇಳಿದರು. ಸದಸ್ಯರು ಹಿಂದಿ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಈ ಪ್ರತಿಜ್ಞಾವಚನವನ್ನು ಪುನರುಚ್ಚರಿಸಿದರು.

ಬಳಿಕ ಅಧ್ಯಕ್ಷರು ವೈಸರಾಯ್ ಲಾರ್ಡ್ ಲೂಯಿಸ್ ಮೌಂಟ್‌ಬ್ಯಾಟನ್ ಅವರಿಗೆ, ಈ ಕೆಳಗೆ ವಿವರಿಸಿರುವ ಸಂದೇಶವನ್ನು ಕಳುಹಿಸಬೇಕೆಂದು ನಿರ್ಧರಿಸಿದರು.

*ಭಾರತದ ಸಂವಿಧಾನ ಸಭೆ ಭಾರತದ ಆಡಳಿತ ಅಧಿಕಾರ ಸೂತ್ರಗಳನ್ನು ವಹಿಸಿಕೊಂಡಿದೆ.

*1947ರ ಆಗಸ್ಟ್ 15ರಿಂದ ಲಾರ್ಡ್ ಮೌಂಟ್‌ಬ್ಯಾಟನ್ ಭಾರತದ ಗವರ್ನರ್ ಜನರಲ್‌ರಾಗಿ ಮುಂದುವರಿಯಬೇಕೆಂಬ ಸೂಚನೆಯನ್ನು ಭಾರತದ ಸಂವಿಧಾನ ಸಭೆ ಅನುಮೋದಿಸುತ್ತದೆ.....

ಈ ಸಮಾರಂಭ ಮುಗಿದ ಬಳಿಕ ಮುಂಬಯಿಯ ಹಂಸ ಮೆಹ್ತಾ ರಾಷ್ಟ್ರಕ್ಕೆ ರಾಷ್ಟ್ರೀಯ ಧ್ವಜವನ್ನು ಅರ್ಪಿಸಿದರು. ಶ್ರೀಮತಿ ಸುಚೇತಾ ಕೃಪಲಾನಿ ಅವರ 'ವಂದೇ ಮಾತರಂ' ಗೀತೆಯೊಂದಿಗೆ ಕಾರ್ಯಕ್ರಮಗಳು ಆರಂಭವಾಗಿ, 'ಸಾರೆ ಜಹಾಂಸೆ ಅಚ್ಛಾ' ಗೀತೆಯನ್ನು ಅವರು ಹಾಡಿದ ನಂತರ ಮುಕ್ತಾಯವಾದವು.

ಡಾ| ರಾಜೇಂದ್ರ ಪ್ರಸಾದ್ ಹಾಗೂ ಜವಾಹರಲಾಲ್ ನೆಹರೂ ಅವರು ಸಂವಿಧಾನ ಸಭೆಯ ಈ ಸಂದೇಶವನ್ನು ಕೂಡಲೇ ವೈಸ್‌ರಾಯ್ ಲಾರ್ಡ್ ಲೂಯಿಸ್ ಮೌಂಟ್‌ಬ್ಯಾಟನ್‌ರಿಗೆ ತಿಳಿಸಿದರು.

ಲಾರ್ಡ್ ಮೌಂಟ್‌ಬ್ಯಾಟನರು ಸಂದೇಶವನ್ನು ಓದಿ 'ಈ ಗೌರವ ನೀಡಿದ್ದಕ್ಕಾಗಿ ನನಗೆ ತುಂಬ ಅಭಿನಂದನೆಗಳನ್ನು ಸಲ್ಲಿಸುತ್ತದೆ. ನಿಮ್ಮ ಸಲಹೆಗಳನ್ನು, ಸಂವಿಧಾನಬದ್ಧ ರೀತಿಯಲ್ಲಿ ಕಾರ್ಯರೂಪಕ್ಕೆ ತರಲು ನಾನು ಶಕ್ತಿಮೀರಿ ಶ್ರಮಿಸುತ್ತೇನೆ' ಎಂದರು.

ಸಂವಿಧಾನ ಸಭೆಯ ಸದಸ್ಯರ ಮುಖಗಳಲ್ಲಿ ಆನಂದದ ಕಳೆ ಮಿನುಗಿತು.

ಸಂತೋಷದ ಹೊಳೆ

ಬಳಿಕ ಅವರು ಚನುರಿದರು. ಅಲ್ಲಿಂದ ಹೊರ ಬರುತ್ತಿದ್ದಂತೆಯೇ ಪಾರ್ಲಿಮೆಂಟ್ ಕಟ್ಟಡದ ಮಂಭಾಗದಲ್ಲಿ ಸಂತೋಷಾತಿರೇಕದಿಂದ ಕುಣಿದಾಡುತ್ತಿದ್ದ ಸಮೂಹವನ್ನು ಕಂಡರು. ಕೆಲವೇ ಜನ ಪೋಲೀಸರಿಗೆ ಈ ಜನಸಂದಣಿಯನ್ನು ನಿಯಂತ್ರಿಸುವುದು ಕಷ್ಟವಾಗಿತ್ತು.

ಈ ಅಪೂರ್ವವಾದ ಐತಿಹಾಸಿಕ ಸಮಾರಂಭದಲ್ಲಿ ಭಾಗವಹಿಸಿದ್ದ ಸದಸ್ಯರನ್ನು ಅಭಿನಂದಿಸಲು ಅವರೆಲ್ಲ ತವಕಪಡುತ್ತಿದ್ದರು.

ಪಾರ್ಲಿಮೆಂಟಿನ ಮಹಾದ್ವಾರದ ಹೊರಗೆ ಡಾ| ಅಂಬೇಡಕರ್ ಈ ಜನಸಂದಣಿಯಲ್ಲಿ ಸಿಕ್ಕಿಕೊಂಡರು.

ಆಗಸ್ಟ್ 15ರಂದು ಲಾರ್ಡ್ ಮೌಂಟ್‌ಬ್ಯಾಟನ್ ಅವರು, ದಿವಂಗತ ಶ್ರೀಮತಿ ನ್ಯಾಯಾಧೀಶ ಕಾನಿಯಾ ಅವರಿಂದ ಭಾರತದ ಗವರ್ನರ್ ಜನರಲ್‌ರಾಗಿ ಪ್ರಮಾಣವಚನ ಸ್ವೀಕರಿಸಿದರು. ವೈಸರಾಯರ ನಿವಾಸದ ದರ್ಬಾರ್ ಹಾಲ್ (ಈಗ ರಾಷ್ಟ್ರಪತಿ ಭವನ)ನಲ್ಲಿ ಪ್ರಮಾಣವಚನ ಸ್ವೀಕಾರ ಸಮಾರಂಭ ನೆರವೇರಿತು. ಬಳಿಕ ಗವರ್ನರ್ ಜನರಲ್‌ರು ನೆಹರೂ ಅವರ ನೇತೃತ್ವದ ಹೊಸ ಸಚಿವ ಸಂಪುಟದ ಪ್ರಮಾಣವಚನ ಸ್ವೀಕಾರ ಸಮಾರಂಭವನ್ನು ನೆರವೇರಿಸಿದರು.

ಇದಾದನಂತರ ಲಾರ್ಡ್ ಮೌಂಟ್‌ಬ್ಯಾಟನ್‌ರು, ಸಕಲ ಸರಕಾರಿ ಸನ್ಮಾನದೊಂದಿಗೆ ತಮ್ಮ ಸಾರೋಟಿನಲ್ಲಿ ಸಂವಿಧಾನ ಸಭಾಭವನಕ್ಕೆ ತೆರಳಿದರು. ಸಂವಿಧಾನ ಸಭೆ ಬೆಳಿಗ್ಗೆ 10ಗಂಟೆಗೆ ಕಾರ್ಯಕಲಾಪವನ್ನು ಆರಂಭಿಸಿತು. ಡಾ| ರಾಜೇಂದ್ರ ಪ್ರಸಾದ್ ಅವರು ಹೊಸ ಸ್ವತಂತ್ರ ರಾಷ್ಟ್ರದ ಉದಯಕ್ಕೆ ಶುಭಕೋರಿ ವಿಶ್ವದ ನಾನಾ ದೇಶಗಳಿಂದ ಬಂದ ಸಂದೇಶಗಳನ್ನು ಓದಿದರು.

ಲಾರ್ಡ್ ಮೌಂಟ್‌ಬ್ಯಾಟನ್ ದೊರೆಗಳ ಸಂದೇಶವನ್ನು ಓದಿ ಹೇಳಿದರು ಲಾರ್ಡ್ ಮೌಂಟ್ ಬ್ಯಾಟನ್ ತಮ್ಮ ಪುಟ್ಟ ಭಾಷಣದಲ್ಲಿ ಜೂನ್–3ರ ಯೋಜನೆಗೆ ಒಪ್ಪಿಕೊಳ್ಳಲು ಕಾರಣವಾದ ಮೂರು ತುತೆಗಳ ಬಗ್ಗೆ ಪ್ರಸ್ತಾಪಿಸಿದರು.

ನಾಯಕರು ತೋರಿದ ಸಹನೆ, ಚಾಣಕ್ಷ ಹಾಗೂ ಸ್ನೇಹಪೂರ್ಣ ನೆರವಿನಿಂದಾಗಿ, ಪೂರ್ವಯೋಚಿತ ಸಮಯಕ್ಕಿಂತಲೂ 10ತಿಂಗಳು ಮುಂಚೆಯೇ ಅಧಿಕಾರ ಹಸ್ತಾಂತರ ಸಾಧ್ಯವಾಯಿತೆಂದು ಹೇಳಿ ಅವರನ್ನು ಅಭಿನಂದಿಸಿದರು.

ಭಾರತದ ಸಂಸ್ಥಾನಗಳ ಬಗ್ಗೆ ಪ್ರಸ್ತಾಪಿಸುತ್ತ ಅವರು ಸರದಾರ್ ವಲ್ಲಭಭಾಯ್ ಅವರನ್ನು ದೊರವೈಷ್ಟಿಯುಳ್ಳ ಮುತ್ಸದ್ದಿ ಎಂದು ಕೊಂಡಾಡಿದರು. ಸಂಸ್ಥಾನಗಳ ವಿಲಯನದಿಂದ ಅಖಂಡ ರಾಜಕೀಯ ಘಟಕಕ್ಕೆ ನಿರ್ಮಾಣ ಸಾಧ್ಯವಾಯಿತೆಂದರು.

ನೆಹರೂ ಅವರ ಬಗ್ಗೆ ಪ್ರಸ್ತಾಪಿಸುತ್ತ ಅವರು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಿಂದ ಹಾಗೂ ಕೆಂಬ್ರಿಜ್ ವಿಶ್ವವಿದ್ಯಾಲಯಗಳಿಂದ ವಿಶ್ವ ವಿಖ್ಯಾತ ಸಾಮಾನ್ಯ ಎಂದು ನುಡಿದರು.

ಡಾ| ರಾಜೇಂದ್ರ ಪ್ರಸಾದರು ಉತ್ತರ ರೂಪವಾಗಿ ಭಾಷಣ ಮಾಡುತ್ತ 'ಭಾರತದ ಮೇಲೆ ಬ್ರಿಟಿಷ್ಸಿನ ಪ್ರಭುತ್ವ ಸ್ಥಾಪನೆಗೆ ಕೊನೆಗೊಂಡಿತು. ಇನ್ನು ಮುಂದೆ ಬ್ರಿಟನ್ನಿನೊಂದಿಗೆ ನಮ್ಮ ಸಂಬಂಧ, ಸಮಾನತೆ, ಪರಸ್ಪರ ಸೌಹಾರ್ದ ಹಾಗೂ ಪ್ರಭುತ್ವದ ಹಿತಾಸಕ್ತಿ ಆಧಾರದ ಮೇಲೆ ರೂಪುಗೊಳ್ಳಲಿದೆ ಎಂದು ಹೇಳಿದರು.

ಈ ಸಮಾರಂಭವನ್ನು ಮುಗಿಸಿಕೊಂಡು ಹೊರಗೆ ಹೋಗುವಾಗ ಲಾರ್ಡ್ ಮೌಂಟ್‌ಬ್ಯಾಟನ್ ಅವರ ಪತ್ನಿ ಹಾಗೂ ಮಗಳು ಪಮೇಲಾ ಮೌಂಟ್‌ಬ್ಯಾಟನ್‌ರಿಗೆ ಪಾರ್ಲಿಮೆಂಟ್ ಭವನದ ಮುಂದೆ ಸೇರಿದ್ದ ಉಲ್ಲಾಸಭರಿತ ಜನಸಮೂಹದಿಂದ ವಾರಾಗಿ ಹೋಗಬೇಕಾದರೆ ಸಾಕು ಬೇಕಾಗಿ ಹೋಯಿತು. ಜನಸಂದಣಿಯಲ್ಲಿದ್ದ ಪ್ರತಿಯೊಬ್ಬರಿಗೂ ಮೌಂಟ್ ಬ್ಯಾಟನ್ ಕೈಕುಲುಕುವ ತವಕ. ಮೌಂಟ್‌ಬ್ಯಾಟನ್‌ರಿದ್ದ ಸಾರೋಟು ಈ ಜನಸಂದಣಿಯಲ್ಲಿ ಬಹು ನಿಧಾನವಾಗಿ ಮುಂದೆ ಚಲಿಸಿತು. ಜನಸಂದಣಿಯನ್ನೂ ಸಾರೋಟಿನ ಕುದುರೆಗಳನ್ನೂ ನಿಯಂತ್ರಿಸ ಬೇಕಾದರೆ ಅಂಗ ರಕ್ಷಕರು ತುಂಬ ಶ್ರಮಪಡಬೇಕಾಯಿತು.

ಚರಿತ್ರಾರ್ಹ ಸಮಾರಂಭ ಹೀಗೆ ಮುಕ್ತಾಯಗೊಂಡಿತು. ಗವರ್ನರ್ ಜನರಲ್ ವೈಸರಾಯರ ನಿವಾಸವನ್ನು ತಲುಪಿದಾಗ ಮಧ್ಯಾನ್ನ 12ಗಂಟೆಯಾಗಿತ್ತು. ●

ಇಪ್ಪತ್ತೈದು ವರ್ಷಗಳಿಗೆ ಮೊದಲು ಭಾರತ ಸ್ವತಂತ್ರಗೊಂಡ ಗಳಿಗೆಯಲ್ಲಿ ಅಧಿಕಾರ ಪ್ರಸ್ತಾಂತರವಾದ ಸುವರ್ಣ ಕ್ಷಣಗಳ ನೆನಪು ಇಂದು ನಾವಿಕೊಳ್ಳುವುದು ಅಸಮರ್ಪಕವಲ್ಲ. ಒಂದು ತತ್ಕಾಲದ ಹಿಂದಿನ ಈ ಘಟನೆ ನಮಗೆ ಬರಿಯ ಇತಿಹಾಸಕ್ಕೆ ಸೂತ್ರವಲ್ಲ, ಸ್ಫೂರ್ತಿಯ ಸೆಲೆ ಚಿಮ್ಮಿಸುವ ಇತಿಹಾಸವಾಗಬೇಕು.

ಕುಂದಾಪುರ 2nd Addl ಮುನ್ಸಿಫ್ ಕೋರ್ಟಿನಲ್ಲಿ

R. R. C. 2846/71

ಅರ್ಜಿದಾರ — ಪೆಂಕಟ್ರಮಣ ಭಟ್ಟ

ಎದ್ರಿ —ರಾಮು ಶೆಟ್ಟಿಗಾರ

ಕುಂದಾಪುರ ತಾಲ್ಲೂ ಬೈಂದೂರು ಗ್ರಾಮದಲ್ಲಿರುವ ವಾಸು ಶೆಟ್ಟಿಗಾರರ ಮಗ, ವಾಸು ಶೇರೆಗಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಎದ್ರಿಯವರ ಅರ್ಜಿದಾರರಿಗೆ ರೂ.87.8.70 ಕ್ಕೆ ಬರಬೇಕಾದ ಗೇಣಿ ಬಾಕಿ ಬಗೆಮೊದಿಕೊಳ್ಳುವರೆ ಅರ್ಜಿದಾರರು ಪಿರ್ಕಾದ ಮೇಲಿನ ಅರ್ಜಿಯು ತಾ. 15.8.72ಕ್ಕೆ ತನ್ನಿಗೆ ಇರುತ್ತದೆ ಆ ಕುರಿತು ವಿನಾಪಡಣ ಆಕ್ಷೇಪಣೆಗಳಿದ್ದರೆ ಸದ್ರಿ ದಿನ್ನ ಹಗಲು 11ಗಂಟೆಗೆ ಮೇಲಿನ ಕೋರ್ಟು ಮುಂದೆ ಹಾಜರ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗತಿ ಈ ಮೂಲಕ ತಿಳಿಯಪಡಿಸಿಯವೆ.

G. V. Aithal

Advocate for Applicant

Date 29–7–1972,

Coondapur,

ಡಾ॥ ಮ. ರಾಜೀವ

ಕಳೆದ ಕಾಲು ಶತಮಾನ

ಇಪ್ಪತ್ತೈದು ವರ್ಷಗಳ ಹಿಂದೆ — ಕಾಲು ಶತಮಾನದ ಹಿಂದೆ ಭಾರತವು ಬ್ರಿಟಿಷರ ಆಡಳಿತೆಯಿಂದ ಬಿಡುಗಡೆ ಹೊಂದಿತು. ಸುಮಾರು ಐದುಸಾವಿರ ವರ್ಷಗಳ ಲಿಖಿತ ಇತಿಹಾಸವಿರುವ ಭಾರತವು ಸುಮಾರು ಎರಡು ಶತಮಾನಗಳ ಕಾಲ ಪಾಶ್ಚಿಮಾತ್ಯ ರಾಷ್ಟ್ರವಾದ ಬ್ರಿಟನಿನ ಆಧಿಪತ್ಯಕ್ಕೊಳಗಾಗಿತ್ತು. ಭಾರತದಲ್ಲಿ ವಸಾಹತುಗಳನ್ನು ಸ್ಥಾಪಿಸಿದ್ದ ಪ್ರೆಂಚರ ವಸಾಹತು ಬಿಳು ಗಳಲ್ಲಿ ಸ್ವತಂತ್ರವಾದುವು. ಗಳಲ್ಲಿ ಭಾರತದ ಅಂಗವಾಗಿದ್ದ ಪೋರ್ಚುಗೀಸ್ ವಸಾಹತುಗಳೂ ವಿಮೋಚನೆಗೊಂಡುವು. ಅಲ್ಲಿಗೆ ಭಾರತ ಉಪಖಂಡದಲ್ಲಿ ಪಾಶ್ಚಿಮಾತ್ಯ ಪಾರತಂತ್ರ್ಯ ಕೊನೆಗೊಂಡು ಸ್ವಾತಂತ್ರ್ಯದ ಸಂಪೂರ್ಣ ಸೂರ್ಯೋದಯವಾಯಿತು.

ಭಾರತ ಉಪಖಂಡದಲ್ಲಿ—ನಡೆದ ಕಾಲು ಶತಮಾನದ ಹಿಂದಿನ ಈ ಘಟನೆಯು ಚಾರಿತ್ರಿಕವೂ ಮಹತ್ವವೂ ಆಗಿದೆ ಎಂಬುದರಲ್ಲಿ ಅನುಮಾನವಿಲ್ಲ. ಈ ಉಪಖಂಡದಲ್ಲಿ ಸ್ವಾತಂತ್ರ್ಯ ಬರುವಾಗ ಅವ್ಯವಸ್ಥೆಯೂ ಗದಿಬಿಲಿಲ್ಲ. ಈ ಉಪಖಂಡದ ಮುಸ್ಲಿಂ ಬಹುಸಂಖ್ಯಾತ ಪ್ರದೇಶ ಪಾಕಿಸ್ತಾನವೆಂದು ಪ್ರತ್ಯೇಕ ರಾಷ್ಟ್ರವಾಯಿತು. ಸಹಸ್ರಾರು ಮಂದಿ ಮತೀಯ ಗಲಭೆಗಳಲ್ಲಿ ವ್ಯಥ ಥಾದರು. ಲಕ್ಷಾಂತರ ಮಂದಿ ನಿರಾಶ್ರಿತ ರಾದರು. ಈ ಚಾರಿತ್ರಿಕ ಘಟನೆಯು ಚರಿತ್ರೆಯ ಅತ್ಯಂತ ದೊಡ್ಡ ನಿರಾಶ್ರಿತರ ಸಮಸ್ಯೆಯನ್ನೂ ಆಡಳಿತೆಯ ಪ್ರಶ್ನೆಗಳನ್ನೂ ಉಂಟು ಮಾಡಿತು. ಇವುಗಳನ್ನು ನಿವಾರಿಸಬಹುದಿತ್ತೇ ಎಂಬ ಸಂಶಯಗಳು ಉಂಟಾಗುವುದು ಸಹಜ. ಆದರೆ ದೇಶದ ಮುಂದಾಳುಗಳು ಕೈಗೊಂಡ ನಿರ್ಣಯವು ಅನಿವಾರ್ಯವೆಂದೇ ಮನಗಂಡಿದ್ದರು.

ಗಳಲ್ಲಿನೇ ಚಾರಿತ್ರಿಕ ನಿರ್ಣಯದಿಂದ ಭಾರತೀಯ ಜನರು ತಮ್ಮ ಭವಿಷ್ಯತ್ತು, ರೂಪಿಸುವ ಅಧಿಕಾರವನ್ನು ಪಡೆದರು. ಭಾರತವು ಸ್ವತಂತ್ರವಾಗಿ ಜಗತ್ತಿನ ಇತರ ಸ್ವತಂತ್ರ ರಾಷ್ಟ್ರಗಳ ಸಾಲಿಗೆ ಸೇರಿಕೊಂಡಿತು. ಸ್ವಾತಂತ್ರ್ಯ ಚಳುವಳಿಯ ಅನೇಕ ಮುಂದಾಳುಗಳು ಅಧಿಕಾರ ಹಸ್ತಾಂತರದ ಬಗ್ಗೆ ತೀವ್ರ ಅಸಹ್ಯತೆಯನ್ನು ವಹಿಸಿದ್ದರು. ಅದುವರೆಗೆ ಅವರು ಅದರ್ಶಗಳ ಕೆಲವು ಅಂಗಗಳನ್ನು ಅವರು ತ್ಯಾಗ ಮಾಡಿಯಾದರೂ ಸ್ವಾತಂತ್ರ್ಯದ ಕೊಡುಗೆಯನ್ನು ಅಂಗೀಕರಿಸಿದರು.

ಈ ಇಪ್ಪತ್ತೈದು ವರ್ಷಗಳ ಇತಿಹಾಸವನ್ನು ಗಳಲ್ಲರ ಚಾರಿತ್ರಿಕ ಘಟನೆಯು ದೃಷ್ಟಿಯಿಂದ ಅವಲೋಕಿಸಿದರೆ ಭಾರತವು ಆದರ ಇತಿಹಾಸದಲ್ಲಿ ಹಿಂದೆಂದೂ ಇರದಷ್ಟು ಐಕ್ಯಮತವನ್ನು ಪಡೆದಿನೆಯೆನ್ನಬಹುದು. ಹಿಂದೆ ಜನರು, ತಾವು ಭರತ ಭೂಮಿಯ ಪ್ರಜೆಗಳೆಂದು ತನ್ಮುಷ್ಟಕ್ಕೆ ಭಾವಿಸಿದ್ದಿರಬಹುದು.

ಪ್ರಾಚೀನ ಕಾಲದ ಭಾರತೀಯರು ಒಂದೇ ರಾಜ್ಯದ ಯಾ ಕೇಂದ್ರ ಸರಕಾರದ ಆಡಳಿತೆಗೊಳಪಟ್ಟ ಪ್ರಜೆಗಳಾಗಿದ್ದಿರಲಿಲ್ಲ. ಅಶೋಕನ ಕಾಲದಲ್ಲಾಗಲೀ ಅಕ್ಬರ ಔರಂಗಜೇಬನ ಕಾಲದಲ್ಲಾಗಲೀ ಇಷ್ಟು ವ್ಯಾಪಕ ಪ್ರದೇಶವು ಒಂದೇ ಕೇಂದ್ರ ಸರಕಾರದ ಆಡಳಿತೆಗೊಳಪಟ್ಟಿದ್ದಿಲ್ಲ. ಇಷ್ಟು ದೊಡ್ಡ ಜನ ಸಮುದಾಯದ ಜವಾಬ್ದಾರಿಯನ್ನು ಪಡೆದಿದ್ದಿಲ್ಲ. ಇಷ್ಟು ಬೃಹತ್ ಪ್ರಮಾಣದಲ್ಲಿ ನೌಕರರನ್ನು ನೇಮಕಮಾಡಿ ಶಾಸನವನ್ನು ಜಾರಿಗೊಳಿಸುವ ದೈನಂದಿನ ಆಡಳಿತೆಯನ್ನು ನಿರ್ಣಯಿಸುವ ಕಾರ್ಯವನ್ನು ಮಾಡಿದ್ದಿಲ್ಲ. ಎಲ್ಲಿಕ್ಕಿಂತಲೂ ಮೇಲಾಗಿ ಇಂತಹ ಉಪಖಂಡದ ಇಷ್ಟು ದೊಡ್ಡ ಜನಸಂಖ್ಯೆಯ ಆರ್ಥಿಕ-ಸಾಮಾಜಿಕ ಅಭಿವೃದ್ಧಿಗಾಗಿ ಯೋಜನೆಯನ್ನು ತಯಾರಿಸುವ ಕೆಲಸವನ್ನು ಯಾರೂ ಮಾಡಿದ್ದಿಲ್ಲ.

ಇತಿಹಾಸದಲ್ಲಿ ಇಷ್ಟು ದೊಡ್ಡ ಪ್ರಮಾಣದ ಆಡಳಿತೆಯನ್ನು ನಿರ್ವಹಿಸುವ ಕಾರ್ಯವೇ ಹಿರಿದಾದುದು ಎಂಬ ಕಲ್ಪನೆ ನಮ್ಮಲ್ಲಿ ಅನೇಕರ ಮಂದಿಗೆ ಇರುವುದಿಲ್ಲ. ನಮ್ಮ ಆಡಳಿತೆಯು ಇದರ ವ್ಯವಸ್ಥೆಯು ಬ್ರಿಟಿಷ್ ಸರಕಾರವು ರಚಿಸಿದ ಯಂತ್ರವಾಗಿದೆ. ಸುಮಾರು ನೂರು ವರ್ಷದ ಕಾಲದಲ್ಲಿ ಬೆಳೆಸಿಕೊಂಡು ಬಂದಿದ್ದ ಈ ಆಡಳಿತೆಯ ಯಂತ್ರ ತೀರಾ ನಿರ್ಬಲವಾಗಿದೆ. ತೀರಾ ನಿಸ್ಸಾಹಯಕ ತೀರಾ ಅಸಮರ್ಥವಾಗಿದೆ ಎಂಬ ಕೂಗು ಯಾವಾಗಲೂ ಕೇಳಿಬರುತ್ತಿದೆ ಆದರೆ ಇದನ್ನು ಸರಿಗೊಳಿಸಬೇಕಾಗಿದೆಯೆಲ್ಲ ಇದನ್ನು ತ್ಯಜಿಸುವ ಹಾಗಿಲ್ಲ. ಬ್ರಿಟಿಷರು ಭಾರತವನ್ನು ಬಿಟ್ಟಾಗ ಆಡಳಿತೆಯ ಯಂತ್ರ ಮತ್ತೊಮ್ಮೆ ಕುಸಿದು ಹೋಯಿತು. ಇದನ್ನು ಸರಿಪಡಿಸುವ ಪ್ರಯತ್ನಗಳು ಇನ್ನೂ ಪೂರ್ಣವಾಗಿಲ್ಲ. ಹಿಂದುಳಿದಿರುವ, ಅಭಿವೃದ್ಧಿ ಹೊಂದದಿರುವ ಅನೇಕ ರಾಷ್ಟ್ರಗಳ ಮೂಲ ಪ್ರಶ್ನೆಯು ಆಡಳಿತೆಯ ಪುನರ್ ಸಂಘಟನೆಯಾಗಿದೆ. ಚರಿತ್ರೆಯ ಕುರಿತು ಅನೇಕ ಮಂದಿ ಹೆಮ್ಮೆ ಪಡುತ್ತಾರೆ. ಅನರು ಚಾರಿತ್ರಿಕ ಮಹಾಪುರುಷರ ಬಗ್ಗೆ ಹೆಮ್ಮೆ ಪಡುತ್ತಾರೆ. ಈ ಮಹಾಪುರುಷರು ಜನರ ದೈನಂದಿನ ಜೀವನದಲ್ಲಿ ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆಯಲ್ಲಿ ಯಾವ ರೀತಿಯ ಕಾರ್ಯಂ ಬದಲಾವಣೆಯನ್ನು ಮಾಡಿರುತ್ತಾರೆ ಎಂಬ ಯೋಚನೆಯನ್ನು ಗೋಜಿಗೆ ಹೋಗುವುದಿಲ್ಲ. ಪುಲಿಕೇಶಿ, ಪ್ರತಾಪ್ ಸಿಂಗ್, ಶಿವಾಜಿ ಅಥವಾ ಹರ್ಷ ಮುಂತಾದ ಮಹಾಪುರುಷರ ಆಡಳಿತೆ ಮಾಡಿದ ಪ್ರದೇಶ ಇಂದಿನ ಭಾರತದ ಒಂದೆರಡು ರಾಜ್ಯಗಳಷ್ಟು ವ್ಯಾಪಕವಾಗಿದೆ. ಹಿಂದಿನ ಕೆಲವು ರಾಜ್ಯಗಳು ಇಂದಿನ ಮೂರು ಜಿಲ್ಲೆಯಷ್ಟು ವಿಶಾಲವಾಗಿದೆ. ಕೇರಳ ರಾಜ್ಯವು ಯುರೋಪಿನ ಪ್ರಬಲ ಹಾಗೂ ಪ್ರಸಿದ್ಧ ಯುಗೋಸ್ಲಾವಿಯಾವಿಷ್ಟು ದೊಡ್ಡದಾಗಿದೆ. ಆದುದರಿಂದ ನಮ್ಮ ದೇಶದ—ಆದೂ ಸ್ವಾತಂತ್ರ್ಯಾನಂತರದ ಬೆಳವಣಿಗೆಯನ್ನು ವಿಚಾರ ಮಾಡುವಾಗ ಈ ವೈಶಾಲ್ಯಂತಗಳನ್ನು ಮರೆಯುವುದು ನಮ್ಮ ಚಾರಿತ್ರಿಕ ಹಾಗೂ ವಾಸ್ತವಿಕ ಸಂಕುಚಿತ ದೃಷ್ಟಿಯನ್ನು ತೋರಿಸುತ್ತದೆ. ಆದೂ ಅಲ್ಲದೆ ಭಾರತೀಯರು ದೀರ್ಘಕಾಲದಿಂದ ಮೂಡಿಕೊಂಡಿದ್ದ ಅವರ ಆಕಾಂಕ್ಷೆಗಳಿಗೂ ಇಂದಿನ ಪರಿಸ್ಥಿತಿಗೂ ಇರುವ ಅಂತರವನ್ನು ತೋರಿಸುತ್ತಿದೆಯೆನ್ನಬಹುದು.

ಇಪ್ಪತ್ತೈದು ವರ್ಷಗಳ ಹಿಂದಿನ ಚಾರಿತ್ರಿಕ ಘಟನೆಯನ್ನು ನಾವಿಂದು ನೆನೆದುಕೊಂಡಾಗ ಮುಖ್ಯವಾಗಿರುವ ಭಾರತೀಯ ಸಮಸ್ಯೆಗಳು ಚಾರಿತ್ರಿಕವಾದುವುಗಳಲ್ಲ, ಸಾಂಸ್ಕೃತಿಕವಾದುವೂ ಅಲ್ಲ; ಭಾರತೀಯರ ಪ್ರಧಾನ ಪ್ರಶ್ನೆಗಳು ಸಾಮಾಜಿಕವೂ ಆರ್ಥಿಕವೂ ಆಗಿರುವ ಸಮಸ್ಯೆಗಳಾಗಿವೆ. ಸ್ವಾತಂತ್ರ್ಯವು ಮೂಲಶಃ ಈ ಸಮಸ್ಯೆಗಳನ್ನು ಸರಿಪಡಿಸಲು ಸಹಾಯವಾಗಿದೆ. ಆದರೆ ಅದರಿಂದಲೇ ಸ್ವಾತಂತ್ರ್ಯಕ್ಕಾಗಿ ಜನರು ದೀರ್ಘ ಹೋರಾಟ ನಡೆಸಿದರು. ಸ್ವಾತಂತ್ರ್ಯವು ಅಂತಹ ಅವಕಾಶವನ್ನು ತಂದು ಕೊಟ್ಟಿತು. ಕಾಲು ಶತಮಾನದ ಅವಧಿಯಲ್ಲಿ ಭಾರತವು ಈ ಸಾಮಾಜಿಕ ಆರ್ಥಿಕ ಅಭಿವೃದ್ಧಿಯ ದಾರಿಯಲ್ಲಿ ಮುಂದುವರಿಯುವ ಮನಸ್ಸು ಮಾಡಿದೆ. ಈ ಮುನ್ನಡೆಯು ಸಾಕಷ್ಟು ಪ್ರಮಾಣದಲ್ಲಿ ನಡೆದಿಲ್ಲ. ಸಾಕಷ್ಟು ತೀವ್ರಗತಿಯಲ್ಲಿ ಸಾಗಿಲ್ಲ, ಇನ್ನಷ್ಟು ಬಲವಾಗಿ ಸಾಗಬೇಕಿತ್ತೆಂದು ಈ ಮುನ್ನಡೆಯ ಬಗ್ಗೆ ಅನೇಕ ಟೀಕೆಯಿದೆ. ಇವುಗಳೆಲ್ಲಾ ಸಹಜ. ಪ್ರಜಾಪ್ರಭುತ್ವದ ಮಿತಿಯೊಳಗೆ ಸಂವಿಧಾನದ ಆಯಕಟ್ಟಿನಲ್ಲಿ ಆರ್ಥಿಕ ಸಾಮಾಜಿಕ ಪ್ರಗತಿಯನ್ನು ಸಾಧಿಸುವುದಕ್ಕೂ ಬೇರೆ ವಿಧಾನದಲ್ಲಿ ಬೆಳವಣಿಗೆಯನ್ನು ಮಾಡುವುದಕ್ಕೂ ವ್ಯತ್ಯಾಸವಿದೆ. ಭಾರತವು ಪಾಶ್ಚಿಮಾತ್ಯ ಮೊದಲಿಯ ಪಾರ್ಲಿಮೆಂಟರಿ ಪದ್ಧತಿಯ ಸರಕಾರವನ್ನು ಅಂಗೀಕರಿಸಿದೆ ಇದನ್ನು ಅದು ಯಾಕೆ ಅಂಗೀಕರಿಸಿದೆ ಎಂಬುದು ಬೇರೆಯೇ ಪ್ರಶ್ನೆ. ಆದರೆ ಈ ಪದ್ಧತಿಯನ್ನು ಅನುಸರಿಸಿದ ಬಳಿಕ ಅದು ಈ ಪದ್ಧತಿಗೆ ವಿರುದ್ಧವಾಗಿ ಅದರ ಧ್ಯೇಯ ಧೋರಣೆಗಳನ್ನು ನಿರೂಪಿಸಬೇಕೆನ್ನುವುದೂ ಸರಿಯಲ್ಲ.

ಇಪ್ಪತ್ತೈದು ವರ್ಷಗಳ ಹಿಂದೆ ನಡೆದ ಚಾರಿತ್ರಿಕ ಘಟನೆಯು ಭಾರತೀಯ ರಾಜಕೀಯದ ರೂಪವನ್ನು ಬದಲು ಮಾಡಿದೆ. ಈ ಬದಲಾವಣೆ ಬರಿಯ ಭೂಪಟದ ಬದಲಾವಣೆಯೇ ಅಲ್ಲ. ಅದು ಜನರ ಹಿತಸಾಧನೆಯ ಬದಲಾವಣೆಯೂ ಆಗಿದೆ. ಗಳಲ್ಲರಲ್ಲಾದ ಪರಿವರ್ತನೆಯ ಫಲವಾಗಿ ಬ್ರಿಟಿಷ್ ಭಾರತದಲ್ಲಿದ್ದ ಐನೂರಕ್ಕೂ ಮಿಕ್ಕಿದ ಆಶ್ರಿತ ಸಂಸ್ಥಾನಗಳು ಕ್ರಮೂಗತವಾಗಿ ಭಾರತದ ರಾಜ್ಯಗಳೊಂದಿಗೆ ವಿಲೀನಗೊಂಡುದು ಮಹತ್ವದ "ಮೌನಕ್ರಾಂತಿ"ಯೆಂದೇ ಹೇಳಬೇಕು. ಕಾಶ್ಮೀರವನ್ನೊಂದನ್ನುಳಿದರೆ ಉಳಿದೆಲ್ಲಾ ಆಶ್ರಿತ ರಾಜ್ಯಗಳ ವಿಲೀನೀಕರಣವು ಒಂದೆರೆಯಿಲ್ಲದೆಯೇ ನಡೆದಿದೆ. ಬೇರೆ ಬೇರೆ ರೀತಿಯ ಆಡಳಿತೆಯ ಪದ್ಧತಿಯ ಈ ಸಂಸ್ಥಾನಗಳು ಭಾರತದ ರಾಜ್ಯಗಳೊಂದಿಗೆ ಸೇರ್ಪಡೆ ಹೊಂದಿರುವುದು ಭಾರತ ಇತಿಹಾಸದ ಅಪೂರ್ವ ಘಟನೆಯೆಂದೇ ಹೇಳಬೇಕು. ಇದನ್ನು ಭಾರತೀಯ ಪ್ರಜೆಗಳೆಲ್ಲರೂ ಸ್ಮರಿಸಿಕೊಳ್ಳುವುದು ಅಗತ್ಯವಿದೆ.

> ದೇಶ ಸ್ವಾತಂತ್ರ್ಯಗೊಂಡ ಕಾಲು ಶತಮಾನದ ನಮ್ಮ ಸಾಧನೆ-ಸಿದ್ಧಿಗಳ ಬಗೆಗೆ ಅಸಂತೋಷ-ಅತೃಪ್ತಿಗೊಳ್ಳಬೇಕಾಗಿಲ್ಲ. ನಮ್ಮ ನ್ಯೂನತೆಗಳನ್ನು, ದೋಷಗಳನ್ನು ಬೆಟ್ಟುಮಾಡಿ ಹೋದರೂ ಗುರಿಯತ್ತ ಸಾಗುತ್ತಿದ್ದೇವೆಂಬ ಸಮಾಧಾನವಾದರೂ ನಮಗೆ ಬೇಡವೆ?

ಈ ಕಾಲು ಶತಮಾನದ ಭಾರತೀಯ ಇತಿಹಾಸವನ್ನು ಯೂರೋಪೋಚಿನೆ ಮಾಡಿದಾಗ ಭಾರತದ ಸ್ವತಂತ್ರ್ಯ ಸರಕಾರವು ಪಂಚವಾರ್ಷಿಕ ಯೋಜನೆಯ ಕಾರ್ಯವನ್ನು ಪ್ರಾರಂಭಿಸಿದ್ದು ಇನ್ನೊಂದು ಪ್ರಮುಖವಾದ ಸಾಧನೆಯೆಂಬುದಾಗಿ. ಭಾರತದ ಮೂಲಭೂತ ಸಮಸ್ಯೆಗಳು ಅತೀವವಾದ, ಸರ್ವೇವ್ಯಾಪಿಯಾದ ಬಡತನ, ಶಿಕ್ಷಣದ್ಯೋಗ, ನಿರಕ್ಷರತೆ ಅನೇಕ ದಶಕಗಳಿಂದಲೂ ಬಗೆಹರಿಸಲು ಬಗೆಹರಿಸಲಾಗದೆ ಉಳಿಯಲ್ಪಟ್ಟ ಸಮಸ್ಯೆಗಳಾಗಿವೆ. ನೆಹರೂರವರ ದೂರದೃಷ್ಟಿಯನ್ನು ಇಲ್ಲಿ ನೆನೆದುಕೊಳ್ಳಬೇಕು. ಭಾರತದಂತಹ ಜೀವಿತ ಜನರ ಹಿಂಸಾಧನೆಯನ್ನು ಬರಿಯ ರಾಜಕೀಯ ಸ್ವಾತಂತ್ರ್ಯದಿಂದ ಬದಲು ಮಾಡಲು ತೆಗ್ತು ಪೆದಿಲ್ಲ. ಅದು ನಿರ್ದಿಷ್ಟವಾಗಿ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಯಿಂದ ಪೂರ್ತ ಬದಲು ಮಾಡಲು ಸಾಧ್ಯವೆಂಬ ಬಹಳ ಹಿಂದೆಯೇ ನೆಹರೂ ತಿಳಿದಿದ್ದರು. ಆದುದರಿಂದ ಇಂದು ಭಾರತವು ಯೋಜನಾಬದ್ಧವಾದ ಬೆಳವಣಿಗೆಯನ್ನು ಅದರ ಅಂಗವನ್ನಾಗಿ ಆಳವಡಿಸಿ ಕೊಂಡಿರುವುದಾದರೆ ಅದು ಸ್ವತಂತ್ರ ಭಾರತಕ್ಕೆ ನೆಹರೂರವರ ಅಮೂಲ್ಯ ಕೊಡುಗೆಯಾಗಿದೆ.

ಈ ಕಾಲು ಶತಮಾನದಲ್ಲಿ ಭಾರತೀಯರು ಸಾಧಿಸಿದ ಸಾಧನೆಗಳು ಸಾಮಾನ್ಯವಲ್ಲ. ಅವುಗಳನ್ನು ನಿರ್ನಿಕಾರ ದೃಷ್ಟಿಯಿಂದ ಹಾಗೂ ನಿಷ್ಪಕ್ಷಪಾತ ಮನಸ್ಸಿನಿಂದ ನೋಡಿದಲ್ಲಿ ಭಾರತದ ಸಾಧನೆಗಳು ಮುಖ್ಯವಾಗಿ ಸಾಮಾಜಿಕ ಸುಧಾರಣೆಗಳು, ಆರ್ಥಿಕ ಅಭಿವೃದ್ಧಿಕಾರ್ಯಗಳು—ಭಾರತೀಯ ಚರಿತ್ರೆಯ ಹಿರಿಯ ಕಾರ್ಯಗಳೆಂದೇ ಹೇಳಬೇಕು. ಆದರೆ ಭಾರತೀಯ ಜನ ಸಮುದಾಯದ ಬಹುಸಂಖ್ಯಾಯದ ಹಿತದೃಷ್ಟಿಯಿಂದ ನೋಡುವುದಾದರೆ, ಜನರ ಆಶೋಪೇಕ್ಷೆಗಳ ದೃಷ್ಟಿಕೋನದಿಂದ ಪರಿಶೀಲಿಸುವುದಾದರೆ, ಭಾರತವು ಇನ್ನೂ ಅದರ ಆದರ್ಶ ಸಾಧನೆಯ ದಾರಿಯಲ್ಲಿ ಹಿಂದುಳಿದಿದೆ. ಸ್ವಾತಂತ್ರ್ಯ ಪ್ರಾಪ್ತಿಯಾಗಿ ಕಾಲು ಶತಮಾನ ಸಂದಿರುವ ಈ ಸಂದರ್ಭದಲ್ಲಿ ಭಾರತೀಯ ಪ್ರಜೆಗಳು ಅವರ ಸಾಧನೆಗಳ ಬಗ್ಗೆ ಹೆಮ್ಮೆ ಪಡುವುದರೊಂದಿಗೆ ತಮ್ಮ ನ್ಯೂನತೆ ಪಾಗೂ ಳುಂದು ಕೊರತೆಗಳ ನಿವಾರಣೆಯ ಬಗ್ಗೆಯೂ ಕಾಳಜಿಯುಳ್ಳವರಾಗುವುದು ಹಾಗೂ ತಕ್ಕ ನಿವಾರಣೋಪಾಯಗಳನ್ನು ಕೈಗೊಳ್ಳುವುದೂ ಅವರ ಕರ್ತವ್ಯವೆಂದು ತಿಳಿಯುವುದು ಅತ್ಯಗತ್ಯವಿದೆ. ಒಂದು ರಾಷ್ಟ್ರದ ಇತಿಹಾಸದಲ್ಲಿ ಕಾಲು ಶತಮಾನ ದೊಡ್ಡಕಾಲವೇ ಅಲ್ಲ. ಅದರ ಕಾಲದ ಕರ್ತವ್ಯವನ್ನು ಮರೆಯುವುದು ಮಹಾ ಅಪರಾಧವಾಗುವುದು.

ಶ್ರೀ ತಪ್ಪಲಸೆ ನಿಜ್ಞೇಶ್ವರ ಶರ್ಮಾ

ರಾಜಕೀಯ ಪಕ್ಷಗಳು ಹಾಗೂ ಜನಸೇವೆ

ರಾಜಕೀಯ ಪಕ್ಷಗಳು ಜನಸೇವೆಗಾಗಿ ಹುಟ್ಟುತ್ತವೆ; ಆದರೆ ಅಧಿಕಾರಕ್ಕಾಗಿ ಪ್ರಯತ್ನಿಸುತ್ತವೆ. ಯೀನತೀನ ಅಧಿಕಾರ ಸೂತ್ರ ಹಸ್ತಗತವಾಯಿತೆಂದರೆ, ಜನ ಸೇವೆಗೆ ತಿಲಾಂಜಲಿ ಬಿಡುತ್ತವೆ. ಮತ್ತೆ ಆವಶ್ಯಕತೆ ಜನಸೇವೆಯ ಜ್ಞಾಪಕ ಬರುವುದು ಮುಂದಿನ ಚುನಾವಣೆಯ ವೇಳೆಯೇ. ಜನಸೇವಾ ದೀಕ್ಷಿತರ ನಡಾವಳಿಗಳ ಅಲ್ಪ ಚರ್ಚೆ ಇಲ್ಲಿ ನಡೆದಿದೆ.

ಜನಸೇವೆಯ ಆದರ್ಶವನ್ನಿರಿಸಿಕೊಂಡು ಪಕ್ಷಗಳು ಹುಟ್ಟುತ್ತಿರುವುದು ಹಿಂದಿನಿಂದಲೂ ಇಷ್ಟೇ ದೇಶದ ಸಮಸ್ಯೆಯ ನಿವಾರಣೆಗೆ ಮೊತ್ತ ಮೊದಲಾಗಿ ಜನತೆಯ ವಿಶಿಷ್ಟ ಭೂಸ್ಥಿತಿಯನ್ನು ಸುಧಾರಿಸಲು ಸೇವಾಭಾವನೆಯಿಂದ ಪಕ್ಷಗಳು ಜನ್ಮತಾಳುವುದನ್ನು ಆಧುನಿಕ ಹಿಂದಿನ ಇತಿಹಾಸ ನಿರೀಕ್ಷಿಸುವವರಿಗೆ ತಿಳಿದು ಬರುವಂತೆ ಇವೆ.

ನಮ್ಮ ದೇಶದ ಸ್ವಾತಂತ್ರ್ಯ ಹೋರಾಟವೇ ಸ್ಫೋಟವೊದಲನೆಯದಾಗಿ ಪಕ್ಷಗಳ ಉತ್ಪತ್ತಿಯಕ್ಕೆ ಕಾರಣವಾಯಿತೆನ್ನಬಹುದಿಲ್ಲಿ. ಅಂದಿನ ಜೋರಾಟಕ್ಕೆ ಜನತೆಯನ್ನು ಅಣಿಗೊಳಿಸಲು ಹಾಗೂ ಅವರ ಸಂಕಷ್ಟಗಳ ನಿವಾರಣೆಗಾಗಿ ಕಾಂಗ್ರೆಸ್ ಜನ್ಮ ತಾಳಿತು. ಅನೇಕ ವಿದ್ವಾಂಸರ, ಮೇಧಾವಿಗಳ ತ್ಯಾಗ, ಸೇವೆ, ನಿಷ್ಠೆಯಿಂದಾಗಿ ಬೆಳೆದು ಅದು ಗಾಂಧೀಜಿಯವರ ಕಾಲದಲ್ಲಿ ತನ್ನ ಉದ್ದೇಶವನ್ನೂ ಸಾಧಿಸಿತು.

ಅನಂತರದ ಸ್ವರೂಪ

ಸ್ವಾತಂತ್ರ್ಯೋತ್ತರದಲ್ಲಿ ಪಕ್ಷಗಳ ಹುಟ್ಟು ಹರವು-ತುಂಬಾ ಬೆಳೆಯುವಂತಾಯಿತು. ಹಿಂದೆ ಸ್ವಾತಂತ್ರ್ಯ ಸಂಪಾದನೆಯೊಂದೇ ಗುರಿಯಾಗಿ ಅದೇ ದಾರಿಯಲ್ಲಿ ಮುನ್ನಡೆದ ಪಕ್ಷಗಳು—ರಾಜಕೀಯ ಪರಿಯತ್ತಾಗುವಂತಾಯಿತು. ಅಡಳಿತ, ಅಧಿಕಾರಗಳಿಸಿ, ಅಭಿವೃದ್ಧಿ ಸಾಧನೆಯಲ್ಲಿ ಹೆಚ್ಚು ಪಾಲುಗೊಳ್ಳಬೇಕೆಂದು ಅವುಗಳ ಧ್ಯೇಯ ಘೋರಣೆಯಾಯಿತು. ಹಾಗಾಗಿ ಪಕ್ಷಗಳಿಗೆ ರಾಜಕೀಯ ಸಂಬಂಧ—ಸ್ವರೂಪ ಬರುವಂತಾಯಿತು. ಜನಸೇವೆ ಪಕ್ಷದ ಮೇಲು ಹೊದಿಕೆಯಾಗಿ ಕಾಣಿಸಿಕೊಂಡಿತು.

ಅಲ್ಲಿಯವರೆಗೆ ಪಕ್ಷಗಳೇ ಹೆಚ್ಚು ಇರಲಿಲ್ಲ. ಆನಂತರ ರಾಜಕೀಯ ಸ್ವರೂಪಕ್ಕೆ ತಿರುಗಿದಾಗ ನಮ್ಮಲ್ಲಿ ಅನೇಕ ಪಕ್ಷಗಳು ತಲೆಯೆತ್ತಿದವು. ಅದರಲ್ಲೂ ಪ್ರಥಮ ಚುನಾವಣೆಯ ನಂತರ ಈ ರಾಜಕೀಯ ಪಕ್ಷಗಳ ಉಗಮ ಅಡೆತಡೆ ಇಲ್ಲದೇ ಆಯಿತು. ರಾಜಕೀಯಕ್ಕಾಗಿಯೇ ಪಕ್ಷಗಳೂ ಆಯಿತು.

ಮುಖ್ಯ ಗುರಿ

ಇಷ್ಟೊಂದು ತೀವ್ರಗತಿಯಲ್ಲಿ ಪಕ್ಷಗಳ ಸಂಖ್ಯೆ ಬೆಳೆಯುತ್ತಿರುವುದಕ್ಕೆ ಮುಖ್ಯಕಾರಣ ಅಧಿಕಾರ ಗಳಿಕೆ. ದೇಶದ ಆಡಳಿತವನ್ನು ಹೇಗಾದರೂ ಕೈಗೆ ಪಡೆಯಬೇಕೆಂಬುದೇ ಈ ಪಕ್ಷಗಳಲ್ಲಿಯ ಒಳರಹಸ್ಯವೆಂದರೆ ತಪ್ಪಾಗದು. ಹಾಗಾಗಿ ದೇಶವನ್ನು ಮುನ್ನಡೆಸುವ ಅನೇಕ ಆಶೋತ್ತರಗಳನ್ನು ಇವು ಪ್ರದರ್ಶಿಸಿ ಜನಬೆಂಬಲ ಗಳಿಸುವ ಹೆಂಬಲ ಪ್ರಯತ್ನಕ್ಕೆ ಸಾಗಿದವು.

ಸಾಮಾನ್ಯ ಎಲ್ಲ ಪಕ್ಷಗಳ ಘೋರಣೆಯೂ ದೇಶದ ಅಭಿವೃದ್ಧಿಯೇ ಎಂದು ಎನಿಸಿದರೂ ಅವುಗಳಲ್ಲಿ ಕೆಲವೊಂದು ವಿಶಿಷ್ಟ ತತ್ವ ಪ್ರಭಾವಗಳನ್ನು ಅವು ಹೊಂದಿರುತ್ತವೆ. ಹಾಗಾಗಿ ಅವನ್ನು ಬಿಂಬಿಸಿ—ನಂಬಿಸಿ, ಜನತೆಯನ್ನು ಆಕರ್ಷಿಸಲು ಇವು ತಮ್ಮ ಕಾರ್ಯವನ್ನು ರೂಪಿಸಿದವು.

ಯಾವುದು ಮೊದಲು?

ಪ್ರಜಾಪ್ರಭುತ್ವದಲ್ಲಿ ಜನಬೆಂಬಲವಿಲ್ಲದಿದ್ದರೆ ಯಾವ ಪಕ್ಷವೂ ಬದುಕಲಾರದು. ಯಾವ ಯಕ್ಷನೂ ಅಧಿಕಾರ ಗಳಿಸಲಾರನು. ಆದರೆ ಜನಬೆಂಬಲ ಪೇಗೆ ಗಳಿಸಬೇಕು? ಅಧಿಕಾರ ವಿನಹ ಜನಕ್ಕೆ ಬೇಕಾದಂಥ ಯಾವ ಸೌಲಭ್ಯ ಸಹಕಾರ ನೀಡಲೂ ಸಾಧ್ಯವಾಗುವುದಿಲ್ಲ. ಆದರೆ ಜನತೆ ಬೆಂಬಲಿಸದ ಹೊರತು ಈ ಅಧಿಕಾರದ ಹೆಂಬಲವೂ ದಕ್ಕುವುದಿಲ್ಲ. ಆಂದಾಗ ಈ ಸಮಸ್ಯೆಗೆ ಎಲ್ಲ ಉತ್ತರ ಹುಡುಕಬೇಕು?

ಅನೇಕ ಪಕ್ಷಗಳು ಚುನಾವಣೆಯ ಪರೀಕ್ಷೆಯಲ್ಲಿ ಫೇಲಾಗುವುದಕ್ಕೆ ಇದೇ ಕಾರಣವಾಗಿದೆ. ಪಕ್ಷದ ಮುಖ್ಯ ಉದ್ದೇಶ ಜನಸೇವೆಯೊಂದರೂ ಅದು ರಾಜಕೀಯಕ್ಕೆ ಇಳಿದ ನಂತರ ಅಧಿಕಾರ ಗಳಿಕೆ ಮುಖ್ಯವಾಗಿ ಜನಸೇವೆ ಗೌಣವಾಗುತ್ತ ಬಂದಿದೆ. ಅಧಿಕಾರವೇ ಪ್ರಧಾನವೆಂದು ಹೇಳಿದರೆ ಅದು ಸಮಂಜಸವಾಗಲಾರದೆಂದು ಜನಸೇವೆಯನ್ನು ಮುಂದೆ ಹಿಡಿದು ವ್ಯವಹರಿಸುವ ಪಕ್ಷಗಳ ವ್ಯವಸ್ಥೆ ಹೇಗೆ ಸುಗಮವಾಗಿ ಸಾಗೀತು? ಪರೀಕ್ಷೆಯಲ್ಲಿ ಹೇಗೆ ಯಶಗಳಿಸೀತು?

ಚುನಾವಣೆಯ ಪಕ್ಷಗಳು

ಕೆಲವು ರಾಜಕೀಯ ಪಕ್ಷಗಳು ಚುನಾವಣೆಗಾಗಿಯೇ ಇರುತ್ತವೆಂದರೂ ತಪ್ಪಾಗದು. ಉಳಿದ ಅವಧಿಗಳಲ್ಲಿ ಅದರ ಹೆಸರು ಸಹ ಕೇಳದಿದ್ದರೂ ಚುನಾವಣೆ ಬಂತೆಂದರೆ ಎಲ್ಲೆಲ್ಲದ ಪದ್ಮ—ಸಡಗರದಿಂದ ಚುನಾವಣೆಯ ರಣಕ್ಕೆಳೆದು ಜನತೆಯ ಮುಂದೆ ಕಾಣಿಸಿಕೊಳ್ಳುತ್ತವೆ. ಸ್ವರ್ಗವನ್ನೇ ಭೂಮಿಗಿಳಿಸುವ ಪರಕು, ಸಾಕಷ್ಟ ತೋರಿಸುತ್ತವೆ. ಇದರಿಂದ ಜನವಸಾದರೂ ತಿಳಿದು ಬೆಂಬಲಿಸಿದರೆ ಅಧಿಕಾರ. ಇಲ್ಲದಿದ್ದರೆ ಮುಂತ್ತೊಂದು ಜನಾವಣೆಯೇ ಕೆಲವು ಪಕ್ಷಗಳಿಗೆ ಅವಿರ್ಭವಿಸಲು ಅವಕಾಶ ಬೇಕಾಗುತ್ತದೆ.

ಆದರೆ ಎಷ್ಟೋ ಪಕ್ಷಗಳು ಅಲ್ಲಿಯವರೆಗೂ ಉಳಿಯುವುದಿಲ್ಲ. ಮುತ್ತೊಂದರಲ್ಲಿ ವಿಲೀನವೋ, ಅಥವಾ ಬಳಿದೋ ಅಂತೂ ಮುಕ್ತಾಯವಾಗುತ್ತವೆ. ಜನಸೇವೆಯ ಹೆಸರಿನ ಪಕ್ಷಗಳ ಸ್ಥಿತಿ ಶೋಚನೀಯವಾಗುತ್ತದೆ. ಪಕ್ಷಗಳ ಕಛೆ ಈ ರೀತಿಯಾಗಿ ನಡೆದಿದೆ ಹೊಸ್ಮಲ್ಲಿ.

ಇದಕ್ಕೇನು ಕಾರಣ?

ಇಲ್ಲಿರುವ ಕಾರ್ಯನೇ ಅಥವ ಮುಂದಿನ ಕಾರಣದ ನಾಂದಿಯೆಂಬುದನ್ನು ಸುರೆಯುವಂತಿಲ್ಲ. ಚುನಾವಣೆಗಾಗಿಯೇ ಇರುವ ಪಕ್ಷಗಳ ಭವಿಷ್ಯ ಉಭಯತ್ರವೇ? ಚುನಾವಣೆಯೂ ಜನಸೇವೆ ಮೂಡಿ ಜನಪ್ರಿಯತೆ ಇದ್ದರೆ ಮಾತ್ರ ಪಕ್ಷಕ್ಕೆ ಬಲ ಬರುತ್ತದೆ. ಅಧಿಕಾರವಿಲ್ಲದಿದ್ದರೂ ಅಸ್ತಿತ್ವಉಳಿಯುತ್ತದೆ. ಇಲ್ಲದಿದ್ದರೆ ಸಾವನ್ನು ಅಪ್ಪಿಕೊಂಡೇ ಹುಟ್ಟಿದಂತಾಗುತ್ತದೆ.

ಕೆಲವು ಸಾರಿ ಪಕ್ಷಗಳು ಘೋಷಿಸುವ, ಜನತೆಗೆ ನೀಡಬಯಸುವ ಆಶ್ವಾಸನೆಗಳೇ ಬಲೂ ಆರಿಸಿ ಬರುವುದುಂಟು. ಹೊಸಕಿಚ್ಚನ್ನು ನೋಡುವ ಅಭಿರುಚಿಯುಳ್ಳ ಜನತೆ ಕೆಲವು ಸಾರಿ ಇಂಥ ಆಕರ್ಷಕ ಘೋಷಣೆಗೂ ಮರುಳಾಗಿ ಆರಿಸಿ ಬರುವುದುಂಟು. ಆದರೆ ಅಸಾಧ್ಯವಾದುದನ್ನು ಸಾಧಿಸುವ ಮಾತು ಆಡಿದಾಗ ಕೆಲವು ಸಾರಿ ಸಾಕಷ್ಟು ವಿಚಾರಿಸದೇ ಮೋಸ ಹೋಗುವುದುಂಟು. ಆನಂತರ ಅನುಭವವಾದಾಗ ಆದರೆ ಪ್ರತಿಕ್ರಿಯೆ ಪಕ್ಷಗಳ ಮೇಲಾಗುತ್ತದೆ. ಇಂಥ ಕಾರಣಗಳಿಂದ ಪಕ್ಷದ ಹಿಗ್ಗು-ಕುಗ್ಗು ನಮ್ಮಲ್ಲಿ ನಡೆಯುತ್ತಿರುವುದಾಗಿದೆ.

ಚುನಾವಣೆಯ ಪಾಠ

ಆಗಾಗ ನಡೆಯುವ ಚುನಾವಣೆಗಳಿಂದ ಪಕ್ಷಕ್ಕೂ ಜನಕ್ಕೂ ಲೋಕಾನುಭವದ ಪಾಠ ಸಿಗುವಂತಾಗಿದೆ. ಪಕ್ಷಗಳು ತಮ್ಮ ಸೋಲಿನ ಹಿನ್ನೆಲೆಯನ್ನು ನಿರೀಕ್ಷಿಸಿದರೆ, ಜನತೆ ತಾವು ಆರಿಸಿದ ಪಕ್ಷವ ಸತ್ಯ-ತತ್ವ ಎಷ್ಟರಮಟ್ಟಿಗೆ ಕೃತಿಗಿಳಿದಿದೆ ಎಂದು ಪರೀಕ್ಷಿಸಲು ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ಚುನಾವಣೆಯೆನ್ನುವುದು ಆತ್ಮ ನಿರೀಕ್ಷಣೆಯ ಮೈಲುಗಲ್ಲು ಎಂದರೂ ತಪ್ಪಾಗದು.

ಜನರನ್ನು ಮಂಚಿಸಲು ಬೇಕು ಬೇಕಾದಂಥ ಆಶ್ವಾಸನೆ—ಅಕಾಂಕ್ಷೆಗಳನ್ನು ಘೋರಿಸಿ ಬಾಣ ಬಂಡದ ಮೊತುಗಳಹ್ವಾಡಿ ಜೇಗಾದರೂ ಜನ ಮರುಳಾಗಿ ತಮ್ಮನ್ನು ಆರಿಸುವಂತೆ ಮಾಡುವ ಪ್ರಯತ್ನ ಚುನಾವಣೆಯಲ್ಲಿ ನಡೆದೇ ನಡೆಯುತ್ತದೆ. ಒಮ್ಮೆ ಇಂಥ ಅನುಭವ ಜನತೆಗೆ ಆದರೆ ಮುಂದೆಂದೂ ಅದು ಮೋಸ ಹೋಗುವ ಸಂಭವ ವಿರುವುದಿಲ್ಲ. ಮೋಸ ಹೋಗಲೂ ಬಾರದು. ಚುನಾವಣೆಯ ಪಾಠದಿಂದ ಅಂಥ ಪಕ್ಷಕ್ಕೆ ತಕ್ಕ ಶಾಸ್ತಿ ಮಾಡಬೇಕು.

ಇಂದೇನಾಗಿದೆ?

ಇಂದು ಈ ಕಹಿ-ಕಟು ಅನುಭವಗಳು ಜನಕ್ಕೆ ಸಾಕಷ್ಟಾಗಿವೆ, ಚುನಾವಣೆ

(ಮೂವತ್ತೈರಡನೇ ಪುಟ ನೋಡಿರಿ)

CANARA FINANCE CORPORATION (REGD.)

Rukmini Building,

CHICKPET,

BANGALORE-2A.

Grams: MINIBANK. Phone: 71934.

Space available in our Multi-Storeyed Building Under Construction at No. 14/3, Nrupathunga Road, Bangalore (Opposite Reserve Bank building under construction.) For details please call on us or write to us.

M. P. PRABHU,
Managing Partner.

ಶ್ರೀ ಗೌರೀಶ ಕಾಯ್ಕಿಣಿ

ಭೂಮಿತಿಗೆ ಪ್ರಮೇಯಗಳೆಷ್ಟು?

(ಮೂವತ್ತೈದು ವರ್ಷಗಳ ಕರ್ಮಕಥೆ)

ದೇಶದಲ್ಲಿ ಭೂಹಿಡುವಳಿಗೊಂದು ಮಿತಿ ಬೇಕು ಎಂಬುದು ಮೂವತ್ತೈದು ವರ್ಷಗಳ ಹಿಂದಿನ ಇಲುಮೆ. ಈ 'ಮಿತಿ' ನಜೆದು ಬಂದ ವಿಲಕ್ಷಣ ದಾರಿಯ ಅವಲೋಕನ ವ್ಯಥಪಾಗಲಾರದು. ಉತ್ತಮ ಗುರಿಮುಟ್ಟುವಲ್ಲಿ ಬರುವ ವಿಘ್ನ ನಿರ್ಧಾರಗಳ ವೈಚಾರಿಕ ಕಥೆಯಿದೆ!

ಆಸೆಯ ಮನೆಗೆ ಮೂಡೇ ಇಲ್ಲವಂತೆ. 'ಆಶಾವಧಿಂ ಕೋ ಗತಃ?" ಎಂದು ಸುಭಾಷಿತನೇ ಕೇಳಿದೆ. ಮನುಷ್ಯನಿಗೆ ಎಷ್ಟು ಭೂಮಿ ಬೇಕು? ಎಂಬುದೂ ಈ ಆಕೆಯ ಅವಧಿಯುಷ್ಟೇ ಹಳೆಯ ಪ್ರಶ್ನೆ. ಈ ಪ್ರಶ್ನೆಯ ಉತ್ತರವನ್ನು ಟಾಲಸ್ಟಾಯಿ ತನ್ನ ಒಂದು ಪ್ರಸಿದ್ಧ ಕತೆಯ ರೂಪದಲ್ಲಿ ಬರೆದಿದ್ದುಂಟು. ಈ ಉತ್ತರ ಹೀಗೆ-ಕೊನೆಗೂ ಮನುಷ್ಯನಿಗೆ ಆಗತ್ಯವಾಗಿ ಬೇಕಾದದ್ದು 2|| ಮೊಳದಷ್ಟು ನೆಲ-ಸತ್ತಾಗ ಅವನ ಹೆಣವನ್ನು ಹೂಣಿಯಲಿಕ್ಕೆ! ಆದರೆ ಹಿಂದುಗಳಿಗೆ ಆಷ್ಟಾಬೇಡ. ಬೇಕಿದ್ದರೂ ಕೆಲವೇ ತಾಸು. ಚಿತೆಯ ಮೇಲಿಟ್ಟ ಹೆಣ ಸುಟ್ಟು ಬೂದಿಯಾಗುವ ತನಕ. ಆಮೇಲೆ ಯಾರಿಗೆ ನಿನು ಬೇಕು? ಭಸ್ಮೀ ಭೂತಸ್ಯ ದೇಹಸ್ಯ ಪುನರಾಗಮನಂ ಕುತಃ? 'ಅದಕ್ಕೇ ಅಂಬಿಕಾತನಯದತ್ತರು ಹಾಡಿದರು, 'ಹಣ ಬಾಕಿ, ಹೆಣ ಬಾಕಿ, ಕುಣಿಯೋಣ ಬಾ!"

ಇಂದು ನಾವೆಲ್ಲ ತಜ್ಞರೂ ಅಜ್ಞರೂ ಮುತ್ಸದ್ದಿಗಳೂ ಮುದಿಹುಚ್ಚರೂ ಕೂಡಿಯೇ ರಿಂಗಣ ಹಾಕಿ ಕುಣಿಯು ಹತ್ತಿದ್ದೇವೆ. ಈ ಭೂಮಿತಿಯ ಪ್ರಶ್ನೆಯ ಸುತ್ತಲು ಹಿಡುವಳಿಯ ಪರಮೂವಧಿ ಎಷ್ಟಿರಬೇಕು? ೧೦ ಎಕರೆಯೆ? ೧೫ ಎಕರೆಯೆ? ೧೮ ಎಕರೆಯೋ? ಭೂಮಿಗೆ ಮಾತ್ರ ಮಿತಿ ಇರಬೇಕೋ. ನಗರವಲ್ಲಿಯ ಆಸ್ತಿಗೂ ಪರಮಾವಧಿ ಬೇಕೋ? ಮನೆಗೆ ಸಿಲಿಂಗು ಹಾಕುವಂತೆ ಮನೆಗಳ ಸೊತ್ತಿಗೂ ಸಿಲಿಂಗ ಹಾಕಬೇಕೋ? ನಗರದ ರಸ್ತೆಗೆ ಸಿಲಿಂಗ ಬೇಡ. ಸಂಸ್ಥಾನಿಕರ ರಸ್ತೆ ದೇಶವ್ಯಾಪ್ತಂತ ಬೇರೆ ಬೇರೆ ರಾಜ್ಯಗಳಲ್ಲಿ ಹರಡಿದೆ. ಎಲ್ಲ ರಾಜ್ಯಗಳಲ್ಲಿ ಒಂದೇ 'ಪರಮಾವಧಿ' ಹಾಕಲು ಸಾಧ್ಯವಿಲ್ಲ. ಒಬ್ಬನೇ ಶ್ರೀಮಂತನ (ಮಹಾರಾಜನ) ರಸ್ತೆಗೆ ಒಂದು ರಾಜ್ಯದಲ್ಲಿ ಮಿತ ಇನ್ನೊಂದರಲ್ಲಿ ಇಲ್ಲ—ಹೀಗೆಲ್ಲ ಘೋರ ಅನವಸ್ಥೆಗೆ ಇದು ಕಾರಣ. ಇತ್ಯಾದಿ ಇತ್ಯಾದಿ ಅನೇಕಾನೇಕ ತೆರನ ಚಾತುರ್ಯದ ವಾದ ವಿವಾದಗಳ ಸೀರು ಕಡೆದು ಬೆಣ್ಣೆ ತೆಗೆಯುವ ಧುರೀಣರು ಇಂದು ತಮ್ಮ ಮಿದುಳಿಗೆ ತುಂಬ ಆಯಾಸಕೊಡುತ್ತಿದ್ದಾರೆ!

ಒಟ್ಟಾರೆ ಈ ಹೊಲ-ಸುಧಾರಣೆ ಹೊಲಸು ಧಾರಣೆ ಧೋರಣೆಗಳಿಗೆ ಮುಳುಸಾಗಿದೆ. ಹಿಡುವಳಿಗಳ ಪರಮಾವಧಿಯ ಬಗೆಗೆ ಪ್ರಚಂಡ ಚರ್ಚೆ ವಿಧಾನ ಸಭೆಯಿಂದ ವೃತ್ತ ಪತ್ರಿಕೆಯ ಸ್ತಂಭಗಳವರೆಗೂ ನಡೆದಿದೆ. ಆದರೆ ಈ ಭೂಮಿತಿಯ ಪರಮಾವಧಿಯನ್ನು ಖಚಿತಗೊಳಿಸಬೇಕೆಂಬ ವಿಚಾರ ಇಂದು ನಿನ್ನೆಯದಲ್ಲ. ತೀರ ಹಳೆಯದು.

ಕಳೆದ ೩೫ ವರ್ಷಗಳಿಂದ ಈ ಒಣಚರ್ಚೆ ಚರ್ವಣದಲ್ಲಿ ಇದೆ. ಸ್ವಾತಂತ್ರ್ಯ ಬಂದ ೨ ವರ್ಷಗಳಲ್ಲಿಯೆ ಗ್ರಾಳ್ಳರಲ್ಲಿ ಕಾಂಗ್ರೆಸು ಭೂ ಸಮಸ್ಯೆಯ ಬಗೆಗೆ ಪರಿಶೀಲನೆ ನೂಡಿ ಸೂಚನೆಗಳನ್ನು ಒಪ್ಪಿಸಲು ಒಂದು ಸಮಿತಿಯನ್ನು ನೇಮಿಸಿತು. ಆ ಸಮಿತಿಯ ಹೆಸರು 'ಎಗ್ರೇರಿಯನ್ ರಿಫಾರ್ಮ್ಸ್ ಕಮಿಟಿ.' ಈ ಸಮಿತಿಯು ವ್ಯಕ್ತ ಮೂಡಿದ ಅಭಿಪ್ರಾಯವೆಂದರೆ ಪ್ರತಿವ್ಯಕ್ತಿಯೂ ಕುಟುಂಬವೂ ವಶದಲ್ಲಿ ಇಟ್ಟುಕೊಳ್ಳಬಹುದಾದ ಭೂಮಿಯ ಕ್ಷೇತ್ರವಿಸ್ತೀರ್ಣಕ್ಕೆ ಒಂದು ಮರ್ಯಾದೆ ಇರತಕ್ಕದ್ದು.

ಆಮೇಲೆ ಗ್ರಾಳ್ಳರಲ್ಲಿ ನಮ್ಮ ಪ್ರಥಮ ಪಂಚವಾರ್ಷಿಕ ಯೋಜನೆಯು ಸಿದ್ಧವಾಯಿತು. ಅದರಲ್ಲಿ ಹೊಲ ಹಿಡುವಳಿಗಳಿಗೆ 'ಸಿಲಿಂಗ' ಇರಬೇಕೆಂಬ ತತ್ವವನ್ನು ಒಪ್ಪಿಕೊಳ್ಳಲಾಯಿತು. ಈ ಯೋಜನೆಯಲ್ಲಿ ಹೀಗೆ ಹೇಳಿತ್ತು. 'ಜಮೀನಿನ ಒಡೆಯ ಮೇಲ್ವಿಚಾರಣೆ ನೂಡುತ್ತಿರುವ ದೊಡ್ಡ ಹೊಲಗಳಲ್ಲಿ ಎರಡು ಗುಂಪು ಮೂಡಬೇಕು. ಯಾವ ಹೊಲಗಳ ಸಾಗುವಳಿ ಕೌಶಲ್ಯದಿಂದ ನಡೆಯುತ್ತಿದೆಯೋ, ಯಾವುಗಳ ವಿಭಜನೆಯಿಂದ ಉತ್ಪಾದನೆಯ ಮೇಲೆ ಪ್ರತಿಕೂಲ ಪರಿಣಾಮವಾಗಬಹುದೋ ಅಂಥ ಹೊಲಗಳ ಗುಂಪು ಒಂದು. ಮತ್ತು ಈ ಪರೀಕ್ಷೆಗೆ ತಡೆಯದ ಹೊಲಗಳ ಗುಂಪು ಇನ್ನೊಂದು. ಈ ಗುಂಪುಗಳಲ್ಲಿಯ ಜಮೀನುಗಳ ವ್ಯವಸ್ಥೆ ಪೂರ್ಣವಾಗಿ ಅಥವಾ ನಿಗದಿ ಆದ ಪ್ರಮಾಣಕ್ಕಿಂತ ಹೆಚ್ಚು ಇದ್ದರೆ, ಆ ಜಮೀನಿನ ವ್ಯವಸ್ಥೆಯನ್ನು ವಶಪಡಿಸಿಕೊಳ್ಳುವ ಅಧಿಕಾರ ರಾಜ್ಯಸರಕಾರಕ್ಕೆ ಇರತಕ್ಕದ್ದು. ಭೂಸಮಸ್ಯೆಯನ್ನು ಬಿಡಿಸಲಿಕ್ಕೆ ಈ ಉಪಾಯವನ್ನು ತ್ವರೆಯಿಂದ ಯೋಜಿಸಬೇಕು.

ಆ ವರ್ಷ ಬೆಂಗಳೂರಿನಲ್ಲಿ ನೆರೆದ ಏ.ಐ.ಸಿ.ಸಿ ಯ ತಥಿವೇಶನದಲ್ಲಿ ಹೊಲ ಸುಧಾರಣೆಯ ಕುರಿತು ಮಾತಾಡುವಾಗ ದಿ. ನೆಹರೂಜೀ ಹಿಡುವಳಿಗಳಿಗೆ 'ಸಿಲಿಂಗ್' ಹೊತ್ತು ಪಡಿಸುವ ವಿಚಾರವನ್ನು ಸ್ಪಷ್ಟವಾಗಿ ಪುರಸ್ಕರಿಸಿದರು.

ಗ್ರಾಳ್ಳರಲ್ಲಿ ಯೋಜನಾ ಆಯೋಗವು ಭೂ ಸಮಸ್ಯೆಯ ವಿಚಾರ ಮಾಡಲು ಒಂದು ಉಪಸಮಿತಿಯನ್ನು ನೇಮಿಸಿತು. ಆ ಸಮಿತಿಯ ಸಿಫಾರಸುಗಳನ್ನು ಅನುಲಕ್ಷಿಸಿ ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಹಿಡುವಳಿಗಳ ಮೇಲೆ ಪರಮಾವಧಿಯನ್ನು ಹೇರುವದಕ್ಕೆ ಬೆಂಬಲವೀಯಲಾಯಿತು.

ಗ್ರಾಳ್ಳರಲ್ಲಿ ಯೋಜನಾ ಆಯೋಗದ ಇನ್ನೊಂದು ಉಪಸಮಿತಿಯು ಈ ಪ್ರಶ್ನೆಯ ಬಗೆಗೆ ಹೆಚ್ಚಿನ ವಿವರಗಳಲ್ಲಿ ಪರಿಶೀಲನೆ ನಡೆಯಿಸಿ ಅದರ ಆಧಾರದ ಮೇಲೆ ತೃತೀಯ ಹಾಗೂ ಚತುರ್ಥ ಪಾಂಚವರ್ಷಿಕ ಯೋಜನೆಗಳಲ್ಲಿ ಸಿಲಿಂಗಿಗೆ ತತ್ವತಃ ಮಾನ್ಯತೆ ನೀಡಲಾಯಿತು. ಗ್ರಾಮಾಂತರ ಪ್ರದೇಶದ ಆರ್ಥ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಪುನರ್‌ರಚಿಸಲಿಕ್ಕೆ ಈ ತರಹದ ಆಯೋಜನೆಯು ಅಗತ್ಯವಿದೆಯೆಂದು ಈ ಬಗೆಗೆ ಮತ್ತೆ ಮತ್ತೆ ಸ್ಪಷ್ಟಗೊಳಿಸಲಾಯಿತು. 'ಸಿಲಿಂಗ್' ಜಾರಿಯಲ್ಲಿ ತಂದ ಮೇಲೆ ಸಿಗಬಹುದಾದ ಜಮೀನುಗಳನ್ನು ಹಂಚುವದರಿಂದ ಭೂಮಿ ರಹಿತ ಹಳ್ಳಿಗಾಡು ಜನಕ್ಕೆ ಸ್ವಲ್ಪವಾದರೂ ಪರಿಹಾರ ದೊರೆತಂತೆ ಆಗುವದೆಂದೂ ಈ ಪಾಂಚವಾರ್ಷಿಕ ಯೋಜನೆಗಳ ನರಪಿಯಲ್ಲಿ ಹೇಳಲಾಗಿದೆ.

ಈ ಭೂಮಿ ಸಮಸ್ಯೆಯನ್ನು ಹಿಡಿಸುವ ದೃಷ್ಟಿಯಿಂದ ಏನು ಪ್ರಗತಿ ಆಗಿದೆಯೆಂಬುದರ ಪರಿಶೀಲನೆ ಗ್ರಾಳ್ಳರಲ್ಲಿ ಕ್ಯಾಬಿನೆಟ್ ಡೆವ್ಲಪ್‌ಮೆಂಟ್ ಕೌನ್ಸಿಲ್ ಕೈಗೊಂಡಿತು. ಯಾವ ರಾಜ್ಯಗಳಲ್ಲಿ ಈ ಸೀರಿಸು ಚಟುವಟಿಕೆ ಕೈಗೊಂಡಿದ್ದಿಲ್ಲವೋ ಆ ರಾಜ್ಯ ಸರಕಾರಗಳು ಗ್ರಾಳ್ಳರ್-ಸೂರ್ಚಿ ಕೊನೆಯೊಳಗಾಗಿ ಜವಬ್ದೆಸಿದ್ದ ಕಾಲುಭದ್ಯವನ್ನು ಮೂಡಿ ಮುಂದಿನ ೫ ವರ್ಷಗಳಲ್ಲಿ ದಿವ್ಯ ಅಭ್ಯಾಸ ಕೌನ್ಸಿಲ್ ಗೊಪ್ಪು ಮೂಡಿತು.

ಗ್ರಾಳ್ಳರ ಜನವರಿಯಲ್ಲಿ ನಾಗಪುರದಲ್ಲಿ ನೆರೆದ ಕಾಂಗ್ರೆಸ್ ಅಧಿವೇಶನದಲ್ಲಿ ಪರಮಾವಧಿಯ ವಿಷಯ ಆದಷ್ಟು ಲಗು ಕಾಯಿದೆಗಳನ್ನು ಮೂಡಲು ರಾಜ್ಯ ಸರಕಾರಗಳಿಗೆ ಆದೇಶ ನೀಡಲಾಯಿತು. ಈ ಮೂಲಕ ಗ್ರಾಳ್ಳರೊಳಗೆ ಇಂಥ ಕಾಯಿದೆಗಳನ್ನು ಆ ಸರಕಾರಗಳು ರೂಪಿಸಲೇ ಬೇಕಾಗಿ ಬಂದಿತು. ಜಮ್ಮು-ಕಾಶ್ಮೀರ ಮತ್ತು ಪ. ಬಂಗಾಲ ಇವೆರಡು ರಾಜ್ಯಗಳು ಸಿಲಿಂಗ ಕಾಯಿದೆಗಳನ್ನು ಗ್ರಾಳ್ಳರ ಸುಮೂರಿಗೇ ಮೂಡಿಬಿಟ್ಟಿದ್ದವು.

ಗ್ರಾಳ್ಳರ ತನಕ ತಯಾರಾದ ಸಿಲಿಂಗ ಕಾಯಿದೆಗಳ ವಿದ್ಯಮಾನಗಳನ್ನು ಅರಿತುಕೊಳ್ಳುವ ಮುಂಚೆ ದೇಶದಲ್ಲಿ ಸಾಗುವಳಿಯಲ್ಲಿದ್ದ ಜಮೀನುಗಳ ಸಂಚಾಣಿಕೆ ಹೇಗೆ ಆಗಿತ್ತೆಂಬುದನ್ನೂ ಒಮ್ಮೆ ನೋಡಿಕೊಳ್ಳುವುದು ಅಗತ್ಯ. ಗ್ರಾಳ್ಳರಲ್ಲಿ ಈ ಬಗೆಗೆ ಒಂದು ಪರಿಶೀಲನೆ ಆಯಿತು. ಆ ವೇಳೆಗೆ ದೇಶದಲ್ಲಿ ನೂರಕ್ಕೆ ೭೫—೭೨ರಷ್ಟು ಕುಟುಂಬಗಳ ಬಳಿಗೆ ಪ್ರತಿಯೊಂದರ ಪಾ

(ಮೂವತ್ತೊಂಬನೇ ಪುಟ ನೋಡಿರಿ)

With Best Compliments from:-

M/s. KASARAGOD BUS TRANSPORT COMPANY

Transport Operators & Mail Contractors

KASARAGOD

(Cannanore District)

Phone: 22

ಪ್ರೊ| ಜಿ. ಡಿ. ನಾಡಕರ್ಣಿ

ಕರ್ನಾಟಕದ ಪಾವನ ಪರಂಪರೆ

ಭಾರತೀಯ ಪರಂಪರೆ — ಸಂಸ್ಕೃತಿಗಳೊಡನೆ ಹಾಸು ಹೊಕ್ಕಾಗಿ ಬೆಳೆದು ಬಂದ ಹೆಗ್ಗಳಿಕೆ ಕರ್ನಾಟಕದ ಸಾವನ ಪರಂಪರೆಗೆ. ಸಹಿಷ್ಣುತೆಯೇ ಇದರ 'ವೈಶಿಷ್ಟ್ಯ'. ಈ ಭವ್ಯ ಪರಂಪರೆಯನ್ನು ಜ್ಞಾಪಿಸಿಕೊಳ್ಳುವುದಕ್ಕೆ ಇದೀಗ ಪರಿಪಕ್ವ ಕಾಲ.

ಕನ್ನಡ ನಾಡಿಗೆ ಪಾವನವಾದ ಭವ್ಯ ಪರಂಪರೆ ಇದೆ. ಅಲ್ಲದೆ ಭಾರತೀಯ ಪರಂಪರೆ-ಸಂಸ್ಕೃತಿಗಳೊಡನೆ ಅದು ಹಾಸು-ಹೊಕ್ಕಾಗಿ ಬೆಳೆದುಕೊಂಡು ಬಂದಿದೆ. ಹಿಂದೆ ಕನ್ನಡನಾಡು ಭಾರತದ ಒಂದು ಅವಿಭಾಜ್ಯ ಅಂಗವಾಗಿ ಸರ್ವಾಂಗೀಣವಾದ ಪ್ರಗತಿಯನ್ನು ಸಾಧಿಸಿದೆ; ಇನ್ನು ಮುಂದಾದರೂ ಕನ್ನಡವು ಭಾರತವನ್ನು ಮರೆಯದೆ, ಆದರೆ ತನ್ನದೇ ಆದ ವೈಶಿಷ್ಟ್ಯವನ್ನು ಕಾಯ್ದುಕೊಂಡು ಮುಂದುವರಿಯ ಬೇಕಾಗಿದೆ ಭಾರತದ ಸ್ವಾತಂತ್ರ್ಯ ಆಂದೋಲನದ ಜೊತೆಗೇ ಕರ್ನಾಟಕದ ಏಕೀಕರಣದ ಪ್ರಯತ್ನವೂ ನಡೆದು ಅಂದಿನ ಕನಸುಗಳೆರಡೂ ಇಂದು ನನಸಾಗಿವೆ ಎಂಬುದು ಸಂತಸದ ಸಂಗತಿ. ಆದಕಾರಣ ಭಾರತ|ಸ್ವಾತಂತ್ರ್ಯೋತ್ಸವದ ರಜತ ಮಹೋತ್ಸವದ ಈ ಮಂಗಲ ಪ್ರಸಂಗದಲ್ಲಿ ಕರ್ನಾಟಕದ ಸಂಸ್ಕೃತಿಯ ಹಿರಿಮೆಯನ್ನು ಅರಿತು ಕೊಳ್ಳುವುದು ಕ್ರಮಪ್ರಾಪ್ತವಾಗಿದೆ.

ರಾಜಕೀಯವಾಗಿ ಕರ್ನಾಟಕವು ಮೊದಲಿನಿಂದಲೂ ಬಲಾಢ್ಯವಾಗಿತ್ತು. ಕದಂಬ, ಗಂಗ, ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ, ವಿಜಯನಗರ ಮೊದಲಾದ ರಾಜಮನೆತನಗಳು ಕನ್ನಡನಾಡಿನ ಕ್ಷಾತ್ರತೇಜವನ್ನು ಬೆಳಗಿವೆ. ಮಯೂರ ಶರ್ಮನೆಂಬ ಬ್ರಾಹ್ಮಣನು ಪಲ್ಲವರಿಂದ ತನಗಾದ ಅಪಮಾನದ ಸೇಡು ತೀರಿಸಿಕೊಳ್ಳಲು ಕದಂಬ ವಂಶವೆಂಬ ಪರಾಕ್ರಮಿ ರಾಜಮನೆತನವನ್ನೇ ಸ್ಥಾಪಿಸಿದನು; ಬ್ರಾಹ್ಮಣರಾಗೂ ಕ್ಷಾತ್ರ ಎಂಬ ಎರಡೂ ಬಲಗಳನ್ನು ಅವನು ಪ್ರದರ್ಶಿಸಿದನು. ಕರ್ನಾಟಕದ ರಾಜಮನೆತನಗಳು ಶೌರ್ಯಕ್ಕೆ ಮಾತ್ರವಲ್ಲದೆ, ಪ್ರಜಾಹಿತ, ಶಿಲ್ಪಕಲಾ ಪೋಷಣೆ, ಸಾಹಿತ್ಯ ಸಂವರ್ಧನೆಗೂ ಹೆಸರಾಗಿವೆ. ಚಾಲುಕ್ಯ ಪುಲಿಕೇಶಿ ಹೇಗೆ ದಕ್ಷಿಣಾಪಥಕ್ಕೆ ಒಡೆಯನಾಗಿ, ಉತ್ತರದ ಹರ್ಷವರ್ಧನನನ್ನು ಸೋಲಿಸಿದನೆಂಬುದು ಪ್ರಖ್ಯಾತವಾಗಿದೆ. ಹೊಯ್ಸಳರ ಕಾಲಕ್ಕೆ ಶಿಲ್ಪಕಲೆಯು ಉತ್ಕರ್ಷಕ್ಕೆ ಮುಟ್ಟಿದ್ದರೆ, ವಿಜಯನಗರದ ಅರಸರು ನಾಡಿನ ಸರ್ವಾಂಗೀಣ ಉನ್ನತಿಯನ್ನು ಸಾಧಿಸಿದರು. ವಿಜಯನಗರ ಸಾಮ್ರಾಜ್ಯವು ಉತ್ತರದ ಮಹಮ್ಮದೀಯ ಶಕ್ತಿಯನ್ನು ತಡೆಹಿಡಿದ ದ್ದಲ್ಲದೆ, ಹಿಂದೂ ಧರ್ಮ-ಸಂಸ್ಕೃತಿಗಳನ್ನು ರಕ್ಷಿಸಿ ಪೋಷಿಸಿತು. ೧೦-೧೧ನೆಯ ಶತಮಾನದಲ್ಲಿ ಕ್ಷಾತ್ರತೇಜ ಬರಿ ಅರಸರಲ್ಲಿ ಮಾತ್ರವಲ್ಲ, ಜನಸಾಮಾನ್ಯರಲ್ಲಿಯೂ ಉಕ್ಕಿ ಹರಿಯುತ್ತಿತ್ತು. ಆದ್ದರಿಂದಲೇ ಪಂಪ—ರನ್ನ ಮೊದಲಾದ ಮಹಾಕವಿಗಳು ವೀರರಸ ಪ್ರಧಾನವಾದ ಕಾವ್ಯಗಳನ್ನು ರಚಿಸಿದರು. 'ಕ್ಷಣವಿಧ್ವಂಸೀ ದೇಹೇ ಕಾ ಚಿಂತಾ ಮರಣೇ ರಣೇ' ಎಂಬುದು ಆಗಿನ ವೀರರ ಧ್ಯೇಯವಾಕ್ಯವಾಗಿತ್ತು. ಕರ್ನಾಟಕದ ತುಂಬ ದೊರೆಯುವ ವೀರಗಲ್ಲುಗಳು ಹಿಂದಿನ ವೀರರ ಶೌರ್ಯ—ಸಾಹಸವನ್ನು ಇಂದಿಗೂ ಸಾರುತ್ತ ನಿಂತಿವೆ. 'ಸಮರ ಕರ್ಮಣಿ ನಿಶಗೋ-ದ್ಭಟಾಃ ಕರ್ನಾಟಾಃ' ಎಂದು ಸಂಸ್ಕೃತ ಕವಿಗಳು ಕನ್ನಡಿಗರ ಶೌರ್ಯವನ್ನು ಮುಕ್ತಕಂಠದಿಂದ ಹೊಗಳಿದ್ದಾರೆ. 'ಸಾಧುಗೆ ಸಾಧು; ಮೊಧುರ್ಯಂಗೆ ಮೊಧುರ್ಯಂ' ಆಗಿರಬೇಕು; ಆದರೆ 'ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತ' ನಾದ ಬ್ರಾಹ್ಮಣನೊಬ್ಬನ ಸ್ವಭಾವ ಚಿತ್ರವನ್ನು ಬಾದಾಮಿಯ ಶಾಸನವು ಕೊಟ್ಟಿದೆ. ಪುರುಷರಲ್ಲಿ ಮಾತ್ರವಲ್ಲದೆ ಮಹಿಳೆಯರಲ್ಲಿ ಕೂಡ ಹಿಂದೆ ಸಾಹಸ ಪ್ರವೃತ್ತಿ ಕಂಡುಬರುತ್ತಿತ್ತು.

ಧಾರ್ಮಿಕ ರಂಗದಲ್ಲಿ ಕನ್ನಡನಾಡು ಹಲವು ಧರ್ಮಗಳಿಗೆ ಜನ್ಮ ಕೊಟ್ಟಿದೆ; ಅಸಂಖ್ಯ ಧರ್ಮಗಳಿಗೆ ಆಶ್ರಯವನ್ನಿತ್ತಿದೆ. ವೈದಿಕ ಹಾಗೂ ಅವೈದಿಕ ಹೀಗೆ ಎರಡೂ ಮತಪಂಥಗಳಿಗೆ ಕರ್ನಾಟಕವು ಉದಾರಾಶ್ರಯವನ್ನು ಕೊಟ್ಟಿದೆ. ಮೊದಲು ಜೈನ ಧರ್ಮವು ಕರ್ನಾಟಕಕ್ಕೆ ಆಗಮಿಸಿ ರಾಜರಿಂದಲೂ, ಜನಸಾಮಾನ್ಯರಿಂದಲೂ ಪುರಸ್ಕಾರ ಪಡೆಯಿತು. ಉತ್ತರ ಭಾರತದಿಂದ ಚಂದ್ರಗುಪ್ತ –ಭದ್ರಬಾಹು ಮುನಿಗಳು ಜೈನ ಸಂಘವೊಡನೆ ಆಗಮಿಸಿ, ಶ್ರವಣ ಬೆಳ್ಗೊಳದಲ್ಲಿ ನೆಲೆನಿಂದಂದಿನಿಂದ ಜೈನಧರ್ಮ—ಸಂಸ್ಕೃತಿಗಳು ಕರ್ನಾಟಕದಲ್ಲಿ ಬೇರೂರಿದವು. ಅಹಿಂಸೆ ಮತ್ತು ನೈತಿಕ ತಳಹದಿಯುಳ್ಳ ಜೈನ ಧರ್ಮವು ಆಗ ತುಂಬಾ ಜನಪ್ರಿಯವಾಯಿತು. ರಾಜರಲ್ಲಿ ಕೆಲವರು ಜೈನಧರ್ಮಕ್ಕೆ ಮತಾಂತರ ಹೊಂದಿದರೆ ಇನ್ನು ಹಲವರು ಜೈನ ಮತಕ್ಕೆ ಆಶ್ರಯವನ್ನು ನೀಡಿದರು. ಶ್ರವಣ ಬೆಳ್ಗೊಳದಲ್ಲಿ ಮತ್ತು ಇತರ ಸ್ಥಳಗಳಲ್ಲಿ ಗೊಮ್ಮಟೇಶ್ವರನ ವಿಗ್ರಹಗಳ ಸ್ಥಾಪನೆಯೊದುದಲ್ಲದೆ, ಅನೇಕ ಬಸದಿಗಳೂ ನಿರ್ಮಾಣಗೊಂಡುವು. ಹೀಗೆ ಮೂರ್ತಿಶಿಲ್ಪ ಮತ್ತು ವಾಸ್ತುಶಿಲ್ಪ ಎರಡೂ ಬೆಳೆದವು. ಕನ್ನಡ ಸಾಹಿತ್ಯದ ಮೇಲೆ ನಿತಾಂತವಾದ ಪ್ರಭಾವವನ್ನು ಜೈನದರ್ಶನವು ಬೀರಿದೆ. ಗ್ರಂಥಸ್ಥವಾದ ಕನ್ನಡ ಸಾಹಿತ್ಯವು ಪ್ರಾರಂಭವಾದುದೇ ಜೈನ ಧರ್ಮದ ಪ್ರಭಾವದಿಂದ. ಪಂಪ-ರನ್ನ ಮೊದಲಾದ ಹಿರಿಯ ಕವಿಗಳು ಕನ್ನಡದಲ್ಲಿ ಮಹಾಕಾವ್ಯ ಬರೆಯಲು ಮನಸ್ಸು ಮಾಡಿದುದು ಕನ್ನಡ ಸಾಹಿತ್ಯದ ದೃಷ್ಟಿಯಿಂದ ಬಹಳ ಮಹತ್ವ ಪೂರ್ಣವಾಗಿದೆ. ಆಗ ಸಾಹಿತ್ಯರಚನೆ ಪ್ರಾರಂಭವಾಗಿರದಿದ್ದರೆ, ಕರ್ನಾಟಕದಲ್ಲಿ ಬಸವಣ್ಣನ ವರೆಗೆ ಕನ್ನಡ ಸಾಹಿತ್ಯವು ಪ್ರಾರಂಭವಾಗುತ್ತಲೇ ಇರಲಿಲ್ಲ! ಹೀಗೆ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಶ್ರೇಯಸ್ಸು ಜೈನಧರ್ಮದ ಕವಿಗಳಿಗೆ ಸಲ್ಲುತ್ತದೆ. ಪಂಪ, ರನ್ನ, ನಾಗಚಂದ್ರ, ಜನ್ನ, ರನ್ನ ಕೆರೆಯರ್ನೆ ಮೊದಲಾದ ಕವಿಗಳ ಕಾಣಿಕೆ ಸಾಮಾನ್ಯವಾದುದಲ್ಲ. ಇವರು ತಾವೈಚ್ಛಲದಿಂದ ಧರ್ಮೋಪದೇಶವೈದಿದ್ದಾರೆ. ಜೊತೆಗೆ ಶ್ರೇಷ್ಠ ಸಾಹಿತ್ಯವನ್ನೂ ನಿರ್ಮಿಸಿದ್ದಾರೆ.

ಇಸವಿಯ ಶತಕಗಳ ಮಧ್ಯಭಾಗದಲ್ಲಿ ಉಂಟಾದ ವೀರಶೈವ ಧರ್ಮಪ್ರಭೆ ಕರ್ನಾಟಕದ ಸಾಮಾಜಿಕ—ಧಾರ್ಮಿಕ ಪ್ರಗತಿಯನ್ನು ಗಮನಾರ್ಹವಾದ ರೀತಿಯಲ್ಲಿ ಪ್ರಭಾವಿತಗೊಳಿಸಿತು. ಶ್ರೀ ಬಸವೇಶ್ವರರ ಉಜ್ವಲ ವ್ಯಕ್ತಿತ್ವ ಒಂದು ಮಹಾ ಸ್ಥಾಪನೆ - ಮಾತ್ರವಾಗಿರಲಿಲ್ಲ. ಸಮಾಜ, ಧರ್ಮ, ನೀತಿ, ಸಹಿತ್ಯ ಜೊತೆಲಾದ ಜೀವನದ ಎಲ್ಲ ಅಂಗಗಳ ಬೆಳೆವಣಿಗೆ ಅವರ ಗಮನವನ್ನು ಸೆಳೆದಿತ್ತು. ಮೇಲು-ಕೀಳು ಇಲ್ಲದ, ಶೋಷಣೆ ರಹಿತ, ಸಮಾಜವನ್ನು ಕಟ್ಟುವುದು ಶಿವಶರಣರ ಗುರಿಯಾಗಿತ್ತು. ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತ್ವಗಳ ವಿಶಾಲ ತಳಹದಿಯ ಮೇಲೆ ಒಂದು ಆದರ್ಶ ಸಮಾಜವನ್ನು ರಚಿಸುವ ಕನಸನ್ನು ಅವರು ಕಂಡು ಅದನ್ನು ನನಸಾಗಿಸಲು ಅವರು ಅಹರ್ನಿತಿ ಶ್ರಮಿಸಿದರು. ಶಿವಭಕ್ತಿ ಪ್ರಧಾನವಾದ, ಷಟ್ಸ್ಥಲ ಸಿದ್ಧಾಂತವನ್ನೂ ಪ್ರತಿಪಾದಿಸುವ ವೀರಶೈವ ಧರ್ಮವನ್ನೂ ಅವರು ಪ್ರತಿಪಾದಿಸಿದರು. ಹಾಗೆ ಜನತೆಗೆ ಜ್ಞೋಧಿಸುವಾಗ ಅವರು ಮಾಡಿದ ಉಪದೇಶವೇ 'ವಚನ ಸಾಹಿತ್ಯ' ವಾಗಿ ಪರಿಣಮಿಸಿತು. ಅವರು ಆಡಿದ ಮಾತೇ ಸಾಹಿತ್ಯವಾಯಿತು. ಸಮಾಜವಲ್ಲಿಯ ನಿಷ್ಕ್ರಿಯತೆಯನ್ನು ಹೋಗಲಾಡಿಸಲು ಬಸವಣ್ಣನವರು ಕಾರ್ಯಕ್ಕೆ ಮಹತ್ವಕೊಟ್ಟು "ಕಾಯಕವೇ ಕೈಲಾಸ" ಎಂದು ಅವರು ಸಾರಿದರು. "ದುಡಿಯದೆ ಉಣ್ಣುವ ಹಕ್ಕು ಯಾರಿಗೂ ಇಲ್ಲ—" ಎಂದವರು ಎಂಟುನೂರು ವರ್ಷಗಳ ಹಿಂದೆಯೇ ಸಾರಿದರು. ಮಹಿಳೆಯರಿಗೆ ಸಮಾಜದಲ್ಲಿ ಗೌರವದ ಸ್ಥಾನವನ್ನು ನಿರ್ಮಿಸಿಕೊಟ್ಟರು. ಅದರ ಫಲವಾಗಿಯೇ ಅಕ್ಕಮಹಾದೇವಿ ಮೊದಲಾದ ಶಿವಶರಣೆಯರು ನಾಡಿನಲ್ಲಿ ಉದಯಿಸುವಂತಾಯಿತು. ಕಾಲದ ದೃಷ್ಟಿಯಿಂದ ಎಂಟುನೂರು ವರ್ಷಗಳ ಹಿಂದೆ ಶ್ರೀ ಬಸವೇಶ್ವರರು ಹುಟ್ಟಿದರೂ, ವಿಚಾರಗಳ ದೃಷ್ಟಿಯಿಂದ ಅವರು ಎಂಟು ನೂರು ವರ್ಷ ಮುಂದೆ ಹುಟ್ಟಿದ್ದಾರೆ ಎನಿಸುತ್ತದೆ. ಅಷ್ಟು ಪ್ರಗತಿಶೀಲ ವಿಚಾರಗಳು ಅವರಲ್ಲಿ ಕಂಡುಬರುತ್ತವೆ. "ಅಯ್ಯಾ ಎಂದೊಡೆ ಸ್ವರ್ಗ; ಎಲವೋ ಎಂದೆಡೆ ನರಕ" "ದೇವನೊಬ್ಬ ನಾಮ ಹಲವು" "ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು" "ಕಳ್ಳ ಬೇಡ, ಕೊಲುಬೇಡ, ಹುಸಿಯು ನುಡಿಯಲುಬೇಡ"—ಮುಂತಾದ ವಾಕ್ಯ ನೂರಾರು ಕಡೆಗಳಲ್ಲಿ ವಿಶಾಲವಾದ ಮಾನವ ಧರ್ಮವು

(ಮೂವತ್ತನೇ ಪುಟ ನೋಡಿ)

ಅಖಾದ್ಯ ಎಣ್ಣೆಗಳಿಂದ

ಸಾಬೂನು

ಭಾರತ ದೇಶದಲ್ಲಿ ಅಖಾದ್ಯ ಎಣ್ಣೆಗಳಿಂದ ಸಂಪತ್ತು ಹೇರಳವಾಗಿದೆ. ಇವುಗಳಲ್ಲಿ ಮುಖ್ಯವಾದವು ಬೇವು, ಹಿಪ್ಪೆ, ಹೊಂಗೆ ಮೊದಲಾದವು. ಈ ಎಣ್ಣೆ ಬೀಜಗಳು ಕಾಡುಗಳಲ್ಲೋ ಬಂಜರು ಭೂಮಿಗಳಲ್ಲೋ ರಸ್ತೆಯ ಮಗ್ಗಲಲ್ಲೋ ಉದುರಿ ಚೆಲ್ಲಾಪಿಲ್ಲಿಯಾಗಿ ಚದುರಿ ಜೋಗುತ್ತಿವೆ. ಈ ರೀತಿ ಹಾಳಾಗುತ್ತಿರುವ ಅಖಾದ್ಯ ಎಣ್ಣೆ ಬೀಜಗಳನ್ನು ಸಂಗ್ರಹಿಸಿ ಎಣ್ಣೆ ತೆಗೆದು ಅದರಿಂದ ಸಾಬೂನು ತಯಾರಿಸಬಹುದಾಗಿದೆ. ಪ್ರಾಣಿಗಳ ಕೊಬ್ಬು ಸೇರಿದೆ. ಶುದ್ಧ ಎಣ್ಣೆಯಲ್ಲಿ ತಯಾರಾಗುವುದರಿಂದ ಸೋಪು ಪರಿಶುದ್ಧವಾಗಿರುತ್ತದೆ.

ಅಖಾದ್ಯ ಎಣ್ಣೆಗಳಿಂದ ತಯಾರಾದ ಸಾಬೂನಿನಿಂದ ಒಗೆಯ ಬಟ್ಟೆಗಳು ಶುಭ್ರ

ಮೈಸೂರು ರಾಜ್ಯ

ಖಾದಿ-ಗ್ರಾಮೋದ್ಯೋಗ ಮಂಡಲ

ಬೆಂಗಳೂರು - 9.

ಶ್ರೀ ಟಿ. ಚಂದ್ರರಾಜ ಸೆಟ್ಟಿ

ಅನುವಾದಿತ ಕನ್ನಡ ಕೃತಿಗಳು

ವೈಚಾರಿಕ ನಿಷ್ಠುರತೆ ಸಾಗರಿಕ ಪ್ರಪಂಚದಲ್ಲಿ ಅನಿವಾರ್ಯ. ಹಾಗೆಯೇ ಒಂದು ಭಾಷೆಯ ಕೃತಿಗಳು ಇತರ ಭಾಷೆಗಳಿಗೆ ಅನುವಾದವಾಗುವುದೂ ಇಷ್ಟ. ಕನ್ನಡದ ಹಲವಾರು ಕೃತಿಗಳು ಇತರ ಭಾಷೆಗಳಿಗೆ ಅನುವಾದಿತವಾಗಿವೆ. ತಮ್ಮ ಸಂಗ್ರಹದ ಒಂದು ಅಂತಸ್ತನ್ನು ಶ್ರೀ ಸೆಟ್ಟರು ನಮ್ಮ ವಾಚಕರ ಮುಂದೆ ಇಲ್ಲಿ ತೆರೆದಿಟ್ಟಿದ್ದಾರೆ.

ಕನ್ನಡದ ಹಲವು ಲೇಖಕರ ಕೃತಿಗಳು ಇತರ ಸೋದರ ಭಾಷೆಗಳಿಗೆ ಅನುವಾದವಾಗಿ ನಮ್ಮ ಸಾಹಿತಿಗಳ ಹೆಸರು ಅನ್ಯ ಪ್ರಾಂತಗಳಲ್ಲೂ ಜಯಭೇರಿಯನ್ನು ಬಾರಿಸಿದೆ. ಸಾಹಿತ್ಯದ ಯಾವ ಕ್ಷೇತ್ರದಲ್ಲೂ ಕನ್ನಡ ಹಿಂದಿಲ್ಲ. ವರ್ಷ ಹೋದಂತೆ ಕನ್ನಡ ಸಾರಸ್ವತ ಪ್ರಪಂಚವು ಮೈದುಂಬಿ ಬರುತ್ತಿದ್ದರೂ ಅನುವಾದ ಸಾಹಿತ್ಯವನ್ನು ಅಲ್ಲಗಳೆಯುವಂತಿಲ್ಲ. ಗರ್ವಿಗಳಲ್ಲಿ ಗಳಿಗೆ ನಾಥರು 'ಸ್ವಸುಖಕ್ಕೆ ಪರಸುಖವೆ' ಎಂಬ ಅನುವಾದಿತ ಕೃತಿಯನ್ನು ಕನ್ನಡಿಗರಿಗೆ ನೀಡಿದರು. ಬಕ್ಕಭಟ್ಟಾರರು ಕಡಿಮೆ ಯಾಗಿದ್ದ ಆ ಕಾಲದಲ್ಲಿ ಮನೋರಂಜನೆಯೇ ಮುಖ್ಯೋದ್ದೇಶವಾಗಿದ್ದ ಲಲಿತ ಸಾಹಿತ್ಯದ ಆ ಕೃತಿಗೆ ಎಣೆಯಿಲ್ಲವೆ ಜೇಜಿಕೆ ಬಂತು. ಆ ಮೇಲೆ ಅವರು ಹಲವು ಉತ್ತಮ ಕೃತಿಗಳನ್ನು ಮರಾಠಿಯಿಂದ ಅನುವಾದಿಸಿ ಕನ್ನಡಿಗರಿಗಿತ್ತರು. ಬಿ ವೆಂಕಟಾಚಾರ್ಯರು ಬಂಗಾಲಿಯಿಂದ ಅನುವಾದಿಸಿ ೧೮೮೦ರಲ್ಲಿ ಪ್ರಕಟಿಸಿದ 'ಭ್ರಾಂತಿ ವಿಲಾಸ'ವು ಆಗ ಜನರಿಗೆ ಓದುವ ಭ್ರಾಂತಿಯನ್ನು ಹೆಚ್ಚಿಸಿತು. ಕನ್ನಡದಲ್ಲಿ ಎಷ್ಟು ಉತ್ತಮವಾದ ಕೃತಿಗಳ ಸೃಷ್ಟಿಯಾಯಿತೊ, ಅನ್ಯ ಭಾಷೆಯ ಅನುವಾದಿತ ಕೃತಿಗಳನ್ನು ಬೇಡವೆನ್ನುವಂತಿಲ್ಲ.

ನಾವು ಜಗತ್ತನ್ನರಿಯಬೇಕು. ಜಗತ್ತು ನಮ್ಮನ್ನರಿಯಬೇಕು. ಹಾಗಿಲ್ಲವಾದರೆ ನಮಗೆ ಮಾನ್ಯತೆಯೆಲ್ಲಿ? ಬಂಗಾಲಿಯಿಂದ ಅನುವಾದವಾದ ಕಾದಂಬರಿಗಳಿಂದ, ನಾವು ಆ ಭಾಗದ ಜನರ ಆಚಾರ ವಿಚಾರಗಳನ್ನೂ, ನಡೆನುಡಿಗಳನ್ನೂ, ಹಬ್ಬ ಹರಿದಿನಗಳ ವೈಶಿಷ್ಟ್ಯವನ್ನೂ ಅರಿಯಬಹುದು. ಅದರಂತೆ ಬೇರೆ ಬೇರೆ ಸೋದರ ಭಾಷೆಗಳ ಅನುವಾದಿತ ಕೃತಿಗಳಿಂದ ನಾವು ಆಯಾ ಪ್ರದೇಶಗಳ ನಡವಳಿಕೆಗಳನ್ನು ನಮ್ಮ ಮನೆಯ ನಾಲ್ಕು ಗೋಡೆಗಳ ಮಧ್ಯ ಆರಾಮವಾಗಿದ್ದು ಅರಿಯಬಹುದು.

ಕನ್ನಡದ ಹಲವು ಉತ್ತಮ ಕೃತಿಗಳು ಹಲವೆ ಬೇರೆ ಭಾಷೆಗಳಲ್ಲಿ ಅನುವಾದವಾಗಿವೆ. ಆದರೆ ಅವುಗಳನ್ನು ಹುಡುಕಿ ಪಟ್ಟಿ ಮಾಡುವುದೆಂದರೆ, ಹುಲ್ಲಿನರಾಶಿಯಲ್ಲಿ ಸೂಜಿಯನ್ನು ಹುಡುಕಿದಷ್ಟೇ ಸ್ರಮವೂಸ. ಆದರೂ ನನ್ನ ತಿಳಿವಳಿಕೆಗೆ ಬಂದ ಕೆಲವುಗಳ ಹೆಸರುಗಳನ್ನಾದರೂ ಬರೆಯ ಬೇಕೆನಿಸುತ್ತದೆ.

ಕನ್ನಡದ ಮೊತ್ತ ಮೊದಲನೆಯ ಸ್ವತಂತ್ರ ಸಾಮಾಜಿಕ ಕಾದಂಬರಿಯಾದ 'ಇಂದಿರಾ ಬಾಯಿ' ಅಥವಾ ಸದ್ಧರ್ಮ ವಿಜಯ ಎಂಬ ಕೃತಿಯನ್ನು ನ.ಕ. ಜಿಲ್ಲೆಯ ಗುಲ್ವಾಡಿ ವೆಂಕಟರಾಯರೆಂಬವರು ಬರೆದರು. ೧೮೦೦ ಪುಟಗಳ ಆ ಕಾದಂಬರಿಯು ೧೮೯೯ರಲ್ಲಿ ಪ್ರಕಟವಾಯಿತು. ಅದನ್ನು ಕೌಜ್‌ಮೆಸ್ ದೊರೆಯು ಇಂಗ್ಲಿಷ್‌ನಲ್ಲಿ ಅನುವಾದಿಸಿದನು. ಇದರಿಂದಾಗಿ ಕನ್ನಡದ ಕೀರ್ತಿ ಜಗತ್ತಿನ ಮೂಲೆ ಮೂಲೆಗಳಲ್ಲಿ ಹರಡುವಂತಾಯಿತು.

ಧಾರವಾಡದ ಶೇಷಗಿರಿ ರಾಮಚಂದ್ರ ಚರಮುರಿ (೧೮೮೭—೧೮೪೪) ಎಂಬವರು ಜೈಮಿನಿ ಭಾರತದ ಕೆಲವು ಭಾಗಗಳನ್ನು ಮರಾಠಿಯಲ್ಲಿ ಅನುವಾದಿಸಿದ್ದಾರೆ. ಅರುಸ್ ಜೋಮೆನೆಂಜಸ್ ಎಂಬವರು ಬಸವೇಶ್ವರನ ವಚನಗಳನ್ನು ಇಂಗ್ಲಿಷಿಗೆ ಅನುವಾದಿಸಿದ್ದಾರೆ. ಸರ್ವಭೂಷಣರ ಜ್ಞಾನಶತಕವನ್ನು ಶಂಕರ ಶಾಸ್ತ್ರಿ ಎಂಬವರು ಇಂಗ್ಲಿಷ್ ಮತ್ತು ತೆಲುಗುಗಳಲ್ಲಿ ಭಾಷಾಂತರಿಸಿದ್ದಾರೆ. ಉಡುಪಿಯ ಬಿ.ರಾಮಕೃಷ್ಣಾಚಾರ್ ಎಂಬವರು ಹಿಂದಿ, ಮರಾಳಿಯೂಳಿ, ತಮಿಳು, ತೆಲುಗು, ಬಂಗಾಳಿ ಮತ್ತು ಇಂಗ್ಲಿಷ್ ಭಾಷೆಗಳನ್ನು ಬಲ್ಲವರಾಗಿದ್ದು, ಅವರು ಕನ್ನಡವಲ್ಲಿ ಬರೆದ ಉಡುಪಿ ಕ್ಷೇತ್ರ ಎಂಬ ಕೃತಿಯನ್ನು ತಮಿಳು, ತೆಲುಗು, ಇಂಗ್ಲಿಷ್‌ಗಳಲ್ಲೂ ಅನುವಾದಿಸಿದ್ದಾರೆ. ಎಲ್. ಎಸ್. ಶೇಷಗಿರಿರಾಯರ 'ಕನ್ನಡ ಸಣ್ಣ ಕತೆಗಳು' ಎಂಬ ಕೃತಿಯನ್ನು ಕಾಸರಗೋಡಿನ ಉಭಯ ಭಾಷಾ ಕವಿಗಳೆನಿಸಿದ ಟಿ ಉಬ್ಬೈದರು ಮಳೆಯಾಳಕ್ಕೆ ಅನುವಾದಿಸಿದ್ದಾರೆ. ಶೈನ್ ದೊರೆಯು ಜೈಮಿನಿ ಭಾರತವನ್ನು ಇಂಗ್ಲಿಷಿಗೆ ಅನುವಾದಿಸಿದನು.

ಕಡಲ ತೀರದ ಭಾರ್ಗವರೆಂದು ಹೆಸರಾದ ಕೋಟ ಶಿವರಾಮ ಕಾರಂತ (ಜನನ ೧೦-೧೦-೧೯೦೨) ರು ಉದ್ದಾಮ ಸಾಹಿತಿಗಳು. ಹಲವು ದೇಶಗಳನ್ನು ಸುತ್ತಿ, ಅಲ್ಲಿಯ ವೈಚಿತ್ರ್ಯಗಳನ್ನು ಕನ್ನಡಿಗರಿಗೆ ಮನವರಿಕೆ ಮಾಡಿಕೊಟ್ಟವರು. ತಮ್ಮ ಜೀವನವನ್ನೇ ಸಾಹಿತ್ಯ ಸೇವೆಗಾಗಿ ಮೀಸಲಾಗಿರಿಸಿ ಡಾಕ್ಟರೇಟ್ ಪದವಿಯನ್ನು ಪಡೆದುದರ ಜತೆಗೆ, ಹಲವು ಕಡೆ ಸನ್ಮಾನಿತರಾಗಿ ಸರಕಾರದಿಂದ ಮಾಸಾಶನ ಪಡೆಯುತ್ತಿರುವವರು. ಅವರ ಸಾಹಿತ್ಯ ಸೇವೆಯನ್ನು ಮೆಚ್ಚಿದ ಕನ್ನಡಿಗರು ೧೯೫೫ರಲ್ಲಿ ಮೈಸೂರಿನಲ್ಲಿ ಜರಗಿದ ಮೂವತ್ತೈಳನೆಯ ಕನ್ನಡ ಸಾಹಿತ್ಯ ಸಮ್ಮೇಲನಕ್ಕೆ ಅಧ್ಯಕ್ಷರನ್ನಾಗಿ ಆರಿಸಿ ಗೌರವಿಸಿದರು. ಅವರು ಬರೆದ 'ಮರಳಿ ಮಣ್ಣಿಗೆ' ಎಂಬ ಕಾದಂಬರಿಯಲ್ಲಿ ಕರಾವಳಿಯಲ್ಲಿ ವಾಸಿಸುವ ಜನರ ಜನಜೀವನವನ್ನು ಮತ್ತು ಅಲ್ಲಿಯ ಪರಿಸರದ ಪರಿಚಯವನ್ನು ಓದುವಾಗ, ಅವೆಲ್ಲ ಜೀವಂತವಾಗಿ ನಮ್ಮ ಕಣ್ಣ ಮುಂದೆ ಹಾದು ಹೋಗುವಂತೆ ಭಾಸವಾಗುತ್ತದೆ. ಕನ್ನಡದಲ್ಲಿ ಅದನ್ನು ಮೂಡಿಸುವ ಕೃತಿಗಳು ಬೆರಳೆಣಿಕೆಯಷ್ಟಿರುವಲ್ಲಿ ಎಣೆಸಬಹುದಾದಷ್ಟು ಸಿಕ್ಕಲಾರವು. ಆ ಕಾದಂಬರಿಯನ್ನು ಎ. ಎನ್. ಮೂರ್ತಿರಾಯರು ಇಂಗ್ಲಿಷಿಗೂ, ಟಿ ಬಿ ಸಿದ್ಧಲಿಂಗಯ್ಯ ಎಂಬವರು ತಮಿಳಿಗೂ, ಕಾಸರಗೋಡಿನ ಟಿ. ಉಬ್ಬೈದರು ಮಳೆಯಾಳಕ್ಕೂ ಅನುವಾದಿಸಿದ್ದಾರೆ. ಆ ಕಾದಂಬರಿಯು ಹಿಂದಿಯಲ್ಲೂ ಅನುವಾದವಾಗಿದೆ.

ದೆಹಲಿಯಲ್ಲಿರುವ ಕೇಂದ್ರ ಸರಕಾರದ ಶಿಕ್ಷಣ ಪ್ರತಿಷ್ಠಾನದಲ್ಲಿ ರೀಡರ್ ಆಗಿರುವ ಡಾ| ಎಸ್. ಎಲ್. ಭೈರಪ್ಪನವರ 'ವಂಶವೃಕ್ಷ' ಕಾದಂಬರಿಯು ಸಾಹಿತ್ಯ ಎಕಾಡೆಮಿಯ ಪ್ರಶಸ್ತಿ ಪಡೆದಿರುವುದು ಮಾತ್ರವಲ್ಲದೆ, ಚಲಚ್ಚಿತ್ರವಾಗಿ ತೆರೆ ಕಂಡಿದೆ.

ಆ ಕಾದಂಬರಿಯನ್ನು ವಾಸು ಬಿ. ಪುತ್ರನ್ ಎಂಬವರು ಹಿಂದಿಗೆ ಅನುವಾದಿಸಿದ್ದಾರೆ. ಬಂಗಾಲಿ, ಹಿಂದಿ, ತೆಲುಗು, ಮರಾಠಿ, ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪಾಂಡಿತ್ಯವಿರುವ ಬಿ. ಪುಟ್ಟಸ್ವಾಮಯ್ಯನವರು ಬರೆದ 'ದಶಾವತಾರ' ಎಂಬ ನಾಟಕವು ತೆಲುಗಿಗೆ ಅನುವಾದವಾಗಿದೆ. ಕೆ.ವಿ. ಅಯ್ಯರ್ ಎಂದು ಚಿರಪರಿಚಿತರಾಗಿರುವ ಕೋಲಾರದ ವೆಂಕಟೇಶ ಅಯ್ಯರ್‌ರು ಸಂಸ್ಕೃತ ವ್ಯಾಯಾಮಪಟುಗಳಾಗಿ, ವ್ಯಾಯಾಮ ಶಿಕ್ಷಕರಾಗಿ, ದೇಶದ ಹೊರಗೆಯೂ ಹೆಸರನ್ನು ಗಳಿಸಿದ್ದಾರೆ. ಇವರು ಬೆಂಗಳೂರಿನ 'ರವಿ ಕಲಾವಿದರು' ನಾಟಕ ನಾಟ್ಯ ವಿಲಾಸಿ ಸಂಸ್ಥೆಯ ಅಧ್ಯಕ್ಷರು. ಇವರು ಬರೆದ 'ಶಾಂತಲಾ' ಎಂಬ ಕಾದಂಬರಿಯು ಹಿಂದಿಗೆ ಅನುವಾದವಾಗಿದೆ.

ಮಂಜೇಶ್ವರದಲ್ಲಿ ನೆಲಸಿದ್ದ ಮೊಗೆಗೊರು ಗೋವಿಂದ ಪೈಗಳು (೨೩-೩-೧೮೮೩ ರಿಂದ ೬-೯-೧೯೬೬) ಉದ್ದಾಮ ಸಾಹಿತಿಗಳು, ಹಲವು ಭಾಷಾ ಪಂಡಿತರಾಗಿ, ಸಂಶೋಧನಾತ್ಮಕ ಲೇಖನಗಳನ್ನು ಬರೆಯುವುದರಲ್ಲಿ ಸಿದ್ಧ ಹಸ್ತರು. ೧೯೫೦ರಲ್ಲಿ ಬೆಂಗಳೂರಿನಲ್ಲಿ ಜರಗಿದ ಮೂವತ್ತನಾಲ್ಕನೆಯ ಕನ್ನಡ ಸಾಹಿತ್ಯ ಸಮ್ಮೇಲನಕ್ಕೆ ಇವರನ್ನು ಅಧ್ಯಕ್ಷರನ್ನಾಗಿ ಮಾಡಿ ಗೌರವಿಸಿದ್ದಾರೆ. ಇವರನ್ನು ಸರಕಾರದವರು ರಾಷ್ಟ್ರ ಕವಿಗಳೆಂದು ಪನ್ನಿಸಿದ್ದಾರೆ. ಇವರು ಬರೆದ 'ಗೊಲ್ಗೊಥಾ' ಎಂಬ ಖಂಡ ಕಾವ್ಯವನ್ನು ಮಂಗಳೂರಿನ ನವನಿಧಿ ಸಾಹಿತ್ಯ ಮೂಲೆಯ ಒಡೆಯರಾದ ದಾಮೋದರ ಬಾಳಿಗರು ೧೯೬೬ರಲ್ಲಿ ಇಂಗ್ಲಿಷಿನಲ್ಲಿ ಅನುವಾದಿಸಿ ೫೫,೦೦೦ ಪುಸ್ತಕಗಳನ್ನು ಪ್ರಕಟಿಸಿ ಬೊಂಬಾಯಿಯಲ್ಲಿ ಧರ್ಮಾರ್ಥವಾಗಿ ಹಂಚಿದ್ದಾರೆ.

ತ.ರಾ.ಸು. ಎಂಬ ಹೆಸರಿನಿಂದ ಚಿರಪರಿಚಿತರಾದ ತಳಕಿನ ರಾಮಸ್ವಾಮಯ್ಯ ಎಂಬವರ ಸುಪುತ್ರರಾದ ಸುಬ್ಬರಾಯರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವರು. ಪತ್ರಿಕೋದ್ಯಮಿಗಳಾಗಿಯೂ ದುಡಿದವರು. ಅವರು ೬೦ಕ್ಕೂ ಮಿಕ್ಕಿ ಕೃತಿಗಳನ್ನು ರಚಿಸಿದ್ದು, ಅವರ 'ಚಂದವಳ್ಳಿ ತೋಟ—ಹಂಸಗೀತೆ—ಚಕ್ರತೀರ್ಥ' ಮೊದಲಾದ ಕಾದಂಬರಿಗಳು ಚಲಚ್ಚಿತ್ರವಾಗಿ ತೆರೆ ಕಂಡಿವೆ. ಇವರು ಬರೆದ 'ಹಂಸಗೀತೆ'ಯು ಹಿಂದಿಯಲ್ಲಿ ಅನುವಾದವಾಗಿದೆ.

(ಇಪ್ಪತ್ತೊಂಭತ್ತನೇ ಪುಟ ನೋಡಿರಿ)

With Best Compliments from

PHONE: 145 GRAM:

Western Saw Mills

Timber Merchants, Saw Mill Owners, Forest Coupe Contractors

MARIJAN NAGAR, P. O. CHENGALA, KASARAGOD
(KERALA)

ಶಿಕ್ಷಣದ ಕುರಿತು ಕೆಲವು ವಿಚಾರಗಳು

ಶ್ರೀ ಎಂ. ನಾಸುಡೇವ ರಾವ್

ಶಿಕ್ಷಣದ ವಿಸ್ತಾರವು ಹೆಚ್ಚಿದಂತೆ ಅದರ ಗುಣಮಟ್ಟ ಉಳಿದಿಲ್ಲವೆಂಬುದು ಎಲ್ಲರ ಅಭಿಮತ. ಶಿಕ್ಷಣದ ಬಗೆಗೆ ಅಧಿಕೃತವಾಗಿ ನುಡಿಯಬಲ್ಲ ಶ್ರೀ ರಾಯರು ತಮ್ಮ ಸ್ವಸ್ಥ ವಿಚಾರಗಳನ್ನು ಇಲ್ಲಿ ವ್ಯಕ್ತಪಡಿಸಿ, ಸಂಬಂಧಿಸಿದವರ ಕಣ್ಣು ತೆರೆಯುವ ಸಾರ್ಥಕ ಪ್ರಯತ್ನ ಮಾಡಿದ್ದಾರೆ.

ನಮ್ಮ ದೇಶವು ಸ್ವತಂತ್ರವೆನಿಸಿ ಹತ್ತಿರ ಹತ್ತಿರ ತಮೂನ ಕಾಲ ಕಳೆಯುತ್ತ ಬಂದಿದ್ದು, ಶಿಕ್ಷಣ ರಂಗದಲ್ಲಿನ-ಸಂದೇಹ ಗೊಂದಲಗಳು ದೂರವಾಗಿಲ್ಲ. ರಾಷ್ಟ್ರೀಯ ಜೀವನಕ್ಕೆ ಶಕ್ತಿಗಳುಳ್ಳ, ಸ್ವಯಂ-ಸ್ಫೂರ್ತಿ, ಸ್ವಾಭಿಮಾನ ಲಂಬನ, ಮತ್ತು ಸಾಂಸ್ಕೃತಿಕ ಹಿರಿಮೆ ಹಿನ್ನೆಲೆಗಳಿಂದೊಡಗೂಡಿದ ಶಿಕ್ಷಣ ರಚನೆಯ ಮುಂದೆ ಸಾಗುವ ಲಕ್ಷಣಗಳನ್ನೂ ತೋರುತ್ತಿಲ್ಲ. ಪರಸ್ಪರ ವಿರೋಧಿ — ಮುಖದ ಕಾರ್ಯೋಚರಣೆಯು ಸೂಚನೆಗಳೇ ಗೋಚರಿಸುತ್ತಿವೆ. ಶಿಕ್ಷಣಕ್ಕಾಗಿ ಮಾಡಲಾಗುತ್ತಿರುವ ಭಾರೀ ಪ್ರಮಾಣದ ವೆಚ್ಚ ಮತ್ತು ಅದಕ್ಕೆ ಸಂಬಂಧಿಸಿದ ಅಂಕೆ ಸಂಖ್ಯೆಗಳು ಶಿಕ್ಷಣ ಕ್ಷೇತ್ರದ ಮಹತ್ತರ ಪ್ರಗತಿಯ ಸೂಚಕವಾಗಿ ಕಂಡರೂ, ಮೌಲ್ಯ ಮತ್ತು ಗುಣಮಟ್ಟಗಳ ಕುಸಿತದ ಮಾತು ಎಲ್ಲೆಡೆಯಲ್ಲಿಯೂ ಕೇಳಬರುತ್ತಲಿದೆ. "ಪ್ರತಿಭೆಯ ಹೊರ ಹರಿವು" ಯೂವಾಗಲೆಂದರೆ ಆಗ ಎಲ್ಲೆಂದರಲ್ಲೆಂಬಂತೆ ಸಿಡಿದೇಳುವಂತಿರುವ ಆತಿಸ್ಸು, ಮುಷ್ಕರ, ಪ್ರದರ್ಶನ ಮೊದಲಾದವು ದೇಶದ ಜನಮನದಲ್ಲಿ, ಇಂದಿನ ಶಿಕ್ಷಣದ ಕುರಿತು ಕಾತರ ಹಾಗು ಬೇಸರದ ಭಾವನೆಯನ್ನು ಹುಟ್ಟಿಸಿವೆ. ನಿರುದ್ಯೋಗ ಸಮಸ್ಯೆಯಂತೂ ಪೆಡಂಭೂತಾಕಾರವಾಗಿ ಬೆಳೆದು ರಾಷ್ಟ್ರದ ಆರ್ಥಿಕ ಪ್ರಗತಿಗೆ ಅಡ್ಡಗೋಡೆಯಾಗಿ ನಿಂತಿದೆ. ಪ್ರಾಥಮಿಕ ಹಂತದಿಂದ ವಿಶ್ವವಿದ್ಯಾನಿಲಯ ಹಾಗು ಸ್ನಾತಕೋತ್ತರ ಹಂತದ ವರೆಗಿನ ಶಿಕ್ಷಣದ ಎಲ್ಲ ವಿಭಾಗಗಳಲ್ಲೂ ಒಂದು ಬಗೆಯ ಅತೃಪ್ತಿ ಅಸಮಾಧಾನಗಳು ಹೆಡೆಯೊಡುತ್ತಿವೆ. ಇವೆಲ್ಲ ದೇಶದ ಪುರೋಭಿವೃದ್ಧಿಯ— ಸ್ವಾತಂತ್ರ್ಯೋತ್ತರದ ಪ್ರಗತಿಯ—ದೃಷ್ಟಿಯಿಂದ ಶುಭಚಿಹ್ನೆಗಳೆನಿಸವು. ಇವನ್ನು ನಿವಾರಿಸಿ, ಶಿಕ್ಷಣ ಕ್ಷೇತ್ರದ ಪಾವಿತ್ರ್ಯ ಮತ್ತು ಮಹತ್ತ್ವದ ಸ್ಥಾನವನ್ನು ಕಾಪಾಡಬೇಡವೇ? ಸೊಕ್ಕಿ ಮೌಲ್ಯಗಳನ್ನು ಪುನಸ್ಥಾಪಿಸಬೇಡವೇ? ಹಾಗಾದರೆ ಅದು ಯಾರಿಂದ? ಹೇಗೆ ಸಾಧ್ಯ? ಅದಕ್ಕೆ ಯಾವ ಮೂಲಾಧಾರಸರಣಿಯು ಯೋಗ್ಯ? ಎಂಬ ಪ್ರಶ್ನೆಗಳು ಏಳುತ್ತವೆ. ರಾಷ್ಟ್ರದ ಸರ್ವಾಂಗೀಣ ಅಭಿವೃದ್ಧಿಯ ಕಾರ್ಯಗಳಿಗೆಲ್ಲ ಉತ್ತಮ ಮತ್ತು ಸುಸಂಬದ್ಧ ಶಿಕ್ಷಣವೇ ಮೂಲಾಧಾರ; ಆದು ಸಾಮಾಜಿಕ ಬದಲಾವಣೆಗಳನ್ನುಂಟು ಮಾಡಬಲ್ಲ ಅತ್ಯಾಶ್ಚರ್ಯ ಮತ್ತು ಏಕೈಕ ಸಾಧನವೂ ಹೌದು. ಆದು ರಾಷ್ಟ್ರದ ಸಮಸ್ಯೆಗಳ ಪರಿಹಾರ ಸಾಧ್ಯತೆಯ ಸೂಚಕವಿರುವಂತೆಯೇ, ರಾಷ್ಟ್ರದ ಮುನ್ನಡೆಯ ಮೂಪಕವೂ ಆಗಿದೆ. ಈ ಕುರಿತು ಕೆಲವು ವಿಚಾರಗಳನ್ನು ಇಲ್ಲಿ ಉಲ್ಲೇಖಿಸಬಯಸುತ್ತೇನೆ.

ವ್ಯಕ್ತಿಯು ತನ್ನ ಕುಟುಂಬ, ನೆರೆಹೊರೆ, ಉದ್ಯೋಗ, ಸಮಾಜ ಮತ್ತು ರಾಷ್ಟ್ರ ಜೀವನಗಳಿಗೆ ಅನ್ವಯಿಸುವ ವಿವಿಧ ಕ್ಷೇತ್ರಗಳಲ್ಲಿ ಇರಿಸಿ, ಬೆಳೆಸಬೇಕಾಗಿರುವ ಸಮಾಜವೂ ಸಫಲವೂ ಆದ ಸಂಬಂಧಗಳ ಬಗೆಗೆ ಶಿಕ್ಷಣವಲ್ಲಿ ವಾಸ್ತವ್ಯವಿರಲೇ ಬೇಕಾಗುತ್ತದೆ. ಎಲ್ಲೇ ಆಗಲಿ, ಎಂದಿಗಾ ನಿರಿಪ ಒಂದೆ. ಪರಿಗಣಾತೀತವಾಡ ಶಿಕ್ಷಣವನ್ನು ಅನು ಒದಗಿಸಲೂ ಬೇಕು. ಟೊಲಿಬೆಸ್ಸಾ ಹ್ಲಕ್ಸ್ಲೆಯು ಒಂದೆಡೆ ಹೇಳಿದಂತೆ, "ಶಿಕ್ಷಣವು ಆಯಾ ಕಾಲ ಮತ್ತು ಸ್ಥಳ ಸೂಚಕ ವಿಶಿಷ್ಟ ಪರಿಸರಕ್ಕನುಗುಣವಾಗಿರ ಬೇಕಾದರೂ, ಅದು ಆ ಪರಿಸರವನ್ನೂ ಮೀರಿನಿಲ್ಲುವ ಜೀವನಕ್ಕೆ ಅನಕಾಶ ವೀಯಬೇಕು." (Education should be adapted to the local environment of time and place and yet give the opportunity of transcending that environment)"ಸಾ ವಿದ್ಯಾಯಾ ವಿಮುಕ್ತಯೇ " ಎಂಬ ಪ್ರಾಜ್ಞೀ ನೋಕ್ತಿಯೂ ಇದನ್ನೇ ಸಾರುತ್ತದೆ. ಇದನ್ನು ಗಮನಿಸಿದರೆ, ನಮ್ಮ ಹೊಸ ಶಿಕ್ಷಣ ವ್ಯವಸ್ಥೆಯು ಈ ಕೆಳಗಿನ ಚೌಕಟ್ಟಿನಲ್ಲಿದ್ದರೆ, ಅದು ಹೊಸ ಶೋಭಾಯಮಾನ ವಿರುವಷ್ಟೇ ಫಲದಾಯಕವೂ ಆಗಬಹುದೆಂದೆನಿಕೆ.

(i) ಸ್ರೇಷ್ಠಾಸ್ಪಭುತ್ವ ಮತ್ತು ಸಮಾಜವಾದ: ಈ ತಳಪದಿಯ ಗಣರಾಜ್ಯದ ಪೌರರು ನಾವೆಂಬ ವ್ಯಕ್ತಿಭಾವನೆ ಮತ್ತು ರಾಷ್ಟ್ರದ ಸಮಗ್ರತಾ ಪಾಲನಾವಶ್ಯಕತೆ

(ii) ಪರಂಪರಾಗತ ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯ, ಜ್ಞಾನ ಮತ್ತು ಅದರ ಸಂವರ್ಧನಾಪೇಕ್ಷೆ.

(iii) ಆಧುನಿಕ ತಾಂತ್ರಿಕ ಮತ್ತು ವೈಜ್ಞಾನಿಕ ಕ್ರಾಂತಿಯ ಪ್ರಪಂಚದ ಪ್ರಜ್ಞೆಗಳು ನಾವೆಂಬ ಪ್ರಜ್ಞೆ.

iv) ರಾಷ್ಟ್ರೀಯ ಆರ್ಥಿಕ ಸಂಪನ್ಮೂಲಗಳ ಹೆಚ್ಚಳದ ಸಾಧ್ಯತೆ; ಮತ್ತು ಉದ್ಯೋಗ ಪ್ರೇರಿತವೂ ಪೋಷಕವೂ ಆದ ಶಾರೀರಿಕ ಮತ್ತು ಬೌದ್ಧಿಕ ತರಬೇತಿಯ ವ್ಯವಸ್ಥೆ.

ಸ್ವತಂತ್ರ ಭಾರತದ ಶಿಕ್ಷಣ ಪದ್ಧತಿಯು ಹೇಗಿರಬೇಕೆಂಬುದರ ಕುರಿತು ಸ್ವಾತಂತ್ರ್ಯ ಪೂರ್ವದಲ್ಲೂ ರಾಷ್ಟ್ರೀಯ ಮುಖಂಡರನೇಕರು ತಮ್ಮ ಗಮನ ಹರಿಯಿಸಿ, ವಿಚಾರ ಪೂರ್ಣವೂ ಅನುಷ್ಠಾನಯೋಗ್ಯವೂ ಆದ ಸಲಹೆ-ಸೂಚನೆಗಳನ್ನಿತ್ತುದುಂಟು. ಅವರಲ್ಲಿ ದೇಶಭಕ್ತ ಲಾಲಾಲಜಪತರಾಯ, ಡಾ| ಅನ್ನಿಬಿಸೆಂಟ್, ವಿಶ್ವಕವಿ ರವೀಂದ್ರನಾಥ ಠಾಗೋರ್, ಶ್ರೀ ಅರವಿಂದರು ಮತ್ತು ಮಹಾತ್ಮಾ ಗಾಂಧಿ ಇವರು ಪ್ರಮುಖರು. ಅವರ ವಿಚಾರಧಾರೆಗಳು ಇಂದಿಗೂ ಗಮನಾರ್ಹ. ಸರಕಾರದ ವತಿಯಿಂದಲೂ ಹಲವು ವರದಿಗಳು ಹೊರಬಂದಿವೆ. ಸ್ವಾತಂತ್ರ್ಯ ಪ್ರಾಪ್ತಿಯಾದ ಮೇಲೆ, ಭಾರತ ಸರಕಾರವು ಡಾ| ಎಸ್. ರಾಧಾಕೃಷ್ಣನ್ ಇವರ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾನಿಲಯ ಶಿಕ್ಷಣ ಆಯೋಗವನ್ನೂ (1948–49), ಡಾ| ಎ. ಲಕ್ಷ್ಮಣಸ್ವಾಮಿ ಮುದಲಿಯಾರ್ ಇವರ ಅಧ್ಯಕ್ಷತೆಯಲ್ಲಿ ಮಾಧ್ಯಮಿಕ ಶಿಕ್ಷಣ ಆಯೋಗವನ್ನೂ (1952–53) ನೇಮಕ ಮಾಡಿ, ಶಿಕ್ಷಣ ಪದ್ಧತಿ ಹಲಕೆಲವು ಬದಲಾವಣೆಗಳ ಕಾರ್ಯಕ್ರಮಗಳನ್ನು ಕೈಗೊಂಡಿತು. ರಾಜ್ಯ ಸರಕಾರಗಳೂ ಆ ದಾರಿಯಲ್ಲಿ ಕೆಲವೊಂದು ಮಾರ್ಪಾಟುಗಳನ್ನೂ, ಸುಧಾರಣೆಗಳನ್ನೂ ಮಾಡಿದವು. ಆದರೆ ಎಲ್ಲೂ ಸಮಗ್ರ ದೃಷ್ಟಿ ವ್ಯಕ್ತವಾದಂತೆ ಇರಲಿಲ್ಲ. ಈ ವಿಷಯದಲ್ಲಿ 1964–66ರಲ್ಲಿ ಕಾರ್ಯನಿರ್ವಹಿಸಿ, ರಾಷ್ಟ್ರೀಯ ಶಿಕ್ಷಣದ ಎಲ್ಲಾ ಹಂತಗಳು ಮತ್ತು ಮುಖಗಳಲ್ಲಿನ ರೂಪರೇಖೆಗಳು ಹೇಗಿರಬೇಕೆಂಬುದರ ಬಗೆಗೆ ಸಂಪೂರ್ಣ ವಿವೇಚನೆ ನಡೆಸಿದ ಡಾ| ಡಿ.ಎಸ್. ಕೊಠಾರಿಯವರ ನೇತೃತ್ವದ ಆಯೋಗದ ಶ್ರಮ-ಸಾಧನೆಗಳು ಸ್ತುತ್ಯಾರ್ಹ. "ಶಿಕ್ಷಣ ಮತ್ತು ರಾಷ್ಟ್ರೀಯ ಅಭಿವೃದ್ಧಿ (Education and National Development) ಎಂಬ ಹೆಸರಿನಲ್ಲಿ ಪ್ರಕಟವಾದ ಆ ಆಯೋಗದ ನಾಲ್ಕು ಸಂಪುಟಗಳ ಬೃಹತ್ತಾದ ವರದಿಯು, ಆಧುನಿಕ ಭಾರತದಲ್ಲಿ ಶಿಕ್ಷಣದ ಮುನ್ನಡೆಯ ಚರಿತ್ರೆ 1833ರಿಂದ ಈ ವರೆಗಿನ ಸರಕಾರಿ ವರದಿಗಳ ಪೈಕಿ ಹೊಸ ಬೆಳಕು ಚೆಲ್ಲಿದ ಅತಿ ಮಹತ್ವದ ಹಾಗೂ ಪ್ರಮುಖ ದಾಖಲೆಯೇ ಸರಿ. ಆ ವರದಿಯು ನ್ಯಾಯಶಾಸ್ತ್ರ ಮತ್ತು ವೈದ್ಯಕೀಯ ಶಿಕ್ಷಣಗಳನ್ನು ಬಿಟ್ಟು, ಉಳಿದ ಎಲ್ಲಾ ಶಿಕ್ಷಣ ವಿಭಾಗಗಳ ಮೇಲೆ ತನ್ನ ವ್ಯಾಪ್ತಿ-ಕೇರಣ ಹಾಯಿಸಿ, ಖಚಿತವೂ ಪ್ರಗತಿ ಸೂಚಕವೂ ಆದ ಸವಿಸ್ತರ ಶಿಫಾರಸುಗಳನ್ನು ಮಾಡಿದೆ. 17 ಮಂದಿ ದೇಶೀಯ ಮತ್ತು ವಿದೇಶೀಯ ಶಿಕ್ಷಣವೇತ್ತರ ವಿಚಾರ ಪ್ರವಾಹವೆಲ್ಲ ಏಕಮುಖವಾಗಿ ಆ

(ಇಪ್ಪತ್ತೆಂಟನೇ ಪುಟ ನೋಡಿರಿ)

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—
ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.
ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ
ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್
Please Visit ಫೋನ್: 77
HOTEL SHIVAPRASAD
High Class Boarding, Lodging & Restaurant
COONDAPUR, S. K.

ಸಭ್ಯ - ಸಂಸ್ಕೃತಿಗಳ ನಡುವಣ ಹೊಗೆ

ಶ್ರೀ ಮಾಡರಬೆಟ್ಟು ರಂಗೆರಾವ್



ಅಪ್ಪಿ ತಪ್ಪಿ ತಮ್ಮ ಮಗ ಹೊಗೆ ಸೇದುವುದನ್ನು ಕಂಡರೆ ಹೊಡೆದು ಬಡಿದು ಕಿವಿಹಿಂದಿ ತಲೆಗೆ ಕುಟ್ಟಿ ಬುದ್ಧಿ ಹೇಳುವ ತಂದೆಗಳು ಸಭ್ಯ—ಸಂಸ್ಕೃತಿಗಳ ನಡುವೆ ಹೊಗೆ ಅನಿವಾರ್ಯವೆಂದು ಭಾವಿಸಿಬಿಡಂತಿದೆ...ಅಂತವರು ಹೊಗೆ ಸೇದುವುದರ ಮೇಲೆ ಎಂತಹ ಶಾಸನಗಳು ಬಂದರೂ ಆದರಿಸಿಯಾರು.

ಮೃಗ ಪಕ್ಷಿ ವೃಕ್ಷಾದಿಗಳಿಂದ ಕೂಡಿದ ಸ್ಥಿರ ಚರ ಜೀವರಾಶಿಗಳಲ್ಲಿ ಮನುಷ್ಯನು ಮೃಗ ಜಾತಿಗೆ ಸೇರಿದವನೆಂದು ಜೀವಶಾಸ್ತ್ರಜ್ಞರು ಹೇಳುತ್ತಾರಲ್ಲವೆ?

ಮೃಗ ಜಾತಿಗಳಲ್ಲಿ ಎಲ್ಲಾ ಮೃಗಗಳಿಗೆನ್ನೂ ಮೂತ್ರವಲ್ಲ, ತನ್ನನ್ನೂ ಸೇರಿಸಿ ಚಲಿಬಲ್ಲವನಾದ ಮನುಷ್ಯ ತನ್ನ ಬುದ್ಧಿಶಕ್ತಿಯಿಂದಾಗಿ ಮೃಗಜಾತಿಯಲ್ಲೇ ಶ್ರೇಷ್ಠನಾಗಿ, ಮೃಗವೆಂಬ ತನ್ನ ಮೂಲವನ್ನು ಮರೆತುಬಿಟ್ಟ, ತನ್ನನ್ನು ಮೃಗವೆಂದು ನೆನೆಯುವುದು ಕೂಡ ಅವನಿಗೆ ಅಸಹ್ಯವೆನಿಸುತ್ತದೆ.

ಸಹಜ ಸ್ವಭಾವಗಳಲ್ಲಿ ಮೃಗಗಳಿಗೂ ಮನುಷ್ಯರಿಗೂ ಭೇದವೇನಿದೆ? ಹೊಟ್ಟೆಯ ಚಿಂತೆ, ಹೆಣ್ಣಿನ ಬಯಕೆ, ನಿದ್ದೆ, ವಿಶ್ರಾಂತಿ ಮನುಷ್ಯನಿಗೂ ಇದೆ, ಮೃಗಗಳಿಗೂ ಇದೆ. ಭಯ ಕೋಪಗಳೂ ಅಷ್ಟೇ.

ಆದರೆ ಮನುಷ್ಯನು ಮೃಗ ಜಾತಿಗಿಂತ ವೈಪರೀತ್ಯ ಕಾಣುವುದು, ಅಂತರಂಗದಲ್ಲಿ ಬುದ್ಧಿಶಕ್ತಿ, ಮನೋಬಲಗಳಿಂದಾದರೆ ಬಹಿರಂಗದಲ್ಲಿ ಸಭ್ಯ ಸಂಸ್ಕೃತಿಗಳ ಉಡುಗೆ ತೊಡುಗೆ ನಡೆ ನುಡಿ ಆಚಾರ ವ್ಯವಹಾರಗಳಿಂದ. ಇವುಗಳಲ್ಲಿ ಎಷ್ಟೆಷ್ಟು ಲೋಪ ಉಂಟಾಗುತ್ತಾ ಹೋಗುವುದೋ ಅವನು ಅಷ್ಟಷ್ಟೂ ಮೃಗಗಳ ಮಟ್ಟಕ್ಕೆ ಇಳಿಯುತ್ತಾ ಹೋದಂತೆಯೇ, ಉಡುಗೆತೊಡುಗೆಗಳು ಮನುಷ್ಯತ್ವದ ಸಭ್ಯತೆಗೊಂದು ಮುಖ್ಯಿಕುರುಹಾದರೆ, ಈ ಸಭ್ಯತೆ ಸುಧಾರಿತ ಸುಸಂಸ್ಕೃತವಾದಷ್ಟೂ ಮನುಷ್ಯನ ಗೌರವ ಹೆಚ್ಚುವುದೆಂತಲೂ ಅದಕ್ಕೆ ವಿರುದ್ಧವಾದರೆ ಮೃಗತ್ವಕ್ಕೆಳೆಯುವುದೆಂತಲೂ ಹೇಳಬಹುದು.

ಈಗ "ಮಿನಿ" ಭೂಷಣಗಳಾದ ತರುಣಿಯರನ್ನೂ, ಫಿಟ್ ಪ್ಯಾಂಟ್ ಅಂಟಿಸಿಕೊಳ್ಳುವ ಗಂಡುಗಳನ್ನೂ, "ಹಿಪ್ಪೀ" ವಿಲಾಸಿಗಳನ್ನೂ ನೋಡುವಾಗ ಏನೋ ಒಂದು ಬಗೆಯ ಸಂಶಯವಾಗುವುದಿಲ್ಲವೆ?

ಸಂಶಯದಿಂದ ನಾವೇನು ಮೂಡುವಂತಿಲ್ಲದಿದ್ದರೂ ಮುಂದಿನ ಪರಿಣಾಮ ಮುಂದಿನವರಿಗಿದ್ದೇ ಇದೆ. ಕಾಲಕ್ಕೆ ತಕ್ಕ ಹಾಗೆ ಹೊರಳಿಕೊಂಡು ಹೋಗುತ್ತಾರೆಂಬ ಸಮೂಹಾನದಿಂದ, ಸಭ್ಯತೆ ಸಂಸ್ಕೃತಿಗಳನ್ನೂ ಕುರಿತು ಸ್ವಲ್ಪ ಜ್ಞಾಪಕಪಡಿಸಿಕೊಳ್ಳುವುದರಿಂದ ಕೆಡುಕೇನು ಇಲ್ಲವಷ್ಟೆ?

ಸ್ವಲ್ಪ ಕಣ್ಣು ಬಿಡಿಸಿ ನೋಡಿದರೆ ಸಭ್ಯ ಸಂಸ್ಕೃತಿಗಳಿಗೂ ಆರೋಗ್ಯಕ್ಕೂ ಇರುವ ನಿಕಟ ಸಂಬಂಧವನ್ನು ಕಾಣಬಹುದು. ಮನುಷ್ಯೇತರ ಸ್ವಾತಂತ್ರಿಗಳಾದರೆ ಸಹಜವಾದ ಸ್ವಭಾವಗಳಷ್ಟೇ ಇರುವುದರಿಂದ ಸಭ್ಯತೆ ಪುಸ್ತು ಆರೋಗ್ಯದ ಗೊಡವೆ ಬೇಕಾಗುವುದಿಲ್ಲ. ಆವುಗಳ ಬುದ್ಧಿ ಮನುಷ್ಯನ ಬುದ್ಧಿಯಂತೆ ವಿಕಸನ ಗುಣವುಳ್ಳವುಗಳಲ್ಲವು ದರಿಂದ ಅವುಗಳ ಜೀವನ ಪ್ರಕೃತಿ ನಿಯಮಬದ್ಧವಾಗಿ ಸಾಗುತ್ತಾ ಹೋಗುತ್ತದೆ.

ಮನುಷ್ಯನಿಗೆ ಬುದ್ಧಿಶಕ್ತಿಯಿಂದಾಗಿ ಬಹುಮುಖ ಕಾರ್ಯಗಳ ಸ್ವಭಾವ. ಈ ಕಾರ್ಯಗಳು ಇಷ್ಟೇ ಇಷ್ಟೇ ಎಂಬ ನಿಯಮವೇನಿಲ್ಲ. ಆಂತೆಯೇ ಅವುಗಳಿಂದಾಗುವ ಸಾಧಕ ಬಾಧಕಗಳಿಗೂ ಅವನು ಒಳಗಾಗಬೇಕಾಗುತ್ತದೆ. ಆರೋಗ್ಯ ರಕ್ಷಣೆಗೆ ಸಭ್ಯತನವೂ ಆಚಾರ ವ್ಯವಹಾರಗಳ ಉಚಿತಾನುಚಿತಗಳ ಪಾಲನೆಯೂ ಅತ್ಯಗತ್ಯವಾಗುತ್ತವೆ.

ಸಭ್ಯನೆಂದರೆ ಹತ್ತುಮಂದಿಯಲ್ಲೊಬ್ಬನೆಂದೇ ಅರ್ಥ. ಆದರೆ ಸಭ್ಯತೆಯ ಅರ್ಥವು ಈ ಸಭೆ ಸಂಘಗಳಿಗಷ್ಟೇ ಸಂಬಂಧಿಸುವಷ್ಟು ಸಂಕುಚಿತವಲ್ಲ. ಪ್ರತಿ ವ್ಯಕ್ತಿಗೂ ವೈಯಕ್ತಿಕ ಸಭ್ಯತೆಯೊಂದಿದ್ದೇ ಇದೆ. ವೈಯಕ್ತಿಗಳ ಸಭ್ಯ ಸಂಸ್ಕೃತಿಗಳ ಸಮ್ಮೇಳನದಲ್ಲಿಯೇ ಸಾಮೂಹಿಕ ಸಂಸ್ಕೃತಿ ಕಂಗೊಳಿಸುತ್ತದೆ. ಪ್ರತಿ ವ್ಯಕ್ತಿಗೂ ಪ್ರತಿ ಮನೆಗೂ, ಪ್ರತಿ ಬೀದಿಗೂ ಪ್ರತಿ ಗ್ರಾಮಕ್ಕೂ, ಪ್ರತಿ ದೇಶಕ್ಕೂ ವಿಸ್ತರಿಸಿಕೊಂಡು ಹೋಗಿ ತಕ್ಕ ದ್ದೇ ಸಭ್ಯತೆಯ ಸಂಸ್ಕೃತಿ ಇದಕ್ಕೆಲ್ಲ ಒಂದೇ ರೂಸವಾಗಿ ನಮ್ಮದು ಭಾರತೀಯ ಸಂಸ್ಕೃತಿಯಾಗಿದೆ.

ಸಭ್ಯ—ಅಸಭ್ಯತೆಗಳ ತಾರತಮ್ಯ ಜ್ಞಾನದಿಂದ ಸಂಸ್ಕೃತಿ ಅಭಿವೃದ್ಧಿಗೇರಬೇಕಾಗುತ್ತದೆ. ಆದುದರಿಂದ ಸಭ್ಯ — ಅಸಭ್ಯತೆಗಳ ನೀತಿಯನ್ನು ಚಿಕ್ಕ ಮಕ್ಕಳಿಗೆ ಮನೆಯವರೂ, ಶಾಲೆಯಲ್ಲಿ ಗುರುಗಳೂ ಹೇಳಕೊಡಬೇಕು. ಹೇಳದ ಮಾತ್ರಕ್ಕೇ ಅದು ಬಾದುಬಿಡುವುದಿಲ್ಲ. ಭಯವನ್ನೂ ಸೇರಿಸಿಯೇ ಹೇಳಬೇಕಾಗುತ್ತದೆ.

ಸಭ್ಯತೆಯ ವಿಷಯದಲ್ಲಿ ಬೀಡಿ ಸಿಗರೇಟು ಚುಟ್ಟಾಗಳೆದೊಂದು ಪ್ರಶ್ನೆಯಂತಿದೆ. ಅದು ಕೆಲವು ಸಂದರ್ಭಗಳಲ್ಲಿ ಸಭ್ಯತೆ, ಕೆಲವು ಸಂದರ್ಭಗಳಲ್ಲಿ ಅಸಭ್ಯತೆ. ಆಂತೆಯೇ ಅದು ಅಂತರಂಗ-ಬಹಿರಂಗಗಳೆರಡರಲ್ಲಿಯೂ ತಾಂಡವವಾಡುತ್ತದೆ. ಹೊಗೆಸೊಪ್ಪಿನ ವಿಷವು ಆರೋಗ್ಯಕ್ಕೆ ಹಾನಿಕರವೆಂದು ಸ್ವಾರಂಭದ ಪಾಠದಲ್ಲೇ ಬಾಯಿಪಾಠ ಮಾಡಲ್ಪಟ್ಟರೂ ಅದರ ವಿಜೃಂಭಣೆ ದಿನೇದಿನೇ ಹೆಚ್ಚುತ್ತಿರುವುದೇ ಹೊರತು ಕಡಿಮೆಯಾಗಲಿಲ್ಲ. ಮೊದಲು ಆಚಾರವಂತ ಬ್ರಾಹ್ಮಣ ಹುಡುಗರಲ್ಲಿ ಎಂಜಲಿನ ಭಯವಾದರೂ ಇತ್ತು. ಬೀಡಿ ಸಿಗರೇಟುಗಳನ್ನು ಕೈಯಲ್ಲಿ ಹಿಡಿದು ಬಾಯಿಯಲ್ಲಿ ಕಚ್ಚಿದರೆ ಕೈಬೆರಳು ಎಂಜಲಾಯಿತು. ಅದು ಅನಾಚಾರವೆನಿಸುತ್ತಿತ್ತು. ಇತ್ತೀಚೆಗೆ ಎಂಜಲಿನ ಅನಾಚಾರವನ್ನು ಹೇಳುವುದೂ ಕೇಳುವುದೂ ಅಸಭ್ಯತೆ ಎನಿಸುವಷ್ಟು ಸಭ್ಯತೆಯಾಗಿದೆ. ಓದುವ ಪುಸ್ತಕಗಳೂ ಎಂಜಲು, ಬಸ್ಸುಟಿಕೇಟೂ ಎಂಜಲು; ಪತ್ರಗಳೂ, ಸ್ಟಾಂಪುಗಳೂ, ಎಂಜಲು. "ಎಂಜಲೆಂಬರಾ ನಮ್ಮ ಎಂಜಲಲ್ಲವೆ...." ಎಂಬ ಕನಕದಾಸರು ಹೇಳಿದ ಹಾಡಿಗೇ ನಮಿಗೂಡಿಸಬಹುದು.

ಎಂಜಲಿನ ಹಾಡು ಹೀಗಾದರೆ ಹೊಗೆಯ ಪಾಡು ಇನ್ನೊಂದು ಬಗೆ. ಅವನು ಬಿಡುವ ಹೊಗೆಯನ್ನು ಬೇರೆಯವರು ಕೂಡಾ ಶ್ವಾಸಿಸುವುದರಿಂದ ಇತರರ ಆರೋಗ್ಯಕ್ಕೂ ಹಾನಿಯೂಗುವುದೆಂಬುದನ್ನು ಎಷ್ಟು ಮಂದಿ ಯೋಚಿಸುತ್ತಾರೆ? ಅಲ್ಲದೆ ಇದು ಸಭ್ಯತೆ ಎಂಬ ಭ್ರಾಂತಿಯನ್ನು ಬೇರೆ ಹುಟ್ಟಿಸಿ ಬಿಟ್ಟಿದೆ. ಇಬ್ಬರು ಗೆಳೆಯರು ಕೂಡಿದರೆ ಹೊಗೆ ಹೊರಡಲೇ ಬೇಕೆಂದಾಗಿದೆ. ಇದು ಸಭ್ಯತೆಯೆ?

ಹಾಗಿದ್ದರೆ ಮಕ್ಕಳಿಗೆ ಹೊಗೆ ಸೇದಬಾರದೆನ್ನುತ್ತೇವೆ ಏಕೆ? ದೊಡ್ಡ ಮಟ್ಟದವರು ಸಭ್ಯತೆಯ ಸೋಗಿನಲ್ಲಿ ಹೊಗೆ ಸೇದುವಾಗ ಸಣ್ಣ ಮಟ್ಟದವರು ಅವರಿದಿರು ಸೇದುವುದು ಅಸಭ್ಯತೆ, ಅವಮರ್ಯಾದೆಯಂತೆ. ಅಂತೆಯೇ ಅವರು ಮರೆಯಲ್ಲಿ ಕದ್ದು ಮುಚ್ಚಿ ಸೇದುತ್ತಾರೆ.

ಮಕ್ಕಳೂ ಹಾಗೆಯೇ. ಮಕ್ಕಳನ್ನು ಧೂಮ ಭಕ್ತಿಯಿಂದ ಉಳಿಸ ಬೇಕಾದರೆ ದೊಡ್ಡವರು ತಡೆ ಹೇಳಿದರೆ ಮಾತ್ರ ಸಾಲದು. ತಮಗೆ ಅಂತಹ ಆಭ್ಯಾಸವನ್ನು ಬಿಡಲು ಅಸಾಧ್ಯವಾದರೂ, ಏನೋ ಒಂದು ಕೊಳಕು ಕೆಲಸ ನೂಡುವಂತೆ ಗುಟ್ಟಿನಲ್ಲಿಯಾದರೂ ಸೇದುತ್ತಿದ್ದರೆ ಮಕ್ಕಳ ಭವಿಷ್ಯ ಜೀವಿತಕ್ಕೆ ಉಪಕಾರ ಮಾಡಿದಂತಾದೀತು. ಏಕೆಂದರೆ "ಸಹವಾಸವೊ ಸರ್ವ ಗುಣಾಭವಂತಿ!"

ಆದರ ಬದಲಾಗಿ ಮಕ್ಕಳನ್ನೇ ಆಂಗಡಿಗೆ ಕಳಿಸಿ ಬೀಡಿ ಸಿಗರೇಟುಗಳನ್ನು ತರಿಸುವ ತಂದೆಯಂದಿರು ಇದ್ದಾರೆ, ಅಣ್ಣಂದಿರಿದ್ದಾರೆ.ಅಪ್ಪಿತಪ್ಪಿ ತಮ್ಮ ಮಗ ಹೊಗೆಸೇದುವುದನ್ನು ಕಂಡರೆ ಹೊಡೆದು ಬಡಿದು ಕಿವಿ ಹಿಂಡಿ ತಲೆಗೆ ಕುಟ್ಟಿ ಬುದ್ಧಿ ಹೇಳುತ್ತಾರೆ. ಅದರಿಂದೇನು ಪ್ರಯೋಜನ? ಈ ಬಗೆಯ ಭೀತಿ ಗೊಳಗಾದ ಹುಡುಗರು ಬೀದಿಯಲ್ಲಿ ಬಿದ್ದ ಎಂಜಲು ಬೀಡಿಯನ್ನು ಬಾಯಿಗಿಟ್ಟುಕೊಂಡು ಸೇದುವ ಘೋರವನ್ನು ಈ ಲೇಖಕ ನೋಡಿದ್ದಾನೆ.

ಈಗ ಹೊಗೆ ಸೇದದ ಮನುಷ್ಯನೇ ಇಲ್ಲದಂತಾಗಿದೆ. ಹೊಗೆ ಬತ್ತಿಗಳ ಅಂಗಡಿಗಳಿಲ್ಲದ ಬೀದಿಯೂ ಇಲ್ಲ. ಚಿಕ್ಕವರಿಗೇನೋ ದೊಡ್ಡವರ ಭಯವಾದರೂ ಇದೆ. ದೊಡ್ಡವರಿಗೆ ಯಾವ ಭಯವಿದೆ?

ದೊಡ್ಡವರಿಗೆ ಸರಕಾರವೇ ತಂದೆ. ಈಗ ನಮ್ಮ ಸ್ವಂತ ತಂದೆಯೇ ಬಂದು ೩೫ ವರ್ಷ ಸಮೀಪಿಸುತ್ತ ಬಂದರೂ, ಪ್ರತಿ ವರ್ಷವೂ ಹೊಗೆಸೊಪ್ಪಿನ ತೆರಿಗೆ ಏರಿಸಿಕೊಂಡೇ ಹೋದರೂ ಅದರ ವ್ಯಾಪಾರವೇನೂ ಕಡಮೆಯಾದ ಲಕ್ಷಣ ಕಾಣದೆ, ಬಸ್ಸುಗಳಲ್ಲಿ ಸಿನಿಮಾ ಥಿಯೇಟರುಗಳಲ್ಲಿ ಹೊಗೆ ಸೇದಕೂಡದೆಂಬ ಶಾಸನವನ್ನೂ ಜ್ಯಾರಿಗೆ ತಂದಿದ್ದಾರೆ.

ಶಾಸನದ ಭಯದಿಂದ ಅಷ್ಟು ಹೊತ್ತು ಹೊಗೆ ಸೇದುವುದು ಕಟ್ಟಾಗುವುದನ್ನೂ ಕಾಣುತ್ತೇನೆ. ಹಾಗೆಯೇ ದೊಡ್ಡ ಮನುಷ್ಯರ ಇದಿರಿನಲ್ಲಿಯೂ ಸೇದುವುದು ಕಟ್ಟು ಪಾಡಿಗೆ ನಿಲುಕುತ್ತದೆ.

ಹೊಗೆಸೇದುವ ಅಭ್ಯಾಸವುಳ್ಳವರಿಗೆ, ಅದನ್ನು ಬಿಡಬೇಕೆಂಬ ಪಟ್ಟವೂ ಇರುತ್ತದೆ. ಏಕೆಂದರೆ ಆದೇನೋ ಸಹವಾಸ ಸಂದರ್ಭದೋಷಗಳಿಂದ ಅಂಟಿಕೊಂಡ ದುರಭ್ಯಾಸವೆಂದೇ ಅವರಿಗೆ ಗೊತ್ತು. ಆದರೆ ಒಮ್ಮೆ ಅಂಟಿಕೊಂಡನಂತರ ಬಿಡಲು ಸಾಧ್ಯವಾಗುವುದಿಲ್ಲವೆಂತಲೂ ಅವರಿಗೆ ಗೊತ್ತು. ಅಂತಹದೆಲ್ಲ ಹೊಗೆಸೊಪ್ಪಿನ ಮೇಲೆ, ಅಥವಾ ಹೊಗೆ ಸೇದುವುದರ ಮೇಲೆ ಎಂತಹ ಶಾಸನಗಳು ಬಂದರೂ ಆದರಿಸಿಯಾರು.

ಅದನ್ನು ಪಡೆಯುವುದೇ ದುಃಸ್ವಾಧ್ಯವೆಂದಾದಾಗ ಅಭ್ಯಾಸ ತನ್ನಂತೆ ಹೋದೀತಲ್ಲವೇ?

ಅಮೃತಾಂಜನ

ತಲೆ ಸಿಡಿತ ಮೈ ನೋವು ಉಳುಕು ಕಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್, ಮದ್ರಾಸು-4

ಶ್ರೀ ಕೆ. ಕೆ. ಶೆಟ್ಟಿ ಎಂ. ಪಿ., ಅವರ ಪುಸ್ತಕಗಳು

ಕುರಲವ	(ನಾಟಕ)	0-50
ಸಂಶಯ ಪಿಶಾಚಿ	,,	0-75
ವೈಭವಾಕಾಂಕ್ಷೆ ಯಾಮ	,,	1-00
ದೇಶಭಕ್ತ	,,	1-25
ಪ್ರೇಮ ವಿಜಯ	,,	1-00
ಚಿತ್ರಾಂಗದೆ	,,	0-60
ಹೆಂಡ್ತಿ ಗಂಡನಾದರೆ (ಪ್ರಹಸನ)		0-25
ಪುರುಷಪಥ	,,	0-25
ಮುಂದಿನ ದೇವರು (ಪ್ರಬಂಧ)		0-25
ಸನ್ಯಾಸಿಯ ಸೋಗಿನಲ್ಲಿ (ಕಥೆ)		0 75

ವಿ. ಪಿ. ನೂಡುವುದಿಲ್ಲ; ಪುಸ್ತಕದ ಬೆಲೆಯೊಂದಿಗೆ 0-50 ಪೈಸೆ ಹೆಚ್ಚಿಗೆ ಸೇರಿಸಿ ಮನಿಯಾರ್ಡರು ನೂಡಿದರೆ ಪುಸ್ತಕವನ್ನು ಬುಕ್ ಪೋಸ್ಟ್ ಮಾಡಿ ಕಳಿಸಬಹುದು.

ಸಪ್ತಭಾರತ ಪುಸ್ತಕ ಭಂಡಾರ
(ಸನಯುಗ ಪ್ರೆಸ್)
ಉಡುಪಿ. ದ. ಕ.

ಯಕ್ಷಗಾನ ಸಭಾಲಕ್ಷಣದಲ್ಲಿ ಆಟ ಆಡಿಸುವವರ ಮನೆಯಲ್ಲೋ, ದೇವ ಸ್ಥಾನಗಳಲ್ಲೋ ಹಾಡುವ ದೇವಿದಾಸ ಕವಿ ವಿರಚಿತ ಈ ತುಂಡು ಪದ್ಯ ಬರುತ್ತದೆ:—

ಸುಂದರಾಂಗ ಸುಕಲಾನ್ವಿತ ಪುಣ್ಯ-
ಚರಣ |
ಕಟಿವ್ಯಾಳ ಸುಶೋಭಿತೆ |
ಬುಧನಾಭ್ಯ ಸುಮಿಕೋಟಿ ಸದೃಶ
ಕಿರಣ ||
ಚಂದೆನಾಂಗ ಚರ್ಚಿತ ಸು-
ಮಷೋಹರ |
ಮಂದಹಾಸ ಭುಹಿಮಾಂಬುಧಿ
ಶುಭಕರ ||
ಚಾರು ಜಾಗ ಕನ್ಯಾಪುರ ವರ-
ನಿಲಯ |
ಮೈಕಂಡುಜ ಋಷಿವರ |
ಸಾರಮಂತ್ರ ಸ್ಥಾಪಿತ ಮಂಗಲ
ಕಲಯ ||
ಸಾರ ಕಪಿತ್ಥ ಫಲೋರಸ ಭುಂಜಿತ !
ಧೀರ ಲಕ್ಷ್ಮೀನಾರಾಯಣ ಸಖಾ-
ಸುತ ||

ಅಂತೆಯೇ ಮೂಕಾಂಬೆಯ ಹರವಾಗಿ ಈ ಹಾಡನ್ನು ಹೇಳುವುದಿದೆ:—

ಶ್ರೀ ಮೂಕಾಂಬಿಕೆ | ಸಾಮಜ
ಗಮನೆ ಸು |
ತ್ರಾಮಾರ್ಚಿತ ಚರಣೆ || ಪ ||
ಭಾಮೆ ಧಾಮೆ ಹೇಮೆ |
ಕೋಮಲಾಂಗಿ ನೀ | ರಾಮನಾಮ
ಸ್ರುಸೇಮೆ | ಭೀಮವಿಕ್ರಮೆ ||

ಇಂತಹ ಅಮೂಲ್ಯ ಸಾಹಿತ್ಯ ಯಕ್ಷಗಾನದಲ್ಲಿ ಹೇರಳವಾಗಿ ದೊರಕುತ್ತವೆ. ಬಯಲಾಟಗಳನ್ನು ನೋಡುವವರು ತಾಳ ಮದ್ದಳೆ ಕೂಟಗಳನ್ನು ಸಂದರ್ಶಿಸುವವರು ಬರೀ ಪಾತ್ರಧಾರಿಗಳ ಪ್ರದರ್ಶನವಲ್ಲದೆ, ಹಿಮ್ಮೇಳದ ಹಾಡನ್ನು ಆಲಿಸಬೇಕು. ಆಗ ನಮ್ಮ ಯಕ್ಷಗಾನ ಪ್ರಸಂಗ ಸಾಹಿತ್ಯದ ಶ್ರೀಮಂತಿಕೆಯ ನಿಜವಾದ ತಿಳುವಳಿಕೆ ಯಾದೀತು. ಭಾಗವತರೂ ಸ್ಪಷ್ಟವಾಗಿ ಹಾಡುಗಳನ್ನು ಹೇಳಬೇಕೆಂದು ಪ್ರತ್ಯೇಕ ವಾಗಿ ಹೇಳಬೇಕಿಲ್ಲವಷ್ಟೆ! ಕನ್ನಡ ಸಾಹಿತ್ಯಾಭಿಮಾನಿಗಳು, ಅಭ್ಯಾಸಿಗಳು ಕನ್ನಡ ಸಾಹಿತ್ಯವನ್ನು ಅಧ್ಯಯನ ಮಾಡುವಾಗ ಅನುಕೂಲಕ್ಕಾಗಿ ಸಾಹಿತ್ಯ ಚರಿತ್ರೆಯನ್ನು ಶಾಸನ ಲೇಖನಗಳ, ಚಂಪೂ ಕಾವ್ಯಗಳ, ಸಾಂಗತ್ಯ, ತ್ರಿಪದಿ, ದ್ವಿಪದಿ, ಜೌಪದಿ, ಷಟ್ಪದಿ, ಗದ್ಯ—ಮುಂತಾದ ಕಾಲಗಳೆಂದು ವಿಭಾಗ ಮಾಡಿಕೊಳ್ಳುವುದಿದೆ. ಅಲ್ಲಿ ಪ್ರಸಂಗ ಸಾಹಿತ್ಯದ ಭಾಗವೊಂದನ್ನೂ ಸೇರಿಸಿ ಕೊಳ್ಳಬಹುದೇನೋ? ಅಷ್ಟು ವಿಶಾಲವಾಗಿ ಆಳವಾಗಿ ಪ್ರಸಂಗ ಸಾಹಿತ್ಯ ಬೆಳೆದಿದೆ; ಚಿತ್ತಾಕರ್ಷಕವಾಗಿ ನಿಂದಿದೆ ... ಕನ್ನಡ ನಾಡಿನ ಒಂದು ಭಾಗದ ಜನತೆಯ ಹೃದಯ ವಿಕಸನ ಕಾರ್ಯವನ್ನು ಮೌನವಾಗಿ ನಡೆಸಿದೆ, ಜನತೆಯ ಮನಸ್ಸನ್ನು ತೋಯಿಸಿದೆ; ಸರಸಗೊಳಿಸಿದೆ. ಈ ಸಾಹಿತ್ಯದಿಂದ ಜನ ಸಮಾಧಾನಗೊಂಡಿದ್ದಾರೆ; ಪ್ರೇರಣೆ ಪಡೆದಿದ್ದಾರೆ. ಆದುದರಿಂದಲೇ ಇವು ಉತ್ತಮ ಕಾವ್ಯಗಳ ಸಾಲಿಗೇ ಸೇರುತ್ತವೆ.

ಯಕ್ಷ-ಗಾನ ಪದ್ಧತಿಯು ಪ್ರಾಚೀನ ವಾದುದೆಂದೂ, ಷಡ್ಜ ಗ್ರಾಮ, ಗಾಂಧಾರ

ಶ್ರೀ ಎ. ಸದಾನಂದ ಹೆಬ್ಬಾರ್

ಯಕ್ಷಗಾನ - ಪ್ರಸಂಗ ಸಾಹಿತ್ಯ

ಇಂದು ಯಕ್ಷಗಾನದ ಕಡೆಗೆ ವಿದ್ವಾಂಸರ ಗಮನ ಹೆಚ್ಚಾಗಿ ಹರಿದಿದೆ; ಅದರಲ್ಲಿನ ಪ್ರಸಂಗ ಸಾಹಿತ್ಯದ ಕುರಿತು ಆ ವಿಷಯದಲ್ಲಿ ತಜ್ಞರಾದ ಶ್ರೀ ಹೆಬ್ಬಾರರು ಈ ಲೇಖನ ಬರೆದಿದ್ದಾರೆ; ಇಂತಹ ಹಲವಾರು ಲೇಖನಗಳು ವಿದ್ವಾಂಸರ ಲೇಖನ ಯಿಂದ ಬರಬೇಕು; ಯಕ್ಷಗಾನ ಹಾಗೂ ಪ್ರಸಂಗ ಸಾಹಿತ್ಯ ಅಖಿಲ ಕರ್ನಾಟಕದ ಮಾತ್ರವಲ್ಲ ಲೋಕದ ಕಲಾವಿದರೆಲ್ಲರ ಸೊತ್ತಾಗಬೇಕು.

ಗ್ರಾಮ, ಮಧ್ಯಮ ಗ್ರಾಮಗಳಂತೆ ಬೆಳೆದು ಬಂತೆಂದೂ, ಇದಕ್ಕೊಂದು ಶಾಸ್ತ್ರ ಬೇರೆ ಇದ್ದಿರಬೇಕೆಂದೂ ಈಗ ಅದು ಉಪಲಬ್ಧವಿಲ್ಲವೆಂದೂ ಹಿರಿಯರು ಅಭಿಪ್ರಾಯ ಪಡುತ್ತಾರೆ. ಈ ಗಾನ ಪದ್ಧತಿಗೆ ಪ್ರಸಂಗ ಸಾಹಿತ್ಯದ ಜೊತೆ ಸಿಗಲು ಕಾರಣವಿದ್ದಿರಲೇ ಬೇಕಷ್ಟೆ! ಗಾನ ವ್ಯಂಜನ ವ್ಯಾಪಾರ ದಿಂದ ಮಾತ್ರ ಆನಂದವನ್ನು ನೀಡಬಲ್ಲುದು. ಶಾಸ್ತ್ರ ಪರಿಚಯವಿಲ್ಲದವರು ಇದರ ಪೂರ್ಣ ರಸಾಸ್ವಾದ ಮಾಡಲು ಸಾಧ್ಯವಿಲ್ಲ. ಹಾಗಾಗಿ ಕನ್ನಡದ ಜನತೆ ಸ್ಪಷ್ಟವಾದ ಸುಲಭ ಗ್ರಾಹ್ಯವಾದ ವಾಚ್ಯಾರ್ಥ ಪ್ರಧಾನವಾದ ಹಾಡುಗಬ್ಬಗಳನ್ನು ಸೇರಿಸಿದ್ದರಿಂದ ಯಕ್ಷಗಾನ ಪ್ರಸಂಗ ಸಾಹಿತ್ಯ ಸಿರ್ಮೂಣವಾಗಿರಬೇಕು. ಕನ್ನಡದ ಪ್ರಸಿದ್ಧ ಕಾವ್ಯಗಳು ಪಂಡಿತರಿಗಾಗಿ, ರಾಜಸ್ಥಾನಗಳಿಗಾಗಿ ಮೂಡಿದ ಕೆಲಸವನ್ನು ಯಕ್ಷಗಾನ ಕವಿಗಳು ಸಾಮಾನ್ಯ ಜನರಿಗಾಗಿ ಪ್ರಸಂಗ ಸಾಹಿತ್ಯದ ಮೂಲಕ ನಡೆಸಿದರು. ಹಾಗೇ ರಾಜಾಶ್ರಯದಲ್ಲಿ ವಿದ್ವಾಂಸರಿಗೆ ವಿಂಸಲಾದ ಸಂಸ್ಕೃತ ನಾಟಕಗಳು ಜನರಂಜನೆಗೆ ಒದಗಿ ಬಾರದಾಗ, ಈಗಿನ ಬಯಲಾಟಗಳು ಬೆಳಕಿಗೆ ಬಂದಿರಬೇಕು. ಯಕ್ಷಗಾನವು ಸಾಹಿತ್ಯ, ನಾಟಕ, ಚಿತ್ರ, ಸಂಗೀತ, ನೃತ್ಯಗಳಿಂದ ಕೂಡಿ ಜನಮನವನ್ನು ಸೂರೆ ಮಾಡಿತು. ಮೂರ್ಗವೆಂದು ಆ ಕಾಲದಿಂದ ಕರೆಯುತ್ತಿದ್ದ ಕಲೆಗಳಿಗಿಂತ ಭಿನ್ನವಾಗಿ ಇದು ತನ್ನ ವಿಶಿಷ್ಟತೆಯನ್ನು ಉಳಿಸಿಕೊಂಡು ಬಂದಿದೆ. ಶಾಸ್ತ್ರದ ಕ್ಲಿಷ್ಟತೆಗೊಳಪಡದೆ ತನ್ನ 'ದೇಸಿಯ ತೆಯನ್ನು ಉಳಿಸಿಕೊಂಡು, ಜಾನಪದ ಕಲೆಯಾಯಿತು. ಬಯಲಾಟಗಳು ಉದಯವಾದಎಷ್ಟೋ ಕಾಲಾನಂತರ ಇದಕ್ಕೊಂದು ಶಾಸ್ತ್ರ ಬೇಕೆಂದು ಸಭಾ ಲಕ್ಷಣದ ರಚನೆಯಾಗಿರಬೇಕು. ಈಗ ನಮಗೆ ಲಭ್ಯವಿರುವ ಸಭಾಲಕ್ಷಣವು ಅಸೂರ್ಪಸಾಗಿದೆ. ಅದರ ಅನೇಕ ಭಾಗಗಳು ನಾಟ್ಯ ಶಾಸ್ತ್ರದ ಶ್ಲೋಕಗಳಾಗಿವೆ. ರಂಗಸ್ಥಳ ವರ್ಣನೆಯಂತಹ ಎಷ್ಟೋ ವಿಷಯಗಳಲ್ಲಿ ಲಕ್ಷಣ ಗ್ರಂಥಕ್ಕೂ ಪ್ರಯೋಗಕ್ಕೂ ತಾಳ ಮೇಳವಿಲ್ಲವಾಗಿದೆ. ಇಂದು ಯಕ್ಷಗಾನ ಬಯಲಾಟಗಳಲ್ಲಾಗಲೀ, ತಾಳಮದ್ದಳೆ ಕೂಟಗಳಲ್ಲಾಗಲೀ ಏನಾದರೂ ಯಕ್ಷಗಾನದ ವಿಶಿಷ್ಟ ಲಕ್ಷಣಗಳು ಉಳಿದು ಬಂದಿದ್ದರೆ, ಅದು ಕಲಾವಿದರ ಸಂಪ್ರದಾಯ ಶರಣತೆ ಹಾಗೂ ನಿಷ್ಠೆಯ ಸ್ವಭಾವದ ಕೃಪೆಯಿಂದ. ಪ್ರಾಯಶಃ ಈಗಿಗ ಈ ಗುಣಗಳೇ ಕಲೆಗೆ ವರವೂ ಶಾಪವೂ ಆಗಿ ಪರಿಣಮಿಸುತ್ತಿವೆ.

ಯಕ್ಷಗಾನ ಪದ್ಧತಿ, ಕರ್ನಾಟಕೇ, ಉತ್ತರಾದಿ ಮಾರ್ಗಗಳಿಗಿಂತ ಶೈಲಿಯಲ್ಲಿ ಭಿನ್ನವಾದುದೆಂದಾಯಿತು. ಆದರೆ ಆಷ್ಟೇ ಶಕ್ತಿಯುತವೂ ಭಾವಾವೇಶಕ್ಕೆ ಇಂಬುಗೊಡುವಂತಹುದೂ, ರಸ ಪೋಷಣೆಗೆ ಸಹಕಾರಿಯೂ ಆಗಿದೆ. ಪರಂಪರೆಯಿಂದ ಹಾಡಿಸಿ, ಕೇಳಿ ಅಭ್ಯಾಸ ಮಾಡಿಸಿಕೊಂಡು ಬಂದ ಈ ಗಾನ ಪದ್ಧತಿ ಈಗ ಪೂರ್ಣವಾಗಿ ಉಳಿದಿದೆ ಎನ್ನಲು ಬರುವಂತಿಲ್ಲ. ಈ ಗಾನ ಶೈಲಿಗಾಗಿಯೇ ಲಕ್ಷಣ ಗ್ರಂಥವೂ ಇಲ್ಲ. ಒಂದು ಕಾಲಕ್ಕೆ ವಿಶೇಷವಾಗಿಯೇ ಮೆರೆದಿರಬೇಕಾದ ಈ ಶೈಲಿ ಯಕ್ಷಗಾನದ ಹೊರಾಂಗಣ ಬಯಲಾಟಗಳಿಗೆ ಬಳಸ ತೊಡಗಿದ ಬಳಿಕ ತನ್ನ ಸ್ವರೂಪವನ್ನು, ರೀತಿಯನ್ನು ಮೊರ್ಪಡಿಸಿಕೊಂಡಿದೆ. ಬಯಲಿನ ವಿಶಾಲತೆಗೆ ಅನುಗುಣವಾಗಿ ಹಾಡುವಾಗ ಅನುತಾರಕ, ತಾರಕ, ಕೆಲವು ಪೇಳಿ ಮಧ್ಯಮ ಸ್ಥಾಯಿಯವರೆಗೆ ಈ ಮಟ್ಟು ಬರುತ್ತದಲ್ಲದೆ, ಮಂದ್ರ ಸ್ಥಾಯಿಯಲ್ಲಿ ರಂಜಿಸುವುದೂ ಇಲ್ಲ, ಹಾಗೆ ಇಳಿಸುವ ಕ್ರಮವೂ ಇಲ್ಲ. ಯಕ್ಷಗಾನ 'ನಾಟಕಾಂತರದಲ್ಲಿ' ವೀರರಸವೇ ಪ್ರಧಾನವಾಗಿರುವುದರಿಂದಂತೂ ರಾಗಗಳಲ್ಲಿನ ಕೆಲವೇ ಸ್ವರಗಳ ಮೇಲೆ ವಿಪರೀತ ವಿಜೃಂಭಿಸುವ ಅವಶ್ಯಕತೆ ಇರುತ್ತದೆ. ಆದರಿಂದಲೂ ಯಕ್ಷಗಾನ ಶೈಲಿ ಭಿನ್ನವಾಗಿರಬಹುದು. ಆದರೆ ಕಾಲಾನುಕ್ರಮದಲ್ಲಿ ದಾಸರ ಕೀರ್ತನೆಮಟ್ಟು, ರಾಗಜ್ಞಾನವಿಲ್ಲದ ಭಾಗವತ ಗುರುಗಳ ತಿಟ್ಟು, ಸಿನೇಮಾ ನಾಟಕ ಧಾಟಿಗಳು—ಎಂದು ಇಂದೀಗ ನಿಜವಾದ ಯಕ್ಷಗಾನ ಧಾಟಿ ಯಾವುದೆಂದು ತಿಳಿಯದಾಗಿದೆ. ಭಾಗವತರ ಸ್ವಚ್ಛಂದತೆಯಿಂದಲೂ ಮಾರ್ಗಸಂಗೀತವೇ ಇಂದು ಯಕ್ಷಗಾನವಾಗಿದೆ.

ಸುಮಾರು 1600-1900ನೆಯರೆಗೆ ತಯಾರಾದ ಯಕ್ಷಗಾನ ಪ್ರಸಂಗ ಸಾಹಿತ್ಯವನ್ನು ಲಕ್ಷಿಸುವಲ್ಲಿ, ಇವಿನ್ನೂ ಶುದ್ಧವಾಗಿರಬೇಕೆಂದು ಅನ್ನಿಸುತ್ತದೆ. ಇತ್ತೀಚೆಗೆ ಯಕ್ಷಗಾನದ ವೇಷ-ಭೂಷಣಗಳಿಗೆ ಒಗ್ಗದ, ಕಲ್ಪನಾ ವಿಲಾಸಕ್ಕೆ ಇಂಬುಗೊಡದ ಅನೇಕ ಪ್ರಸಂಗಗಳು ಬೆಳಕು ಕಂಡಿವೆ. ಕವಿ ನಿಯತಿಕೃತ ನಿಯಮ ರಹಿತನೆಂದೂ, ಹ್ಲಾದೈಕಮಯನೆಂದೂ. ಅನನ್ಯಪರತಂತ್ರನೆಂದೂ ಒಪ್ಪೋಣ. ಆದರೆ ಬಯಲಾಟಗಳ ಮೇಲೆ ಈ ಆಕ್ರಮಣವನ್ನು, ದುಡ್ಡುಕೊಟ್ಟು ನೋಡಿ ಸಂತೋಷಪಡುವ ಜನರನ್ನು ಏನೆನ್ನಬೇಕು? ನಮ್ಮ ಅಭಿರುಚಿ, ಸಂಸ್ಕಾರಗಳು ಬೆಳೆದಲ್ಲದೆ ಬಹುದಿನ ನಾವು ಕನ್ನಡದ ಅಭಿರೂಪದ ಈ ಸಾಹಿತ್ಯವನ್ನು ಉಳಿಸಿಕೊಳ್ಳಲಾರೆವೊ ಏನೋ? ನಾಟ್ಯಂ ಭಿನ್ನರುಚೇರ್ಜನಸ್ಯ ಬಹುಧಾಪ್ಯೇಕಂ ಸಮೂಹಾರಾಧನಂ'— ಒಪ್ಪೋಣ. ಆದರೆ ನಾಟಕದ ರುಚಿ, ಅದಕ್ಕೆ; ಸಿನಿಮಾದ ರುಚಿ ಇದಕ್ಕೆ; ಬಯಲಾಟದ ಅದ್ಭುತ ಸೌಂದರ್ಯ ಅದರದ್ದೇ. ಸಿಹಿ, ಸಾನಕದಲ್ಲಿರಲಿ ಪಾಯಸದಲ್ಲಿರಲಿ, ತಿಂಡಿಯಲ್ಲಿರಲಿ ಎಲ್ಲಾ ಒಂದೇ. 'ಹಾಗಿದ್ದರೆ ಅನೇಕ ರೀತಿಗಳಲ್ಲಿ ಈ ದನ್ನೇಕೆ ಸೇವಿಸಬೇಕು? ಇನೇ ಬೆಲ್ಲ ತಿಂದರೆ ಸಾಲದೇ?

ಡಾ | ಕಾರಂತರ ಮಟ್ಟಿಗಂತೆ ಒಟ್ಟು 250-500 ಯಕ್ಷಗಾನ ಪ್ರಸಂಗಗಳಿರಬಹುದು. ಶ್ರೀಕೃಷ್ಣ ಭಕ್ತಪ್ರಭಾನೆಯವರ ಹಾಗೂ ಇತರರ ಕೃಪೆಯಿಂದ ಸುಮಾರು 200-250 ಕೃತಿಗಳು ಈಗ ಹೆಚ್ಚು-ಕಡಿಮೆ ಪ್ರಕಟಗೊಂಡು ಉಳಿದಿವೆ. ಆಚ್ಚಾಗದ ಎಷ್ಟೋ ಪ್ರಸಂಗಗಳಿವೆ. ಅವುಗಳಲ್ಲಿ ಕೆಲವನ್ನು ಮೇಳಗಳು ಆಡುತ್ತಿವೆ. ಸಾಮಾನ್ಯ ಒಬ್ಬ ಭಾಗವತನಿಗೆ ಹಿಂದೆ 80-85 ಪ್ರಸಂಗಗಳು ಕಂಠ ಪಾಠವಿರುತ್ತಿದ್ದವು. 'ವಾಕ್ಯಪಾಠ' ಎಂಬ ಭಾಗವತ ಶಬ್ದದ 'ವ' ಕಾರದ ಅರ್ಥ ಇದರಿಂದ ಸಮಂಜಸ ವೆನಿಸುತ್ತಿತ್ತು. ಆದರೆ ಈಗಿನ ಬಾಯಿಪಾಠದ ಪರಿಪಾಠವೇ ತಪ್ಪಿಹೋಗಿದೆ. ಭಾಗವತನು ರಂಗಸ್ಥಳದಲ್ಲಿ ನಟಿಸುವ ಕಲಾವಿದನೊಂದಿಗೆ ಮೇಳವಾಗಲು, ಅವರನ್ನು ತಿದ್ದಲು, ಯೋಗ್ಯನಿರ್ದರ್ಶನ ಮಾಡಲು ಕಂಠಪಾಠವು ತುಂಬಾ ಸಹಾಯಕಾರಿ. ಭಾಗವತನೇ ಮುಖ ಅಡಿಮಾಡಿಕೊಂಡು ಪುಸ್ತಕ ನೋಡುತ್ತಿದ್ದರೆ ಆತನ ನಿರ್ದೇಶನಕ್ಕೇನು ಬೆಲೆ ಬಂದೀತು? ಪಾತ್ರಧಾರಿಗಳು ಆತನಿಗಿಂತ ಒಂದು ತೂಕ ತಾನೇ ಹೆಚ್ಚೆಂದು, ಭಾಗವತನನ್ನೇ ಅಂಕೆಯಲ್ಲಿಟ್ಟುಕೊಳ್ಳಲು ಹೋಗುತ್ತಾರೆ. ರಂಗಸ್ಥಳ ಅನಾಯಕವಾಗುತ್ತದೆ.

ಕಾವ್ಯದ ಮುಖ್ಯ ಅಂಗಗಳು ಪಾತ್ರ, ವಸ್ತು ಹಾಗೂ ಶೈಲಿಯೊದರೆ ಮುಖ್ಯ ದೇಹವೇ ರಸ. "ಸಾಹಿತ್ಯರಸ ಮೂಧುರ್ಯಂ ಶಂಕರೋ ವೇತ್ತಿ ವಾ ನವಾ"—ಪ್ರಸಂಗ ಸಾಹಿತ್ಯಗಳನ್ನು ಪಾತ್ರ, ವಸ್ತು ಹಾಗೂ ರಸದೃಷ್ಟಿಯಿಂದ ಯಾವುದೇ ಶ್ರೇಷ್ಠ ಕಾವ್ಯದೊಡನೆ ತುಲನಾತ್ಮಕ ಪರೀಕ್ಷೆಗೆ ಒಳಪಡಿಸಬಹುದು. ರಸದೃಷ್ಟಿಯಿಂದ ಇವುಗಳಲ್ಲಿ ಹೆಚ್ಚಿನವು ಅತಿ ಉತ್ತಮ ಕೃತಿಗಳಾಗಬಲ್ಲುವು. ಶೈಲಿಯ ದೃಷ್ಟಿಯಿಂದ ಹೇಳುವಾಗ ಒಂದು ಮಾತು. ಯಕ್ಷಗಾನದ ಅಪಾರ ಕಾವ್ಯ ಸಂಸಾರದಲ್ಲಿ ಪ್ರಜಾಪತಿಗಳಾಗಿ ಮೆರೆಯುವ ಅನೇಕ ಕವಿಗಳು ಬರೀ ಜಾನಪದ ಕವಿಗಳು. ಮುದ್ದಣನಂತಹ ವಿದ್ವಾಂಸರನ್ನು ಬಿಟ್ಟರೆ ಪಾಂಡಿತ್ಯದ ದೃಷ್ಟಿಯಿಂದ ಹೆಚ್ಚಿನವರಾರೂ ಇಲ್ಲ. ಆದರೆ ಅನೇಕ ಸುಂದರ ದೃಷ್ಟಾಂತಗಳನ್ನೂ, ಉಪಮಾದಿ ಅಲಂಕಾರಗಳನ್ನೂ ದೇಸಿ ಶಬ್ದಗಳನ್ನೂ ನಾಣ್ಣುಡಿಗಳನ್ನೂ ಇವರು ಸಾಂದ ಭಿಕರಾಗಿ ಸೊಗಸಾಗಿ ಬಳಸಿಕೊಂಡಿದ್ದಾರೆ. ಯಕ್ಷಗಾನದ ಸಾಮಾನ್ಯ ಪರಿಚಯ ಮಾತ್ರ ಮಾಡಿಕೊಡುವ ಈ ಲೇಖನದ ವ್ಯಾಪ್ತಿಗೆ ಅವುಗಳನ್ನೆಲ್ಲ ಉದಾಹರಿಸುವ, ವಿಮರ್ಷಿಸುವ ಕೆಲಸ ತೀರಾ ಅಸಾಧ್ಯ. ಸ್ಥೂಲವಾಗಿ ಆ ಕಾರ್ಯವನ್ನು ಆಷ್ಟೋ ಇಷ್ಟೋ ಮಾಡಬಹುದು.

ಪ್ರಸಂಗ ಸಾಹಿತ್ಯದ ವಸ್ತು ಮುಖ್ಯವಾಗಿ ಪುರಾಣಗಳು. ಸಂಸ್ಕೃತ ಭಾರತ, ರಾಮಾಯಣದ ಕವಿಗಳನ್ನು ಸ್ತುತಿಸಿ, ಅಲ್ಲಿಂದ ವಸ್ತುವನ್ನು ಪಡೆದವರೂ ಇಲ್ಲವೆಂದಿಲ್ಲ. ಆದರೆ ಹೆಚ್ಚಿನವರು ತೊರವೆ ರಾಮಾಯ

(ಇಪ್ಪತ್ತಾರನೇ ಪುಟ ನೋಡಿರಿ)

ಆಧುನಿಕ ಆಹಾರ ಸೇವನೆ ಮತ್ತು ನಿಯಮಗಳಲ್ಲಿ ಕೆಲವು ಗುಣದೋಷಗಳು

ಪ್ರೊ। ಎಂ. ಎಸ್. ಎಸ್. ರಾವ್,
ಬಾಗಲಕೋಟೆ

ವಿವಿಧ ವಯೋಮಾನ ಮತ್ತು ಬೆಳವಣಿಗೆಯ ಹಂತಗಳಿಗೆ ತಕ್ಕಂತೆ ಬದಲಾಗುವ ದೈಹಿಕ ಮೂಸ್ಸಾರ್ಟ್ಗಳು ಮತ್ತು ಅವುಗಳಿಗೆ ಬೇಕಾಗುವ ಶಕ್ತಿಗಾಗಿ ಆಹಾರ ಪದ್ಧತಿಯಲ್ಲಿ ಹೆಚ್ಚುವ ವೈಶಿಷ್ಟ್ಯಗಳನ್ನು ರೂಢಿಸಿಕೊಳ್ಳಬೇಕಿಳಿಸುವುದುಂಟು. ಮೇಲಾಗಿ ಆ ರೋಗ್ಯವರ್ಧಿಸಿಕೊಳ್ಳಲಾಗ ಒಂದು, ಕಾಹಿಲೆ ಯಾದಾಗ ಒಂದು, ಗರ್ಭಿಣಿಯರಿಗೆ ಒಂದು, ಹಸುಳೆಗಳಿಗೆ ಒಂಥ, ಎಳೆಯರಿಗೆ ಒಂದು, ವಯಸ್ಸಿನವರಿಗೊಂದು, ಈ ರೀತಿಯಾಗಿಯೂ ಅವಿವಾರು ರೀತಿಯ ಆಹಾರದ ಅವಶ್ಯಕತೆಗಳುಂಟು.

ಸಾಮಾನ್ಯ ದೈಹಿಕ, ಮಾನಸಿಕ ವೃದ್ಧಿ, ಬೆಳವಣಿಗೆ, ವಿಕಾಸ, ದೈನಂದಿನ ಕಾರ್ಯಾಚರಣೆಗಳು, ಸಂತಾನೋತ್ಪತ್ತಿ ಇತ್ಯಾದಿಗಳಿಗೆ ಪರಿಪೂರ್ಣವೆನಿಸಿದೆ ಪಾಗೂ ಯೋಗ್ಯ ಮಟ್ಟದ ಆಹಾರ ಅವಶ್ಯವೆಂದು ಬೇರೆ ಹೇಳಬೇಕಾಗಿಲ್ಲ. ಯೋಗ್ಯ ಪಾಗೂ ಸಮತೋಲನವುಳ್ಳ ಆಹಾರವು ದೇಹಕ್ಕೆ ಬಾಧೆ ಕೊಡುವ ಸೋಂಕು ಅಥವಾ ಸಂಸರ್ಗ ದೋಷಗಳನ್ನು ತಡೆಹಿಡಿಯುವುದಕ್ಕಾ ನಿತ್ಯ ಜೀವನದ ದೈಹಿಕ, ಮಾನಸಿಕ ಒತ್ತಡಗಳನ್ನು ನಿಗ್ರಹಿಸುವುದಕ್ಕೂ ಅವಶ್ಯವೆ. ಅಂತೆಯೇ ದೇಹಕ್ಕೆ ಉಂಟಾಗುವ ಘಾಯಗಳನ್ನು ಮಾಯಿಸುವುದು ಮತ್ತಿತರ ಬಗೆಯ ದುರಸ್ತಿ ಕಾರ್ಯಗಳು, ರೋಗ ವಿಮುಕ್ತವಾಗಿಡುವುದು, ಅಟ್ಟ ಪಾಶಗಳಲ್ಲಿ ಕಾರ್ಮಿಕ ಚಟುವಟಿಕೆಗಳಲ್ಲಿ ಅತ್ಯಧಿಕ ಹುಮ್ಮಸ್ಸು, ಶಕ್ತಿ, ಸಾಮರ್ಥ್ಯ ಗಳಿಂದ ಯಶಸ್ಸು ಗಳಿಸುವುದು—ಇತ್ಯಾದಿಗಳಿಗೂ ಯೋಗ್ಯ ಆಹಾರ ಅವಶ್ಯವೆಂಬುದನ್ನು ಒತ್ತಿ ಹೇಳಬೇಕಾಗಿಲ್ಲ.

ಇಲ್ಲಿ, ನಮ್ಮ ದೇಹದ ಅಂಗಾಂಗಗಳ ಸ್ಥೂಲ ಕಾರ್ಯ ವಿಚಕ್ಷಣೆಯನ್ನು ಸ್ವಲ್ಪ ಗಮನಕ್ಕೆ ತಂದುಕೊಳ್ಳ ಬಹುದು. ಮಾನವನ ದೇಹದಲ್ಲಿರುವ ವಿವಿಧ ಅಂಗಾಂಗಗಳು ಮತ್ತು ದೇಹದ ದ್ರವ ಸಂಗ್ರಹವು ರಚನೆ, ಕಾರ್ಯ ಮತ್ತು ವಿನ್ಯಾಸಗಳ ದೃಷ್ಟಿಯಿಂದ ಭಿನ್ನ ಭಿನ್ನವಾಗಿದ್ದರೂ, ಕಡೆಗೆ ಅವುಗಳ ಮೂಲ ಘಟಕಗಳೆಲ್ಲ ಜೀವಕೋಶ ಮತ್ತು ಜೀವಧಾತು ಎಂಬುದು ನಿರ್ವಿವಾದ. ಜೀವಕೋಶವು ಅತ್ಯಂತ ಸಂಕೀರ್ಣ ರಚನೆ, ಘಟಕ, ಮತ್ತು ಕಾರ್ಯ ವ್ಯಾಪ್ತಿ ಹೊಂದಿರುತ್ತದೆ. ಅದರ ಕಾರ್ಯ ಪರಿಮಿತಿಯೂ ವಿಭಿನ್ನ ಬಗೆಯದಾಗಿರುತ್ತದೆ. ಅದು ವಿಶಿಷ್ಟ ಗುಣಧರ್ಮಗಳು ಮತ್ತು ಕಾರ್ಯವ್ಯಾಪ್ತಿಯನ್ನು ಹೊಂದಿರುವುದುಂಟು. ಜೀವಕೋಶವನ್ನು ಸ್ಥೂಲವಾಗಿ ನೋಡಿದರೆ ಹೊರಗೆ ಒಂದು ಆವರಣ. ಒಳಗೆ ದ್ರವ (ಲೋಳೆ) ರೂಪದ ಜೀವಧಾತು ಅದರಲ್ಲಿ ಒಂದು ಕೋಶಕೇಂದ್ರ ಮತ್ತಿತರ ಹಲವಾರು ಸೂಕ್ಷ್ಮ ವಸ್ತುಗಳೂ ಇರುತ್ತವೆ. ಇವುಗಳೆಲ್ಲದರ ಕಾರ್ಯೋಚರಣೆಯಿಂದ ಸಜೀವ ಕೋಶಗಳಲ್ಲಿ ಒಂದು ಜೈವಿಕ ಶಕ್ತಿ ಉತ್ಪತ್ತಿಯೂಗುತ್ತದೆ. ರಕ್ತವಾಹಿನಿಗಳ ಮೂಲಕ ಸಾಗಿಸಲ್ಪಟ್ಟು ಕಡೆಗೆ ಆಯಾ ಅಂಗಾಂಗಗಳ ಜೀವಕೋಶಗಳಿಂದ ಹೀರಿಕೊಳ್ಳಲ್ಪಡುವ ವಿಧಾನಕ್ಕೆ ಬಹಳ ಮಹತ್ವವಿದೆ. ಇದರಿಂದ ಆಹಾರದ ಪೋಷಕಾಂಶಗಳೆಲ್ಲ ಜೀವಕೋಶಗಳಿಗೆ ಶಕ್ತಿಯನ್ನು ಒದಗಿಸುತ್ತವೆ. ಆಗ ದುರಸ್ತಿ, ಇಲ್ಲವೆ ಸಂಖ್ಯಾವೃದ್ಧಿ ಇಲ್ಲವೆ ಬೆಳವಣಿಗೆ ಹೊಂದಬೇಕಾದ ಕೋಶಗಳೆಲ್ಲ ತಮ್ಮ ಕಾರ್ಯಗಳಲ್ಲಿ ನಿರತವಾಗುತ್ತವೆ. ಜತೆಗೆ ಈ ಕೋಶಗಳಲ್ಲಿ ಉಂಟಾಗುವ ಕೆಲವು ಧಾನಾಯನಿಕ ಕ್ರಿಯೆಗಳಿಂದ ಶಕ್ತಿ ಬಿಡುಗಡೆಯೂಗುತ್ತದೆ. ಇದು ಬೇರೆ ಇನ್ನು ಕೆಲವು ಜೈವಿಕ ಕಾರ್ಯಗಳಿಗೆ ವಿನಿಯೋಗವಾಗುತ್ತದೆ. ಅಂತೆಯೇ ಕೆಲವು ತ್ಯಾಜ್ಯ ವಸ್ತುಗಳೂ ವಿಸರ್ಜಿಸಲ್ಪಡುತ್ತಿರುತ್ತವೆ.

> ಮನುಷ್ಯನ ಬಾಳಿಗೆ ಆಹಾರ ಅತ್ಯಂತ ಅವಶ್ಯ; ಅದು ವೈಜ್ಞಾನಿಕ ರೀತಿಯಲ್ಲಿ ಹೇಗಿರಬೇಕು? ಈಗ ಹೇಗಿದೆ? ಯಾವ ವಯಸ್ಸಿನವರು ಯಾವ ರೀತಿಯ ಆಹಾರ ತೆಗೆದುಕೊಳ್ಳಬೇಕೆಂಬುದನ್ನು ಪ್ರೊ। ರಾಯರು ಈ ಲೇಖನದಲ್ಲಿ ವಿವರವಾಗಿ ತಿಳಿಸಿದ್ದಾರೆ.

ಜೀವಕೋಶಗಳಲ್ಲಿ ಆನೇಕ ವಿಭಿನ್ನ ಬಗೆಯ ರಾಸಾಯನಿಕ ಘಟಕಗಳೂ ಉಂಟು. ಉದಾ—ಕ್ಯಾಲ್ಸಿಯಂ, ರಂಜಕ, ಸೋಡಿಯಂ, ಪೊಟ್ಯೇಸಿಯಂ, ಕಬ್ಬಿಣ, ಆಮ್ಲಜನಕ, ಸಾರಜನಕ ಇತ್ಯಾದಿ.

ಜೀವಕೋಶಗಳಲ್ಲಿಯೂ ಹೆಲವಾರು ಬಗೆಗಳುಂಟು. ಅವುಗಳಲ್ಲಿ ನರ, ಎಲುಬು (ಮೂಳೆ), ಕನೆಕ್ಟಿವ್, ಎಪಿಥೀಲಿ

(ಇಪ್ಪತ್ತೈದನೇ ಪುಟ ನೋಡಿರಿ)

ARYA VAIDYA SALA

Phone: Office : 81
Nursing Home : 44
Chief Physician : 25
Mg. Trustee Office: 61
Res : 27

During Seven decades of progress, the institution modernised, mechanised and expanded its equipment for mass production; yet always maintained its tradition for unequalled quality.

Branches at Madras (Phone 811275), Kozhicode (2155), Palghat (104), Alwaye, Erode (172), Tirur (31), Ernakulam (33026) and Trivandrum (3924) and over 100 authorised agencies and depots.

Genuine Standard Ayurvedic Medicines and Expert Medical Advice available at the HEAD OFFICE AT KOTTAKKAL and all Branches. Medical advice through correspondence given by the Chief Physician at Kottakkal. Special Treatments like Pizhichil, Navarakkizhi, etc. conducted under the supervision of the Chief Physician at the GOLDEN JUBILEE NURSING HOME, KOTTAKKAL. Please reserve your rooms before starting.

Vaidyaratnam P. S. Varier's

Arya Vaidya Sala

KOTTAKKAL (KERALA STATE)

Estd: 1902

ಡಾ| ಸಾ. ಶಿ. ಮರುಳಯ್ಯ

'ವೀರ ಭಾರತಿ' (ಒಂದು ಶಬ್ದ ಚಿತ್ರ)

[ತೆರೆ ಸರಿಯಾಗ ರಂಗಭೂಮಿ ಕತ್ತಲು. ಜ್ವಲಿಸುತ್ತಿರುವ ಪಂಜು ಹಿಡಿದು ಕಾಲಪುರುಷನ ಪ್ರವೇಶ]

ಕಾಲಪುರುಷಃ— ಬಾ ಬೆಳಕೆ ಬಾ !
ಸ್ವರ್ಣ ವರ್ಣೋದಯದ
ಅರುಣ ಜ್ಯೋರ್ಮಲಯಲಿ
ಬೆಳ್ಳಸ್ಪೆ ಮುಸ್ಸುಂಜೆಯ ಬೆಳಕೆ ಬೆಳಗಿ ಬಾ !
ಸಪ್ತ ಸಾಗರವನ್ನೆಲೆಯ ಕುದಿಗುದಿಯ ತಾಂಡವದಿ
ಲಾಸ್ಯಗೈಯುತ ಬಾ !
ಬತ್ತಲೆಯ ಬಯಲಿಂಗೆ ಶಕ್ತಿ ಸಂಕ್ರಮಿಸುತ್ತ
ಭಾರತೀಯನ ಎದೆಗೆ ಸೂಚಿ ತಾಂಬು ಬಾ !
ಮಸಣ ಮೌನದ ಧುಂಧ್ರ ಮರುಭೂಮಿಯೆಡೆ—
ಯೊಳಹ ಸಾರ ಸೂಸ್ಯಪ ಸೊಸಿ
ಭರತ ಪುತ್ರಸ್ಪೆಂದು ನರ್ದಯವ ಬಿತ್ತು ಬಾ !
ಧೀರ ಮಂದರದಂತೆ ಅಚಲನಾಗಲಿ ಇಂದು !
ಉತ್ತುಂಗ ಶೃಂಗದೊಲು ತನ್ನತನ ಮೆರೆಯಲಿ !
ಹರಿವೊನಲ ನೈರ್ಮಲ್ಯ ಅವನ ಭಮನಿಯರಿರಲಿ
ಅವನ ನಾಡಿಯಲೆಂದೂ ಮಿಡಿಯುತ್ತಲಿರಲಿ—
'ನಾ ಭಾರತೀಯ, ನಾ ಭಾರತೀಯ'—
ಎಂದೆಂಬ ತಾರಕ ಮಂತ್ರ!
ಓ ವಿಶ್ವ ಜೇತನಗಳೇ
ನೀವೆಲ್ಲ ಬನ್ನಿ,
ಒಮ್ಮೆಲೇ ಬಂದಿಲ್ಲಿ ಭಾರತೀಯನಲಲ್ಲಿ
ಅವಿರ್ಭವಿಸ ಬನ್ನಿ !
ಜಗದ ಸತ್ತ್ವ ಸೆಳೆದ ಓ ಭಾರತೀಯ,
ನೀನು ಭಾರತನವ್ವಾ !
ಭಂಡ ಬಾಳೆಂದಿಗೂ ನಿನಗಲ್ಲ; ಅದು ಹೊಲ್ಲ !
ನೀನು 'ಭಾರತ!'

ಭಾ=ಜ್ಯೋತಿಯಲ್ಲಿ, ರತ=ಆಸಕ್ತನಾದವನು.

ನೀನು ಕೀರ್ತಿಕಾಮಿಯಲ್ಲ, ಅರ್ಥ ಕಾಮಿಯಲ್ಲ,
ಮೋಕ್ಷ ಕಾಮಿಯೂ ಅಲ್ಲ,
ನೀನು ಜ್ಯೋತಿಕಾಮಿ !
ಜ್ಞಾನದಾಹ ನಿನ್ನದು !!
ನೀನು ಭಾರತ !!!
ಓ ಭಾರತ,
ಭಾರತಾಂಬೆಯ ಮನದ ಸುಮಧುರ ಸುಸ್ವಪ್ನವೇ,
ಕಣ್ತೆರೆದು ನೋಡು.....
ನಿನ್ನ ಸ್ಮೃತಿಪಟಲದ ಮೇಲೆ ಒಮ್ಮೆ ಮೂಡಿಸಿಕೋ,
ಏನೆಂತಹ ಭವ್ಯ ಸಂಸ್ಕೃತಿ ನಿನ್ನದು !
ಕೆಸರಿನಲ್ಲಿ ಕಮಲವನ್ನೂ,
ಕತ್ತಲೆಯಲ್ಲಿ ಬೆಳಕನ್ನೂ,
ಮಣ್ಣಿನಲ್ಲಿ ಮಾಣಿಕ್ಯವನ್ನೂ,
ಮರಣದಲ್ಲಿ ಅಮೃತತ್ವವನ್ನೂ—ಪಡೆದಿದೆ
ನಿನ್ನ ಸಂಸ್ಕೃತಿಯ ವೈಶ್ಯೆ !
ಎದ್ದು ಬಾ ಸೋದರನೆ,
ನಿನಗೆ ಸಂತಯ ಬೇಡ....ನಾನು ಬೇರಾರು ಅಲ್ಲ—
ನಿನ್ನ ಪ್ರಿಯ ಬಂಧು!
ಯುಗ ಯುಗಾಂತರಗಳನು ವೀಕ್ಷಿಸಿದ ಸಾಕ್ಷಿ !
ನಾನೇ ಕಾಲಪುರುಷ !
ಭರತಖಂಡದ ರಾಷ್ಟ್ರ ಕುಂತಲಿನೀ ಶಕ್ತಿ !
ಸಂದೇಹ ಕೆಡಬೇಡ,
ಅಂಜಿಕೆಯ ನುಡಿಬೇಡ....
ಮನದ ಮೈಲಿಗೆ ನೀಗಿ,
ಆಲಸ್ಯವನೆ ದೂಡಿ
ಎದ್ದು ಬಾ ನನ್ನೊಡನೆ,
ಕರೆದೊಯ್ವೆ ನಿನ್ನನಾ ಅಮೃತತ್ವದೆಡೆಗೆ |
ಭಾರತಕೆ ಪೌರುಷದ ಭವ್ಯ ಪರಂಪರೆ ಇದೆ—ಅದೇ
ಪರಂಪರೆಗೆ ಸೇರಿದ್ದೆ ನಿನ್ನ ಜೇತನ ! ಓ ಭಾರತೀಯ,
ಇಂದಾದರೂ ನೀನು ಎಚ್ಚೆತ್ತುಕೊ. ಹಿಂದುವಾಗಿರು,
ಮುಸಲ್ಮಾನನಾಗಿರು, ಕ್ರೈಸ್ತನಾಗಿರು, ಸಿಕ್ಖನಾಗಿರು,
ಬೌದ್ಧನಾಗಿರು, ಜೈನನಾಗಿರು,—ನೀನು ಯಾರೇ ಆಗಿರು
—ಎಂದೆಂದಿಗೂ ನೀ ಭಾರತೀಯನಾಗಿರು ! ಎಂದೆಂದಿಗೂ ಹೇಳುತ್ತಿರಬೇಕು "ನಾ ಭಾರತೀಯ ನಾ ಭಾರತೀಯ" ಎಂದೆಂಬ ಅಮೃತೋಪಮ ಋಷಿವಾಣಿಯನ್ನು !

ಆಜೋ ನೋಡು, ಭರತಮಾತೆ ತನ್ನ ಕರುಣಾಜನಕ ದೃಷ್ಟಿಯಿಂದ ನಿನ್ನನ್ನೀಕ್ಷಿಸುತ್ತಿದ್ದಾಳೆ. ಅಂತೆಯೇ ಅವಳ ಸಾಸ್ಪಿದ್ಧದಲ್ಲಿ ಅವಳ ಕಂದಮ್ಮಗಳು ಒಬ್ಬೊಬ್ಬರಾಗಿ ಬಂದು ಸೇರುತ್ತಿದ್ದಾರೆ. ನೋಡಿ ನಿನ್ನ ಕಣ್ಣಿನ ಬರ ಹಿಂಗಿಸಿಕೊ !

[ಭಾರತಾಂಬೆಯ ದರ್ಶನ, ಗಾಂಧೀಜಿ, ಸುಭಾಸ್, ನೆಹರೂ, ವಿನೋಬಾಜಿ ಮೊದಲಾದವರೆಲ್ಲರೂ ಒಬ್ಬೊಬ್ಬರಾಗಿ ಬಂದು ಸೇರುತ್ತಾರೆ.]

ಓ ಭಾರತ,
ನಮ್ಮ ನಾಡಿನ ಸನಾತನತೆ ಎಂದೆಂದಿಗೂ ಅಚ್ಚಳಿಯದ ಆಸ್ತಿಯಪ್ಪಾ. ಹೆದರಬೇಡ—ನೋಡು-ವಿಶ್ವಭೂಷಣ ಸಾಮ್ರಾಟ್ ಅಶೋಕ ನಿನ್ನವನು. ಶ್ರೀ ಹರ್ಷ ನಿನ್ನವನು. ಪುಲಕೇಶಿ ನಿನ್ನ ಅಣ್ಣ ! ಆಜೋ ನಿನ್ನ ಬಾಪು ಅವರ ನೇತೃತ್ವದಲ್ಲಿ ಅಮಿತ ಸಂಖ್ಯೆಯ ಸ್ವಾತಂತ್ರ್ಯ ಶಿಲ್ಪಿಗಳು ! ಒಬ್ಬೊಬ್ಬರ ನುಡಿಯನ್ನು ಕೇಳು—ಕೇಳ ನಿನ್ನ ಮನದ ಮೂಲಿನ್ಯವನ್ನು ನೀಗಿಕೋ—

"ಸೈರಣೆಗೂ ಒಂದು ಮಿತಿ ಇದೆ..... ಬಂಧು ಭಗಿನಿಯರೇ, ದೇಶಕ್ಕಾಗಿ ಮಾಡಿರಿ ಇಲ್ಲವೇ ಮಡಿಯಿರಿ"
—ಎಂದ ರಾಷ್ಟ್ರಪಿತ ಮಹಾತ್ಮಾ ಗಾಂಧಿ,

"ಜನತೆಯ ಒಪ್ಪಿಗೆ ಇಲ್ಲದ ಯಾವ ನಿಯಮವೂ ಕಾಯಿದೆಯೂಗದು. ರಬ್ಬಾಳಿಕೆಯ ಕಾಯಿದೆಗಳನ್ನು ಎದುರಿಸುವುದು ಪ್ರತಿಯೊಬ್ಬನ ಕರ್ತವ್ಯವಾಗಿದೆ. ಭಾರತದ ಪ್ರಗತಿಯು ಸ್ವರಾಜ್ಯದಲ್ಲಿ ಅಡಗಿದೆ"
—ಎಂದ ದೇಶಬಂಧು ಚಿತ್ತರಂಜನ್‌ದಾಸ್,

"ಚಲಾವ್ ತೇರಿ ಗೋಲಿ !"
—ಎಂದು ಎದೆಯೊಡ್ಡಿ ಹೋರಾಡಿದ ಸ್ವಾಮಿ ಶ್ರದ್ಧಾನಂದ,

"ಮಾನವನಕೋಟಿಯ ಉದ್ಧಾರವೇ ನನ್ನ ದೀಕ್ಷೆ!"
—ಎಂದ ವಿಶ್ವಸಂಚಾರಿ ವಿನೋಬಾ ಭಾವೆ,

"ನನ್ನ ಕೊನೆಯ ಪ್ರಾರ್ಥನೆ ಇಷ್ಟೆ: ಒಗ್ಗಟ್ಟಿನಿಂದಲೂ. ದೃಢ ನಿಶ್ಚಯದಿಂದಲೂ ಮುಂದೆ ಸಾಗಿರಿ-ಐಕ್ಯದಿಂದಲೂ ಒಮ್ಮನಸ್ಸಿನಿಂದಲೂ ಕಾರ್ಯಪ್ರವೃತ್ತರಾಗಿರಿ... ಜಗತ್ತಿನಲ್ಲಿ ದೊಡ್ಡ ಸಾಮ್ರಾಜ್ಯವನ್ನುಳ್ಳ ಬ್ರಿಟಿಷ್ ಜನಾಂಗ ಭಾರತದಂತಹ ಪ್ರಾಚೀನ ರಾಷ್ಟ್ರವನ್ನು ಬಂಧಿಸ್ಪೇಮದಿಂದ ಬರಮಾಡಿಕೊಳ್ಳುವ ಅದ್ಭುತ ದೃಶ್ಯವು ಜಗತ್ತಿನ ಕಣ್ಣಿಗೆ ಬೀಳಲು ಬಹುದೂರವಿಲ್ಲ !"
—ಎಂದು ಅಚಲವಾಗಿ ನಂಬಿದ್ದ ದಾದಾಬಾಯಿ ನವರೋಜಿ,

"ಪ್ರಿಟಿಷರಿಂದ ನಮಗೆ ಲಾಭವಾಗಿರಬಹುದು; ಪರಿಜಕ್ರದ ಭೀತಿಯೂ ಇರಬಹುದು. ಆದರೆ ಭಾರತ ರಾಷ್ಟ್ರವು ಸ್ವತಂತ್ರವಾಗಲು ಆತಂಕವೇನು?"
—ಎಂದು ಪ್ರಶ್ನಿಸಿದ ಶಂಕರನ್ ನಾಯರ್,

ಸ್ವಾರ್ಥ ತ್ಯಾಗವಿಲ್ಲದೆ ರಾಷ್ಟ್ರದ ಏಳಿಗೆಯು ಎಂದೆಂದಿಗೂ ಸಾಧ್ಯವಿಲ್ಲ."
—ಎಂದು ನಿರ್ಧಾರಿಂಗೈದ ಆನಂದಮೋಹನ ಬಸು,

"ಲಾರ್ಡ್ ಕರ್ಜನರಿಗೆ ಆಳಿಕೆಯನ್ನು ಹೋಲಿಸಬೇಕಾದರೆ ಔರಂಗಜೇಬನ ಕಾಲದ ಇತಿಹಾಸವನ್ನೇ ಓದಬೇಕು. ಭಾರತವು ಬ್ರಿಟಿಷರ ವಿಲಾಸ ಭೂಮಿ. ತಾವು ಆಳುವವರು, ಭಾರತೀಯರು ಆಳಿಸಿಕೊಳ್ಳುವವರು ಎಂಬ ಭಾವನೆಯು ಕರ್ಜನರಿಗಿದೆ. ಇದಕ್ಕೆ ಧಿಕ್ಕಾರ!'
—ಎಂದು ಧಿಕ್ಕರಿಸಿದ ಗೋಪಾಲಕೃಷ್ಣ ಗೋಖಲೆ,

"ದೇಶದಲ್ಲಿ ವ್ಯಾಪಿಸಿದ ಬಡತನವೇ ರಾಷ್ಟ್ರದ ಆಪತ್ತಿಗೆ ಕಾರಣ. ನಮ್ಮ ಕೋಟ್ಯಾಧಿಪತಿ ದೇಶಕ್ಕೆ ಬಂಧವರು ಮೈ ಮುಚ್ಚಲು ಬಟ್ಟೆ ಇಲ್ಲದೆ ಹೊಟ್ಟೆ ತುಂಬ ಅನ್ನವಿಲ್ಲದೆ ನರಳುತ್ತಿದ್ದಾರೆ....ನಮ್ಮ ಜೈತನ್ಯದ ಪ್ರತಿಷ್ಠಾಪನೆಯ ತಾಯ್ನಾಡಿನ ಸೇವೆಗಾಗಿ ವಿನಿಯೋಗಿಸಿರಲಿ. [ನಮ್ಮ ಭವಿಷ್ಯವು ನಮ್ಮ ಒಗ್ಗಟ್ಟಿನಲ್ಲಿಯೇ ಇದೆ!"
—ಎಂದು ಸಾರಿದ ಮದನಮೋಹನ ಮಾಳವೀಯ,

"ತನ್ನ ರಕ್ಷಣೆಯನ್ನು ತಾನು ಮಾಡಿಕೊಳ್ಳಲು ಯಾವುದೇ ಜನಾಂಗವು ಸ್ವಾಧಿಮಾನಿಯಾಗಿ ಬಾಳಲಾರದು.... ಗೆಲ್ಲುವಾ ಇಲ್ಲವೇ ಸಾಯುವಾ ಎಂಬ ದೃಢನಿಶ್ಚಯದಿಂದ ಹೋರಾಡಲು ಒಗ್ಗಟ್ಟಾಗಿರಿ!"
—ಎಂದು ಕರೆಕೊಟ್ಟ ಅಂಬಿಕಾ ಚರಣ ಮುಜುಮುದಾರ್,

"ಭಾರತವು ಬಕ್ಕೆಗಾಗಿ ಮೊಣಕಾಲೂರಿಲ್ಲ, ತನ್ನ ಹಕ್ಕುಗಳಿಗಾಗಿ ಹೋರಾಡುತ್ತಿದೆ!"
—ಎಂದು ಸ್ಪಷ್ಟೀಕರಿಸಿದ ಶ್ರೀಮತಿ ಆನಿಬೆಸೆಂಟ್,

"ಸ್ವರಾಜ್ಯವು ನನ್ನ ಜನ್ಮಸಿದ್ಧ ಹಕ್ಕು. ಅದನ್ನು ನಾನು ದೊರಕಿಸಿಯೇ ತೀರುವೆನು!"
—ಎಂದು ಗರ್ಜಿಸಿದ ಬಾಲ ಗಂಗಾಧರ ತಿಲಕ್,

"ರಾಷ್ಟ್ರ ಪೂಜೆಯೇ ನನ್ನ ಧರ್ಮ"
—ಎಂದ ಲಾಲಾ ಲಜಪತರಾಯ್,

"ನನಗೆ ಮರಣ ಬಂದರೂ ಸ್ವತಂತ್ರ ಭಾರತದಲ್ಲಿಯೇ ಬರಲಿ."
—ಎಂದು ಆಶಿಸಿದ ಮೋತಿಲಾಲ್ ನೆಹರು,

"ಆರಾಮ್ ಹರಾಮ್ ಹೈ"
—ಎಂದು ಟೀಕಿಸಿದ ಭಾರತರತ್ನ ಪಂಡಿತ ಜವಾಹರ ಲಾಲ್ ನೆಹರು.

"ಪರದೇಶಿ ವಸ್ತುಗಳನ್ನೆಲ್ಲ ನಮ್ಮ ಗಡಿಬಿಟ್ಟು ಓಡಿಸಬೇಕು. ಯಾವ ರಾಷ್ಟ್ರದ ಆರ್ಥಿಕ ಆಡಳಿತವು ಅದರ ಕೈಯಲ್ಲಿಲ್ಲವೋ ಅದು ಎಂದಿಗೂ ಪ್ರಗತಿಮುನ್ನು ಹೊಂದಲಾರದು"
—ಎಂದ ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭ ಭಾಯಿ ಪಟೇಲ್,

"ನಮ್ಮ ಮೂರ್ಗವು ಸೂರ್ಯಪ್ರಕಾಶಿಸಿದಷ್ಟು ಸ್ಪಷ್ಟ ವಿದೆ."
—ಎಂದು ಸ್ಪಷ್ಟೀಕರಿಸಿ ತಿಳಿಸಿದ ಡಾ|| ಬಾಬು ರಾಜೇಂದ್ರ ಪ್ರಸಾದ್,

"ನಾವು ನಮ್ಮ ರಕ್ತದಿಂದಲೇ ಭಾರತದ ಇತಿಹಾಸವನ್ನು ಬರೆಯುತ್ತಲಿದ್ದೇವೆ"
—ಎಂದ ಶ್ರೀಮತಿ ನೇಲಿಸೇನ ಗುಪ್ತ,

"ಭಾರತ-ಪಾಕಿಸ್ತಾನ ಯುದ್ಧದಲ್ಲಿ ನಾವು ನಮ್ಮ ಶಕ್ತಿಯನ್ನೆಲ್ಲ ವಿನಿಯೋಗಿಸಿ ಹೋರಾಡಿದೆವು. ಈಗ ಶಾಂತಿ ಸ್ಥಾಪನೆಗಾಗಿ ನಮ್ಮ ಶಕ್ತಿಮೀರಿ ಹೋರಾದಬೇಕಾಗಿದೆ."
—ಎಂದ ನಮ್ಮ ನೆಚ್ಚಿನ ನಾಯಕ, ಭಾರತ ಪಾಕೀ ಸ್ತಾನಗಳ ಸೌಹಾರ್ದಕ್ಕಾಗಿ ತಾಷ್ಕೆಂಟ್‌ನಲ್ಲಿ ತನ್ನಸುವನ್ನೇ ನೀಗಿದ ಭಾರತರತ್ನ ಲಾಲ್ ಬಹಾದ್ದೂರ್ ಶಾಸ್ತ್ರಿ-

—ಒಬ್ಬರೇ ಇಬ್ಬರೇ— ಲೆಕ್ಕಕ್ಕೆ ಸಂಖ್ಯೆಯಲ್ಲ ನೋಡರನೆ ! ಇವರೆಲ್ಲ ನಿನ್ನವರು; ನಿನ್ನ ಆತ್ಮೀಯ ಬಂಧುಗಳು. ನಿನಗಾಗಿ ನಿನ್ನಭ್ಯುದಯಕ್ಕಾಗಿ ತಮ್ಮನ್ನೇ ಬಲಿಗೊಟ್ಟುಕೊಂಡ ತ್ಯಾಗಮೂರ್ತಿಗಳು. ಅವರ ಆದರ್ಶ ನಿನ್ನ ಮುಂದಿರಲಿ. ಅವರ ತ್ಯಾಗ, ರಾಷ್ಟ್ರ ಪ್ರೇಮ, ಸಾಹಸಾದಿ ಸದ್ಗುಣಗಳು ನಿನಗೆ ಕೈದೀವಿಗೆಯಾಗಿರಲಿ ! ಎಂದೆಂದಿಗೂ ಅವರ ಅನಂತ ಆಶೀರ್ವಾದ ನಿನಗೆ ರಕ್ಷೆಯಾಗಿರಲಿ !

ತೊಂಭತ್ತಿನ ಇತಿಹಾಸ

ಐತಿಹಾಸಿಕ ಸಂಶೋಧಕ ಡಾ। ಭಟ್ಟರು 'ಸಂಖ್ಯಾವಾಚಕ ತೊಂಭತ್ತಿನ ಇತಿಹಾಸ ಬರೆಯತೊಡಗಿದರೇಕೆಂದು ಬೆರಗಾಗಬೇಡಿ. ಕುಂದಾಪುರ ತಾಲೂಕಿನ ಹೆಂಗವಳ್ಳಿಯ ಹೃದಯ ತೊಂಭತ್ತು. ಈ ತೊಂಭತ್ತರ ಮೇಲೆ ಡಾ। ಭಟ್ಟರು ಹೊಸ ಬೆಳಕು ಚೆಲ್ಲುವ ಸಾರ್ಥಕ ಪ್ರಯತ್ನ ಮಾಡಿದ್ದಾರೆ.

ಡಾ। ಪಿ. ಗುರುರಾಜ ಭಟ್

'ತೊಂಭತ್ತು' ಎಂಬೀ ಸಂಖ್ಯಾ ವಾಚಕದ ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸದಲ್ಲಿ ವೈಶಿಷ್ಟ್ಯವಿಹುದು. ಆದರೆ ಇದರ ವೈಶಿಷ್ಟ್ಯ ಬಹುಜನರಿಗೆ ತಿಳಿಯದಾಗಿದೆ. ಕುಂದಾಪುರ ತಾಲೂಕಿನ ಹೆಂಗವಳ್ಳಿ ಎಂಬ ಗ್ರಾಮದ ಒಂದು ಪ್ರಧಾನ ಭಾಗಕ್ಕೆ 'ತೊಂಭತ್ತು' ಎಂದು ಹೆಸರು. ಇದು ಇಂದು, ಮೊನ್ನಿನ ಹೆಸರಲ್ಲ. ಪ್ರಾಯಶಃ ಐನೂರು ವರ್ಷಗಳಷ್ಟು ಪ್ರಾಚೀನ. ತೊಂಭತ್ತರಲ್ಲೆ ತೊಂಭತ್ತಿನ ಮನೆ 'ನಾಡವ' ಸಮಾಜದ ಸ್ವೆಧಾನ ಮನೆ.

'ಹೆಂಗವಳ್ಳಿ' ಇಂದಿಗೂ ಒಂದು ಕುಗ್ರಾಮ. 'ತೊಂಭತ್ತು' ಈ ಹಳ್ಳಿಯ ಹೃದಯ. ಈ ಊರಿಗೆ ಯಾವ ಕಡೆಯಿಂದ ಬರುವುದಾದರೂ ಹೊಳೆಯನ್ನು ದಾಟಿ ಬರಬೇಕಷ್ಟೆ! ಎಂದರೆ ಇದೊಂದು ಸ್ವತಂತ್ರವಾದ ದ್ವೀಪದಂತೆ.

ಇತ್ತೀಚೆಗೆ ನಡೆಸಿದ ಪ್ರಾಸ್ತುತ ವಿಕ್ಷಣೆಯಿಂದ ಹೆಂಗವಳ್ಳಿ ಹಾಗೂ ತೊಂಭತ್ತರ ಪ್ರಾಮುಖ್ಯದ ಅರಿವಾಯಿತು. ವಿಮರ್ಶೆ ಮಾಡದೆ ಇರುವುದರ ಫಲವಾಗಿ ನಮ್ಮಲ್ಲಿ ಜ್ಞಾನದ ಬಡತನ ಎಷ್ಟೆಂಬುದೂ ಇದರಿಂದ ತಿಳಿಯಿತು.

ತೊಂಭತ್ತಿನಲ್ಲಿ ಹತ್ತು ಎಕ್ರೆಗಿಂತಲೂ ಅಧಿಕ ವಿಸ್ತಾರವಾದ ಸ್ಥಳವನ್ನಾವರಿಸಿಕೊಂಡು ಸಂಪೂರ್ಣವಾಗಿ ಜೀರ್ಣವಾಗಿಹೋದ ಮಹಾಲಿಂಗೇಶ್ವರ ದೇವಾಲಯದ ಅವಶೇಷಗಳನ್ನೊಳಗೊಂಡು ಒಂದು ಕುಸಿದು ಬಿದ್ದ ಕೋಟೆಯಿದೆ. ಇದು ಪುರ್ವಕಾಲೀನ ಕೋಟೆ, ಎಂದರೆ ಕ್ರಿ.ಶ. 14-15ನೇ ಶತಕದ ಕೋಟೆ. ಒಳಹೊಕ್ಕು ಪರಿಶೀಲಿಸಿದರೆ ಅರಮನೆಯ ಅಡಿಪಾಯ, ನಾಗನ ಕಲ್ಲುಗಳ ಅವಶೇಷ, ಬಾವಿಗಳು, ಮನೆಗಳ ಪಾಯ ಇತ್ಯಾದಿ ಕಾಣಸಿಗುವವು. ಇಲ್ಲಿ ವೆಂಕಮ್ಮ ಬಳ್ಳಾಳ್ತಿ ಎಂಬ ರಾಣಿ ಆಳುತ್ತಿದ್ದಳೆಂದು ಸಾಂಪ್ರದಾಯಿಕವಾಗಿ ತಿಳಿಯಲಾಗಿದೆ. 'ವೆಂಕಮ್ಮ' ನಿಂದ 'ಹೆಂಗವಳ್ಳಿ' ಎಂಬೀ ಹೆಸರು ಬಂದಿರಬಹುದೆಂದು ಅನುಮಾನಿಸಬಹುದು.

ಕೋಟೆಯ ಒಳಗಡೆ ಇರುವ ದೇವಾಲಯದ ಭಗ್ನವಾದ ಅವಶೇಷಗಳನ್ನು ಕಂಡಾಗ ಯಾರ ಮನಸ್ಸಾದರೂ ಕರಗದಿರದು. ಈ ದೇಗುಲಕ್ಕೆ ಮೂರು ಅಂಗಳ—ಪ್ರದಕ್ಷಿಣಪಥ. ಹೊರಗಣ ಎರಡು ಅಂಗಣಗಳು 50 ಅಡಿ ಅಗಲವಾಗಿವೆ. ಒಳಗಿನದು 20 ಅಡಿ ಅಗಲವಿದೆ. ಇತ್ತೀಚೆಗೆ ಅತಿ ಕಷ್ಟದಿಂದ ಮಾಡಿದ ಜೀರ್ಣೋದ್ಧಾರದ ಫಲವಾಗಿ ಗರ್ಭಗೃಹ ಉಳಿದು ಬಂದಿದೆ. ಅಡಿಗರು ಇನ್ನೂ ತಮ್ಮಲ್ಲಿ ಶೇಷವಾಗಿ ಮುಂದುವರಿದಿರುವ ಭಕ್ತಿಯಿಂದ ಪೂಜೆಗೈಯುತ್ತಿರುವುದು ಶ್ಲಾಘನೀಯ. ಈ ದೇವಾಲಯ ಪ್ರಾಕಾರಗಳು ಬಿದ್ದುಹೋಗಿವೆ. ಎದುರಿನ ಗೋಪುರವು ಕಗ್ಗಲ್ಲಿನಿಂದ ಭವ್ಯವಾಗಿ ನಿರ್ಮಾಣಗೊಂಡ ರಚನೆ. ಅದರ ಇದು ಸಂಪೂರ್ಣವಾಗಿ ಬಿದ್ದುಹೋಗಿದೆ. ಕಲ್ಲಕಂಬಗಳ ತುಂಡುಗಳೂ ಕಲ್ಲ ಹಲಗೆಗಳೂ ಅಸ್ತವ್ಯಸ್ತವಾಗಿ ಎಲ್ಲೆಲ್ಲೂ ಬಿದ್ದುಕೊಂಡಿದ್ದು ತಮ್ಮ ಅಸಹಾಯಕತೆಯ ದಾರುಣ ಕತೆಯನ್ನು ತಿಳಿಸುತ್ತವೆ. ಮೂಲರೂಪದಲ್ಲಿ ಈ ದೇಗುಲವು ಜಿಲ್ಲೆಯ ಪ್ರಮುಖ ದೇವಾಲಯಗಳಲ್ಲಿ ಒಂದಾಗಿದ್ದಿರಬೇಕೆಂಬುದರಲ್ಲಿ ಸಂದೇಹವಿಲ್ಲ. ಸಕ್ಕಿನು ದಿಕ್ಕಿನ ಬಾಗಿಲು ಸು. 15 ಅಡಿ ಎತ್ತರವಾಗಿದ್ದು ಆನೆಗಳನ್ನು ಒಳಬನಲು ಬಿಡುವಂತಿವೆ.

ತೊಂಭತ್ತಿನ ಈ ಕೋಟೆಯ ಸಮೀಪ ಒಂದು ಆಳು ಪ್ರಮಾಣದ ವೀರಗಲ್ಲಿದೆ. ಇದರಲ್ಲಿ ನಾಲ್ಕು ವಿಭಾಗಗಳಿದ್ದು ಅವುಗಳುದ್ದದ ವಿವರವನ್ನು ತಿಳಿಸುತ್ತವೆ. ಕೆಳಗಿನ ವಿಭಾಗದಲ್ಲಿ ರಾಣಿಯೇ ಆನೆ ಮೇಲೆ ಯುದ್ಧ ಮಾಡುವಂತಿವೆ. ಇದರಲ್ಲಿರುವ ಶಾಸನವನ್ನು ಪ್ರಯತ್ನಪೂರ್ವಕವಾಗಿ ಓದಬೇಕಷ್ಟೆ ! ಇಂತಹ ವೀರಗಲ್ಲುಗಳು ಇನ್ನೂ ಮೂರು ಸನಿಹದಲ್ಲಿ ಇವೆಯೆನ್ನಲಾಗಿದೆ.

ವೆಂಕಮ್ಮ ಬಳ್ಳಾಳ್ತಿ ಯಾರೆಂಬುದು ಇನ್ನೂ ತಿಳಿದು ಬಂದಿಲ್ಲ. ತೊಂಭತ್ತಿನಲ್ಲಿ ಇಂದಿಗೂ ನಾಡವ ಸಮಾಜನೇ ಪ್ರಧಾನ. ತೊಂಭತ್ತಿನ ಮನೆಯು ಈ ಕೋಟೆಯ ಸಮೀಪವಿದೆ. ಇದು ನಾಡವ ಸಮಾಜದ ಪ್ರಧಾನ ಮನೆ ಎಂಬುದಾಗಿ ತಿಳಿಯಲಾಗಿದೆ. ತೊಂಭತ್ತು ಕುಟುಂಬಗಳೋ, ತೊಂಭತ್ತು ಮನೆಗಳೋ ಇದ್ದಿರಬಹುದಾದ ಊರು ತೊಂಭತ್ತು. ಇಲ್ಲಿಯ ನಾಡವೆ ಸಮಾಜದ ರಾಣಿ ವೆಂಕಮ್ಮ ಬಳ್ಳಾಳ್ತಿ ಇರಬಹುದು. ಈ ರಾಣಿಯು 'ಭೂತ ಪ್ಯಾಂಡ್ಯ' ನಿಗೆ ಸಂಬಂಧಿ ಇದ್ದಿರಬಹುದು. (ಭೂತಾಳ ಪಾಂಡ್ಯನೆಂಬು ಜನಜನಿತವಾದ ಈ ಹೆಸರು 'ಭೂತಪ್ಪಾಂಡ್ಯನಿರಬೇಕೆಂದೂ ಆತನು ಕುಂದಾಪುರದ 'ನಾಡ' ಎಂಬ ಊರಿನವನಿರಬಹುದೆಂದೂ 'ನಾಡ' ನೇ ನಾಡರ ಮೂಲ ಕ್ಷೇತ್ರವಿರಬೇಕೆಂದೂ ನಾನು ಇತರತ್ರ ವ್ಯಕ್ತ ಪಡಿಸಿದ್ದೇನೆ. ಕುಂದಾಪುರ ತಾಲೂಕಿನ ಹೆಂಗವಳ್ಳಿ, ತಲ್ಲಾಡಿ, ರಟ್ಟಾಡಿ, ನಾಡ ಇತ್ಯಾದಿ ಸ್ಥಳಗಳಲ್ಲಿ ನಾಡವರೇ ಪ್ರಮುಖರು.)

ತೊಂಭತ್ತಿನಲ್ಲಿ ಲಿಂಗದ ರೂಪದಲ್ಲಿ ತಿರಾಧಿಸಲ್ಪಡುವ ಮೂರು ದುರ್ಗಾದೇವಿ ದೇಗುಲಗಳೂ, ಒಂದು ಕೆರೆಗಣಪೇಶ ಗುಡಿಯೂ, ಒಂದು ಕೋಟೆ-ಚೆನ್ನಕೇಶವ ಗರಡಿಯೂ ಇವೆ. ತೊಂಭತ್ತಿನ ಪ್ರಾಚೀನ ಮನೆ ಬಿದ್ದು ಹೋಗಿದೆ. ಈಗಿನ ಮನೆಯೂ ಸುಮಾರು ವರ್ಷಗಳಿಗಿಂತಲೂ ಹಿಂದಿನ ಕಟ್ಟಡ. ಮಹಾಲಿಂಗೇಶ್ವರ ದೇವಾಲಯದ ಅರ್ಚಕರಾದ ಅಡಿಗರ ಆಭಿಸ್ಯಾಯದಂತೆ ಅವರ ಕುಟುಂಬವನ್ನು 600 ವರ್ಷಗಳ ಹಿಂದೆ ಕುಂದಾಪುರ ತಾಲೂಕಿನ ಕಂದಾವರ (ಸ್ಕಂದಪುರ)ವೆಂಬಲ್ಲಿಂದ ಪೂಜೆಗೋಸ್ಕರ ತೊಂಭತ್ತಿಗೆ ತಂದುದೆಂದೂ ಹದಿನೇಳು ಗಡ್ಯಾಣವನ್ನು ಅವರಿಗೆ ಈ ಉದ್ದೇಶ ಪಾನವಾಗಿತ್ತುದೆಂದೂ ತಿಳಿದು ಬರುತ್ತದೆ. ಕಂದಾವರದ ಉಪಾಧಿಯೆಂಬ ಕುಲನಾಮ 'ಅಡಿಗ'ವೆಂಬುದಾಗಿ ಮಾರ್ಪಟ್ಟಿದೆ. ತೊಂಭತ್ತು ಕಾಡು ಮತ್ತು ಕೃಷಿ ಬಯಲಿನಿಂದ ಕೂಡಿದ ತೀರಾ ಹಳ್ಳಿ. ಇದರ ಜನಸಂಖ್ಯೆ ಸುಮಾರು ಒಂದು ಸಾವಿರ. ಈಗಣ ನಾಗರಿಕತೆ ಇಲ್ಲಿ ಹೆಚ್ಚಿನ ಪ್ರಭಾವ ಬೀರಿದಂತೆ ಕಂಡುಬರುವುದಿಲ್ಲ. ವಾಹನ ಸೌಕರ್ಯದ ಸುಳಿವಿಲ್ಲ.

(ಈ ಸ್ಥಳಕ್ಕೆ ಪ್ರಾಕ್ತನ ವಿಮರ್ಶೆಗೆ ನನ್ನನ್ನು ಕರೆಮಾಡಿಕೊಂಡು ಹೋದ ಶ್ರೀ ಹೆಬ್ಬಾರರಿಗೂ ಉಪಕರಿಸಿದ ತೊಂಭತ್ತಿನ ಶ್ರೀ ನಾರಾಯಣ ಶೆಟ್ರಿಗೂ ಅಲ್ಲಿಯ ಪಂಚಾಯತು ಅಧ್ಯಕ್ಷರಾದ ಶ್ರೀ ರಾಜು ಶೆಟ್ರಿಗೂ ನನ್ನ ಕೃತಜ್ಞತೆಗಳು. ಹಾಗೂ ನನ್ನ ಸಹೋದ್ಯೋಗಿ ಶ್ರೀ ನರಸಿಂಹ ಕೆದ್ಲಾಯರಿಗೂ ಕೃತಜ್ಞತೆಗಳು.)

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ — **English Made Easy**

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಜನಪ್ರಿಯ ಆಂಗ್ಲ ಸ್ವಯಂಬೋಧಿನಿ ಬೆಲೆ : ರೂ. 2--00

Letter Writing Made Easy — **ಸುಲಭದಲ್ಲಿ ಪತ್ರಲೇಖನ**

ಇಂಗ್ಲಿಷಿನಲ್ಲಿ ನಾನಾ ತರದ ಪತ್ರವ್ಯವಹಾರ ನಡೆಸಲು ಸಹಕಾರಿಯಾಗಿ, ವಿವಿಧ ಪತ್ರ ಸಂಕಲನ ಬೆಲೆ : ರೂ. 1—50

ಮನೆ-ಮದ್ದು — **Home Remedies**

ಡಾ। ವಿ. ಆರ್. ಕೊರಥ್ಕಲ್‌ರು ಬಹಳ ಪ್ರತಿ ಮನೆಯಲ್ಲೂ ಇರಲೇಬೇಕಾದ ಅತ್ಯುಪಯುಕ್ತ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೆ ಮದ್ದು ಮಾಡುವ ಸುಲಭ ವಿಧಾನಗಳಿವೆ. ಹೆರಿಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಸಂಗ್ರಾಹ್ಯ ಪುಸ್ತಕ. ಬೆಲೆ : ರೂ. 2-00

ವಿ. ಸೂ. ವಿ. ಪಿ. ನೂಡುವುದಿಲ್ಲ. ಪುಸ್ತಕದ ಬೆಲೆಯೊಂದಿಗೆ 80 ಪೈಸೆ ಅಂಚೆ ವೆಚ್ಚ ಸೇರಿಸಿ ಮನಿಯೊರ್ಡರ್‌ರು ಪೂರಿಸಿದರೆ ಬುಕ್ ಪೋಸ್ಟ್ ಮೂಲಕವಾಗುವುದು.

— ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ಪಾಲುಕೋಟಿ, ಉಡುಪಿ.

ಒ ಒ ಒ

ಒಬ್ಬನ ಘನತೆ ಅವನ ಹೃದಯ (ಅಂತಃಕರಣ)ದಲ್ಲಿರುವುದೇ ಹೊರತು ತಲೆ (ಬುದ್ಧಿ)ಯಲ್ಲಿಲ್ಲ.

ಒ ಒ ಒ

ನಮ್ಮ ಸುಖ ಮತ್ತು ಮನಶ್ಶಾಂತಿಗಳು ಸಾವು ನ್ಯಾಯವೆಂದೂ, ಉಚಿತವೆಂದೂ ನಂಬಿರುವುದನ್ನು ಮೂಡುವುದರಲ್ಲಿಯೇ ಹೊರತು, ಇತರರು ಹೇಳುವಂತೆ ಅಥವಾ ಮಾಡುವಂತೆ ಮಾಡುವುದರಲ್ಲಿಲ್ಲ.

ಒ ಒ ಒ

ಸ್ವಾತಂತ್ರ್ಯ ರಜತ ಮಹೋತ್ಸವ

ಶ್ರೀ ಶಿವಶಂಕರ

ದೇಶ ಸ್ವಾತಂತ್ರ್ಯಕ್ಕೆ ಮೊದಲು ಸಿಮ್ಲಾದಲ್ಲಿ ರಾಜ್ಯಕೀಯ ಸಮ್ಮೇಳನ ನಡೆದಿತ್ತು. ಸ್ವಾತಂತ್ರ್ಯದ ರಜತ ಮಹೋತ್ಸವಕ್ಕೆ ಮೊದಲೂ ಅಂತಹುದೇ ಇನ್ನೊಂದು ಸಮ್ಮೇಳನ ಇದೇ ಸಿಮ್ಲಾದಲ್ಲಿ ಜರುಗಿತು. ಈ ಎರಡು ಸಮ್ಮೇಳನಗಳ ನಡುವಣ ಕಾಲಾವಧಿಯಲ್ಲಿ ಭಾರತ–ಪಾಕ್ ಸಂಬಂಧದ ಹಕ್ಕಿನೋಟವಿದಾಗಿದೆ.

೧೯೪೫....ರಾಜಕೀಯ ಮುಂದಾಳುಗಳು ಸಿಮ್ಲಾದಲ್ಲಿ ಒಂದಾಗಿ ಸೇರಿದರು. ಅಧಿಕಾರವನ್ನು ದೇಶೀಯರ ಕೈಗೆ ಹಸ್ತಾಂತರಿಸುವುದಾಗಿ ಆಂಗ್ಲೇಯರಂದರು. ಅಧಿಕಾರ....ನಾಯಕರ ನಾಲಗೆಯಲ್ಲಿ ನೀರೊಡೆಯಿತು. ನಿಯಮಿತ ಅಧಿಕಾರದ ರುಚಿಯನ್ನು ಅವರಾಗಲೇ ಕಂಡಿದ್ದರು. ಈಗ ಪೂರ್ಣ ಅಧಿಕಾರ ತಮ್ಮ ಅಂಗೈಗೆ ಬರುತ್ತದೆ! ಆದರೆ....ಬ್ರಿಟಿಷರ ದೊಂದು ಷರತ್ತು—ಕಾಂಗ್ರೆಸ್ಸೂ ಮುಸ್ಲಿಂ ಲೀಗೂ ಸೇರಿ ಒಂದು ನಿರ್ಧಾರಕ್ಕೆ ಬರಬೇಕು. ಯಾವ ನಿರ್ಧಾರ? ಒಂದಾಗಿ ಸ್ವಾತಂತ್ರ್ಯ ಪಡೆಯುವದೇ? ಮುಸ್ಲಿಂ ಲೀಗು ಅದಕ್ಕೆ ಸಿದ್ಧವಿಲ್ಲ. ಅದಾಗಲೇ ಪಾಕಿಸ್ತಾನದ ಬೇಡಿಕೆಯನ್ನು ಮುಂದಿಟ್ಟಿತು. ನಸ್ಸನ್ನು ವಿಭಜಿಸಿದ ನಂತರವೇ ದೇಶ ವಿಭಜನೆ ಸಾಧ್ಯವೆಂದರು ಗಾಂಧೀಜಿಯವರು. ವಿಭಜನೆ ಅರ್ಥ ಹೀನ ಮಾತೆಂದು ಗುಡುಗಿದರು ಜವಾಹರ ಲಾಲ ನೆಹ್ರೂಜಿಯವರು. ಕತ್ತಿಯನ್ನು ಕತ್ತಿಯಿಂದ ಎದುರಿಸುತ್ತೇವೆಂದರು ವಲ್ಲಭ್ಭಾ ಪಠೇಲ. ಆದರೆ....ಗಾಂಧೀಜಿಯವರ ಮಾತು ಅದಲು ಬದಲಾಯಿತು—ದೇಶ ವಿಭಜಿಸಿ ನಸ್ಸನ್ನು ಕೊಲ್ಲಿರೆನ್ನುವದು ನಿಜವಾಯಿತು. ಅರ್ಥಹೀನವೆಂದ್ಕನೆಹ್ರೂಜಿಯವರು 'ತಾತ್ಕಾಲಿಕ'ವೆನ್ನುವಲ್ಲಿಗೆ ಬಂದಿಳಿದರು. ಉಕ್ಕಿನ ಮನುಷ್ಯರೆಂದು ಭಾರತೀಯರು ತಿಳಿದುಕೊಂಡಿದ್ದ ಪಟೇಲರು ಮುಸ್ಲಿಂಲೀಗಿನವರಿಗೆ ಉಪ್ಪಿನ ಸರ್ದಾರರೇ ಆದರು. ಇಂತಹ ಮೂತಿನ ಲತ್ತಿಗಳಿಗೆ ತಂತ್ರಶಾಲಿ ಬ್ರಿಟಿಷರು ಭಯ ಪಡಲಿಲ್ಲ. ಅವರು ಅಧಿಕಾರ ಹಸ್ತಾಂತರದ ಮೂಲಲಂಗಿಯನ್ನು ಮುಂದಕ್ಕೆಟ್ಟರು. ಗುಡುಗು-ಮಿಂಚು ಶಾಂತವಾಯಿತು. ಭಾರತದ ವಿಭಜನೆ ನಡೆದೇಹೋಯಿತು. ರಕ್ತದ ಕಾಲುವೆ ಹರಿಯಿತು. ಪಾಕಿಸ್ತಾನಿಗಳ ಪೈಶಾಚಿಕ ಪೀಡೆಯಿಂದ ಪರಿತಪಿಸಿದ ಹಿಂದೂಗಳು ಹಿಂಸೆ ತಾಳಲಾರದೆ ಭಾರತಕ್ಕೆ ಧಾವಿಸಿ ಬಂದರು.

೧೯೪೭ ಆಗೋಸ್ಟ್ ಹದಿನೈದು....ಕೆಂಪು ಕೋಟೆಯ ಮೇಲಿದ್ದ ಬ್ರಿಟಿಷರ ಯೂನಿಯನ್ ಜೇಕನ್ನು ಕೆಳಕ್ಕಿಳಿಸಿ ತ್ರಿರಂಗಿಯನ್ನು ಮೇಲಕ್ಕೇರಿಸಲಾಯಿತು. ಭಾರತ ಸ್ವತಂತ್ರವಾಯಿತೆನ್ನಲಾಯಿತು. ಪಾಕಿಸ್ತಾನ ಅಸ್ತಿತ್ವಕ್ಕೆ ಬಂತೆಂಬುದು ನಿಜವಾಯಿತು. ಭಾರತದಲ್ಲಿ ನೆಹ್ರೂ ಸರಕಾರ, ಪಾಕಿಸ್ತಾನದಲ್ಲಿ ಜಿನ್ನ ಸರಕಾರ ಅಧಿಕಾರವನ್ನು ಕೈಗೆ ತೆಗೆದುಕೊಂಡಿತು; ನಗುನಗುತ್ತ ಪಾಕಿಸ್ತಾನವನ್ನು ಪಡೆದವರು ಮುಂದಕ್ಕೇನು ಮಾಡುವದೆಂದು ಯೋಚಿಸಿದರು? ಬೆವರು ಸುರಿಸಿ, ತ್ಯಾಗ ಬಲಿದಾನಗಳಿಂದ ಪಡೆದ ಸ್ವಾತಂತ್ರ್ಯವನ್ನು ಹೇಗೆ ಸಂರಕ್ಷಿಸಿಕೊಳ್ಳುವದೆಂದು ಭಾರತ ಯೋಚಿಸಿತು. ಭಾರತ ಸ್ವಾತಂತ್ರ್ಯೋತ್ಸವವನ್ನು ಆಚರಿಸುತ್ತ, ಭವ್ಯ ಭಾರತದ ಕನಸನ್ನು ಕಾಣುತ್ತಿದ್ದಾಗ, ಗಾಬರಿಪಡಿಸುವ ಸುದ್ದಿ ಬರೆಯೆಳೆಯುವಂತೆ ಜಮ್ಮು-ಕಾಶ್ಮೀರದ ಮೇಲೆ ಪಾಕಿಸ್ತಾನ ಆಕ್ರಮಣ ನಡೆಯಿತು. ಪಾಕಿಸ್ತಾನಿಪಡೆಗಳಿಗೆ ಹಿಂದೂಗಳನ್ನು ಅಪಸ್ಥಾನೀಯಗೊಳಿಸಿ, ಹಿಂಸಿಸಿ, ಹಿಂದೂದೇಶ ಕ್ಕೋಡಿಸಿದ ಪಾಕಿಸ್ತಾನಿಗಳು ನೇರ ಆಕ್ರಮಣಕ್ಕೆ ಮುಂದಾದರು. ಅತ್ಯಾಚಾರವೆಸಗಿದುರಿಸಲು ಸೇನೆಯನ್ನು ಕಳುಹಿಸಲು ಶಾಂತಿಸ್ವರೂಪ ಗಾಂಧೀಜಿಯವರೇ ಕೇಳಿಕೊಂಡರು. ಸೇನಾಧಿಕಾರಿ ಕರಿಯಪ್ಪನವರು ಕಾರ್ಯ ಮುಗಿಸಿದಾಗ ಮುಂಚೆಯೇ ಅವರಿಗೆ ತಡೆಯಾಜ್ಞೆ ಬಂತ್ತು. ಸಂಯುಕ್ತ ರಾಷ್ಟ್ರ ಸಂಘಕ್ಕೆ ಭಾರತ ದೂರಿತ್ತಿತು. ವಿವಾದ ಇನ್ನೂ ಮುಗಿದಿಲ್ಲ.

ಪಾಕಿಸ್ತಾನ ಪಡೆದರೆ ಸಾಲದು. ಪೂರ್ಣ ಭಾರತವನ್ನೇ ಮುಸ್ಲಿಂ ರಾಷ್ಟ್ರವನ್ನಾಗಿ ಪರಿವರ್ತಿಸ ಬೇಕೆಂಬ ಮಹತ್ವಾಕಾಂಕ್ಷೆಯಿಂದ ಮುಸ್ಲಿಂ ಲೀಗು ಕೆಂಪು ಕೋಟೆಯ ಮೇಲೆ ಅರ್ಧಚಂದ್ರ ಪತಾಕೆಯನ್ನು ಹಾರಾಡಿಸುವ ಕುತಂತ್ರವನ್ನು ನಡೆಸಿತು. ಭಾರತದ ಹಿರಿಯ ರಾಜಕಾರಣಿಗಳು ಒಂದೆಡೆ ಕಲೆತಿರುವಲ್ಲಿ ಜನಶ್ಚಿಲ್ಲರೆನ್ನೂ ಯುಸಪದನಕ್ಕಟ್ಟೆ ಆಡಳಿತ ಸೂತ್ರವನ್ನು ಕಸಿದುಕೊಳ್ಳುವ ಕನಸನ್ನು ಕಂಡ ಮುಸ್ಲಿಂ ಲೀಗು ಮನಸ್ಸಿನಲ್ಲೇ ಮುಸಿ ಮುಸಿ ನಗುತ್ತಿತ್ತು. ಅವರ ಈ ಹಂಚಿಕೆಯನ್ನು ಹುಡಿಪುಡಿ ಮಾಡಿದವರು ರಾಷ್ಟ್ರೀಯ ಸ್ವಯಂಸೇವಕ ಸಂಘದವರು. ಅವರು ಈ ಸಂಚನ್ನು ಸಕಾಲದಲ್ಲಿ ಭಾರತ ಸರಕಾರದ ಗಮನಕ್ಕೆ ತಂದು ಭಾರೀ ಗಂಡಾಂತರದಿಂದ ಭಾರತವನ್ನು ರಕ್ಷಿಸಿರುವದಾಗಿ ಭಾರತರತ್ನ ಭಗವಾನದಾಸರು ಡಿಲ್ಲಿಯ ಆಂಗ್ಲ ವಾರ ಪತ್ರಿಕೆ 'ಆರ್ಗನೈಸರ್'ಗೆ ಬರೆದಿರುವರು.

ಸ್ವಾತಂತ್ರ್ಯ ಅಥವಾ ದೇಶ ವಿಭಜನೆಯೊಂದಿಗೆ ಆಪಾಯದ ಅಗ್ನಿಯನ್ನು ತಿಲಿಯಲ್ಲಿಟ್ಟು ಕೊಂಡೆವು. ರಾಜಕಾರಣಿಗಳು ರಿಸಿದ ಈ ದಳ್ಳುರಿಯಲ್ಲಿ ಸಹಸ್ರಾರು ಮಂದಿ ದೇಶ ಬಾಂದವರು ಸುಟ್ಟು ಬೂದಿ ಆಗಬೇಕಾಯಿತು. ಆದರ ಮಿಂಚಿಗೆ ಮಹಾತ್ಮಾ ಮೋಹನದಾಸ್ ಕರಂ ಚಂದ ಗಾಂಧೀಜೀಯವರು ಬಲಿಯಾದರು. ಹಿಂಸೆಯ ಪಾಪ ಹಿಂಗಲಿಲ್ಲ. ಆದರ ಕೆನ್ನಾಲಗೆ ನಾಲ್ಕು ನಿಟ್ಟನಲ್ಲೂ ಜಾಜಲ್ಪಟ್ಟಿತು. ಆಗ ೧೯೪೭ರ ದಶಂಬರದಲ್ಲಿ ಆಗಿನ ಪ್ರಧಾನಿ ಪಂಡಿತ ಜವಾಹರಲಾಲ ನೆಹ್ರೂರವರು ಪಾಕಿಸ್ಥಾನದ ಪ್ರಧಾನಿ ಲಿಯಾಕತ್ ಅಲಿ ಖಾನರ ಬಳಿ–ಎರಡು ರಾಷ್ಟ್ರಗಳೂ 'ಯುದ್ಧಮಾಡುವದಿಲ್ಲ'ವೆಂಬ ಒಪ್ಪಂದಕ್ಕೆ ಒಪ್ಪಿ, ಎಲ್ಲಾ ವಿಧದ ವಾದಗಳನ್ನು, ಜಗಳಗಳನ್ನು ಶಾಂತಪೂರ್ಣ ರೀತಿಗಳಿಂದ ಅಂದರೆ ಮಾತುಕತೆಗಳ ಮೂಲಕ, ಮಧ್ಯಸ್ಥಿಕೆಯ ಮೂಲಕ ಅಥವಾ ಪಂಚಾಯತಿನ ಮೂಲಕ ತೀರಿಸಿಕೊಳ್ಳ ಬೇಕೆಂದು ಕೇಳಿಕೊಂಡರು. ಅವರ ಶಾಂತಿ ಯಾರಿಗೆ ಬೇಕಾಗಿದೆ? ಪಾಕಿಸ್ತಾನ ಅದನ್ನು ತಿರಸ್ಕರಿಸಿ, ತಮಗೆ ಬೇಕಾಗಿರುವದು ಸಂಧಾನವಲ್ಲ, ತಾವು ಕೇಳುವದನ್ನೆಲ್ಲಾ ಕೊಟ್ಟು ರಾಜಿಗೆ ಬರಬೇಕೆಂದು ತಿಳಿಸಿತು.

೧೯೫೦ ಎಪ್ರಿಲ್‌ನಲ್ಲಿ ಪಾಕಿಸ್ಥಾನದ ಪ್ರಧಾನಿ ಲಿಯಾಕತ್ ಅಲಿಖಾನರು ಡಿಲ್ಲಿಗೆ ಬಂದು ಜವಾಹರಲಾಲಜೀಯವರ ಬಳಿ ಲಿಯಾಕತ್-ನೆಹ್ರೂ ಒಪ್ಪಂದಕ್ಕೆ ಸಹಿ ಹಾಕಿದರು. ಆದರ ಪ್ರಕಾರ ಆಯಾಯ ದೇಶಗಳಲ್ಲಿರುವ ಜನರಿಗೆ ಭಾಷೆ–ಆರಾಧನೆಯ ಹಕ್ಕಿಗೆ ಧಕ್ಕೆತರಬಾರದು, ಮತಕ್ಕೂ ಪ್ರಜಾಹಕ್ಕಿಗೂ ಸಂಬಂಧ ಕಲ್ಪಿಸಕೂಡದೆನ್ನುವ ಅಂಶಗಳು ಅಡಗಿದ್ದುವು.

೧೯೫೦ ಜುಲ್ಯಾಯಲ್ಲಿ ಕಾಶ್ಮೀರ ವಿವಾದ ಪರಿಹಾರಕ್ಕಾಗಿ ಸಂಯುಕ್ತ ರಾಷ್ಟ್ರಸಂಘದ ಪಂಚಾಯತುದಾರ ಡಿಕ್ಸನರು ಲಿಯಾಕತ್ ಅಲಿಖಾನರನ್ನು ಭಾರತಕ್ಕೆ ಬರಮಾಡಿಸಿ ಮಾತುಕತೆ ನಡೆಸಿದಾಗ ಅವರ ಪರಿಚಾಲನೆಕ್ಕೆ ಪಾಕಿಸ್ತಾನ ಒಪ್ಪದ ಕಾರಣ, ಮಾತುಕತೆ ಮುರಿದುಹೋಯಿತು. ಅದಿಂದೂ ವಾದಗ್ರಸ್ತವೆನಿಸಿಕೊಂಡಿದೆ.

ಪಾಕಿಸ್ತಾನವು ವರ್ತಿಸಿದ ರೀತಿಯಿಂದ ಮನನೊಂದ ಶಾಂತಿಪ್ರಿಯ ಜವಾಹರಲಾಲಜೀಯವರು ೧೯೫೦ ನವಂಬರ ಇಪ್ಪತ್ತನಾಲ್ಕರಂದು "ರಣಬಂಪ್" ಒಪ್ಪಂದ ಒಡೆದು ಹೋಯಿತೆನ್ನಬೇಕಾಯಿತು.

ಹಾಗಿದ್ದರೂ ೧೯೫೧ ನವಂಬರ ನಾಲ್ಕರಂದು ಪುನಃ ಅದೇ ಮಂತ್ರವನ್ನು ಆವರು ಜಪಿಸಿದರು.

೧೯೫೧ ಎಪ್ರಿಲ್‌ನಲ್ಲಿ ಪಾಕಿಸ್ತಾನದ ಆಗಿನ ಪ್ರಧಾನಿ ಮಹಮ್ಮದ್ ಅಲಿಯವರು ನೆಹ್ರೂಜಿಯವರ ಮಾತಿಗೊಪ್ಪುವಂತೆ ನಟಿಸುತ್ತ, ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗಿ ಭಾರತ–ಪಾಕಿಸ್ತಾನಕ್ಕೆ ಜಂಟಿ–ರಕ್ಷಣೆಗೊಪ್ಪಬೇಕೆಂದು ಹೇಳಿದರು. ನೆಹ್ರೂಜೀಯವರು ಜುಲ್ಯಾ ಇಪ್ಪತ್ತೈದರಂದು ಪಾಕಿಸ್ತಾನದಲ್ಲಿ ಮಹಮ್ಮದಾಲಿಯವರನ್ನು ಸಂಧಿಸಿ ಎಲ್ಲಾ ವಿವಾದಗಳನ್ನು ಮಾತುಕತೆಗಳ ಮೂಲಕ ಬಗೆಹರಿಸಿಕೊಳ್ಳುವದಾಗಿ ಜಂಟಿ ಹೇಳಿಕೆಯನ್ನಿತ್ತರು.

(ಇಪ್ಪತ್ತೆರಡನೇ ಪುಟ ನೋಡಿರಿ)

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ನಮ್ಮ ಇತ್ತೀಚಿನ ಕೆಲವು ಕನ್ನಡ ಪ್ರಕಟನೆಗಳು

	ರೂ.	ಪೈ.
1) ಸಾಹಿತ್ಯ ವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು —ರಂ. ಶ್ರೀ ಮುಗಳಿ	3	00
2) ಮಹಾಭಾರತ: ಪೌಲೋಮ—ಆಸ್ತೀಕ ಪರ್ವಗಳು —ಸಂ. ಕೆ. ಜಿ. ಶಾಸ್ತ್ರಿ	8	00
3) ರೆವರೆಂಡ್ ಚೆನ್ನಪ್ಪ ಉತ್ತಂಗಿ: ಜೀವನ ಹಾಗೂ ಕೃತಿಗಳು	2	00
4) ತಿರುಮಲಾರ್ಯ ಮತ್ತು ಚಿಕ್ಕ ದೇವರಾಜ ಒಡೆಯರು —ಎಲ್. ಬಸವರಾಜು	4	00
5) ಪಟ್‌ಸ್ಥಲ ಪ್ರಭೆ (ದ್ವಿ.ಮು.)—ಸಂ.ಆರ್. ಸಿ. ಹಿರೇಮಠ	10	00
6) ಜೀವನ ಜೋಕಾಲಿ:ಚೌಪದನಗಳು —ಸಂ. ಎಂ. ಎಸ್; ಸುಂಕಾಪುರ	4	00
7) ಜೀವನ ಜೋಕಾಲಿ : ಸರಸ–ವಿರಸ —ಸಂ. ಎಂ. ಎಸ್. ಸುಂಕಾಪುರ	4	00
8) ಜೀವನ ಜೋಕಾಲಿ:ಗರತಿಯರ ಗರಿಮೆ —ಸಂ. ಎಂ. ಎಸ್. ಸುಂಕಾಪುರ	5	00
9) ಶಿಕ್ಷಣ: ಆಧಾರಗಳು ಮತ್ತು ಪ್ರಥಮ ತತ್ವಗಳು —ಅನು: ವಿ. ಕೆ. ಜವಳಿ	12	00
10) ವೀರಶೈವ ಚಿಂತಾಮಣಿ —ಸಂ: ಆರ್. ಸಿ. ಹಿರೇಮಠ	7	00
11) ವಿಶಿಷ್ಟಾದ್ವೈತ ಪಟ್‌ಸ್ಥಲ ಸಂ: ಆರ್. ಸಿ. ಹಿರೇಮಠ	14	00

—ಇವುಗಳಲ್ಲದೆ ಉಪನ್ಯಾಸ ಗ್ರಂಥಮಾಲೆಯ 25ಪೈಸೆ ಬೆಲೆಯ 150 ಕಿರುಹೊತ್ತಗೆಗಳು.

ವಿವರಗಳಿಗೆ ಬರೆಯಿರಿ

ನಿರ್ದೇಶಕರು, ವ್ಯಾಸಂಗ ವಿಸ್ತರಣ-ಪ್ರಕಟನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೩

ಸಂಸ್ಕೃತದಲ್ಲಿ ನಾಟಕಗಳನ್ನು ಬರೆದು ಸುಪ್ರಸಿದ್ಧರಾದವರಲ್ಲಿ ಶ್ರೀ ಹರ್ಷ ಚಕ್ರವರ್ತಿಯೊಬ್ಬನು. ಇವನು ಮಹಾರಾಜನಾಗಿ ಉತ್ತರಾಪಥವನ್ನೆಲ್ಲಾ ಗೆದ್ದು ಆಳಿಕೊಂಡಿದ್ದಂತೆ, ಸಾಹಿತ್ಯ ಸಾಮ್ರಾಜ್ಯದಲ್ಲೂ ಹಲವು ಕವಿಗಳಿಗೆ ಆಶ್ರಯದಾತನೂ ಸ್ವಯಮೇವ ನಾಟಕಕಾರನೂ ಇದ್ದನು. ಇವನನ್ನು ಬಾಣ ಮಹಾಕವಿಯು 'ಹರ್ಷ ಚರಿತ'ವೆಂಬ ಉದ್ಗ್ರಂಥವನ್ನೆತ್ತಿ ಬರೆದಿದ್ದಾನೆ. (ಈ ರಾಜನು ದಕ್ಷಿಣಾಪಥಕ್ಕೆ ನಂಡೆತ್ತಿ ಬರುವಾಗ ಪುಲಿಕೇಶಿಯು ಕಡೆಗಟ್ಟಿದ್ದನಂತರಿಂದ ದಕ್ಷಿಣ ಭಾರತದಲ್ಲಿ ಇವನಾಳಿಕೆಯಿದ್ದಿಲ್ಲ. ಪರಂತು ಈತನ ಕೃತಿಗಳನ್ನು ಎಲ್ಲರೂ ಗೌರವಿಸಿ ಆಸ್ವಾದಿಸುತ್ತಿದ್ದಿಪ್ಪರು).

ಇವನು ಬರೆದ ಪ್ರಿಯದರ್ಶಿಕಾ, ರತ್ನಾವಳೀ, ನಾಗಾನಂದಗಳೆಂಬ ಮೂರು ಕೃತಿಗಳನ್ನು ಆವಿಷ್ಕೃತ ಮಂದಿ ಒಂದೊಂದಾಗಿ ಅನುವಾದಿಸಿದ್ದಾರೆ. ಆದರೆ, ಇದೀಗ ಪಂಡಿತ ಜೆ. ವಿ. ಕವಲಿಯವರು ಈ ಮೂರು ಕೃತಿರತ್ನಗಳನ್ನು ಕನ್ನಡಿಸಿಸ್ಪಾರೆ. (ಪ್ರಾಧ್ಯಾಪಕರಾದ ಶ್ರೀ ಎಸ್. ವಿ. ಪರಮೇಶ್ವರ ಭಟ್ಟರು ಕಾಲಿದಾಸನ ಮೂರು ಕಾವ್ಯ ಹಾಗೂ ಮೂರು ನಾಟಕಗಳನ್ನು ಕನ್ನಡಿಸಿದ್ದು ಇಲ್ಲಿ ನೆನೆಯು ಬೇಕು). ಪಂಡಿತ ಕವಲಿಯವರು ಹಲವಾರು ವರ್ಷ ಧಾರವಾಡದ ಸಾಧನ ಕೇರಿಯಲ್ಲಿ ಇದ್ದರೂ ಚಿಕ್ಕ ದೊಡ್ಡ ತರದಲ್ಲಿ ನೂರಯ್ವತ್ತಕ್ಕೂ ಮಿಕ್ಕಿ ಕತೆಗಳ ಸಂಗ್ರಹ, ನಾಟಕ. (ರೇಡಿಯೋ ನಾಟಕ,) ಪ್ರಹಸನಾದಿಗಳನ್ನು ಬರೆದವರು. 'ಕಸ್ತೂರಿ ಕೋಶ'ವೆಂಬ ಕನ್ನಡದ ನಿಘಂಟುವಿನ ರಚಕರಾಗಿದ್ದಾರೆ. ನಾಟಕ ಕಂಪೆನಿಯನ್ನು ಕಟ್ಟಿ ಕನ್ನಡದಲ್ಲಿ ಸಂಚರಿಸಿದವರು. ಶ್ರೀಯುತರು ಸಂಸ್ಕೃತ ಹಾಗೂ ಕನ್ನಡದಲ್ಲಿ ಉದ್ದಾಮ ಪಂಡಿತರಿದ್ದಾರೆ. ಸುರತ್ಕಲ್ಲಿನಲ್ಲಿರುವ ಕರ್ನಾಟಕ ಪ್ರಾದೇಶಿಕ ತಾಂತ್ರಿಕ ಕಲಾಶಾಲೆಯಲ್ಲಿ ಅಧ್ಯಾಪಕರಾಗಿರುವ ಶ್ರೀ ವಿಕ್ರಮ ಕವಲಿಯವರು ಶ್ರೀಯುತರ ಪುತ್ರರಲ್ಲೊಬ್ಬರು. ಕನ್ನಡದ ಆಕಾಶವಾಣಿ (ಬೆಂಗಳೂರು) ನಿಲಯದಲ್ಲಿರುವ ಶ್ರೀ ವಸಂತ ಕವಲಿಯವರು ಶ್ರೀಯುತರ ಹಿರಿಯ ಮಗನು. ಪಂಡಿತ ಕವಲಿಯವರ ಹೆಣ್ಣು ಮಕ್ಕಳಲ್ಲಬ್ಬರು ವಿದ್ಯಾಕ್ಷೇತ್ರದಲ್ಲಿ ಪ್ರಸಿದ್ಧೆಯರು, ಒಬ್ಬಾಕೆ ದೊಡ್ಡ ಬಿಮಾನುದಾರರ ಪತ್ನಿಯಾಗಿದ್ದಾಳೆಂದರೆ, ಇವರ ಸಂತತಿಯೆಲ್ಲಾ ವಿದ್ಯಾರಂಗದಲ್ಲಿ ಮುನ್ನಡೆಯಿಟ್ಟವರೆಂದು ಹೇಳಲಡ್ಡಿಯಿಲ್ಲ. ಶ್ರೀ ಕವಲಿಯವರು ಇದೀಗ ಇಳಿವಯಸ್ಸಿನಲ್ಲೂ (73ರಹರೆಯದಲ್ಲೂ) ಈ ತರದಲ್ಲಿ ಸಂಸ್ಕೃತ ನಾಟಕಗಳ ಕನ್ನಡಾನುವಾದ ಕಾರ್ಯಕ್ಕೆಳಸಿದುದು ಕನ್ನಡಿಗರೆಲ್ಲರೂ ಸ್ವಾಗತಿಸತಕ್ಕ ಉತ್ತಮ ಕಾರ್ಯವಾಗಿದೆಯೆಂದರೆ ತಪ್ಪಾಗದು. ಮೈಸೂರು ರಾಜ್ಯದ ಸಾಹಿತ್ಯ ಮತ್ತು ಸಂಸ್ಕೃತ ಅಭಿವೃದ್ಧಿ ಖಾತೆಯು ಈ ಮೂರು ಕೃತಿಗಳ ಮುದ್ರಣಕ್ಕೆ ಸಹಕಾರವಿತ್ತಿದೆ, ಹಾಗೇ ಬೇರೆ ಮಹನೀಯರೂ ನೆರವಾಗಿದ್ದಾರೆ. ಈ ವಿಚಾರ ವಿವರವಾಗಿ ಈ ಸಂಪುಟದಲ್ಲಿ ಹೇಳಲಾಗಿದೆ. ಇಂತಹ ಕೃತಿರತ್ನವು ಕನ್ನಡದ ಕಲಾಶಾಲೆಗಳಲ್ಲಿ ಪುಸ್ತಕಾಗಾರಗಳಲ್ಲಿ, ವಾಚನಾಲಯಗಳಲ್ಲಿ ಶಾಶ್ವತವಾಗಿ ಸಂಗ್ರಾಹ್ಯವಾಗಿ ಇರತಕ್ಕುದು!

(ಎರಡು ವರ್ಷದ ಹಿಂದೆ ಶ್ರೀಯುತರು ಅನುವಾದಿಸಿದ ನಾಗಾನಂದವೊಂದು ಕರ್ನಾಟಕ ವಿಶ್ವವಿದ್ಯಾಲಯದ ಬಿ. ಎ. ತರಗತಿಯ ಉಪಪಠ್ಯವಾಗಿದೆ.) ಈ ಬಾರಿ ನಿರೂಪಿಸಿದ ಈ ಮೂರು ಕೃತಿಗಳ ಬಗೆಗೆ ಹೆಚ್ಚು ಬರೆಯುವ ಬದಲು, ಈ ಕೃತಿಗಳ ಅನುವಾದಗಳ-ಕೆಲವು ಸಾಲುಗಳನ್ನೆ ವಾಚಕರ ಮುಂದಿಡುವೆನು. ಇದರಿಂದಾಗಿ ಈ ಕೃತಿಗಳ ಸುಭಗತೆ, ಸಾರಲ್ಯ ಹಾಗೂ ಮೇಲ್ಮೆ ತಾನಾಗಿ ವ್ಯಕ್ತವಾಗುತ್ತದೆ.

ಶ್ರೀ ಹರ್ಷ-ರೂಪಕ ಶ್ರೀ

(ಪಂಡಿತ ಕವಲಿಯವರ ಅನುವಾದಗಳು)

ಶ್ರೀ ವಿದ್ವಾನ್ ಕೆ. ವೆಂಕಟ್ರಾಯಾಚಾರ್ಯ

ಹರ್ಷ ಚಕ್ರವರ್ತಿ ಪ್ರಿಯದರ್ಶಿಕೆ, ನಾಗಾನಂದ ಮತ್ತು ರತ್ನಾವಳಿ ರೂಪಕಗಳನ್ನು ಬರೆದನು. ಈ ಮೂರನ್ನೂ ಶ್ರೀ ಪಂಡಿತ ಕವಲಿಯವರು ಈಗ ಒನ್ನುವಾಗಿ ಕನ್ನಡಿಸಿದ್ದಾರೆ. ಈ ಅನುವಾದಿತ ಕೃತಿಗಳ ಮೇಲೊಂದು ಕ್ಷಿಕರಣ ಬೀರಿ ಅವುಗಳ ಪರಿಚಯವನ್ನು ಶ್ರೀ ಆಚಾರ್ಯರು ಮಾಡಿಕೊಟ್ಟಿದ್ದಾರೆ.

೧. ನಾಂದಿಯ ಪದ್ಯಗಳು:

ಪರಿಣಯ ಧೂಮಮಿಶ್ರಿದುದಿವ ಕಣ್
ತಿರಿಪ್ಪೈಗುನ್ಮೈದೆ. ನಾತಿಯಂ |
ಪಿನವಪಲೋಕದೊಳ್ ಬಿದಿಗೆ ನಾಚ್ಚಿ
ನತಾನನೆ ಗಾಂಗ ವತೆಳಿಯಂ |
ಚರಣನಖೇಂದು ದರ್ಪಣದೊಳೀಕ್ಷಿಸಿ
ಮಚ್ಚರಿಸುತ್ತೆ ಶಾಥನಾ|
ಕರಮರೆ ಸೋಂಕಿಂ ನವಿರನಾಂತಳೆ
ಪಾಲಿಕೆ ಗೌರಿ ಸರ್ಪಿರಂ.|| (ಪ್ರಿಯದರ್ಶಿಕೆಯಲ್ಲಿ)

ಶಿವನ ಸೇವೆಯೊಳಿಗಜೆ ತುದಿಗಾಲಿಳಿಡ
ನಿಂತಡಿಗಡಿಗೆ ಪಾ !
ಮೊಲೆ ಹೊರಗೆ ಬ್ಲಾಗುತ್ತೆ, ಮುಳ್ಳಗ್ಗಾಸೆ
ಕಂಗಳಿಗೆಟಕಲು !
ನನಿರು ಬೆಮರಿಳಿ ನಾಣ್ಚಿ ನಡುಗುವ
ಕೈಗಳಿಂ ಮುಡಿಗೆರಚಲು
ನಡುವೆ ಸುರಿದಾ ಪೂಜೆಗಳ
ನಿಮ್ಮನ್ನು ಪೊರೆಗಾವಾಗಲು|| (ರತ್ನಾವಳಿಯಲ್ಲಿ)

ತುದಿಗಾಲ್ನಿಂದರೆ ಬಳ್ಳ ಜಾಗೆ ಮೊಲೆ
ಬಿಜ್ಪೆಂ ನೋಪ್ಪ ಮುಳ್ಕಣ್ಣ ಬೇ |
ಟದೆ ನಾಣ್ ಪೊಂಪುಳಿ ಸೀದೆಗಳ್
ಪೊರೆಯೆ
ಕಂಪಂಗೊಂಡು ಪೈವಾರ್ಜನಾ |

(ಇಪ್ಪತ್ತೊಂದನೇ ಪುಟ ನೋಡಿರಿ)

ಹೆಚ್ಚು ಹಾಲು ಉತ್ಪಾದನೆಗೆ
'ಮಿಲ್ಕ್ ಕ್ಯಾನ್' ಗುರ್ತಿನ
ಆಹಾರ ಸತ್ವ ಹಾಗೂ ಖನಿಜ ವಸ್ತುಗಳಿಂದ ಸಮೃದ್ಧವಾದ
ದನಗಳ ಮೇವನ್ನೂ
ಮತ್ತು
ಮೊಟ್ಟೆಗಳ ಉತ್ಪನ್ನವನ್ನು
ಹೆಚ್ಚಿಸಲು
'ಬ್ಯಾನ್ಸ್ಟೆಟ್' ಗುರ್ತಿನ
ಕೋಳಿಗಳ ಮೇವನ್ನೂ
ಉಪಯೋಗಿಸಿರಿ.

ತಯಾರಕರು:
ಮೈಸೂರು ಪೀಡ್ಸ್ ಪ್ರೈವೇಟ್ ಲಿಮಿಟೆಡ್
283 – 284, ಹಳೇತರಗು ಪೇಟೆ,
ಬೆಂಗಳೂರು –2 A.

ದಾಸ್ತಾನುದಾರರು:

1) ಮೆ॥ ಜೈ ಭಾರತ್ ಮಿಲ್ಸ್
ಉಡುಪಿ.

2) ಮೆ॥ ಜಿ. ಜಿ. ಶ್ರೀನಿವಾಸ ಪ್ರಭು
ಬಂದರ್, ಮಂಗಳೂರು–1.

ಸಂಸ್ಕೃತದಲ್ಲಿ ನಾಟಕಗಳನ್ನು ಬರೆದು ಸುಪ್ರಸಿದ್ಧರಾದವರಲ್ಲಿ ಶ್ರೀ ಹರ್ಷ ಚಕ್ರವರ್ತಿಯೊಬ್ಬನು. ಇವನು ಮಹಾರಾಜನಾಗಿ ಉತ್ತರಾಪಥವನ್ನೆಲ್ಲಾ ಗೆದ್ದು ಆಳಿಕೊಂಡಿದ್ದಂತೆ, ಸಾಹಿತ್ಯ ಸಾಮ್ರಾಜ್ಯದಲ್ಲೂ ಹಲವು ಕವಿಗಳಿಗೆ ಆಶ್ರಯದಾತೃವೂ ಸ್ವಯಮೇವ ನಾಟಕಕಾರನೂ ಇದ್ದನು. ಇವನನ್ನು ಬಾಣ ಮಹಾಕವಿಯು 'ಹರ್ಷ ಚರಿತ'ವೆಂಬ ಉದ್ಗ್ರಂಥವನ್ನೆತ್ತಿ ಬರೆದಿದ್ದಾನೆ. (ಈ ರಾಜನು ದಕ್ಷಿಣಾಪಥಕ್ಕೆ ದಂಡೆತ್ತಿ ಬರುವಾಗ ಪುಲಿಕೇಶಿಯು ಹೆಡೆಗಟ್ಟಿದ್ದುದರಿಂದ ದಕ್ಷಿಣ ಭಾರತದಲ್ಲಿ ಇವನಾಳಿಕೆಯಿದ್ದಿಲ್ಲ. ಪರಂತು ಈತನ ಕೃತಿಗಳನ್ನು ಎಲ್ಲರೂ ಗೌರವಿಸಿ ಆಸ್ವಾದಿಸುತ್ತಿದ್ದರು).

ಇವನು ಬರೆದ ಪ್ರಿಯದರ್ಶಿಕಾ, ರತ್ನಾವಳೀ, ನಾಗಾನಂದಗಳೆಂಬ ಮೂರು ಕೃತಿಗಳನ್ನು ಅನೇಕ್ಕೋ ಮಂದಿ ಒಂದೊಂದಾಗಿ ಅನುವಾದಿಸಿವ್ವಾರೆ. ಆದರೆ, ಇದೀಗ ಪಂಡಿತ ಜೆ. ವಿ. ಕವಲಿಯವರು ಈ ಮೂರು ಕೃತಿರತ್ನಗಳನ್ನು ಕನ್ನಡಿಸಿವ್ವಾರೆ. (ಪ್ರಾಧ್ಯಾಪಕರಾದ ಶ್ರೀ ಎಸ್. ವಿ. ಪರಮೇಶ್ವರ ಭಟ್ಟರು ಕಾಲಿದಾಸನ ಮೂರು ಕಾವ್ಯ ಹಾಗೂ ಮೂರು ನಾಟಕಗಳನ್ನು ಕನ್ನಡಿಸಿದ್ದು ಇಲ್ಲಿ ನೆನೆಯು ಬೇಕು). ಪಂಡಿತ ಕವಲಿಯವರು ಹಲವಾರು ವರ್ಷ ಧಾರವಾಡದ ಸಾಧನ ಕೇರಿಯಲ್ಲಿ ಇದ್ದರೂ ಚಿಕ್ಕ ದೊಡ್ಡ ತರದಲ್ಲಿ ನೂರಯ್ವತ್ತಕ್ಕೂ ಮಿಕ್ಕಿ ಕತೆಗಳ ಸಂಗ್ರಹ, ನಾಟಕ. (ರೇಡಿಯೋ ನಾಟಕ,) ಪ್ರಹಸನಾದಿಗಳನ್ನು ಬರೆದವರು. 'ಕನ್ನಾರಿ ಕೋಶ'ವೆಂಬ ಕನ್ನಡದ ನಿಘಂಟುವಿನ ರಚಕರಾಗಿದ್ದಾರೆ. ನಾಟಕ ಕಂಪೆನಿಯನ್ನು ಕಟ್ಟಿ ಕನ್ನಡದಲ್ಲಿ ಸಂಚರಿಸಿದವರು. ಶ್ರೀಯುತರು ಸಂಸ್ಕೃತ ಹಾಗೂ ಕನ್ನಡದಲ್ಲಿ ಉದ್ದಾಮ ಪಂಡಿತರಿದ್ದಾರೆ. ಸುರತ್ಕಲ್ಲಿನಲ್ಲಿರುವ ಕರ್ನಾಟಕ ಪ್ರಾದೇಶಿಕ ತಾಂತ್ರಿಕ ಕಲಾಶಾಲೆಯಲ್ಲಿ ಅಧ್ಯಾಪಕರಾಗಿರುವ ಶ್ರೀ ವಿಕ್ರಮ ಕವಲಿಯವರು ಶ್ರೀಯುತರ ಪುತ್ರರಲ್ಲೊಬ್ಬರು. ಕನ್ನಡದ ಆಕಾಶವಾಣಿ (ಬೆಂಗಳೂರು) ನಿಲಯದಲ್ಲಿರುವ ಶ್ರೀ ವಸಂತ ಕವಲಿಯವರು ಶ್ರೀಯುತರ ಹಿರಿಯ ಮಗನು. ಪಂಡಿತ ಕವಲಿಯವರ ಹೆಣ್ಣು ಮಕ್ಕಳಲ್ಲಬ್ಬರು ವಿದ್ಯಾಕ್ಷೇತ್ರದಲ್ಲಿ ಪ್ರಸಿದ್ಧೆಯರು. ಒಬ್ಬಾಕೆ ದೊಡ್ಡ ಜಮೀನುದಾರರ ಪತ್ನಿಯಾಗಿದ್ದಾಳೆಂದರೆ, ಇವರ ಸಂತತಿಯೆಲ್ಲಾ ವಿದ್ಯಾರಂಗದಲ್ಲಿ ಮುನ್ನಡೆಯಿಟ್ಟವರೆಂದು ಹೇಳಲಡ್ಡಿಯಿಲ್ಲ. ಶ್ರೀ ಕವಲಿಯವರು ಇದೀಗ ಇಳಿವಯಸ್ಸಿನಲ್ಲೂ (73ರಹರೆಯದಲ್ಲೂ) ಈ ತರದಲ್ಲಿ ಸಂಸ್ಕೃತ ನಾಟಕಗಳ ಕನ್ನಡಾನುವಾದ ಕಾರ್ಯಕ್ಕೆಳಸಿದುದು ಕನ್ನಡಿಗರೆಲ್ಲರೂ ಸ್ವಾಗತಿಸತಕ್ಕ ಉತ್ತಮ ಕಾರ್ಯವಾಗಿದೆಯೆಂದರೆ ತಪ್ಪಾಗದು. ಮೈಸೂರು ರಾಜ್ಯದ ಸಾಹಿತ್ಯ ಮತ್ತು ಸಂಸ್ಕೃತ ಅಭಿವೃದ್ಧಿ ಖಾತೆಯು ಈ ಮೂರು ಕೃತಿಗಳ ಮುದ್ರಣಕ್ಕೆ ಸಹಕಾರವಿತ್ತಿದೆ, ಹಾಗೇ ಬೇರೆ ಮಹನೀಯರೂ ನೆರವಾಗಿದ್ದಾರೆ. ಈ ವಿಚಾರ ವಿವರವಾಗಿ ಈ ಸಂಪುಟದಲ್ಲಿ ಹೇಳಲಾಗಿದೆ. ಇಂತಹ ಕೃತಿರತ್ನವು ಕನ್ನಡದ ಕಲಾಶಾಲೆಗಳಲ್ಲಿ ಪುಸ್ತಕಾಗಾರಗಳಲ್ಲಿ, ವಾಚನಾಲಯಗಳಲ್ಲಿ ಪಾಠ್ಯವಾಗಿ ಸಂಗ್ರಾಹ್ಯವಾಗಿ ಇರತಕ್ಕುದು!

(ಎರಡು ವರ್ಷದ ಹಿಂದೆ ಶ್ರೀಯುತರು ಅನುವಾದಿಸಿದ ನಾಗಾನಂದವೊಂದು ಕರ್ನಾಟಕ ವಿಶ್ವವಿದ್ಯಾಲಯದ ಬಿ. ಎ. ತರಗತಿಯ ಉಪಪಠ್ಯವಾಗಿದೆ.) ಈ ಬಾರಿ ನಿರೂಪಿಸಿದ ಈ ಮೂರು ಕೃತಿಗಳ ಬಗೆಗೆ ಹೆಚ್ಚು ಬರೆಯುವ ಬದಲು, ಈ ಕೃತಿಗಳ ಅನುವಾದಗಳ–ಕೆಲವು ಸಾಲುಗಳನ್ನೆ ವಾಚಕರ ಮುಂದಿಡುವೆನು. ಇದರಿಂದಾಗಿ ಈ ಕೃತಿಗಳ ಸಭ್ಯತೆ, ಸಾರಲ್ಯ ಹಾಗೂ ಮೇಲ್ಮೈ ತಾನಾಗಿ ಸ್ಫುಟಿಯುತ್ತದೆ.

೧. ನಾಂದಿಯ ಪದ್ಯಗಳು:

ಪರಿಣಯ ಧೂಮಡಿಸಿಯುವಿನ ಕಣ್
ಸರಿರಶ್ಮಿಯನ್ಸೈದೆ. ನಾಂತಿಯಂ |
ವರಿನವಲೋಕದೊಳ್ ಬಿದಿಗೆ ನಾನ್ಜಿ
ನತಾನನೆ ಗಾಂಗ ವತೆಳಿಯಂ |
ಚರಣನಖೇಂದು ದರ್ಪಣದೊಳೀಕ್ಷಿಸಿ
ಮಚ್ಚರಿಸುತ್ತೆ ಶಾಥನಾ|
ಕರದುರೆ ಸೋಂಕಿನಿಂ ನವಿರನಾಂತಳೆ
ಪಾಲಿಕೆ ಗೌರಿ ಸರ್ವಾರಂ.|| (ಪ್ರಿಯದರ್ಶಿಕೆಯಲ್ಲಿ)

ಶಿವನ ಸೇವೆಯೊಳಿಗಡೆ ತುದಿಗಾಲಿಕಿಡೆ
ನಿಂತಡಿಗಡಿಗೆ ಜಾ !
ಮೊಲೆ ಹೊರಗೆ ಬ್ಯಾಗುತ್ತೆ, ಮುಕ್ಯಣ್ಣಾಸೆ
ಕಂಗಳಗೆಟುಕಲು !
ನವಿರು ಬೆಮರಲಿ ನಾಚಿ ನಡುಗುವ
ಕೈಗಳಂ ಮುಡಿಗೆರಚಲು
ನಡುವೆ ಸುರಿದಾ ಪೂಜೊಗಬೆ
ನಿಮ್ಮನ್ನು ಪೊರೆಗಾವಾಗಲು|| (ರತ್ನಾವಳಿಯಲ್ಲಿ)

ತುದಿಗಾಲ್ನಿಂದರೆ ಬಳ್ಳ ಬಾಗೆ ಮೊಲೆ
ಬಿಣ್ಪೆಂ ನೋಳ್ಪ ಮುಕ್ಯಣ್ಣ ಬೇ |
ಟದೆ ನಾಣ್ ಪೊಂಪುಳಿ ಸೇದೆಗಳ್
ಪೊರೆಯೆ
ಕಂಪಂಗೊಂಡು ಶೈವಾರ್ಚನಾ ।

(ಇಪ್ಪತ್ತೊಂದನೇ ಪುಟ ನೋಡಿರಿ)

ಶ್ರೀ ವಿದ್ವಾನ್ ಕೆ. ವೆಂಕಟ್ರಾಯಾಚಾರ್ಯ

ಶ್ರೀ ಹರ್ಷ-ರೂಪಕ ಶ್ರೀ

(ಪಂಡಿತ ಕವಲಿಯವರ ಅನುವಾದಗಳು)

ಹರ್ಷ ಚಕ್ರವರ್ತಿ ಪ್ರಿಯದರ್ಶಿಕೆ, ನಾಗಾನಂದ ಮತ್ತು ರತ್ನಾವಳಿ ರೂಪಕಗಳನ್ನು ಬರೆದನು. ಈ ಮೂರನ್ನೂ ಶ್ರೀ ಪಂಡಿತ ಕವಲಿಯವರು ಈಗ ಒನ್ನುವಾಗಿ ಕನ್ನಡಿಸಿದ್ದಾರೆ. ಈ ಅನುವಾದಿತ ಕೃತಿಗಳ ಮೇಲೊಂದು ಕ್ಷಿಕರಣ ಬೀರಿ ಅವುಗಳ ಪರಿಚಯವನ್ನು ಶ್ರೀ ಆಚಾರ್ಯರು ಮಾಡಿಕೊಟ್ಟಿದ್ದಾರೆ.

ಹೆಚ್ಚು ಹಾಲು ಉತ್ಪಾದನೆಗೆ
'ಮಿಲ್ಕ್ ಕ್ಯಾನ್' ಗುರ್ತಿನ
ಆಹಾರ ಸತ್ವ ಹಾಗೂ ಖನಿಜ ವಸ್ತುಗಳಿಂದ ಸಮೃದ್ಧವಾದ
ದನಗಳ ಮೇವನ್ನೂ
ಮತ್ತು
ಮೊಟ್ಟೆಗಳ ಉತ್ಪನ್ನವನ್ನು
ಹೆಚ್ಚಿಸಲು
'ಬ್ಯಾನ್ಸ್ಟೆಟ್' ಗುರ್ತಿನ
ಕೋಳಿಗಳ ಮೇವನ್ನೂ
ಉಪಯೋಗಿಸಿರಿ.

ತಯಾರಕರು:
ಮೈಸೂರು ಪೀಡ್ಸ್ ಪ್ರೈವೇಟ್ ಲಿಮಿಟೆಡ್
283 – 284, ಹಳೇತರಗು ಪೇಟೆ,
ಬೆಂಗಳೂರು –2 A.

ದಾಸ್ತಾನುದಾರರು:

1) ಮೆ|| ಜೈ ಭಾರತ್ ಮಿಲ್ಸ್
ಉಡುಪಿ.

2) ಮೆ|| ಜಿ. ಜಿ. ಶ್ರೀನಿವಾಸ ಪ್ರಭು
ಬಂದರ್, ಮಂಗಳೂರು–1.

ಜೀವನದಲ್ಲಿ ನಮಗೆ ತಿಳಿಯದೇ ಎಷ್ಟೋ ಘಟನೆಗಳು ನಡೆದು ಹೋಗುತ್ತವೆ. ಹೆಚ್ಚು ವಿಚಾರಮಾಡಿ, ನಮ್ಮ ದಿನಚರಿಯಲ್ಲಿ ಗುರುತಿಸಿ ಹೀಗೇ ನಡೆಯಬೇಕು-ಇದನ್ನೇ ಮಾಡಬೇಕು ಎಂದೇನೋ ಹಲವಾರು ಯೋಚನೆಗಳು ತುಂಬಿಕೊಂಡಿರುತ್ತೇವೆ ನಮ್ಮದೆನ್ನುವ ಮೆದುಳಿನಲ್ಲಿ!

ಮನುಷ್ಯ ಸ್ವಭಾವದಂತೆ ಪರಿಚಿತರನ್ನು ಕಂಡಾಗ-ಗಂಡು, ಗಂಡಸ್ಸನ್ನು ಕಂಡರೆ ಕೈಕುಲುಕಿಯೋ, ಪುಟ್ಟಾಸ್ತ್ರೀಯನ್ನೋ, ಪುಟ್ಟಿ ಕೊಂಡೋ ತನ್ನ ಸ್ನೇಹಿತೆ ಗಳಿತ್ತನ್ನು ಭದ್ರಪಡಿಸಿಕೊಳ್ಳುವುದು ರೂಢಿಯೇ! ಇದೇ ನೂತು ಹೆಣ್ಣಿಗೂ ಅನ್ವಯಿಸುತ್ತದೆ. ಇಲ್ಲಿ ನಕ್ಕು, ಇನ್ನೂ ಮುಂದೆ ಹೋದಗೆ ಕೈಕುಲುಕುವುದಷ್ಟೆ ಅಲ್ಲದೆ. ಮೈಯನ್ನೂ ಕುಲುಕಿ ದಾರಿಯ ನೆನಪು ಮನೆಯ ನೆನಪು ಕೈಯಲ್ಲಿದ್ದ ಮಗುವಿನ ನೆನಪೂ ಮರೆತು ಹರಟೆಗೆ ನಿಂತರೆ-ಅದು ಅಂಥ ಮಹಾ ಸುದ್ದಿಯಲ್ಲ!

ಆದರೆ ಪರಿಚಯವಿಲ್ಲದೆ, ಸಂಬಂಧವಿಲ್ಲದೆ, ಜೀವನದಲ್ಲಿ ಒಂದು ಬಾರಿಯೂ ಒಬ್ಬರ ಮುಖ ಒಬ್ಬರು ನೋಡದೆ, ಕಂಡ ಕೆಲವು ಕ್ಷಣದಲ್ಲಿ ತೀರ ಪರಿಚಿತರಾಗುವ, ಅಪರೂಪದ ಅಪರಿಚಿತರ ಒಂದೆರಡು ಸಿಹಿ ನೆನೆಪುಗಳನ್ನು ಇಲ್ಲಿ ಮೂಡಿಸಿದ್ದೇನೆ.

ಕೆಲವು ವರ್ಷಗಳ ಹಿಂದೆ ಕೊಲ್ಹಾಪುರಕ್ಕೆ ನಮ್ಮ ಪರಿವಾರ ಹೊರಟಿತು. ಐತಿಹಾಸಿಕ ಹಿನ್ನೆಲೆಯಲ್ಲಿ ಮೆರೆದ ಕೊಲ್ಹಾ

ಶ್ರೀಮತಿ ಗೀತಾಕುಲಕರ್ಣಿ

ಅಪರಿಚಿತರು

ಹೊರಪ್ರೋಡುವ ಬಸ್ಸು, ರೇಲುಗಳಲ್ಲಿ, ಪರಪ್ರಾಂತಗಳಲ್ಲಿ ಅಪರಿಚಿತರ ಭೇಟಿಯಾಗುತ್ತದೆ. ಈ ಭೇಟಿಯು ಚಿರಪರಿಚಯದಲ್ಲಿ ಪರಿಣಾಮ ಹೊಂದುವುದುಂಟು ಶ್ರೀಮತಿ ಕುಲಕರ್ಣಿಯವರು ಸದರ್ಥದಲ್ಲಿ ಅಪರಿಚಿತರ ಭೆಟ್ಟಿಯ ಅನುಭವಗಳನ್ನು ಇಲ್ಲಿ ಮುಂದಿಟ್ಟಿದ್ದಾರೆ.

ಪುರ-ಜಿಲ್ಲೆಯ ಮಹಾಲಕ್ಷ್ಮಿಯ ದರ್ಶನ ಮಾಡಿಕೊಳ್ಳುವ ಬಯಕೆ-ಉಳಿದ ಪ್ರೇಕ್ಷಣೀಯ ಸ್ಥಳಗಳನ್ನು ನೋಡುವ ಆಸೆ, ಆದರೆ,—ಎಲ್ಲಿ ನೋಡಿದರೂ ಮರಾಠಿ, ಮರಾಠಿ! ಕನ್ನಡವೆ ನೋಂಕಲ್ಲದ ಹೊಸ ಊರು! ಕಣ್ಣು ದೃಷ್ಟಿಸಿದತ್ತ ಮರಾಠಿ ಫಲಕಗಳು! ಮರಾಠಿಮಯ ಸೆರಗಿನಲ್ಲಿ ನಮಗೆಲ್ಲಿ ಉಸಿರುಗಟ್ಟುತ್ತದೋ ಎನ್ನುವ ಭ್ರಮೆ ಬಂದದ್ದೂ ನಿಜ!

ಹೊಟ್ಟೆಯಲ್ಲಿ ಹಸಿವೆಯ ದೊಂಬರಾಟ, ಪ್ರಯೊಣದ ದಣಿವು, ಕೊನೆಗೂ ಸುತ್ತಿ ಸುತ್ತಿ ಎದುರಿಗೆ ಒಂದು ಕನ್ನಡ ಫಲಕ ಹೊತ್ತ ಕಾಫಿ ಹೊಟೇಲಿಗೆ ಹೋಗಿ, ಒಂದು ಬಾರಿ ಬದುಕಿಕೊಂಡೆವು ಎಂದುಕೊಳ್ಳುವಂತಾಯಿತು. ಕುಳಿತೇನೋ ಆಗಿದೆ. ಎದುರಿನ ಟೇಬಲ್ ನೊಣದಿಂದ ತುಂಬಿದೆ. ತಿಂಡಿಯ ಚೂರುಗಳು-ಚಹ-ಕಾಫಿ ಚೆಲ್ಲಿ ಕೊಂಡಿದೆ. ವಾಂತಿ ಬರುವಂತಾಗಿದೆ.

ತುಳುವಿನಲ್ಲಿ ನಾನೂ, ನಸ್ಸನ್ಕ ಗುಣುಗುಟ್ಟಿ ಕೊಂಡೆವು. "ಇಂಥ ಹೋಟೆಲು? ಇವರೆಂಥ ಜನ? ಸ್ವಚ್ಛತೆಯ ಗಂಧಗಾಳಿಯೇ ಇಲ್ಲದ ಕಾಡು ಮನುಷ್ಯರ ಹಾಗೆ! ಇಲ್ಲಿ ಚಹಾ, ಕಾಫಿ ಕುಡಿಯಲು ಬರುವ ಪುಣ್ಯಾತ್ಮ ಯಾರೋ?" ಇನ್ನು ಹೋಟೆಲಿನಿಂದ ಪಾರಾಗಿ ಬಿಡಬೇಕು ಹಸಿವೆಯನ್ನೂ ಮೂರಿ ಈ ಕೊಳೆಯಿಂದ ಪಾರಾಗಬೇಕಾಗಿತ್ತು. ಅಷ್ಟರಲ್ಲಿ ಹೋಟೆಲಿನ ಮೂಲಕರು ಇರಬೇಕು—ಕೈಜೋಡಿಸಿ ನಮ್ರತೆಯಲ್ಲಿ "ಇಲ್ಲಿ ಕೂಲಿಕಾರ ಜನ ಬಂದು ಹೀಗೆ ಸೂಡಿ ಹೋಗಿ ಬಿಡ್ತಾರೆ. ಯಾರ ಮೂಡೂ ಕೇಳೋದೂ ಇಲ್ಲ. ನೀವು ಬನ್ನಿ ಒಳಗೆ ಸ್ಪೆಶಲ್ ರೂಮಿದೆ-ಬಂದುಬಿಡಿ-ತುಳುವಿನಲ್ಲೇ ನಮ್ಮನ್ನು ಕರೆದಾಗ-ಬೇಸರ ಬಂದಷ್ಟೇ ಬೇಗ ಮೂಯವಾಗಿ ಅವರನ್ನು ಹಿಂಬಾಲಿಸಿ ಒಳಗಿದ್ದ ಸ್ಪೆಶಲ್ ರೂಮಿಗೆ ಹೋಗಿ ಬಿಟ್ಟೆವು. ಅಲ್ಲಿ ಎಲ್ಲ ಹೊಸ ಬನೆಯ ಪೀಠೋಪಕರಣಗಳು. ಅಲಂಕಾರಪ್ಲಟ್ಟ ಒಳೆಯ ರೂಮಿನಂತಿದೆ. ಮನಸ್ಸು ಮೆಚ್ಚಿಕೊಂಡಿತು. ಇಲ್ಲಿ ಈಗ ನಾವೇ ನಾವು ಬೇಕು ಬೇಕಾದುದನ್ನು ತರಿಸಿ ತಿಂದಾಯಿತು. ಬಿಸಿ ಬಿಸಿಯೊದ ತಿಂಡಿಗೆ ಬಾಯಿ ನೀರೂರಿದ್ದೂ ನಿಜ! ಎದುರಿಗೆ ಖಾಲಿಯೂಗಿ ಪ್ಲೇಟುಗಳು ಬಿದ್ದದ್ದೂ ನೋಡಿದಾಗ-ಮನಸ್ಸು ಒಂದು ಕ್ಷಣ ಗಲಿಬಿಲಿಗೊಂಡಿತ್ತು. ಎಷ್ಟಾದರೂ ಬಿಲ್ಲು ತೆತ್ತಲೇ ಬೇಕು. ಮೊಣಿಗೆ ಇಲ್ಲೇ ಬಿಲ್ಲು ತರಲು ಹೇಳಿ ಕೂತು ಹರಟೆಗೆ ಪ್ರಾರಂಭಿಸಿದೆವು. ಮತ್ತೆ ಪಾನ್ ತಂದು ಮೂಣಿ ಟೇಬಲಿನ ಮೇಲಿಟ್ಟ. ಬಿಲ್ಲು ಮಾತ್ರ ತರಲೇ ಇಲ್ಲ. ನಮ್ಮ ಪರಿವಾರ ಮತ್ತೆ ಹೊರಕ್ಕೆ ಬಂತು ವಾಳ್ ಮೂಡುವಂತೆ-ಕೌಂಟರಿಗೆ ಬಂದು ಬಿಲ್ಲು ಕೇಳಿದರೆ ಮೂಲಿಕರು ಅದೇ ನಗುಮುಖವಲ್ಲಿ "ಏನು ನೀವು ಹೇಳೋದು. ನೀವು ನಮ್ಮವರಂತಾ ಹೀಗೆ ಕೇಳೋದೆ? ನಾವು ಇರೋದು ಯಾಕೆ? ಪರಊರಿನಲ್ಲಿದ್ದ ನಮ್ಮಲ್ಲಿ ನಮ್ಮ ಅಕ್ಕ-ತಂಗಿಯರು ಮನೆಯ ಜನ ಬಂದ ಹಾಗೆ. ಹಣದ ಮಾತನ್ನೇ ನೀವು ಆಡಬಾರದು. ಕೊಲ್ಹಾಪುರದಲ್ಲಿ ನೋಡುವ ಸ್ಥಳ ತುಂಬಾ ಉಂಟು. ನೋಡಿ ಬನ್ನಿ. ಮಧ್ಯಾಹ್ನ ಊಟಕ್ಕೆ ಮತ್ತೆ ಇಲ್ಲೇ ಬರಬೇಕು!"

ಹಣಕೊಟ್ಟು ತಿನ್ನುವುದೆಂದು ಸಾಮಿಲ್ಲ ಹಸಿದ ಹೊಟ್ಟೆಗೆ ರುಚಿ ರುಚಿಯಾದ ತಿಂಡಿ ತುಂಬಿಸಿದ್ದೇ ತುಂಬಿಸಿದ್ದು. ಹಣ ತೆಕ್ಕೊಳ್ಳಲು ಆ ಮನುಷ್ಯ ಸಾಧ್ಯವೇ ಇಲ್ಲವೆಂದಾಗ- ಧನ್ಯವಾದದ ಹೊರತು ಅವರಿಗೆ ನಾವೇನೂ ಬದಲು ಕೊಡುವ ಹಾಗಿರಲೂ ಇಲ್ಲ. ಹೋಟೆಲಿನಿಂದ ಇಳಿಯುತ್ತಿದ್ದಾಗ

(ಇಪ್ಪತ್ತನೇ ಸುಟ ನೋಡಿರಿ)

ನಮ್ಮ ಪೂರ್ವ ಪರಂಪರೆಗಾಗಿ
ನಾವು ಅಭಿಮಾನ ಪಡುತ್ತೇವೆ.

ಸ್ವಾತಂತ್ರ್ಯದ 25 ವರ್ಷಗಳು

ನಾವು ಆಂದಿನಿಂದ ಬಹಳ ದೂರ ಪ್ರಯಾಣಿಸಿದ್ದೇವೆ.

ರಾಷ್ಟ್ರೀಯ ಆನಂದೋತ್ಸವದ ಈ ದಿನದಲ್ಲಿ ಸಾಮಾಜಿಕ ಕರ್ತವ್ಯವನ್ನೆ ಮತ್ತು ನವರಾಷ್ಟ್ರೀಯ ಉದ್ದೇಶಗಳಿಂದ ಪರಿವರ್ತನೆಗೊಳ್ಳುತ್ತಿರುವ ಪರಿಸ್ಥಿತಿಗಳು ನಮ್ಮ ಮೇಲೆ ಹೊರಿಸಿದ ಹೊಸ ಸಾಮಾಜಿಕ ಹೊಣೆಗಾರಿಕೆಯನ್ನು ನಾವು ತೀರಿಸುತ್ತಿರುವುದಕ್ಕೆ ಸಂತೋಷಪಡುತ್ತೇವೆ.

ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಷನ್ (ಉಡುಪಿ) ಲಿ., ಇದರ ನಿರ್ಮಾಣದ ಪ್ರಧಾನ ಉದ್ದೇಶವು ಜಾತಿ ಮತ ಭೇದವಿಲ್ಲದೆ ನಮ್ಮ ಎಲ್ಲ ವರ್ಗದ ಜನರಲ್ಲಿ ಮಿತವ್ಯಯದ ಅಭ್ಯಾಸವನ್ನು ರೂಪಿಸುವುದೊಂದೇ ಅಲ್ಲದೆ ಎಲ್ಲ ವರ್ಗದವರಲ್ಲಿ ಸಹಕಾರದ ಅಭ್ಯಾಸವನ್ನು ಬೆಳೆಸುವುದೂ ಆಗಿದೆ.

ಇದೇ ಶುದ್ಧ ಮತ್ತು ಸರಳ
ಸ್ವದೇಶೀಯತೆಯಾಗಿದೆ....

—ಬ್ಯಾಂಕಿನ ಪ್ರವರ್ಧಕ ಮತ್ತು ಸ್ಥಾಪಕ
ಶ್ರೀ ಅಬ್ದುಲ್ಲಾ ಎಚ್. ಕಾಸಿನ್ ಸಾಹೇಬ್ ಅವರು
ತಾ. 19-2.1906ರಂದು ನೂಡಿದ ನಿವೇದನೆ

— ಸ್ನೇಹ ಸೌಹಾರ್ದತೆಯ ಪರಂಪರೆಯಾಗುಳ್ಳ

ಕಾರ್ಪೊರೇಷನ್ ಬ್ಯಾಂಕ್
ಲಿಮಿಟೆಡ್

ESTD. 1906

(ಕೆನರಾ ಬ್ಯಾಂಕಿಂಗ್ ಕಾರ್ಪೊರೇಷನ್ ಲಿಮಿಟೆಡ್ ಪಸರಿಸಲ್ಲಿ ಈಗಾಗಲೇ ಚಿರಪರಿಚಿತ)

ಸ್ಥಾಪನೆ: 1906 ರಿಜಿಸ್ಟರ್ಡ್ ಆಫೀಸು: ಉಡುಪಿ ಆಡಳಿತ ಕಚೇರಿ: ಮಂಗಳೂರು-3

ಆರ್ಥಿಕ ಅಭ್ಯುದಯದ 25 ವರ್ಷಗಳು

ಅರ್ಥಮಂತ್ರಿ ಶ್ರೀ ವೈ. ಬಿ. ಚವಣ್

1972 ಭಾರತ ಸ್ವಾತಂತ್ರ್ಯದ ಬೆಳ್ಳಿ ಹಬ್ಬದ ವರ್ಷ. ಕಳೆದ 25ವರ್ಷಗಳಲ್ಲಿ ದೇಶದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಇತ್ಯಾದಿ ವಿವಿಧ ಕ್ಷೇತ್ರಗಳಲ್ಲಿ ಮಹತ್ತರ ಪ್ರಗತಿಯಾಗಿದೆ. ಪ್ರಗತಿ ಎಷ್ಟರ ಮಟ್ಟಿದ್ದು, ಮುಂದೆ ಪ್ರಗತಿ ಎತ್ತ ಸಾಗಬೇಕು, ಆ ಬಗ್ಗೆ ಕೈಗೊಳ್ಳಬೇಕಾದ ಕ್ರಮಗಳು, ಪರಿಹಾರವಾಗಬೇಕಾಗಿರುವ ಸಮಸ್ಯೆಗಳು, ವಿದೇಶಗಳೊಡನೆ ಬಾಂಧವ್ಯ ಇತ್ಯಾದಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಲು ಇದೊಂದು ಸುಸಂದರ್ಭ. ದೇಶವಿಭಜನೆ, ಪಾಕಿಸ್ತಾನದ ಸರ್ವತೋಮುಖ ಅಭಿವೃದ್ಧಿ ಕಾರ್ಯಗಳಿಂದಾಗಿ ನಮ್ಮ ಸಮಾಜದ ಚಿತ್ರ ಪೂರ್ಣವಾಗಿ ಬದಲಾಗಿದೆ. ರಾಷ್ಟ್ರೀಯ ಹಾಗೂ ವ್ಯಕ್ತಿಯ ಆದಾಯದ ಗಣನೀಯ ಪ್ರಮಾಣದಲ್ಲಿ ಏರಿದೆ. ಪ್ರತಿ ವ್ಯಕ್ತಿಗೆ ಲಭ್ಯವಾಗುತ್ತಿದ್ದ ಸೌಲಭ್ಯಗಳು ಈಗ ದ್ವಿಗುಣ ಹೊಂದಿವೆ. ಒಂದಲ್ಲ ಒಂದು ಬಗೆಯಲ್ಲಿ ರಾಷ್ಟ್ರಾಭ್ಯುದಯದ ಫಲ ಸರ್ವರಿಗೂ ಲಭ್ಯವಾಗುತ್ತಿದೆ–ಲಭ್ಯವಾಗಲಿವೆ.

ನಮ್ಮ ಸಮಾಜದ ಬಡತನ, ವ್ಯಕ್ತಿಗಳ ನಡುವಣ ಆರ್ಥಿಕ ಅಸಮಾನತೆ, ನಿರುದ್ಯೋಗ ಇಂತಹ ಸಮಸ್ಯೆಗಳ ನಿವಾರಣೆ ನಿರೀಕ್ಷಿಸಿದಷ್ಟು ಪ್ರಮಾಣದಲ್ಲಿ ನಡೆದಿಲ್ಲ ವೆಂಬುದು ಒಪ್ಪಬೇಕಾದ ವಿಷಯ. ಇತ್ತೀಚಿನ ಕೆಲವಾರು ವರ್ಷಗಳ ಅನುಭವದಿಂದ ಹೇಳಬೇಕಾದರೆ ಕೇವಲ ಆರ್ಥಿಕಾಭಿವೃದ್ಧಿಯಿಂದಲೇ ನಮ್ಮ ಎಲ್ಲಾ ಸಮಸ್ಯೆಗಳು ನಿವಾರಿಸಲು ಅಸಾಧ್ಯ. ಬಡತನ ಮತ್ತು ನಿರುದ್ಯೋಗ ಸಮಸ್ಯೆಗಳು ನಿವಾರಣೆಗೆ ವಿಶೇಷ ಹಾಗೂ ಸುವ್ಯವಸ್ಥಿತ ಪ್ರಯತ್ನಗಳು ಆಗತ್ಯ. ಪ್ರಸ್ತುತದ ಆರ್ಥಿಕ ಪರಿಸ್ಥಿತಿ ಈ ಪ್ರಯತ್ನಗಳಿಗೆ ನೆರವಾಗಬಲ್ಲದು. ಇಂದು 25 ವರ್ಷಗಳ ಹಿಂದೆ ಸಮಾಜದ ಕೆಳಹುಟ್ಟಿದ ಅಭಿವೃದ್ಧಿ ತ್ವರಿತ ಹಾಗೂ ಸಾಕಷ್ಟು ಪ್ರಮಾಣದಲ್ಲಿ ನಡೆದಿರಲಿಲ್ಲ. ಸ್ವಾತಂತ್ರ್ಯಾನಂತರದಲ್ಲಿ ಈ ಕೆಳಮಟ್ಟದವರ ಅಭಿವೃದ್ಧಿ ಮುಖ್ಯ ಗುರಿಯಾಗಿದ್ದು ಅದಕ್ಕಾಗಿ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಯಿತು. ಸಮರ್ಥ ನಾಯಕರಾದ ದಿವಂಗತ ಜವಹರಲಾಲ್ ನೆಹರೂ ಅವರ ಮುಂದಾಳುತ್ವದಲ್ಲಿ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೆ ತರಲಾಯಿತು. ವಿವಿಧ ಕ್ಷೇತ್ರಗಳ ಪ್ರಗತಿಗೆ ಪೂರಕವಾದ ಕಾರ್ಯಕ್ರಮಗಳನ್ನು ಕೈಗೊಂಡು ಕಾರ್ಯಗತ ಗೊಳಿಸಲಾಯಿತು. ಈ ವಿವಿಧ ಕ್ರಮಗಳು ನಾಡಿನ ಆರ್ಥಿಕ ಅಭಿವೃದ್ಧಿಗೆ ನಾಂದಿಯಾದವು ಪ್ರವಾಹಗಳು, ನೆರೆಹೊರೆಯ ರಾಷ್ಟ್ರಗಳ ದುರಾಕ್ರಮಣ ಇವು ಇತ್ತೀಚೆಗೆ ಸಂಭವಿಸಿದರೂ ನಮ್ಮ ಪ್ರಗತಿ ಕುಂದದೆ ಮುನ್ನಡೆದಿದೆ.

ಸ್ವಾತಂತ್ರ್ಯದ 25ವರ್ಷಗಳಲ್ಲಿ ರಾಷ್ಟ್ರದ ಆದಾಯ ಇಮ್ಮಡಿಯಾಗಿದೆ. ಜನಸಂಖ್ಯೆ ಏರಿದ್ದರೂ–1947ರಲ್ಲಿ ಇದ್ದ ಜನಸಂಖ್ಯೆಗಿಂತ ಇಂದು ಭಾರತದಲ್ಲಿ 220 ದಶಲಕ್ಷಕ್ಕೂ ಮಿಂದಿ ಹೆಚ್ಚು ಜನರಿದ್ದಾರೆ– ಪ್ರತಿ ವ್ಯಕ್ತಿಗೆ ಲಭ್ಯವಾಗುತ್ತಿದ್ದ ಸರಕುಗಳು ಏರಿದೆ. ಕೆಲವು ಅನಿವಾರ್ಯ ಕಾರಣಗಳಿಂದಾಗಿ ಸರಕುಗಳ ವಿತರಣೆಯಲ್ಲಿ ಅಡಚಣೆ ಉಂಟಾಗ ಬಹುದು. ಆದರೆ ಅದು ಕೇವಲ ತಾತ್ಕಾಲಿಕ.

ಕೈಗಾರಿಕಾಭಿವೃದ್ಧಿ

ಕೈಗಾರಿಕಾ ಕ್ಷೇತ್ರದಲ್ಲೂ ಗಮನಾರ್ಹ ಪ್ರಗತಿ ಇಂದು ನಡೆದಿದೆ. ಕಳೆದ 25ವರ್ಷಗಳಲ್ಲಿ ಕೈಗಾರಿಕಾ ಉತ್ಪಾದನೆ ಮೂರರಷ್ಟು ಬಾರಿ ಏರಿದೆ. ಬಳಕೆದಾರರ ವಸ್ತುಗಳಿಂದ ಹಿಡಿದು ಬೃಹತ್ ಕೈಗಾರಿಕಾ ಯಂತ್ರೋಪಕರಣಗಳನ್ನು ನಾವಿಂದು ನಮ್ಮ ರಾಷ್ಟ್ರದಲ್ಲೇ ತಯಾರಿಸುತ್ತೇವೆ. ಕೈಗಾರಿಕಾ ಉತ್ಪಾದನೆ ಮತ್ತು ಯಂತ್ರೋಪಕರಣ ವಿಷಯಗಳಲ್ಲಿ ಸ್ವಾವಲಂಬನವನ್ನು ಮುಂದಿನ ಕೆಲವು ವರ್ಷಗಳಲ್ಲಿ ಸಾಧಿಸಲಾಗುವ ನಿರೀಕ್ಷೆಯಿದೆ. ಲೋಹಗಳ ಉತ್ಪಾದನೆ 1951 ರಲ್ಲಿ ಇದ್ದ ಪ್ರಮಾಣಕ್ಕಿಂತ ಇಂದು ನಾಲ್ಕು ಪಟ್ಟು ಏರಿದೆ. ವಿದ್ಯುಚ್ಛಕ್ತಿ ಉತ್ಪಾದನೆ 10ರಷ್ಟು ಬಾರಿ ಏರಿದೆ. ರಾಸಾಯನಿಕ ವಸ್ತುಗಳು, ಗೊಬ್ಬರ, ಪೆಟ್ರೋಲಿಯಂ ಮತ್ತು ಪೆಟ್ರೋಲಿಯಂ ವಸ್ತುಗಳ ಉತ್ಪಾದನೆಯೂ ಗಣನೀಯವಾಗಿ ಏರಿದ್ದು ಇತರ ಕೈಗಾರಿಕೆಗಳ ಅಭಿವೃದ್ಧಿಗೆ ನೆರವಾಗಿದೆ.

ಕೈಗಾರಿಕಾಭಿವೃದ್ಧಿಯಲ್ಲಿ ಸಾರ್ವಜನಿಕ ಕ್ಷೇತ್ರ ವಹಿಸಿರುವ ಪಾತ್ರ ಮಹತ್ತ್ವಪೂರ್ಣವಾದ್ದು. ಸರ್ಕಾರ ಬಂಡವಾಳ ಹೂಡಿಕೆಯಲ್ಲದ ಯಾವುದೇ ರಾಷ್ಟ್ರದ ಅಭ್ಯುದಯ ಅಸಾಧ್ಯ. ಎಂದೇ ನಮ್ಮ ಸರ್ಕಾರ ಆ ಬಗ್ಗೆ ಗಮನಸೀಡಿ ಬೃಹತ್ ಕೈಗಾರಿಕೆಗಳ ಸ್ಥಾಪನೆಗೆ ಕಾರಣವಾಗಿದೆ. ನಾಡಿನ ರಕ್ಷಣೆಗೆ ಅಗತ್ಯವಾದ ಯುದ್ಧೋಪಕರಣಗಳ ತಯಾರಿಕೆಯಲ್ಲಿ ಸರ್ಕಾರದ್ದೇ ಮುಖ್ಯ ಪಾತ್ರ. ಸ್ವಾತಂತ್ರ್ಯ ಪೂರ್ವದಲ್ಲಿ ಕೈಗಾರಿಕಾ ಕ್ಷೇತ್ರದಲ್ಲಿ ಸರ್ಕಾರದ ಬಂಡವಾಳ ಹೂಡಿಕೆ ಶೇಕಡಾ 3ರಷ್ಟಿತ್ತು. ಇದು 1971ರ ನೇಳೆಗೆ ಶೇಕಡ 48ಕ್ಕೆ ಏರಿದೆ.

ಬೇಸಾಯೋತ್ಪನ್ನದಲ್ಲಿ ಸ್ವಾವಲಂಬನೆ

ದೇಶದ ಅಭಿವೃದ್ಧಿಗೆ ಮುಖ್ಯವಾದ್ದು ಮುಖ್ಯವಾಗಿ ನೂರು.–ಬೇಸಾಯ, ಕೈಗಾರಿಕೆ ಮತ್ತು ಶಿಕ್ಷಣ–ಮೂರರಲ್ಲಿ ಒಂದು ಕ್ಷೇತ್ರದಲ್ಲಿ ನಾವಿಂದು ಪೂರ್ಣ ಯಶಸ್ವಿಯೂಗಿದ್ದೇನೆ ಬೇಸಾಯ ಕ್ಷೇತ್ರದಲ್ಲಿ ಸ್ವಾವಲಂಬನೆ ಸಾಧಿಸಲಾಗಿದ್ದು ವಿದೇಶಗಳ ಮೇಲಿನ ಅವಲಂಬನೆ ಕಡಿಮೆಯಾಗುತ್ತಿದೆ. ಆಹಾರಧಾನ್ಯ, ನಗದುಬೆಳೆ, ಇತ್ಯಾದಿ ಬೇಸಾಯ ಉತ್ಪನ್ನಗಳು ವರ್ಷ ವರ್ಷ ಏರುತ್ತಿದೆ. ಇದಕ್ಕೆ ಮುಖ್ಯಕಾರಣ ಇಂದು ಬಳಸುತ್ತಿರುವ ಪರಿವೀನ ಉಪಕರಣಗಳು, ರಾಸಾಯನಿಕ ಗೊಬ್ಬರ, ಕೀಟನಾಶಕ ವಸ್ತುಗಳು, ದೊಡ್ಡ ಪ್ರಮಾಣದ ಬಿತ್ತನೆ ಬೀಜಗಳು, ಇತ್ಯಾದಿ. ಕಳೆದ 25 ವರ್ಷಗಳಲ್ಲಿ ಆಹಾರ ಧಾನ್ಯಗಳು ಸೇರಿದಂತೆ ಬೇಸಾಯ ಉತ್ಪಾದನೆ ಶೇಕಡಾ 80ರಷ್ಟು ದೆಟ್ಟಿವೆ. 1950–51ರಲ್ಲಿ ದೇಶದಲ್ಲಿನ ಆಹಾರಧಾನ್ಯಗಳ ಉತ್ಪಾದನೆ 55 ದಶಲಕ್ಷ ಟನ್‌ಗಳಷ್ಟಿದ್ದು ಅದು 1970–71ರ ನೇಳೆಗೆ 107.8 ದಶಲಕ್ಷ ಟನ್‌ಗಳಿಗೆ ಏರಿದೆ. 1971–72ರಲ್ಲಿ ಉತ್ಪಾದನೆಯಲ್ಲಿ ಮತ್ತಷ್ಟು ಹೆಚ್ಚಳವಿದೆಯೆಂದು ಅಂದಾಜು ಮಾಡಲಾಗಿದೆ. ಇವನ್ನು ಮುಂದೆ ನೆರವು ಮೂಲಕ ಬಳಸುತ್ತಿದ್ದ ಆಹಾರಧಾನ್ಯಗಳಿಗಾಗಿ ಭಾರತೀಯರು ಎದುರು ನೋಡಬೇಕಿಲ್ಲ. ಉತ್ಪಾದನೆಯಷ್ಟೇ ಅಲ್ಲ ಬೇಸಾಯಕ್ಕಾಗಿ ಬಳಸಲಾಗುತ್ತಿರುವ ಜಮೀನಿನ ಕ್ಷೇತ್ರವೂ ಹೆಚ್ಚಿದೆ. ಕಳೆದ ಎರಡು ದಶಕಗಳಲ್ಲಿ ಪ್ರತಿ ವ್ಯಕ್ತಿಗೆ ದೊರೆಯುತ್ತಿದ್ದ ಆಹಾರ ಧಾನ್ಯಗಳ ಪ್ರಮಾಣ ಶೇಕಡಾ 16ರಷ್ಟು ಏರಿದೆ.

ಆಮದು ರಫ್ತು ಅಂತರ

ಬೇಸಾಯ, ಕೈಗಾರಿಕೆ, ಖನಿಜಸಂಪತ್ತು ನೈಸರ್ಗಿಕ ಸಂಪನ್ಮೂಲಗಳ ಬಳಕೆ, ಇತ್ಯಾದಿಗಳಲ್ಲಿ ನಿರಂತರ ಪ್ರಗತಿ ಕಂಡುಬರುತ್ತಿರುವುದರಿಂದಾಗಿ ಭಾರತದ ಆಮದು ರಫ್ತು ಅಂತರ ಇದೀಗ ಸುಧಾರಿಸಿದೆ. ಸ್ವಾತಂತ್ರ್ಯದ ಮೊದಲಲ್ಲಿ ದೇಶದ ಆಮದು ರಫ್ತು ವ್ಯಾಪಾರಕ್ಕಿಂತ ಹೆಚ್ಚಿದ್ದು ಆಮದು–ರಫ್ತು ಅಂತರದ ಸಮಸ್ಯೆ ಉದ್ಭವವಾಗಿತ್ತು. ಇದು ಸ್ವಾಭಾವಿಕ. ಆದರೆ ಈ ಅಂತರ ನಿರಂತರವಾದದ್ದೇ ಆದರೆ ರಾಷ್ಟ್ರದ ಅಭಿವೃದ್ಧಿಗೆ ಮಾರಕವಾಗುವುದು. ಆದ್ದರಿಂದ ಸೂಕ್ತ ವೇಳೆಯಲ್ಲಿ ಅಂತರವನ್ನು ಸರಿಪಡಿಸಿ ರಫ್ತು ಮತ್ತು ಆಮದು ವ್ಯಾಪಾರಗಳನ್ನು ಸರಿದೂಗಿಸಬೇಕು. ಈ ದಿಶೆಯಲ್ಲಿ ಸಾಧ್ಯವಾದ ಕ್ರಮಗಳನ್ನು ಕೈಗೊಂಡು ಆಮದು ರಫ್ತುಗಳನ್ನು ಸರಿಯೂಗಿಸುವುದರಲ್ಲಿ ಯಶಸ್ವಿಯಾಗುತ್ತಿದೆ ನಮ್ಮ ಸರ್ಕಾರ.

ಬಡತನ ಪೂರ್ಣವಾಗಿ ಇಲ್ಲವಾಗಬೇಕು. ಪ್ರಾದೇಶಿಕ ಅಸಮಾನತೆ ಬೆಳೆಯಲು ಅವಕಾಶ ಕೊಡಬಾರದು. ಈ ಬಗ್ಗೆ ನಮ್ಮ ಸರ್ಕಾರ ಎಲ್ಲ ಕ್ರಮಗಳನ್ನು ಕೈಗೊಳ್ಳುತ್ತಿದೆ. ಭೂರಹಿತರಿಗೆ ಭೂಮಿ, ಉಚಿತ ನಿವೇಶನ ನೀಡಿಕೆ, ಆಸ್ತಿ ಮತ್ತು ಬಂಡವಾಳದ ಮೇಲೆ ಮಿತಿ ಇತ್ಯಾದಿಗಳ ಬಗ್ಗೆ ಸರ್ಕಾರ ತೀಕ್ಷ್ಣವಾಗಿ ಪರಿಶೀಲಿಸುತ್ತಿದೆ.

ಪ್ರಧಾನಮಂತ್ರಿಯವರ ಸಂದೇಶ

ಇದು ಸ್ವಾತಂತ್ರ್ಯದ ರಜತೋತ್ಸವ ಆಚರಣೆಯ ತಿಂಗಳು. ಕಳೆದ ಇಪ್ಪತ್ತೈದು ವರ್ಷಗಳಲ್ಲಿ ನಮ್ಮ ದೇಶ ಎದುರಿಸಿದ ಬವಣೆಗಳು ಹಲವು, ಸವಾಲು ಅನೇಕ. ಇವೆಲ್ಲವನ್ನು ಜಯಿಸಿ, ರಾಷ್ಟ್ರ ಶಕ್ತಿ ಸಂಪನ್ನತೆಯನ್ನು ಹೆಚ್ಚಿಸಿಕೊಂಡಿದೆ, ಐಕ್ಯತೆಯನ್ನು ಬೆಳೆಸಿಕೊಂಡಿದೆ, ಗುರಿ ಸಾಧನೆಯ ದೃಢ ಸಂಕಲ್ಪವನ್ನು ಬಲಪಡಿಸಿಕೊಂಡಿದೆ.

ದೇಶದಲ್ಲಿ ಪ್ರಜಾಪ್ರಭುತ್ವ ಬೇರು ಬಿಟ್ಟಿದೆ. ಸತ್ವ ಪರೀಕ್ಷೆಯಲ್ಲಿ ಮಿಂದು ಗೆದ್ದಿದೆ. ಆದರೆ ರಾಷ್ಟ್ರದ ಆರ್ಥಿಕ ಸ್ವಾವಲಂಬನೆ ಇನ್ನು ಸಿದ್ಧಿಯಾಗಬೇಕಷ್ಟೆ. ಜನಸಾಮಾನ್ಯರ ನಿತ್ಯ ಜೀವನ ಸಾಕಷ್ಟು ಉತ್ತಮಗೊಳ್ಳಬೇಕಾಗಿದೆ. ಈ ಸಾಧನೆ ರಾಷ್ಟ್ರದ ಆರ್ಥಿಕ ಸ್ವಾತಂತ್ರ್ಯದ ಸಿದ್ಧಿಯೂ ಹೌದು.

ಬಡತನ ಹಾಗೂ ಅಸಮಾನತೆಯ ವಿರುದ್ಧ ಹೋರಾಡಲು ಜನಕೋಟಿಯೆಲ್ಲ ಒಂದಾಗಿ ಪ್ರಯತ್ನಿಸಬೇಕಾಗಿದೆ. ಜನತೆಯ ಅಪಾರ ನಂಬಿಕೆ ಮತ್ತು ಕೃತ ಸಂಕಲ್ಪದಿಂದಾಗಿ ನಮಗೆ ರಾಜಕೀಯ ಸ್ವಾತಂತ್ರ್ಯ ಲಭಿಸಿತು. ನಮ್ಮ ಗುರಿ ಸುಸ್ಪಷ್ಟ. ಇಷ್ಟೊಂದು ಅಗಾಧವಾದ ಕಾರ್ಯವನ್ನು ಅಷ್ಟೇ ಜಟಿಲವಾದ ಪರಿಸ್ಥಿತಿಯಲ್ಲಿ ಯಾವ ದೇಶವೂ ಕೈಗೊಂಡಿರಲಿಲ್ಲವಾದ ಕಾರಣ ನಮ್ಮ ದಾರಿಯನ್ನು ನಾವೇ ನಿರ್ಮಿಸುತ್ತ ಮುನ್ನಡೆಯುತ್ತಿದ್ದೇನೆ. ಈ ಕಾರಣದಿಂದಾಗಿ ದಾರಿಯುದ್ದಕ್ಕೂ ಸರಿಚಿತ ಹಾಗೂ ಅಪರಿಚಿತ ಅಡೆತಡೆಗಳನ್ನು ಎದುರಿಸಬೇಕಾಗಿದೆ.

ವೈಜ್ಞಾನಿಕ ನವಸಮಾಜದತ್ತ ಸಾಗುತ್ತಿರುವ ಈ ದಾರಿಯಲ್ಲಿ ಆತ್ಮವಿಶ್ವಾಸ ಹಾಗೂ ಧೈರ್ಯ ನಮ್ಮ ಸಂಗಾತಿಯಾಗಿರಲಿ. ಎಲ್ಲರಿಗೂ ನ್ಯಾಯ ಹಾಗೂ ಸಮಾನ ಅವಕಾಶ, ಪ್ರತಿ ವ್ಯಕ್ತಿಗೂ ಪೂರ್ಣ ವಿಕಾಸ ಹೊಂದಲು ಅನುಕೂಲತೆ, ಗಂಡು ಹೆಣ್ಣೆನ್ನದೆ ಪ್ರತಿಯೊಬ್ಬರೂ ಇತರರ ಬಗೆಗೆ ತನಗಿರುವ ಹೊಣೆಯನ್ನು ಅರಿತುಕೊಂಡು ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಕಾರ್ಯ ಪ್ರವೃತ್ತರಾಗುವ ಸುಸಂದರ್ಭ—ಇದು ಈ ಸಮಾಜದ ಸ್ವರೂಪ.

ಇಂದಿರಾ ಗಾಂಧಿ

ಹೊಸದಿಲ್ಲಿ,
ಆಗಸ್ಟ್ 1, 1972

ಕಸ್ತೂರಿ ಮೃಗವು ಸುಗಂಧಿತ ಕಸ್ತೂರಿಯನ್ನು ತನ್ನ ನಾಭಿಯಲ್ಲೇ ಇಟ್ಟುಕೊಂಡಿದ್ದರೂ, ಅದನ್ನರಿಯದೆ ಓಡಾಡುವಂತೆ ಮನುಷ್ಯರೂ ತಮ್ಮಲ್ಲಿರುವ ಅಥವಾ ತಮ್ಮ ಊರಿನ ಸುತ್ತ ಮುತ್ತಿನ ಮಹತ್ವವನ್ನರಿಯದೆ ಇರುತ್ತಾರೆಂದರೆ ಇದೇನೂ ಅಚ್ಚರಿಯೂಗ ಬೇಕಾದ ಮಾತಲ್ಲ. ಏಕೆಂದರೆ, ಐತಿಹಾಸಿಕ ಅಥವಾ ಪೌರಾಣಿಕ ಮಹತ್ವವುಳ್ಳ ಎಷ್ಟೋ ಸ್ಥಳಗಳು ನಮ್ಮ ಹತ್ತಿರವೇ ಇದ್ದರೂ, ಸಹಜವಾಗಿ ಅವು ನಮ್ಮ ಗಮನಕ್ಕೆ ಬರಲಾರವು. ಆದರೆ ಕಾಲ ಕೂಡಿ ಬಂದಾಗ, ಸಾಹಸದಿಂದಾಗದುದೂ ಸಹಜವಾಗಿಯೇ ಆಗುತ್ತದೆ. ಇದಕ್ಕೆ ನಿದರ್ಶನವೆಂಬಂತೆ, ನೂರಾರು ಕುಟುಂಬಗಳು ವಾಸವಾಗಿರುವ ಒಂದು ಊರಿನಲ್ಲಿ ಆ ಊರಿನ ಮಧ್ಯೆ ಕಾಡಿನಲ್ಲಿಯೇ ಇದ್ದ ಒಂದು ಐತಿಹಾಸ ಪ್ರಸಿದ್ಧನಾದ ದೇವಾಲಯ ಈಗ. ಸುಮಾರು 30ವರ್ಷಗಳ ಮೊದಲು ಯಾರಿಗೂ ತಿಳಿದಿರಲಿಲ್ಲವೆಂದರೆ, ಇದು ಆಶ್ಚರ್ಯಕರವಾದ ಸಂಗತಿಯೇ ಆಹುದು.

ಇಂದು ಪವಿತ್ರ ಕ್ಷೇತ್ರವಾಗಿರುವ ಈ ಸ್ಥಳ ಸುಮಾರು ಮೂರು ದಶಕಗಳ ಹಿಂದೆ ಕಾಡಿನ ಮಡಿಲಲ್ಲಿ ಅಡಗಿದ್ದು ಯಾರಿಗೂ ಅದರ ಇರುವಿಕೆಯೇ ಗೊತ್ತಿರಲಿಲ್ಲ. ಇಂದು ವರ್ಷಕ್ಕೊಂದು ಬಾರಿ, ಸಂಗ್ರಿಯ ಹುಣ್ಣಿಮೆಯ ಮೊದಲ ದಿನದಂದು ಹಿಡಿದು 5ದಿನಗಳ ತನಕ ಇಲ್ಲಿ ವೈಭವದ ಜಾತ್ರೆ ನಡೆಯುತ್ತಿದ್ದು ಬಹು ದೂರದೂರ.ಗಳಿಂದ ಸಾವಿರಾರು ಜನರು ಇಲ್ಲಿಗೆ ಆಗಮಿಸುತ್ತಾರೆ. ಇಂದಿಲ್ಲಿ ಕಂಗೊಳಿಸುತ್ತಿರುವ ಚಿಕ್ಕ ದೇವಾಲಯ ಸುತ್ತ ಮುತ್ತ ಸಾವಿರಾರು ಜನ ಓಡಾಡಬಹುದಾದ ಸಮತಟ್ಟಾದ ಸ್ಥಳ. ಇದನ್ನೆಲ್ಲಿ ನೋಡಿದಾಗ, ಮೂವತ್ತು ವರ್ಷಗಳ ಹಿಂದಿನ ಘೋರಾರಣ್ಯದ ಕಲ್ಪನೆ, ನಮ್ಮನ್ನು ಅಚ್ಚರಿಗೊಳಿಸುವುದು. ಇಂತಹ ಈ ಪುಣ್ಯ ಸ್ಥಳವನ್ನು ಕಂಡು ಹಿಡಿದು ಭಗೀರಥ ಪ್ರಯತ್ನದಿಂದ ಇಂದಿನ ಈ ಸ್ಥಿತಿಗೆ ತಂದು ಸಾಹಸವನ್ನು ತೋರಿಸಿರುವ, ದಿವಂಗತ ನಾವಳೆ ಸುಬ್ರಾಯ ಹೆಬ್ಬಾರರ ಅಮರ ಸ್ಮಾರಕದಂತಿದೆ: ಈ ಪುಣ್ಯಕ್ಷೇತ್ರ.

ಬೆಳ್ತಂಗಡಿ ತಾಲೂಕಿನ ಉಜಿರೆಯ ಸಮೀಪದ ನಿಡಿಗಲ್ ಎಂಬ ಊರಿನ ನೇತ್ರಾವತಿ ನದೀ ತೀರದ ಲೋಕನಾಮ ಲೋಕನಾಥೇಶ್ವರ ದೇವಾಲಯ, ಮತ್ತು ಸಿರಿದರ್ಶನದ ಪುಣ್ಯ ಸ್ಥಳವೆಂದರೆ, ಇಂದಲ್ಲ ಎಲ್ಲರಿಗೂ ಚಿರಪರಿಚಿತವಾದ ಸ್ಥಳವಾಗಿದೆ. ಇಲ್ಲಿ ಉತ್ಪತ್ತಿ ಏನೂ ಇಲ್ಲದಿದ್ದರೂ ಶ್ರೀ ಹೆಬ್ಬಾರರ ಸುಪುತ್ರರು ತಮ್ಮ ಸ್ವಂತದಿಂದ ವೆಚ್ಚಮಾಡಿ ಇಲ್ಲಿ ಸಾವಿರಾರು ಹಣವನ್ನು ಸುರಿದು ಈ ಕ್ಷೇತ್ರವಸ್ತು ಅಭಿವೃದ್ಧಿ ಪಡಿಸಿ, ತಮ್ಮ ತನು ಮನ ಧನ ಅರ್ಪಣೆಯಿಂದಲೇ ಈ ದೇವತಾ ಕಾರ್ಯವನ್ನು ನಡೆಸುತ್ತ ಸ್ತುತ್ಯರಾಗಿದ್ದಾರೆ.

ಸುಮಾರು 30ವರ್ಷಗಳ ಹಿಂದೆ ಒಂದು ದಿನ ದಿ| ನಾವಳೆ ಸುಬ್ರಾಯ ಹೆಬ್ಬಾರ್ ಅವರು ತಮ್ಮ ಕಾಣೆಯೊಗಿದ್ದ ಒಂದು ದನವನ್ನು ಹುಡುಕುತ್ತ ಒಬ್ಬಬ್ಬರು ಕೆಲಸದಾಳುಗಳೊಡನೆ, ಹುಲಿರಾಯನೇನಾದರೂ ಕಬಳಿಸಿರಬಹುದೇ ? ಎಂಬ ಸಂಶಯದಿಂದ, ನೇತ್ರಾವತಿ ನದೀ ತೀರದ ಆ ಕಾಡನ್ನು ಹೊಕ್ಕಿದ್ದರು. ಆ ಕಾಡಿನಲ್ಲಿ ಕಾಲು ತೆಗೆದಿಡಲು ಅವಕಾಶವೆನಿಸುವಷ್ಟು ಮುಳ್ಳು ಪೊದೆಗಳಿದ್ದವು. ಮಧ್ಯಾಹ್ನವೂ ಹೊತ್ತಾದರೂ ಸೂರ್ಯ ಕಿರಣಗಳು ಆ ಕಾಡಿನಲ್ಲಿ ಸೋಂಕಲಾಸಹಸ್ಯ ದಟ್ಟವಾದ ಆ ಕಾಡಿನಲ್ಲಿ ಶ್ರೀ ಹೆಬ್ಬಾರರು ಮುಂದುವರಿದರು. ಹೆಂಬೆ ಮುಂದೆ ಹೋದಂತೆ, ಒಂದೆಡೆ ನಡುಕಾಡಲ್ಲಿ ಆ ವಿಚಿತ್ರ ದೃಶ್ಯವನ್ನು ಕಂಡ ಹೆಬ್ಬಾರರು ಸ್ತಬ್ದರಾಗಿ ನಿಂತರು. ತಮಗರಿವಿಲ್ಲದಂತೆಯೇ ಅವರು, ಆ ಕೆತ್ತರದ ಮೂರು ಲಿಂಗಗಳ ಎದುರುಹೋಗಿ ನಿಂತಿದ್ದರು. ಅತ್ತಿತ್ತ ಎತ್ತೆತ್ತಲೂ ಭಾರಿ ಮರಗಳು ಜೆಳೆತಿದ್ದು ಅವುಗಳ ಘನ್ಯ ದಟ್ಟಲೆಯೇ, ಒಂದಕ್ಕೊಂತ ಒಂದು ಸ್ವಲ್ಪ ದೊಡ್ಡದಾಗಿದ್ದು, ಮೂರು ಮಂದಿ ಸಾಲಾಗಿ ನೀತಿರುವಂತೆ ಕಾಣಿಸುತ್ತಿರುವ ಮೂರು ಲಿಂಗಗಳನ್ನೂ ಮತ್ತು ದೇವಾಲಯದ ಅವಶೇಷಗಳನ್ನೂ ಕಂಡ ಅವರು ಆಶ್ಚರ್ಯ ಚಕಿತರಾದರು. ಅಲ್ಲಿ ಹೆಜ್ಜೆ ಹೆಜ್ಜೆಗೆಂಬಂತೆ ಸ್ವಚ್ಛಂದವಾಗಿ ಹರಿದಾಡುತ್ತಿದ್ದ ಹಾವುಗಳನ್ನು ಕಂಡಾಗ ಯಾರಿದೆಯೂ ನಡುಗದೇ ಕು. ಅಂತಹ ಭಯಂಕರವಾದ ಆ ಸ್ಥಳದಲ್ಲಿ ಕಾಣಿಸಿದ ಆ ಮೂರು ಲಿಂಗಗಳೇ ಇಂದಿನ ಲೋಕನಾಥ ಲೋಕನಾಥೇಶ್ವರ! ಇಂದು ಸಿರಿದರ್ಶನ ನಡೆಯುತ್ತಿರುವುದೂ ಇಲ್ಲಿಯೇ ಮರುದಿನದಿಂದಲೇ ಈ ತುಳುನಾಡ ಸಿರಿಯನ್ನು ಬೆಳಗಿಸಬೇಕೆಂಬ ಹಟತೊಟ್ಟ ದಿ|.ಹೆಬ್ಬಾರರು, ಆ ಸ್ಥಳದ ಜೀರ್ಣೋದ್ಧಾರಕ್ಕಾಗಿ ತುಂಬ ಶ್ರಮವಹಿಸತೊಡಗಿದರು.

ಯಾವುದೇ ಆವರಣವಿಲ್ಲದ ಆ ಲಿಂಗಗಳಿಗೆ ಗುಡಿಯನ್ನು ಕಟ್ಟಿಸಿ, ಬೇಕಾದ ಎಲ್ಲ ಕೆಲಸಗಳನ್ನೂ ತ್ವರಿತಗತಿಯಿಂದ ಮುಂದುವರಿಸಿದ ದಿ| ಹೆಬ್ಬಾರರು ಲೋಕನಾಥೇಶ್ವರನಿಗೆ ನಿತ್ಯ ಪೂಜೆಗ ಅರ್ಚಕರನ್ನೂ ನೇಮಕ ಮಾಡಿದರು. ಹೀಗೆ ದಿ| ಹೆಬ್ಬಾರರಿಂದ ಕಾಡು ನಾಡಾಯಿತು! ತುಳುನಾಡ ಸಿರಿ ಬೆಳಗಿತು! ಭಕ್ತ ಜನರ ಮನ ಅರಳಿತು! ಅಷ್ಟೇನೂ ಶ್ರೀಮಂತರಲ್ಲದ ದಿ| ಹೆಬ್ಬಾರರ ಈ ಜೀರ್ಣೋದ್ಧಾರ ಕಾರ್ಯವು ಸಾಹಸಪೂರ್ಣವೂ ತ್ಯಾಗಪೂರ್ಣವೂ ಆಗಿರುವುದು.

ಈ ಕ್ಷೇತ್ರವು ತುಳುನಾಡಿನ ಸಂಶೋಧಕರಿಗೆ ಒಂದು ಸವಾಲಿನಂತಿದೆ! ಇಲ್ಲಿ ಅಲ್ಲಲ್ಲಿ ಬಿದ್ದುಕೊಂಡಿರುವ ಅನೇಕ ಶಿಲಾ ಶಾಸನಗಳಿವೆ. ಸಾಮಾನ್ಯರಾದವರಿಂದ ಓದಲಾಗದ ಓದಿದರೂ ಅರ್ಥಮಾಡಿಕೊಳ್ಳಲಾಗದ ಲಿಪಿಯಿಂದ ಕೆತ್ತಲ್ಪಟ್ಟ ಇಲ್ಲಿಯ ಶಿಲಾಶಾಸನಗಳನ್ನು ಅರ್ಥವಿಸಿದರೆ ಈ ತುಳುನಾಡ ಸಿರಿಯ ಗತೈತಿಹಾಸವು ಬೆಳಕಿಗೆ ಬರಬಹುದು.

ಇಲ್ಲಿ ಪ್ರತಿವರ್ಷ ನಡೆಯುವ ಜಾತ್ರೆಯಲ್ಲಿ ದೈವಗಳ ನೇಮ ಮತ್ತು ಸಿರಿದರ್ಶನ ವಿಶೇಷ ಮಹತ್ವದಿಂದ ಕೂಡಿದೆ. ಕುಮಾರಗ ದರ್ಶನ (ಅವೇಶ) ಬಂದಾಗ ಅವರು ಇಲ್ಲಿಯ ರಮ್ಯವಾದ ಗತೈತಿಹಾಸದ ಕುರಿತು ಪಾಡ್ದನಗಳ ಮೂಲಕ ಹಾಡುತ್ತಾರೆ. ಅಲ್ಲದೆ ಸಿರಿದರ್ಶನದ ಆದಿನ ನೂರಾರು ಪೈಲುಗಳ ದೂರದಿಂದ ತರುಣಿಯರು ಇಲ್ಲಿಗೆ ಆಗಮಿಸಿ, ಇಲ್ಲಿ ಇಡೀರಾತ್ರಿ ಆವೇಶ ಬಂದು ನಡುಗುತ್ತ ಪೈಮರೆಯುತ್ತಾರೆ! ಇಂದಿನ ವೈಜ್ಞಾನಿಕ ಯುಗದಲ್ಲಿ ಕೂಡ, ಭಕ್ತಿ "ಮಹಿಮೆ" ಇವುಗಳು ಉಳಿದಿವೆ! ಎಂಬುದಕ್ಕೆ ಈ ಸಿರಿದರ್ಶನವೇ ಒಂದು ಉದಾಹರಣೆಯೂಗಿದೆ. ಈ ಸಿರಿದರ್ಶನದಲ್ಲಿ ಭಾಗವಹಿಸುವ ಮಹನೀಯರು ಮತ್ತು ಮಹಿಳೆಯರಲ್ಲಿ ಅನೇಕ ಮಂದಿ ವಿದ್ಯಾವಂತರೂ ಇರುತ್ತಾರೆಂಬುದು ಗಮನಿಸತಕ್ಕದ್ದಾಗಿದೆ.

ಇಡೀ ರಾತ್ರಿ, ಅಡಕೆ ಹಿಂಗಾರವನ್ನು ಕೈಯ್ಯಲ್ಲಿ ಹಿಡಿದುಕೊಂಡು, ಭಕ್ತಿಯ ಪಾಡ್ದನಗಳನ್ನು ಹೇಳುತ್ತ ಬೆಳಗಿನ ತನಕ ನಡುಗುತ್ತಿರುವ ಈ ಮಹಿಳೆಯರ ಸೇವೆ ನಿಜಕ್ಕೂ ಅದ್ಭುತವೂ ವಿಸ್ಮಯಕರವೂ ಆಗಿದೆ. ಇಲ್ಲಿಯ ಇನ್ನೊಂದು ವಿಸ್ಮಯಕರ ಸಂಗತಿಯೆಂದರೆ, ಇಡೀ ರಾತ್ರಿಯನ್ನು ದರ್ಶನದಿಂದಲೇ ಕಳೆದ ಆ ಮಹಿಳೆಯರನ್ನು ಮರುದಿನ ಬೆಳಿಗ್ಗೆ – ನಿಮಗೇನಾದರೂ ಆಯಾಸವಾಗಿದೆಯೇ? ಎಂದು ಪ್ರಶ್ನಿಸಿದರೆ 'ನಮಗೇನೂ ಆಯಾಸವೇ ಕಾಣುತ್ತಿಲ್ಲ, ಎಂದು ಹೇಳುತ್ತಾರೆ.

ತುಳುನಾಡಿನ ಇತಿಹಾಸಕ್ಕೆ ಸಂಬಂಧಿಸಿರುವ ಈ ಕ್ಷೇತ್ರದಲ್ಲಿ ಅಲ್ಲಲ್ಲಿ ಬಿದ್ದುಕೊಂಡಿರುವ ಶಿಲಾಶಾಸನಗಳ ಅಧ್ಯಯನದಿಂದ, ಈ ಲೋಕನಾಡುಕ್ಷೇತ್ರದ ನಿಜವಾದ ಗತೈತಿಹಾಸ ಬೆಳಕಿಗೆ ಬರಬಹುದು.

ಇದೇ ರೀತಿಯ ಹಲವು ಪ್ರಸಿದ್ಧ ಕ್ಷೇತ್ರಗಳು ಬೆಳ್ತಂಗಡಿ ತಾಲೂಕಿನಲ್ಲಿ ಸಂಶೋಧಕರ ದೃಷ್ಟಿಗೆ ಇನ್ನೂ ಬೀಳದೆ ಉಳಿದಿವೆ.

ಅರಸಿನಮಕ್ಕಿಯ ಸಮೀಪದ ಶಿಶಿಲೇಶ್ವರ ದೇವಸ್ಥಾನದ ಸನಿಹ ಇರುವ ಪಾಂಡವರ ಕಾಲದ ಅವಶೇಷಗಳು, ಕನ್ಯಾಡಿಯ ಸಮೀಪದ 'ಧರ್ಣಗಾಯಿ' ಎಂಬ ಸ್ಥಳ, ಜಾರ್ಮೂಡಿಯ ಸಮೀಪ ಇರುವ 'ಮತ್ತೂರು, ಎಂಬ ಪಾಂಡವರ ಕಾಲದ ಭೀಮನ ಗದೆಯಿಂದ ಉಂಟಾದ "ಗದಾತೀರ್ಥ" ಇರುವ ಕ್ಷೇತ್ರ ಇವೆಲ್ಲವೂ ಸಂಶೋಧಕರಿಗೆ ನವೋತ್ಸಾಹವನ್ನು ನೀಡುವ ತಾಣಗಳಾಗಿವೆ.

ಮತ್ತೂರಿನ ಗದಾತೀರ್ಥ ಎಂಬ ತಾಣದ ನೀರು ಎಂದೂ ಕೆಡದಿರುವ ಕಾಶಿಯ ಗಂಗಾಜಲಕ್ಕೆ ಸಮವಾಗಿದೆ. ಈ ನೀರನ್ನು ಬಾಟಲಿಯಲ್ಲಿ ತುಂಬಿಸಿ ಗಂಗಾಜಲದಂತೆ ಎಷ್ಟು ವರ್ಷ ಇಟ್ಟರೂ ಕೆಡುವುದಿಲ್ಲ ! ಎಂಬೀ ವಿಚಾರವನ್ನು ಕೇಳಿದಾಗ ಯಾರಿಗೂ ಆಶ್ಚರ್ಯವಾಗಬಹುದು. ಆದರೆ ಇದು ಇಂದಿಗೂ ಸತ್ಯ ಸಂಗತಿಯೂಗಿದೆ.

ನಮ್ಮ ಜಿಲ್ಲೆಯ ಸಂಶೋಧಕರು ಈ ತಾಣಗಳ ಕಡೆಗೆ ತಮ್ಮ ಗಮನವನ್ನು ಹರಿಸಿ ಜಿಲ್ಲೆಯ ಗತೈತಿಹಾಸಕ್ಕೆ ಹೊಸ ಕೊಡುಗೆಯನ್ನು ನೀಡಲಿ!

ಶ್ರೀ ಕೆ. ಎನ್. ಭಟ್, ಶಿರಾಡಿಘಾಲ್

ತುಳುನಾಡ ಸಿರಿ

(ಸಂಶೋಧನಾತ್ಮಕ)

ನಿಡಿಗಲ್ (ಬೆಳ್ತಂಗಡಿ ತಾಲೂಕು)ನ ಲೋಕನಾಥೇಶ್ವರ ದೇವಾಲಯ ಮತ್ತು ಸಿರಿದರ್ಶನದ ಪುಣ್ಯಸ್ಥಳ. ಇದು ಮೂವತ್ತು ವರ್ಷಗಳ ಹಿಂದೆ ಕಗ್ಗಾಡು. ಇಂತಹ ಹಲವು ಐತಿಹಾಸ ಪ್ರಸಿದ್ಧ ಸ್ಥಳಗಳ ಹೀಗೆ ಸಂಶೋಧನೆ ನಡೆದರೆ, ಜಿಲ್ಲೆಯ ಇತಿಹಾಸಕ್ಕೆ ಹೊಸ ಬೆಳಕು ದೊರೆತೀತು.

ಗಾಂಧೀ ಅಮೃತವಾಣಿ

ಸಂಗ್ರಾಹಕರು:–ಶ್ರೀ ಎನ್. ಡಿ. ಶೆಟ್ಟಿ, ಮೂಲೂರು

ನನಗೆ ಇನ್ನೊಂದು ಜನ್ಮವೆತ್ತುವುದು ಇಷ್ಟವಿಲ್ಲ. ಆದರೆ ಇನ್ನೊಂದು ಜನ್ಮವೆತ್ತಲೇ ಬೇಕಾಗಿ ಬಂದಲ್ಲಿ ನಾನು ಅಸ್ಪೃಶ್ಯನಾಗಿ ಹುಟ್ಟಬೇಕು. ಆವರ ಕಷ್ಟ, ದುಃಖ ಮತ್ತು ಜವರ ಮೇಲಿದ್ದ ಜನರ ತಿರಸ್ಕಾರ ಭಾವಗಳಲ್ಲಿ ಸಮಭಾಗಿಯೂಗಿ ಅವರನ್ನು ಆ ದೀನ ಸ್ಥಿತಿಯಿಂದ ಉದ್ಧರಿಸಲು ಯತ್ನಿಸುವೆ. ಆಮುದರಿಂದ, ನನಗೆ ಇನ್ನೊಂದು ಜನ್ಮವಿದ್ದರೆ, ದೇವ! ನನ್ನ ಜನ್ಮವು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರಲ್ಲಾಗದೆ ಪಂಚಮರಲ್ಲಿಯೇ ಆಗಲಿ. ಇದೇ ನನ್ನ ಪ್ರಾರ್ಥನೆ.

ಹೃದಯ ಪರಿಶುದ್ಧವಾಗಿದ್ದರೆ, ಎಂತಹ ವಿಪತ್ತೇ ಬರಲಿ, ಆದು ವಿಪತ್ತನ್ನು ಎದುರಿಸಲು ಸಮರ್ಥರಾದ ವ್ಯಕ್ತಿಗಳನ್ನೂ ಕ್ರಮಗಳನ್ನೂ ತನ್ನೊಂದಿಗೇ ತರುತ್ತದೆ.

ಮಕ್ಕಳು ತಂದೆ–ತಾಯಿಗಳ ಶಾರೀರಿಕ ಲಕ್ಷಣಗಳನ್ನಲ್ಲದೆ ಅವರ ಗುಣಗಳನ್ನೂ ಅನುವಂಶಿಕವಾಗಿ ಪಡೆಯುತ್ತವೆ.

ನನ್ನ ಮಟ್ಟಿಗೆ ಹೇಳುವುದಾದರೆ ನನಗೆ ನನ್ನ ಬಂಧುಗಳು, ಆಪರಿಚಿತರು, ದೇಶೀಯರು–ವಿದೇಶೀಯರು ಬಿಳಿಯರು ಕರ್ರಿಯರು, ಹಿಂದುಗಳು–ಇತರ ಧರ್ಮಗಳ ಭಾರತೀಯರು ಎಂಬ ಯಾವ ಭೇದ ಭಾವವೂ ಇಲ್ಲ.

ಯಾವ ಕೆಲಸವನ್ನು ಶುದ್ಧ ಮನಸ್ಸಿನಿಂದ ಮಾಡಿರುತ್ತೇವೆಯೋ ಅದರ ನಿಜವಾದ ಪರಿಣಾಮವೆಂದೂ ಅಶುಭವಾಗದು.

ಪತಿವ್ರತೆಯ ಸತ್ವ ಪರೀಕ್ಷೆಯಂತೆಯೇ ಇತರ ಎಲ್ಲಾ ಸದ್ಗುಣಗಳ ಪರೀಕ್ಷೆಯೂ ಆಗುವುದು. ಅಹಿಂಸೆಯ ಸತ್ವ ಪರೀಕ್ಷೆಯೂ ಸಹ ಅದು ಹಿಂಸೆಯನ್ನು ಎದುರಿಸಿದಾಗ ಆಗುವುದು.

ಸಮಾಜಸೇವೆ ಪರಿಣಾಮಕಾರಿಯೂಗ ಬೇಕಾದರೆ ಅದು ಸದ್ದು ಗದ್ದಲವಿಲ್ಲದೆ ನಡೆಯಬೇಕು.

ಹತ್ತೊಂಭತ್ತು

ಅಪರಿಚಿತರು

(ಪದಿನೇಳನೇ ಪುಟದಿಂದ)

ಈ ಹೋಟೇಲಿಗೆ ಕಂಡಾಪಟ್ಟೆ ಬೈದೆವಲ್ಲಾ ಎಂದು ನಮ್ಮನ್ನು ನಾವೇ ಶಪಿಸಿಕೊಂಡು ಮೆಟ್ಟಲಿಳಿದು ದಾರಿಯಲ್ಲಿ ಹೆಜ್ಜೆ ಇರಿಸಿದೆವು.

ಅಷ್ಟರಲ್ಲಿ ಮೂಡಿ ಓಡಿಬಂದು ನಾವು ಇಳಿದುಕೊಂಡ ಸ್ಥಳ ಕೇಳಿ ಹೋದ. ನಮಗೆ ಮತ್ತೆ ಇದೇನು ಪೀಜ್ಜ ಎಂದುಕೊಂಡು ಈ ರೋಡಿನೇ ಇಪ್ಪ ಬಾರದಿದ್ದರಾಯಿತು ಎಂದೇ ಸಾಮಿಳಿದಿದ್ದ ರೂಮಿಗೆ ಬಂದು ಬಿಟ್ಟೆವು. ಮೊದಲು ಶೆಲಸ ಸ್ನಾನ. ಗಂಡಸರು—ಮಳ್ಳಳ್ಳಿ—ಮುಗಿಸಿದ ಮೇಲೆ ನಾವೆಲ್ಲ ಸ್ನಾನ ಮುಗಿಸಿ ಅಲಂಕಾರ ಮಾಡಿಕೊಂಡು ಅರ್ಧ ಘಂಟೆಯಲ್ಲಿ ಹೊಸ ಮನುಷ್ಯರಾಗಿ ಸ್ವಲ್ಪ ವಿಶ್ರಾಂತಿ ಪಡೆದು ಆ ನಂತರ ಪ್ರೇಕ್ಷಣೀಯ ಸ್ಥಳಗಳನ್ನು ನೋಡುವುದೆಂದು ನೂಪಾಕತೆಯಾಗಿತ್ತು. ಖುಟ್ ಖುಟ್ ಎಂದು ಬಾಗಿಲು ಬಡಿದಾಗ—ಹೊಸ ಸ್ಥಳ, ಹೊಸ ಊರು! ಜನರಿಂದ ದೂರಾಗಿ ಇಲ್ಲಿ ವಿಶ್ರಾಂತಿಗೆಂದು ಬಂದರೆ—ಇಲ್ಲಿಯೂ ಸ್ವಾಗತಕ್ಕೆ ನಿಲ್ಲಬೇಕೇ? ಎಂದು ಬಾಗಿಲು ತೆರೆಯುತಿದ್ದಂತೆ ಹೆಣ್ಣಿನ ಬುಟ್ಟಿ ಮಿತಾಯಿ ಬುಟ್ಟಿ ಹೊತ್ತು ತಂದ ಹುಡುಗ ಒಳಕ್ಕೆ ನೇರಾಗಿ ಬಂದು ಅಲ್ಲೇ ಮೂಲೆಯಲ್ಲಿರಿಸಿ, ತುಟಿ ಪಿಟ್ಟೆನ್ನದೆ ಹೊರಟು ಹೋದ. ದೃಷ್ಟಿ ಹೊರಜಾಚಿದರೆ ಹೊಸಬ ರೊಬ್ಬರು ಕಾರಿನಿಂದ ಇಳಿದು ಇಲ್ಲಿಗೆ ಬರುವಂತಿದೆ! ನಮ್ಮ ತಲೆಯಲ್ಲ ಮತ್ತೆ ಯೋಚನೆಗೆ ದಾರಿಯಾಗಿದೆ. "ತಿಳಿಯದೆ ಈ ಹೊಸ ಮನುಷ್ಯ ಈ ರೂಮು ತನ್ನದೆಂದು ತುಂಬಿದ ಬುಟ್ಟಿಗಳನ್ನು ಇಲ್ಲಿಗೆ ಕಳುಹಿಸಿ ತಾನೂ ಬರುತ್ತಿರಬೇಕು!" ನಮ್ಮನ್ನು ಕಂಡು ಇನ್ನು ಪೆಚ್ಚಾಗುವ ಚಿತ್ರ ಕಣ್ಣೆದುರು ಸೃಷ್ಟಿಯಾಗಿದೆ.

ಆಗುಂತಕ ಸೀದಾ ರೂಮಿನೊಳಕ್ಕೆ ಬಂದು ಮತ್ತೆ ಕೈಜೋಡಿಸಿ "ನಮಸ್ಕಾರ; ಇದನ್ನೆಲ್ಲ. ಅಣ್ಣ ನಿಮಗೆ ಕೊಟ್ಟು ಕಳುಹಿಸಿದ್ದಾರೆ. ನಾನು ಅವರ ತಮ್ಮ ಸುಧಾಮ ಶೆಟ್ಟಿ. ನಮ್ಮವರು ಇಲ್ಲಿಗೆ ಬಂದಿದ್ದಾರೆಂದು ತಿಳಿದು ನಮಗೆಲ್ಲ ಕುಂದಾ ಕುಶಿಯಾಗಿ ಬಿಟ್ಟಿದೆ. ಈ ತುಳು ಮಾತು ಕೇಳಿ ಊರ ನೆನಪಾಗಿ ಬಿಟ್ಟಿದೆ. ನೀವೆಲ್ಲ ತಮೂರಾಗಿದ್ದೀರಲ್ಲ? ಮೊದಲು ದೇವಿಯ ದರ್ಶನ ಮಾಡೋಣ. ಆ ನಂತ್ರ ಉಳಿದ ಯೋಚನೆ-ಬನ್ನಿ ಕಾರು ಹೊರಗಿದೆ. ಮಧ್ಯಾಹ್ನ ಒಂದು ಘಂಟೆಗೆ ಊಟಕ್ಕೆ ಅಲ್ಲೆ ಕರೆದು ಕೊಡುಬರಲು ಅಣ್ಣ ಹೇಳಿದ್ರು."

ಈ ಮಾತು ಆ ಮನುಷ್ಯ ಹೇಳಿದಾಗ ನೀವೇ ಯೋಚನೆ ಮಾಡಿ, ನಮ್ಮ ಸ್ಥಿತಿ ಏನಾಗಿರಬೇಡ. ಬಂದು ಇನ್ನೂ ಎರಡು ಘಂಟೆಯೂ ಆಗಿಲ್ಲ....ಆಗಲೇ ಇಷ್ಟೆಂದು ಆತಿಥ್ಯ? ನಮ್ಮ 'ಬೇಡ'ಗಳನ್ನು ಆ ಮನುಷ್ಯ ಕೇಳಿದರಲ್ಲ? ಕಾರಿನಲ್ಲಿ ನೂತಿಲ್ಲದೆ ಹೋಗಿ ಕೂತಾಯಿತು. ಮಹಾಲಕ್ಷ್ಮಿಗೆ ಕಾಯಿ—ಹಣ್ಣು ಹೂವಿನಿಂದ ಹಿಡಿದು ಅರವಟಿಗೆಯನ್ನು ತೋರಿಸಿ—ಮಧ್ಯಾಹ್ನ ಹೋಟೇಲಲ್ಲಿ ಅಣ್ಣನ ಭರ್ಜರಿ ಊಟ ಮುಗಿಸಿ ಮತ್ತೆ ರೂಮಿನಲ್ಲಿ ಬಿಟ್ಟ ಸುಧಾಮ ಶೆಟ್ಟಿ ಹೋಗುವಾಗ ಹೇಳಿದ್ರು "ಎರಡು ಗಂಟೆ ವಿಶ್ರಾಂತಿ ತೆಕ್ಕೊಳ್ಳಿ—ಆನಂತ್ರ ಪ್ರೇಕ್ಷಣೀಯ ಸ್ಥಳ ನೋಡಿ ಬರುವಾ" ಕಾರು ಬ್ರುರ್ ಎಂದು ಹೋಯಿತು.

ಇವರ ಔದಾರ್ಯದ ಉರುಳು ಕುತ್ತಿಗೆ ಬಿಗಿಯುತ್ತಿದೆಯೋ ಎಂದುಕೊಳ್ಳುವಂತಾಗಿದೆ ನಮ್ಮ ಸ್ಥಿತಿ. 3½ ಗಂಟೆಗೆ ಕಾರು ಬಂದು ನಿಂತಾಗ — ನಮಗೆ ತಿಳಿಯದಂತೆ ಕಾಲುಗಳು ಕಾರಿನ ಬಳಿ ಬಂದವು. ಪ್ರೇಕ್ಷಣೀಯ ಸ್ಥಳಗಳನ್ನು ಸುಧಾಮ ಶೆಟ್ಟಿಯ ನೆರವಿನಿಂದ ಬಹು ಸಂಭ್ರಮದಿಂದ ನೋಡಿದೆವು. ಇನ್ನೂ ಎರಡು ದಿನಗಳು ನಾವು ಅಲ್ಲ ಹೆಚ್ಚು ಇರುವುದನ್ನು ಮೊದಲೇ ಗೊತ್ತು ಮಾಡಿಕೊಂಡಿದ್ದೆವು. ಆದರೆ ಈ ತಣ್ಣ-ತಮ್ಮಂದಿರ ಉಪಚಾರದಲ್ಲಿ ನಮಗೆ ನಮ್ಮತನವನ್ನುವ ಯಾವ ಹಕ್ಕೂ ಉಳಿದಿರಲಿಲ್ಲ. ನೋಡುವ ಸ್ಥಳಗಳೆಲ್ಲವನ್ನು ನಿನೊಂದೂ ಬಿಡದೆ ನೋಡಿಯಾಗಿದೆ. ಪರ್ಸಿನಲ್ಲಿ ತಂದಿದ್ದ ಹಣ ಕರಗದೆ ಹಾಗೇ ಭದ್ರವಾಗಿ ಕುಳಿತಿದೆ. ಈ ತಣ್ಣ-ತಮ್ಮಂದಿರ ಆದರದಲ್ಲಿ ನಾವು ಮೂಕರಾಗಿ ಹೋಗಿದ್ದೇವೆ. ಇನ್ನೂ ಅವರ ಒಳಿತಿಗಾಗಿಯೇ ನಾವು ಮಾರನೆಯ ದಿನ ಊರು ಬಿಡಬೇಕೆಂದು ಗೊತ್ತು ಮಾಡಿ, ಸಮಯ ಕೈ ಸರಿಯಾಗಿ ಫ್ಲೈಟ್ಗೆ ನಿಲ್ದಾಣಕ್ಕೆ ಬಂದರೆ, ನಮಗೂ ಮೊದಲು ಸುಧಾಮ ಶೆಟ್ಟಿ II class ಟಿಕೇಟು-ಎರಡು ಬುಟ್ಟಿಯಲ್ಲಿ ಹಣ್ಣು-ತಿಂಡಿಗಳನ್ನೂ ತಂದಿಟ್ಟು ನಿಂತಾಗ ಹೊರನಾಡಿನಲ್ಲಿ ಪರಿಚಯವಿಲ್ಲದ ಈ ಮುಖಗಳು ಆಪರಿಚಿತವೆಂದು ಹೇಗೆ ಹೇಳಿಕೊಳ್ಳಬೇಕು? ಆನಂತರ ಈವರೆಗೂ ಆನಂತ ಶೆಟ್ಟಿ-ಸುಧಾಮ ಶೆಟ್ಟಿಯನ್ನು ನಾನೆಂದೂ ಕಂಡಿಲ್ಲ!

ಟ್ರೇನಿನಲ್ಲಿ ಬಸ್ಸಿನಲ್ಲಿ ಇಷ್ಟೊಂದು ರಾಜೋಪಚಾರ ಅಲ್ಲದಿದ್ದರೂ ಚೆಕ್ಕೆ ಪುಟ್ಟ ಪ್ರಸಂಗಗಳು ನಡೆಯುವುದು ಎಷ್ಟೋ ಅನುಭವಕ್ಕೆ ಬಂದ ವಿಷಯಗಳೇ. ಸ್ಥಳದ ಇಕ್ಕಟ್ಟು, ಪ್ರಯಾಣದ ದಣಿವು, ಮುಖ ಸಿಂಡರಿಸಿಕೊಂಡು ಒಂದು ಇಂಚೂ ಸ್ಥಳ ಬಿಡದೆ ಕೂತವರು—ಮುಂದೆ ಹೋದಂತೆ, ಬಸ್ಸು ದಾರಿಯಲ್ಲಿ ಸಾಗುತ್ತಿದ್ದಂತೆ, ತಮ್ಮ ಭಕ್ತಿಯನ್ನು ಪಡುವ—ಇಲ್ಲವಾ ತಮ್ಮ ಊರಿನವರೇ ಎಂದುಕೊಂಡಾಗ ಅಥವಾ ಎಳೆ ಮಗುವನ್ನು ಎತ್ತಿನಿಂತ ಅಸಹಾಯಕ ಸ್ಥಿತಿಯನ್ನು ಕಂಡಾಗ, ಬರಿಯ ಸ್ಥಳವೇಕೆ? ಚಹೆ — ಕಾಫಿ ತಂದು ಕೊಡುವ ಉದಾರತೆ ತೋರುವುದಲ್ಲದೆ, ತಮಗೆಂದು ತಂದಿದ್ದ, ಊಟ-ತಿಂಡಿಯಲ್ಲೂ ಪಾಲು ಕೊಡುತ್ತಾರೆ. ದಾರಿತಪ್ಪಿದ ಮನೆಯನವರೆಗೆ ಮುಟ್ಟಿಸುವುದು, ಇಂಥ ಹಲವಾರು ಪ್ರಸಂಗಗಳು.

ಪರಿಶ್ರಮದ ಫಲವನ್ನು ನಾವು ಪರೀಕ್ಷಿಸಿ ಸಾಬಾರದು. ಎಲ್ಲಾ ಒಳ್ಳೆಯ ಜಾರ್ಯಗಳೂ ತಂತಮ್ಮವಾಗಿ ಫಲಪ್ರದವಾಗುವುದೆಂದೇ ನನ್ನ ಭಾವನೆ.

ಸುಧಾರಣೆ ಮಾಡುವ ಭರದಲ್ಲಿ ವ್ಯಕ್ತಿ ತನ್ನ ಹದ್ದು ಮೀರಿ ಹೋಗಬಾರದು.

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.
Running H and C water.

Moderate Charges

Railway Station, Laundry. Post office and Entertainment Area Nearby.

Large airy Rooms; Roof garden
Quiet, Calm Atmosphere
Personalised Service.



ಬ್ಯಾಂಕ್ ರಾಷ್ಟ್ರೀಕರಣದ ತೃತೀಯ ವಾರ್ಷಿಕೋತ್ಸವದ ಸಂದರ್ಭದಲ್ಲಿ ವಿದ್ಯುತ್ ದೀಪಗಳಿಂದ ಅಲಂಕರಿಸಲ್ಪಟ್ಟ ಸಿಂಡಿಕೇಟ್ ಬ್ಯಾಂಕಿನ ಮಣಿಪಾಲದಲ್ಲಿನ ಪ್ರಧಾನ ಕಚೇರಿಯ ನೋಟ.



ಶ್ರೀ ಹರ್ಷ — ರೂಪಕಶ್ರೀ

(ಹದಿನಾರನೇ ಪುಟದಿಂದ)

ಪದದೊಳ್ ಶೈಲಜೆ ತುಂಗಮೌಳಿಗೆರ
ಚಲ್
ಸೋಲ್ಗೆಯ್ಗಳಿಂ ಮಧ್ಯದೊಳ್।
ಬದಿರ್ದಾ ನಲ್ಮೆಯ ಕ್ರಾಣ್ಮೆ
ಪುಬೊಗಸೆ ತಾಂ
ಪಾಲಿಕ್ಕೆ ನಿವ್ಮಿಲ್ಲರಂ॥ (ರತ್ನಾವಳಿಯ
ಪಿಂಗಟ್ಟು)

ಜಾನಂ ನೈವೆನೊಲಾವಳಂ ನೆನೆವೆ ಪೇಳ್
ಗಣ್ಪೆಟ್ಟೆಣಂ ನೋಳ್ಪುದಯ್।
ನೀನಿಂ ತಂಗಜ ಬಾಣ ಪೀಡಿತೆಯರಂ
ಕಾಪಾಡೆ ಕಾವಂ ಗಡಾ।
ನೀನೆಯ್ ಕಾರುಣಿಕಂ ವೃಥಾ
ಕಟುಕನಾರ್
ನಿನ್ನಿಂದ ಮೆಂದೇವಥೆಂ॥
ತಾನುಂ ಮೂರವಧೂಕ್ತ ನೋವುಗೆ
ನಿತಾಂತಂ ಬೋಧಿ ನಿಸ್ಯಂ ಜಿನಂ॥
(ನಾಗಾನಂದದಲ್ಲಿ)

ಸಂಸ್ಕೃತದ ಅನುವಾದಗಳಲ್ಲಿ (ಅಭಿನವ ಕಾಳಿದಾಸರ ಶಾಕುಂತಲಾದಿ ಕನ್ನಡ ಕೃತಿಗಳಲ್ಲಿ)ಮೂಲವ ಅವೆಲ್ಲಾ ನುಡಿ ನಡಿಯೊಗಿ ಬಂದಿಲ್ಲ. ಪರಂತು ಪಂಡಿತ ಕವಲಿಯವರು ಮೂಡಿದ ಈ ಅನುವಾದಗಳಲ್ಲಿ ಮೌಲಿಕ ಪದಜಾಲವು ಕನ್ನಡಿಸಲಾಗಿದೆಯೆಂಬುದೇ ಇಲ್ಲಿಗೊಂದು ಕಾಣುವ ವೈಶಿಷ್ಟ್ಯ. (ಒಂದೆರಡು ಕಡೆಗಳಲ್ಲಿ ಕೆಲವು ನುಡಿಗಟ್ಟು ಹೆಚ್ಚಿದೆ. ಕೆಲವು ನುಡಿತಗಳು ಮೂರ್ಖಾಟಾಗಿವೆ. ಹಾಗಾಗಿ ಮೌಲಿಕಗಳು ಸಾಕಲ್ಯವಾಗಿ ಅಲ್ಲಿ ಬಂದಿಲ್ಲವೆಂಬುದರಿಂದ ಅಲ್ಲಿ ಮೌಲಿಕಾರ್ಥಕ್ಕೇನೂ ತೊಂದರೆಯಿಲ್ಲವೆಂಬುದೂ ನಿಜ!)

ಕನ್ನಡದ ಮೂರು ಕೃತಿಗಳ ಈ ನಾಂದಿ ಪದ್ಯಗಳಲ್ಲಿ ಕನ್ನಡದ ನುಡಿಗಳ ಹೆಚ್ಚಳವಿದೆ, ನವಿರಿದೆ. 'ಗಾಂಗ ಮೌಳಿ'ಯೆಂಬುದು ಪ್ರಾಚೀನರಲ್ಲಿ ವಿರಳವಾಗಿರುವುದನ್ನು ಆಧರಿಸಿದಂತಿದೆ. (ರತ್ನಾವಳಿಯ ಅನುವಾದಗಳೆರಡು ತರದಲ್ಲಿ ನಡೆದಿವೆ. ಆ ಪದ್ಯಗಳು ಹೊಸಗನ್ನಡ ಹಳೆಗನ್ನಡಗಳೆರಡರಲ್ಲೂ ಬರೆದಿವೆ. ಅದನ್ನೇ ಎರಡು ರೀತಿ ಕಾಣುತ್ತೇವೆ.) ನಾಗಾನಂದದ 'ಜನ'ನೆಂದರೆ 'ಬುದ್ಧ'ನೆಂದು 'ಅಮರಕೋಶ'ದಿಂದಲೂ ತಿಳಿಯುತ್ತದೆ. ನಾಗಾನಂದ ಕೃತಿಯಲ್ಲಿ ಬೌದ್ಧರೀತಿಯಿದೆ. ಈ ಕೃತಿತ್ರಯದಲ್ಲಿ ಆದಿಯಿಂದ ಅಂತ್ಯದ ತನಕ ಎಲ್ಲಾ ಪದ್ಯಗಳು ಹೀಗೆ ಹೊಸಗನ್ನಡದಲ್ಲಿ ಬರೆಯಲಾಗಿವೆ. (ನಾಗಾನಂದವು ಈ ಮೊದಲೇ ಧಾರವಾಡದಲ್ಲಿ ಬಿ. ಎ. ತರಗತಿಯ ಉಪಪಠ್ಯವಾಗಿದೆ. ಉಳಿಸವೆರಡು ಕೂಡಿದ ಈ ಸಂಕಲನವು ಮೈಸೂರು ಬೆಂಗಳೂರುಗಳಲ್ಲಿ ಅಖಂಡವಾಗಿಯೋ ಖಂಡವಾಗಿಯೊ ಉಪ ಪಠ್ಯಗಳಾದರೆ, ಅನುವಾದಕರಿಗೆ ತುಸು ಪ್ರೋತ್ಸಾಹಿಸಿದಂತಾದೀತು!)

೨ ಭರತ ವಾಕ್ಯಗಳು:

ಆವೊಂದು ಕೃತಿಯನ್ನು ಕುರಿತು ಪರಿಚಯಿಸುವಲ್ಲ ಸಮಗ್ರ ರೀತಿಯೊಂದಾದರೆ, 'ಸ್ಥಾಲೀ ಪುಲಾಕ ನ್ಯಾಯ'ದಂತೆ ಆದ್ಯಂತ್ಯದ ವಾಕ್ಯ-ಪದ್ಯಗಳನ್ನು ಪರಿಶೀಲಿಸುವುದು ಇನ್ನೊಂದು ಕ್ರಮವಾಗಿದೆ. ಆ ನೋರೆಗೆ, ಈ ಮೂರು ಕೃತಿಗಳ 'ನಾಂದಿ'ಯೊಂದಿಗ 'ಭರತ ವಾಕ್ಯ'ಗಳನ್ನು ಎತ್ತಿ ವಾಚಕರ ಅವಗಾಹನೆಗೆಳಸಿ ಬರಿದಿದ್ದೇನೆ.

ಧರೆ ಸಸ್ಯಾಢ್ಯಮದಕ್ಕೆ,
ಸೋನೆಗರೆಯಲ್ಕಿಂದ್ರಂ,
ಸದಾ ಭೂಸುರರ್।
ಸುರರಿಂಗೀಗೆ ಸುಯಜ್ಞದೊಳ್
ವಿಧಿವದಿಷ್ಟಾರ್ಥಂಗಳಂ ಸಂತತಂ॥
ದೊರೆಗೆಲ್ಲಂ ಸುಜನಕ್ಕಧೀಷ್ಟ ಸುಖಮೂ
ಕಲ್ಪಾಂತಮುಂ, ನೀಚನಿ।
ಷ್ಠುರ ವಾಕ್ಯಂ ಚಿರನಾಶಮಕ್ಕೆನುಃ
ಸಭಾ ಸಭ್ಯಂ ಶಿವಂ ಸುಂದರರ್॥
(ಪ್ರಿಯದರ್ಶಿಕೆಯಲ್ಲಿ)

ಇಂದ್ರ ಮಳೆಗರೆಯಲ್ಕೆ, ಇಳೆ ಬೆಳೆ
ತುಂಬಿರಲಿ, ಜನ್ನಗಳಲಿ।
ಸುರರಿಗಿಷ್ಟಾನಂದವೀಯಲಿ
ಭೂಸುರರು, ಚಿರಸುಖದಲಿ।
ಸಜ್ಜನರು ಓಲಾಡಲಾ ಕಲ್ಪಾಂತ
ವಜ್ರದ ಲೇಪದಾ।
ಪಿಶುನದುರ್ವಚನಂಗಡಗಲಿ,
ಶಾಂತಿ ಶಾಂತಿಃ ಸರ್ವದಾ॥
(ರತ್ನಾವಳಿಯಲ್ಲಿ)

ಜಳದಂಗಳ್ ಶಿವಿತಾಂಡವಕ್ಕೊದಗುತುಂ
ಸತ್ಕಾಲದೊಳ್ ವೃಷ್ಟಿಯಂ।
ದೆಳೆಯುಂ ಸಸ್ಯ ಹರಿತ್ಪಟ ಪ್ರಸರದಿಂ।
ಕೈಗೈಗೆ; ಸನ್ಮಾರ್ಗಮಂ।
ತಳೆಯುತ್ತುಂ ವಿಪದಂಗಳಂ ಕಳೆಯುತುಂ,
ಮೊತ್ಸರ್ಯಾಮಂ ತ್ಯಾಗಿಸು।
ತ್ತೊಳಿತಂ ಸರ್ವರು ಮೂಳ್ಗಿ ಬಾಳ್ಗೆ
ಮುದದಿಂ ಭಾವೈಕ್ಯ ಭಾಂಧವ್ಯಗಿಂ॥
ಮತ್ತುಂ....
ಶಿವಮಕ್ಕೆಮ ಜಗಕೆಲ್ಲಂ।
ಬುವಿಯೊಳ್ ಜೀವರ್ಕಳಕ್ಕೆ
ಪರಹಿತನಿರತರ್।
ತವಿಸುಗೆ ದೋಷಂಗಳ ಸಂ।
ಭವಿಸುಗೆ ಭದ್ರಂ ಶುಭಂ
ಸುಮಂಗಳಮನಿಶಂ॥ (ನಾಗಾನಂದದಲ್ಲಿ)

'ಮಂಗಳಗಂಗೋತ್ರಿ'ಯ ನಿರ್ದೇಶಕರಾದ ಶ್ರೀ ಪ್ರಾಧ್ಯಾಪಕ ಎಸ್. ವಿ. ಪರಮೇಶ್ವರ ಭಟ್ಟರು ಬರೆದ ಒಂದು ಪುಟದ ಅಭಿಪ್ರಾಯವು ಪುಸ್ತಕದ (3 ಕೃತಿಗಳ) ಅನುವಾದದ-ಅನುವಾದಕರ ಬಗೆಗೆ ಸೂಚ್ಯವಾಗಿ, ಮನೋಜ್ಞವಾಗಿದೆ. ಮೈಸೂರ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರಾಧ್ಯಾಪಕ ಶ್ರೀ ದೇ. ಜ. ಗೌ. ಅವರಿಗೆ ಈ ಕೃತಿ ಗೌರವ ಪೂರ್ವಕ ಸಮರ್ಪಿಸಲಾಗಿದೆ. ಪಂಡಿತ ಕವಲಿಯವರು ಎಪ್ಪತ್ತನೂರರ ಹಂತದಲ್ಲೂ ಇಂತಹ ಕೃತಾರ್ಥತೆಯ ಕಾರ್ಯವೆಸಗಿದ್ದಾರೆ. ಕನ್ನಡ ರಾಜ್ಯದಲ್ಲಿ ಶ್ರೀಯುತರಿಗೆ ಬಹುಮಾನಗಳು (ಮೂಸಾಶನವಾಗಲೀ ಕೇಂದ್ರದ ಕೊಡುಗೆಯೂಗಲೀ) ದೊರೆಯಲೆಂದು ಹಾರಯಿಸಿ, ಈ ಚಿಕ್ಕ ಬರೆಹ ಪೂರಯಿಸಲಾಗಿದೆ!

●●

With Best Compliments from

Grams: ALINESOTEL Phone: 53786 53787

AIRLINES HOTEL

NO. 4, Madras Bank Road,

Bangalore-1 A

ಕವನ

ಕವನ ಬರೆಯುವದಕ್ಕೆ
ಪೆನ್ನು-ಕಾಗದ ಉಂಟು, ಕೈ ಉಂಟು
ಟವಾಲು ಪೆಟ್ಟಿಗೆಯ ತೆರದಿ—
ಮುಚ್ಚಿಯೂ ಉಂಟು; ತೆರೆದುಕೊಂಡೂ
ಉಂಟು
ಅವಕಾಶ।

○ ○ ○

ಮಸಣದ ಚಿತೆಬಸಿಗೆ
ಮೈಯ ಕಾಸುವ ನಾಯಿ
ಹೆಣಕಾಗಿ ಹಾತೊರೆದು ಕಾದು
ಕುಳಿತರೂ ಇಲ್ಲ
ಕಂಗೆಟ್ಟ ಕುದುಕಿದರೂ ಕಾವೇರಿ ಬಠಲಿಲ್ಲ
ಯಾವ ಸತ್ತಿದ್ದೂ ಒಂದು ಇಲ್ಲವಲ್ಲ —
ಮನದ ಸಂತೃಪ್ತಿಗೆ !
ಬೊಗಳು, ರಗಳೆಯ ತೆಗಳು
ಹುಳಿ ಖಾರ ಸಿಹಿ ಸಪ್ಪೆ
ಹುಡುಕಿದರೂ ಇರಲಿಲ್ಲ ಒಂದೂ ಆಗಳು
ಬಯಕೆ ಹರಿದಿಲ್ಲ, ಕಾವು ಮೂಸೆಲೇ
ಇಲ್ಲ
ಕೂತು ಕುಳಿತೇ ಕೂತು ದಿನವು
ಆಕಳಿಸಿತ್ತು
ಚಳಿಯ ಸಮಯದ ಉಚ್ಚೆ- ಕಟ್ಟಿ ಬಂತು
ಸುತ್ತಾಡಿ ನಾಯಿ ಗಡಿಯ ಕಲ್ಲಿನ ಮೇಲೆ
ಹಿಂಗಾಲು ಎತ್ತಿ ಇಳಿಸಿತ್ತು ಅಭಿಷೇಕ.
ಬೆಚ್ಚಗಾಯಿತು ಸ್ವಲ್ಪ
ಮತ್ತೆ ತಂಪು ! !

○ ○ ○

ಬೇಸತ್ತು ಬೇಸತ್ತು
ಚಿಂತನೆಯ ಕಾವಿಪ್ಪ ಕೈಗಡ ಶಂದು
ಹಿಡಿದು ನಡೆ ನುಡಿ ನೋಟ
ತಡೆದು ಸ್ಪಂದನ ತಾನ
ತಳೆದು ನಿಂತಿತು ಕೊನೆಗೂ ಕವಿಯ
ಆ ಸ್ಥಾನ !
ಬಳಿಯ ಹಾಳೆಯ ಮೇಲೆ
ಬೆಚ್ಚಗಾಯಿತು ಸ್ವಲ್ಪ.....
ಓಡೋಡಿ ಕೈ-ಪೆನ್ನು
ಕೊನೆಗೂ ಆಯಿತು ಅನ್ನು
ಶ- ಬ್ದ- ಸ್ಪ- ಲ- ನ- - -

— ಸುಂದರ ನಾಡಕರ್ಣಿ.

ನಾವೇ ಮಲಿನವಾಗಿರುವಾಗ ಉಳಿದವರು ನಿರ್ಮಲವಾಗಿರಬೇಕೆಂದು ಕೇಳುವುದು ಎಂಥ ಅನ್ಯಾಯ!

○ ○ ○

ಯಾವನು ಯಾವುದಾದರೊಂದು ವಿಷಯದ ಮೇಲೆ ಏಕೋದ್ದೇಶದಿಂದ ನಿಶ್ಚಲವಾಗಿ ಮನಸ್ಸನ್ನು ಕೇಂದ್ರೀಕರಿಸುತ್ತಾನೋ, ಅವನು ಕಟ್ಟಕಡೆಗೆ ಎಲ್ಲವನ್ನೂ ಮೂಡಿಬಲ್ಲ ಸಾಮರ್ಥ್ಯವನ್ನು ಪಡೆಯುತ್ತಾನೆ.

○ ○ ○

ನಿಜವಾದ ಸುಖ ಹೊರಗಿನಿಂದ ಬರುವುದಿಲ್ಲ; ಒಳಗಿನಿಂದಲೇ ಬರುತ್ತದೆ.

○ ○ ○

ಉಪವಾಸವು ಮನುಷ್ಯನನ್ನು ಶಾಂತನನ್ನಾಗಿಯೂ, ಶುದ್ಧನನ್ನಾಗಿಯೂ ಮಾಡುತ್ತದೆ.

○ ○ ○

ಸ್ವಾತಂತ್ರ್ಯ ರಜತ ಮಹೋತ್ಸವ

(ಹದಿನೈದನೇ ಪುಟದಿಂದ)

ಜನವರಿ ೧೯೪೯ರಲ್ಲಿ ಕಾಶ್ಮೀರವನ್ನು ತಮಗೆ ಒಪ್ಪಿಸಿದಲ್ಲಿ ಭಾರತದ ಮೇಲೆ ಯೂ ರಾದರೂ ಆಕ್ರಮಣ ನಡೆಸಿದಲ್ಲಿ ಅದು ತಮ್ಮ ಮೇಲೆ ನಡೆಸಿದ ಆಕ್ರಮಣವೆಂದೇ ಪರಿಗಣಿಸುವುದಾಗಿ ಪಾಕಿಸ್ತಾನ ಹೇಳಿತು. ನೆಹ್ರೂಜೀಯವರನ್ನು ಪಾಲಂ ವಿಮಾನ ನಿಲ್ದಾಣದಲ್ಲಿ ಅಯೂಬಖಾನರು ಸಂಧಿಸಿದಾಗ ಅವರೂ ಅದೇ ಮಾತನ್ನು ಆಂದರು. ಅದು ೧೯೪೮ ಸಪ್ಟಂಬರ ದಿನಾಂಕ ಒಂಭತ್ತರಂದು. ಆಗ ಅವರು ಕರಾಚಿಯಿಂದ ಢಾಕ್ಕಾಗೆ ಪ್ರಯಾಣಿಸುತ್ತಿದ್ದರು.

ನೆಹ್ರೂಯುಗ ಕೊನೆಗೊಂಡಿತು. ಪಾಕಿಸ್ತಾನದಲ್ಲಾಗಲೇ ಪ್ರಧಾನಿಯ ಪಟ್ಟವೇ ಬದಲಾಗಿ ಸೈನಿಕ ಆಡಳಿತ ಆರಂಭವಾಗಿತ್ತು.

ಇಷ್ಟೆಲ್ಲಾ ಮಾತುಕತೆಗಳು ನಡೆಯುತ್ತಿದ್ದಾಗಲೂ ಪಾಕಿಸ್ತಾನದಿಂದ ನಿರಾಶ್ರಿತರ ಸ್ರವಾಹ ಎಡೆಬಿಡದೆ ಸ್ರವಹಿಸುತ್ತ ಬಂದಿತ್ತು. ಸೀಮೋಲ್ಲಂಘನೆ ಸಾಗುತ್ತಿತ್ತು. ೧೯೫೫ ಜನವರಿಯಲ್ಲಿ ಪಾಕಿಸ್ತಾನವು ಕಚ್ಚಿನ ಕಂಜರ ಕೋಟೆಯನ್ನು ಆಕ್ರಮಿಸಿತು. ಸುಮಾರು ಆರುತಿಂಗಳ ಕಾಲ ಚಕಮಕಿ ನಡೆದ ನಂತರ ಇತ್ತಂಡದವರೂ ಲಂಡನ್ನಿನಲ್ಲಿ ಸೇರಿ ಯುದ್ಧವಿರಾಮ ರೇಖೆಗೆ ಒಪ್ಪಿದರು. ಇದರಿಂದ ಪಾಕಿಸ್ತಾನಕ್ಕೆ ಆದ ನಷ್ಟವೇನು? ಸೇನೆ—ಆಯುಧ ಇತ್ಯಾದಿ, ಅಷ್ಟೆ. ಆದರೆ ಭಾರತಕ್ಕೆ ಹಾಗಲ್ಲ ನಾವು ನಮ್ಮ ಭೂಭಾಗವನ್ನು ಳೆದುಕೊಂಡೆವು.

೧೯೬೫ ಆಗೋಸ್ಟ್, ಏಳರಂದು ಪಾಕಿಗಳು ಕಾಶ್ಮೀರದಲ್ಲಿ ಕಾಲಿಟ್ಟರು. ಭಾರತ ಆದನ್ನೆದುರಿಸಲೇ ಬೇಕಾಯಿತು. ಸಪ್ಟಂಬರ ಆರರಂದು ಅಯೂಬಖಾನರು ಯುದ್ಧವನ್ನೇ ಸಾರಿದರು. ಸಂಯುಕ್ತ ರಾಷ್ಟ್ರ ಸಂಘದ ಪರಿಶ್ರಮದಿಂದಾಗಿ ೧೭ರಂದು ಯುದ್ಧಸ್ಥಂಭನ ರೇಖೆ ಸೂಚಿಸಲಾಯಿತು.

ಕಾಶ್ಮೀರದ ಜನತೆಗೆ ಸ್ವನಿರ್ಣಯಾಧಿಕಾರವನ್ನಿತ್ತು ಭಾರತ—ಪಾಕ್‌ಗಳ ನಡುವಣ ವಾದ ವಿವಾದಗಳನ್ನು ಬಗೆಹರಿಸಿಕೊಂಡಲ್ಲಿ 'ಯುದ್ಧವಿಲ್ಲ' ಒಪ್ಪಂದಕ್ಕೆ ಸಹಿ ಹಾಕಲು ತಾವು ಸಿದ್ಧವೆಂದು ೧೯೬೬ ದಶಂಬರದಲ್ಲಿ ಅಯೂಬಖಾನರು ಸಂಯುಕ್ತ ರಾಷ್ಟ್ರಸಂಘದ ಸಭೆಯಲ್ಲಿ ಹೇಳಿದರು.

ಪುನಃ ಪಾಕಿಸ್ತಾನವು ಆಕ್ರಮಣ ನಡೆಸಿ ಇಪ್ಪತ್ತೆರಡು ದಿನ ಯುದ್ಧ ಮಾಡಿದ ನಂತರ ಅಯೂಬಖಾನರೂ ಲಾಲಬಹದೂರ ಶಾಸ್ತ್ರಿಯವರೂ ತಾಷ್ಕೆಂಟಿನಲ್ಲಿ ಕಲೆತು ಒಪ್ಪಂದಕ್ಕೆ ಸಹಿ ಹಾಕಿದರು. ಅಲ್ಲಿ ಒಪ್ಪಂದವನ್ನು ಮಾತ್ರ ಅಯೂಬಖಾನ್ ಹೊತ್ತುಕೊಂಡು ಬರಲಿಲ್ಲ, ಶಾಸ್ತ್ರಿಯವರ ಜೀವನವನ್ನೂ ಹೊತ್ತರು ೧೯೬೬ರ ಜನವರಿ ಹನ್ನೊಂದರಂದು. ಇದರಿಂದಾಗಿ ಭಾರತ ಬಹಳಷ್ಟು ಜಾಗವನ್ನು ಬಿಟ್ಟು ಬಿಡಬೇಕಾಯಿತಲ್ಲದೆ ಯುದ್ಧದಲ್ಲಿ ಗೆದ್ದದ್ದನ್ನು ಮಾತುಕತೆಯಲ್ಲಿ ಬಿಟ್ಟು ಕೊಡಬೇಕಾಯಿತು. ಇಲ್ಲಿಗೆ ಶಾಸ್ತ್ರಿಯವರ ಅಧ್ಯಾಯವೂ ಮುಗಿಯಿತು. ಆದರೆ, ಭಾರತ—ಪಾಕ್ ಕಟಿಪಟಿ ಅಂತ್ಯಕಾಣಲಿಲ್ಲ.

ಇಂದಿರಾ ಯುಗ ಆರಂಭವಾಯಿತು. ೧೯೭೧ ಮಾರ್ಚ್‌ನಲ್ಲಿ ಬಂಗ್ಲಾದೇಶ್ ಸ್ವಾತಂತ್ರ್ಯವನ್ನು ಘೋಷಿಸಿತು. ನವಂಬರ್ ಅಂತ್ಯದಲ್ಲಿ ಪಾಕ್ ವಿಮಾನಗಳು ಭಾರತದೊಳಗೆ ಗುಂಡಿನ ಸುರಿಮಳೆಗೆ ಆರಂಭಿಸಿದುವು. ದಶಂಬರ ದಿನಾಂಕ ನೂರರಂದು ಯಹ್ಯಾಖಾನ್ ಭಾರತದ ಮೇಲೆ ಯುದ್ಧ ಘೋಷಿಸಿದರು. ಬೇರೆ ಉಪಾಯವಿಲ್ಲದೆ ಆ ದನ್ನೆದುರಿಸಬೇಕಾಯಿತು. ದಶಂಬರ ಹದಿನೇಳರಿಂದು ವಿಜಯೀ ಭಾರತವೇ ಸಮರ ವಿರಾಮ ಘೋಷಣೆಯನ್ನು ಹಾಕಿತು.

ಯಹ್ಯಾಖಾನರ ದಬ್ಬಾಳಿಕೆ ಮುಗಿದು ಭುಟ್ಟೋ ಎದ್ದು ನಿಂತರು. ಇವರೂ ಬಹಳಷ್ಟನ್ನು ಆರ್ಭಟಿಸಿ ನಂತರ ಒಪ್ಪಂದಕ್ಕೆ ಸಿಮ್ಲಾಕ್ಕೆ ಬಂದರು. ಸೋಮವಾರ ಪ್ರಧಾನಿ ಇಂದಿರಾಜಿಯವರು ೧೯೭೨ರಂದು ಒಪ್ಪಂದಕ್ಕೆ ಅವರು ಸಹಿಹಾಕಿದರು.

ಇಷ್ಟರವರೆಗೆ ಕಹಿಯಾಗಿದ್ದ ರುಚಿಯನ್ನು ಬದಲಾಯಿಸಿ ತಮ್ಮ ತಮ್ಮ ಜನತೆಯ ಉದ್ಧಾರಕ್ಕಾಗಿ, ಪ್ರಗತಿಗಾಗಿ, ಸಂಪನ್ಮೂಲಗಳನ್ನು ಸಮೃದ್ಧಿಗೊಳಿಸಿಕೊಳ್ಳಬೇಕು. ಆ ದಕ್ಕಾಗಿ ಸಂಯುಕ್ತ ರಾಷ್ಟ್ರ ಸಂಘದ ಪಟ್ಟ ಯಂತೆ ಎರಡು ದೇಶದವರೂ ನಡೆದುಕೊಳ್ಳಬೇಕು; ಮಾತುಕತೆಗಳ ಮೂಲಕ ವಾದ—ವಿವಾದಗಳನ್ನು ಪರಿಹರಿಸಿಕೊಳ್ಳಬೇಕು; ಇತ್ತಂಡದವರೂ ಇನ್ನೊಬ್ಬರ ವ್ಯವಹಾರದಲ್ಲಿ ತಲೆಹಾಕದೆ ಅವರ ಸಾರ್ವಭೌಮತ್ವವನ್ನು ಮನ್ನಿಸಿ ಶಾಂತಿಯುಸಹಬಾಳ್ವೆ ತ್ವವನ್ನು ಒಪ್ಪಿಕೊಳ್ಳಬೇಕು; ಈ ಇಪ್ಪತ್ತೈದು ವರ್ಷ ಕಾಲ ಎರಡು ದೇಶಗಳ ಶಾಂತಿಗೂ ಭಂಗ ತಂದಿರುವ ವಿಷಯಗಳನ್ನು ಶಾಂತವಾಗಿ ಬಗೆಹರಿಸಿಕೊಳ್ಳಬೇಕು; ರಾಜಕೀಯ ಸ್ವಾತಂತ್ರ್ಯ ಸಾರ್ವಭೌಮ ಸಮಾನತೆ, ರಾಷ್ಟ್ರೀಯ ಐಕ್ಯ, ಭೌಗೋಲಿಕ, ಒಕ್ಕಟ್ಟನ್ನು ಇತ್ತಂಡದವರೂ ಗೌರವಿಸಬೇಕು; ಇತ್ತಂಡದ ಭೌಗೋಲಿಕ ಒಕ್ಕಟ್ಟು ಅಥವಾ ರಾಜಕೀಯ ಸ್ವಾತಂತ್ರ್ಯಕ್ಕೆ ಭಂಗತರುವ ರೀತಿಯಲ್ಲಿ ಯಾರೂ ವರ್ತಿಸದೆ ಸಂಯುಕ್ತ ರಾಷ್ಟ್ರಸಂಘದ ನಿಯಮದಂತೆ ನಡೆದುಕೊಳ್ಳಬೇಕು.

ಒಬ್ಬರ ಮೇಲೆ ಇನ್ನೊಬ್ಬರು ವಿರುದ್ಧ ಅಪಪ್ರಚಾರ ನಡೆಸಕೂಡದು.

ಸಂಬಂಧವನ್ನು ಶಾಂತ ಸ್ಥಿತಿಗೆ ತರಲಿಕ್ಕಾಗಿ ಒಪ್ಪಿರುವುದು.

ಸಂಪರ್ಕ, ಅಂಚೆ, ತಂತಿ, ಸಮುದ್ರ, ನೆಲ, ವಾಯು ಸಂಬಂಧಕ್ಕೆ ಕ್ರಮತೆಗೆದುಕೊಳ್ಳಬೇಕು; ಇತ್ತಂಡದವರೂ ಪ್ರಯಾಣಕ್ಕೆ ಅನುಕೂಲ ಮಾಡಿಕೊಡಬೇಕು; ವ್ಯಾಪಾರ—ಸಹಕಾರಾದಿಗಳಿಗೆ ತೊಡಗಬೇಕು ವಿಜ್ಞಾನ ಹಾಗೂ ಸಾಂಸ್ಕೃತಿಕ ತಂಡಗಳನ್ನು ಬದಲಾಯಿಸಿಕೊಳ್ಳಬೇಕು; ಇದಕ್ಕಾಗಿ ಸಂಬಂಧಪಟ್ಟವರು ಸೇರಿ ಮಾತುಕತೆ ನಡೆಸಬೇಕು.

ಇಬ್ಬರ ನಡುವೆ ಬಾಳಿಕೆಯ ಶಾಂತಿ ನೆಲಸಲಿಕ್ಕಾಗಿ:—

ಅಂತರ್ರಾಷ್ಟ್ರೀಯ ಗಡಿಗೆ ಇಬ್ಬಣದ ಪಡೆಗಳೂ ಹಿಂತೆರುಗಬೇಕು; ಜಮ್ಮೂ ಕಾಶ್ಮೀರದಲ್ಲಿ ನೂತ್ರ ೧೯೭೨ ದಶಂಬರ ಹದಿನೇಳರ ಸ್ಥಿತಿಯಲ್ಲಿರಬೇಕು; ಈ ಒಪ್ಪಂದಗಳಿಗೆ ಎರಡೂ ಸರಕಾರಗಳೊಪ್ಪಿದ ಮುವ್ವತ್ತು ದಿನಗಳೊಳಗೆ ಸೇನೆ ಪಾಪಸಾತಿ ಕೆಲಸ ಮುಗಿಯಬೇಕು.

ಇಬ್ಬರೂ ಸಂವಿಧಾನದ ನಿಯಮಗಳಿಗನುಸಾರವಾಗಿ ಒಪ್ಪಂದವನ್ನು ಸ್ವೀಕರಿಸಬೇಕು; ಅಂದು ಒಪ್ಪಂದಕ್ಕೆ ಪ್ರಾಣಪ್ರತಿಷ್ಠಾಪನೆ ಕಾರ್ಯವಾಗುತ್ತದೆ.

ಇಬ್ಬಣದ ಸರಕಾರಕ್ಕೆ ಸಂಬಂಧ ಪಟ್ಟವರು ಆಗಾಗ ಕಲೆತು ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುತಕ್ಕದ್ದು.

ಇದಕ್ಕೆ ಇಂದಿರಾಗಾಂಧಿಯವರೂ ಝುಲ್ಫಿಕಾರ್ ಆಲಿ ಭುಟ್ಟೋ ಅವರು ಸಹಿಹಾಕಿರುವದು ೧೯೭೨ ಜುಲ್ಯಾ ಎರಡರಂದು.

ಒಪ್ಪಂದದ ಒಕ್ಕಣೆ ಚೆನ್ನಾಗಿಯೇ ಇದೆ. ಆದುದರಿಂದಲೇ ಕಾಂಗ್ರೆಸ್ಸ್, ಕಮ್ಯೂನಿಸ್ಟ್ ಪಾರ್ಟಿಗಳು ದ್ರಾವಿಡ ಮುನ್ನೇಟ್ರ ಕಳ್ಗಗಂ, ಮುಸ್ಲಿಂಲೀಗು ಅದನ್ನು ಸ್ವಾಗತಿಸಿವೆ. ಆದರೆ ಸೋಷ್ಯಾಲಿಸ್ಟ್ ಪಾರ್ಟಿಗಳಲ್ಲಿರುವವರು ಸ್ವತಂತ್ರ ಪಾರ್ಟಿಯಲ್ಲಿರುವವರು ಸಂಸ್ಥಾ ಕಾಂಗ್ರೆಸಿನ ಕೆಲವರು ಸ್ವಾಗತಿಸಿದಲ್ಲಿ ಕೆಲವರು ಠೀಕೆಸಿದ್ದಾರೆ. ರಾಜಾಜಿಯವರು ಒಡನೆ ತಮ್ಮ ಪ್ರತಿಕ್ರಿಯೆಯೆನ್ನು ನ್ಯೆಕ್ತಪಡಿಸಿ—ಭಾರತಕ್ಕೆ ನಷ್ಟವಾಗಿದೆಯೆಂದಿರುವರು. ಇವನ್ನು ವಿರೋಧಿಸುವವರು ಭಾರತೀಯ ಜನಸಂಘದವರು. ಆವರು ಕೆಚ್ಚ್, ತಾಷ್ಕೆಂಟ್ ಒಪ್ಪಂದಗಳನ್ನು ಠೀಕೆಸಿರುವದು ಗಮನದಲ್ಲಿದೆ. ಶೇಖ್ ಅಬ್ದುಲ್ಲನಂತೂ ಶೃಂಗ ಸಮ್ಮೇಳನ ಶುಭಾರಂಭವೆಂದಿರುವನು. ಆಚಾರ್ಯ ಕೃಪಲಾನಿಯಂತೂ ತಮ್ಮ ಅಸಂತೋಷವನ್ನು ವ್ಯಕ್ತಪಡಿಸಿದ್ದಾರೆ. ಭುಟ್ಟೋ ಮಾತ್ರ ತನಗೆ ಒಪ್ಪಂದದಿಂದ ತೃಪ್ತಿಯಾಗಿದೆ ಎಂದಿರುವರು. ದೊಡ್ಡ ಸಮಸ್ಯೆಯನ್ನು, ಇಪ್ಪತ್ತೈದು ವರ್ಷಗಳಿಂದ ಕೊಳೆತು ನಾರುತ್ತಿದ್ದುದನ್ನು ತಾನು ಬಗೆಹರಿಸಿರುವನಾಗಿ ಇಂದಿರಾಜೀ ಅಂದಿರುವರು.

ಈ ಒಪ್ಪಂದದಿಂದ ನಮಗಾಗುವ ಲಾಭವೇನು? ಈ ಯುದ್ಧದಲ್ಲಿ ನಾವು ೫೬೧೯.೮೬ ಚದರ ಮೈಲು ಭೂಪ್ರದೇಶವನ್ನು ಗೆದ್ದುಕೊಂಡಿರುವದರಲ್ಲಿ ೫೧೯೯.೧೦ ಚದರ ಮೈಲನ್ನು ಬಿಟ್ಟುಕೊಡಬೇಕು. ಪಾಕಿಸ್ತಾನ ವಶಪಡಿಸಿಟ್ಟುಕೊಂಡಿರುವ ೧೫೧೨.೨೨ ಚದರ ಮೈಲಿನಲ್ಲಿ ೬೯.೩ ಚದರ ಮೈಲನ್ನು ಅದು ಬಿಟ್ಟುಕೊಡುತ್ತದೆ. ಹಾಗಿದ್ದರೂ ನಾನ್ನೂರು ಚದರ ಮೈಲಿಗೂ ಜಾಸ್ತಿ ಭೂಪ್ರದೇಶ ನಮಗೆ ಸಿಗುತ್ತದಲ್ಲವೇ? ಎಲ್ಲಿಂದ? ನಾವು ಗೆದ್ದುಕೊಂಡಿರುವುದನ್ನು ಪೂರ್ಣ ಬಿಟ್ಟುಕೊಡಬೇಕಲ್ಲವೆ, ಪಾಕಿಸ್ತಾನ ಆಕ್ರಮಿಸಿಕೊಂಡಿರುವ ಕಾಶ್ಮೀರವನ್ನು ಅದು ಬಿಟ್ಟುಕೊಡುವುದಿಲ್ಲ.. ನಾವು ಬಿಡದ ಸ್ಥಳವೂ ಇಲ್ಲೇ ಇರುವದು. ನಮ್ಮ ಸ್ಥಳ ಆಕ್ರಮಣಕ್ಕೊಳಗಾಗಿದ್ದು ಆದರೆಲ್ಲೊಂದಿಷ್ಟನ್ನು ಬಿಡಿಸಿಕೊಂಡಂತಾಯಿತು. ಕಾಶ್ಮೀರ ಪ್ರಶ್ನೆ ಬಗೆಹರಿಸಿಕೊಳ್ಳದೆ ಗೆದ್ದ ಪ್ರದೇಶವನ್ನು ಮಾತುಕತೆಯ ಮೇಜಿನ ಮೇಲೆ ಬಿಟ್ಟು ಕೊಟ್ಟೆವು. ನಮಗೆ ನೆಲದಾಹ ಇಲ್ಲವೆಂದು ಸ್ರಧಾನಿಯವರು ಹೇಳಿರುವಂತೆ ನಡೆದುಕೊಂಡಿದ್ದಾರೆಂದರೂ, ಈ ಸಲ ಗೆದ್ದದ್ದನ್ನು ಕಳೆದುಕೊಳ್ಳುವುದಿಲ್ಲವೆಂದು ನುಡಿದಿರುವ ರಕ್ಷಣಾಮಂತ್ರಿ ಜಗಜೀವನರಾಮ ರಾಯರ ಮಾತುಗಳು ಣ ಜಂಬದ ಮಾತುಗಳೇನು? ಆದಕ್ಕಿಂತಲೂ ಪಾಕಿಸ್ತಾನವೂ ಹಿಂದೂಗಳನ್ನು ಹೊಡೆದಟ್ಟಿದರೂ ಭಾರತದ ಗಡಿಯಲ್ಲಿರುವ ಹಿಂದೂಗಳು ಅಲೆಜೀವ ಹಿಡಿದುಕೊಂಡಿದ್ದರು.

ಈಗ ಆ ಪ್ರದೇಶ ಪುನಃ ಪಾಕ್ ಆಡಳಿತಕ್ಕೆ ಹೋಗುತ್ತಿರುವದರಿಂದ ಈ ಹಿಂದೂಗಳ ದುಃಸ್ಥಿತಿಯನ್ನು ಸುಲಭವಾಗಿ ಕಲ್ಪಿಸಿಕೊಳ್ಳಬಹುದು. ಅದನ್ನರಿತೇ ಅವರು ಭಾರತದೊಳಗೆ ಬರಲು ಪ್ರಯತ್ನಿಸುತ್ತಿದ್ದಾರೆ. ಅವರು ಹಿಂದೂಗಳೆನ್ನುವದಕ್ಕಾಗಿಯೋ ಏನೋ, ನಮ್ಮ ಸರಕಾರ ಅವರನ್ನು ಬರಲು ಬಿಡುವುದಿಲ್ಲ.

ಈ ನೆಲದ ಪ್ರಶ್ನೆಯನ್ನು ಮಾತುಕತೆಗಳ ಮೂಲಕ ಬಗೆಹರಿಸಿಕೊಳ್ಳೋಣವೆಂದರೆ ನಮಗೆ ಬರಬೇಕಾದ ಹಣದ ವಿಷಯವೇನು?

ಇವೆಲ್ಲವನ್ನೂ ಗಮನಿಸುವಾಗ ನಮ್ಮ ವೈಯಕ್ತಿಕ ಪ್ರತಿಷ್ಠೆಯ ಒಣ ಅಭಿಮಾನಕ್ಕೊಳಗಾದ ಇಂದಿರಾಜೀ ದೇಶದ ಹಿತವನ್ನು, ಗೌರವವನ್ನು ಕಡೆಗಣಿಸಿದಂತಿದೆ. ಇದ್ದರೂ 'ಸಾವಿರ ವರ್ಷ ಸಮರ'ದ ಕೇಕೆ ಹಾಕುತ್ತಿದ್ದ ಭುಟ್ಟೋವನ್ನು ಸಿಮ್ಲಾಕ್ಕೆ ಕರೆತರಿಸಿ; ಒಪ್ಪಂದಕ್ಕೆ ಸಹಿಹಾಕಿಸಿರುವ ವಿಷಯ ಸಾಮಾನ್ಯ ಇರುವದಿಲ್ಲ. ಅವಕ್ಕೆ ಸಹಿಹಾಕಿದ ಭುಟ್ಟೋ ಇಲ್ಲಿಗೆ ಬರುವಾಗ ಎದುರು ಪಕ್ಷದವರನ್ನು ಕರೆದುಕೊಂಡು ಬಂದಿದ್ದರು. ಆದರೆ ನಮ್ಮ ನಾಯಿಕೆಯು ಎದುರು ಪಕ್ಷದವರನ್ನು ಹತ್ತಿರಕ್ಕೂ ಬರಲು ಬಿಟ್ಟಿರುವದಿಲ್ಲ.

ಏನೇ ಇರಲಿ, ದೇಶ ವಿಭಜನೆಯೊಗುವಾಗ ರಾಜಕಾರಣಿಗಳು ಸಿಮ್ಲಾದಲ್ಲಿ ಸೇರಿ ತೀರ್ಮಾನಕ್ಕೆ ಬಂದಿದ್ದರು. ಈಗ ನಾವು ರಜತ ಮಹೋತ್ಸವ, ಬೆಳ್ಳಿ ಹಬ್ಬ, ಸಿಲ್ವರ್ ಜುಬ್ಲಿ ಆಚರಿಸುವಾಗಲೂ ರಾಜಕಾರಣಿಗಳು ಸಿಮ್ಲಾದಲ್ಲಿ ಸೇರಿ ತೀರ್ಮಾನಕ್ಕೆ ಬಂದಿದ್ದಾರೆ. ಅಂದರೆ ಮೂರಾದ ಭಾರತ ನಾಲ್ಕಾಗುತ್ತದೆಯೇ? ವಿಶೇಷ ಸ್ಥಾನ ಮಾನ ಹೊಂದಿರುವ ಕಾಶ್ಮೀರ ವಿಶಿಷ್ಟ ರೂಪದಲ್ಲಿ ಪ್ರತ್ಯೇಕವಾಗುತ್ತದೆಯೇ? ನೋಡಬೇಕು. ಈಗ ಹಬ್ಬ ಆಚರಿಸಬೇಕು. ಅದಕ್ಕಾಗಿ ಸರಕಾರ ಸಮಿತಿಗಳನ್ನು ಸ್ಥಾಪಿಸಿದೆ. ಪತ್ರಿಕೆಗಳು ವಿಶೇಷ ಸಂಚಿಕೆಗಳನ್ನು ಹೊರತರುತ್ತವೆ.

ಆಗ....ವಿಧಿ ಇಲ್ಲದೆಯೂ ಅದಕ್ಕಾಗಿ ಆತ್ಮ ಬಲಿದಾನ ಮಾಡಿರುವವರನ್ನು ಸ್ಮರಿಸದಿರಲು ಸಾಧ್ಯವೇ? ಆಗ ಕಹಿ ನೆನಪು ಬಂದೇ ಬರುತ್ತದೆ. ಇದ್ದರೂ ಇದೀಗ ಒಪ್ಪಂದಕ್ಕೆ ಸಹಿ ಹಾಕಿದ್ದೇವೆ. ಮುಂದಿನ ಸಿಹಿ ದಿನಗಳನ್ನು ರಜತ ಪರದೆಯ ಮೇಲೆ ಕಾಣೋಣವೇ?

ಸ್ವತಂತ್ರ ಕಾಲು ಶತಮಾನ ಕಳೆದಿದ್ದೇವೆ. ಈ ಸಮಯದಲ್ಲಿ ಕಾಶ್ಮೀರದ ಭೂಭಾಗವನ್ನು ಪಾಕಿಸ್ತಾನ; ಹಿಮಾಲಯದಲ್ಲಿ ಚೈನಾ ಆಕ್ರಮಿಸಿಕೊಂಡಿರುವುದನ್ನು ರಾಷ್ಟ್ರ ಭೂಪಟಗಳ ಮೂಲಕ ಸ್ಪಷ್ಟ ಪಡಿಸುತ್ತಿರುವಾಗ ಅಂದರೆ ಹೊರ ದೇಶಗಳಿಂದ ಆಕ್ರಮಣ ನಡೆಯುತ್ತಿರುವಾಗ ಆ ದೇಶಗಳಿಗೆ ಸಂಬಂಧ ಪಟ್ಟ ದೇಶದೊಳಗಿರುವ ಹಿತ ಶತ್ರುಗಳು ನಮ್ಮ ಸ್ವಾತಂತ್ರ್ಯಕ್ಕೆ ಸವಾಲಾಗಿವಿಡುತ್ತಿದ್ದಾರೆನ್ನುವದು ಗಮನಕ್ಕೆ ಬರುತ್ತಿರುವಾಗ ಸ್ವಾತಂತ್ರ್ಯವೆಂಬ ಶಬ್ದವನ್ನು ರಜತ ಪರದೆಯ ಮೇಲೆ ನೋಡುವ ದಿನ ಕೂಡಾ ಬಂದೀತೋ ಅನಿಸುತ್ತದೆ.

ಉತ್ಸವ ಆಚರಿಸುವಾಗ ಈ ಕಷ್ಟದ ಯೋಚನೆಗಳೆಲ್ಲಾ ಏತಕ್ಕೆ?

●●

ಶ್ರೀ ಎಚ್. ಎಂ. ನಾರಾಯಣ ಭಟ್

ಸ್ವತಂತ್ರ ಭಾರತದಲ್ಲಿ ಧವಳಕ್ರಾಂತಿಯ ಮುಂದಾಳ್ತನ ವಹಿಸುವ ಕರ್ನಾಲ್

ಕರ್ನಾಲ್‌ನ ಗನ್ಯ ಸಂಶೋಧನಾ ಕೇಂದ್ರ ಭಾರತದ ಧವಳ ಕ್ರಾಂತಿಯ ಮುಂದಾಳ್ತನಕ್ಕೆ ನುತ್ತೊಂದು ಕೆಸರು. ವೇಕದ ಹಾಲ್ಗೂ ರಿಕ್ಕುಗಳಲ್ಲಿ ಹರಡಿರುವ ಇದರ ಶಾಖೆಗಳು ಅಧಿಕ ಕ್ಷೀರೋತ್ಪಾದನೆಗಾಗಿ ಅವಿರತ ಶ್ರಮಿಸುತ್ತಿವೆ.

ಭಾರತೀಯ ಕೃಷಿ ಸಂಶೋಧನಾ ಕಾನ್ಸಿಲಿನ ಆಶ್ರಯದಲ್ಲಿ 23 ಸಂಶೋಧನಾ ಕೇಂದ್ರಗಳಿವೆ. ಇವುಗಳ ಪೈಕಿ ಅತಿ ಪ್ರಧಾನವಾಗಿ ಪರಿಗಣಿಸಲ್ಪಡುವ ಗನ್ಯ ಸಂಶೋಧನಾ ವಿಭಾಗವು ಕರ್ನಾಲ್‌ನಲ್ಲಿದೆ.

ಮಹಾಭಾರತದ ಪ್ರಧಾನ ಕಥಾಪಾತ್ರಗಳಲ್ಲೊಂದಾದ ದಾನಶೀಲ ಕರ್ಣನ ಹೆಸರಲ್ಲಿರುವ ಸ್ಥಳದಲ್ಲಿ ಈ ಕೇಂದ್ರವಿದೆ. ಶ್ರೀ ಕೃಷ್ಣನು ಅರ್ಜುನನಿಗೆ ಧರ್ಮೋಪದೇಶ ನೀಡಿದ್ದ ಕುರುಕ್ಷೇತ್ರಕ್ಕೆ ಇಲ್ಲಿಂದ ಕೇವಲ 25 ಮೈಲಿ ದೂರ.

ನವದೆಹಲಿಯಿಂದ 75 ಮೈಲಿ ದೆಹಲಿ-ಅಮೃತಸರ ರಸ್ತೆಯ ಮೂಲಕವೂ ರೇಲ್ವೆ ಯಲ್ಲಾದರೆ ದೆಹಲಿ-ಅಂಬಾಲ ಮಾರ್ಗದಲ್ಲಿಯೂ ಕರ್ನಾಲನ್ನು ತಲುಪಬಹುದಾಗಿದೆ.

ಮಹಾಭಾರತದ ಇತಿಹಾಸ ಪ್ರಸಿದ್ಧ ಸಂಭನಗಳಿಗೆ ಸಾಕ್ಷ್ಯವಹಿಸಿದ್ದ ಈ ಪುಣ್ಯ ಭೂಮಿ, ಭಾರತದ ನವೀನ ತೀರ್ಥಾಟನ ಕೇಂದ್ರವೆಂದು ಇದನ್ನು ಭಾರತರತ್ನ ಜವಹರಲಾಲ್ ನೆಹರೂ ವರ್ಣಿಸಿದ್ದರು.

ಕರ್ನಾಲ್ ಕೇಂದ್ರದಲ್ಲಿ ಜಾನುವಾರುಗಳಿಗೆ ಮೇವು ಬೆಳೆಸುವ ಹುಲ್ಲುಗಾವಲು 1500 ಎಕ್ರೆ.

ಐತಿಹಾಸಿಕ ಹಿನ್ನೆಲೆ

ಮೃಗ ಸಂರಕ್ಷಣೆ ಮತ್ತು ಹಾಲು ಉತ್ಪಾದನೆಗೆ ಸಂಬಂಧಿಸಿ ಸಂಶೋಧನೆಗಳಿಗಾಗಿ 1923ರಲ್ಲಿ ಬೆಂಗಳೂರಿನಲ್ಲಿ ಇಂಪೀರಿಯಲ್ ಇನ್‌ಸ್ಟಿಟ್ಯೂಟ್ ಸ್ಥಾಪಿಸಲ್ಪಟ್ಟಿತು. ಆಲ್ಲಿನ 'ನಿಲಿಟರಿ ಡೈರಿ ಫಾರ್ಮ್' ಈ ಕೇಂದ್ರದ ಆಶ್ರಯದಲ್ಲಿತ್ತು. ಸಂಶೋಧನೆ ಮತ್ತು ಶಿಕ್ಷಣ ವಿಭಾಗಗಳು ಊಡಕ ಮಂಡಲವಲ್ಲಿಯೂ ಕರ್ನಾಲ್‌ನಲ್ಲಿದ್ದುವು. ಕರ್ನಾಲಿನಲ್ಲಿ ಅಂದು ಕೆಲವು ದನಗಳು ಮಾತ್ರವೇ ಇದ್ದುದು. ಕ್ರಮೇಣ ಫ್ಲೀರೋತ್ಪಾದನೆ ಕುರಿತು ಎರಡು ವರ್ಷಗಳ ಡಿಪ್ಲೋಮಾ ಕೋರ್ಸ್ ಪ್ರಾರಂಭಿಸಲ್ಪಟ್ಟಿತು. ಇಂಗ್ಲಾಂಡಿನ ರೋಯಲ್ ಎಗ್ರಿಕಲ್ಚರಲ್ ಸೊಸೈಟಿ ಡಿಪ್ಲೋಮಗಳನ್ನು ನೀಡುತ್ತಿತ್ತು. ಮೊದಲ ವರ್ಷ 15 ಮಂದಿಗೆ ಪ್ರವೇಶನ ನೀಡಲಾಗಿತ್ತು.

ಬೆಂಗಳೂರಿನ ಇನ್ಸ್‌ಟಿಟ್ಯೂಟ್ 1936-37ರಲ್ಲಿ ಶಿಕ್ಷಣ-ಆರೋಗ್ಯ ಖಾತೆಗಳ ನಿಯಂತ್ರಣಕ್ಕೊಳಪಟ್ಟಿತು. ಡಯರಿ ಸಂಶೋಧನಾ ಯತ್ನಗಳ ಭಾಗವಾಗಿ ಬೆಳೆಯಿತು.

ದೆಹಲಿಗೆ ಇಂಪೀರಿಯಲ್ ರಿಸರ್ಚ್ ಇನ್ಸ್‌ಟಿಟ್ಯೂಟ್‌ನಲ್ಲಿ ಡಯರಿ ಬಕ್ಟೀರಿಯೊಲಜಿ ಮತ್ತು ಡಯರಿ ಕೆಮೆಸ್ಟ್ರಿಯೆಂಬ ಎರಡು ವಿಭಾಗಗಳಾಗಿದ್ದವು. ಡಾ|| ಡೇವಿಡ್ ಮೊದಲ ಮುಖ್ಯಾಧಿಕಾರಿ.

ಮತ್ತೆ ಈ ಎರಡೂ ವಿಭಾಗಗಳೂ ಬೆಂಗಳೂರಿಗೆ ವರ್ಗಾಯಿಸಲ್ಪಟ್ಟವು. ಡಯರಿಯಿಂಗ್‌ನಲ್ಲಿ ಬಿರುದು ಮತ್ತು ಸ್ನಾತಕೋತ್ತರ ಶಿಕ್ಷಣ ಸೌಲಭ್ಯಗಳೂ ಕಲ್ಪಿಸಲ್ಪಟ್ಟವು.

ಸ್ವಾತಂತ್ರ್ಯ ಸಿದ್ಧಿಸಿದ ಬಳಿಕ ಈ ಸಂಸ್ಥೆಯ ಹೆಸರನ್ನು ಇಂಡಿಯನ್ ಡಯರಿ ರಿಸರ್ಚ್ ಇನ್ಸ್‌ಟಿಟ್ಯೂಟ್ ಎಂದು ಬದಲಾಯಿಸಲಾಯ್ತು. 1955ರಲ್ಲಿ ಇದರ ಪ್ರಧಾನ ಕೇಂದ್ರ ಕರ್ನಾಲ್ ಎಂದು ತೀರ್ಮಾನಿಸುವವರೆಗೂ ಇದು ಬೆಂಗಳೂರ ಸ್ಥಿತಿ ಇತ್ತು. ಕರ್ನಾಲಿನಲ್ಲಿ ವಿಶಾಲವಾದ ಸ್ಥಳ ಸೌಕರ್ಯ ಮಾತ್ರವಲ್ಲ; ಆದೊಂದು ಜಾನುವಾರು ಕೇಂದ್ರವೂ ಆಗಿತ್ತು. ಕರ್ನಾಲಿಗೆ ವರ್ಗಾಯಿಸಲ್ಪಟ್ಟಾಗ ಇದರ ಹೆಸರು ನೇಶನಲ್ ಡಯರಿ ರಿಸರ್ಚ್ ಇನ್ಸ್‌ಟಿಟ್ಯೂಟ್ ಎಂದಾಯ್ತು; ಬೆಂಗಳೂರು ಈ ಸಂಸ್ಥೆಯ ದಕ್ಷಿಣ ಭಾಗದ ಕೇಂದ್ರವಾಗಿ ಪರಿಣಮಿಸಿತು. 1962ರಲ್ಲಿ ಮುಂಬಯಿಯಲ್ಲಿ ಒಂದು ಪಶ್ಚಿಮ ಪ್ರಾದೇಶಿಕ ಕೇಂದ್ರವೂ 1964ರಲ್ಲಿ ಪೂರ್ವ ಬಂಗಾಳದ ಕಲ್ಯಾಣಿಯಲ್ಲಿ ಒಂದು ಪೂರ್ವ ಪ್ರಾದೇಶಿಕ ಕೇಂದ್ರವೂ ಸ್ಥಾಪಿಸಲ್ಪಟ್ಟವು.

ದಕ್ಷಿಣ ಪ್ರಾದೇಶಿಕ ಕೇಂದ್ರ

ಬೆಂಗಳೂರು ಕೇಂದ್ರವು ಹೊಸೂರು ರಸ್ತೆಯಲ್ಲಿ ನಗರದಿಂದ ಐದು ಮೈಲಿ ದೂರದಲ್ಲಿ 165 ಎಕ್ರೆಯಲ್ಲಿ ವ್ಯಾಪಿಸಿದೆ. ಹಾಲು ಹಾಳಾಗದಂತೆ ಕಾಪಾಡುವ ಮತ್ತು ಹಾಲಿನಲ್ಲಿರುವ ಉಪವಸ್ತುಗಳ ಶೇಖರಣೆ ಮುಂತಾದವುಗಳಿಗೆ ಸೌಕರ್ಯವಿದೆ. ಸಂಶೋಧನಾ ವಿಭಾಗವ ಕೃತಕ ಗರ್ಭಧಾರಣಾ ಕೇಂದ್ರವೂ ಇಲ್ಲಿಯೇ. ಇಲ್ಲಿನ ಪುಸ್ತಕ ಭಂಡಾರದಲ್ಲಿ ಸುಮಾರು 7000 ಪುಸ್ತಕಗಳೂ 200 ಜರ್ನಲ್‌ಗಳೂ ಇವೆ. ಆರೆ (ಮುಂಬಯಿ) ಕ್ಷೀರ ಕೇಂದ್ರದ ಸಮೀಪವೇ ಪಶ್ಚಿಮ ಪ್ರಾದೇಶಿಕ ಕೇಂದ್ರ ಮುಂಬಯಿ ಕೇಂದ್ರ ರೇಲ್ವೆ ನಿಲ್ದಾಣದಿಂದ 10 ಮೈಲಿ ಮಾತ್ರ.

1955ರಲ್ಲಿ ಇನ್ಸ್‌ಟಿಟ್ಯೂಟ್ ಕರ್ನಾಲಿಗೆ ವರ್ಗಾಯಿಸಲ್ಪಟ್ಟುದರಿಂದಾಗಿ ಒಂದು ಡಯರಿ ಸೈನ್ಸ್ ಕಾಲೇಜ್ ಸ್ಥಾಪನೆಗೆ ಯತ್ನಗಳಾದವು. 1957ರಲ್ಲಿ ಡಯರಿ ಸೈನ್ಸ್ ಬಿ. ಎಸ್. ಎಸ್.ಸಿ. ಕೋರ್ಸ್ ಪ್ರಾರಂಭಿಸಲ್ಪಟ್ಟಿತು. ವಿದ್ಯಾರ್ಥಿ ಭವನ-ತಾಂತ್ರಿಕ ವಿಭಾಗಗಳೂ ಸುಸಜ್ಜಿತವಾದವು. ಮೂರನೇ ಪಂಚವಾರ್ಷಿಕ ಯೋಜನಾವಧಿಯಲ್ಲಿ ಇದೊಂದು ಸರ್ವಾಂಗ ಸುಂದರ ಸಂಸ್ಥೆ ಯಾಯ್ತು.

1966ರಿಂದ ಐ. ಸಿ. ಎ. ಆರ್.ನ ಆಧಳಿತೆಗೊಳಗಾದ ಇನ್ಸ್‌ಟಿಟ್ಯೂಟ್‌ನಲ್ಲಿಗ 8 ವಿಭಾಗಗಳಿವೆ. ದಿನಕ್ಕೆ 3250 ಲೀಟರ್ ಹಾಲು ಇಲ್ಲಿ ಉತ್ಪಾದನೆ. ಡಯರಿ ಸಂಶೋಧನೆ, ತರಬೇತಿ ಇತ್ಯಾದಿಗಳಲ್ಲಿ ಅಖಿಲ ಭಾರತ ಮಟ್ಟದಲ್ಲಿ ಸಂಶೋಧನೆಗಳ ಏಕೀಕರಣವಿದರ ಗುರಿ. ಗೋ ಸಂರಕ್ಷಣೆಗೆ ಸಂಬಂಧಿಸಿದ ವಿವಿಧ ಸಂಶೋಧನೆಗಳು ಸಾಗುತ್ತಲಿರುತ್ತವೆ.

ವಿಶ್ವದಲ್ಲಿ ಇತರ ರಾಷ್ಟ್ರಗಳಿಗಿಂತ ಹೆಚ್ಚು ಜಾನುವಾರು ಸಂಪತ್ತು ಭಾರತಕ್ಕಿದೆ. ಆದರೆ ಹಾಲು ತೀರಾ ಕಡಿಮೆ. ಇದೊಂದು ವಿರೋಧಾಭಾಸ. ಇದಕ್ಕೆ ಒಂದು ಪರಿಹಾರ ಕಾಣಲೇಬೇಕೆಂಬುದು ಕರ್ನಾಲ್ ಇನ್ಸ್‌ಟಿಟ್ಯೂಟಿನ ಯತ್ನ. ಇತರ ಡಯರಿಯಿಂಗ್ ಸಂಸ್ಥೆಗಳಿಗೂ ಇದು ಮಾರ್ಗದರ್ಶನ ನೀಡುತ್ತಿದೆ.

ಡಯರಿ ವಿಭಾಗದಲ್ಲೀಗ ಬಕ್ಟೀರಿಯೊಲಜಿ, ಕೆಮೆಸ್ಟ್ರಿ, ಇಕೋನಾಮಿಕ್ಸ್, ಸ್ಟಾಟಿಸ್ಟಿಕ್ಸ್, ಇಂಜಿನಿಯರಿಂಗ್, ಏಸ್ತರಣೆ, ಸಂರಕ್ಷಣೆ ಮತ್ತು ಟೆಕ್ನಾಲಜಿಗಳು ಪ್ರಧಾನ ಶಾಖೆಗಳು.

ಸುಧಾರಿತ ಬೀಜ, ಜಾನುವಾರು ಮೇವು, ಮಣ್ಣು ಪರೀಕ್ಷೆ, ಇತ್ಯಾದಿ ಕ್ಷೇತ್ರಗಳಲ್ಲಿ ಆದ್ಭುತ ಪ್ರಗತಿ ಸಾಧಿಸಲ್ಪಟ್ಟಿದೆ.

ಬೆಂಗಳೂರು ಕೇಂದ್ರದಲ್ಲಿ ಜೆರ್ಸಿ, ತಾರ್ ಪಾರ್ಕರ್, ಇತ್ಯಾದಿ ವರ್ಗಗಳ ಸಂಕರ ಸಂತಾನಾಭಿವೃದ್ಧಿ ಕುರಿತು ಸಂಶೋಧನೆಗಳಾಗಿವೆ. ಹಾಲಿನ ಉತ್ಪಾದನೆ ಹೆಚ್ಚಿಸ ಬಹುದೆಂದೂ ಪಿತೆತವಾಗಿದೆ.

ಹಂಸಕ್ಷೀರ ಪರೀಕ್ಷೆ

ಎನ್ಸೈಮ್, ದನ, ಆಡು, ಮುಂತಾದವುಗಳ ಹಾಲಿಗೆ ನೀರು ಬೆರೆಸಿದ ಪ್ರಮಾಣವನ್ನು ಸುಲಭವಲ್ಲಿ ಕಂಡು ಹಿಡಿಯಲು "ಹಂಸ ಕ್ಷೀರ" ಸಪ್ಲತಿಯನ್ನೂ ಸಾಧ್ಯವಾಗಿದೆ.

ಹಾಲಿನ ಉಪವಸ್ತುಗಳ ನಿರ್ಮಾಣದ ಬಗ್ಗೆ ವಿಪುಲ ಸಂಶೋಧನೆಗಳಾಗಿವೆ. "ಗಟ್ಟಿ ಹಾಲು" (Brick Cheese) ನಿರ್ಮಿಸುವ ಸರಳ ವಿಧಾನಗಳನ್ನು ಕಂಡು ಹಿಡಿಯಲಾಗಿದೆ. "ಕಂಡೆನ್ಸ್ಡ್ ಮಿಲ್ಕ್" ಉದ್ಪಾದನೆ ಸಾಧ್ಯವಾಗಿದೆ. ತುಪ್ಪದಲ್ಲಿ ಕಲ ಬೆರಕೆಯನ್ನು ಕಂಡುಹಿಡಿಯಲು "ಕ್ರೋಮೇಟೋಗ್ರಫಿ" ಪರೀಕ್ಷೆ ಜನಸಾಮಾನ್ಯರಿಗೂ ಉಪಯುಕ್ತ. ಮಜ್ಜಿಗೆ ಹಾಳಾಗದಂತೆ ರಕ್ಷಿಸುವ ವಿಧಾನ ಪರಿಪೂರ್ಣ ಜಾ. ಕಾಫಿ ನಿರ್ಮಾಣಗಳೂ ಈ ಕೇಂದ್ರಕ್ಕೆ ಪ್ರಶಸ್ತಿ ಗಳಿಸಲು ಸಹಾಯಕವಾಗಿವೆ.

ಮಹಾರಾಷ್ಟ್ರ ಸಹಿತ ದಕ್ಷಿಣ ಭಾರತದ ಐದು ಸಂಸ್ಥಾನಗಳಲ್ಲಿನ 100 ಕೃತಕ ಗರ್ಭೋತ್ಪಾದನಾ ಕೇಂದ್ರಗಳಿಗೆ ವರ್ಷಕ್ಕೆ ಏಳು ಲಕ್ಷ ಮಿಲ್ಲಿಲಿಟರ್ ಶುಕ್ಲವನ್ನೂ ಬೆಂಗಳೂರಿನ ಇನ್ಸ್‌ಟಿಟ್ಯೂಟ್ ಒದಗಿಸುತ್ತದೆ ಜೆರ್ಸಿ, ಹಾಲ್ಸ್‌ಟೀನ್, ಹಾಲಿಕರ್, ರೆಡ್ ಸಿಂಧಿ, ಸಾಹಿವಾಲ್ ತಾರ್ಪಾರ್ಕರ್, ಮುರ್ರಾ ಮುಂತಾದ ಜಾತಿಯವುಗಳ ಶುಕ್ಲವನ್ನು ಸಾಮಾನ್ಯವಾಗಿ ಒದಗಿಸುವುದು. ಸುಮಾರು 500 ಮಂದಿ ವಿದ್ಯಾರ್ಥಿಗಳಿಗೆ ಈ ಸಂಸ್ಥೆಗಳಲ್ಲಿ ಶಿಕ್ಷಣ ಹೊಂದುತ್ತಿದ್ದಾರೆ.

ಸ್ಟೇಟ್ರೇಶನ್ ಮತ್ತು ಡಯಟಿಟಿಕ್ಸ್ ವಿಭಾಗಗಳನ್ನೂ ಗನ್ಯಶಾಸ್ತ್ರ ಪುಸ್ತಕ ಭಂಡಾರವನ್ನೂ ಬೇಗನೆ ಸ್ಥಾಪಿಸುವುದೆನ್ನಲಾಗಿದೆ.

ಹೀಗೆ ಗನ್ಯಶಾಸ್ತ್ರಕ್ಕೆ ಸಂಬಂಧಿಸಿದ ಕೈಗಾರಿಕೆಗಳ ಅಭಿವೃದ್ಧಿ ಸಾಧಿಸಲು ಪಣತೊಟ್ಟ ಈ ಸಂಸ್ಥೆ "ಶ್ವೇತ ಕ್ರಾಂತಿ" ಅಥವಾ "ಧವಳ ಕ್ರಾಂತಿ"ಗೆ ತಯಾರಾಗುತ್ತಿದೆ.

—(ಸಂಗ್ರಹ)

ಯಾವನಾದರೊಬ್ಬನ ಹೊರೆಯನ್ನು ಸ್ವಲ್ಪವಾದರೂ ತಗ್ಗಿಸಬಲ್ಲ ಯಾವನೊಬ್ಬನೂ ಅಪ್ರಯೋಜಕನಲ್ಲ.

ಅನುಗ್ರಹವನ್ನು ಅಪೇಕ್ಷಿಸುವುದೆಂದರೆ ತನ್ನ ಸ್ವಾತಂತ್ರ್ಯವನ್ನು ಮರಿಕೊಂಡಂತೆ.

ಸ್ವಾತಂತ್ರ್ಯ ದಿನದ ಶುಭಾಶಯಗಳು!

ನಿಸರ್ಗ ಸೌಂದರ್ಯದ ಕಾರವಾರದಲ್ಲಿ

ಜನಪ್ರಿಯವಾಯ ಅತ್ಯುನ್ನತ ಹೊಟೆಲ್

ಉಡುಪಿ ಶ್ರೀಕೃಷ್ಣ ವಿಲಾಸ

ಮೈನ್ ರೋಡು, ಕಾರವಾರ

ವೈವಿಧ್ಯಪೂರ್ಣ ತಯಾರಿಕೆಗಳು

ಗ್ರಾಹಕರ ತೃಪ್ತಿಯೇ ನಮ್ಮ ಧ್ಯೇಯ

ಮ್ಹಾಲಕ: ಕೆ. ಸಂಜೀವ ರಾವ್

Please Visit & Enjoy

UDIPI SRI KRISHNA VILAS

MAIN ROAD, KARWAR, N. K.

ಸ್ವಾತಂತ್ರ್ಯ ಸ್ಮೃತಿ ಲಹರಿ

೧

ಆಂಗ್ಲರಾಳ್ವಿನವಳಿದು ಸ್ವಾತಂತ್ರ್ಯ ರವಿ ಹೊಳೆಯೆ,
ಭಾರತಕೆ ಬಿಡುಗಡೆಯ ಬೆಳಕು ಬಂತು;
ಭಾರತಾಂಬೆಯ ಬಂಧಮುಕ್ತಿಯೊಗುತ ಪಡೆದ
ಸ್ವಾತಂತ್ರ್ಯಾನಿಧಿಯ ಮರೆವುದೆಂತು?

೨

ತಿಲಕ-ಗೋಖಲೆ-ಗಾಂಧಿ-ನೆಹರು ನಾಯಕರಾಗಿ
ಸ್ವಾತಂತ್ರ್ಯ ಸಮರವನು ಬಿಡದೆ ನಡೆಸಿ,
ಸತ್ಯ-ಶಾಂತಿ-ಅಹಿಂಸೆಯೆಂಬಾಯುಧಗಳನು ಜಯಿಸಿ
ಸ್ವಾತಂತ್ರ್ಯ ಲಭಿಸಿಬಂದು, ತಪವು ಫಲಿಸಿ !

೩

ತ್ಯಾಗ ನಿಃಸ್ವಾರ್ಥ ವೀರ್ಯ ಪ್ರೇಮ ಮೈತ್ರೈಕ್ಯ-
ಭಾವದಿಂದೊಂದಾಗಿ ಹೋರಾಡಿತು
ಭಾರತದ ಜನಶಕ್ತಿ, ಬೆಳೆದು ದೇಶದ ಭಕ್ತಿ,
ರಾಷ್ಟ್ರಧ್ವಜವು ನಭದಿ ಹಾರಾಡಿತು !

೪

ಜಾತಿ ಭೇದವ ಮರೆತು, ಪ್ರೀತಿಬಿಂಬಿಸಲಿ ಬೆರೆತು
ದೇಶದುದ್ಧಾರವನು ಸಾಧಿಸಿದೆವು
ಅಜ್ಞಾನ ದಾರಿದ್ರ್ಯ ದೌರ್ಬಲ್ಯಗಳ ಕಳೆಯೆ
ನಿಷೇಧ ಯೋಜನೆಗಳನು ರೂಪಿಸಿದೆವು.

೫

ಅರಸರಾಳ್ವಿಕೆಯು ಕೊನೆಗೊಂಡು ಭಾರತವು ಗಣ-
ರಾಜ್ಯವಾಯಿತು 'ಪಟೇಲ'ರ ಯತ್ನದಿಂ
ಬಿಡುಗಡೆಯ ಪಡೆದ ಭಾರತ ರಾಷ್ಟ್ರ ನಿರ್ಮುಕ್ತ-
ಚಂದ್ರನಂದದಿ ಬೆಳಗಿದುದು ಭಾಗ್ಯದಿಂ.

೬

ನೆಹರು—ರಾಷ್ಟ್ರಿಗಳು ಪ್ರಧಾನಿ ಪಟ್ಟವನೇರ್ದು
ಭಾರತದ ಪ್ರಗತಿಯನು ಸಾಧಿಸಿದರು.
ಚೀನ—ಪಾಕಿಸ್ತಾನ ಭಾರತನಾಕ್ರಮಿಸೆ
ಯೋಧರೆದೆಗೆಡದೆ ಹೊಡೆದೋಡಿಸಿದರು.

೭

ಇಂದಿನ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿ
ಆಳ್ವಿಕೆದಿನಾಯ್ತು ರಾಷ್ಟ್ರಾಭಿವೃದ್ಧಿ
ಬಾಂಗ್ಲಾ ವಿಮೋಚನೆಗೆ ಬಲಗೈಯ ನೆರವಿತ್ತು
ಕಲಿಸಿದರು ಪಾಪಿ ಪಾಕಿಗಳ್ಗೆ ಬುದ್ಧಿ!

೮

ಶಾಂತಿಯುತ ಸಹಬಾಳ್ವೆ ರಾಷ್ಟ್ರದೇಳ್ಗೆಗೆ ಹೇತು-
ವೆಂದು ಭಾರತ—ಪಾಕಿಸ್ತಾನಗಳ ನಡುವೆ
ಸೌಹಾರ್ದಜೊಪ್ಪಂದ ಸಾಧಿಸಿದ ಇಂದಿರಾ
ಗಾಂಧಿ ಸಾಹಸ ಬುದ್ಧಿ ಪೊಗಳಲಳವೆ

೯

ಇಂದೀಗ ಭಾರತದಿ ಹಸಿರು ಕ್ರಾಂತಿಯದಾಗಿ
ಭರತ ಮಾತೆಯು ಹಸಿರು ಸೀರೆಯುಟ್ಟು
ಶಾಂತಿ ತಿಲಕವ ನೊಸಲಿಗಿಟ್ಟು ಕೋಭಿಸುವುದನು
ನೋಡಬೇಕೊಂದಾಗಿ ಹೆರುಷವಟ್ಟು.

೧೦

ಸ್ವಾತಂತ್ರ್ಯ ಪಡೆದಾಯ್ತು ಪರುಷ ಇಪ್ಪತ್ತೈದು.
ಕೃಷಿ ವಿದ್ಯೆ ಕೈಗಾರಿಕಾಭಿವೃದ್ಧಿ-
ನಡೆ ನಡೆನು, ಜನ-ನಾಯಕರು ಗಾಂಧಿಜೀ ತೋರ್ದ
ಪಥದಿ ನಡೆಯಲು ರಾಮರಾಜ್ಯ ಸಿದ್ಧಿ!

ಕವಿ: ಶ್ರೀ ಎಸ್. ತಿರುಮಲೇಶ್ವರ ಭಟ್.

ಇಪ್ಪತ್ನಾಲ್ಕು

ನಮನ

ನಮೋ ವಿಶ್ವ ಚೈತನ್ಯಕಾಧಾರಭೂತಂಗೆ
ಭಾರತದ ಸಂಸ್ಕೃತಿಯ ಪ್ರತಿಪಾದಕಂಗೆ
ಪಂಡಿತ ಪ್ರಚಂಡಂಗೆ ತತ್ವಾರ್ಥ ನಿಪುಣಂಗೆ
ವೇದೋಪನಿಷತ್ಸ್ಥೀತ ಭಾಷ್ಯಕಾರಂಗೆ—

ವಂದ್ಯಾರವಿಂದಂಗೆ
ಜ್ಞಾನೋಜ್ವಲಂಗೆ
ದೃಷ್ಟಾರ ತಂದೆ;
ಜೀವನದ ನೆಲೆಯರಿತ ಮಹಾ ಯಾತ್ರಿಕಂಗೆ.

ಜ್ಞಾನ ಗಂಗೆಯ ಹರಿಸಿದಿವ ಪುಣ್ಯವಂತ
ಭಾರತದ ಕೀರ್ತಿಧ್ವಜವೇರಿಸಿದ ಸಂತ.
ಆತಿ ಮಾನಸದ ತತ್ವವಾಥರಿಸಿ ನಿಂತ
ಅತಿ ಮಾನವನು ಬಹನು ಎಂದ ಮತಿವಂತ.

ರಾಗದ್ವೇಷಾತೀತ
ನಿವನು ಕಾರಣಪುರುಷ
ಯೋಗ ವಿದ್ಯಾ ಹರುಷ
ಲೋಕ ಕಲ್ಯಾಣಕರ ಶುಭಕಾರನೀತ.

ಮಹಾಯೋಗಿ ರಸರಿಸಿಯು ದಿವ್ಯಾನುಭಾವಿ
ರಾಜ್ಯ ತಂತ್ರವನರಿತ ನವರಾಷ್ಟ್ರ ಜೀವಿ.
ಸ್ವಾತಂತ್ರ್ಯ ಯೋಧನಿವ ದೇಶಕ್ಕೆ—ದೇಹಕ್ಕೆ
ಸದಾ ನಿರ್ವಿಕಾರ ನಿರ್ಮಲ ಮಾನಸಂಗೆ,

ಸದಾ ಸ-ಪ್ರಸನ್ನ
ಚಾರಿತ್ರ್ಯ ಸಂಪನ್ನ
ಆಧ್ಯಾತ್ಮ ಸಾಧಕ-ಗೆ
ನಮನವಿದೊ ಅರವಿಂದ ಪಾದಾರವಿಂದಕ್ಕೆ!

—ಶ್ರೀ ಗೋಪಾಲಕೃಷ್ಣ ಹೆಗಡೆ

— ● —

ಊರ್ಧ್ವಮುಖವಾಗಿ ಮಮಚೇತನವೆ ಬಾ!

ಊರ್ಧ್ವಮುಖವಾಗಿ ಬಾ, ಮಮಚೇತನವೆ ! ಸದಾ
ದೀಪದಲಿ ತೈಲವೇರುವ ತೆರದಿ ಬಾ !
ತೈಲವೇರದೆ ಪ್ರಜ್ವಲಿಪುದೆ ಬತ್ತಿಯ ಕುಡಿಯು?
ನೀನೆ ಚೆತ್ತೈಭೆಯೊಗಿ ಪರಿಣಮಿಸು ಬಾ.

ನೀ ಪತನಮುಖಿಯೊಗೆ ಕರಟಿ ಪೋಪೆಂ ನಾನು
ಬರಿಹೊಗೆಯನುಗುಳುನೆಂ ಇದು ಸಲ್ಪುದೆ?
ಅನ್ಯರ್ಗೆ ಬೆಳಕುದೋರುವ ಪೂತದಂತಿರಲಿ
ಮಿಣುಕು ಹುಳು ತನ್ನಲ್ಲೆ ತಾಂ ಬೆಳಗದೆ?

ಚೈತನ್ಯಧಾರೆ ಹರಿಹರಿದು ಬಾ ಮೇಲ್ಮೇಲೆ
ಎನ್ನ ಚೆತ್ತದ ಬತ್ತಿಯನು ನಾಂದು ಬಾ
ಆ ಜೆಳಗನೆನೊಳು ಎನ್ನ ನಾನೆ ನೋಳ್ಪೆಂ ಸದಾ
ಊರ್ಧ್ವಮುಖವಾಗಿ ಮಮಚೇತನವೆ ಬಾ !

—ಶ್ರೀ ಅಮೃತ ಸೋಮೇಶ್ವರ

● ●

ಒ ಒ ಒ

ತಪ್ಪು ಮಾಡುವುದು ಮನುಷ್ಯನ ಸ್ವಭಾವ. ಮಾಡಿದ ತಪ್ಪನ್ನು ಇನ್ನೊನ್ನೆಂದೂ ಮಾಡದಂತೆ ಪ್ರಯತ್ನಿಸುವುದು ಶೂರ ಮತ್ತು ವೀರನಾಗುವುದರ ಸಂಕೇತವಾಗಿದೆ.

ಒ ಒ

ಮನುಷ್ಯತ್ವವು ಶಿಕ್ಷಣದಲ್ಲಿಲ್ಲ. ಪ್ರೇಮದಲ್ಲಿದೆ.

ಒ ಒ ಒ

ಪುರುಷನ ಉನ್ನತಿಯೂ, ಅವನತಿಯೂ ಸ್ತ್ರೀಯ ಕೈಯಲ್ಲಿದೆ.

ಒ ಒ ಒ

ಕುಂಬಳೆ ಪಾರ್ತಿ ಸುಬ್ಬ

ಯಕ್ಷಗಾನಾಚಾರ್ಯ ! ಓ ಪಾರ್ತಿ ಸುಬ್ಬನೇ !
ಕುಂಬಳೆಯ ಕಣ್ಮಣಿಪುರ ಶ್ರೀಕೃಷ್ಣ ಭಕ್ತನೇ !
ಯಕ್ಷಗಾನದ ರಾಗ ತಾಳ ಮಟ್ಟುಗಳಿಂದ
'ಪಂಚವಟಿ' ಮುಂತಾದ ಸುಪ್ರಸಂಗಗಳಿಂದ
ಸಂಪೂರ್ಣ 'ರಾಮಚರಿತೆ'ಯ ಹಾಡಿ ಬೈಲು ರಚಿಸಿ,
ಜನರಿಂದ 'ಶ್ರೀ ಯಕ್ಷಗಾನ ವಾಲ್ಮೀಕಿ' ಧೀಂ-
ಬುನ್ನತದ ಬಿರುದನ್ನು ತಾನಾಗಿ ಜೊರಕೆಸಿಸಿದೆ.
ಜನಮನದಿ ಮನ್ನಣೆಯ ಚಿರಕೀರ್ತಿಯಂ ಪಡೆದೆ.

ಕೃಷ್ಣನಲಿ ನಿನಗಿರುವ ಶುದ್ಧ ಭಕ್ತಿಯು ಬರಿಮೆ
'ಕೃಷ್ಣ ಚರಿತೆ'ಯ ಕೃಷ್ಣಲೀಲೆಯಲಿ ಕೃತಿಗೊಂಡು,
ದಾಸಪಂಥದ ಭಕ್ತಕನಿ ಪಂಕ್ತಿಯಲಿ ನಿನಗೆ
ಆಗ್ರಪಟ್ಟದ ಮಣೆಯು ಶಾಶ್ವತಂ ಸಂದತ್ತು.

ತೆಂಕುತಿಟ್ಟಿನ ಯಕ್ಷಗಾನ ಬಯಲಾಟದಲಿ
ವೇಷ - ಭೂಷಣ - ಉಡಿಗೆ - ತೊಡಿಗೆ – ಗತ್ತುಗಳಲ್ಲಿ,
ಬಣ್ಣಗಾರಿಕೆ, - ಕುಣಿತ - ಮಣಿತ ನಿಲುವುಗಳಲ್ಲಿ,
ಭಾವ ಭಂಗಿಗಳಲ್ಲಿ, ಬೆಡಗು – ಬಿನ್ನಾಣದಲಿ
ನವಸೃಷ್ಟಿಯನು ಗೈದ ಕಲೆಗಾರನೆನ್ನಿಸಿದೆ
ರಸಿಕ ಜನ ಮಾನಸಕೆ ಸಂಜೀವನವನೆರೆದೆ.

ಪಾರ್ವತೀ ನಂದನನೆ! ನಿನ್ನಿಂದ ನಿನ್ನಬ್ಬೆ
ಧನ್ಯೆ ಪಾರ್ವತಿಯು ಹೆಸರು ರಸಿಕ ಜನ ಜಿಹ್ವೆಯಲಿ
ಸಂತತಂ ನಲಿನಲಿಯುವಂತಾಯ್ತು. ನಿನ್ನಂಥ
ಜಾನಪದ ಸರಸ ಕವಿಯೆನಿಸಿರುವ ಪುತ್ರನನು
ಪಡೆದಂಥ ಕುಂಬಳೆಯ ಪಾರ್ತಿಯೇ ಸನ್ಯಾನ್ಯೆ.

ಕಣಿಪುರದ ಕವಿಸುಬ್ಬ ! ನಿನ್ನ ಕೃತಿರಚನೆಯಲಿ
ಅಂಕಿತಂಗೊಂಡಿರುವ ಕಣ್ವಪುರ ಗೋಪಾಲ
ಕೃಷ್ಣನೂ, ಹಾಗೆಯೇ ಮನವೂರ ವಿಘ್ನೇಶ
ದೇವನೂ ನಿನ್ನ ಕೃತಿಯೋದುಗರ ಮನಮನದಿ
ನೆಲೆಗೊಂಡು ಕಳಿಗೊಂಡು ರಾರಾಜಿಸುತ್ತಿಹರು.

ನಿನ್ನ ರಸಕೃತಿಗಳಲಿ ಮೂಡಿ ನೈವೆತ್ತಿರುವ
ಕೈಕೆ - ಮಂಥರೆ - ಸೀತೆ - ರಾಮ - ಸೌಮಿತ್ರಿಯರು,
ಕೌಶಲ್ಯೆ - ದಶರಥರು, ಶೂರ್ಪನಖೆ - ತಾರೆಯರು,
ವಾಲಿ - ಸುಗ್ರೀವ - ಹನುಮಂತ - ಶುಕ - ಸಾರಣರು,
ಮಂತ್ರಿ ಪ್ರಹಸ್ತ - ದೂತಾಂಗದರು, ರಾವಣನು,
ಜನಮನೋಭಿತ್ತಿಯಲಿ ಚಿತ್ರವಾಗಿರುತಿಹರು.
ನೀನೆಮಗೆ ಬಹು ಮಾನ್ಯ. ನಿನಗಸ್ತ್ಯೆ ಮಂಗಳಂ.*

—ಶ್ರೀ ಅಮ್ಮೆಂಬಳ ಶಂಕರನಾರಾಯಣ ನಾವಡ

*(ಕಾಸರಗೋಡು ಕನ್ನಡಿಗರ ಸಮ್ಮೇಳನದ ಕವಿಗೋಷ್ಠಿಯಲ್ಲಿ ಓದಿದ ಕವನ)

ಒ ಒ ಒ

ಹೆಣ್ಣು ತ್ಯಾಗ ಅಹಿಂಸೆಗಳ ಪುತ್ಥಳಿ

ಒ ಒ ಒ

ತನ್ನ ವಕ್ತಿತ್ವವನ್ನು ಕಳೆಮ ಕೊಳ್ಳವವನು ಎಲ್ಲವನ್ನೂ ಕಳೆದು ಕೊಳ್ಳುತ್ತಾನೆ.

ಒ ಒ ಒ

ಸ್ವಾರ್ಥರಹಿತವಾದ ಕರ್ಮ ಶಕ್ತಿಯ ಮೂಲ.

ಒ ಒ ಒ

ಯಾವನು ತನ್ನನ್ನು ತಾನು ಆಳಬಲ್ಲವನೋ ಅವನು ಇತರರನ್ನು ಆಳುವುದರಲ್ಲಿ ಎಂದಿಗೂ ಸಮರ್ಥನಾಗಲಾರ.

—ಮ. ಗಾಂಧಿ

ಆಧುನಿಕ ಆಹಾರ ಸೇವನೆ ಮತ್ತು ನಿಯಮಗಳಲ್ಲಿ ಕೆಲವು ಗುಣದೋಷಗಳು

(ಹಿನ್ನೆರಡನೇ ಪುಟದಿಂದ)

ಯಲ್ ಇತ್ಯಾದಿ ಕೆಲವು ಮುಖ್ಯವಾದವು ಮತ್ತು ಬಹು ವ್ಯಾಪಕವಾದವು.

ಈ ವಿವಿಧ ಜೀವಕೋಶಗಳಿಗೆ ವಿವಿಧ ಬಗೆಯ ರಾಸಾಯನಿಕ ಘಟಕಗಳು ಕಾಲ ಕಾಲಕ್ಕೆ ಒದಗುತ್ತಿರಬೇಕು. ಆಗಲೇ ಅವು ಗಳ ಬೆಳವಣಿಗೆ, ಕಾರ್ಯ ಸಾಮರ್ಥ್ಯ, ದುರಸ್ತಿ, ಯಶಸ್ವಿ ಕಾರ್ಯ ನಿರ್ವಹಣೆ ಮುಂತಾದುವುಗಳಲ್ಲಿ ಸಾಧ್ಯವಾಗುತ್ತದೆ.

ಈ ರಾಸಾಯನಿಕ ಘಟಕಗಳೆಲ್ಲ ಮಾನವನು ಸೇವಿಸುವ ಆಹಾರದಿಂದಲೇ ದೊರೆಯಬೇಕು. ಅದರಿಂದ ಮಾನವನು ಸೇವಿಸುವ ಆಹಾರದಲ್ಲಿ ಯಾವುದೇ ಮುಖ್ಯ ರಾಸಾಯನಿಕ ಘಟಕಗಳ ಕೊರತೆ ಇದ್ದಲ್ಲಿ ಕೆಲವು ನಿರ್ದಿಷ್ಟ ಜೀವಕೋಶಗಳು ತಮ್ಮ ಕಾರ್ಯವ್ಯಾಪ್ತಿಯ ಪರಮಾವಧಿಯನ್ನು ಮುಟ್ಟಲಾರವು. ಇದರಿಂದ ಅಂತಹ ಕೋಶಗಳು ಕ್ರಮೇಣ ನಿಸ್ತೇಜವಾಗಿ, ಕಡೆಗೆ ಕ್ಷೀಣ ಹೊಂದುತ್ತದೆ. ಯಾವಾಗ ಒಂದು ನಿರ್ದಿಷ್ಟ ಅಂಗಾಂಗ ಅಥವಾ ಅವಯವದ ಜೀವಕೋಶಗಳು ತಮ್ಮ ಕಾರ್ಯ ಪಟುತ್ವವನ್ನು ಕಳೆದು ಕೊಳ್ಳುವುವೊ, ಆಗ ಆ ಅಂಗಾಂಗ ಅವಯವದ ಕಾರ್ಯವ್ಯಾಪ್ತಿಯೇ ಅಸ್ತವ್ಯಸ್ತವಾಗುತ್ತದೆ. ಅದರಿಂದ ಇಡೀ ದೇಹದ ಮೇಲೆ ದುಷ್ಪರಿಣಾಮವಾಗಿ, ಮಾನವನು ಒಂದಲ್ಲ ಒಂದು ರೋಗಕ್ಕೆ ಎರವಾಗಬೇಕಾಗುತ್ತದೆ. ಉದಾಹರಣೆಗೆ–ನರಕೋಶಗಳಿಗೆ ರಂಜಕ, ಮೆಗ್ನೇಸಿಯಂ, ಪೊಟ್ಯಾಸಿಯಂ, ಜೀವಸತ್ವ ಇತ್ಯಾದಿಗಳ ಪೂರೈಕೆ ಕಡಿಮೆಯಾದರೆ, ಆಗ ನರಕೋಶ ಸಂಬಂಧದ ರೋಗಗಳು ಉಂಟಾಗುತ್ತವೆ. ಆಹಾರದ ದೋಷಗಳಿಂದ (ಕೊರತೆ, ಅತಿಸೇವನೆ ಇತ್ಯಾದಿ) ಉಂಟಾಗುವ ಸಣ್ಣ ಪುಟ್ಟ ವಿಕಾರಗಳು ರೋಗಗಳ ಆರಂಭ ಲಕ್ಷಣವೆಂತಲೇ ಭಾವಿಸಬೇಕೆಂದು ಕೆಲವು ಆಹಾರ ವಿಜ್ಞಾನಿಗಳ ಮತ. ಇದರಿಂದ ಎಲ್ಲ ರೋಗಗಳೂ ಆಹಾರ ದೋಷದೊಂದರಿಂದಲೇ ಉಂಟಾಗುವುವು ಅಂತಲ್ಲ. ಆದರೆ ಅನೇಕ ರೋಗಗಳಿಗೆ ಆಹಾರ ದೋಷವೇ ಮೂಲ ಕಾರಣವೆಂಬುದು ಮಾತ್ರ ನಿಶ್ಚಿತ.

ಆಹಾರ ಸೇವನೆಯ ಪದ್ಧತಿಗಳು ವ್ಯಕ್ತಿ–ಗುಂಪುಗಳು, ಸಾಮಾಜಿಕ–ಸಾಂಸ್ಕೃತಿಕ–ಧಾರ್ಮಿಕ ಒತ್ತಡಗಳಿಗೆ ಕಟ್ಟುಬಿದ್ದು ಲಭ್ಯವಿದ್ದ ಆಹಾರವಸ್ತುಗಳಲ್ಲಿಯೇ ಕೆಲವನ್ನು ಆಯ್ದು ಬಳಸಿ, ಕೆಲವನ್ನು ವರ್ಜ್ಯ ಮಾಡಿ, ಸಾಗುವುದುಂಟು. ಹೀಗಾಗಿ ಅವು ಆಯಾ ಕಾಲಮಾನಗಳಿಗೆ, ಪರಿಸ್ಥಿತಿಯ ಒತ್ತಡಗಳಿಗೆ ಬದಲಾಗುವ ಪರಿಸ್ಥಿತಿಗಳಿಗೆ ಅನಿವಾರ್ಯವೆನಿಸಿದಂತೆ ಬದಲಾಗುತ್ತಲೂ ಬಂದಿವೆ.

ಈ ಆಹಾರ ಸೇವನೆಯ ಪದ್ಧತಿಗಳು ಮತ್ತು ಅದರಲ್ಲಿ ಅಡಗಿರುವ ಘಟಕಾಂಶಗಳು ಅನೇಕ ಅನೇಕ ಕಾರಣಗಳಿಂದ ಪ್ರಭಾವಿತವಾಗಿರುತ್ತವೆ.

ಗ್ರಾಮಾಂತರ ಪ್ರದೇಶಗಳಿಂದ ಅನೇಕ ಕಾರಣಗಳಿಗಾಗಿ ನಗರ ಪ್ರದೇಶಗಳಿಗೆ ಜನತೆ ನಲಸೆ ಹೋಗುತ್ತಿರುವುದು ಹೆಚ್ಚುತ್ತಿದೆ. ಹಳ್ಳಿಗಳಲ್ಲಿ ಆಹಾರದ ಹೆಚ್ಚಿನ ಭಾಗ ಅಲ್ಲಿಯೇ ಬೆಳೆಯಲ್ಪಟ್ಟು, ತಾಜಾ ಹಾಗೂ ಅತಿಯಾಗಿ ಹಸನು (ಪಾಲಿಷ್)ಗೊಳಿಸಲ್ಪಡದೆ ಇರುತ್ತದೆ. ಆಡಿಗೆ, ವ್ಯಂಜನಗಳಾದರೂ ಹೆಚ್ಚಾಗಿ ಮನೆಯಲ್ಲಿಯೇ ನೈಸರ್ಗಿಕ ರೀತಿ ಸಿದ್ಧವಾಗುತ್ತವೆ. ಕೆಲವು ವಿಷಯಗಳಲ್ಲಿ ಮಾತ್ರ ಗ್ರಾಮಾಂತರ ಪ್ರದೇಶದ ಆಹಾರ ಸೌಕರ್ಯಗಳೂ, ನಿಯಮಗಳೂ ಇನ್ನೂ ಬಹು ಹಳೆಯ ಕಂಪಾಚಾರದ ಪದ್ಧತಿಗಳೇ ಆಗಿದ್ದು, ಕೆಲಮಟ್ಟಿಗೆ ಅವೈಜ್ಞಾನಿಕವೂ, ದೋಷಪೂರ್ಣವೂ ಆಗಿರುತ್ತದೆಯೆನ್ನಬಹುದು.

ಆದರೆ ನಗರ ಪ್ರದೇಶಗಳಲ್ಲಿ ತೋರಿಕೆಗೆ ಅತಿ ಆಕರ್ಷಣೆ, ಸಮೃದ್ಧಿ ಕಂಡು ಬಂದರೂ, ಎಲ್ಲವೆರಲ್ಲಿಯೂ ಕೃತ್ರಿಮತೆ, ಅಸಹಜತೆ, ಅಭಾವಗಳೇ ಹೆಚ್ಚಾಗಿರುತ್ತವೆ. ಆಹಾರ ವಸ್ತುಗಳನ್ನು ಆಲ್ಲಿಯೇ ಬೆಳೆಯುವುದು ಸಾಧ್ಯವಿಲ್ಲ. ಸಿದ್ಧಗೊಳಿಸುವ ಆಹಾರಗಳು, ತಿಂಡಿ ತಿನಸುಗಳು ವೈವಿಧ್ಯಮಯವಾಗಿದ್ದರೂ ತಾಜಾ, ಶುದ್ಧ, ನೈಸರ್ಗಿಕ, ಆರೋಗ್ಯದಾಯಕವಾಗಿರುವುದು ಕಡಿಮೆ. ದೊಡ್ಡ ನಗರಗಳಲ್ಲಿ ಸುಮಾರು 25-50% ರಷ್ಟು ಜನರು ಖಾಯಂ ನಿವಾಸಿಗಳಲ್ಲದ ಕಾರಣ ಭೋಜನಾಲಯ ಹೋಟಲ್ಲುಗಳ ಆಹಾರ ತಿನಸುಗಳ ಮೇಲೇ ಅವಲಂಬಿಸಬೇಕಾಗುತ್ತದೆ. ಸ್ವಂತ ಮನೆಯಂತೆ ಆಲ್ಲಿ ಆಹಾರದ ಅಚ್ಚುಕಟ್ಟು ತನ, ಸ್ವಚ್ಛತೆ, ಬೇಕು ಬೇಡಗಳನ್ನು ನಿರೀಕ್ಷಿಸುವುದಾದರೂ ಹೇಗೆ? ಜತೆಗೆ ಅಲ್ಲಿ ಹೆಚ್ಚಾಗಿ ಪಾಲಿಷ್ ಮಾಡಿದ ಇಲ್ಲವೆ ಕಲಬೆರಕೆ ಮಾಡಿದ ಆಹಾರವಸ್ತುಗಳನ್ನೇ ಸೇವಿಸಬೇಕಾಗುತ್ತದೆ. ಇದಕ್ಕೆ ಪ್ರಾಯಶಃ ಆಹಾರ ಸಂಗ್ರಹ, ಕಾಯ್ದಿರಿಸುವಿಕೆ ಪದ್ಧತಿ—ಶೀಸೆಗಳಲ್ಲಿ ತುಂಬಿದ್ದನ್ನೇ ಬಳಸುವುದು ಅನೇಕ ನಕಲಿ ಅಥವಾ ಕೃತ್ರಿಮ ವಸ್ತುಗಳನ್ನು ಬಳಸುವುದೂ ಕೆಲಮಟ್ಟಿಗೆ ಕಾರಣವಾಗಿರಬಹುದು.

ಇಲ್ಲಿ ಇನ್ನೊಂದು ಅಂಶವೂ ಗಮನಾರ್ಹ. ಇದು ಧಾರ್ಮಿಕ ನಂಬಿಕೆ, ಸಂಕೋಲೆ, ಕಟ್ಟುಪಾಡುಗಳಿಗೆ ಸಂಬಂಧಿಸಿದುದು. ಕೆಲವು ಬಗೆಯ ಆಹಾರಗಳನ್ನು (ಕೆಲವು ತರಕಾರಿ, ವಿಾನು, ಕತ್ತಿ, ಇತ್ಯಾದಿ) ಸೇವಿಸುವುದು ದೇಹಕ್ಕೆ ಎಷ್ಟೋ ಪೋಷಕವಾಗಿದ್ದರೂ ಅವು ಒಂದಲ್ಲ ಒಂದು ಕಾರಣಗಳಿಂದ ಕೆಲವು ಸನಾತನ ಗುಂಪು, ಸಮಾಜಗಳಲ್ಲಿ ಇನ್ನೂ ನಿಷಿದ್ಧವೇ. ಇದರ ಜತೆಗೆ ಅನೂಚಾನವಾಗಿ ಬಂದ ಕೆಲವು ಕೌಟುಂಬಿಕ, ಸಾಮಾಜಿಕ ರೂಢಿ–ನಿಯಮಗಳು ಕಾರಣವಾಗಿ, ಒಂದೊಂದು ನಿರ್ದಿಷ್ಟ ಬಗೆಯ ಆಹಾರವನ್ನೇ ಸೇವಿಸುವಂತೆ ಮಾಡುತ್ತವೆ. ಅದರಿಂದ ಆ ಆಹಾರಗಳು ಹಿತವೇ ಇರಲಿ, ಅಹಿತವೇ ಇರಲಿ, ಪೋಷಕ ಹಾಗೂ ಸಮತೋಲನವಾದುದೇ ಇರಲಿ ಬಿಡಲಿ ಅವೆಲ್ಲ ಗೌಣ. ಮೇಲಾಗಿ ಆಹಾರ ಸೇವನೆಯ ಪದ್ಧತಿಗಳೂ ಆಯಾಯ ದೇಶ, ಕಾಲ, ಜಾತಿ, ಧರ್ಮ, ರೂಢಿ, ಸಂಪ್ರದಾಯಗಳಿಗೆ ಕಟ್ಟುಬಿದ್ದಿರುವುದು ಇಂದಿಗೂ ಅನೇಕ ಕಡೆ ಕಂಡು ಬರುತ್ತವೆ. ಉದಾಹರಣೆಗೆ ದಕ್ಷಿಣ ಭಾರತದಲ್ಲಿ ಅಕ್ಕಿ, ಅನ್ನ, ಮತ್ತು ತತ್ಸಂಬಂಧದ ಆಹಾರ ತಿನಸುಗಳೇ ಹೆಚ್ಚು. ಉತ್ತರ ಭಾರತದಲ್ಲಿ ಗೋಧಿ, ಮತ್ತು ತತ್ಸಂಬಂಧದ ಆಹಾರ ತಿನಸುಗಳು ಜಾಸ್ತಿ.

ಭೌಗೋಲಿಕ ಪರಿಸರ, ಪ್ರಾಯುಗುಣ, ಮಳೆ, ಬೆಳೆ ಇತ್ಯಾದಿಗಳು ಕೆಲಮಟ್ಟಿಗೆ ಆ ಜಿಲ್ಲೆಯ ಜನರ ಆಹಾರ ಪದ್ಧತಿಯನ್ನು ನಿರ್ಧರಿಸುತ್ತದೆ. ಸಮುದ್ರ ತೀರದ ಜನರು ಸಮುದ್ರದಿಂದ ದೊರೆಯುವ ಮೀನು ಮತ್ತು ತೀರಪ್ರದೇಶದಲ್ಲಿ ಬೆಳೆಯುವ ಭತ್ತ, ತೆಂಗು, ಕೊಬ್ಬರಿ, ಮುಂತಾದುವುಗಳ ಸೇವನೆಯನ್ನು ಹೆಚ್ಚು ಸಾಮಾನ್ಯ ಮತ್ತು ಅನಿವಾರ್ಯ. ಬೆಟ್ಟ ಗುಡ್ಡ ಪ್ರದೇಶಗಳ ಜನರು ಗೆಡ್ಡೆಗೆಣಸು, ಧಾನ್ಯ ಮತ್ತು ಆಲ್ಲಿಯ ಆಹಾರ ಬೆಳೆಯನ್ನೇ ಅವಲಂಬಿಸಬೇಕು. ಮೈದಾನ ಪ್ರದೇಶದ ಜನರು, ಮಲೆನಾಡಿನ ಜನರು ಆಯಾ ಪ್ರದೇಶಗಳಲ್ಲಿ ಬೆಳೆಯುವ ಆಹಾರವಸ್ತುಗಳನ್ನೇ ಅವಲಂಬಿಸಬೇಕು. ಜನರ ಆರ್ಥಿಕ-ಸಾಮಾಜಿಕ ನೆಲೆಗಟ್ಟುಗಳು ಕೂಡ ಅವರವರ ಆಹಾರ ಸೇವನೆಯ ರೂಢಿ–ನಿಯಮಗಳ ಮೇಲೆ ಪ್ರಭಾವ ಬೀರುವುದುಂಟು. ಆರ್ಥಿಕ-ಸಾಮಾಜಿಕ ದೃಷ್ಟಿಯಿಂದ ಆತಿ ಕೆಳಮಟ್ಟದಲ್ಲಿದ್ದವರ ಆಹಾರ ನಿಯಮಗಳು ಘಟಿಕಗಳು ತೀವ್ರ ಶೋಚನೀಯವಾಗಿರುವ ಸಂಭವವೇ ಹೆಚ್ಚು. ಆದೆ ಬೆಂಗಳೂರು ನಮ್ಮಲ್ಲಿ ಯುದ್ಧ ಕಾಲಗಳಲ್ಲಿ ಪರಿಸ್ಥಿತಿಯ ಒತ್ತಡದಿಂದ ಜನರ ಆಹಾರ ಸೇವನೆಯ ಪದ್ಧತಿಗಳು ಅನಿವಾರ್ಯವಾಗಿ ಬದಲಾಗುವುದೂ ಉಂಟು. ಇದರಿಂದ ಒಳ್ಳೆಯದಕ್ಕೂ ಅಪಾಯಕಾರಿಯೂ ಆಗಿದೆ. ಕೆಲವೊಮ್ಮೆ ಅನಾಪತ್ಕಾರಿಯೂ ಆಗಿದೆ.

ಮನುಷ್ಯನ ವಯಸ್ಸು ದೈಹಿಕ ಸ್ಥಿತಿ, ಆರೋಗ್ಯ, ಮಾಡುವ ಕಾಯಕ-ದುಡಿಮೆ ಇತ್ಯಾದಿಗಳೂ ಅವನ ಆಹಾರ ಸೇವನೆಯ ವೇಳೆ, ಮೊತ್ತ, ಪದ್ಧತಿ ಇತ್ಯಾದಿಗಳನ್ನು ಕೆಲಮಟ್ಟಿಗೆ ಬದಲಾಯಿಸುತ್ತವೆ. ಉದಾ: ಇಳಿವಯಸ್ಸಿನ (ವಾರ್ಧಿಕ್ಯ) ವ್ಯಕ್ತಿಗೆ ತಿಂದಿದ್ದೆಲ್ಲ ಪಚನವಾಗುವುದು ದುಸ್ತರವಾದ್ದರಿಂದ ಅವನ ಬೇಕು ಬೇಡಿಕೆಗಳು ಸ್ವಲ್ಪ ಭಿನ್ನವೇ ಆಗಿರುವುದು ಸಹಜ. ಕಾಯಿಲೆ ಯಾವಾಗ ಅಲ್ಪಕಾಲದ್ದೇ ಇರಲಿ ದೀರ್ಘ ಕಾಲದ್ದೇ ಇರಲಿ, ಎಲ್ಲರೂ ತಮ್ಮ ದೈನಂದಿನ ಆಹಾರಕ್ಕಿಂತ ಸ್ವಲ್ಪ ಭಿನ್ನವಾದ ಆಹಾರವನ್ನೇ ಅಂದರೆ ಹೆಚ್ಚಾಗಿ ದ್ರವರೂಪದ ಹಾಗೂ ಸುಲಭವಾಗಿ ಪಚನವಾಗುವ ಆಹಾರವನ್ನೇ ಸೇವಿಸುವುದು ಅಗತ್ಯ. ಗರ್ಭಿಣಿ ಸ್ತ್ರೀಯರು, ಬಾಣಂತಿಯರು ಕೂಡ ಕೆಲಕಾಲ ತಮ್ಮ ಆಹಾರ ಪರಿಮಿತಿಗಳಲ್ಲಿ ಕೆಲವು ಕಟ್ಟುಪಾಡುಗಳನ್ನು ಕಟ್ಟಿಲೆ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ರೋಗ ದೀರ್ಘಾವಧಿಯದಾದರೆ ಆಗ ಪರಿ

With Best Compliments From—

THE SHANKER TRANSPORT COMPANY (PRIVATE) LIMITED,

KOPPA - KADUR

Pioneer in the field of Transport in Malnad in Chikmagalur, Shimoga and South Kanara Districts.

A. Ramesh Rao
Managing Director

ಯಕ್ಷಗಾನ — ಪ್ರಸಂಗ ಸಾಹಿತ್ಯ

(ಹಿನ್ನೋಟದೇ ಪುಟದಿಂದ)

ಸ್ಥಿತಿಗೆ ತಕ್ಕಷ್ಟು ಮತ್ತು ನೈಸರ್ಗಿಕ ಆದೇಶದಂತೆ ಆಹಾರ ನಿಯಮಗಳನ್ನು ಬಿಗಿಗೊಳಿಸ ಬೇಕಾಗುತ್ತದೆ.

ಚಿಕ್ಕ ವಯಸ್ಸಿನಿಂದಲೇ ಯೋಗ್ಯ ಹಾಗೂ ಪರಿಪೂರ್ಣ ಆಹಾರದ ಮಹತ್ವವನ್ನು ತಿಳಿದು, ಒಳ್ಳೆಯ ಆಹಾರ ನಿಯಮಗಳನ್ನು, ಕಡೆತನಕ ಅನುಷ್ಠಾನಕ್ಕೆ ತಂದು ಕೊಳ್ಳುವುದು ನಮ್ಮ ದೇಶದಲ್ಲಿ ಇನ್ನೂ ಸಾಕಷ್ಟು ಬಲಪಟ್ಟಿಲ್ಲ. ಒಮ್ಮೆ ಕೆಲವು ದುಷ್ಟ, ಅನವಶ್ಯಕ, ಸತ್ವಹೀನ ಆಹಾರ ಪದ್ಧತಿಗಳೇ ಆಗಲೀ, ಯಾವುದೇ ಚಟಗಳೇ ಆಗಲಿ ರೂಢಿಯಲ್ಲಿ ಬಂದುಬಿಟ್ಟರೆ, ನಮ್ಮಂದೆ ಅವುಗಳಿಗೆ ಕಡೆತನಕ ಗುಲಾಮನಾಗಿರ ಬೇಕಲ್ಲದೆ, ಅವುಗಳನ್ನು ಬದಲಿಸುವುದು ಕಠಿಣ.

ಇಂದಿನ "ಅಧುನಿಕ" ಕಾಲದಲ್ಲಿ ಅನೇಕ ಬಗೆಯ ರೋಗ ಪೀಡೆ ಬೇನೆಗಳು, ಪೌಷ್ಟಿಕ ಹಾಗೂ ಸಮತೋಲನ ಆಹಾರದ ಕೊರತೆ, ಅದರ ಅಜ್ಞಾನ, ಆಚರಣೆಯಲ್ಲಿ ತರಲಾಗದೆ ಮನೋದೌರ್ಬಲ್ಯ ಇತ್ಯಾದಿಗಳಿಂದಲೇ ಹೆಚ್ಚುತ್ತಿದೆ ಎಂಬುದು ಹಲವರ ಮತ. ಇದರಿಂದ ಅಂತಹ ವ್ಯಕ್ತಿಗಳು ನಮ್ಮ ದೇಹಕ್ಕೆ ಅವಶ್ಯವಿರುವಷ್ಟು ಶಕ್ತಿ–ಸಾಮರ್ಥ್ಯವನ್ನು ಯೋಗ್ಯ ಆಹಾರದ ಮೂಲಕ ದೊರಕಿಸಿ ಕೊಳ್ಳಲಾರರು. ಆಗ ದೈಹಿಕ ವಿಕಾರಗಳು (ಅತಿ ದಪ್ಪ, ಅತಿ ಕೃಶ), ಕುಂಠಿತ ರೋಗ ನಿರೋಧಕ ಶಕ್ತಿ, ದೃಷ್ಟಿ ದೋಷಗಳು ಮುಂತಾದ ಹಲವಾರು ಅನಪೇಕ್ಷಿತ ಪರಿಣಾಮಗಳಿಗೆ ಎರವಾಗಬೇಕಾಗುತ್ತದೆ.

ಇದಕ್ಕೆ ಜನತೆಯು ಎಚ್ಚೆತ್ತು, ಸುಶಿಕ್ಷಿತರಾಗಿ, ಆಹಾರ ವಿಜ್ಞಾನದ ಬಗೆಗೆ ಹೆಚ್ಚು ಮಹತ್ವಕೊಟ್ಟು, ಯೋಗ್ಯ ರೀತಿಯ ಹಾಗೂ ಸಮೃದ್ಧ ಪೋಷಕ ಆಹಾರ ಸೇವನೆಯು ವಿಧವಿಧಾನಗಳನ್ನು ಆಚರಣೆಯಲ್ಲಿ ತಂದುಕೊಳ್ಳಬೇಕು. ಈ ದಿಶೆಯಲ್ಲಿ ವಿಜ್ಞಾನಿಗಳು, ವೈದ್ಯರು, ದಾದಿಯರು, ಸಾಮಾಜಿಕ ಕಾರ್ಯಕರ್ತರು, ಗೃಹಿಣಿಯರು ಮುಂತಾದವರೆಲ್ಲ ಹೆಚ್ಚು ಪರಿಣಾಮಕಾರಿ ಸೇವೆ ಸಲ್ಲಿಸಬಲ್ಲರು. ಆದರಿಂದ ಜನರಲ್ಲಿ ಹೆಚ್ಚಿಚ್ಚು ತಿಳುವಳಿಕೆ ಮೂಡುವಂತಾಗದೆ, ಆಗ ಕೆಲ ವರ್ಗಗಳ ಅಶಿಕ್ಷಿತರು ಮತ್ತು ಅಜ್ಞರಲ್ಲಿ ಆಹಾರ ಸೇವನೆ-ಪದ್ಧತಿಗಳ ಬಗೆಗೆ ಆಳವಾಗಿ ಬೇರೂರಿರುವ ಅನೇಕ ಮೂಢನಂಬಿಕೆಗಳು, ಕಾಲ್ಪನಿಕ ಭ್ರಮೆಗಳು, ಮನೋದೌರ್ಬಲ್ಯ ಇತ್ಯಾದಿ ತ್ರಯೋಣ ಪಾಯವಾದಾವು!

ಇಷ್ಟೇ ಅಲ್ಲದೆ ಆಹಾರ ಸೇವನೆಯ ಬಗೆಗೆ ಇನ್ನೂ ಹಲವಾರು ಹೆತ್ತಾರು ಗಮನಾರ್ಹ ಅಂಶಗಳುಂಟು. ಅವು ಎಲ್ಲರಿಗೂ ಪರಿಚಿತವಿದ್ದಂತೆ ಕಂಡುಬಂದರೂ ನಿತ್ಯ ಜೀವನದಲ್ಲಿ ತರುವವರು ಕಡಿಮೆಯೆಂತಲೇ ಹೇಳಬೇಕು. ಅವುಗಳನ್ನು ಹೀಗೆ ಸಂಕ್ಷಿಪ್ತವಾಗಿ ನೆನಪಿಸಬಹುದು:—

1) ಆಹಾರ ಸೇವನೆಯ ವೇಳೆಯಲ್ಲಿ ಎಂಥ ಸಂದರ್ಭಗಳಲ್ಲಿಯೂ ಸಾಧ್ಯವಾದಷ್ಟು ಕ್ಲಪ್ತತೆಯನ್ನು ಕಾಯ್ದುಕೊಂಡು ಹೋಗುವುದು. 2) ಆಹಾರ ಸೇವನೆಯು ಪರಿಣಾಮಕಾರಿಯಾಗಲು ಊಟದ ನಡುವೆ ಸಾಕಷ್ಟು ವೇಳೆಯ ಅಂತರ (ವಿರಾಮ) ಇರುವುದು ಅಗತ್ಯ. 3) ಆರೋಗ್ಯ ಹಾಗೂ ದೃಢಕಾಯ ಸ್ತ್ರೀ-ಪುರುಷ ವ್ಯಕ್ತಿಗೆ ದಿನಕ್ಕೆ 3 ಸಲ ಊಟ, ಇಲ್ಲವೆ 2 ಊಟ ಮತ್ತು ಒಂದು ಉಪಹಾರ ಸಾಕು. ದೈಹಿಕ ದುಡಿಮೆ ಇರುವವರಿಗೆ 3 ಹೊತ್ತು ಊಟ ಅಪೇಕ್ಷಣೀಯ. 4) ಯೋಗ್ಯಪಚನ ಮತ್ತು ಆರೋಗ್ಯಕ್ಕೆ 2 ಊಟಗಳ ನಡುವೆ 4-5 ಗಂಟೆಗಳ ವಿಶ್ರಾಂತಿಯಾದರೂ ಬೇಕೇಬೇಕು. 5) ರಾತ್ರಿಯ ಊಟವನ್ನು ಸ್ವಲ್ಪ ಬೇಗನೇ ಮುಗಿಸಿ, ಮಲಗುವ ವೇಳೆಗೆ ಅರ್ಧ ಪಚನವಾಗಿದ್ದರಂತೂ ಒಳ್ಳೆಯದೇ. 6) ಮಲಗುವ ಮುಂಚೆ 1 ಲೋಟ ಹಾಲು, ಓವಲ್‌ಟಿನ್ ಇತ್ಯಾದಿ ಸ್ಕೀಕರಿಸಿ ಮಲಗಿದರೆ ಶಾಂತ ನಿದ್ರೆಯೂದೀತು. 7) ಬೆಳಗಿನ ಮುಂಜಾನೆ ಕೆಲದೂರ ವಾಯು ಸೇವನೆಗೆ ಹೋಗಿ ಬಂದು ನಂತರ ಒಂದು ಲೋಟ ಹಾಲು, ಇಲ್ಲವೇ ಹಾರ್ಲಿಕ್ಸ್ ಇಲ್ಲವೆ ಹಣ್ಣಿನ ರಸ ತೆಗೆದುಕೊಂಡು, ಮುಂದಿನ ಕೆಲಸಗಳಲ್ಲಿ ತೊಡಗುವುದು ವಿಹಿತ. 8) ವಿನಾ ಕಾರಣ ಯಾವುದೇ ಸಂದರ್ಭದಲ್ಲಿ ಆಹಾರವನ್ನು ಅವಸರದಿಂದ ಬಾಯಲ್ಲಿ ತುರುಕಿಕೊಳ್ಳುವುದು ಇಲ್ಲವೆ ಮಿತಿಮೀರಿ ಸೇವಿಸುವುದು ನಿಷಿದ್ಧವೆನಿಸುತ್ತದೆ. 9) ಮನಸ್ಸು ಮತ್ತು ಪರಿಸರ ಶಾಂತವಾಗಿದ್ದಾಗಲೇ ಆಹಾರ ಸೇವಿಸುವುದು ಯೋಗ್ಯ. 10) ಆಹಾರವನ್ನು ಚೆನ್ನಾಗಿ ಅಗೆದು ನುರಿಸಿ ನುಂಗಬೇಕೇ ಹೊರತು ಅವಸರದಲ್ಲಿ ಅರ್ಧಂಬರ್ಧ ಊಟಮಾಡಿ ಏಳಬಾರದು. 11) ಮಾನಸಿಕ ಉದ್ವೇಗ, ಕೋಪ, ದಣಿವು, ಚಿಂತೆ ಇತ್ಯಾದಿಗಳಿದ್ದಾಗ ಊಟಕ್ಕೆ ಕೂಡಬಾರದು. ಏಕೆಂದರೆ ಅಂತಹ ಸಂದರ್ಭಗಳಲ್ಲಿ ಪಚನಾಂಗಗಳು ಸರಿಯಾಗಿ ಕೆಲಸ ಮಾಡಲಾರವು. 12) ಊಟವಾದ ಕೂಡಲೇ ಕೆಲವು ನಿಮಿಷಗಳಾದರೂ ವಿಶ್ರಾಂತಿಯಿಲ್ಲದೆ ಕೆಲಸಕ್ಕೆ ತೊಡಗಬಾರದು. 13) ಹಗಲು: ಹೊತ್ತು ಊಟವಾದ ಮೇಲೆ ಕೆಲ ನಿಮಿಷ ಕೂಡುವುದು ಒಳಿತು. ರಾತ್ರಿಯ ಊಟವಾದ ಮೇಲೆ 1—2 ಮೈಲುಗಳಾದರೂ ತಂಗಾಳಿಯಲ್ಲಿ ನಡೆದು ಬಂದರೆ ದೇಹಕ್ಕೂ ಹಿತ; ಮನಸ್ಸಿಗೂ ಹಿತ. 14) ಊಟವಾದ ಕೂಡಲೇ ಹೆಚ್ಚು ಶ್ರಮವಿರುವಂತಹ ದೈಹಿಕ ಕಾರ್ಯವನ್ನು ಮಾಡಬಾರದು. ಭಾರ ಎತ್ತುವುದು, ಕುಟ್ಟುವುದು ಒಡುವುದು, ರಭಸದ ಆಟವಾಡುವುದು, ಇತ್ಯಾದಿ ವರ್ಜ್ಯ. ಎಲ್ಲಕ್ಕಿಂತ ಹೆಚ್ಚಾಗಿ ಹಸಿವಾದಾಗಲೇ ಆಹಾರ ಸೇವಿಸುವುದು ಒಳಿತು. 15) ಆಹಾರ ಉಳಿಯುವುದೆಂಬಾಸಲೇ ಕೆಡುವುದೆಂದಾಗಲೀ ಇಲ್ಲವೆ ಆಗ್ಗದ್ದೋ ಹುಕ್ಕಟಿಯೋ ಆಗಿ ಸಿಕ್ಕಿದೆಯೆಂದಾಗಲೇ ಮಿತಿಮೀರಿ ಸೇವಿಸ ತಕ್ಕದ್ದಲ್ಲ. 16) ಆಹಾರದಲ್ಲಿ ದಿನವೂ ವೈವಿಧ್ಯತೆ, ಪಿಷ್ಟ, ಸಸಾರಜನಕ, ಕೊಬ್ಬು, ಎಣ್ಣೆ ಇತ್ಯಾದಿ ಯೋಗ್ಯ ಪ್ರಮಾಣದಲ್ಲಿರುವಂತೆ ನೋಡಿಕೊಳ್ಳುವುದು ಅವಶ್ಯ.

ಇಷ್ಟೆಲ್ಲ ಹೇಳಿದರೂ ಇಂದಿನ ಕಾಲಮಾನ ಪರಿಸ್ಥಿತಿಗಳಲ್ಲಿ ವಿಶೇಷವಾಗಿ ನಗರಗಳಲ್ಲಿ ಅತೀವ ದಟ್ಟಣೆ, ಗಾಳಿ, ಬೆಳಕು, ವಾಸಸ್ಥಾನ, ಆಹಾರ ಇತ್ಯಾದಿ ಅವಶ್ಯಕತೆಗಳ ಅಭಾವ ಇಲ್ಲದೆ ಮಧ್ಯಮ ಮತ್ತು ಕೆಳವರ್ಗದ ಜನರಿಗೆ ಎಟುಕದೆ ಇರುವುದು ಮುಂತಾದ ಕಾರಣಗಳಿಂದ ಮೇಲಿನ ನಿಯಮಗಳನ್ನು ಪಾಲಿಸುವುದು ಕಠಿಣವಾದೀತು! ಜತೆಗೆ ಮಾನಸಿಕ ಒತ್ತಡ, ವೇಳೆಯ ಮಹತ್ವ ಮತ್ತು ಓಟ, ಕೃತ್ರಿಮತೆ, ಯಾಂತ್ರಿಕ ಜೀವನ, ವಿಜ್ಞಾನಿಲಗಳ ಸರಿಸರ, ದೈನಂದಿನ ಬೇಡಿಕೆಗಳು ಹೆಚ್ಚುತ್ತಿದ್ದು ನಿತ್ಯೋಪಯೋಗಿ ಹಾಗೂ ಜೀವನಾವಶ್ಯಕ ವಸ್ತುಗಳ ಬೆಲೆ ಏರುತ್ತಿರುವುದು ಆಸಂತೃಪ್ತಿ. ಎಣೆಯಿಲ್ಲವ ಆಸೆ, ದುರಾಸೆಗಳು; ಚಾಂಚಲ್ಯ ಮತ್ತು ಚಾಪಲ್ಯ ಜೀವನ ಇತ್ಯಾದಿಗಳಿಂದಲೂ ಸಾಮಾನ್ಯ ಆಹಾರ—ಆರೋಗ್ಯ ಪಾಲನ ನಿಯಮಗಳನ್ನು ಆಚರಣೆಯಲ್ಲಿ ನೂರಕ್ಕೆ ನೂರರಷ್ಟು ತರುವುದು ಕಷ್ಟ ನೇನೋ ನಿಜ. ಆದರೆ ಅವುಗಳಲ್ಲಿ ಸಾಧ್ಯವಾದಷ್ಟನ್ನಾದರೂ ನೈಗೂಡಿಸಿಕೊಂಡು ಆಚರಣೆಯಲ್ಲಿ ತರುವ ಮನೋಸ್ಥೈರ್ಯ ರೂಢಿಸಿಕೊಂಡರೆ, ಆದರಿಂದ ವ್ಯಕ್ತಿಗೂ ಹಿತ, ದೇಶಕ್ಕೂ ಹಿತವೆ. ಇದು ದೊಡ್ಡ ನಗರಗಳ ಜೀವನದ ಒಂದು ಮುಖ ಮತ್ತು ವೈಶಿಷ್ಟ್ಯವೆಂತನೇ ಹೇಳಬಹುದು.

ಒಟ್ಟಿನಲ್ಲಿ ಆಹಾರ ಸೇವನೆ ಮತ್ತು ನಿಯಮಗಳಲ್ಲಿ ಇಂದು ಒಂದು ಹೊಸ ದೃಷ್ಟಿಕೋನ, ಕಟ್ಟು ನಿಟ್ಟಾದ ಆಚರಣೆ, ಯೋಗ್ಯ ಆಹಾರ ವಸ್ತುಗಳ ಆಯ್ಕೆ, ಹೊಸ ಹೊಸ ಆಹಾರ ವಸ್ತುಗಳ ಮತ್ತು ಪೋಷಕಾಂಶಗಳ ಶೋಧ, ಅತಿ ನಿರ್ಗತಿಕರಿಗೂ ಬಡವ ಬಲ್ಲಿದರಿಗೂ ಹಸಿವು ಒಂದೇ ಆದ್ದರಿಂದ ಎಲ್ಲರಿಗೂ ಎರಡು ಹೊತ್ತಾದರೂ ಊಟ ಮುಂತಾದುವು ದೊರೆಯುವಂತಾಗಬೇಕು. ಆಗಲೇ 'ಗರೀಬಿ ಹಟಾವೋ' ಎಂಬ ಕರೆಗೂ ಅರ್ಥ ಬಂದೀತು?

—(ಸಾಧಾರ)

ಚಿನ್ನದ ಹಬ್ಬದ ಸಂಪುಟಕ್ಕೆ ಬಂದುದು

ಅಂತರಂಗವನ್ನು ಬಡಿದೆಬ್ಬಿಸಿ ಬಹಿರಂಗಕ್ಕೆ ವ್ಯಾಪಿಸುತ್ತವೆ. ಪ್ರೇಕ್ಷಕರ ಮನಸ್ಸಿನಲ್ಲಿ ಪ್ರತಿಧ್ವನಿ ಮಾಡುತ್ತವೆ. ಅವುಗಳ ನೋಡ ಪ್ರಪಂಚದಲ್ಲಿ ನಮ್ಮನ್ನು ತೇಲಿಸುತ್ತವೆ. ಆದೇ ಚಾರಿತ್ರಿಕ, ಸಾಮಾಜಿಕ ಪಾತ್ರಗಳು ನಮ್ಮ ಚಿತ್ತವೃತ್ತಿಯಲ್ಲಿ ಮೇಲೆ ಆಳವಾದ ಯಾವ ಪರಿಣಾಮವನ್ನೂ ಮಾಡಲಾರವು. ಬರೇ ಭಾವ್ಯ ಅತ್ಯವಸರದ ದ್ವೇಷ, ಹಿತ್ಸರಗಳನ್ನು ಕೆಣಕಿಸಿ, ತಾತ್ಕಾಲಿಕ ನೆಗೆಗಡಲಲ್ಲಿ ನಮ್ಮನ್ನು ತೇಲಿಸಿ, ಅಡಗುಪ್ಪತ್ತಿಸಿ. ಇವುಗಳಿಂದ ರಸಾನಂದ ವಿಲ್ಲ. ಪಾತ್ರಧಾರಿ ತನ್ನ ನಿರ್ವೃತ್ತಿನಿಂದ, ಚಮತ್ಕಾರಿಂದ, ಪಾರುರಿಲ್ಲದ ನಮ್ಮನ್ನು ವಿನಿಂದ ಭಾವಪ್ರಭಾವ ಭಾವಪ್ರಜ್ಞೋದಯವನ್ನೂ ಮಾಡಲಾರ. "ಸಮಸ್ಯಾತ್ಯಾಸ್ತತ್ವಂ ಕವಿ ಸಹೃದಯಾಖ್ಯಂ ವಿಷಯತೇ" ಎಂಬ ಮಾತು ಯಥಾರ್ಥವಾಗಬೇಕಾದ್ದರೆ ರಸ ಪ್ರತಿಪಾದನೆಯೇ ಪ್ರೇಕ್ಷಕ. ಕನಿ ಸಾತ್ರಧಾರಿಗಳನ್ನು ಒಂದುಗೂಡಿಸ್ವ ರಸಶಕ್ತಿ ಯಾಗಬೇಕು. ಒಂದು, ಎರಡು ಪದ್ಯ ಶನಗಳಲ್ಲೇ ಮೂಲೆಗೆಯಬಹುದಾದ ಪ್ರಸಂಗಗಳನ್ನು ಹೊಸೆದರೇನು—ಬಿಟ್ಟರೇನು? ಕವಿ ಜನ್ನನೆನ್ನುವಂತೆ ಇಂತಹ "ಪೊಸ ಬಾಸಿಗಮುಂ ಕಟ್ಟಿಯುಮೇನು? ಮುಡಿವ ಭೋಗಿಗಳಿಲ್ಲದೆಬಾಡಿಪೋಗದೆ?"

—ಖಂಡಿತವಾಗಿಯೂ ಬಾಡಿಹೋದೀತು.

ಯಕ್ಷಗಾನದ ಹಾಡುಗಳ ಶೈಲಿ ಸುಲಭವಾಗಿದೆ; ಸರಳವಾಗಿದೆ. ರಾಗತಾಳ ವೈವಿಧ್ಯದಿಂದ ಕೂಡಿದೆ. ಕನ್ನಡದ ಹಳೆಕಾವ್ಯಗಳ ಜಾಡಿನಲ್ಲೆ 'ಶ್ರೀ'ಕಾರವೇ ಪ್ರಥಮಾಕ್ಷರ ಗಳುಳ್ಳ ಸ್ತುತಿಪರವಾದ ಸಂಸ್ಕೃತ ವೃತ್ತ–ಸಾಮಾನ್ಯವಾಗಿ ಮತ್ತೋಭ, ಶಾರ್ದೂಲ, ವಿಕ್ರೀಡಿತ ಸ್ರಗ್ಧರಾ–ದಿಂದಲೋ, ಕಂದದಿಂದಲೋ ಪ್ರಸಂಗ ಪ್ರಾರಂಭವಾಗುತ್ತದೆ. ಉದಾಹರಣೆಗೆ ಒಂದೆರಡು ವೃತ್ತಗಳಿವೆ.

1 ಶಲ್ಯ ಪರ್ವ—ಹಲಸಿನ ಹಳ್ಳಿ ನರಸಿಂಹ ಶಾಸ್ತ್ರಿ—ಶಾರ್ದೂಲ ವಿಕ್ರೀಡಿತ.

ಶ್ರೀ ಮದ್ಭಾಹ್ಮಮುಖಾ ಮರಾರ್ಚಿತ
ಪದಂ ಸುಜ್ಞಾನ ಕಲ್ಪದ್ರುಮಂ
ಸೋಮೋದಿತ್ಯ ಸಹಸ್ರ ತೇಜ ಸದೃಶಂ
ಕಾವಾರಿ ಮಿತ್ರಂ ವಿಭುಂ
ಭೀಮಂ ದೈತ್ಯ ಕುಲಾಂತಕಂ
ನರಹರಿಂ ತ್ರೈಲೋಕ್ಯ ರಕ್ಷಾಮಣಿಂ
ಹೇಮಾಲಂಕೃತ ಕೋಭಿತಂ
ಗುಣಯುತಂ ಶ್ರೀ ನಾರಸಿಂಹಂ ಭಜೇ||

2 ರಾಜಸೂಯ ಯೋಗವು ಭವ್ಯ ಭೂ
ವರಪ್ಪರದ ಶೇಖರ—ಸ್ರಗ್ಧರಾ.
ಶ್ರೀಮದ್ವೈಕುಂಠವಾಸಿ ಸರಸತಿ ವಿ
ನುತಂ ಜಳ ಪುತ್ರಂ ಜನಿತ್ರಂ
ರಾಮಂ ಮೂರೀಜ ನಷ್ಟಾಖ್ಯನುರಿಪು
ಮಥನಂ ಕಂಸ ನಾಶಂ ಪರೋಂ
ಹೇಮೋತ್ಪಕ್ಷ್ಮಂ ಬುಧೇಜ್ಯಂ ಜಳಶುಲ
ಹನನಂ ಕಾಮ ತಾತಂ ಜಟಾಂಗಂ
ಭೀಮಂ ದೈತ್ಯಾಳಿ ಭೀಮಂ ರವಿಜೆತ
ಕಿರಣಂ ಕಾನೆನಮ್ಯಂ ರನೋಜಂ||

3. ವಿವಾಹ ಕಲ್ಯಾಣ—ಕೆಂದ
ಶ್ರೀ ಗೌರೀ ರಮಣಂ ನಿಗ ಮೊಗಮ
ವಂದಿತ ಚರಣಂ ನಾಗಾಭರಣಂ||

ನುಗೆಣ್ಣಂ ಕುಡು ಎಮ ಗಾ| ರೋ
ಗ್ಯಂ ನಿನ್ನಯ ಭಕ್ತಿಯ ಮುಕ್ತಿಯ ಸ
ತತಂ||

ಹೀಗೆ ಇಷ್ಟ ದೇವತೆಯ ಪ್ರಾರ್ಥನೆಯೂ ದ ಬಳಿಕ ಗಣಪತಿಯನ್ನು ಒಂದೊ ಭಾಮಿನಿ ಶಪ್ಪದಿಯಲ್ಲಿ ಇಲ್ಲವೇ ನಾಟಿ, ಸೌರಾಷ್ಟ್ರ ರಾಗಗಳ ತಾಳಬದ್ಧವಾದ ಪದ್ಯದಿಂದ ಆ ರ್ಚಿಸುತ್ತಾರೆ. ಮುಂದೆ ಅನೇಕ ದೇವಿ ದೇ ವತೆಗಳ ಕೃಪ್ಣ ಕಿರಾಸಥಾಗಿ ತಮ್ಮ ಭಕ್ತಿ ಯನ್ನು ತೋರಿಸುತ್ತಾರೆ. ಗಣಪತಿ ಸ್ತುತಿ ಸೇವಷ್ಟಾದ ಒಂದಿರಡು ಉದಾಹರಿಗಳಿಳು.

1) ಅಷಕುಶರ ತಾಳಗ—ಹಬ್ಬಯಂಗಡಿ ರಾತ್ರಿಯಿಂದ್ರ ಭಟ್ಟ-ಸೌರಾಷ್ಟ್ರ-ತ್ರಿವುಡೆ.

ಜಯ ಜಯತು ಗಿರಿಶಾತ್ಮಜಾಸುತ|
ಜಯತು ಜಗದಾರ್ಚಿತ||
ಭಯತು ಸಿದ್ಧಿಪ್ರದ ಮುನಿಸ್ತುತ|
ಜಯತು ಸದ್ಗುಣ ಪೂರಿತ||

2) ಚಂದ್ರಹಾಸ ಚರಿತ್ರೆ—ಹಲಸಿನಹಳ್ಳಿ ನರಸಿಂಹ ಶಾಸ್ತ್ರಿಗಳು ನಾಟಿ|ಝಂಪೆತಾಳ

ಪ್ರಥಮ ಪೂಜಿತ ವೀರ|
ಶ್ರುತಿವೇದ್ಯ ಗಂಭೀರ |
ನತಮೌಳಿ ಮಂದಾರ |
ಜಿತಪೈತ್ಯಶೂರ ||
ಸ್ತಂಭ ಜನ್ಮನೆನಿನ್ನ |
ನಂಬಿಹೆನು ನೀ ಎನ್ನ |
ಬೆಂಬಡದೆ ಸಲಹೀಗ |
ಶಂಭುಸುತ ಬೇಗ ||

3) ಕುಮೂರ ವಿಜಯ:- ಮುದ್ದಣ ನಾಟಿ| ರೂಪಕ ತಾಳ.

ಲಂಬೋದರ ನಂಬಿದೆ ಪಾ |
ದಾಂಬುಜದೊಳು ಬಿಂಗಕ್ಕುವೆ|
ಅಂಬಿಕೆಯಣಿಗನೆ ಪೊರೆ ಹೇ |
ರಂಬನೆ ಸಂಭ್ರಮದಿ ||

ಯಕ್ಷಗಾನ ಪ್ರಸಂಗಕರ್ತರಲ್ಲಿ ಮುದ್ದಣನನ್ನುಳಿದು ಯಾರೂ ಪಾಂಡಿತ್ಯ ಪ್ರದರ್ಶನಕ್ಕೆ **ಮನತೆತ್ತಿಗರಿಲ್ಲವೆಂದೆ. ಇವರು ಭಾವಪ್ರತಿಪಾದನೆಗೆ ತೊಡಗಿದವರು.** ಉಕ್ತಿ ಚಮತ್ಕಾರಕ್ಕಾಗಲಿ, ವಿದ್ವತ್ಪ್ರದರ್ಶನಕ್ಕಾಗಲಿ ಉತ್ಸಾಹ ತೋರಿಲ್ಲ. ಸಾಮಾನ್ಯ ಜನರಿಗೆ ಧರ್ಮಾರ್ಥ ಕಾಮ ಮೋಕ್ಷಗಳ ತಿಳಿವಳಿಕೆಯನ್ನು ಸರಳವಾದ ಹಾಡುಗಬ್ಬಗಳ ಮೂಲಕ ಶೀಘ್ರವಾಗಿ ಸಿಗಬೇಕೆಂಬುದೇ ಇವರ ಗುರಿ. ಶಾಸ್ತ್ರಗಳು ಸಾಮಾನ್ಯರ ಪಾಲಿಗೆ ನೀರಸ, ಜಿಗುಪ್ಸೆ, ತರವಂತಹವುಗಳು. ಇವುಗಳನ್ನು ಅರಗಿಸಿಕೊಳ್ಳುವ ಸಾಧನೆಯೂ ಸಾಕಷ್ಟೂ ಬಹುಜನರಿಗೆ ಸಾಧ್ಯವಲ್ಲ. ಯಕ್ಷಗಾನದಲ್ಲಿ ಸೀರಸ ಶಾಸ್ತ್ರಗಳಿಗೆ ಸ್ಥಾನವೇ ಇಲ್ಲ. ರಸಪೋಷಣೆಗೆ ಪ್ರಸಂಗ ಕರ್ತರು ಹೆಚ್ಚು ಪ್ರಾಧಾನ್ಯವಿತ್ತಿದ್ದಾರೆ.

ತಮ್ಮಲ್ಲಿನ ವಿದ್ಯೆಯನ್ನೂ ಬಹು ವಿನಯಪರರಾಗಿ ತೋರಿಸಿಕೊಳ್ಳುವವರು ಇವರು. ಯಕ್ಷಗಾನದಲ್ಲಿ ತಾವು ಪದ್ಯ ಬರೆಯುವವರೆಂದು ಅವರು ಹೇಳುವ ರೀತಿಯನ್ನು ಒಂದಿರಡು ಉದಾಹರಣೆ ಸಹಿತ ಕೊಡುತ್ತಿದ್ದೇನೆ: —

1. ರಾಜಸೂಯ:-ಶಂಕರ ಕವಿ-ಭಾಮಿನಿ

ಓದಲರಿಯದ ಮೂಢ ಶಾಸ್ತ್ರದ |
ಹಾದಿಗಾಣದ ಕುರುಡ ವೇದದ |
ಭೇದ ಕೇತದ ಕವುದ ವ್ಯಾಕರಣಾದಿ ಸೂತ್ರಗಳಾ ||

ನಾಧಸ ನರ ಪ್ರಸ್ತ ರ್ತದಿ |
ವಾದಿಸಲು ಬಿತಿಂಡ ಕ್ಷಮೆಸು |
ನಾದರಿಸದಿಹೆ ಕೋಡಗನು |

ಹರಿಯೊಲುಮೆಯಿಂದೊರೆನೇ ||

(ಮುಂದೆ ಜರಾಸಂದ ಕೃಷ್ಣನನ್ನು ಮೂದಲಿಸುವಲ್ಲಿ ಇವನ ಪದಗಳ ಸೊಗಸನ್ನು ಕಾಣುವಾಗ ಈತನ ವಿನಯ ತೀರಾ ಹೆಚ್ಚೆಂದೇ ಕಾಣುತ್ತದೆ.)

2. ಅಭಿಮನ್ಯು ಕಾಳಗ-ದೇವಿದಾಸ-ದ್ವಿಪದಿ.

ಕನ್ನಡದ ನುಡಿಗಳಿಂದೆಕ್ಷಗಾನದಲಿ | ಪರ್ಣಿಸುವೆ ಮದ್ಭಪತಿ ಕೃಷ್ಣನೊಲವಿನಲಿ |
ಕೇಳಿ ಕವಿಜನರು ತಪ್ಪಿರಲು ತಿದ್ದುವುದು |
ಶೀಲಗುಣನಿಧಿಗಳವಧರಿಸಿ ತಿದ್ದುವುದು ||

3 ಶಲ್ಯಪರ್ವ-ಹ| ನರಸಿಂಹ ಶಾಸ್ತ್ರಿ-ದ್ವಿಪದಿ.

ಹರಿಹರ ವಿರಿಂಚಿಗಳ ಚರಣಕಜನಮಿಸಿ |
ಸರಿಗಾರಿ ವಾಗ್ದೇವಿಯರಸು ಸನ್ನುತಿಸಿ |
ಗುರುವಿ ಮಾತೃಪಿತೃಗಳಂಗೆರಗಿ ವೈಭವದಿ |
ಪಪಪಕವಿ ವ್ಯಾಸರನು ನೆನೆದು
ಸುದೃಢದಿ ||

ಈ ಪ್ರಾರಂಭಿಕ ಪ್ರಾರ್ಥನೆ, ಅರಿಕೆಗಳೆಲ್ಲ ಮುಗಿದ ಬಳಿಕ ಕಥಾನಕ ಪ್ರಾರಂಭವಾಗುತ್ತದೆ. ಮುಂದೆಲ್ಲಾ ಹಾಡುಗಬ್ಬಗಳೆ. ಷಟ್ಪದಿ, ಕಂದಗಳ ಉಪಯೋಗವೂ ಇರುತ್ತದೆ. ಕರ್ಣಾರ್ಜುನ ಕಾಳಗ, ಕೃಷ್ಣಾರ್ಜುನ ಕಾಳಗ, ಕಾರ್ತವೀರ್ಯಾರ್ಜುನ ಕಾಳಗಗಳಲ್ಲಿ ಒಂದೆರಡು ವರ್ಜನೆಗಳನ್ನೂ ಕಾಣುತ್ತೇವೆ. ಈಗೀಗ ಈ ವರ್ಜನೆಗಳನ್ನು ಪ್ರಯೋಗ ಸಡಿಸುವಾಗ ಬಿಟ್ಟುಬಿಡುವುದೋ, ಅದೇ ಅರ್ಥ ಕೊಡುವ ಪದ್ಯಗಳಾಗಿ ಸರಿವರ್ತಿಸಿಕೊಂಡೋ ಹೋಗುವುದು ರೂಢಿಯಾಗಿದೆ. ಪ್ರಸಂಗ ಪ್ರಾರಂಭದಲ್ಲಿ ಕಥಾಭಾಗವನ್ನು ಸಂಕ್ಷೇಪವಾಗಿ ದ್ವಿಪದಿ. ಇತರ ಪದ್ಯಗಳ ರೂಪದಲ್ಲಿ ತೋರಿಸಿ, ಒಡ್ಡೋಲಗಕ್ಕೆ ಅನುಗುಣವಾದ ಪದ್ಯವೊಂದನ್ನಿಟ್ಟಿರುತ್ತಾರೆ. **ಸಾಮಾನ್ಯವಾಗಿ ಪ್ರಥಮ ಒಡ್ಡೋಲಗ ಪಾಂಡವರ, ರಾಮಲಕ್ಷ್ಮಣರ—ಇಲ್ಲವೆ.** ಉದಾತ್ತ ನಾಯಕರ ಪ್ರವೇಶದಿಂಪ ಆಗುತ್ತದೆ. ಇದು ಮಂಗಲ. ನಳ ಚರಿತ್ರೆಯಲ್ಲಿ ನಾಯಕನಿಗೆ ಶನಿಕಾಟ; ಭದ್ರಾಯು ಚರಿತ್ರೆಯಲ್ಲಿ ಆತನ ತಾಯಿಗೆ ದುರ್ಗಂಧ ರೋಗಗಳ ಕಾರಣಕ್ಕಾಗಿ ಆ ಪ್ರಸಂಗಗಳನ್ನೇ ಆಡದ ಕಾಲವೊಂದಿತ್ತು. ಈಗ ಇವುಗಳನ್ನು ಕಡೆಗಣಿಸಿ ಪ್ರಯೋಗಗಳು ನಡೆಯುತ್ತಿವೆ. ಈ ವಿಚಾರವನ್ನು ಅಂಧ ಶ್ರದ್ಧೆಯೆಂಬು ಬಿಡೋಣ. ಅದಕ್ಕೆ ಹಣಕ್ಕಾಗಿ ಈಗ ನಾವು ಯಾವ ರೂಪಿ, ಸಂಪ್ರದಾಯ, ಸದ್ಗುಣಗಳನ್ನು ಸುರಿಯಲು ಶೇಸುವುದಿಲ್ಲ, ಅಂಥಾ ಕ್ಷೇತ್ರಕ್ಕೆ ನಾವು ಕಾಲಿಟ್ಟ ಬಳಿಕ ಇಲ್ಲಿನ ಸಂಪ್ರದಾಯ, ಮರ್ಯಾದೆಗಳನ್ನು ಕಾಪಾಡಲೇಬೇಕೆಂಬ ನಿಯತ್ತೂ ನಮ್ಮಿಂದ ಮಾಯವಾಗುತ್ತಿದೆ. ಮಾಳಿ ಕವಿ ಹೇಳುವಂತೆ—

ಬುಭುಕ್ಷಿತೈಃ ವ್ಯಾಕರಣಂನ ಭುಜ್ಯತೇ
ಪಿಪಾಸಿತೈಃ ಕಾವ್ಯರಸೋ ನ ಪೀಯತೇ
ನ ವಿದ್ಯಯಾ ಕೇನಚಿದ್ ಧೃತಂ ಕುಲಂ
ಸುವರ್ಣಮೇವ ಆರ್ಜಯ ಸಿಫ್ಟಲಾ ಕಲಾಃ ||

—ಇದಿಷ್ಟೆ ನಮ್ಮ ಆದರ್ಶವಾಗಿದೆ, ಸ್ವೀಕಾರಾರ್ಹ ಲೋಕನೀತಿಯಾಗಿದೆ.

ಪ್ರಸಂಗಗಳಲ್ಲಿ ಸಾಮಾನ್ಯವಾಗಿ ವೀರ ರಸವೇ ಪ್ರಧಾನ. ಕಾಳಗವು ಫಲಕ್ಕಾಗಿ, ನೆಲಕ್ಕಾಗಿ, ಹೆಣ್ಣಿಗಾಗಿ ಕಥಾನಕದಲ್ಲಿ ಬಂದಾಗ ಅದು ಸಾಗುತ್ತದೆ. ಹಾಗಾಗಿ ಇಲ್ಲಿನ ಹಾಡುಗಬ್ಬಗಳಲ್ಲಿ ವೀರರಸದ ಹೊನಲನ್ನೇ ಕಾಣಬಹುದು. ಇದಕ್ಕೆ ಪೂರಕವಾಗಿ, ಪೋಷಕವಾಗಿ ಶೃಂಗಾರ, ಕರುಣ ಅದ್ಭುತ, ಹಾಸ್ಯ, ಭಯಾನಕ, ಮುಂತಾದ ರಸಗಳು ಬಂದಿವೆ; ಶಾಂತರಸವೇ ಸ್ಥಾಯಿಯಾಗಿ ನಿಂತ ಪ್ರಸಂಗವೇ ಇಲ್ಲವೇನೋ? ಕೃಷ್ಣ ಸಂಧಾನದಂತಹ ಪ್ರಸಂಗದಲ್ಲೂ ದ್ರೋಣಕರ್ಣರ ವಿನಾಶ, ವಿದುರ ಧನುರ್ಭಂಗ, ಶ್ರೀ ಹರೀ ಬಂಧನಗಳಲ್ಲಿ ವೀರ ರಸವನ್ನು ಕಾಣುತ್ತೇವೆ.

ಸಾಮಾನ್ಯವಾಗಿ ಪ್ರಸಂಗಕರ್ತರು ಪದ್ಯಗಳಿಗೆ ರಾಗ, ತಾಳಗಳನ್ನು ಕಾಣಿಸಿರುತ್ತಾರೆ. ಹೆಚ್ಚಾಗಿ ಈ ರಾಗತಾಳಗಳು ಭಾವಕ್ಕೆ, ನರ್ತನಕ್ಕೆ ಹೊಂದಿಕೆಯಾಗುತ್ತವೆ. ಹಾಗೆ ಸರಿ ಇಲ್ಲದಿದ್ದಲ್ಲಿ ಪ್ರತ್ಯುತ್ಪನ್ನಮತಿಯಾದ ಭಾಗವತರು ಅದನ್ನು ಬದಲಿಸಿ ಹಾಡಬಾರದೆಂದಿಲ್ಲ. ಪ್ರಸಂಗ ಕರ್ತೃ, ಒಂದು ಪದಕ್ಕೆ ಒಂದು ತಾಳ ನವನ್ನು ಸೂಚಿಸಿದ್ದರೆ, ಅದನ್ನು ನರ್ತನ ಕ್ಕೊಪ್ಪುವಂತೆ, 'ತಾಳಮಾಲಿಕೆ' ಸೂಡಿ ಹೇಳಬೇಕಾಗುತ್ತದೆ. ಪ್ರದರ್ಶನಕ್ಕೆ ಇವರಿಂದ ಪೋಛೆ ಬರುತ್ತದೆ. ನರ್ತನಕ್ಕೆ ತುಂಬಾ ಅವಕಾಶ ಸಿಗುತ್ತದೆ. ಭಾವ ಪ್ರಜೋಡನೆ. ಪ್ರಕಾಶಕ್ಕೆ ಸಹಕಾರಿಯಾಗುತ್ತದೆ.

ಇನ್ನು ರಾಗ, ತಾಳದ ಪರಿಜಯವಿಲ್ಲದ ಕವಿಗಳೂ ಇಲ್ಲವೆಂದಿಲ್ಲ. ಇವರು 'ಕೋಮಲಾಂಗಿ ಕೇಳೆ—ಎಂಬಂತೆ'.... ಎಂದು ಧಾಟಿ ಹಿಡಿದು ಪ್ರಸಂಗ ರಚಿಸಿದ್ದಾರೆ.

ಡಾ | ಕಾರಂತರು ಇಂತಹ ಯಕ್ಷಗಾನ ಶೈಲಿಯ 80 ರಾಗಗಳನ್ನು ರಿಕಾರ್ಡುಮಾಡಿ ಗುರುತಿಸಲು ಸಮರ್ಥರಾಗಿದ್ದಾರೆ. ಕೋರೆ (ನಿಕ, ಆದಿಗಳ ಎರಡನೆ ಕಾಲ) ಎಂಬ ಸಂಗೀತ ಶಾಸ್ತ್ರದಲ್ಲಿ ಈಗ ಗುರುತಿಸಲು ಸಾಧ್ಯವಾಗದ ತಾಳವು ಯಕ್ಷಗಾನಕ್ಕೇ ವಿಶಿಷ್ಟವಾಗಿದೆ. ರಾಗ ತಾಳೋಪೇತವಾಗಿ ಹಾಡುಗಬ್ಬಗಳು ಬೆಳೆದಿವೆ ಎಂದಂತಾಯಿತು. ಉಪಲಬ್ಧವಿರುವ 200 ಪ್ರಸಂಗಗಳ ಅಪಾರ ಕಾವ್ಯ ಸಂಸಾರದ ಎಲ್ಲವನ್ನೂ ನಿರೂಪಿಸುವುದು ಅಸಾಧ್ಯವಾದ ಮಾತು. ಎಲ್ಲಾ ಕವಿಗಳ ಪರಿಚಯವೂ ಸಾಧ್ಯವಾಗದು. ಆದರೆ ರಸಪೋಷಣೆಗೆ ಬಳಸಿಕೊಂಡಿರುವ ಪದ್ಯಗಳನ್ನು ಕವಿಗಳು ಹೇಗೆ ಬಳಸಿಕೊಂಡಿದ್ದಾರೆ ಎಂದು ತೋರಿಸುವ ಸಲುವಾಗಿ ನಾಲ್ಕು ಪ್ರಸಂಗಸಾಹಿತ್ಯ ಪ್ರಪಂಚದಲ್ಲಿ ಒಂದಿರಡು ಉದಾಹರಣೆ ಸಹಿತ ತೋರಿಸಬಹುದು. ಚಮತ್ಕಾರವೇ ಕಾವ್ಯವಲ್ಲ. "ವಾಕ್ಯಂ ರಸಾತ್ಮಕಂ ಕಾವ್ಯಂ" ಎಂಬುದನ್ನು ನಾವಿಲ್ಲಿ ಕಾಣಬಹುದು. ಇದರೊಂದಿಗೆ ಹೊರರೀತಿ—ಉಪಮಾದಿ ಅಲಂಕಾರಗಳನ್ನು ಹೇಗೆ ಸಮರ್ಥವಾಗಿ ರಮಣೀಯಾರ್ಥ ಪ್ರತಿಪಾದನೆಗಾಗಿ ಉಪಯೋಗಿಸಿಕೊಂಡಿದ್ದಾರೆಂದು ಮನಗಾಣಬಹುದು. "ರೀತಿರಾತ್ಮಾ ಕಾವ್ಯಸ್ಯ"—ಎಂಬುದು ನಿಜವಷ್ಟೆ! ದೇಶೀಯ ಸೀತವಾದ ಯಕ್ಷಗಾನದಲ್ಲಿ ಜನಪದದ ಸಂಕ್ಲೇಭೆ, ಸಂಯಮ, ವ್ಯಾಮೋಹ, ವಿವೇಕ, ಆದೇಶಗಳನ್ನು ಸಹಜವಾಗಿ ತೋರುವ ನಾಣ್ಯುಡಿಗಳನ್ನೂ, ದೇವಿ ಪದಪುಂಜಗಳನ್ನೂ ಅರಿಸಿ, ಅವುಗಳ ಸಾರ್ಥಕ್ಯಕ್ಕೂ ಉದಾಹರಣೆ ನೀಡಬಹುದು. ಯಕ್ಷಗಾನ ಕವಿಗಳು ವಿದ್ವಾಂಸರಲ್ಲವಾದರೂ ಅವರ ಲೋಕಾನುಭವ ಹೇಗೆ ಕಾವ್ಯಕ್ಕೆ ಪ್ರೇರಣೆ ನೀಡಿತೆಂಬು ಇವುಗಳಲ್ಲಿ ಕಾಣಬಹುದು. ಪ್ರಸಂಗಸಾಹಿತ್ಯ ತನ್ನ ಸರಳತೆ, ದೇಶೀಯತೆಗಳಿಂದಲೇ "ಕಾಂತಾ ಸಮ್ಮಿತ ತಯೋಪದೇಶಯುಜೇ"—ಕಾವ್ಯಗಳಾಗಿ ಜನಪ್ರಿಯವಾಗಿವೆ

ಯಕ್ಷಗಾನ ಕವಿಗಳೆಲ್ಲ 'ಮಹರ್ಷಿ'ಗಳೆಂದೂ, ಎಲ್ಲಾ ಪ್ರಸಂಗಗಳೂ ರಸಭರಿತವೆಂದೂ ನಾನೆನ್ನುವುದಿಲ್ಲ. ಕೆಲವು ಪ್ರಸಂಗಗಳು ಬರೇ ಶಬ್ದ ಚಮತ್ಕಾರಿಗಾಗಿ ಕೃತಿಯಾಗಿವೆ. ಹಾಗೇ ಹಲವು ಸಾಹಿತ್ಯ ದೃಷ್ಟಿಯಿಂದ ಸುಭಗವಾಗಿದ್ದರೂ, ಪ್ರದರ್ಶನ ದೃಷ್ಟಿಯಿಂದ ಫಲಕಾರಿಯಾಗದವಿವೆ. ಇವು ಶಾಸ್ತ್ರಾಭ್ಯಾಸದಲ್ಲಲ್ಲದೆ "ಜೀರ್ಣಮಂಗೇ ಸುಕ್ಷಾಸಿತಂ" ಆಗಿವೆ.

ಇನ್ನು ಯಕ್ಷಗಾನ ಅರ್ಥ ಸಾಹಿತ್ಯದ ಕುರಿತು ಒಂದು ಮಾತು. ಕವಿಗಳು ಸಂಭಾಷಣ ರೂಪದಲ್ಲಿ, ಪುರಾಣ ಕಥೆಗಳನ್ನು ಬೆಳೆಸಿಕೊಂಡು ಹೋಗಿದ್ದಾರೆ. ಕವಿ, ಹೃದಯವರಿತು, ಈ ಪದ್ಯಗಳನ್ನು ಅರಿತು ಅದರ ಜೊಕಟ್ಟನೊಳಗೆ ಅರ್ಥ ಹೇಳಬೇಕಾಗುತ್ತದೆ. ಈ ಅರ್ಥಗಾರಿಕೆ ಹೆಚ್ಚಾಗಿ ಆಶುಕವಿತ್ವವಾಮದರಿಂದ ಒಬ್ಬ ಅರ್ಥಧಾರಿ ಇನ್ನೊಬ್ಬನಿಗೆ ದಾರಿತೋರಬೇಕಾಗುತ್ತದೆ; ಸ್ಪರ್ಧೆ ಕೇಳಬೇಕಾಗುತ್ತದೆ. ಮುಂದಿನ ಪದ್ಯವನ್ನು ಮುಟ್ಟುವಂತೆ ಸಂಕ್ಷೇಪವಾಗಿ ಮಾತಾಡ ಬೇಕಾಗುತ್ತದೆ. ಗಟಿಗಟ್ಟಲೆ ಒಬ್ಬೊಬ್ಬರೇ ಭಾಷಣ ಬಿಗಿಯುತ್ತಾ ಕೂಡುವುದು, ಯಕ್ಷಗಾನದ ಅರ್ಥಗಾರಿಕೆಯೇ ಅಲ್ಲ. ಯಕ್ಷಗಾನದ ದಾರಿ ಪುರಾಣವನ್ನು ಸರಳಗೊಳಿಸುವ, ಹೃದಯ ಮುಟ್ಟುವಂತೆ ರಸಪೋಷಣೆ ಮಾಡುವ ಹಾದಿ; ವಿಶೇಷ ತರ್ಕ ಶಾಸ್ತ್ರ ವಿಚಾರದ ಹಾದಿ ಬುದ್ಧಿಯನ್ನು ತಲುಪುವಂತಹುದು. ಬುದ್ಧಿಯ ದಾರಿ ಹೃದಯದ ವ್ಯಾಪಾರಕ್ಕೆ ತಡೆಯೊಗುವುದಿದ್ದರೆ ಎಷ್ಟಕ್ಕೂ ಬುದ್ಧಿ-ಹೀನರಾಗಿ, ಹೃದಯ ಸಂಸ್ಕಾರ ಮಾತ್ರ ಇರುವುದು ಲೇಸು. ಇನ್ನು ನೃತ್ಯ, ಸಂಗೀತ ಮುಂತಾದ ಕಲಾನೂಧ್ಯಮಗಳೂ ಇವುಗಳಲ್ಲಿ ಮಿಶ್ರವಾಗಿರುವುದರಿಂದ ಅರ್ಥಗಾರಿಕೆ ತನ್ನ ನಿಮಿತಿಯರಿತು ಹೀಗೆ ಸರಿಯಲೇ ಬೇಕಾಗುತ್ತದೆ. ಈ ತರತಮ ಜ್ಞಾನವಿಲ್ಲದವರಿಗೂ ಇಲ್ಲಿ ಪ್ರವೇಶಕೊಡಬಹುದೇ ಎಂಬುದನ್ನು ಕಲಾಜಿಜ್ಞಾಸುಗಳು ವಿಮರ್ಶಿಸಬೇಕು.

ಕೊನೆಯಲ್ಲಿ ಬಯಲಾಟ ಸಂಪ್ರದಾಯದಂತೆ ಗಜಮುಖನನ್ನೂ, ಮುಕಾಂಬೆಯನ್ನೂ ಸ್ತುತಿಸುವ ಕ್ರಮವಿದೆ. ಅದರ ಒಂದೆರಡು ಪದ್ಯಗಳಿವು

ಕರದೊಳು ಪರಶುವಾರಾಂಕುಶಧರೆಗೆ
ಹರುಷವಿ ಭಕ್ತರ ಪೊರೆವವಗೆ|
ಉರಗ ಭೂಷಣನ ಕುಮಾರ
ಗಜಪದನನ
ಚರಣ ಯುಗಳಕೆ ಆರತಿ ಎತ್ತಿರೆ–
ಗಜವದನಾಯಗೆ ಗಣಪಗೆ||
ಮಹಿಷಾಸುರ ಮರ್ದಿನಿಗೆ|
ಕಿಂಕಿಣಿ ಮಾರ ಕೇಯೂರ|
ಧರಣಿಗೆ ಸುರರನ್ನಳಿಗೆ|
ಮಂಗಳಾ ಜಯ ಮಂಗಳಾ||

❀ ❀

ಶಿಕ್ಷಣದ ಕುರಿತು ಕೆಲವು ವಿಚಾರಗಳು

(ಒಂಭತ್ತನೇ ಪುಟದಿಂದ)

ವರದಿಯಲ್ಲಿ ಹರಿದು, ಭಾರತೀಯ ಶಿಕ್ಷಣ ಪ್ರಪಂಚದಲ್ಲಿ ಎಲ್ಲೆಲ್ಲಿ, ಯಾವ್ಯಾವ ಬದಲಾವಣೆಗಳು ಹೇಗೆ ಆಗಬೇಕೆಂಬುದನ್ನು ತೋರಿಸಿಕೊಟ್ಟಿದೆ. ಸ್ವತಂತ್ರ ಭಾರತದ ಯಾವುದೇ ಶಿಕ್ಷಣ ಕ್ರಮವು ರಾಷ್ಟ್ರೀಯ ಸೇವೆ ಮತ್ತು ಪ್ರಗತಿ ಸಾಧನೆಯಲ್ಲಿ ಸಕ್ರಿಯ ಪಾಲುಗಾರರಾಗಲು ಪಣತೊಟ್ಟ, ಉತ್ತಮ ಗುಣಮಟ್ಟದ ಯುವಕಯುವತಿಯರನ್ನು ರೂಪಿಸುವಂತಿರಬೇಕು. ಆಗ ಮಾತ್ರ ರಾಷ್ಟ್ರೀಯ ಪ್ರಗತಿ, ಸರ್ವಸಮ ಪಾಲುಪಾರತ್ವ ಮತ್ತು ಸಂಸ್ಕೃತಿಗಳಲ್ಲಿ ಸಹಭಾಗಿತ್ವ, ಸಾಗು ರಾಷ್ಟ್ರೀಯ ಐಕ್ಯ—ಈ ಭಾವನೆಗಳನ್ನು ಹುಟ್ಟಿಸುವಲ್ಲೂ ತನ್ನ ಜೈತನ್ಯಶಾಲಿ ಪಾತ್ರವನ್ನು ವಹಿಸಲು ಶಕ್ತವಾಗುವುದು.

ಈ ಉದ್ದೇಶವನ್ನು ತನ್ನ ಮುಂದಿರಿಸಿಕೊಂಡ ಆ ವರದಿಯ ಆಧಾರದ ಮೇಲೆ ಭಾರತ ಸರಕಾರವು ಧರ್ಮಾರ್ಥ ಕಡ್ಡಾಯ ಶಿಕ್ಷಣ (ಸಂವಿಧಾನದ 45ನೇ ವಿಧಿಯಂತೆ) ಶಿಕ್ಷಕರ ಸ್ಥಾನ, ಸವಲತ್ತು, ಸೌಲಭ್ಯಗಳು ಮತ್ತು ಜ್ಞಾನಾಭಿವೃದ್ಧಿ, ಹೊಸ ಗಳಲ್ಲಿ ವಿವಿಧ ಭಾಷಾ ಪ್ರೋಷಣೆ(ತ್ರಿಭಾಷಾ ಸೂತ್ರ) ಶೈಕ್ಷಣಿಕ ಅವಕಾಶಗಳಲ್ಲಿ ಸಮಾನತೆ, ವಿಜ್ಞಾನ ಶಿಕ್ಷಣದ ಪ್ರಾಶಸ್ತ್ಯ, ಪ್ರತಿಭಾಲಕ್ಷಣ ಶೋಧನೆ—ಪೋಷಣೆ, ಉತ್ತಮ ಪುಸ್ತಕ ರಚನೆ, ಸರಿಕ್ಷಾ ಪದ್ಧತಿ ಸುಧಾರಣೆ, ಸೆಕಂಡರಿ ಮತ್ತು ವಿಶ್ವವಿದ್ಯಾನಿಲಯ ಶಿಕ್ಷಣ, ಅಕ್ಷರತೆ ಮತ್ತು ವಯಸ್ಕರ ಶಿಕ್ಷಣ, ಶಿಕ್ಷಣ ಕಾಲಾವಧಿ—ಮೊದಲಾದ 17 ವಿಷಯಗಳ ಕುರಿತಾದ ತನ್ನ ನಿರ್ಧಾರಗಳನ್ನು ರಾಷ್ಟ್ರೀಯ ಧೋರಣೆಯ ರೂಪದಲ್ಲಿ ಪ್ರಕಟಿಸಿತು. ಶಿಕ್ಷಣ ಪುನಾರಚನೆಯಂಥ ಮಹತ್ಕಾರ್ಯದ ವೆಚ್ಚಕ್ಕೆ ಒಟ್ಟು ರಾಷ್ಟ್ರೀಯ ಆದಾಯದ ಶೇಕಡಾ 6ರಷ್ಟನ್ನು ಕೊನೆಯ ಹಂತದಲ್ಲಿ ದೊರಕಿಸುವ ಇರಾದೆಯಿದೆಯೆಂದೂ, ರಾಜ್ಯ ಮತ್ತು ಒಕ್ಕೂಟ(ಭಾರತ) ಸರಕಾರಗಳ ಸಹಕಾರದಿಂದ ಯೋಜನೆ—ಕಾರ್ಯಕ್ರಮಗಳನ್ನು ಜರಗಿಸಲಾಗುವುದೆಂದೂ, ಐದು ವರ್ಷಗಳ ಅವಧಿಯಲ್ಲಿ ಪರಿಶೀಲನೆ ನಡೆಸಿ ಮಾರ್ಗದರ್ಶನ ಸೂತ್ರಗಳನ್ನು ನಿರ್ಣಯಿಸಲಾಗುವುದೆಂದೂ ಭಾರತ ಸರಕಾರವು ಘೋಷಿಸಿತು.

ರಾಷ್ಟ್ರೀಯ ಮಟ್ಟದ ಶಿಕ್ಷಣ ಕ್ರಮದ ಪುನರ್ನಿರ್ಮಾಣ ಮತ್ತು ನವೀಕರಣದ ಮುಂದಿರುವ ಗುರಿಗಳೆರಡು: 1) ಸಾಮಾಜಿಕವಾಗಿ, ಎಲ್ಲ ರಾಷ್ಟ್ರೀಯ ಸಂಪನ್ಮಾಧನಗಳನ್ನು ಬಿಡುಬಿಸಿ, ಕಾರ್ಯ ಉಡೇರಿಸುವ ಸಾಧನವಾಗಿರುವುದು. 2) ವೈಯಕ್ತಿಕವಾಗಿ ಪ್ರತಿಯೊಬ್ಬನಿಗೂ ತನ್ನ ಸಕಲ ಶಕ್ತಿ—ಪ್ರತಿಭೆಗಳ ವಿಕಾಸಕ್ಕೆ ಅತೀವ ವಿಶಾಲ ಪ್ರಮಾಣದ ಅವಕಾಶ ಕಲ್ಪನೆ ಹಾಗು ರಾಷ್ಟ್ರೀಯ ಪ್ರಗತಿಸಾಧಕ ಸೇವಾಮನೋವೃತ್ತಿಯ ಬೆಳವಣಿಗೆ. ಈ ದಿಶೆಯಲ್ಲಿ ಡಾ| ಕೋಠಾರಿ ಆಯೋಗದ ಸಲಹೆ—ಸೂಚನೆಗಳು ಅಮೂಲ್ಯವಾಗಿವೆ. ಆದರೆ ಶಿಕ್ಷಣ, ಕೇಂದ್ರ ಮತ್ತು ರಾಜ್ಯಸರಕಾರ—ಇನೆರಡಕ್ಕೂ ಸಂಬಂಧಪಟ್ಟ ಸಹವರ್ತಿ ವಿಷಯ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ವಿಚಾರದಲ್ಲಂತೂ ಹೆಚ್ಚಿನ ಹೊಣೆ ರಾಜ್ಯ ಸರಕಾರಗಳದು. ಇದರಿಂದ ಆಯೋಗದ ಶ್ಲಾಘ್ಯವೂ ಯೋಗ್ಯವೂ ಆದ ಸೂಚನೆ-ಶಿಫಾರಸುಗಳು ಕಾರ್ಯರೂಪಕ್ಕೆ ಬರುವ ಗತಿ ಬಲು ನಿಧಾನವಾಗಿದೆ; ಕೆಲವೆಡೆ ಕುಂಠಿತವೂ ಆಗಿದೆ. ಶಿಕ್ಷಣಕ್ಕೊಂದು ರಾಷ್ಟ್ರೀಯ ಏಕಮುಖತೆಯು ಇರಬೇಕೆಂಬುದನ್ನು ಔಪಚಾರಿಕವಾಗಿ ಎಲ್ಲರೂ ಒಪ್ಪಿದರೂ, ಕಾರ್ಯಾಚರಣೆಯಲ್ಲಿ ವಿಭಿನ್ನತೆಯು ತೋರಿಬರುವುದುಂಟು. ಶಿಕ್ಷಣ ಕಾಲಾವಧಿಯು ಪ್ರಾಥಮಿಕ—ಮಾಧ್ಯಮಿಕ ಹಂತಗಳ—10 ವರ್ಷಗಳು, ವಿಶ್ವವಿದ್ಯಾನಿಲಯ ಪೂರ್ವ—2 ವರ್ಷಗಳು ಮತ್ತು ಪದವೀಧರ ಶಿಕ್ಷಣ—3 ವರ್ಷಗಳು—ಈ ಕ್ರಮದಲ್ಲಿರಬೇಕೆಂದು ಆಯೋಗವೂ ಭಾರತ ಸರಕಾರವೂ ನಿರ್ಣಯವೂ ಸೂಚಿಸಿವೆ. ಆದರೆ ಇನ್ನೂ ಎಲ್ಲಾ ರಾಜ್ಯಗಳಲ್ಲಿ ಶಿಕ್ಷಣ ಕಾಲಾವಧಿ ಇತ್ಯಾದಿ ಏಕರೂಪತೆಯ ನಿರ್ಧಾರವಾಗಿಲ್ಲ. ತ್ರಿಭಾಷಾ ಸೂತ್ರದ ಕುರಿತಾಗಿಯೂ ಕೆಲವು ರಾಜ್ಯಗಳಲ್ಲಿದು ನೆನೆಗುದಿಯಲ್ಲಿದೆ. ಆಯೋಗದ ಸೂಚನೆಗಳನ್ನು ಕಾರ್ಯಗತಗೊಳಿಸುವಲ್ಲಿ ಅಪಾರ ಧನ ವಿನಿಯೋಗವೂ ಅವಶ್ಯ. ರಾಜ್ಯ ಸರಕಾರಗಳ ಆರ್ಥಿಕ ಸ್ಥಿತಿ ಹೆಚ್ಚಿನವುಗಳ ಮಟ್ಟಿಗೆ, ಇಷ್ಟು ದೊಡ್ಡ ಪ್ರಮಾಣದ ವೆಚ್ಚಕ್ಕೆ ಪ್ರೋತ್ಸಾಹಕವಾಗಿಯೂ ಇಲ್ಲ. ಇವುಗಳಲ್ಲದೆ ಉದ್ಭವಿಸುವ ಸಮಸ್ಯೆಗಳ ಜಟಿಲತೆಯೂ ಬಾಹುಳ್ಯವೂ ಇನ್ನೊಂದು ತೊಡಕು. ಹಾಗೆಂದು ಔದಾಸೀನ್ಯವೂ ಸಲ್ಲದು. ಇಂಗ್ಲೆಂಡಿನ ಉದ್ಯೋಗ ಮಾರ್ಗದರ್ಶನ ಸಂಸ್ಥೆಯ ಸಂಶೋಧನ ಘಟಕದ ಮುಖ್ಯಾಧಿಕಾರಿ ಶ್ರೀಮತಿ ಕೊರ್ವಿಂಗ್ ಹೇಳಿದ ಈ ಕೆಳಗಿನ ಎಚ್ಚರಿಕೆಯ ಮಾತುಗಳು ಭಾರತಕ್ಕೂ ಅಷ್ಟೇ ಸತ್ಯವಾಗಿ ಅಕ್ಷರಶಃ ಅನ್ವಯಿಸುತ್ತವೆ:—

"It seems to me that the time is ripe for the Department of Employment and the Department of Education and Science to get together with the Universities and produce a revised educational system that will make a more economic use of the wealth of talent, application and industry currently being frittered away on certificates, diplomas and degrees that no one wants to know about."

ಆದುದರಿಂದ ಕಾರ್ಯ ವಿಸ್ತಾರಕ್ಕಿಂತ ಮಿಗಿಲಾಗಿ ಕಾರ್ಯಸಾಧನೆ – ಪ್ರಗತಿಗಳನ್ನು ಗುರಿಯಾಗಿರಿಸಿಕೊಂಡು, ಮೇಲಿನ ಅಂಶಗಳನ್ನು ಗಮನಿಸಿ, ಈ ಮೊದಲು ಹೇಳಿದ ಶಿಕ್ಷಣ ಸ್ವರೂಪದ ಚೌಕಟ್ಟಿನೊಳಗೆ ಡಾ| ಕೋಠಾರಿ ಆಯೋಗದ ಪ್ರಮುಖ ಶಿಫಾರಸುಗಳು ಸರ್ವತ್ರ ಅಂಗೀಕೃತವಾಗಿ ಏಕೀಕೃತ ಶ್ರದ್ಧೆ ಮತ್ತು ನಿಷ್ಠೆಗಳಿಂದ ಅನುಷ್ಠಾನಕ್ಕೆ ಬರುವುದವಶ್ಯ. ಅದು ಯಶಸ್ವಿಯಾಯಿತೆಂದರೆ, ರಾಷ್ಟ್ರೀಯ ಶಿಕ್ಷಣರಂಗದಲ್ಲೊಂದು ನವೋದಯದ ನಾಂದಿಯಾದಂತೆಯೇ ಸರಿ.

●●

ತಿಂಗಳ ಮುಡಿದವನ ತಿರುಳು

—ಗುಂಡ್ಮಿ, ಚಂದ್ರಶೇಖರ ಐತಾಳ

೧.

ಎಮ್ಮೆ ಸೆಗಣಿಯ ತಂದು
ಅಮ್ಮನವರನು ಮಾಡಿ
ಬಣ್ಣಗಳ ಕೊಡೆದು ರಂಜನೆಯ
ಮೂಡಿದರು.
ಧೂಪ ದೀಪವ ಹಚ್ಚಿ
ಜಭಿಸೇಕ ಮಾಡಿರಲು
ರಂಜನೆಯೆಲ್ಲ ಗಂಜಳವಾದುದ ಕಂಡೆ;
ಅಮ್ಮನವರು ಸುಮ್ಮನಾದುದ ಕಂಡೆ;
ತಿಂಗಳ ಮುಡಿದವನೇ !

೨.

ಇಲಿಯನ್ನು ಹುಲಿಯೆಂದು
ಬಣ್ಣಿಸುವುದ ಕಂಡೆ;
ಸತ್ಯ ಸತ್ತುನ ಕಂಡೆ;
ಸುಳ್ಳು ಮೆರೆವುದ ಕಂಡೆ;
ನ್ಯಾಯದ ತಿಥಿಯೂಟವನು ಉಂಡೆ !
ಅಲ್ಪತೆಯೆ ಕಲ್ಪವಾದುದ ಕಂಡೆ;
ಇದಕೆಲ್ಲ ಸಾಕ್ಷಿಯೂಗೆಂದು
ಬದುಕಿಸಿದೆಯಾ ತಂದೆ,
ಬದುಕಿಸಿ ಕೊಂಡೆ, ತಿಂಗಳ
ಮುಡಿದವನೇ !

೩.

ಅಡ್ಡದಾರಿ ಹಿಡಿಯುವುದೇ
ಎಡ್ಡೆಂಬವರ ಕಂಡೆ;
ಕೊಡಲಿ ಕತ್ತಿ ಗುದ್ದಲಿ ಇರಿತ
ಸರಿಯೆಂಬರ ಕಂಡೆ;
ಹಿಂಸೆಯನೇ ಅಹಿಂಸೆಯೆಂಬ
ಕೊಲೆಯನೇ ಕಲೆಯೆಂಬ
'ಕಲಿ'ಗಳ ಕಂಡೆ;
ಕಂಡು ಕಂಡು ಕುರುಡಾದೆ
ತಿಂಗಳ ಮುಡಿದವನೇ !

೪.

ಹಣದ ಆಸೆಗಾಗಿ ಜನರು
ಹೆಣ ತಿಂಬುದ ಕಂಡೆ;
ಗುಣವ ಕಂಡು ನುಂಡಿಹೆಂದಿ
ಮತ್ಸರಿಸುವುದ ಕಂಡೆ;
ಹೆಣ್ಣಾ ಕಂಡು ಯತಿವರರು
ಹಂಬಲಿಪುದ ಕಂಡೆ;
ಇವ ಕಂಡರೆ ಸಾಲದೇ,
ತಿಂಗಳ ಮುಡಿದವನೇ !

೫.

ಬರೆವುದೆನ್ನ ಹಣೆಬರಹ
ಬಯ್ಸುಳೇ ಬಾಸಿಂಗವೆನಗೆ;
ಬಯ್ಯುವವರು ಭಾವಂದಿರೆನಗೆ
ಅವರ ಕಳಿಕೆ ನನಗೆ ಮುಕುಟ
ಅವರೊಡಲ ವಿಷವೆನ್ನ ಕೊರಳ ಗರಳ
ಅವರ ತೊಗಲು ಎನ್ನುಡುಗೆ
ಅವರಸ್ತ್ರ ನನಗೆ ಕೊಡುಗೆ
ಲೋಕವನೀಪರಿ ಕಾಣೆಂದು ಕಲಿಸಿಪ್ಪನೆನಗೆ
ತಿಂಗಳ ಮುಡಿದವನೇ !

೬.

ಸಾವಿರ ಸುಳ್ಳು ಹೇಳಬಹುದು
ಹೇಳು ಸತ್ಯವೊಂದ
ಸಾವಿರ ಕೂಗು ಬೊಗಳಬಹುದು
ಹೇಳು ಹಾಡೊಂದ
ಸಾವಿರ ವ್ಯರ್ಥ ಮೂಡಬಹುದು
ಮೂಡು ಸಾರ್ಥವೊಂದ
ಸಾವಿರ ದೈವವಿರಬಹುದು
ತಿಂಗಳ ಮುಡಿದವನೊಬ್ಬ !

೭.

ನಮ್ಮವನೋ ಇವ, ತಿಮ್ಮನೋ
ಹಾಕು ಹತ್ತು ಮಣೆ;
ಅನ್ಯನೋ ಇವ, ಅಪ್ಪಣ್ಣನೋ
ಒರಸು ಬರಹ ಹಣೆ;
ತಿಂಗಳ ಮುಡಿದವ ನೆಚ್ಚ,
ಈ ಹುಚ್ಚ !

೮

ಕಣ್ಣಿರುವುದು, ಕಾಣುವುದು
ಎಲ್ಲ ಇಲ್ಲಿ ತಪ್ಪು.
ಕಣ್ಣಿದ್ದೂ ಕುರುಡನಿಸಿಪುದು
ತುಂಬ ಇಲ್ಲಿ ಒಪ್ಪು
ತಿಂಗಳ ಮುಡಿದವನ ತೆರ
ಮುಕ್ಕಣ್ಣಿರುವುದೋ,
ತಪ್ಪಿನ ಅಪ್ಪ!

೯

ಬುದ್ಧಿ, ಭಾವ ಬೇರೆ ಬೇರೆ
ಎಂದು ಬರೆವರಲ್ಲ;
ಬುದ್ಧಿ ಹೊರತು ಭಾವವೆಲ್ಲಿ?
ನನಗೆ ತಿಳಿಯದಲ್ಲ!
ಬುದ್ಧಿ ಬಳ್ಳಿ ಭಾವ ಹೂವು
ಕಾವ್ಯವದರ ಪರಿಮಳ
ಒಂದೆ ವಸ್ತು ಎರಡು ರೂಪ
ಏಕೆ ನಿಮಗೆ ಕಳವಳ?
ತಿಂಗಳ ಮುಡಿದವನು ಬಲ್ಲ
ಬುದ್ಧಿ ಭಾವದಸ್ತಿತ್ವ;
ಅದನೆ ಸಾಮರಸಿಪುವ ಅರ್ಧನಾರೀಶ್ವರ
ಅರ್ಧ ಅರ್ಧ ಮಹತ್ತ್ವ!

೧೦

ಲೋಕವನ್ನೆ ಪ್ರೀತಿಸಿದವರ
ಶಿಲುಬೆಗೇರಿಸಿದುದ ಕಂಡೆ;
ಸತ್ಯ ಸತ್ಯ ಎಂದವರ
ಗುಂಡಿಟ್ಟು ಕೊಂದುದ ಕಂಡೆ,
ಶಾಂತಿ ಶಾಂತಿ ಎಂದವರನು
ಶಾಂತ ಗೊಳಿಸಿದುದ ಕಂಡೆ;
ಇನ್ನೇನಾದರೂ ಆಶ್ಚರ್ಯವಿಲ್ಲ
ತಿಂಗಳ ಮುಡಿದವನೇ!

ಅನುವಾದಿತ ಕನ್ನಡ ಕೃತಿಗಳು

(ಎಂಟನೇ ಪುಟದಿಂದ)

ಅತ್ತಿಮಬ್ಬೆಯ ಪ್ರಕಾಶನದ ಸಂಪಾದಕರಾಗಿ ಶ್ರವಣಬೆಳಗುಳದ ಗೋಮಟೇಶ್ವರ ಕಾಲೇಜಿನ ಪ್ರಿನ್ಸಿಪಾಲರಾಗಿರುವ ಜಿ. ಬ್ರಹ್ಮಪ್ಪ (ಜನನ ೧೦-೫-೧೯೩೪) ಸವರು ರತ್ನಾಕರ ಕವಿಯ ಪ್ರಥಮ ಭಕ್ತರು. ಅವನ ಕುರಿತು ಇಲ್ಲಿವ ಕೃತಿಗಳನ್ನು ರಚಿಸಿದ್ದಾರೆ. ಅವರು ಬರೆದ 'ತತ್ಕಾಕ್ಷರೆ' ಕಾದಂಬರಿಯನ್ನು ಎಸ್. ಎಲ್. ಭೆಕ್ಕಿಣಾಮೂರ್ತಿ ಎಂಬವರು ಹಿಂದಿಗೂ ನವನೀತ ಮದರಾಸಿ ಎಂಬವರು ಗುಜರಾತಿಗೂ ಅನುವಾದಿಸಿದ್ದಾರೆ. ಜೆ. ಬ್ರಹ್ಮಪ್ಪನವರ 'ದಾನ ಚಿಂತಾಮಣಿ' ಎಂಬ ಕಾದಂಬರಿಯನ್ನು ಎಂ. ಕೆ. ಭಾಶೆಟಿನಷಣಾಚಾರ್ಯ ಎಂಬವರು ಹಿಂದಿಗೂ ಅನುವಾದಿಸಿದ್ದಾರೆ.

ಹಾಸನ ಜಿಲ್ಲೆಯ ಕೇರಳಾಪುರ ಎಂಬಲ್ಲಿ ಜನಿಸಿದ ಡಾ| ಕೆ. ಕೃಷ್ಣಮೂರ್ತಿಗಳು ಧಾರವಾಡದ ವಿಶ್ವವಿದ್ಯಾಸಿಲಯದಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿದ್ದು ಕನ್ನಡದಲ್ಲಿ ಸುಮಾರು ೨೭, ಸಂಸ್ಕೃತದಲ್ಲಿ ೪, ಮತ್ತು ಇಂಗ್ಲೀಷಿನಲ್ಲಿ ೪ ಪುಸ್ತಕಗಳನ್ನು ಬರೆದಿದ್ದಾರೆ. ಇವರ ಇಂಗ್ಲೀಷ್ ಮತ್ತು ಸಂಸ್ಕೃತ ಕೃತಿಗಳಿಗೆ ಮೈಸೂರು ಮತ್ತು ಕೇರಳ ವಿಶ್ವವಿದ್ಯಾಸಿಲಯಗಳ ಬಹುಮಾನಗಳು ಬಂದಿವೆ. ಆನಂದ ವರ್ಧನನ "ಧ್ವನ್ಯಾಲೋಕ"ವನ್ನು ಇವರು ಕನ್ನಡ ಮತ್ತು ಇಂಗ್ಲೀಷ್‌ಗಳಲ್ಲಿ ಬರೆದಿದ್ದಾರೆ.

ಡಾ| ಪ್ರಭುಶಂಕರರು ಮೈಸೂರು ವಿಶ್ವವಿದ್ಯಾಸಿಲಯದ ಪ್ರಸಾರಾಂಗ ನಿರ್ದೇಶಕರು ಡೈರೆಕ್ಟರರಾಗಿದ್ದು ಕನ್ನಡ ಮತ್ತು ಇಂಗ್ಲೀಷ್‌ಗಳಲ್ಲಿ ಹಲವು ಪುಸ್ತಕಗಳನ್ನು ಬರೆದಿದ್ದಾರೆ. ಅವರು ಬರೆದ 'ಅಂಗುಲಿಮಾಲ' ಎಂಬ ಕೃತಿಯು ಹಿಂದಿ ಮತ್ತು ತೆಲುಗು ಭಾಷೆಗಳಲ್ಲಿ ಅನುವಾದವಾಗಿವೆ.

ಭುವನ ಹಳ್ಳಿಯ ಜ್ಯೋತಿಷ್ಯ ವಿದ್ವಾಂಸ ಶ್ರೀ ದೇವಚಂದ್ರ ಜೋಯಿಸರ ಸುಪುತ್ರರೂ ವೀರ ಭಾರತಿ ಮಾಸಪತ್ರಿಕೆಯ ಗೌರವ ಸಂಪಾದಕರೂ, ಬೆಂಗಳೂರಿನ ಮಲ್ಲೇಶ್ವರ ಪ್ರೌಢಶಾಲೆಯ ಕನ್ನಡ ಪಂಡಿತರೂ ಆಗಿರುವ ಡಿ. ಪದ್ಮನಾಭ ಶರ್ಮರು (ಜನನ ೨೭-೧೧-೧೯೩೫) ಕನ್ನಡದಲ್ಲೂ ಹಿಂದಿಯಲ್ಲೂ ತಜ್ಞರು. ಇವರ 'ಕರ್ನಾಟಕ ಬ್ರಾಹ್ಮಣಾನುಶಾಸನಂ' ಎಂಬ ಗ್ರಂಥಕ್ಕೆ ರಾಷ್ಟ್ರ ಸಾಹಿತ್ಯ ಎಕಡಮಿ ಪ್ರಶಸ್ತಿ ಸಿಕ್ಕಿದೆ. ಇವರು ಬರೆದ 'ಪತಿತಪಾವನೆ' ಎಂಬ ಕಾದಂಬರಿಯನ್ನು ಸಿಂಗ ಎಂಬವರು ಹಿಂದಿಗೂ, ವೆಂಕಟ ಸುಬ್ಬಯ್ಯನವರು ತೆಲುಗಿಗೂ, ನಟೇಶ ಮೊದಲಿಯಾರ ಎಂಬವರು ತಮಿಳಿಗೂ ಅನುವಾದಿಸಿದ್ದಾರೆ.

ಕೋಲಾರ ಜಿಲ್ಲೆಯ ಮಾಸ್ತಿ ಎಂಬಲ್ಲಿ ೧೯-೬-೧೯೨೧ರಲ್ಲಿ ಜನಿಸಿದ ವೆಂಕಟೇಶ ಅಯ್ಯಂಗಾರರು ಮೈಸೂರು ಸಿವಿಲ್ ಸರ್ವೀಸ್ ಪರೀಕ್ಷೆಯಲ್ಲಿ ಉಚ್ಚ ದರ್ಜೆಯಲ್ಲಿ ತೇರ್ಗಡೆಯಾಗಿ, ಅಸಿಸ್ಟೆಂಟ್ ಕಮಿಷನರರಾಗಿದ್ದು ಸುಮಾರು ೩೧ ವರ್ಷಗಳ ಕಾಲ ಸರಕಾರದ ನಾನಾ ಶಾಖೆಗಳಲ್ಲಿ ಉನ್ನತಾಧಿಕಾರಿಯಾಗಿ ನಿವೃತ್ತರಾಗಿದ್ದಾರೆ. 'ರಾಜ ಸೇವಾ ಪ್ರಸಕ್ತ' ಮತ್ತು 'ಡಾಕ್ಟರೇಟ್' ಎಂಬ ಕಾದಂಬರಿಗಳು ಇವರಿಗೆ ಕೀರ್ತಿತಂದಿತ್ತಿವೆ. ಇವರು ಬರೆದ 'ಮಾಸ್ತಿ ಕಥೆಗಳು' ಎಂಬ ಕೃತಿಗೆ ೧೯೭೪ರಲ್ಲಿ ಬೆಳಗಾವಿಯಲ್ಲಿ ಸೇರಿದ ೫೫ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದವರು. ಇವರು "ಶ್ರೀನಿವಾಸ" ಎಂಬ ಕಾವ್ಯನಾಮದಿಂದ ಸುಮಾರು ೬೫ಕ್ಕೂ ಮಿಕ್ಕಿ ಕನ್ನಡ ಕೃತಿಗಳನ್ನು ಬರೆದಿರುವುದಲ್ಲದೆ, ಅವರು ಬರೆದ 'ಸುಬ್ಬಣ್ಣ' ಎಂಬ ಸೀಳ್ಗತೆಯನ್ನು ಇಂಗ್ಲಿಷಿನಲ್ಲೂ ಬರೆದಿದ್ದಾರೆ.

ವಿದ್ಯಾವಾಚಸ್ಪತಿ, ವ್ಯಾಖ್ಯಾನ ಕೇಸರಿ, ನವೋಜರತ್ನ, ಧರ್ಮೂಲಂಕಾರ ಮೊದಲಾದ ಬಿರುದುಗಳುಳ್ಳ, ವೀರವಾಣಿ ಮಾಸಿಕದ ಸಂಪಾದಕರಾದ ವೇಣೂರಿನವರಾಗಿ ಈಗ ನೋಲಂಪ್ಪದಲ್ಲಿರುವ ನರ್ಧಮೂನ ಪಾರ್ಶ್ವನಾಥ ಶಾಸ್ತ್ರಿಗಳು ರತ್ನಾಕರ ಕವಿಯ ಭರತೇಶ ವೈಭವ ಮತ್ತು ಶತಕತ್ರಯಗಳನ್ನು ಹಿಂದಿಗೆ ಭಾಷಾಂತರಿಸಿದ್ದಾರೆ.

'ನವಗಿರಿನಂದ' ಎಂಬ ಕಾವ್ಯನಾಮದಿಂದ ಚಿರಪರಿಚಿತರಾಗಿದ್ದು, ಮದಂಶಿನ ಚಂದಮಾಮದ ಕನ್ನಡ ವಿಭಾಗದ ಸಂಪಾದಕರಾಗಿರುವ ಮೂದರೆಬೆಟ್ಟು ರಂಗರಾಯರು (ಜನನ ೩೦-೧-೧೯೧೩) ಕನ್ನಡದಲ್ಲಿ ಸುಮಾರು ೨೮ ಪುಸ್ತಕಗಳನ್ನು ಬರೆದಿದ್ದಾರೆ. ಅವರು ಬರೆದ 'ಲೀಲಾವೃತ' ಎಂಬ ಕೃತಿಯು ತಮಿಳು, ತೆಲುಗು, ಇಂಗ್ಲೀಷ್‌ಗಳಲ್ಲೂ, 'ಪತಿ' ಎಂಬ ಕಾದಂಬರಿಯು ತಮಿಳಿಗೂ ಅನುವಾದವಾಗಿರುವುದಲ್ಲದೆ, ಅವರ 'ಪುನರುದಯ' ಎಂಬ ಕೃತಿಯು ತೆಲುಗಿಗೆ ಅನುವಾದಿಸಲ್ಪಟ್ಟು 'ಜಾಗೃತಿ' ಎಂಬ ತೆಲುಗು ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿದೆ.

'ರಾವ ಬಹದ್ದೂರ್' ಎಂಬ ಕಾವ್ಯನಾಮದಿಂದ ಚಿರಪರಿಚಿತರಾದ ರಾಮಚಂದ್ರ ಭೀಮರಾವ ಕುಲಕರ್ಣಿ (ಜನನ ೨೪-೧೧ — ೧೦ — ೧೯೧೦) ಯವರು ಜಯಂತಿ ಮಾಸಿಕದ ಉಪ ಸಂಪಾದಕರಾಗಿ ಕೆಲಸ ಮಾಡಿದ್ದಾರೆ. ಅವರು ತಮ್ಮದೇ ಆದ ಕಲ್ಯಾಣ ಎಂಬ ಮಾಸಿಕವನ್ನು ಕೆಲಕಾಲ ಹೊರಡಿಸುತ್ತಿದ್ದರು. ಚರಕಾ ಸಂಘದ ವ್ಯವಸ್ಥಾಪಕರಾಗಿ ಇವರು ಹಲವು ಊರುಗಳನ್ನು ಸುತ್ತಿ ಅನುಭವ ಪಡೆದವರು. ಅವರು ಬರೆದ 'ಗ್ರಾಮಾಯಣ'ವು ತಮಿಳು ಭಾಷೆಗೆ ಅನುವಾದವಾಗಿದೆ.

ವಿವೇಕ ಸಾಹಿತ್ಯಮಾಲೆಯ ಸಂಪಾದಕರಾದ ಶಾ. ಮೋ. ವಿಶ್ವಾಮಿತ್ರ (ರಾಮಮೊಳೆಯೂರ, ಜನನ ೪-೫-೧೯೨೬)ರು ವಿದ್ವಾನ್ ಹಿಂದೀರತ್ನ ಪದವೀಧರರು. ಇವರು ಮಂಗಳೂರಿನ ಹೈಸ್ಕೂಲೊಂದರಲ್ಲಿ ಕನ್ನಡ ಪಂಡಿತರು. ಬಾಲಸಾಹಿತ್ಯಾಭಿಮಾನಿಗಳು. ಮಕ್ಕಳ ಪತ್ರಿಕೆಗಳಾದ ತುತ್ತೂರಿ (ಮಂಗಳೂರು) ಮತ್ತು ಪರಿಮಳ (ಬೆಂಗಳೂರು)ಗಳಿಗೆ ಸಂಪಾದಕರಾಗಿದ್ದರು. ಇವರ ಹಲವು ಕೃತಿಗಳು ಕೇರಳದ ಕನ್ನಡ ವಿಭಾಗಕ್ಕೆ ಉಪಪಠ್ಯವಾಗಿನಿಯುಲ್ಲದೆ. ಇವರು ಬರೆದ 'ರತ್ನಾಕರ ಸಿನ್ದ' ಎಂಬ ಕೃತಿಗೆ ಮೈಸೂರು ಸರಕಾರದ ಸಂಭಾವನೆ ಬಂದಿದೆ. ಇವರ 'ವೀರವರ ಎಂಬ ಕೃತಿಯನ್ನು ಎನ್. ಪೇರರಾಜು ಪೆನುವನ ಕೊಂಡ ಎಂಬವರು ತೆಲುಗಿಗೆ ಅನುವಾದಿಸಿದ್ದಾರೆ.

ಆರಳೆಲಗೂಡು ನರಸಿಂಹರಾಯ ಕೃಷ್ಣರಾಯರ (ಆ. ನ. ಕೃ. ೯-೫-೧೯೦೪)ರಿಂದ ೮-೭-೧೯೬೧) ಹೆಸರನ್ನು ಕೇಳದ ಕನ್ನಡಿಗರಿಲ್ಲ. ಕನ್ನಡ ಸಾಹಿತ್ಯ ಪರಿಷತ್ತಿನಂತಹ ಸಂಸ್ಥೆಗಳಲ್ಲಿ ಮಡಿದು ಕಥಾಲಹರಿ, ವಿಶ್ವವಾಣಿ, ಕನ್ನಡ ನುಡಿ ಮೊದಲಾದ ಪತ್ರಿಕೆಗಳ ಸಂಪಾದಕರಾಗಿ ಕೆಲಸ ಮಾಡಿದವರು, ಮದುವೆಯೋ ಮನೆಹಾಳೋ (೧೯೩೮) ಎಂಬ ನಾಟಕವನ್ನು ಬರೆದು ಸಾಹಿತ್ಯ ಸೇವೆಯಲ್ಲಿ ಹೆಜ್ಜೆಯೂರಿದವರು. ನೂರಹತ್ತಕ್ಕೂ ಹೆಚ್ಚು ಕಾದಂಬರಿಗಳನ್ನು ಬರೆದು ಕಾದಂಬರಿ ಸಾರ್ವಭೌಮನೆನಿಸಿದ ಇವರನ್ನು ೧೯೬೦ರಲ್ಲಿ ಮಣಿಪಾಲದಲ್ಲಿ ಸೇರಿದ ೪೮ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರನ್ನಾಗಿ ಆರಿಸಿ ಗೌರವಿಸಿದ್ದಾರೆ. ೧೯೭೨ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಇವರಿಗೆ "ಡಾಕ್ಟರ್ ಆಫ್ ಲಿಟ್ಟರೇಚರ್" ಎಂಬ ಬಿರುದನ್ನಿತ್ತು ಗೌರವಿಸಿತು. ಇವರು ಬರೆದ 'ಸಂಧ್ಯಾರಾಗ'ವನ್ನು ಕೆ.ಎ. ದೇವಮಾಸರು ಮಳೆಯೊಳಕ್ಕೆ ಅನುವಾದಿಸಿದ್ದಾರೆ.

ಬೆಂಗಳೂರಿನ ಆಚಾರ್ಯ ಪಾಠಶಾಲೆ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿರುವ ಶ್ರೀನಿವಾಸ ಕೊರಟೆಯವರು ೧೯೩೭ರಲ್ಲಿ ಬರೆದ ಪ್ರಥಮ ಕಾದಂಬರಿ 'ತೂರಿ ಬಂದ ತಾರೆ' ಹೊರ ಬಂದಾಗಲೇ ಜನರು ಇವರ ಸಾಹಿತ್ಯ ಪ್ರತಿಭೆಯನ್ನು ಗುರುತಿಸಿದರು. ಇವರ "ಜೀವನ ಮೌತ್ಯ ರತ್ನ" ಕೃತಿಗೆ, ನಮ್ಮ ರಾಜ್ಯ ಸಾಹಿತ್ಯ ಅಕಾಡಮಿಯು ಚಿಷ್ಟಿತ್ವಕ್ಕೆ ಬಂದ ಪ್ರಥಮ ವರ್ಷನೇ ಪ್ರಶಸ್ತಿ ಕೊಟ್ಟಿತು. ಇವರು ರಚಿಸಿದ ಸುಮಾರು ಎಪತ್ತು ಕೃತಿಗಳ ಪೈಕಿ, ವಿಜಯನಗರಕ್ಕೆ ಸಂಬಂಧಿಸಿದ ಸುಮಾರು ಇಪ್ಪತ್ತು ಕಾದಂಬರಿಗಳು ತೆಲುಗಿಗೆ ಅನುವಾದವಾಗಿವೆ.

೧೯೩೭ರಲ್ಲಿ ಧಾರವಾಡದಲ್ಲಿ ಜನಿಸಿದ ಡಾ| ಸರೋಜಿನಿ ಮಹಿಷಿಯವರು ಉಪಮಂತ್ರಿ ಸ್ಥಾನದಲ್ಲಿರುವ ಹಿರಿಯ ಸಾಹಿತಿಗಳು. ಇವರು 'ನೀರ ಮೇತೆ' ಎಂಬ ಮಾಸಿಕವನ್ನು ಹೊರಡಿಸುತ್ತಿದ್ದರು. "ಮಂಕು ತಿಮ್ಮನ ಕಗ್ಗ—ಉಮರನ ಒಸಗೆ—ರಾಮಾಯಣ ದರ್ಶನಂ" ಮೊದಲಾದ ಕಾವ್ಯಗಳನ್ನು ಇವರು ಹಿಂದಿಗೆ ಅನುವಾದಿಸಿದ್ದಾರೆ.

'ಶ್ರೀವೇಣಿ' ಎಂಬ ಕಾವ್ಯನಾಮದಿಂದ ಚಿರಪರಿಚಿತೆಯಾದ ಜನಸೂಯಾ ಶಂಕರರವರು ನಮ್ಮ ನಡುವೆ ಕೆಲವೇ ಸಮಯ ಬದುಕಿದ್ದರೂ, ಅವರ ಹೆಸರು ಚಿರಸ್ಥಾಯಿಯಾಗುವಂತಹ ಹಲವು ಕೃತಿಗಳನ್ನು ರಚಿಸಿ ಅಜರಾಮರರಾಗಿದ್ದಾರೆ. ಅವರು ಇಪ್ಪತ್ತೆರಡು ಕಾದಂಬರಿಗಳನ್ನು ಮತ್ತು ಮೂರು ಕಥಾಸಂಕಲನಗಳನ್ನು ಬರೆದಿದ್ದಾರೆ. ಅವರ 'ಬೆಳ್ಳಿ ನೋಡ' ಮತ್ತು "ಕಣ್ಣೆಲೆ ಚಿಗುರಿದಾಗ" ಕಾದಂಬರಿಗಳು ಚಲಚ್ಚಿತ್ರವಾಗಿವೆ. ಅವರ "ತಾವರೆ ಕೊಳ—ಬೆಳ್ಳಿ ನೋಡ— ಅಪಜಯ— ಅಪಸ್ವರ" ಕಾದಂಬರಿಗಳನ್ನು 'ಶ್ರೀಮತಿ ಶರ್ವಾಣಿ' ಎಂಬ ಕಾವ್ಯನಾಮದಿಂದ ಬರೆಯುತ್ತಿರುವ ಶಾರದಾ ಎಸ್. ರಾಮುಸ್ಯ ಎಂಬವರು ತೆಲುಗಿಗೆ ಅನುವಾದಿಸಿದ್ದಾರೆ.

(ಅಖಿಲ ಕರ್ನಾಟಕದ ಬರಹಗಾರರ ಭಾವಚಿತ್ರಗಳೂಡನೆಯ ವರ ವಿವರಗಳನ್ನು ಸಂಗ್ರಹಿಸುತ್ತಿದ್ದೇನೆ. ಆವರಿಂದ ಎತ್ತಿ ಬರೆದದು.) ●

ಇಪ್ಪತ್ತೊಂಭತ್ತು

Grams: HOTELCALM Phone: 64451-3 Lines

With Best Compliments from

HOTEL
KAMADHENU
BOARDING-LODGING- RESTAURANT

Trinity Circle - Mahatma Gandhi Road
BANGALORE-8

At Mysore Visit

HOTEL RAJBHAVAN
and
KALPANA LODGE

J. M. Palace Road, MYSORE.

ಕರ್ನಾಟಕದ ಪಾವನ ಪರಂಪರೆ

(ಗಿಳಸೇ ಪುಟದಿಂದ)

ವ್ಯಕ್ತವಾಗಿದೆ. ಶ್ರೀ ಬಸವೇಶ್ವರರ ಜೊತೆಗೆ ಇದ್ದ ಉಳಿದ ಶಿವಶರಣರು ತಮಗೆ ವಿಶಿಷ್ಟವಾದ ಬೇರೆ ಬೇರೆ ರೀತಿಯಲ್ಲಿ ಆಧ್ಯಾತ್ಮಸಾಧನೆಯನ್ನು ಬೋಧಿಸಿದ್ದಾರೆ. (ಎಲ್ಲರೂ ಒಂದೇ ಪಡಿಯಚ್ಚಿನಲ್ಲಿಯೂ ಗೊಂಬೆಗಳಲ್ಲ) ಬಸವಣ್ಣನವರು ಭಕ್ತಿ ಭಂಡಾರಿಗಳಾದರೆ, ಅಲ್ಲಮಪ್ರಭುಗಳು ಮಹಾಜ್ಞಾನಿ; ಮಹಾದೇವಿಯಕ್ಕ ವೈರಾಗ್ಯದ ಮೂರ್ತಿ; ಚೆನ್ನಬಸವೇಶ್ವರ ಸಪ್ತಸ್ಥಲ ಚಕ್ರವರ್ತಿ —ಹೀಗೆ ಆ ಕಾಲದ ಶಿವಶರಣರು ವಿವಿಧ ರೀತಿಯ ವ್ಯಕ್ತಿತ್ವಗಳನ್ನೊಳಗೊಂಡ ಬೇರೆ ಬೇರೆ ಕಾಯಕವನ್ನು ಅನುಸರಿಸುವ ಶಿವಶರಣರು ತಮ್ಮ ಚಿನ್ಮಯಿವೆಸ್ಸನ್ನು ವಚನಗಳಲ್ಲಿ ಕಾವ್ಯಮಯವಾಗಿ ಹೇಳಿದ್ದಾರೆ. ಆದ್ದರಿಂದ ವಚನ ಸಾಹಿತ್ಯವು "ನೀತಿ, ತತ್ವ-ಜ್ಞಾನ ಹಾಗೂ ಕಾವ್ಯ ಇವುಗಳ ಮುಪ್ಪರಿಯಾಗಿದೆ" ವಚನ ಸಾಹಿತ್ಯವು ಕನ್ನಡದ ಉಪನಿಷತ್ತು ಹಾಗೂ ವಚನಕಾರರು ಕರ್ನಾಟಕದ ಉಪನಿಷತ್ಕಾರರು ಎಂಬ ಮಾತು ಅಕ್ಷರಶಃ ಸತ್ಯವಾಗಿದೆ. ಸಾಮಾನ್ಯ ಜನತೆಯ ಉದ್ಧಾರಕ್ಕಾಗಿ ಕನ್ನಡ ಭಾಷೆಯಲ್ಲಿ ವಚನಗಳನ್ನು ರಚಿಸಿ ಜನತೆಯ ಉದ್ಧಾರ ಮಾಡಿದ ಶಿವಶರಣರು ಕನ್ನಡ ಸಂಸ್ಕೃತಿಯ ಇತಿಹಾಸದಲ್ಲಿ ಅವಿಸ್ಮರಣೀಯರಾಗಿದ್ದಾರೆ.

ನಂತರ ಬಂದ ಹರಿದಾಸರು ತಮ್ಮ ಕೀರ್ತನೆಗಳ ಮೂಲಕ ಕನ್ನಡನಾಡಿನ ಪಾವನ ಪರಂಪರೆಯನ್ನು ಅಭಿವೃದ್ಧಿಗೊಳಿಸಿದ್ದಾರೆ. ಶಿವಶರಣರ ಹಾಗೆಯೇ ಇವರ ಉದ್ದೇಶವೂ ಸಮಾಜ ಕಲ್ಯಾಣ, ವ್ಯಕ್ತಿಯ ಉದ್ಧಾರವಾಗಿತ್ತು. ಪುರಂದರದಾಸ, ಕನಕದಾಸ, ಜಗನ್ನಾಥದಾಸ ಮೊದಲಾದ ಹರಿದಾಸರು ವೈಷ್ಣವ ಭಕ್ತಿಯ ತರಂಗಿಣಿಯನ್ನೂ ಕನ್ನಡನಾಡಿನಲ್ಲಿ ಹರಿಸಿದರು. ಸಮಾಜದ ಡಾಂಭಿಕತೆಯನ್ನು ನಿವಾರಿಸಿ, ನೀತಿ-ಸದಾಚಾರ-ಶುದ್ಧ ಭಕ್ತಿಗಳನ್ನು ಜನತೆಯಲ್ಲಿ ನೆಲೆಗೊಳಿಸುವುದೇ ದಾಸರ ಮುಖ್ಯ ಗುರಿಯಾಗಿತ್ತು. ಅವರು ಕೇವಲ ಗೊಷ್ಠಿ ವೈರಾಗ್ಯವನ್ನೂ ಬೋಧಿಸಲಿಲ್ಲ; ನಿಷ್ಕ್ರಿಯತೆಯನ್ನು ಪ್ರತಿಪಾದಿಸಲಿಲ್ಲ. ಇದರ ಬದಲು 'ಈಸಬೇಕು ಇದ್ದು ಜೈಸಬೇಕು' ಎಂದನರು ಪ್ರವೃತ್ತಿ-ಮಾರ್ಗವನ್ನು ಜನತೆಗೆ ಬೋಧಿಸಿದರು. ಪರಮಾತ್ಮನ ರೂಪ, ಅವನ ಅನಂತ ಕರುಣೆಗಳನ್ನು ಅವರು ತಮ್ಮ ಅಸಂಖ್ಯ ಹಾಡುಗಳಲ್ಲಿ ಬಣ್ಣಿಸಿದ್ದಾರೆ. ಶ್ರೀಹರಿಯು ಹತ್ತು ಅವತಾರ ತಾಳಿ ಜಗತ್ತನ್ನು ಉದ್ಧರಿಸಿದ್ದಾನೆ. ಅವನೇ ಸರ್ವೋತ್ತಮ. ಅವನ ಇಚ್ಛೆಯಿಲ್ಲದೆ ಹುಲ್ಲು ಕಡ್ಡಿಯೂ ಅಲುಗಾಡದು. ಅವನ ಕರುಣೆಯಿಲ್ಲದೆ ವ್ಯಕ್ತಿಯ ಉದ್ಧಾರವಾಗುವುದಿಲ್ಲ. ಆದ್ದರಿಂದ ಪರಮಾತ್ಮನನ್ನು ನಂಬಿ ಭಜಿಸಬೇಕು. 'ನಂಬಿ ಕೆಟ್ಟವರಿಲ್ಲ, ರಂಗಯ್ಯ ನಿನ್ನ ನಂಬದೆ ಕೆಟ್ಟರಿ ಕೆಡಲಿ' ಎಂದು ದಾಸರು ಉಪದೇಶಿಸಿದ್ದಾರೆ. 'ಉದರ ವೈರಾಗ್ಯ'ವನ್ನು ಅವರು ಟೀಕಿಸಿ, ನಿಜವಾದ ವೈರಾಗ್ಯವನ್ನು ಪ್ರತಿಪಾದಿಸಿದ್ದಾರೆ. 'ಕಲ್ಲಾಗಿ ಇರಬೇಕು ಕಠಿಣ ಭವತೊರೆಯೊಳಗೆ; ಬಿಲ್ಲಾಗಿ ಇರಬೇಕು ಬಲ್ಲವರೊಳಗೆ' ಎಂದು ಶ್ರೀ ಪುರಂದರ ದಾಸರು ಮಾರ್ಮಿಕವಾಗಿ ಹೇಳಿದ್ದಾರೆ. ನಶ್ವರವಾದ ಸಂಸಾರವನ್ನು ನಂಬದೆ, ಶಾಶ್ವತನಾದ ಪರಮಾತ್ಮನಿಗೆ ಶರಣಾಗಿ ಭಕ್ತಿಮಾರ್ಗದಲ್ಲಿಮುನ್ನಡೆದು ಶ್ರೀಹರಿಯ ಕೃಪೆಯಿಂದ ಉದ್ಧಾರ ಹೊಂದಬೇಕೆಂಬುದೇ ದಾಸರ ಉಪದೇಶದ ಸಾರ. ಶತಕಾನುಶತಕಗಳನರೆಗೆ ಸಂಸ್ಕೃತದ ಬೀಗಮುದ್ರೆಯಲ್ಲಿ ಭದ್ರವಾಗಿದ್ದ ತತ್ವಜ್ಞಾನ ನೀತಿಗಳನ್ನು ದಾಸರು ಬಂಧಮುಕ್ತಮಾಡಿ ಕನ್ನಡದ ಸವಿನುಡಿಗಳಲ್ಲಿ ಜನಸಾಮಾನ್ಯರಿಗೆ ಕೈಗೆ ಸಿಕ್ಕಂತೆ ಉದಾರವಾಗಿ ಹಂಚಿದ್ದಾರೆ ಕರ್ನಾಟಕದ ಪಾವನ ಪರಂಪರೆಯಲ್ಲಿ ಅವರದ್ದು ಮಹತ್ವದ ಸ್ಥಾನವಾಗಿದೆ.

ಹೀಗೆ ಕರ್ನಾಟಕದಲ್ಲಿ ಜೈನ, ವೀರಶೈವ, ವೈಷ್ಣವ ಮೊದಲಾದ ವಿವಿಧ ಮತಪಂಥಗಳಿದ್ದರೂ ಅವುಗಳಲ್ಲಿ ಪರಸ್ಪರ ಸಹಿಷ್ಣುತೆ ಯೂಗಾಗಲೂ ಕಂಡು ಬಂದಿದೆ. ಧರ್ಮ ಸಹಿಷ್ಣುತೆಯು ಕನ್ನಡ ಸಂಸ್ಕೃತಿಯ ಹಿರಿಯ ವೈಶಿಷ್ಟ್ಯವಾಗಿದೆ. ಕರ್ನಾಟಕದ ಅರಸರು ಉದಾರ ಹೃದಯರಾಗಿ ಎಲ್ಲ ಧರ್ಮಗಳನ್ನು ಗೌರವಿಸುತ್ತಿದ್ದರು. ಹೊಮ್ಮೆ ಜೈನ ಮತ್ತು ವೈಷ್ಣವ ಮತಗಳಲ್ಲಿ ವಿರಸ ತಲೆದೋರಿದಾಗ ವಿಜಯನಗರದ ಅರಸು ಬುಕ್ಕರಾಯನು ಆ ಮತದವರಲ್ಲಿ ಸಮನ್ವಯವನ್ನು ಸಾಧಿಸಿದ ಪ್ರಸಂಗ ಕರ್ನಾಟಕದ ಧಾರ್ಮಿಕ ಪರಂಪರೆಯಲ್ಲಿ ಮಹತ್ವದ್ದಾಗಿದೆ. 'ಯಂ ಶೈವಾಃ ಸಮುಪಾಸತೇ ಶಿವ ಇತಿ' ಇತ್ಯಾದಿ ವಾಸನ ಪದ್ಯದಲ್ಲಿ ಒಬ್ಬನೇ ಪರಮಾತ್ಮನನ್ನು ಭಿನ್ನ ಭಿನ್ನ ಪಂಥದವರು ಬೇರೆ ಬೇರೆ ರೂಪಗಳಲ್ಲಿ ಆರಾಧಿಸುತ್ತಾರೆ ಎಂದು ಸಮನ್ವಯವನ್ನು ಬೋಧಿಸುತ್ತದೆ.

ಶಿಲ್ಪಕಲೆ, ಸಂಗೀತ, ಚಿತ್ರಕಲೆ ಮೊದಲಾದುವುಗಳಲ್ಲಿಯೂ ಕನ್ನಡನಾಡು ಜಗದ್ವಿಖ್ಯಾತವಾಗಿದೆ. ಬೇಲೂರು—ಹಳೆಬೀಡು, ಬಾದಾಮಿಗಳಲ್ಲಿಯ ಜಗತ್ಪ್ರಸಿದ್ಧ ದೇವಾಲಯಗಳು ಕಲೆಯ ಬೀಡಾಗಿವೆ. ಜಿತಿಥಿ ಸತ್ಕಾರಕ್ಕೂ ಕನ್ನಡನಾಡು ಹೆಸರಾಗಿದೆ. ಹೀಗೆ ತುಂಬುಜೀವನವನ್ನು ನಡೆಸಿದ ಹಿಂದಿನ ಕನ್ನಡಿಗರು ಇಂದಿನ ಪೀಳಿಗೆ ಒಂದು ಪಾವನ ಪರಂಪರೆಯನ್ನು ಬಳುವಳಿ ಕೊಟ್ಟಿದ್ದಾರೆ. ಆ ಪರಂಪರೆಯನ್ನು ಅರ್ಥಮಾಡಿಕೊಂಡು ಇಂದಿನ ಕನ್ನಡಿಗರಾದ ನಾವು ಮುಂದುವರಿಯುವುದು ನಮ್ಮ ಆದ್ಯ ಕರ್ತವ್ಯವಾಗಿದೆ.

With Best Compliments From:-

T. B. Kunhi Mahin

P. W. D. Contractor,

TEKKIL FERRY,

KASARAGOD.

ಭೂಮಿತಿಗೆ ಪ್ರಮೇಯಗಳೆಷ್ಟು?

(ಆರನೇ ಪುಟದಿಂದ)

ಲಿಗೆ ೫ ಎಕರೆಗಿಂತ ಕಡಿಮೆ ಜಮೀನು ಇರುತ್ತದೆ. ಈ ಜಮೀನುಗಳ ಕ್ಷೇತ್ರ ಒಟ್ಟು ಭೂಮಿಯ ನೂರಕ್ಕೆ ೧೯.೯ರಷ್ಟು ಆಗುತ್ತದೆ.

ಇದಕ್ಕೆ ಪ್ರತಿಯಾಗಿ ನೂರಕ್ಕೆ ೬.೫ರಷ್ಟು ಕುಟುಂಬಗಳ ಬಳಿಗೆ ಪ್ರತಿಯೊಂದರ ವಶಕ್ಕೆ ೧೫೦ ಎಕರೆಗಿಂತ ಹೆಚ್ಚು ಜಮೀನು ಬರುತ್ತದೆ. ಅವರ ಪ್ರಮಾಣ ಒಟ್ಟು ಜಮೀನಿಗೆ ನೂರಕ್ಕೆ ೨೫.೫೮. ಇದಕ್ಕೂ ಹಿಂದಿನ ಒಂದು ಸಮೀಕ್ಷೆಯಲ್ಲಿ ಹೀಗೂ ಕಂಡು ಬಂದಿತ್ತು. ಸಿನಿಮಾ ಹೊಲಗದ್ದೆ ಇಲ್ಲದ ಅಥವಾ ೧ ಎಕರೆಗಿಂತ ಕಡಿಮೆ ಜಮೀನು ಉಳ್ಳ ಫ್ಯಾಮಿಲಿಯರ ಸಂಖ್ಯೆ ನೂರಕ್ಕೆ ೪೭ ಇವರ ವಶಕ್ಕೆ ಒಟ್ಟು ಭೂಮಿಯ ನೂರಕ್ಕೆ ೧.೩೭ರಷ್ಟು ಮಾತ್ರ ಸಂದಿರುತ್ತದೆ!

ಅದೇ ೩೦ ಎಕರೆಗಿಂತ ಹೆಚ್ಚು ಜಮೀನು ಉಳ್ಳ ಜಮೀನುದಾರರ ಸಂಖ್ಯೆ ಒಟ್ಟು ಜಮೀನುದಾರರ ಪ್ರಮಾಣದಲ್ಲಿ ನೂರಕ್ಕೆ ೨೦ರಷ್ಟು ಇದ್ದು ಅವರ ವಶಕ್ಕೆ ಇದ್ದ ಜಮೀನು ಒಟ್ಟು ಕ್ಷೇತ್ರದ ಪ್ರಮಾಣದಲ್ಲಿ ನೂರಕ್ಕೆ ೫೫!

ಹಿಡುವಳಿಯ ಪರಮಾವಧಿಯನ್ನು ವ್ಯರ್ಥವಾಗಿ ವಿರೋಧಿಸುವವರಲ್ಲಿ ಪಂಜಾಬದ ಮಂತ್ರಿ ಮಂಡಳವು ಮುಂಚೂಣಿಯಲ್ಲಿ ಇತ್ತು. ಆದರೆ ಈ ರಾಜ್ಯದಲ್ಲಿ ಜಮೀನು ಇಲ್ಲದ ಅಥವಾ ೧ ಎಕರೆಗಿಂತ ಕಡಿಮೆ ಇದ್ದವರ ಸಂಖ್ಯೆ ನೂರಕ್ಕೆ ೬೨ರಷ್ಟು! ಬಿಹಾರ ಮತ್ತು ಉ. ಪ್ರದೇಶದಲ್ಲಿ ಸಾವಿರಾರು ಎಕರೆಯ ಜಮೀನ್ದಾರಿಕೆ ಇಂದಿಗೂ ಒಂದಲ್ಲ ಒಂದು ರೂಪದಲ್ಲಿ ಊರ್ಜಿತವಾಗಿ ಬರುತ್ತವೆ.

೧೯೬೦ರಲ್ಲಿ ಬೇರೆ ಬೇರೆ ರಾಜ್ಯಗಳು ಸ್ವೀಕರಿಸಿದ ಭೂ—ಮಿತಿಯ ಕಾಯಿದೆಗಳಲ್ಲಿ ಹಿಡುವಳಿಯ ಪರಮಾವಧಿಯ ಪರಿಮಾಣ ಬೇರೆ ಬೇರೆ ಆಗಿದ್ದದ್ದು ಕಂಡು ಬರುತ್ತದೆ. ಎಲ್ಲಿಯೂ ಇದರಲ್ಲಿ ಏಕರೂಪತೆ ಅಥವಾ ಸಾಮಂಜಸ್ಯ ತೋರುವುದಿಲ್ಲ.

ಆಂಧ್ರದಲ್ಲಿ ಜಿರಾಯತ ಜಮೀನಿನ ಪರಿಮಾಣ ೪೭ರಿಂದ ೩೬೪ ಎಕರೆ ಇದ್ದರೆ ರಾಜಸ್ತಾನದಲ್ಲಿ ೨೦ರಿಂದ ೩೦೬ ಎಕರೆ ಇದೆ! ನೀರಾವರಿ ಜಮೀನಿನ ಬಗೆಗೆ ಇದೇ ಪ್ರಮಾಣವು ಆಂಧ್ರದಲ್ಲಿ ೨೭—೫೪ ಎಕರೆ, ರಾಜಸ್ತಾನದಲ್ಲಿ ೨೦—೬೦ ಎಕರೆ, ಮಹಾರಾಷ್ಟ್ರದಲ್ಲಿ ಜಿರಾಯತ ಜಮೀನು ಪರಿಮಾಣ ೧೮—೧೨೬ ಎಕರೆ, ನೀರಾವರಿಯ ಪರಿಮಾಣ ೧೮.೫೪ ಎಕರೆ. ಜಮ್ಮು-ಕಾಶ್ಮೀರದಲ್ಲಿ ಎರಡೂ ಬಗೆಯ ಜಮೀನಿಗೆ ಒಂದೇ ಪರಿಮಾಣ—೨೩!!! ಎಕರೆ. ಪ. ಬಂಗಾಲದಲ್ಲಿ ಜಿರಾಯತ ಜಮೀನಿಗೆ ಪರಿಮಾಣ ೧೫.೪೫ರಿಂದ ೧೭.೩ ಎಕರೆ. ನೀರಾವರಿಯ ಜಮೀನಿಗೆ ೧೨.೪ ಎಕರೆ.

'ಸಿಲಿಂಗ್'ನ ಈ ಪರಿಮಾಣದಲ್ಲಿ ಹೇಗೆ ವೈವಿಧ್ಯವೊ ಹಾಗೆಯೇ 'ಸಿಲಿಂಗ್'ಗಾಗಿ ವ್ಯಕ್ತಿಯನ್ನು ಘಟಕವೆಂದು ಹಿಡಿಯವದೋ, ಕುಟುಂಬವನ್ನೇ ಎಂಬ ಕುರಿತೂ ನಾನಾಪ್ರಕಾರಗಳಾಗಿವೆ. ಇಷ್ಟೆ ಏಕೆ? 'ಸ್ಟಾಂಡರ್ಡ್ ಎಕರೆ' (ಪ್ರಮಾಣ ಭೂತ ಎಕರೆ) ಯಾವದೆಂದು ಹಿಡಿಯಬೇಕು?—ಎಂಬ ಪ್ರಶ್ನೆಗೂ ರಾಜ್ಯಗಳೂ ಉತ್ತರಗಳು ಬೇರೆ ಬೇರೆ!

ಇದರ ಹೊರತು ಈ 'ಪರಮಾವಧಿ'ಯಿಂದ ವಿನಾಯಿತಿ ಪಡೆಯುವ ಜಮೀನುಗಳ ಪಟ್ಟಿ ಎಲ್ಲ ರಾಜ್ಯಗಳಲ್ಲಿಯೂ ಮಾರುದ್ದ! ಹಾಗೆಯೇ ಭೂಮಿಯೊಡೆಯರಿಗೆ ಕೊಡಮೂಡುವ ಪರಿಹಾರಗಳಾಗಿಯೂ ಬೇರೆ ಬೇರೆ ಒರೆಗಲ್ಲುಗಳು! ಇಂಥ ಪರಿಸ್ಥಿತಿಯಲ್ಲಿ 'ಪರಮಾವಧಿ' ಯ ಮೂಲಕಲ್ಪನೆಯ ವಿಡಂಬನೆ ಆಗಿ ಅದು ಹಾಸ್ಯಾಸ್ಪದವೆನಿಸುವದೂ ಪರಿಣಾಮಬಲ್ಲಿ ಸೊನ್ನೆಯು ಮುಟ್ಟಿಕ್ಕೆ ಇಳಿಯುವದೂ ಕ್ರಮಪ್ರಾಪ್ತವೇ ಸರಿ.

'ಸಿಲಿಂಗ್' ಹಾಕಿದ ಮೂಲಕ ದೇಶದಲ್ಲಿ ತಿರುಗಿ ಹಂಚಿಕೊಡಲಿಕ್ಕೆ ೩ ಕೋಟಿ ಎಕರೆ ಒದಗಬಹುದೆಂದು ಅಪೇಕ್ಷೆ ಇತ್ತು. ಆದರೆ ಪ್ರತ್ಯಕ್ಷ ಕೈಗೆ ಬಂದದ್ದು ಬರೆ ೨೦ ಲಕ್ಷ ಎಕರೆ! 'ಸಿಲಿಂಗ್' ಮೂಲಕ ಬಿಹಾರ ಮೈಸೂರು ಮತ್ತು ಕೇರಳಗಳಲ್ಲಿ ಒಂದೂ ಎಕರೆ ಸರಕಾರದ ವಶಕ್ಕೆ ಬರಲಿಲ್ಲ! 'ಸಿಲಿಂಗ್' ಕಾಯಿದೆಗಳ ಉತ್ತೇಜಕವಾದ ಇತಿಹಾಸ ಈ ರೀತಿಯಾಗಿದೆ.

೧೯೬೦ರಲ್ಲಿ ಕಾಂಗ್ರೆಸ್ ಇಬ್ಭಾಗವಾಯಿತು. ತಂದಿನಿಂದ ಈ ಭೂಮಿತಿಯ ಪ್ರಮೇಯಕ್ಕೆ ನಮ್ಮೊಮ್ಮೆ ಒತ್ತರದ ಚಾಲನೆ ಸಿಕ್ಕಿತು. ಈ ಕೆಲಸದಲ್ಲಿ ಶ್ರೀಮತೀ ಇಂದಿರಾಗಾಂಧಿ ಧುರೀಣತ್ವವನ್ನು ವಹಿಸಿದರು. ಅದೇ ವರ್ಷ ಸಪ್ಟಂಬರದಲ್ಲಿ ಮುಖ್ಯ ಮಂತ್ರಿಗಳ ಸಭೆ ಕೂಡಿತು. ಆ ಸಭೆಯಲ್ಲಿ ಪ್ರಧಾನಿಗಳು ಅಂದರು, "ಭಾರತದಂತ ಪ್ರಚಂಡ ಆಕಾರದ ದೇಶದಲ್ಲಿ 'ಪರಮಾವಧಿ' ಯ ಪ್ರಶ್ನೆ ಸಹಜವಾಗಿಯೆ ನುತ್ತೆ ಸಾಣೆಗೆ ಹಿಡಿದಂತೆ ಆಗಹತ್ತಿದೆ.

ರಾಜ್ಯಗಳಲ್ಲಿ 'ಪರಮಾವಧಿ'ಯ ಕಾನೂನುಗಳು ಆಗಿಯೂ ಕೇವಲ ೫೦ ಲಕ್ಷ ಸಾವಿರ ಎಕರೆ ಜಮೀನು ತಿರುಗಿ ಹಂಚಲಿಕ್ಕೆ ಒದಗಿ ಬಂದಿದೆ. ಇದು ನಿಜವಾಗಿಯೂ ಆಶ್ಚರ್ಯಕರವು. ಈ ಅಂಕಿಗಳಿಂದ ಈ ವಿಷಯದಲ್ಲಿ ಬಹಳಷ್ಟು ಉದಾಸೀನ—ಅಪೇಕ್ಷೆ ಇದದ್ದೂ ವ್ಯಾಕ್ತವಾಗುತ್ತದೆ. ಅದೇ ರೀತಿ 'ಸಿಲಿಂಗ್'ನ ಪರಿಮಾಣಕ್ಕೂ ಹಿಡ್ಡಿ ಒಡ್ಡಲು ಬರುವಂತಿದೆ. ಬೇಸಾಯದ ಉತ್ಪಾದಕತೆ ಹಾಗೂ ಬೇಸಾಯದ ಹುಟ್ಟುವಳಿಗಳ ಬೆಲೆ ಕಡಿಮೆ ಇದ್ದ ಕಾಲದಲ್ಲಿ ಈ ಸಿಲಿಂಗ್-ಪರಿಮಾಣಗಳನ್ನು ಹಾಕಿ ಕೂಟ್ಟದ್ದು. ಇಂದು ಪರಿಸ್ಥಿತಿಯು ಬೇರೆ ಆಗಿದೆ. 'ಸಿಲಿಂಗ್'ದಿಂದ ಜಮೀನಿನ ಉತ್ಪಾದಕತೆಯು ಕುಗ್ಗಬಹುದೆಂಬ ಭೀತಿಯೂ ನಿರಾಧಾರವಾದದ್ದು—ಎಂದು ಸಿದ್ಧವಾಗಿದೆ. 'ಸಿಲಿಂಗ್' ಕಾಯಿದೆಯ ರಕ್ಷೆಯಿಂದ ತಪ್ಪಿಸಿಕೊಳ್ಳಲಿಕ್ಕೆ ಕುಟುಂಬಗಳಲ್ಲಿ ಪಾಲಾಗಿರುತ್ತವೆ. ಇದೆಲ್ಲ ಸೂರ್ವಾನುಭವವನ್ನು ಅನುಲಕ್ಷಿಸಿ. ವ್ಯಕ್ತಿಯ ಬದಲು ಕುಟುಂಬವೇ ಘಟಕವೆಂದು ಹಿಡಿದು ಪರಮಾವಧಿಯ ಕಾಯಿದೆಗಳನ್ನು ಮಾಡಬೇಕೆಂಬುದು ಸ್ಪಷ್ಟವಾಗಿದೆ.'

ಪ್ರಧಾನಿ ಇಂದಿರಾಜಿಯ ಈ ಸ್ಪಷ್ಟ ಹೇಳಿಕೆಯ ನಂತರ 'ಸಿಲಿಂಗ್'ನ ಪ್ರಶ್ನೆಯು ಚರ್ಚೆ ಎಲ್ಲೆಡೆಗಳಲ್ಲಿಯೂ ಭರದಿಂದ ನಡೆಯ ಹತ್ತಿದರೆ ತಮ ಸೋಜಿಗವಲ್ಲ. ಕಾಂಗ್ರೆಸ್ ಪಕ್ಷದಲ್ಲಿಯೇ' ಈ ಕುರಿತು ವಾದ ವಿವಾದಗಳೆದ್ದಿವೆ. ಅದರೊಳಗಿನ ಭಿನ್ನ ಭಿನ್ನ ವಿಚಾರಧಾರೆಗಳ ಹಿಂದಿಳ ಹಿತಾಸಕ್ತಿಗಳು ಈ ಮೂಲಕ ಬಹಿರಂಗವಾಗುತ್ತಿವೆ. 'ಕುಲಾಕ' ವರ್ಗದ ಶ್ರೀಮಂತ ಭವ್ಯತೆಯ ಮೇಲೆ ಉಗ್ರವಾಗಿ ತೀವ್ರವಾದಿಗಳ ಆಕ್ರಮಣಗಳು ಆಗಹತ್ತಿವೆ. ಜ್ವಲಂತತೆಯ ಪರವಾಗಿ ಯಾರು ಏನು ಏಬ್ಬುದು ಈಗ ಗೊತ್ತಾಗುತ್ತಿದೆ.

'If you cannot break a racket, join it' ಎಂದು ವ್ಯೂಹನ್ನು ಒಡೆಯಲು ಬಾರದಿದ್ದರೆ ಅದನ್ನು ಒಳಸೇರಿರಿ—ಎಂಬುದೊಂದು ಕೂಟ ನೀತಿಯ ಸೂತ್ರ. ಈ ಸೂತ್ರದಂತೆ ಹೊಸ ಕಾಂಗ್ರೆಸಿನ ತೀವ್ರಗಾಮಿಗತಿಯನ್ನು ಕುಂಠಿತಗೊಳಿಸಲಿಕ್ಕೆ ಹಳೆಯ ಕಾಂಗ್ರೆಸಿನ ಅನೇಕ 'ಪಟ್ಟ ಭದ್ರ'ರು ಈ ಹೊಸ ವ್ಯೂಹವನ್ನು ಸೇರಿ ಏರಿ ನಿಂತಿರುವರು. ಅವರ ಬಣ್ಣಿಸಿ ಈ 'ಸಿಲಿಂಗ್' ಚರ್ಚೆಯಲ್ಲಿ ಬಯಲಾಗುತ್ತಿದೆ.

ಆದರೂ ಈ ಚರ್ಚೆಯೊಳಗಿಂದ ಕೆಲ ಪೊಂದು ನಿಶ್ಚಿತ ನಿರ್ಣಯಗಳೂ ಜವ್ವಗಳ ಆಧಾರದ ಮೇಲೆ "ಪರಮಾವಧಿ"ಯ ಹೊಸ ಕಾನೂನುಗಳೂ ಲಂಜಾಗುವ ಶಕ್ಯತೆ ಇಂದು ಕಾಣುತ್ತಿದೆ. ಆದರೆ ಈ ಪ್ರಶ್ನೆಯು ಬಗೆಹರಿಕೆ ಬರೆ ಕಾನೂನು ಮಾಡುವುದರಲ್ಲಿ ಇಲ್ಲ. ಅವುಗಳನ್ನು ಅಪಷ್ಟು ಶೀಘ್ರ ಅದಷ್ಟು ಪೂರ್ತಿ ಕಾಯುಗತ ಮಾಡುವುದರಲ್ಲಿದೆ. ಈ ಕಾರ್ಯ ಪಟ್ಟಾಗಿ ನಡೆಯಬಹುದೇ? ಇದೇ ಮುಖ್ಯ ಜೀವಾಳದ ಪ್ರಶ್ನೆ—ದಶಲಕ್ಷ ಡಾಲರಿನ ಪ್ರಶ್ನೆ!

ಹಿಡುವಳಿಯ ಪರಮಾವಧಿ ಅಥವಾ ಸಿಲಿಂಗ್ ಇಡಿಯ ಭೂಸಮಸ್ಯೆಯದೇ ಒಂದು ಭಾಗವು. 'ಉಳುವನಪನದೇ ಹೊಲ' ಇದು ಈ ಸುಧಾರಣೆಯ ಆದಿ ತತ್ವ. ಆದರೆ ಅನೇಕ ರಾಜ್ಯಗಳ್ಲ ಭೂಮಿಯ ಹಕ್ಕಿನ ಸಂಬಂಧದ ರಿಕಾರ್ಡುಗಳೇ ಇಲ್ಲ! ಅಂಥಲ್ಲಿ ಉಳುವವನ ಹೋನೆಂಬ ಮಾತಿಗೆ ಯಾವ ಅರ್ಥ? ಇನ್ನೂ ಕೆಲವು ರಾಜ್ಯಗಳಲ್ಲಿ ಈ ತತ್ವದಂತೆ ಕಾಯಿದೆಯೊಗಿ ಬಹಳ ವರ್ಷಗಳಾಗಿದ್ದರೂ ಅವರ ಕಾರ್ಯಾಚರಣೆ ನಿಷ್ಕುರವಾಗಿ ನಡೆದದ್ದೇ ಇಲ್ಲ. ಈ ಕಾಯಿದೆಯಲ್ಲಿಯೂ 'ಸ್ವಂತ ಸಾಗುವಳಿದಾರ' (ಸೆಲ್ಫ್ ಕಲ್ಟಿವೇಟರ್)ನ ವ್ಯಾಖ್ಯೆಯಲ್ಲಿ ಇಷ್ಟೆಲ್ಲ ಒಳವಾರಿಗಳು ತೆರೆದಿವೆ. ಬಹುತೇಕ ಎಲ್ಲ ಕೂತುಣ್ಣುವ ಗೈರಹಜರ ಜಮೀನ್ದಾರರು(ಎಬ್ಸೆಂಟೀ ಲ್ಯಾಂಡ್ ಲಾರ್ಡ್ಸ್) ನಗರಗಳಲ್ಲಿ ಬೇರೆ ಉದ್ಯೋಗಗಳನ್ನು ನಡೆಯಿಸುತ್ತಿರುವಾಗಲೇ ತಮ್ಮ ದೂರದ ಹೊಲಗಳ ಉಪಭೋಗ ಪಡೆಯುತ್ತಲೆ ಇರುತ್ತಾರೆ. (ಇಂಥವರಿಗೆ 'ವ್ಯಕ್ತಿಗೊಂದು ವೃತ್ತಿ' ಎಂಬ ತತ್ವದಲ್ಲಿ ಹೊಸ ವರ್ಣಾಶ್ರಮ ಜಾತಿ ವ್ಯವಸ್ಥೆಯ ಭೂತವು ಕಾಣಿಸುತ್ತದೆ!)

ಇವರ ವರ್ಗದಲ್ಲಿ ಈಗ ಹೊಸ ಮೂದರಿಯ ಜಮೀನುದಾರ ಬಂದು ಕುಳಿತಿದ್ದಾನೆ — ಆಚೆ ಈಚೆ ಕೈಗೆ

ACHARYA PRODUCTS

ಆಚಾರ್ಯ ಪ್ರೊಡಕ್ಟ್ಸ್

ವಿವಾಹವೇ ಮೊದಲಾದ ಶುಭ-ಸಮಾರಂಭಗಳಲ್ಲೂ,
ನಿತ್ಯ ಪೂಜಾ ವಿನಿಯೋಗಾದಿಗಳಲ್ಲೂ ಮನಸ್ಸನ್ನು, ಮನೆಯನ್ನೂ
ಸುಗಂಧಮಯವನ್ನಾಗಿಸಬಲ್ಲ ಹಲವಾರು ಕಂಪೆನಿಗಳ

ಸುಗಂಧ ಅಗರ್‌ಬತ್ತಿಗಳೂ,

ಇವರಲ್ಲಿಯೇ ತಯಾರಾಗುವ

ಸುಧಾ ಸುಗಂಧ ಅಡಿಕೆ ಪುಡಿಗಳೂ

ರುಚಿಂ ಆಗಿಯೂ, ಚಿಲ್ಲರೆಯಾಗಿಯೂ ದೊರೆಯುತ್ತವೆ.

— ವಿಶೇಷ ಮಾಹಿತಿಗೆ —

K. Y. ACHARYA

TELEPHONE:
SHOP:47449I
RESI :473028

S. Sangeet Sagar,
Laxmi Narayan Lane
BOMBAY-19.

ಸಿಕ್ಕ ಜಮೀನುಗಳನ್ನೆಲ್ಲ ಖರೀದಿ ಮಾಡು ತ್ತಾ 'ಹಸಿರು' ನೋಟುಗಳನ್ನು ಮುರಿಸಿ ಹಸಿರು ಕ್ರಾಂತಿ ಮಾಡಲು ನಗರದಿಂದ ಹ ಳ್ಳಿಗೆ ನುಗ್ಗಿದ ನಾವುಕಾರಿಕೆಯ ಸಲಗ. ಕಪ್ಪುಧನದ ಕುಬೇರ! ಕಪ್ಪು ಹಣ ಬಿಳಿ ಯಾಗಿಸಲು, ಪ್ರಾಪ್ತಿಕರವನ್ನು ತಪ್ಪಿಸಲು ಇಂಥ ಭಂಡವಳದಾರರು ಇಂದು ಜಮೀ ನದಾರರಾಗ ಹತ್ತಿದ್ದಾರೆ.

ಇಂದು ಗ್ರಾಸೂಂತರ ಪ್ರದೇಶದ ಹಸಿ ರು ಕ್ರಾಂತಿ ವೀರರಿಂದ ಪಿರಿವಂತ ಬೇಸಾ ಯಗಾರಧಿಕೇ ಕಾಂಗ್ರೆಸಿನ ಅಧಿಕಾರಾರೂಢ ಪಕ್ಷದ ಪ್ರಾದೇಶಿಕ ನಾಯಕತ್ವದ ಆಧಾರ ಸ್ತಂಭಗಳಿವೆ. ಬಹಳಷ್ಟು ಶಾಸನ ಸಭಾಸದ ಸ್ಯರೂ ಸಂಸತ್ ಸದಸ್ಯರೂ ಮಂತ್ರಿ ಮ ಹಾಶಯರೂ ಇದೇ ವರ್ಗದವರು. ಇದಲ್ಲ ದೆ ಕೆಲವ್ಕು ದಕ್ಷಿಣ ಭಾರತದಲ್ಲಿ ಈ ಪಟ್ಟಭ ದ್ರ ಹಿಂಸೆಯ ಬೇಸಾಯಗಾರರಿಗೆ ಜಾತೀ ಯ ಬಹುಪುತದ ಸ್ಥಿರಬದ್ಧವಾವ ಆಧಾ ರ ಖೇರೆ ದೊರೆತಿದೆ. ಇಂಥಲ್ಲಿ 'ಪರಮೂವ ಧಿಯ ಕಾಯಿದೆಯ ಕಾರ್ಯಾಚರಣೆ ತುಂಬ ಜಟಿಲವೂ ವಿವರ ಪೂರ್ಣವೂ ಆ ದ ಕ್ಲಿಷ್ಟ ಕೆರಿ ಕೆರಿಯ ಕೆಲಸ ಅಂದಾಗ ಆ ದಕ್ಕಾಗಿ ಯಾರು ದುಡಿಯುವರು?

ಚರ್ಚಿಲ್‌ರು ಸ್ಟಾಲಿನ್‌ರಿಗೆ ಕೇಳಿದ್ದ ರು "ನಿನಗೆ ಯಾರು ದೊಡ್ಡ ಹಗೆ ಅನಿಸಿತು? ಹಿಟ್ಲರನೇ ಕುಲಾಕನೋ? "ಸ್ಟಾಲಿನ್ ಉತ್ತರವಿತ್ತರು. ಕು ಲಾಕನೇ" (ಕುಲಾಕನೆಂದರೆ ರಷಿಯಾದ ಗ್ರಾಮೀಣ ಪ್ರದೇಶದ ದೊಡ್ಡ ಜಮೀನ

ರಾಜಕೀಯ ಪಕ್ಷಗಳು ಹಾಗೂ ಜನಸೇವೆ

(ಐದನೇ ಪುಟದಿಂದ)

ಘೋಷಣೆ ಪ್ರಕಟನೆಯಲ್ಲೇ ಇರುವಂತಾಗಿ ದೆ. ಸಮಾಜವಾದ, ಬಡತನದ ನಿರ್ಮೂಲ ನ, ನಿರುದ್ಯೋಗ ಪರಿಹಾರ, ಮುಂತಾದ ವೆಲ್ಲ ವೇದಿಕೆಯ ಮುಕ್ತಾ ಫಲಗಳಾಗಿ ನೆಯೇ ಹೊರತು ಅವು ಕೃತಿಯಲ್ಲಿಳಿದದ್ದು ಕಾಣಬರುವುದಿಲ್ಲ. ಜನಕ್ಕೆ ಒಮ್ಮೆಲೇ ಏ ನೋ ಜಾದು ನಡೆದಂತೆ ಕಾಣಿಸಿತು. ಆದರೆ ಈ ಜಾದು ಜಗತ್ತಿನ ನಿಜಸ್ಥಿತಿ ಈಗ ಬಯ

ದಾರ (ಈ ದೊಡ್ಡ ಜಮೀನ್ದಾರನ ವರ್ಚ ಸ್ಸನ್ನು ಹೋಗಲಾಡಿಸಲಿಕ್ಕೆ ಸೋವಿಯ ತ್ ರಶಿಯಾದಲ್ಲಿ ಸ್ಟಾಲಿನ್ ಉಗ್ರಕ್ರಮಗ ಳನ್ನು ಹೂಡಬೇಕಾಯಿತು). ಆತ ಸರ್ವಾ ಧಿಕಾರಿ. ಪ್ರಚಂಡ ಕಮ್ಯುನಿಸ್ಟ್ ಪಕ್ಷ ಹಾ ಗೂ ಸೇನೆಯ ಸಂಘಟನೆಯ ಸರ್ವ ಸತ್ವ ಅವನ ಕೈಯಲ್ಲಿ.

ಆನಂತರ ನಮ್ಮದೋ ಸಂಸದೀಯ ಪ್ರಜಾ ಪ್ರಭುತ್ವ. ಇಲ್ಲಿ ಈ ಹಿಡುವಳಿಗಳಿಗೆ ಪರ ಮಾವಧಿಯನ್ನು ಹಾಕುವ ಕ್ರಾಂತಿಕಾರಿ ಯೂದ ಕಾರ್ಯವು ಈ ಪ್ರಜಾಪ್ರಭುತ್ವದ ಹಾಗೂ ಸರಂಜಾಮಿಯುಗದಲ್ಲಿ ಬ್ರಿಟಿಷ್ ಸಾಮ್ರಾಜ್ಯದಾಜಿಯು ಕಟ್ಟಿಟ್ಟು ಬಿಟ್ಟು ಹೋದ ಆಡಳಿತ ಯಂತ್ರದ ಚೌಕಟ್ಟಿನೊ ಳಗಿಂದ ನೆರವೇರಬೇಕಾಗಿದೆ! ಕಾಯ್ದು ನೋಡೋಣ. ಇದು ಯಶಸ್ವಿಯಾಗಬಹು ದೇ ಎಂದು.

●●

ಲಾಗ ತೊಡಗಿದೆ.

ಮೊದಲನೇ ಪಕ್ಷಾಂತರ ಪ್ರೇರಿತವಾದ ಇಂದಿನ(ಆ)ಕಾಂಗ್ರೆಸ್ ಪಕ್ಷಾಂತರಕ್ಕೆ ಹೆ ಚ್ಚು ಜಾಲನೆ ನೀಡಿತು. ವ:ಧ್ಯಂತರ ಲೋ ಕ ಸಭಾ ಚುನಾವಣೆಯ ದಿಗ್ವಿಜಯದ ನಂ ತರಗಂತೂ ಅದು ಪ್ರವಾಹಗೊಂಡಂತೆ ಅ ತ್ತ ಕಡೆ ಹರಿಯಿತು. ಉಳಿದ ಕೆಲವು ಚಿಲ್ಲ ರೆ ಪಕ್ಷಗಳೂ ಬಿಳಿಪಂತಾಯಿತು. ಕೆಲ ವು ಸೇರಿಯೂ ಆಯಿತು.

ತೆರೆ—ಮರೆ

ಪಕ್ಷಗಳಿಗೆ ಜನ ಸೇವೆಯೇ ಪ್ರಧಾ ನವೆನ್ನಿಸಿದರೆ ಇಂದಿನ ಪರಿಸ್ಥಿ ತಿ ಉಂಟಾಗುತ್ತಿರಲಿಲ್ಲ. ತಮ್ಮ ಪಕ್ಷದ ಧ್ಯೇಯ ಧೋರಣೆಗಳನ್ನು ಇಂ ದಿನ ಪರಿಸ್ಥಿತಿಗೆ ಅಪೇಕ್ಷಣೀಯವಾಗುವಂ ತೆ ಮೂರ್ಪಡಿಸಿ ಜನ ಸೇವೆ ಮಾಡಲು ಸಾ ಧ್ಯವಿತ್ತು. ಆದರೆ ಅದು ಕೇವಲ ತೋರಿಕೆ ಯಾದ್ದರಿಂದ ಕೆಲವರಿಗೆ ಅಧಿಕಾರದ ಆ ಪೇಕ್ಷೆ ಪ್ರಬಲವಾಗಿ ಅದಕ್ಕಾಗಿ ಹತ-ಹತಿ ಸಿ ಪಕ್ಷತ್ಯಾಗ ನಡೆಯುತ್ತಲಿರುವುದಾಗಿದೆ.

ಪಕ್ಷದಲ್ಲಾದರೂ ಇಂಥ ಹುದ್ದೆ ಸಿಕ್ಕಿದ ರೆ ಮಾತ್ರ ಉಳಿಯುತ್ತೇವೆನ್ನುವ ಜನರೂ ಇದ್ದಾರೆ. ಇನ್ನೆಷ್ಟೋ ಜನರಿಗೆ ಈ ಪಕ್ಷಗ ಳೇ ಜೀವನಾಧಾರವೂ ಆಗಿಗುತ್ತಿದೆ. ಪಕ್ಷ ದ ಹೆಸರು ಹೆಚ್ಚಿಕೊಂಡು ಏನಾದರೂ ಕಾ ರುಭಾರ ನಡೆಸಿ ಸಮಾಜವಾದದ ಮಂತ್ರಜ ಪಿಸಿ ಸ್ವಾಹಾ ಮಾಡಿ ತಮ್ಮ ದಿನಚರಿಸಾಗಿ ಸುವ ಪಕ್ಷ ನಿಷ್ಠರೂ ಅಲ್ಲಲ್ಲಿ ಅಧಿಕವಾಗಿ ಯೇ ಕಾಣಿಸಿಕೊಳ್ಳುತ್ತಾರೆ. ಅಂದಾಗ ಪ ಕ್ಷಕ್ಕೆ ಜನಸೇವೆ 'ಲೇಬಲ್' ಮಾತ್ರ.ಒಳಗಿ ನ ಸರಕು, ಸರ್ಕಸ್ಸು ಬೇರೆಯೇ ಇಸೆ ಎ ನ್ನುವುದು ಯಾರಿಗಾದರೂ ತಿಳಿಯದೆ ಇ ದ್ದೀತೇ?

ಸೇನಾಭ್ಯಾವನೆ

ಜನಸೇವೆಗೆ ಅಧಿಕಾರವೇ ಮುಖ್ಯವಲ್ಲ. ಜನತೆಯ ಆವಶ್ಯಕತೆಗಳನ್ನು ತಿಳಿದು ರಚ ನಾತ್ಮಕ ಕಾರ್ಯಗಳಿಂದಲೂ ಅಪರ ಸಮ ಸ್ಯೆ—ಸವಾಲುಗಳನ್ನು ಎದುರಿಸಲು ಸಾ ಧ್ಯವಿದೆ. ಗಾಂಧೀಜೀ ವಿಸ್ಮೃತಿಗಾ ಮುಂತಾ ದವರು ಅದನ್ನು ಮಾಡಿಲ್ಲವೇ? ಜನತೆ ಸಂ ಕಷ್ಟ ಪರಿಹಾರವಾದಲ್ಲಿ ಜನಪ್ರಿಯತೆ ಪ ಕ್ಷಕ್ಕೆ ತಾನಾಗಿ ಸಿಗುತ್ತದೆ. ಆಪರೆ ಭವಿಷ್ಯ ವೂ ತಾನಾಗಿ ಬೆಳೆಯುತ್ತದೆ. ಅಂದಾಗ ಅದನ್ನು ಬಿಟ್ಟು ಅಧಿಕಾರದತ್ತ ಸಾಗುತ್ತಿ ರುವುದೇಕೆ?

ಇಂದು ಅಡಳಿತ ಪಕ್ಷ ಅಧಿಕಾರವನ್ನು ಹಂಚಿಕೊಡುವ ಎಜೆನ್ಸಿಯ ಹಾಗೆ ಜನ ತಿ ಳಿದಿರುವುದರಿಂದ ಅದರತ್ತ ಧಾವಿಸುವುದು ಕಾರಣವಾಗಿದೆ. ಪಕ್ಷದ ಪ್ರಮುಖರ ಸುಖ ಲೋಲುಪತೆ, ಸಂಪದಾರಾಧನೆ, ಇವೆಲ್ಲ ಇಂದು ಅಕರ್ಷಣೆಯೂಗುತ್ತಿವೆ. ಹಾಗಾಗಿ ಸೇವಾಭಾವನೆ, ಸಾಧನೆಗೆ ಪಕ್ಷದಲ್ಲಿ ಹೆಚ್ಚು ಅವಕಾಶವೇ ಇರುವದಿಲ್ಲ. ಅಧಿಕಾರ ಎಲ್ಲಿ ಸಾಗುತ್ತದೋ ಅತ್ತ ಕಡೆ ಜನರ ಒಲುವು —ನುಗ್ಗಾಟ, ಪಕ್ಷದಿಂದ ಪಕ್ಷಕ್ಕೆ ಹಾರಾಟ,

ಆಹ್ಲಾದಕರ ಸುವಾಸನೆ

ಮೈಸೂರು ಗಂಧದ ಎಣ್ಣೆಯು ತನ್ನ ಶ್ರೇಷ್ಠತೆಯಿಂದ ಜಗದ್ವಿಖ್ಯಾತಿಯನ್ನು ಪಡೆದಿದೆ.

ಪರಿಶುದ್ಧವಾದ ಗಂಧದ ಎಣ್ಣೆಯು ಮೈಸೂರು ಸರ್ಕಾರದ
ಸೀಲು ಮತ್ತು ಲೇಬಲ್‌ಗಳುಳ್ಳ ಸೀಸೆಗಳಲ್ಲಿ ಮಾತ್ರ ದೊರೆಯುತ್ತವೆ.

ಮೈಸೂರು ಸರ್ಕಾರದ ಗಂಧದ ಎಣ್ಣೆ ಕಾರ್ಖಾನೆ,

ಮೈಸೂರು ಮತ್ತು ಶಿವಮೊಗ್ಗ

ಇಂದು ನಾವು ಭಾರತಕ್ಕೆ ಸ್ವಾತಂತ್ರ್ಯ ದೊರೆತು ೩೫ ವರ್ಷಗಳಾದವೆಂದು ಸ್ವಾತಂತ್ರ್ಯದ ರಜತ ಮಹೋತ್ಸವವನ್ನು ಆಚರಿಸುತ್ತಲಿದ್ದೇವೆ ಎಂಬುದೇನೋ ನಿಜ. ಒಂದು ದೇಶದ ಜೀವನದಲ್ಲಿ ೩೫ ವರ್ಷಗಳ ಕಾಲ ಅದರ ಸರ್ವತೋಮುಖ ಅಭಿವೃದ್ಧಿಗಾಗಿ ಕಡಿಮೆ ಎಂದು ಹೇಳುವುದು ಅಷ್ಟು ಸರಿ ಎನಿಸದು. ಆದಲ್ಲಿ ಭಾರತದಂತಹ ವಿಶಾಲ ಹಾಗೂ ಬಗೆಬಗೆಯ ಭಾಷೆ, ಜಾತಿ, ರಾಜ್ಯಗಳಿಂದೊಡಗೂಡಿದ ರಾಷ್ಟ್ರವು ಈ ೩೫ ವರ್ಷಗಳಲ್ಲಿ ಅಷ್ಟೆಲ್ಲ ಸಾಧಿಸಿದೆ ಎಂಬುದನ್ನು ವಿಚಾರಮಾಡುವುದು ಇಂದಿನ ಶುಭ ವಿಷಯವೆಲ್ಲ ತಗತ್ಯವೇ ಸರಿ.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ತಮ್ಮ ಸರ್ವಸ್ವವನ್ನು ಕಳೆದುಕೊಂಡು ನಿರ್ಗತಿಕರಾಗಿದ್ದ ದೇಶಾಭಿಮಾನಿಗಳಿದ್ದಾರೆ. ಅವರೇ ನಿಜವಾದ ಅಭಿಮಾನಿಗಳು. 'ದೇಹ' ಎಂದು ಸಹಾಯ ಯಾಚಿಸದೇ ತಾವು ಕಳೆದುಕೊಂಡದ್ದು ದೇಶಕ್ಕಾಗಿ ಎಂದು ತಿಳಿದು ಆನಂದಕ್ಕೆ ಪಶ್ಚಾತ್ತಾಪ ಪಡದೆ, ನಿರ್ಗತಿಕರಂತೆ ಜೀವನ ಸಾಗಿಸಿದ ಅನೇಕಾನೇಕ ದೇಶಾಭಿಮಾನಿಗಳು ಇಂದು ಕೂಡ ಉದಾಹರಣೆಗೆ ದೊರೆಯುತ್ತಾರೆ. ಅವರಿಗೆ ಕೀರ್ತಿ, ಹಣ, ಅಧಿಕಾರಗಳ ಲಾಲಸೆ ಇಲ್ಲ. ತಾವು ಮಾಡಿದ ಮಹಾತ್ಯಾಗದ ಕಲ್ಪನೆ ಯಾರಿಗೂ ತಿಳಿಯಗೊಡದೆ ಕಡು ಬಡವರಾಗಿ ಅಸು ನೀಗಿದ ಮಹಾನ್ನ ವ್ಯಕ್ತಿಗಳಿದ್ದಾರೆ.

ಅವಕ್ಕೆ ತದ್ವಿರುದ್ಧವಾಗಿ, ಯಾವುದೊ ಪುರಾತನ ಕಾಲದಲ್ಲಿ ನಾಲ್ಕುದಿನ ಜೈಲು ಕಂಡಿದ್ದನ್ನೇ ಆರ್ಹತೆಯೆನ್ನಾಗಿಸಿ ತಮ್ಮ ಕಪಟ ನೀತಿಯಿಂದ ಜನರ ಕಣ್ಣಲ್ಲಿ 'ದೇಶ ಸೇವೆ' ಎಂದು ಮಣ್ಣೆರಚಿ ಇಂದು ಪುಢಾರಿಗಳಾಗಿ ರಾಜ ವೈಭವದಲ್ಲಿ ಮೆರೆಯುವ ವರೂ ಇದ್ದಾರೆ. ಅವರಿಗೆ ಎಲ್ಲಿಲ್ಲದ ಮರ್ಯಾದೆ ದೊರೆಯುತ್ತದೆ. ಅವರಿಗೆ ನಿಜವಾಗಿ ಸ್ವಾರ್ಥತ್ಯಾಗ ಮಾಡಿದವರ ಬಗ್ಗೆ ಏಳ್ನೂಟ ಕನಿಕರ, ಗೌರವ ಇಲ್ಲ. ಜನ ಸಾಮಾನ್ಯರ ಹಿತ ಸಾಧನೆಯೇ ತನ್ನ ಗುರಿ ಎಂಬ ಟೊಳ್ಳು ಮಾತಿನಿಂದ ಅಧಿಕಾರದಿಂದ ಅಧಿಕಾರಕ್ಕೆ ಏರುತ್ತ ಹಣಗಳಿಸುವ ಕಪಟ ರಾಜಕಾರಣಿಗಳಿಗೆ ಕೊರತೆ ಇಲ್ಲ. ಜನಸಾಮಾನ್ಯರ ಪ್ರತಿನಿಧಿಗಳಾದ ಇವರಿಗೆ ರಾಜ ವೈಭವ, ಎರ್ ಕಂಡಿಶನ್ ಮಹಲುಗಳೇಕೆ ಬೇಕು? ಅಧಿಕಾರದಲ್ಲಿದ್ದ ರಾಜಕಾರಣಿಗಳ ವೈಭವಯುಕ್ತ ಜೀವನವು ರಾಜಮಹಾರಾಜರನ್ನು ನಾಚಿಸುವ ಮಟ್ಟದಲ್ಲಿದೆ. ಇದು ರಾಜಕಾರಣಿಗಳದಾಯಿತು.

ಇನ್ನು ಕಾರ್ಮಿಕ ಧುರೀಣರೆಂದೆನಿಸುವ ಪುಢಾರಿಗಳ ಹಣೆಬರಹವು ಜದೇ. ಕಾರ್ಮಿಕರ ಉನ್ನತಿಗಾಗಿ ದುಡಿವೆನೆಂದು ಹೇಳುವ ಅವರು ಎಷ್ಟೋ ಸಲ ತಮ್ಮ ರಾಜಕೀಯ ಉದ್ದೇಶ ಸಾಧಿಸಲು ಕಾರ್ಮಿಕರನ್ನು ನೆಪವಾಗಿಸುವುದೂ ಉಂಟು. ಕಾರ್ಮಿಕರಿಗೆ ಇಷ್ಟದ ಆಸೆ ತೋರಿಸಿ ಸಂಪು ಹೂಡಲು ಹೇಳಿ, ಆತ್ತ ಮೂಲಕರಿಂದ ಹಣ ತಿಂದು ಕೊನೆಗೆ ಕಾರ್ಮಿಕರನ್ನು ನಿರ್ನಾಮಗೊಳಿಸುವ ಪುಢಾರಿಗಳೂ ಇದ್ದಾರೆ. ತಮ್ಮ ಸ್ವಾರ್ಥಸಾಧನೆಗಾಗಿ ಸಂಪು ಹೂಡಲು ಪ್ರೇರೇಪಿಸಿ ರಾಷ್ಟ್ರದ ಉತ್ಪಾದನೆಗೆ, ಕಾರ್ಮಿಕರ ನಿಜವಾದ ಹಿತಕ್ಕೆ ಧಕ್ಕೆ ತರುವ ಪುಢಾರಿಗಳು ದೇಶಕ್ಕೂ ಕಾರ್ಮಿಕರಿಗೂ ಕಂಟಕಕಾರಿಗಳೇ ಸರಿ.

ಇನ್ನು ಭಂಡವಲುದಾರರು: ತಮ್ಮ ಲಾಭದ ಮೇಲೆಯೇ ಅವರ ದೃಷ್ಟಿ. ತನ್ನ ದೇಶಬಂಧುಗಳು ಉಸವಾಸ ಸಾಯುತ್ತಿದ್ದರೂ, ಇದ್ದ ಸರಕುಗಳನ್ನು ಇಲ್ಲದಾಗಿಸಿ, ಕಳ್ಳಪೇಟೆಗೆ ನಾಂದಿ ಹಾಕುವ ಮಹಾನುಭಾವರಿವರು. ಬರಗಾಲ, ಯುದ್ಧ, ಅಥವಾ ಯಾವುದೇ ನೈಸರ್ಗಿಕ ಅನಾಹುತಗಳೆಂದರೆ ಇವರಿಗೆ ಎಲ್ಲಿಲ್ಲದ ಆನಂದ. ಏಕೆಂದರೆ ಕಳ್ಳಪೇಟೆಯಲ್ಲಿ ಹತ್ತು ಪಟ್ಟು ಹಣವನ್ನು ಗಳಿಸಲು ಅವು ಪರ್ವಕಾಲ.

ಸ್ವಾತಂತ್ರ್ಯ ದಿನದ
ಹಾರ್ದಿಕ
ಶುಭಾಶಯಗಳು!

ಎಂ. ಚಿಕ್ಕಯ್ಯ ಶೆಟ್ಟಿ

ಆನಂದ ಉಪಾಹಾರ ಗೃಹ

ನ್ಯೂ ಆರ್ಥರ್ ರೋಡ್, ತಾರ್‌ದೇವ್,
ಬೊಂಬಾಯಿ—34

ಶ್ರೀ ಸಂಜೀವ ಲಕ್ಷ್ಮೇಶ್ವರ

ಆತ್ಮ ವಿಶ್ಲೇಷಣೆ

ಸಾಮಾಜಿಕವಾಗಿ ನಮ್ಮಲ್ಲಿ ಆದ ಪ್ರಗತಿ ಎಷ್ಟು ಎಂಬುದು ವಿಚಾರಣೀಯವೇ ಸರಿ. ಸ್ವಾತಂತ್ರ್ಯ ದೊರೆತು ಈ ೩೫ ವರ್ಷಗಳ ದೀರ್ಘ ಕಾಲದಲ್ಲಿ ಆ ಸ್ವಾತಂತ್ರ್ಯ ದೊರಕಿಸಲು ಜೀವ ತೆತ್ತ ಸಾವಿರಾರು ಜನರಿಗೆ ನಾವೆಷ್ಟು ಶ್ರದ್ಧಾಂಜಲಿ ಅರ್ಪಿಸಿದ್ದೇವೆ? ಅವರನ್ನು ಸ್ಮರಿಸಿದ್ದೇವೆ? ಅವರಿಗೆ ಸದ್ಗತಿ ಶಾಂತಿ ದೊರೆಯಲಿ ಎಂದು ಮನಃಪೂರ್ವಕವಾಗಿ ದೇವರಲ್ಲಿ ಪ್ರಾರ್ಥಿಸಿದ್ದೇವೆ? ನಮಗೆ ದೊರೆತ ಸ್ವಾತಂತ್ರ್ಯವು ಅವರ ಬಲಿದಾನದ ಫಲ ಎಂಬುದನ್ನು ಮರೆಯಬಾರದು.

ಸ್ವಾತಂತ್ರ್ಯ ದೊರೆತು ಈ ೩೫ ವರ್ಷಗಳ ಕಾಲದಲ್ಲಿ ಆ ಸ್ವಾತಂತ್ರ್ಯ ದೊರಕಿಸಲು ಜೀವ ತೆತ್ತ ಸಾವಿರಾರು ಜನರಿಗೆ ನಾವೆಷ್ಟು ಶ್ರದ್ಧಾಂಜಲಿ ಅರ್ಪಿಸಿದ್ದೇವೆ? ಅವರನ್ನು ಸ್ಮರಿಸಿದ್ದೇವೆ? ಅವರಿಗೆ ಸದ್ಗತಿ ಶಾಂತಿ ದೊರೆಯಲಿ ಎಂದು ಮನಃಪೂರ್ವಕವಾಗಿ ದೇವರಲ್ಲಿ ಪ್ರಾರ್ಥಿಸಿದ್ದೇವೆ? ನಮಗೆ ದೊರೆತ ಸ್ವಾತಂತ್ರ್ಯವು ಅವರ ಬಲಿದಾನದ ಫಲ ಎಂಬುದನ್ನು ಮರೆಯಬಾರದು.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ತಮ್ಮ ಸರ್ವಸ್ವವನ್ನು ಕಳೆದುಕೊಂಡು ನಿರ್ಗತಿಕರಾಗಿದ್ದ ದೇಶಾಭಿಮಾನಿಗಳಿದ್ದಾರೆ. ಅವರೇ ನಿಜವಾದ ಅಭಿಮಾನಿಗಳು. 'ದೇಹ' ಎಂದು ಸಹಾಯ ಯಾಚಿಸದೇ ತಾವು ಕಳೆದುಕೊಂಡದ್ದು ದೇಶಕ್ಕಾಗಿ ಎಂದು ತಿಳಿದು ಆನಂದಕ್ಕೆ ಪಶ್ಚಾತ್ತಾಪ ಪಡದೆ, ನಿರ್ಗತಿಕರಂತೆ ಜೀವನ ಸಾಗಿಸಿದ ಅನೇಕಾನೇಕ ದೇಶಾಭಿಮಾನಿಗಳು ಇಂದು ಕೂಡ ಉದಾಹರಣೆಗೆ ದೊರೆಯುತ್ತಾರೆ. ಅವರಿಗೆ ಕೀರ್ತಿ, ಹಣ, ಅಧಿಕಾರಗಳ ಲಾಲಸೆ ಇಲ್ಲ. ತಾವು ಮಾಡಿದ ಮಹಾತ್ಯಾಗದ ಕಲ್ಪನೆ ಯಾರಿಗೂ ತಿಳಿಯಗೊಡದೆ ಕಡು ಬಡವರಾಗಿ ಅಸು ನೀಗಿದ ಮಹಾನ್ನ ವ್ಯಕ್ತಿಗಳಿದ್ದಾರೆ.

ಅವಕ್ಕೆ ತದ್ವಿರುದ್ಧವಾಗಿ, ಯಾವುದೊ ಪುರಾತನ ಕಾಲದಲ್ಲಿ ನಾಲ್ಕುದಿನ ಜೈಲು ಕಂಡಿದ್ದನ್ನೇ ಆರ್ಹತೆಯೆನ್ನಾಗಿಸಿ ತಮ್ಮ ಕಪಟ ನೀತಿಯಿಂದ ಜನರ ಕಣ್ಣಲ್ಲಿ 'ದೇಶ ಸೇವೆ' ಎಂದು ಮಣ್ಣೆರಚಿ ಇಂದು ಪುಢಾರಿಗಳಾಗಿ ರಾಜ ವೈಭವದಲ್ಲಿ ಮೆರೆಯುವ ವರೂ ಇದ್ದಾರೆ. ಅವರಿಗೆ ಎಲ್ಲಿಲ್ಲದ ಮರ್ಯಾದೆ ದೊರೆಯುತ್ತದೆ. ಅವರಿಗೆ ನಿಜವಾಗಿ ಸ್ವಾರ್ಥತ್ಯಾಗ ಮಾಡಿದವರ ಬಗ್ಗೆ ಏಳ್ನೂಟ ಕನಿಕರ, ಗೌರವ ಇಲ್ಲ. ಜನ ಸಾಮಾನ್ಯರ ಹಿತ ಸಾಧನೆಯೇ ತನ್ನ ಗುರಿ ಎಂಬ ಟೊಳ್ಳು ಮಾತಿನಿಂದ ಅಧಿಕಾರದಿಂದ ಅಧಿಕಾರಕ್ಕೆ ಏರುತ್ತ ಹಣಗಳಿಸುವ ಕಪಟ ರಾಜಕಾರಣಿಗಳಿಗೆ ಕೊರತೆ ಇಲ್ಲ. ಜನಸಾಮಾನ್ಯರ ಪ್ರತಿನಿಧಿಗಳಾದ ಇವರಿಗೆ ರಾಜ ವೈಭವ, ಎರ್ ಕಂಡಿಶನ್ ಮಹಲುಗಳೇಕೆ ಬೇಕು? ಅಧಿಕಾರದಲ್ಲಿದ್ದ ರಾಜಕಾರಣಿಗಳ ವೈಭವಯುಕ್ತ ಜೀವನವು ರಾಜಮಹಾರಾಜರನ್ನು ನಾಚಿಸುವ ಮಟ್ಟದಲ್ಲಿದೆ. ಇದು ರಾಜಕಾರಣಿಗಳದಾಯಿತು.

ಇನ್ನು ಕಾರ್ಮಿಕ ಧುರೀಣರೆಂದೆನಿಸುವ ಪುಢಾರಿಗಳ ಹಣೆಬರಹವು ಜದೇ. ಕಾರ್ಮಿಕರ ಉನ್ನತಿಗಾಗಿ ದುಡಿವೆನೆಂದು ಹೇಳುವ ಅವರು ಎಷ್ಟೋ ಸಲ ತಮ್ಮ ರಾಜಕೀಯ ಉದ್ದೇಶ ಸಾಧಿಸಲು ಕಾರ್ಮಿಕರನ್ನು ನೆಪವಾಗಿಸುವುದೂ ಉಂಟು. ಕಾರ್ಮಿಕರಿಗೆ ಇಷ್ಟದ ಆಸೆ ತೋರಿಸಿ ಸಂಪು ಹೂಡಲು ಹೇಳಿ, ಆತ್ತ ಮೂಲಕರಿಂದ ಹಣ ತಿಂದು ಕೊನೆಗೆ ಕಾರ್ಮಿಕರನ್ನು ನಿರ್ನಾಮಗೊಳಿಸುವ ಪುಢಾರಿಗಳೂ ಇದ್ದಾರೆ. ತಮ್ಮ ಸ್ವಾರ್ಥಸಾಧನೆಗಾಗಿ ಸಂಪು ಹೂಡಲು ಪ್ರೇರೇಪಿಸಿ ರಾಷ್ಟ್ರದ ಉತ್ಪಾದನೆಗೆ, ಕಾರ್ಮಿಕರ ನಿಜವಾದ ಹಿತಕ್ಕೆ ಧಕ್ಕೆ ತರುವ ಪುಢಾರಿಗಳು ದೇಶಕ್ಕೂ ಕಾರ್ಮಿಕರಿಗೂ ಕಂಟಕಕಾರಿಗಳೇ ಸರಿ.

ಇನ್ನು ಭಂಡವಲುದಾರರು: ತಮ್ಮ ಲಾಭದ ಮೇಲೆಯೇ ಅವರ ದೃಷ್ಟಿ. ತನ್ನ ದೇಶಬಂಧುಗಳು ಉಸವಾಸ ಸಾಯುತ್ತಿದ್ದರೂ, ಇದ್ದ ಸರಕುಗಳನ್ನು ಇಲ್ಲದಾಗಿಸಿ, ಕಳ್ಳಪೇಟೆಗೆ ನಾಂದಿ ಹಾಕುವ ಮಹಾನುಭಾವರಿವರು. ಬರಗಾಲ, ಯುದ್ಧ, ಅಥವಾ ಯಾವುದೇ ನೈಸರ್ಗಿಕ ಅನಾಹುತಗಳೆಂದರೆ ಇವರಿಗೆ ಎಲ್ಲಿಲ್ಲದ ಆನಂದ. ಏಕೆಂದರೆ ಕಳ್ಳಪೇಟೆಯಲ್ಲಿ ಹತ್ತು ಪಟ್ಟು ಹಣವನ್ನು ಗಳಿಸಲು ಅವು ಪರ್ವಕಾಲ.

ವಿದ್ಯಾರ್ಥಿಗಳು: ವಿದ್ಯಾರ್ಜನೆಯು ತಮ್ಮ ಗುರಿ ಎಂಬುದನ್ನು ಅವರು ಮರೆತಂತಿದೆ. ಯಾವುದೇ ಅನಮ್ಯಜಸ ಕಾರಣಕ್ಕಾಗಿ ಮುಷ್ಕರ ಹೂಡುವುದು, ಶೇರಾಮ್ ಮಾಡುವುದು. ದೇಶದ ಸಂಪತ್ತನ್ನು ಧ್ವಂಸಗೊಳಿಸುವಂಥ ಹೀನ ಕಾರ್ಯಗಳು ಒಂದು ಬಗೆಯ ಫ್ಯಾಶನ್ ಆಗಿವೆ. ಇಂಥವರಿಗೆ ಯಾವುದಾದರೂ ರಾಜಕೀಯ ಪಕ್ಷವು ಬೆಂಬಲ ಸೂಡಿತೋ ಮುಗಿದೇ ಹೋಯಿತು. ಮಂಗನಿಗೆ ಸೆರೆ ಕುಡಿಸಿದಂತಾಗುವುದು.

ಸರಕಾರಿ ಅಧಿಕಾರಿಗಳು: ಸ್ವಲ್ಪೇ ಸಮಯದಲ್ಲಿ ಸಿರಿವಂತರಾಗಲು ಹಾಗೂ ಇಷ್ಟ ಪಡದೆ ಹಣಗಳಿಸುವುದು ಅವರ ಜೀವನ ಧ್ಯೇಯವಾಗಿದೆ. ಲಂಚಗುಳಿತನ ನೂರಿನಿಂದ ಕೆಳಗಿನವರೆಗೆ ಜಳದು ಬಂದಿದೆ. ಯಾವುದೇ ಚಿಕ್ಕ ಕೆಲಸಕ್ಕೂ ಕೈ ಬಿಸಿ ಮಾಡದೆ ಉಪಾಯವಿಲ್ಲ. ಕೆಲಸ ತಪ್ಪಿಸುವುದು, ಜನ ಸಾಮಾನ್ಯರೆಂದರೆ ಚಡಪಡಿಸಿ ಮಾಡುವುದು ಇವರಿಗೆ ಅಭ್ಯಾಸವಾಗಿದೆ. ಇಂಥವರಿಂದ ಜನಸಾಮಾನ್ಯರ ಉದ್ಧಾರ ಜದೇಗೆ ಶಕ್ಯ?

ಜನಸಾಮಾನ್ಯರು: ದೇಶಾಭಿಮಾನ, ದೇಶೋದ್ಧಾರಕ್ಕಾಗಿ ಸ್ವಾರ್ಥ ತ್ಯಾಗಗಳು ಕಂಡರಿಯದ ವಿಷಯಗಳಾಗಿವೆ. ಎರಡೂವರೆ ಗಂಟೆಗಳವರೆಗೆ ಜರೆ ಬತ್ತಲೆ ಹೆಣ್ಣಿನ ನೃತ್ಯ, ತಲೆಹಿಡಿಯುವ ಸಂಗೀತ, ಜಸಂಬದ್ಧ ಕತೆಗಳಿಂದೊಡಗೂಡಿದ ಚಿತ್ರನೋಡಲು ಬೇಸರಿಯದ ಈ ಭಾರತದ ಪ್ರಜೆಗಳು ಎರಡು ನಿಮಿಷಗಳ ಸ್ವಲ್ಪ ಅವಧಿ ರಾಷ್ಟ್ರಧ್ವಜ, ರಾಷ್ಟ್ರಗೀತೆಗೆ ಮೌನಕೊಡಲು ಎದ್ದು ನಿಲ್ಲುವುದು ತಾತ್ಸಿ ತವಾಗಿಲ್ಲ. ರಾಷ್ಟ್ರಧ್ವಜ, ರಾಷ್ಟ್ರಗೀತೆಗಳ ಜೆಲೆ ತರಿಯದ ಇವರಿಗೆ ಸ್ವಾತಂತ್ರ್ಯದ ರಜತ ಮಹೋತ್ಸವವು ಜಷ್ಟೇ. ಚಿನ್ನದ ಹಬ್ಬವ ಸಡಗರವೂ ಜಷ್ಟೇ. ನಮ್ಮ ದೇಶದ ಬಗ್ಗೆ ಇವರಿಗೆ ಅಭಿಮಾನ ಹುಟ್ಟುವವರೆಗೆ ಯಾವ ಕ್ಷೇತ್ರದಲ್ಲಿ ಎಷ್ಟು ಪ್ರಗತಿಯಾದರೂ ವ್ಯರ್ಥವೇ. ಇದನ್ನರಿತು ಈ ಪ್ರಜ್ಞೆಯನ್ನು ಪಡೆಯಲು ಇನ್ನಾದರೂ ಪ್ರಯತ್ನಿಸಲು ತಾಂತಿನ ಈ ಶುಭಸಂದರ್ಭದಲ್ಲಿ ಮನಸ್ಸು ಮಾಡುವಾ.

ದೇಶದ ಇತಿಹಾಸದಲ್ಲಿ ೩೫ ವರ್ಷಗಳ ಕಾಲವೇನೂ ಬಹಳ ಕಡಿಮೆಯೆಂದು ಒಪ್ಪುವ ಶ್ರೀ ಲಕ್ಷ್ಮೇಶ್ವರರು ನಮ್ಮ ರಾಜ್ಯಕೀಯ ಸಮಾಜ, ಉದ್ಯಮ, ಬಂಡವಳ ಹೂಡಿಕೆ ಅವಾರು ರಂಗಗಳು ನಡೆದು ಬರುತ್ತಿರುವ ರೀತಿಯಿಂದ ನಮನಮೊಂದು ಆತ್ಮವಿಶ್ಲೇಷಣೆಗೆ ಗಟ್ಟಿಯಾಗಿ ಕರೆ ನೀಡಿದ್ದಾರೆ.

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ
ಬೆಲೆ 0-75 ಪೈಸೆ ಮಾತ್ರ.
ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.
ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್) ಉಡುಪಿ, ದ. ಕ.

ಏರಾಟ, ಸ್ವಾರ್ಥ ಸಾಧಕರ ಜೋರಾಟ ನಡೆದೇ ನಡೆಯುತ್ತದೆ.

ಶೀಲಗೇಡಿಗರ ಸಂತೆ

ಸಾಮಾನ್ಯ ಒಂದು ಸಂಸ್ಥೆ—ಪಕ್ಷಕ್ಕೆ ಒಂದು ನಿಯಮ, ರೀತಿಗಳಿರುತ್ತವೆ. ರಾಜಕೀಯ ಪಕ್ಷಕ್ಕಂತೂ ಜದು ತೀರ ಅವಶ್ಯ. ಹೀಗಿರುವಾಗ ದಿನಕ್ಕೊಂದು ಪಕ್ಷ ಸೇರುವ ಅಧಿಕಾರ ಪ್ರಿಯರದೇ ಒಂದು ಸಂತೆಯಾದರೆ ಜಲ್ಲೇನು ಸಾಧ್ಯವಾಗುತ್ತದೋ ತಿಳಿಯದು. ಯಾರಿಗೆ ಯಾವ ಅಧಿಕಾರ, ಯಾರು ಎಷ್ಟು ಗಳಿಸಿದರು ಇದೂ ಚಿಂತೆಯಾದ ಈ ಸಂತೆಯಲ್ಲಿ ಜನ ಸೇವೆಯು ಹಂಬಲ ಯಾರಿಗೆ ಬರಬೇಕು?

ಪ್ರಜಾಪ್ರಭುತ್ವದ ಪ್ರನರ್ಜನ್ಮ ಸ್ಥಿತಿ ನೀತಿಗಳಿಗೆ ಇಪ್ಪು ಎಷ್ಟರ ಮಟ್ಟಿಗೆ ಪೋಷಕವೋ ತಿಳಿಯದು. ಆದರೂ ಇಷ್ಟು ಮಾತ್ರ ಖಂಡಿತವಾಗಿ ಹೇಳಬಹುದು. ಆದರ ಆರೋಗ್ಯಕರ ಬೆಳವಣಿಗೆಗೆ ಇವು ಸ್ವಲ್ಪವೂ ಸಹಾಯಕವಾಗದು. ಇಂದಿನ ಪರಿಸ್ಥಿತಿಯಲ್ಲಿ ಜನತೆಗೆ ಅವಶ್ಯಕವಾದುದೇನು? ಅವರ ಸಮಸ್ಯೆ ಸಂಕಷ್ಟಗಳ ಅರಿವಿನಿಂದ ಪರಿಹಾರಕ್ಕೆ ಸೂಕ್ತ ಪ್ರಯತ್ನ ಕೈಗೊಳ್ಳುವ ಪಕ್ಷ ಹೆಚ್ಚುಕಾಲ ಬದುಕಿಕೊಂಡೀತು. ಒಮ್ಮೆ ಅಧಿಕಾರ ಜದಕ್ಕೆ ಸಿಕ್ಕದಿದ್ದರೂ ಜನ ಸೇವೆಯ ಚಾರಿತ್ರ್ಯ ಸಾವಿತ್ರ್ಯದಿಂದ ಅದರ ಪ್ರಭಾವ ಹಿಗ್ಗಬಹುದೇ ಹೊರತು ಎಂದೂ ಕುಗ್ಗಲಾರದು. ಇಂಥ ಪಕ್ಷಗಳಿಂದಲೇ ಪ್ರಜಾತಂತ್ರ ದೇಶದಲ್ಲಿ ಉಳಿದುಕೊಂಡೀತು.

ಶ್ರೀ ಧರ್ಮವೀರ ಸಿಂಹ

(ಕೇಂದ್ರ ಜಾರ್ಜ್–ಪ್ರಸಾರ ಶಾಖೆಯ ಉಪಸಚಿವ)

ಸಾಮಾಜಿಕ ಬದಲಾವಣೆಯಲ್ಲಿ ಸಾಮೂಹಿಕ ಮಾಧ್ಯಮಗಳ ಪಾತ್ರ

ಪತ್ರಿಕೆ, ರೇಡಿಯೋ, ಸಿನಿಮಾ, ಟೆಲಿವಿಜನ್, ಪುಸ್ತಕ ಮೊದಲಾದ ಸಾಮೂಹಿಕ ಮಾಧ್ಯಮಗಳು ಜಗತ್ತಿನಲ್ಲಿ ಸಾಮಾಜಿಕ ಬದಲಾವಣೆಗೆ ನಾಂದಿ ಹಾಡಿವೆ.

ಭಾರತದಲ್ಲಿ ಕಳೆದ ಕೆಲವು ದಶಕಗಳಿಂದ ಅಭೂತಪೂರ್ವ ಪರಿವರ್ತನೆಯ ಸುಳಿಗೆ ಸಿಲುಕಿದೆ. ಇಂದು ದೇಶದ ಎಲ್ಲೆಡೆಯಲ್ಲೂ ಕಸಿಸ್ಪ ಮಟ್ಟದಲ್ಲಿ ಪರಿವರ್ತನೆಯಾಗಿದೆ. ಈಗ ಜನರು ಭವಿಷ್ಯತ್ತಿನ ಬಗ್ಗೆ ಆಶೋತ್ತರ ಹೊಂದಿದ್ದಾನೆ. ಹೊಸ ಪರಿವರ್ತನೆಯ ಮಹಾಕಾರ್ಯದಲ್ಲಿ ಸಾಮೂಹಿಕ ಮಾಧ್ಯಮಗಳ ಪಾತ್ರ ಅದ್ವಿತೀಯವಾಗಿದೆ.

ಸಾಮೂಹಿಕ ಮಾಧ್ಯಮಗಳು ಸಮಾಜ ಪರಿವರ್ತನೆಯೊಂದಿಗೆ ವಿಕಾಸಗೊಂಡಿದೆ. ಭಾರತದಲ್ಲಿ ಪ್ರಕಟವಾಗುವ ದಿನಪತ್ರಿಕೆಗಳ ಪ್ರಸಾರ 1953ರಲ್ಲಿ 20ಅಷ್ಟಿದ್ದುದು 1970ರಲ್ಲಿ 84.22ಲಕ್ಷಕ್ಕೇರಿತು ಕಳೆದ 25 ವರ್ಷಗಳಲ್ಲಿ ರೇಡಿಯೊ ಶ್ರೋತೃಗಳ ಸಂಖ್ಯೆ 28ಲಕ್ಷದಿಂದ 11ಕೋಟಿಗೇರಿದೆ. ಚಲನಚಿತ್ರ ಮಂದಿರಗಳ ಸಂಖ್ಯೆ 1384 ರಿಂದ 7123ಕ್ಕೇರಿದೆ. ಭಾರತದಲ್ಲಿ ವರ್ಷಂ ಪ್ರತಿ ತಯಾರಾಗುವ ಚಲನ ಚಿತ್ರಗಳ ಸಂಖ್ಯೆ 281ರಿಂದ 400ಕ್ಕೇರಿದೆ.

ಸಮಾಜ ಪರಿವರ್ತನೆಯ ಸಂಕೇತ

ಸ್ವಾತಂತ್ರ್ಯದ ತರುವಾಯ ಸಂಭವಿಸಿದ ವಿದೇಶೀ ಆಕ್ರಮಣದೆದುರು ಇಡೀ ದೇಶ ಒಂದಾಗಿ ನಿಲ್ಲಿದು ನಿಂತುದು ಸಮಾಜ ಪರಿವರ್ತನೆಯ ಮಹಾ ಸಂಕೇತವಾಗಿದೆ. ಜನರಲ್ಲಿ ಆಂತರಿಕ ಭೇದಗಳಿದ್ದರೂ, ವಿರೋಧಿ ಗುಂಪುಗಳಿದ್ದರೂ ಅವೆಲ್ಲವನ್ನೂ ಮರೆತು ಒಂದಾದುದು ಅದ್ಭುತವೇ ಸೈ. ಇದರಲ್ಲಿ ಸಾಮೂಹಿಕ ಮಾಧ್ಯಮದ ಪಾತ್ರ ಅನ್ಯಾದೃಶವಾಗಿದೆ.

ಕುಟುಂಬಯೋಜನೆ ಬಗ್ಗೆ ಜನತೆಯ ಮನೋಭಾವ ಬದಲಾಯಿಸುವುದರಲ್ಲಿ ಪತ್ರಿಕೆಗಳು, ರೇಡಿಯೊ ಮತ್ತು ಚಲನಚಿತ್ರಗಳ ಪ್ರಭಾವ ಅತ್ಯಂತ ಪರಿಣಾಮಕಾರಿಯಾಗಿದೆ. ಈ ಮಾಧ್ಯಮಗಳು ವಹಿಸಿರುವ ಪಾತ್ರದಿಂದಲೇ ಹಸಿರು ಕ್ರಾಂತಿಯ ಯಶೋ ಸಾಧನೆಯೂಗಿದೆ.

ಸಂಸ್ರದಾಯಕ್ಕೆ ಶರಣಾಗಿರುವ ಸಮಾಜದಲ್ಲಿ ಸರಂಪರೆಯನ್ನು ಕೆಡಗಣಿಸುವುದು ಅಸಾಧ್ಯ. ಈ ಹಿನ್ನೆಲೆಯಲ್ಲಿ ಮನೋಭಾವದಲ್ಲಿ ಅಮೂಲಾಗ್ರ ಬದಲಾವಣೆ ಮಾಡಲಾಗುತ್ತಿದೆ. ಈ ಕಾರ್ಯದಲ್ಲಿ ಸಾಮೂಹಿಕ ಮಾಧ್ಯಮಗಳು ಪ್ರಭಾವಶಾಲಿ ಪಾತ್ರವಹಿಸುತ್ತಿವೆ.

ಸಾಮಾಜಿಕ ಹೊಣ್ಣೆ

ಆರ್ಥಿಕ ಮತ್ತು ಸಾಮಾಜಿಕಾಭಿವೃದ್ಧಿಗೆ ಸಾಮೂಹಿಕ ಮಾಧ್ಯಮಗಳು ಪರಿಣಾಮಕಾರಿ ಸಾಧನೆಗಳಾಗಬೇಕಾದರೆ ಅವುಗಳು ಸ್ಥಳೀಯ ಬದಲಾವಣೆಗಳನ್ನು ಪ್ರಭಾವಪೂರ್ಣವಾಗಿ ಬಿಂಬಿಸಬೇಕಾಗುತ್ತವೆ. ಈ ಕಾರ್ಯಕ್ರಮಗಳನ್ನು ಸ್ಥಳೀಯ ಸಂಸ್ಕೃತಿಯ ನಿಕಟ ಪರಿಚಯವಿರುವವರು ಸಿದ್ಧಪಡಿಸಬೇಕಾಗುತ್ತದೆ. ಈ ಕಾರ್ಯಕ್ರಮಗಳ ಬಗ್ಗೆ ಜನತೆಯ ಪ್ರತಿಕ್ರಿಯೆಯನ್ನು ತಿರುಚುಕೊಂಡು ಸೂಕ್ತ ಬದಲಾವಣೆಗಳನ್ನು ಮಾಡಬೇಕಾಗುತ್ತದೆ.

ಸಾಮೂಹಿಕ ಮಾಧ್ಯಮಗಳ ಮೂಲಕ ಜನರಿಗೆ ಸೂಕ್ತ ಶಿಕ್ಷಣ ನೀಡಿ ಅವರ ಸಾಮಾಜಿಕ ಧೋರಣೆಯನ್ನು ಬದಲಾಯಿಸಲಾಗುತ್ತಿದೆ. ಸಾಂಪ್ರದಾಯಿಕ ಬೇಸಾಯಕ್ಕೆ ಅಂಟಿಕೊಂಡಿರುವ ಅರ್ಥ ವ್ಯವಸ್ಥೆಯನ್ನು ಆಧುನಿಕ ವೈಜ್ಞಾನಿಕ ವಿಧಾನಗಳಿಂದ ರೂಪಾಂತರಿಸಲಾಗುತ್ತಿದೆ. ಈ ರೀತಿ ಸರ್ಕಾರ ಜನರಲ್ಲಿ ಸಾಮಾಜಿಕ ಪ್ರಜ್ಞೆ ಮೂಡಿಸಿ ಅವರು ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಮಾಡುತ್ತಿದೆ.

ಪುಸ್ತಕ, ದಿನಪತ್ರಿಕೆ ಮತ್ತು ಚಲನಚಿತ್ರಗಳಿಂದ ನಾವೆಷ್ಟು ಕಲಿತುಕೊಳ್ಳುತ್ತಿದ್ದೇವೆಂಬುದನ್ನು ನಾವು ಮರೆತು ಬಿಡುತ್ತೇವೆ. ಪುಸ್ತಕಗಳು ಮೂರು ಶತಮಾನಗಳಿಂದ ಜ್ಞಾನ ಸಂಚಯದ ಮೂಲವಾಗಿವೆ. ದಿನಪತ್ರಿಕೆಗಳು ವಿಸ್ತೃತ ಜಗತ್ತಿನ ಅರಿವು ಮೂಡಿಕೊಡುತ್ತಿವೆ. ಆದ್ದರಿಂದ ಈ ಮಾಧ್ಯಮಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗಿದೆ.

ರಾಷ್ಟ್ರ ಪುನರ್ರಚನೆ

ಭಾರತದಲ್ಲಿ ಕೇವಲ ಶೇಕಡ 30ರಷ್ಟು ಅಕ್ಷರಸ್ಥರಿರುವುದರಿಂದ ದಿನಪತ್ರಿಕೆಗಳ ಪ್ರಸಾರ ಸೀಮಿತಗೊಂಡಿದೆ. ರೇಡಿಯೊ ದೇಶದ ಮೂಲೆ ಮೂಲೆಗೂ ಸಂದೇಶ ಸಾರುವ ಸಾಮರ್ಥ್ಯ ಹೊಂದಿದೆ ಈ ಮಾಧ್ಯಮವು ಜನರಂಜನೆಯ ಮೂಲಕ ಶಿಕ್ಷಣ ನೀಡುವ ಸೌಲಭ್ಯ ಪಡೆದಿದೆ. ಆದ್ದರಿಂದ ದೇಶದ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ರೇಡಿಯೊ ಶ್ರೋತೃಗಳು ಸಾಮೂಹಿಕವಾಗಿ ಪ್ರಸಾರ ಕಾರ್ಯಕ್ರಮದಲ್ಲಿ ಸುಧಾರಣೆ ಮಾಡಲಾಗುತ್ತಿದೆ. ನಾಲ್ಕನೇ ಯೋಜನೆಯ ಕೊನೆಯಲ್ಲಿ ದೇಶದ ಶೇಕಡ 93ರಷ್ಟು ಜನರಿಗೆ ಮೀಡಿಯಂ ತರಂಗ ಪ್ರಸಾರದ ಸೌಲಭ್ಯ ದೊರಕುತ್ತದೆ.

ಟೆಲಿವಿಜನ್ ಜನರಿಗೆ ದೂರದ ಜಗತ್ತಿನ ಪ್ರತ್ಯಕ್ಷ ದರ್ಶನ ಮಾಡಿಸುವ ಅಪೂರ್ವ ಸಾಮರ್ಥ್ಯ ಹೊಂದಿದೆ. ಆದ್ದರಿಂದ ಇನ್ನು ಸತ್ತು ವರ್ಷಗಳೊಳಗೆ ಟೆಲಿವಿಜನ್ ಪ್ರಸಾರ ವಿಸ್ತರಿಸಲಾಗುತ್ತಿದೆ.

ರಾಷ್ಟ್ರೀಯ ಪುನಾರಚನೆಯ ಮಹಾ ಕಾರ್ಯದಲ್ಲಿ ಸಾಮೂಹಿಕ ಮಾಧ್ಯಮಗಳ ಕಾರ್ಯ ಸಮನ್ವಯ ಅತ್ಯಗತ್ಯ.

●●

ಮುಂದುವರಿಯುತ್ತದೆ

ಶ್ರೀ ಶಿವಮುಂಜೆ ಪಡಾರಿ

ಎರಡು ಕಥೆಗಳು

ಈ ಕಥೆಗಳನ್ನು ಓದಿರಿ, ತಿಳಿದುಕೊಳ್ಳಿರಿ. ಹೇಳುವುದೇಕೆ, ಬರೆಯುವುದೇಕೆ?

ಸಮರ್ಥನೆ

ಒಬ್ಬ ರೈತನು ದಿನವಾಗಲೂ ರಾತ್ರಿ ತುಂಬ ತಡವಾಗಿ ಮನೆಗೆ ಬರುತ್ತಿದ್ದನು. ಮನೆಯಲ್ಲಿ ಕಾದು ಕುಳಿತಿದ್ದ ಹೆಂಡತಿಗೆ ತಾನೊಂದು ಸಭೆಗೆ ಹೋಗಿ ಬಂದುದಾಗಿ ತಿಳಿಸುತ್ತಿದ್ದನು. ಆದರೆ ಆ ಪತ್ನಿ ಏನೊಂದೂ ವಿಚಾರಿಸದೆ ಅವಳು ಮೌನವಾಗಿರುತ್ತಿದ್ದಳು.

ಒಂದು ರಾತ್ರಿ ಆಕೆ ತನ್ನ ಗಂಡನೊಂದಿಗೆ—"ನೀವು ಸಭೆಯಲ್ಲಿ ಯಾವ ವಿಷಯದ ಕುರಿತು ಚರ್ಚಿಸುತ್ತೀರಿ?" ಎಂದು ವಿಚಾರಿಸಿದಳು.

"ನಾನೆಲ್ಲ ಸೇರಿ ಎಲ್ಲ ರೈತರೂ ಇಬ್ಬರು ಹೆಂಡಿರನ್ನು ಇಟ್ಟುಕೊಳ್ಳುವ ಬಗ್ಗೆ ಆಲೋಚಿಸುತ್ತಿದ್ದೇವೆ" ಎಂದ ರೈತ.

ರೈತನ ಪತ್ನಿ ಸಿಟ್ಟಿನಿಂದ ಕೆಂಪಾದಳು—"ಅಲ್ರೀ, ನಿಮ್ಗೇನಾದ್ರೂ ಬುದ್ಧಿಯಿದೆಯೇನ್ರಿ? ನಮ್ಮ ಮನೆಯೊಳ್ಗೆ ಸ್ಥಳಾ ಎಲ್ಲಿದೆ? ನಮಗಿಬ್ರಿಗೆ ಉಳ್ಕೊಳ್ಳೋಕೆ ಸ್ಥಳಾ ಸಾಲ್ದು.'

ರೈತ ಕೇಳಿದರೂ ಕೇಳದವನಂತೆ ಮೌನವಾಗಿದ್ದನು.

ರೈತನ ಸಭೆ ಹಾಗೇ ನಡೆಯುತ್ತಿತ್ತು.

ಮತ್ತೊಂದು ದಿನ ರೈತನ ಪತ್ನಿ ಪುನಃ ಕೇಳಿದಳು—"ನೀವು ಇಷ್ಟು ದಿನಗಳಿಂದ ಏನೆಲ್ಲ ಮಾತಾಡ್ತೀರಾ ಸಭೆಯಲ್ಲಿ?"

'ಏನಿಲ್ಲಾ ಹೀಗೇ—ಈ ಊರಿನ ಪ್ರತಿಯೊಬ್ಬ ಹೆಂಗಸು ಎರಡೆರಡು ಗಂಡಂದಿರನ್ನು ಹೊಂದಿದ್ದರೆ ಹೇಗೆ? ಎಂಬು ಯೋಚಿಸುತ್ತಿದ್ದೇವೆ. ಆದರೆ ಏನು ಮಾಡೋಣ ನಮ್ಮ ಈ ಚಿಕ್ಕ ಮನೆಯಲ್ಲಿ ನಾಮಿಬ್ಬರು ವಾಸಿಸುತ್ತಿರುವುದೇ ಬಹುಕಷ್ಟದಿಂದ. ಇದರಲ್ಲೂ ಇನ್ನೊಬ್ಬ ಬಂದರೆ, ನಾವು ಏನು ಮಾಡುವುದು? ಸ್ಥಳಾ ಏನೇನೂ ಸಾಲದು' ಎಂದ ರೈತ.

'ಇಲ್ಲ ಇಲ್ಲ ಹಾಗೇನಿಲ್ಲ,' ಎಂದಳು ರೈತನ ಪತ್ನಿ. 'ನಾವು ಆ ಮೇಜನ್ನು ತುಸು ಹಿಂದಕ್ಕೆ ಸರಿಸಿ, ಪೆಟ್ಟಿಗೆ ಮತ್ತು ಬೇಡದ ಸಾಮಾನುಗಳನ್ನೆಲ್ಲ ಅಟ್ಟದ ಮೇಲೆ ಹಾಕಿಬಿಟ್ಟರಾಯಿತು. ಅನಂತರ ಸ್ಥಳವೇ ಸ್ಥಳ. ಅದಕ್ಕೆ ಯಾಕಷ್ಟು ಚಿಂತೆ? ನಾಳೆ ಈ ಸಲಹೆಯನ್ನು ನೀವು ಖಂಡಿತಾ ಸಮರ್ಥಿಸಿರಿ.'

(ರಾಕಾ ಪ್ರತಾಪಸಿಂಹ ಸಂಗ್ರಹಿಸಿದ ಹಂಗೇರಿಯ ಜಾನಪದ ಕತೆ)

ವಕೀಲ

ಬಿಹಳ ಸಮಯದ ಹಿಂದಿನ ಮಾತೇನಲ್ಲ. ಕುತರ್ಕ ತೀರ್ಥ ಪಂಡಿತ ರಾಮರಾಯರು ತನ್ನ ಸಮಯದ ಅದ್ವಿತೀಯ ವಕೀಲರಾಗಿದ್ದರು. ಅವರಿಗೊಬ್ಬಳು ಮಗಳಿದ್ದಳು. ಅನೇಕನ್ನು ಯಾರಾದರೊಬ್ಬ ಪ್ರತಿಭಾವಂತ ವಕೀಲನಿಗೇ ಮದುವೆ ಮಾಡಿಕೊಡಬೇಕೆಂಬ ಆಸೆ ಅವರದ್ದು.

ರಾಯರ ಇಚ್ಛೆ ತಿಳಿದ ಐದಾರು ವಕೀಲರು ಅವರ ಮನೆಗೆ ಬಂದು ತಮ್ಮ ತಮ್ಮ ಜಾತಕಗಳನ್ನು ಹೇಳತೊಡಗಿದರು. 'ಕಾನೂನಿಗೆ ಸಂಬಂಧಿಸಿದ ಒಂದು ಲಕ್ಷ ಗ್ರಂಥಗಳು ನನ್ನ ಲೈಬ್ರರಿಯಲ್ಲಿವೆ. ನಾನು ದಿನಕ್ಕೆ ಹತ್ತು ಗಂಟೆಗಳ ಕಾಲ ಅವುಗಳ ಅಧ್ಯಯನ ಮಾಡುತ್ತೇನೆ' ಎಂದ ಮೊದಲನೆಯವ.

"ಕ್ರಾಸ್ ಎಕ್ಸಾಮಿನೇಶನಿನಲ್ಲಿ ನನ್ನ ಪ್ರತಿಭೆಯನ್ನು ಹಿರಿ ಹಿರಿಯೆ ನ್ಯಾಯಾಧೀಶರೂ ಗೌರವಿಸಿದ್ದಿದೆ' ಎಂದುರಡನೆಯವ.

"ನ್ಯಾಯ ಮತ್ತು ಕಾನೂನಿನ ಸೂಕ್ಷ್ಮಗಳನ್ನು ನನ್ನಂತೆ ಅರಗಿಸಿ ಕೊಂಡಿರುವವರು ತಿಳಿದು ತೋರಿಸಬಲ್ಲವ ಇನ್ನೊಬ್ಬನಿಲ್ಲ' ಎಂದ ಮೂರನೆಯವನು.

ಎಲ್ಲರೂ ಅವರವರ ಯೋಗ್ಯತೆಯನ್ನು ತಿಳಿಸುತ್ತಿದ್ದರು. ಆದರೆ ಒಬ್ಬ ಯುವಕ ಮಾತ್ರ ಮೌನವಾಗಿದ್ದನು. ರಾಮರಾಯರು ಅವನ ಕಡೆಗೆ ತಿರುಗಿ—"ನೀನು ಏನೂ ಹೇಳಲಿಲ್ಲವಲ್ಲಾ? ನಿನ್ನ ಅಧ್ಯಯನ ಹೇಗೆ ಸಾಗಿದೆ?" ಎಂದು ವಿಚಾರಿಸಿದರು.

"ನೋಡಿ ಸರ್, ಗ್ರಂಥ, ಅಧ್ಯಯನ, ತರ್ಕಗಳ ತಲೆಹರಟೆಗೆ ನಾನು ಕೈಯೇ ಹಾಕುವುದಿಲ್ಲ. ನನ್ನದು ನೇರವಾದ ದಾರಿ. ನಾನು ಸಾಕ್ಷಿ ಮುರಿಯುತ್ತೇನೆ. ಆದುದರಿಂದ ನನ್ನ ಪ್ರಾಕ್ಟೀಸು ಇವರೆಲ್ಲರಿಗಿಂತ ಜೆನ್ನಾಗಿದೆ."

ರಾಯರು ತಮ್ಮ ಮಗಳ ಕೈಯನ್ನು ಅವನಿಗೇ ಒಪ್ಪಿಸಿದರೆಂದು ಬೇರೆ ಹೇಳಬೇಕೆ?

[ಶ್ರೀ ಪರಿಶಂಕರ ಪರಸಾಯೀ ಅವರ ಸಂಗ್ರಹದಿಂದ]

ಉಡ್ಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

Ex. Case 122/1971
in O. S. 82/51 R. A. 74/65

ಸುಬ್ರಾಯ ಭಟ್ಟ —ಅರ್ಜಿದಾರ

ಜಿತ್ತು

1. ರಾಮಕೃಷ್ಣ ಭಟ್ಟ, 2. ಮಂಜುನಾಥ ಭಟ್ಟ, ಶಂಕರ ಭಟ್ಟರ ಮಕ್ಕಳು, —ಎದ್ರಿರು

ಕುಂದಾಪುರ ತಾಲೂಕು ಉಪ್ಪುಂದ ಗ್ರಾಮದ ಆಕ್ಕೇರು ವಾಸಸ್ಥಾನ—

ಯಿವರೊಳಗೆ

3ನೇ ಎದ್ರಿಯೂವ ಅರ್ಜಿದಾರರಿಗೆ 4ರಿಂದ 8ನೇ ಎದ್ರಿರಾದ 1 . 2 ನೇ ಎದ್ರಿರು ವರ್ಷಕ್ಕೆ ರಿಂದ ಬರತಕ್ಕದ್ದಾಗಿರುವ ರೂಪ್ಯಾ 800–00ಕ್ಕೆ ಆರ್ಜಿದಾರನು ಯೂ ಅಮಲ್ದಾರಿ ಮೂಡಿ ನಾಲ್ಕು ಸಾರಿ ನೋಟೀಸಿಗೆ ತಪ್ಪಿಸಿಕೊಂಡ. ಮೇಲ್ಕಾಜ್ಞಿದನವರಿಗೆ– ಯೂ ನಂಬ್ರವನ್ನು ತಾ. 12.9.72 ಕ್ಕೆ ಯಿಟ್ಟರುವಾಗಿಯೂ. ಆ ದಿನ್ನ ಸದ್ರಿಯವರು ಅವರದ್ದೇನಾದರೂ ಅಕ್ಷೇಪಯಿದ್ರೆ ಅವರು ಈ ಕೋರ್ಟು ಮುಂದೆ ಹಾಜ್ರಾಗಿ ಜ್ಞಾಪೀರು ಮಾಡಿಕೊಳ್ಳಬೇಕಾಗಿಯೂ, ಇಲ್ಲವಾದ್ರೆ ಅವರ ಗೈರಾಜ್ರಿಯಲ್ಲಿ ನಂಬ್ರ ಏಕಪಕ್ಷವಾಗಿ ತೀರ್ಮಾನಿಸಲಾಗುವುದಾಗಿಯೂ ಯೂ ನೂಲ್ಕ ತಿಳಿಸಿಯದೆ.

(ಕೋರ್ಟು ಹುಕುಂ ಪ್ರಕಾರ)

B. Yogishwara Holla
Advocate for Petitioner

ನನ್ನದು ಈ ಸ್ವತಂತ್ರ ಭಾರತ

ನನ್ನದು ಈ ಸ್ವತಂತ್ರ ಭಾರತ—ನನ್ನದು,
ನಿನ್ನದು ಈ ಸ್ವತಂತ್ರ ಭಾರತ—ನಿನ್ನದು,
ಭಾರತೀಯನು ನಾನೆಂಬುವ ನಮ್ಮೆಲ್ಲರದು,
ನೆತೆಯುವ ಈ ಸ್ವತಂತ್ರ ಭಾರತ—ನಮ್ಮೆಲ್ಲರದು |ಪ|

೧

ಬ್ರಹ್ಮಾಂಡವೊಂದರಲಿ ದ್ವೀಪವಿದುಜಿಂಬು,
ಉತ್ತರದ ರಕ್ಷಣೆಗೆ ಶಂಭು,
ಸುತ್ತೆಲ್ಲ ಏಳ್ವ ತೆರೆಯಂಬು,
ಇವಳೆಮ್ಮ ಭೂಮಾತೆ ನಂಬು.
ದೇವಾಧಿ ದೇವ ವರಮಹಾದೇವ, ಭಕ್ತರಾಭಾವ, ನೈಗೊಂಡುದಿಲ್ಲೆ,
ಅವತಾರ ಗೈದೆ, ಶಿಷ್ಟರಕ್ಷಣ ಪೊರೆದು, ದುಷ್ಟರನು ತಂದು, ತಾ ನೆಲೆಪಡುದಿಲ್ಲೆ,
ಅವತಾರ ಕೃತ್ತು, ಆಗಿಹುದು ಮತ್ತು, ವಿಕಸನದ ಬಿತ್ತು, ವಿಜ್ಞಾನವಿದುವೆ,
ಪ್ರತ್ಯೇಕವಿದು ಒಂದು, ಕೂರ್ಮವದು ಮುಂದು, ವರಾಹವು ನಿಂದು,
ಮುಂಬರಿವು ಇದುವೆ,
ನರಸಿಂಹನಾಗಿ, ಕುಳ್ಳನವ ಬಾಗಿ, ಪರಶುವಿಜೆ ಯೋಗಿ, ತಾನಾದುದಿಲ್ಲೆ,
ಶ್ರೀರಾಮನಾಳ್ವ, ವರಕೃಷ್ಣ ಹೇಳಿ, ಆ ಬುದ್ಧ ಬಾಳಿ, ಬೆಳಕಿತ್ತುದಿಲ್ಲೆ,
ರಾಜ ರಾಜರನು, ಧರ್ಮತೇಜರನು, ಸತ್ಯಸಂಧರನು, ಪಡೆದ ಭಾರತವು,
ವೈಭವದಿ ಭೋಗ, ಭೋಗಗಳಲಿ ತ್ಯಾಗವೆನ್ನುವಾಯೋಗ ಮೆರೆದ ಭಾರತವು
ಅದುವೆನ್ನ ಭಾರತವು ಆ ಸ್ವತಂತ್ರ ಭಾರತವು!

೨

ಪೌರಾಣಿಕಾರಣ್ಯ ಮಾಗಿ ಹೋಗಿಹುದು,
ಇತಿಹಾಸದುದಯವಾಗಿಹುದು.
ಆರ್ಯ ದ್ರಾವಿಡರು ಒಂದಾಗಿರುವ
ನೋಡು ಭಾರತೀಯ ನಿಂದಿರುವ!

ಸಂಪತ್ತು ಸಿರಿಯು, ಔಂದರ್ಯ ನೆರೆಯು, ಜನಪದದ ಪರಿಯು ಪೆಂಪುವಡೆದಿತ್ತು.
ಸ್ವರ್ಣಯುಗ ವುದಿಸಿ, ಸಾಹಿತ್ಯ ಮಥಿಸಿ, ಚೈತನ್ಯ ಬೆಳೆಸಿ, ಕಂಪು ಬೀರಿತ್ತು.
ಭಾರತಿಯು ಭವ್ಯಳಾಗುತ್ತ ನವ್ಯದಾಳಿಗಳ ಹವ್ಯನಾಗುವಾಕುತ್ತು.
ಬಂದಿಹುದು ಮತ್ತೆ, ಮತ್ಸರದ ಬಿತ್ತ ರಜಪೂತರೊತ್ತೆ ಬಿಡುಗಡೆಯು ಸತ್ತು
ನೊಗಲರಾಳಿಕೆಯು, ವಾಸ್ತುವಿನ ಕಲೆಯು, ಜೀಲುವಿನ ವಾಸನೆಯು,
ಮತ್ತೆ ಮೆರೆದಿಹುದು.
ಭೇದ ಬಹಳಿಲ್ಲ, ಭಾಗ್ಯ ಬಹುದಲ್ಲ, ಒಂದೆ ನಾವೆಲ್ಲ ಭಾವ ಮೂಡಿಪ್ಪುದು.
ಮೂಡಿದಾ ಭಾವ ಬಲಿತಿಲ್ಲ, ನೋವ ತಂದಿಹುದು, ಜೀವತಳ್ತರಿಸ್ಪತಿಹುದು.
ಪಾಶ್ಚಾತ್ಯರೆಂದು ವ್ಯಾಪಾರಕೆಂದು ಸೇನೆಯನು ತಂದು ನಿಂದ ಭಾರತವು.
ಅದುವೆನ್ನ ಭಾರತವು! ಆಸ್ವತಂತ್ರ ಭಾರತವು!

೩

ಭಾರತದ ರಾಜಕದಿ ಆಂಗ್ಲ ನುಸುಳಿದನು,
ಕುಸಿದು ಬಿದ್ದವರನೊದೆಯುವನು.
ಕಾಣುತ್ತ ಆದನು ನೋಂದಿರುವ.
ನೋಡು ಭಾರತಿಯ ನಿಂದಿರುವ.
ಮಸಲತ್ತು ಮಾಡಿ, ಕದನಗಳ ಹೂಡಿ, ಆರಸುಗಳ ಕಾಡಿ ಅಧಿಕಾರ ಪಡೆದನು.
ಆಂಗ್ಲರಿಗೆ ಮಾನ, ದೇಶೀಯ ಹೀನ, ಸೇನೆಯೊಳಗೇನ ತಾ ಹೇಳಲಂದು.
ಒಲಿದವರೆ ಹೇಸಿ, ಸೈನಿಕರೆ ರೋಸಿ, ಶರವೆತ್ತಿ ಘಾಸಿಗೊಳಿಸಬೇಕೆಂದು,
ಕತ್ತಿಯನು ಹಿರಿದು, ಆಂಗ್ಲರನು ತರಿದು, ಅಧಿಕಾರ ಮುರಿದು, ಬಂಡಾಯ ಬಗ್ಗಿದ್ದು,
ನಿಂದುದನು ಕಂಡು, ಮೋಸದಲಿ ಗಂಡುಗಲಿಗಳ ತುಂಡು ಗೈದಿಹರು ಇಂದು.
ನಮಗಿಲ್ಲ ಬಲವು ಶಸ್ತ್ರದಲಿ ಗೆಲವು, ಮತ್ತಿಲ್ಲ ಫಲವು ಅಹಿಂಸಾ ಮಾರ್ಗ!
ಹಿಂಸೆಯನು ಬಿಟ್ಟು, ಸತ್ಯವನು ನೆಟ್ಟು, ಆಗ್ರಹದ ಪೆಟ್ಟು ಬಿಳಲ್ತೆ ಇಂದು,
ಆಂಗ್ಲ ಮಾತಾಡಿ, ಸ್ವಾತಂತ್ರ್ಯ ನೀಡಿ ಹೋದುದನು ನೋಡಿ, ನಿಂದ ಭಾರತವು.
ಇದುವೆನ್ನ ಭಾರತವು! ಈ ಸ್ವತಂತ್ರ ಭಾರತವು!

೪

ಸ್ವಾತಂತ್ರ್ಯದಾ ಸಂತಸದ ಬೆಸಲೆ ನೋವ
ಸಹಿಸುತ್ತ ಸುತರನ್ನು ಕಾವ
ಕನಸ ಕಾಣುತಿಹ ಭಾರತಿಯ
ನೋಡು, ಭವ್ಯತರ ಮೂರುತಿಯ!
ಒಂದಾದ ದೇಶವೆರಡಾಗಿ, ಕೋಶ ಬರಿದಾಗಿ, ಕ್ಲೇಶವಾಗಿರಲು ಅನ್ನ,
ಬಡತನವನಳಿಸಿ, ಸಂಪದವ ಬೆಳೆಸಿ, ಸುಖಶಾಂತಿ ಇಳಿಸಿ,ಬಾಳ್ಕೆ ಮುನ್ನ.
ಯೋಜನೆಯ ಸಿದ್ಧಿಯಲಿ, ಕಾರ್ಯ ಶ್ರದ್ಧೆಯಲಿ, ಸರ್ವವೃದ್ಧಿಯ ಪಡೆಯಲಿನ್ನು-
ಐದೈದು ವರ್ಷಗಳ ಕಾರ್ಯ ಹರ್ಷಕರವಾದ ಕರ್ಷಕರ ಕ್ರಾಂತಿ ಜೆನ್ನ್ನ.
ಕಾಲು ಶತಮಾನ ಅಭಿವೃದ್ಧಿದಾನ ಮುನ್ನಡೆಯ ಹೀನ ದೃಷ್ಟಿಯುಲಿ ಕಂಡು
ನರನೇಧ ಗೈದು, ಸ್ವಾಮ್ರಾಜ್ಯ ಬಲಿದು. ತನ್ನವರ ಬಲಿದು ಮೆರೆಯ ಬೇಕೆಂದು,
ನೆರೆಯವರು ದಂಡು ತಂದಾಗ, ಕೊಂಡು ಧೈರ್ಯವನು ಭಂಡತನವನ್ನು ಮುರಿದು,
ಜಯದಲ್ಲಿ ನಿಂದು ಶಾಂತಿ ತರಲೆಂದು ಜಗಕೆಲ್ಲ ಮುಂದು, ಮೆರೆವ ಭಾರತವು.
ಇದುವೆನ್ನ ಭಾರತವು! ಈ ಸ್ವತಂತ್ರ ಭಾರತವು!

—ಶ್ರೀ ಸಿ. ಕೆ. ನಾರಾಯಣ

ಸ್ವಾತಂತ್ರ್ಯೋತ್ಸವದ ಶುಭಾಶಯಗಳು

ಮಾಧವ ನಿವಾಸ
ಭಾರತ್ ಜ್ಯೋತಿ

ಉಪಾಹಾರ, ಊಟ ಹಾಗೂ ವಸತಿ ಮಂದಿರ,

ಟ್ರೇಫಿಕ್ ಐಲೇಂಡ್, ಹುಬ್ಬಳ್ಳಿ, ಮೈಸೂರು ರಾಜ್ಯ

ವೈಶಿಷ್ಟ್ಯಪೂರ್ಣ ಉಪಾಹಾರ, ಊಟ, ಉತ್ಕೃಷ್ಟ ಚಾ, ಕಾಫಿ ಮತ್ತು ಇತರ ಮಧುರ ಪಾನೀಯಗಳು.

ಹುಬ್ಬಳ್ಳಿಯ ಕೇಂದ್ರ ಸ್ಥಳದಲ್ಲಿದ್ದು ಉಳಿದುಕೊಳ್ಳಲು ಸರ್ವ ಸಲಕರಣೆಗಳಿಂದ ಸುಸಜ್ಜಿತವಾದ ಆತ್ಯಾಧುನಿಕ ಹೋಟೆಜ್

ಸಿ. ಎಸ್. ಶೆಟ್ಟಿ, ಮ್ಯಾಲಕ.

MADHAVA NIVAS
BHARATH JYOTHI
Popular Boarding, Lodging & Restaurant
Traffic Island, HUBLI, Mysore. State.

ಸ್ವಾತಂತ್ರ್ಯದ ಬೆಳ್ಳಿಯ ಹಬ್ಬದ ಶುಭಾಶಯಗಳು

ಸಂದರ್ಶಿಸಿರಿ — ಸಂತೃಪ್ತರಾಗಿರಿ!!

ಬ್ಲೂಹಾಗರಾ ವಜ್ರಗಳಿಗೆ ಆಧುನಿಕ ಫೇಶನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ಸ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಪುಗಳಿಗೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

—ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ—

ಐಡಿಯಲ್ ಫೊಟೋ ಹೌಸ್ PHONE: 3131

ಆಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ

ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹೆಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3212 Res: 3278

ಚಂದಾದಾರರಲ್ಲಿ ವಿನಂತಿ

ಇದೇ ಅಗೋಸ್ತು ತಿಂಗಳಾಂತ್ಯಕ್ಕೆ 'ನವಯುಗ'ದ 51ನೆಯ ವರ್ಷ ಮುಗಿದು ಸಪ್ಟಂಬರ ತಿಂಗಳಿಂದ 52ನೆಯ ಹೊಸ ವರ್ಷಾರಂಭವಾಗುತ್ತದೆ. ಚಂದಾ ಅವಧಿ ಮುಗಿದ ಚಂದಾದಾರರೂ ಚಂದಾ ಬಾಕಿ ಇರುವವರೂ ದಯಮಾಡಿ ತಮ್ಮ ಬಾಕಿಯನ್ನು ಆದಷ್ಟು ತ್ವರಿತವಾಗಿ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ಅಪೇಕ್ಷಿಸುತ್ತೇವೆ. ಚಂದಾಹಣವನ್ನು ಮನಿಯಾರ್ಡರು ಮೂಲಕ, ಯಾ ಇಂಡಿಯನ್ ಪೋಸ್ಟಲ್ ಆರ್ಡರು ಮೂಲಕ ಕಳಿಸಬಹುದು. ಇಲ್ಲವೆ ಸಿಂಡಿಕೇಟ್ ಬ್ಯಾಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಪಾವತಿ ಮಾಡಬಹುದು. ಹಾಗೆ ಪಾವತಿ ಮಾಡುವಾಗ ತಮ್ಮ ಚಂದಾ ನಂಬ್ರ ಮತ್ತು ವಿಳಾಸವನ್ನು ತಿಳಿಸಬೇಕಾಗಿ ಕೋರುತ್ತೇವೆ.

ಮೆನೇಜರ್.

ಯೋಜನೆಯ ಇಪ್ಪತ್ತು ವರ್ಷಗಳು

—ಡಿ. ಸಿ. ಸುಬ್ರಮಣ್ಯಂ

ಸ್ವಾತಂತ್ರ್ಯ ಮಾನವನ ಜನ್ಮಸಿದ್ಧ ಹಕ್ಕು. ಭಾರತೀಯರ ಸ್ವಾತಂತ್ರ್ಯ ಹೋರಾಟ ನಡೆದದ್ದು ಈ ಹಕ್ಕಿನ ಸಾಧನೆಗಾಗಿಯೇ. ಇಂದು ನಮ್ಮ ರಾಜಕೀಯ ಸ್ವಾತಂತ್ರ್ಯ ಸಾಧನೆಯೊಂದಿಗೆ ಬಡತನ, ರೋಗ ರುಜೆ, ಅಜ್ಞಾನ ಇತ್ಯಾದಿಗಳ ನಿವಾರಣಾ ಹೋರಾಟವು ಆರಂಭವಾಗಿದೆ. ಈ ಸಮಸ್ಯೆಗಳ ನಿವಾರಣೆಯ ಪ್ರಯತ್ನ ಕಳೆದ 25ವರ್ಷಗಳಿಂದಲೂ ನಿರಂತರವಾಗಿ ನಡೆದಿದೆ. ಇಂದೂ ಮುಂದುವರಿದಿದೆ.

ಸ್ವಾತಂತ್ರ್ಯೋತ್ತರದ ಜಾಕಟ್ಟಿನಲ್ಲಿ ಸಮೃದ್ಧವಾದ ಕೈಗಾರಿಕಾ ನೆಲೆಯನ್ನು ನಿರ್ಮಿಸುವ ದೃಷ್ಟಿಯಿಂದ ದೇಶದಲ್ಲಿ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೆ ತರಲಾಯಿತು. ದಿವಂಗತ ಪ್ರಧಾನ ಮಂತ್ರಿ ಪಂಡಿತ ಜವಹರಲಾಲ್ ನೆಹರೂ ಅವರ ನಾಯಕತ್ವದಲ್ಲಿ ಕೈಗೊಂಡ 25ವರ್ಷಗಳ ಐದು ಯೋಜನೆಗಳಲ್ಲಿ ನಾಲ್ಕು ಯೋಜನೆಗಳು ಮುಗಿದಿವೆ. ಯೋಜನೆಗಳ ಪರಿಣಾಮವಾಗಿ ದೇಶದ ಎಲ್ಲಾ ಕ್ಷೇತ್ರಗಳಲ್ಲಿ ನವಚೈತನ್ಯ ಕಂಡು ಬಂದಿದೆ. ಹಿಂದಿನ ಜಡತೆ ಇಂದಿಲ್ಲ.

ರಾಷ್ಟ್ರದಲ್ಲಾಗಿರುವ ಅಭಿವೃದ್ಧಿಯನ್ನು ತಿಳಿಯಬೇಕಾದರೆ ಬ್ರಿಟಿಶರ ಭಾರತ ಹಾಗೂ ಸ್ವಾತಂತ್ರ್ಯ ಭಾರತವನ್ನು ಹೋಲಿಸಬೇಕು. ಈ ಶತಮಾನದ ಮೊದಲ ಐವತ್ತು ವರ್ಷಗಳಲ್ಲಿ ದೇಶದಲ್ಲಿನ ಉತ್ಪಾದನೆ ಅತ್ಯಂತ ಕಡಿಮೆ ಪ್ರಮಾಣದಲ್ಲಿತ್ತು. ಉತ್ಪಾದನೆ ಜನಸಂಖ್ಯೆಯ ಹೆಚ್ಚಳಕ್ಕೆ ತಕ್ಕ ಪ್ರಮಾಣದಲ್ಲಿರಲಿಲ್ಲ. 1950ರಿಂದ1970ರ ವರೆಗಿನ ಅವಧಿಯಲ್ಲಿ ಜನಸಂಖ್ಯೆ ಏರಿದೆಯಾದಾಗ್ಯೂ ಉತ್ಪಾದನೆ ಸಾಕಷ್ಟು ಪ್ರಮಾಣದಲ್ಲಿ ಹೆಚ್ಚಿದೆ. ಅಲ್ಲದೆ ಇಂದಿನ ತಲಾದಾಯ 1950ರಲ್ಲಿ ಇದ್ದ ತಲಾದಾಯಕ್ಕಿಂತ ಮೂರರಷ್ಟಿದೆ.

ಸರ್ವತೋಮುಖ ಅಭಿವೃದ್ಧಿ

ದೇಶದ ಬೇಸಾಯ, ಕೈಗಾರಿಕೆ, ಶಿಕ್ಷಣ ಇತ್ಯಾದಿ ವಿವಿಧ ಕ್ಷೇತ್ರಗಳಲ್ಲಿ ಪ್ರಗತಿ ನಡೆದಿದೆ. ಗ್ರಾಮೀಣ ಪ್ರದೇಶಗಳಲ್ಲಿ ನಡೆದಿರುವ ಅಭಿವೃದ್ಧಿ ಕಾರ್ಯಗಳಿಂದಾಗಿ ಆ ಪ್ರದೇಶಗಳ ಚಿತ್ರ ಈಗ ಪೂರ್ಣ ಬದಲಾಗಿದೆ. ಪಂಚವಾರ್ಷಿಕ ಯೋಜನೆಗಳಲ್ಲಿ ನೀರಾವರಿ, ರಾಸಾಯನಿಕ ಗೊಬ್ಬರ, ಸಾಲ ಇತ್ಯಾದಿ ಸೌಲಭ್ಯಗಳನ್ನು ಒದಗಿಸಿದ್ದು ಈ ಪರಿವರ್ತನೆಗೆ ಕಾರಣವಾಗಿದೆ. ನಮ್ಮ ರೈತರಿಂದು ನವೀನ ಬೇಸಾಯ ಪದ್ಧತಿಗಳಿಗೆ ಹೊಂದಿ ಕೊಂಡಿದ್ದಾರೆ. ಬೇಸಾಯ ಸಂಶೋಧನೆಯೂ ಈ ದಿಶೆಯಲ್ಲಿ ಮಹತ್ವದ್ದಾಗಿದೆ. ದೇಶದ ಬೇಸಾಯ ಉತ್ಪಾದನೆ 1970-71ರ ವೇಳೆಗೆ ಶೇಕಡಾ 80 ರಷ್ಟು ಏರಿದೆ.

ಕೈಗಾರಿಕೆ ಮತ್ತು ಖಾಸಗಿ ಸಂಪತ್ತಿನ ವಿಷಯಗಳಲ್ಲೂ ಪ್ರಗತಿ ಗಣನೀಯವಾದದ್ದು. ಖಾಸಗಿ ಉತ್ಪಾದನೆ ಶೇಕಡಾ 170ರಷ್ಟು ಏರಿದ್ದು ಇತರ ಕೈಗಾರಿಕೆಗಳ ಅಭಿವೃದ್ಧಿ ಮತ್ತು ಕೈಗಾರಿಕಾ ವಸ್ತುಗಳ ಗುಣಮಟ್ಟದ ಏರಿಕೆಗೂ ನೆರವಾಗಿದೆ. ಸಣಬು ಮತ್ತು ಹತ್ತಿ ಉತ್ಪಾದನೆಗೆ ಮಾತ್ರ ಪ್ರಸಿದ್ಧಿಯಾಗಿದ್ದ ಭಾರತದಲ್ಲಿ ಇಂದು ಅತ್ಯಂತ ದೊಡ್ಡ ಯಂತ್ರೋಪಕರಣಗಳು ಅತಿಸೂಕ್ಷ್ಮವಾದ ವಸ್ತುಗಳೂ ತಯಾರಾಗುತ್ತಿವೆ.

ಶ್ರೀಸಾಮಾನ್ಯನ ಸ್ಥಿತಿಯಿಂದು 1947ರಲ್ಲಿ ಇದ್ದ ಸ್ಥಿತಿಗಿಂತ ಉತ್ತಮವಾಗಿದೆ. ಆತನ ವರಮಾನ ಇಂದು ಸಾಕಷ್ಟು ಪ್ರಮಾಣದಲ್ಲಿ ಏರಿದ್ದು ಸಾಧಾರಣ ಸುಖ ಜೀವನ ನಡೆಸಬಲ್ಲವನಾಗಿದ್ದಾನೆ. ಆತನ ಆರೋಗ್ಯ ಇಂದು ಸುಧಾರಿಸಿದೆ. ಕಾಲರಾ, ಮಲೇರಿಯಾ ಇತ್ಯಾದಿ ಸಾಂಕ್ರಾಮಿಕ ರೋಗಗಳಿಂದ ಪಾರಾಗಿದ್ದಾನೆ. ದೇಶದಾದ್ಯಂತ ಇರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ಆತನಿಗೀಗ ವೈದ್ಯಕೀಯ ನೆರವು ದೊರೆಯುತ್ತಿದೆ. ಉದ್ಯೋಗಾವಕಾಶಗಳು, ಶಿಕ್ಷಣ ಸೌಲಭ್ಯಗಳು ಹೆಚ್ಚುತ್ತಿವೆ. ಆರ್ಥಿಕ ಅಭ್ಯುದಯದ ದೃಷ್ಟಿಯಿಂದ ಕೈಗೊಂಡ ಹಾಗೂ ಕೈಗೊಳ್ಳುತ್ತಿರುವ ಕಾರ್ಯಯೋಜನೆಗಳ ಜೊತೆಗೆ ಆರ್ಥಿಕ ಅಸಮಾನತೆಯನ್ನು ತಡೆಯಲು ಕಾರ್ಯಕ್ರಮಗಳನ್ನು ಈಗ ವಿಶೇಷವಾಗಿ ಕೈಗೊಳ್ಳಲಾಗುತ್ತಿದ್ದು ಇದರಿಂದ ಶ್ರೀಸಾಮಾನ್ಯನ ಪರಿಸ್ಥಿತಿ ಸುಧಾರಿಸಲು ಕಾರಣವಾಗಿದೆ.

ದೇಶದಲ್ಲಿ ಇಂದು ಎಲ್ಲ ಸಮಸ್ಯೆಗಳೂ ಪರಿಹಾರವಾಗಿದೆ ಎಂಬುದು ನನ್ನ ಅರ್ಥವಲ್ಲ. ಸಮಸ್ಯೆಗಳವೆ. ಸಮಸ್ಯಾ ನಿವಾರಣೆ ಕಾರ್ಯ ನಿರಂತರ ಮುಂದುವರಿದಿದೆ. ಬಡತನ, ನಿರುದ್ಯೋಗ ಸಾಮಾಜಿಕ ಅಸಮಾನತೆಗಳ ನಿವಾರಣೆಗೆ ಪ್ರಭುತ್ವ ಮುಂಬರದು ದೇಶ ಸ್ವಪರಿಪೂರ್ಣತೆಯತ್ತ ಸಾಗುವುದೆಂಬ ನಿರೀಕ್ಷೆ ಇದೆ. ನಿರ್ದಿಷ್ಟ ಏಳಿಗೆ ನಮ್ಮ ಸರಕಾರದ ಗುರಿಯಾಗಿದ್ದು ಆ ನಿಟ್ಟಿನಲ್ಲಿ ಪ್ರಯತ್ನಗಳು ನಡೆದಿವೆ. ಆಶಾಪೂರ್ಣ ಯಶಸ್ವಿಯಾಗುವ ನಿರೀಕ್ಷೆ ಇವೆ. ●

(ಒಂದನೇ ಪುಟದಿಂದ)

ಗೆ

ಸ್ವಾತಂತ್ರ್ಯ ಸುಧೆಯ
ಪಾನದೊಳಮ್ಮರಾಗಿರಲಿ
ಸೋದರರೂ ಸರ್ವರೂ ಸೌಖ್ಯವಿರಲಿ !
ಅಮೃತ ಮಥನದಿ ವಿಷವ ನುಂಗಿಹೆ
ಮಹಾತ್ಮನಾ
ಚರಣ ಧೂಳಿಗಳೆನ್ನ ಶಿರದೊಳಿರಲಿ !

---

* ಸ್ವಾತಂತ್ರ್ಯದ ರಜತೋತ್ಸವವನ್ನು ಭಂಗವಾಗಿ ಆಚರಿಸಿದ ಆಕಾಶವಾಣಿ ಕವಿ ಸಮ್ಮೇಳನದಲ್ಲಿ ಹಾಡಿದ ಕವನ. ೧೯೭೨ ಆಗಸ್ಟ್ ೧೫ರಂದು ಪೂರ್ವಾಹ್ನ ೯-೩೦ರಿಂದ ೧೦-೩೦ರ ವರೆಗೆ ಬೆಂಗಳೂರು ಮತ್ತು ಧಾರವಾಡ ಆಕಾಶವಾಣಿ ನಿಲಯಗಳಲ್ಲಿ ಪ್ರಸಾರ ಆಗುವುದು. ●

ಮೈಸೂರು ರಾಜ್ಯದಲ್ಲಿ ಕೈಗಾರಿಕೆಯನ್ನು ಯೋಜಿಸಬೇಕೆಂದಿರುವ ಕೈಗಾರಿಕೋದ್ಯಮಿಗಳು ಮತ್ತು ಖಾಸಗಿ ಉದ್ಯಮಿಗಳು?

ಎಂ ಎಸ್ ಎಫ್ ಸಿಯು ಈ ಕೆಳಗಿನವುಗಳಿಗೆ ಆರ್ಥಿಕ ನೆರವು ನೀಡುತ್ತದೆ

- ಉತ್ಪಾದನೆ, ಜೋಪಾಸನೆ, ಅಥವಾ ತಯಾರಿಸಿದ ವಸ್ತುವಿನ ವರ್ಗೀಕರಣ
- ಹೊಟೇಲು, ರೆಸ್ಟೋರೆಂಟ್, ಸಾರಿಗೆ ಅಥವಾ ಶೀತಲೀಕರಣ ವ್ಯವಹಾರ
- ವಿದ್ಯುತ್ ಉತ್ಪಾದನೆ ಅಥವಾ ವಿತರಣೆ
- ಕೈಗಾರಿಕಾ ಎಸ್ಟೇಟಿನ ಅಭಿವೃದ್ಧಿ

ಮತ್ತು

ಚಾಲ್ತಿಯಲ್ಲಿರುವ ಕೈಗಾರಿಕೆಯ ವಿಸ್ತರಣೆ, ಆಧುನೀಕರಣ, ಮತ್ತು ದುರಸ್ತಿ.

ಎಂ ಎಸ್ ಎಸ್ ಸಿಗಳು ಉದ್ಯೋಜಕತ್ವ ಯೋಜನೆ- ಸಣ್ಣ ಪ್ರಮಾಣದ ಕೈಗಾರಿಕೆಯನ್ನು ಸ್ಥಾಪಿಸಲು ಉತ್ಸಾಹವುಳ್ಳ ತಾಂತ್ರಿಕ ಪರಿಣತರಿಗೆ ಅತ್ಯುದಾರ ಕರ್ತಗಳ ನೀಡಿಕೆ.

ವಿವರಗಳಿಗೆ ಸಂಪರ್ಕ ಬೆಳೆಸಿರಿ:

ಕಾರ್ಯದರ್ಶಿ

ಮೈಸೂರು ಸ್ಟೇಟ್ ಫಿನಾನ್ಷಿಯಲ್ ಕಾರ್ಪೊರೇಷನ್

1/1, 2ನೆಯ ಮೈನ್ ರಸ್ತೆ,
ಮಲ್ಲೇಶ್ವರಮ್,
ಬೆಂಗಳೂರು—3

ತಂತಿಗ್ರಾಮ: 'ಮೈಫಿನ್‌ಕೋರ್ಪ್'

ಫೋನ್: 71169

ದಕ್ಷಿಣ ಕನ್ನಡದ ಅಮೋಘ ಕೊಡುಗೆ

(IIನೇ ಪುಟದಿಂದ)

ದೇಶಿ ವ್ರತ ಸ್ವೀಕಾರ,ವಿದೇಶೀ ತಿರಸ್ಕಾರ) ಮಂಗಳೂರಲ್ಲಿ ಆನಂತರ ಇಡೀ ಜಿಲ್ಲೆಯ ಲ್ಲಿ ಪಸರಿಸಿದ ಕೀರ್ತಿ ಶ್ರೀ ಕಾರ್ನಾಡು ಸದಾಶಿವರಾಯರದು. ಧಾರಾಳ ಸಂಪಾದನೆ ಬರುತ್ತಿದ್ದ ತನ್ನ ವಕೀಲ ವೃತ್ತಿಗೆ ತಿಲಾಂಜಲಿಯನ್ನಿತ್ತು ಅವರು ರಾಷ್ಟ್ರ ಸೇವೆಯ ಲ್ಲಿ ಈಕಣ್ಣಲ್ಲಿದ್ದರಾದರು. ತನ್ನ ವೈಭವದ ಜೀವನವನ್ನು ತೊರೆದು, ಸಾದಾ ಉಡುಪಿ ನೆ ಸರಳ ಜೀವನ ಪ್ರಾರಂಭಿಸಿದರು. ಅವ ರ ಚುನೆಯೇ ಕಾಂಗ್ರೆಸ್ ಕಾರ್ಯಕಲಾಪ ಗಳ ನೆಲೆಯಾಯಿತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಂಗ್ರೆಸ್ಸಿಗೆ ಸುಭದ್ರ ತಳಹದಿ ಹಾಕಿದವರಲ್ಲಿ ಅವರೇ. ಸ್ವಂತ ವೆಚ್ಚದಿಂದ ಫ್ರೆಷ್ಮ್ಯಾನಂತೆ ಕಾಂಗ್ರೆಸ್ ಕಾರ್ಯಕರ್ತರಾ ತಂಡವನ್ನು ತರಬೇತು ಮಾಡಿ ಸಿದ್ಧಗೊಳಿ ಸಿದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಕರ್ನಾಟಕ ಪ್ರದೇಶ ಸಮಿತಿ ಅಧ್ಯಕ್ಷರಾಗಿದ್ದು ಅನುಸಮಯ ಸೇವೆ ಸಲ್ಲಿಸಿದರು. ಗಾಂಧೀಜಿಯ ವಿಶ್ವಾಸಿ ಕಾರ್ಯಕರ್ತರಾಗಿ ಜಿಲ್ಲೆಯ ಒಳಗೂ ಹೊರಗೂ ಬಿಡುವಿಲ್ಲದೆ ಸಂಚರಿಸಿ ಜನಜಾಗೃತಿಯ ಕಾರ್ಯ ನಡೆಸಿದರು. ಕಾಂಗ್ರೆಸ್ಸಿನ ಕಾರ್ಯಕ್ರಮಗಳ ನಾಯಕತ್ವವನ್ನು ಅವರು ವಹಿಸಿಕೊಂಡ ಕಾಲದಲ್ಲಿನ 'ಸಾಧಕಾಶ್ರಮ' 'ಸ್ವಯಂ ಸೇವಕರ ಶಿಬಿರ', ತಿಲಕ ಮಹಾ ವಿದ್ಯಾಲಯ (ರಾಷ್ಟ್ರೀಯ ಶಿಕ್ಷಣ ಸಂಸ್ಥೆ) ಚರಕಾ, ಸ್ವದೇಶಿ ಪ್ರಚಾರ, ಸ್ವರಾಜ್ಯ ನಿಧಿ—ಮೊ ದಲಾದವುಗಳಿಗೆ ಅವರು ತನ್ನ ಸಂಪತ್ತು ಸರ್ವಸ್ವವನ್ನೂ ಧಾರೆ ಎರೆದರು. ಅವರ ಉಜ್ವಲ ದೇಶ ಭಕ್ತಿಯಿಂದ ಆಕರ್ಷಿತರಾ ಗಿ ಉತ್ಸಾಹಿ ತರುಣರ ತಂಡ ಅವರಿಗೆ ಅ ಪೂರ್ವ ಬೆಂಬಲ ನೀಡಿತು. ಆಗ ಗಾಂಧೀ ಜಿಯ ಕರೆಯಂತೆ ಶಾಲಾಕಾಲೇಜ್‌ಗಳಿಗೆ ಬಹಿಷ್ಕಾರ ಹಾಕಿ ಬಂದ ವಿದ್ಯಾರ್ಥಿಗಳಿಗಾ ಗಿ ಅವರ ಮನೆಯ (ಈಗಿನ S.C.C.C Bank ಆವರಣ) ಆವರಣದಲ್ಲೇ ತಿಲಕ ಮಹಾ ವಿದ್ಯಾಲಯ ನಡೆಯುತ್ತಿತ್ತು. ದಿವಂ. ಪಡಮನ್ನೂರು ರಾಮಚಂದ್ರರಾ ಯರು, ಎಂ. ಉಮೇಶರಾಯರು, ದ. ಕೃ. ಭಾರದ್ವಾಜ, ಅರಿಬೈಲು ಭೋಜರಾಯರು — ಆ ವಿದ್ಯಾಲಯದ ಅಧ್ಯಾಪಕ ವರ್ಗದಲ್ಲಿದ್ದರು. ಅವರ ತ್ಯಾಗಶೀಲ ಸೇವೆಯು ಅಸಾಧಾರಣವಾ ದುದು. ಕಾಲೇಜನ್ನು ತ್ಯಜಿಸಿ ಬಂದ ಶ್ರೀ ಶಿವರಾಮ ಕಾರಂತರು, ಹಿ. ರಾಮರಾಯ ಮಲ್ಯ, ಹಿ. ನಾರಾಯಣ ರಾವ್, ಶಾಂತಾ ರಾಮ ರಾವ್, ಬೊಂಬೈಯ V.J.I.T ಯ ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಿ ಬಂದ ಶ್ರೀ ವಿ.ಯಸ್. ಕುಡ್ವ, ಖ್ಯಾತ ಕವಿ ಶ್ರೀ ಕಡೆಂಗೋಡ್ಲು ಮೊದಲಾದವರೆಲ್ಲರೂ ಸದಾಶಿವರಾಯರೊಂದಿಗೆ ಜನಜಾಗೃತಿಯ ಅಂದಿನ ಕಾರ್ಯಗಳಲ್ಲಿ ಭಾಗಿಗಳಾಗಿ ದ್ದರು.

ಹೀಗೆ ಸದಾಶಿವರಾಯರು ಸರ್ವ ತ್ಯಾಗಕ್ಕೆ ಸಿದ್ಧರಾದ ಕಾಲದಲ್ಲೇ ಅವರಿಗೆ ಆಪ ತ್ತುಗಳೂ ಬಂದವು. 1921ರಲ್ಲಿ ಅವರ ಕಿರಿಯ ಮಗಳು ಅನಂತರ ಕಿರಿಯ ಮಗ ಕಾಲವಶರಾದರು. 1923ರಲ್ಲಿ ಸಹಧರ್ಮಿಣಿ ಶಾಂತಬಾಯಿಯೂ ತೀರಿಕೊಂಡರು. ಇದರಿಂದ ಕಂಗೆಟ್ಟ ಸದಾಶಿವರಾಯರು ಸ್ವಲ್ಪಕಾಲ ಸಬರಮತಿ ಆಶ್ರಮದಲ್ಲಿದ್ದು ಜೀವನ ನಡೆಸಿದರು. ಆಷ್ಟರಲ್ಲೇ 1923ರ ಅ ನಾಹುತದ ನೆರೆಯು ಜಿಲ್ಲೆಯಲ್ಲಿ ಅಪಾರ ಹಾನಿಯನ್ನುಂಟುಮಾಡಿತ್ತು. ಪ್ರವಾಹ ಸಂತ್ರಸ್ತರ ಸಹಾಯ ಪರಿಹಾರ ಕಾರ್ಯ ಕ್ರಮಗಳಿಗಾಗಿ ಅವರು ಮಂಗಳೂರಿಗೆ ಧಾವಿಸಿ ಬಂದು, ಆರ್ತರ, ಸಂಕಷ್ಟಗ್ರಸ್ತರ ಆಪತ್‌ಬಂಧುವಾಗಿ ಅವಿಶ್ರಾಂತ ಶ್ರಮಿಸಿ ದರು.

1930ರಲ್ಲಿ ಅವರು 4ನೆಯ ಸಲ ಕ ರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದಾಗಲೇ ಉಪ್ಪಿನ ಸತ್ಯಾಗ್ರಹ ಪ್ರಾರಂಭವಾಯಿತು. ಆದರಲ್ಲಿ ಭಾಗವಹಿ ಸಲು ಅವರು ಮನೆಯಿಂದ ಹೊರ ಹೊರ ಟವರಿಗೆ ಮರಳಿ ತನ್ನ ಸ್ವಂತ ಮನೆಗೆ ಬರ ಲು ಸಾಧ್ಯವಿಲ್ಲದಾಯಿತು. ಅವರನ್ನು ಸು ತ್ತಿದ್ದ ಸಾಲಗಳ ಸಲುವಾಗಿ ಮನೆ ಆಸ್ತಿ ಎಲ್ಲಾ ಜಪ್ತಿಯಾಗಿ ಪರರಿಗೆ ಮಾರಾಟವಾ ದವು. ಸತ್ಯಾಗ್ರಹದಲ್ಲಿ ಭಾಗವಹಿಸಿದುದಕ್ಕೆ 15 ತಿಂಗಳ ಸಜೆಯೂ ಅವರ ಪಾಲಿಗೆ ಬಂತು. ಹೀಗೆ ಸಂಪತ್ತನ್ನೂ ಆರೋಗ್ಯವ ನ್ನೂ ಕಳಕೊಂಡು ಸದಾಶಿವರಾಯರು ಸೆ ರೆಮನೆಯಿಂದ ಹೊರ ಬಂದರು. ಆಗಲೇ ಸಿಸಿ-ಸಿದ್ಧಾಪುರಗಳಲ್ಲಿ ಕರನಿರಾಕರಣೆಯ ಮುಂದಾಳಾಗಿ ಹೋದರು. 1932ರಲ್ಲಿ ನ ಡೆದ ಸತ್ಯಾಗ್ರಹದಲ್ಲಿ ಬಂಧನಕ್ಕೊಳಗಾದ ರು. ಅವರಿಗೆ ಭೇಡಿ ತೊಡಿಸಿ ಸಟ್ಟಣದ ಮಾರ್ಗದಲ್ಲಿ ಕರೆದೊಯ್ದ ದೃಶ್ಯ ಕರುಣಾಜನಕವಾಗಿತ್ತು. ಅನಂತರ ಸೆ ರಮನೆಯಿಂದ ಬಿಡುಗಡೆಯೂದಾಗ, ಅವರ ದೇಹ ಶಿಥಿಲವಾಗಿತ್ತು. ಕೊಡು ಗೈಯ ಬೆದಾರ್ಯದಿಂದ ಬೊಕ್ಕಸ ಬ ರಿದಾಗಿತ್ತು. ಸಮಾಜ ಸೇನೆ, ಕಾಂಗ್ರೆಸ್ ನಿಷ್ಠೆಗಳು ಈ ಆಗರ್ಭ ಶ್ರೀಮಂತನನ್ನು ಬಡತನದ ಬವಣೆಗೊಳಪಡಿಸಿದ್ದವು. ತಮ್ಮಿ ಬ್ಬರು ಪುತ್ರಿಯರ ಶಿಕ್ಷಣ ಮುಂದುವರಿ ಸುವುದೇ ಅವರಿಗೊಂದು ಸಮಸ್ಯೆಯಾ ಗಿತ್ತು. ಆದರೂ ಜೀತನ ಕುಗ್ಗಲಿಲ್ಲ. ದೇ ಹ ಬಗ್ಗಲಿಲ್ಲ. 1937ರಲ್ಲಿ ಫೈಜಪುರದ ಲ್ಲಾದ ಕಾಂಗ್ರೆಸ್ಸಿಗೆ ಹೋದರು. ಅಲ್ಲಿ ಕೇ ವಲ ಪ್ರೇಕ್ಷಕರಾಗಿ ಭಾಗವಹಿಸುವ ಪರಿಸ್ಥಿ ತಿಯೊದಗಿತು. ಅಲ್ಲಿಂದ ಬೊಂಬಾಯಿಗೆ ಮರಳಿ ಬಂದವರೇ ಹಾಸಿಗೆ ಹಿಡಿದರು. ಕೆ ಲವೇ ದಿನಗಳಲ್ಲಿ ಆರೋಗ್ಯ ಕೆಡುತ್ತಾ ಬಂ ತು. ಅವರು 9-1-1937ರಲ್ಲಿ ಅಲ್ಲಿಯ ಆಸ್ಪತ್ರೆಯೊಂದರಲ್ಲಿ ಅಸು ನೀಗಿದರು. ಕೊನೆಯ ದಿನಗಳಲ್ಲಿ ಅವರು ಪಟ್ಟ ಕಷ್ಟ ಗಳಿಗಂತೂ ಮಿತಿಯೇ ಇಲ್ಲ. ರಾಜಕೀಯ ರಂಗದ ಆದರ್ಶ — ವಾಸ್ತವತೆಗಳ ಅಂ ತರ ಅವರ ಭ್ರಮನಿರಸನಗೊಳಿಸಿತ್ತು. ಮನಸ್ಸಿಗೆ ಬೇಸರ ಹುಟ್ಟಿಸಿತ್ತು. 1937ರ ಚುನಾವಣೆಯಲ್ಲಿ ಶ್ರೀ ಸದಾಶಿವರಾಯ ರ ಉಮೇದ್ವಾರಿಕೆ ಹುಟ್ಟಿಹಾಕಿತ್ತಾ ದರೂ, ಆ ಚುನಾವಣೆಯಲ್ಲಿ ಕಾಂಗ್ರೆ ಸ್ ಪರವಾಗಿ ನಿಂತ ಹುರಿಯಾಳುಗಳ ಬೆ ಬಲ ಕೊಡಲು ತನ್ನ ಆನಾರೋಗ್ಯವನ್ನು ಲೆಕ್ಕಿಸದೆ ಜಿಲ್ಲೆಯನ್ನೆಲ್ಲಿ ಸುತ್ತಾಡಲು ಅ ವರು ಹಿಂಜರಿಯಲಿಲ್ಲ. ಎಂಥಾ ಜೀವನಕ್ಕೆ ಎಂಥಾ ಕೊನೆ ! ಈ ನಿಷ್ಕಾಮಂತ ನಿಸ್ವಾ ರ್ಥ ದೇಶಭಕ್ತನ ಅಂತ್ಯ ಕ್ರಿಯೆಯು ಬೊಂಬಾಯಿಯಲ್ಲಿ ರಾಷ್ಟ್ರವೀರನೋರ್ವನಿ ಗೆ ಸಲ್ಲುವ ರೀತಿಯ ಭಕ್ತಿ ಗೌರವಗಳಿಂದ ನಡೆಯಿತು. ಕರ್ನಾಟಕವು ತನ್ನ ಪುತ್ರ ವಿ ಯೋಗವನ್ನು ಕಳಕೊಂಡು ಬಡವಾಯಿತು. ದೇಶ ಭಕ್ತರ ಶ್ರೇಷ್ಠತೆ—ಉದಾತ್ತತೆಗಳ ಸ್ಮರಿತ ದಕ್ಷಿಣ ಕನ್ನಡದ ಜನತೆ ಮನಮ್ಮುಲ ಮರುಗಿತು; ಶ್ರದ್ಧಾಂಜಲಿಯ ಕಣ್ಣೀರಿಟ್ಟಿ ತು ಇಷ್ಟೆ. ಜಿಲ್ಲೆಯ ಜನ ಮನದಲ್ಲಿ ಗಳಿಸಿ ದ್ದ ಅನಭಿಷಿಕ್ತ ಸಾಮ್ರಾಟಿಂಬ ಅನರ್ಘ ಸ್ಥಾನದ ನೆನಪು ಮಾತ್ರ ಇಂದಿಗೂ ಹಸಿ ರಾಗಿಯೇ ಉಳಿದಿದೆ. ಅದು ಚಿರಸ್ಥಾಯಿ ಯೂ ಹೌದು. ಸ್ಮೃತಿಯಾಂಯ್ಯಕವೂ ಹೌದು.

ದಿವಂಗತ ದೇಶಭಕ್ತ ಕಾರ್ನಾಡು ಸ ದಾಶಿವರಾಯರು ದೇಶಕ್ಕೆ ಸಲ್ಲಿಸಿದ ನಿಸ್ವಾ ರ್ಥ ತ್ಯಾಗಪೂರ್ಣ ಸೇವೆಯ ಸವಿನೆನಪಿ ಗಾಗಿ ಈ ಕೆಳಗಿನ ಸ್ಮಾರಕಗಳಲ್ಲಿಯೆಂದು ದೊಂದೇ ಸಮಧಾನದಿಂದ

(1)ಮಂಗಳೂರಿನಲ್ಲಿ ಅವರ ವಂಶಸ್ಥ ರಿಗತವಾದ ಗ್ರಹವಿದ್ದ 'ಕೋರ್ಟ್ ರೋಡ್' ಎಂಬ ಹೆಸರಿನ ರಸ್ತೆಯನ್ನು "ಕಾರ್ನಾಡು ಸದಾಶಿವ ರಾವ್ ರಸ್ತೆ" ಎಂದು ನಾಮ ಕರಣ ಮಾಡಿರುವುದು.

(2) ಬೊಂಬಾಯಿಯಲ್ಲಿ ದೇಶಭಕ್ತ ಕಾರ್ನಾಡ್ ಸದಾಶಿವ ರಾವ್ ಕನ್ನಡ ಪ್ರಾ ಥಮಿಕ ಶಾಲೆಗಳ ಸ್ಥಾಪನೆ (1944—ಕನ್ನಡ ಶಿಕ್ಷಣ ಸಮಿತಿಯ ವತಿ ಯಿಂದ)

(3) ಬೊಂಬಾಯಿಯಲ್ಲಿ ಕಾರ್ನಾಡ್ ಸದಾಶಿವ ರಾವ್ ಕನ್ನಡ ಉಚಿತ ವಾಚ ನಾಲಯ, ಕನ್ನಡ ಗ್ರಂಥ ಭಂಡಾರ ಮ ತ್ತು ವ್ಯಾಪಕ ಸಂಸ್ಥೆ—ವ್ಯಾಪನೆ.

(4) ಮಂಗಳೂರಿನ ಪ್ರಮುಖ ಗ್ರಂಥಾ ಲಯಕ್ಕೆ 'ಕಾರ್ನಾಡು ಸದಾಶಿವ ರಾವ್ ಡಿಸ್ಟ್ರಿಕ್ಟ್ (ಈಗ ನಗರ) ಸೆಂಟ್ರಲ್ ಲೈಬ್ರೆ ರಿ' ಎಂಬ ಹೆಸರಿಟ್ಟಿದುದು. ಈಗ ಇದು ಬಾ ವುಟಗುತ್ತನಲ್ಲಿ ತನ್ನದೇ ಆದ ನಿವೇಶನದ ಲ್ಲಿದೆ.

(5) ದೇಶಭಕ್ತ ಕಾರ್ನಾಡ್ ಸದಾಶಿವ ರಾವ್ ವ್ಯಾಕ್ ಸೇವಾಶ್ರಮ-ಕಾರ್ನಾಡು ನುಯಿಲ್ಕಿ (ಶ್ರೀ ಸಂಜೀವಸಾಧು ವಕಳ ಇವ ರ ನೇತೃತ್ವದ ಸಂಸ್ಥೆ.)

(6) ಮಂಗಳೂರು ಬಾವುಟ ಗುಡ್ಡದ ಲ್ಲಿ "ದೇಶಭಕ್ತ ಕಾರ್ನಾಡು ಸದಾಶಿವ ರಾ ವ್ ಗ್ರಂಥಾಲಯ ಭವನ"ದ ಎದುರಿನಲ್ಲಿ ದಿವಂಗತರ ಸ್ಮಾರಕಾರ್ಥ ಭವ್ಯ ಮಂದಿರ ದ ನಿರ್ಮಾಣಕಾರ್ಯ ಭರದಿಂದ ಜರಿಗೆ ಅದರ ಒಂದನೆಯ ಹಂತ ಮುಗಿದಿರುತ್ತ ದೆ. ಜಿಲ್ಲೇ ದ. ಕ. ಜಿಲ್ಲಾ ರಾಜಕೀಯ ಸಂತ್ರಸ್ತರ ಸಂಘದ ಕಚೇರಿ ಈಗ ಇದೆ.

(7) 1960ರಲ್ಲಿ ಬೆಂಗಳೂರಲ್ಲಿ ನಡೆದ ಕಾಂಗ್ರೆಸಿನ 65ನೆಯ ಅಧಿವೇಶನದ ಸ್ಥಳ ವಾದ 'ಪ್ಯಾಲೇಸ್ ಆರ್ಚರ್ಡ್' ಬಡಾವ ಣೆಯನ್ನು 'ಸದಾಶಿವ ನಗರ'ವೆಂದು ಹೆಸ ರಿಸಲಾಯಿತು. ಈ ಸ್ಥಳವು ಇಂದಿಗೂ ಶಾ ಶ್ವತವಾಗಿ 'ಸದಾಶಿವ ನಗರ'ವೆಂದು ಶೋ ಭಿಸುತ್ತಿದೆ.

With Best Compliments From

HOTEL ZAM ZAM

&

BAKERY

NON- VEGETARIAN RESTAURANT

Railway Station Road

KASARAGOD

ವಿಶೇಷಾಂಕದ ಕುರಿತು

ಇದು ನಮ್ಮ "ನವಯುಗ"ದ ಸ್ವಾತಂತ್ರ್ಯ ರಜತೋತ್ಸವ ವಿಶೇಷಾಂಕ. ವಿದ್ವಾಂಸರಾದ ಹಲವಾರು ಲೇಖಕ ಬಂಧುಗಳು ತಮ್ಮ ಅಮೂಲ್ಯ ಕೃತಿಗಳನ್ನು ನಮ್ಮ ಕೇಳಿಕೆಯಂತೆ ಈ ಸಂಚಿಕೆಗಾಗಿ ಕಳಿಸಿಕೊಟ್ಟು ಉಪಕಾರ ಮಾಡಿದ್ದಾರೆ. ಸಂಚಿಕೆಯ ಇತಿ-ಮಿತಿಗಳನ್ನು ಗಮನದಲ್ಲಿಟ್ಟುಕೊಂಡು, ಅವುಗಳಲ್ಲಿ ಹಲವಾರನ್ನೆಲ್ಲ ಕೈಬಿಡಬೇಕಾಗಿ ಬಂತು. ಕೆಲವು ಲೇಖನಗಳು ಉತ್ತಮ ಗುಣಮಟ್ಟವನ್ನು ಹೊಂದಿದ್ದರೂ ವಿಷಯವಾಸ್ತವಿದ್ದುದರಿಂದ ಪ್ರಕಟಿಸುವುದು ಅನಾವಶ್ಯಕವಾಯಿತು. ನಮ್ಮ ಪ್ರಾರ್ಥನೆಯನ್ನು ಮನ್ನಿಸಿದ ನಮ್ಮ ಲೇಖಕರ ಬಳಗವನ್ನು ಸೃಷ್ಟಿಸಿಕೊಂಡು, ಅಸ್ತ್ರ ಕಟಿತ ಲೇಖನಗಳನ್ನು ಸೂಕ್ತ ಸಂಚಿಕೆಗಳಲ್ಲಿ ಪ್ರಕಟಿಸುವ ಬಗ್ಗೆ ಪ್ರಯತ್ನಿಸುವುದಾಗಿ ಭರವಸೆ ನೀಡಿ ಎಲ್ಲರಿಗೂ ಕೃತಜ್ಞತೆಯರ್ಪಿಸುತ್ತೇನೆ. ವಿಶೇಷ ಸಂಚಿಕೆಯ ತಯಾರಿಕೆಗೆ ಲೇಖಕರಂತೆಯೇ ಜಾಹಿರಾತುದಾರರೂ ಸಹಕಾರಿಗಳು. ನಮ್ಮ ಮೇಲೆ ಅಭಿಮಾನವಿಟ್ಟು ತಮ್ಮ ಸಂಸ್ಥೆ ಸಂಸ್ಥೆಗಳ ಜಾಹೀರಾತುಗಳನ್ನು ಪ್ರಕಟಣೆಗೆ ನೀಡಿದ ವರೆಲ್ಲರಿಗೂ ನಮ್ಮ ಆಭಾರ ಸೂಚಿಸುತ್ತೇವೆ.

ಸ್ವಾತಂತ್ರ್ಯದ ರಜತೋತ್ಸವದ ಸುವರ್ಣ ಪರ್ವಕಾಲದಲ್ಲಿ ದೇಶದ ಪುನಾರಚನೆಗಾಗಿ ದುಡಿಯುವ ದೀಕ್ಷೆಯನ್ನು 'ನವಯುಗ' ಪುನರುಚ್ಚರಿಸುತ್ತದೆ. ಇದರಲ್ಲಿ ಎಲ್ಲರ ಹೃತ್ಪೂರ್ವಕ ಸಹಕಾರ ಯಾಚಿಸುತ್ತದೆ.

ಓದಿರಿ ! "ಗುಡಿ ಗೃಹಕಾರ್ಯ"

ಕನ್ನಡ ಪುಸ್ತಕ ಚಿಕ್ಕ ಬಂಡವಳದಿನಲ್ಲಿ ನಿಮ್ಮ ಮನೆಯಲ್ಲಿ ಉದ್ಯೋಗ-ವ್ಯವಹಾರ ಮಾಡಿ ನಿಮ್ಮ ಆದಾಯ ಬೆಳೆಸಿಕೊಳ್ಳಿರಿ. ಪುಟ: 224 ಬೆಲೆ: ರೂ. 10. ಪೂರ್ತನ ಸಣ್ಣ ಉದ್ಯಮ ಪುಟಗಳು: 464 ಬೆಲೆ: 16 ರೂ. ಅಂಚೆ ವೆಚ್ಚ ರೂ. 3.00.

Cottage Industry (NU-1) P. B. No. 1262, Anguri Bagh Market, Delhi-6

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

Ex. C. 99/72
in O. S 242/71

ಕೆ. ವಿ. ಕೃಷ್ಣ ರಾವ್ —ಅರ್ಜಿದಾರ
VS
ಪಿ. ಸೀತಾರಾಮ ಭಟ್ —ಎದ್ರಿ

ಎದ್ರಿ—ಸೀತಾರಾಮ ಭಟ್, S/o ಕೃಷ್ಣ ಭಟ್, ಮಚ್ಚಿನ ಗ್ರಾಮ, ಬೆಳ್ತಂಗಡಿ ತಾಲೂಕು—ಇವರಿಗೆ ಕೋರ್ಟು ಹುಕುಂ ಮೇರೆಗೆ ತಿಳಿಸುವುದೇನೆಂದರೆ—

ನಿಮ್ಮ ಸ್ಥಿರಾಸ್ತಿಗಳ ಪೈಕಿ ಮಚ್ಚಿನ ಗ್ರಾಮದ ಸ. ನಂ. 231-2, 233-2, 144-3A2 144-4, 144-10, 144-11, 144-12A, 295-1B ಮತ್ತು 295-2-ಇವುಗಳನ್ನು ಅರ್ಜಿದಾರರು ಅನಂರೆ ಬರಬೇಕಾದ ಐವೇಜಿನ ನಸೂಲಿಗಾಗಿ ಜಪ್ತಿಪಡಿಸಿದ್ದು, ನೀವು ಈ ಆಸ್ತಿಗಳನ್ನು ಯಾವ ರೀತಿಯಿಂದಲಾದರೂ ಪರಾಧೀನ ವಗೈರೆಗಳನ್ನು ಮಾಡಕೂಡದು. ಈ ಆರ್ಜಿಯನ್ನು ನಿಮ್ಮ ಹಾಜರಾತಿ ಬಗ್ಗೆ ತಾ. 31-8-72ರಂದು ಬೆಳಿಗ್ಗೆ 11 ಗಂಟೆಗೆ ಇಟ್ಟಿರುತ್ತದೆ. ನೀವು ಖುದ್ದಿನಂದ ಯಾ ನಕೀಲರ ಮುಖಾಂತರ ಹಾಜರಾಗದಿದ್ದಲ್ಲಿ, ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲ್ಪಡುವುದು.

K. R. K. Bhat
Advocate for petitioner
Belthangady
10—8—72

In the Court of the IInd Additional Munsiff at Puttur, S. K.

Ex. C. 310/72
O. S. 259/71

B. Umbu alias Pakrunhi Beary —Petitioner
Janardana Gowda —Respondent
Pro-Order Notice

I-Janardana Gowda
S/o Mallappa Gowda
Kallumbi in Aletty Village
Sullia Taluk, S. K.

Please take notice that the above execution case stands posted to 25-8—1972 for your appearance and you are hereby directed to appear before the court on the said day at 11-00 A. M in person or through an Advocate failing which the case will proceed in your absence.

(By Order of the Court)
K. Venkatramana Gowda
B. Sc., B. L.,
Advocate for Petitioner

ಪ್ರಗತಿಯ ದಾರಿಯಲ್ಲಿ

ಸ್ವಾತಂತ್ರ್ಯಾನಂತರ ನಮ್ಮ ರಾಷ್ಟ್ರ ಆರ್ಥಿಕ ರಂಗದಲ್ಲಿ ಸಾಧಿಸಿದ ಪ್ರಗತಿಯ ಸ್ಥೂಲ ಸೂಚನೆ ಇಲ್ಲಿದೆ:

‡ ಕೃಷಿ ಉತ್ಪಾದನೆ ಹೆಚ್ಚು ಕಡಿಮೆ ದ್ವಿಗುಣಗೊಂಡಿದೆ.
‡ ಔದ್ಯೋಗಿಕ ಉತ್ಪಾದನೆ ನೂರಕ್ಕೆ 82 ಪಾಲು ಹೆಚ್ಚಾಗಿದೆ.
‡ ವಿದ್ಯುತ್ ಸ್ಥಾಪಕ ಶಕ್ತಿ ಎಂಟು ಪಾಲು ಅಧಿಕಗೊಂಡಿದೆ.
‡ ರಸ್ತೆಗಳ ಜಾಲ ಇಮ್ಮಡಿಯಾಗಿದೆ.
‡ ವ್ಯಕ್ತಿಯ ಸರಾಸರಿ ವಯೋಮಾನ 32 ವರ್ಷಗಳಿಂದ 52ವರ್ಷಗಳಿಗೇರಿದೆ.
‡ ಅಂದು ಪ್ರತಿ ನೂರರಲ್ಲಿ 16 ಮಂದಿ ಓದು ಬರಹ ಬಲ್ಲವರಿದ್ದರು. ಈಗ ಪ್ರತಿಶತ 30 ಮಂದಿ ಸಾಕ್ಷರರು.
‡ ಗ್ರಾಮಾಂತರ ಅಂಚೆ ಕಚೇರಿಗಳ ಸಂಖ್ಯೆ ಮೂರುಪಾಲು ಹೆಚ್ಚಿದೆ.
‡ ವೈದ್ಯರ ಸಂಖ್ಯೆ ದ್ವಿಗುಣಿತಪ್ರಾಯವಾಗಿದೆ.
‡ ನಿರ್ಯಾತ ವ್ಯಾಪಾರದ ಮೊತ್ತ ಮೂರುಪಾಲು ಹೆಚ್ಚಾಗಿದೆ.
‡ ಪ್ರಾಥಮಿಕ ಶಾಲೆಗಳಿಗೆ ಹೋಗುವ ಮಕ್ಕಳ ಸಂಖ್ಯೆ ಎರಡುಪಾಲು ಅಧಿಕಗೊಂಡಿದೆ.

THE SOUTH KANARA CENTRAL CO-OPERATIVE WHOLESALE STORES LTD.,
'SAHAKARI MAHAL' : : MANGALORE-1

Wholesalers in

FOOD GRAINS,
TEXTILES,
PROVISIONS,
CONSUMER GOODS
ETC.

Visit

JANATHA BAZAAR
for all your requirements

Sri S. Narsappaya, B. A. B. L.,
President.

ಮೈಸೂರು ರಾಜ್ಯಸಹಕಾರಿ
ಭೂ ಅಭಿವೃದ್ಧಿ ಬ್ಯಾಂಕ್ ಲಿ.,
ಅಲ್‌ಬರ್ಟ್ ವಿಕ್ಟರ್ ರಸ್ತೆ, ಬೆಂಗಳೂರು—18

ನಮ್ಮ ಬ್ಯಾಂಕಿನಿಂದ ರಾಜ್ಯದ ವ್ಯವಸಾಯಗಾರರಿಗೆ ಕೃಷಿ ಅಭಿವೃದ್ಧಿ ಕಾರ್ಯಗಳಿಗೆ, ಅಂದರೆ, ನೀರಾವರಿ ಬಾವಿಗಳನ್ನು ತೋಡಲು, ಪಂಪುಸೆಟ್ಟು ಹಾಗೂ ಟ್ರ್ಯಾಕ್ಟರುಗಳನ್ನು ಕೊಳ್ಳಲು, ತೋಟಗಳನ್ನು ಬೆಳೆಸಲು ಹಾಗೂ ಜಮೀನು ಸಮತೋಲನ ಮಾಡಲು ದೀರ್ಘಾವಧಿ ಸಾಲಗಳನ್ನು ನೀಡುತ್ತೇನೆ.
ಈ ಕಾರ್ಯಗಳಿಗಾಗಿ ನಾವು ಈಗಾಗಲೆ 60 ಕೋಟಿ ರೂ.ಗಳಿಗೂ ಮಿಕ್ಕಿ ಸಾಲ ವಿತರಣೆ ಮಾಡಿದ್ದೇವೆ.
ಹೆಚ್ಚಿನ ಮಾಹಿತಿಗಳಿಗೆ ರಾಜ್ಯದಾದ್ಯಂತ ವ್ಯಾಪಿಸಿರುವ ನಿಮ್ಮ ಸಮೀಪದ ತಾಲೂಕು ಭೂ ಅಭಿವೃದ್ಧಿ ಬ್ಯಾಂಕನ್ನು ಇಂದೇ ಸಂದರ್ಶಿಸಿ.

25ನೇ ಸ್ವಾತಂತ್ರ್ಯೋತ್ಸವದ ಶುಭಾಶಯಗಳು!

ಶ್ರೀ ಕೃಷ್ಣ ಜ್ಯುವೆಲರಿ ಮಾರ್ಟ್
ತೆಂಕಪೇಟೆ, ಉಡುಪಿ. ಫೋನ್: 366
ಉತ್ತಮ 22ct ಖಾತ್ರಿ ಚಿನ್ನದ ಅಭರಣಗಳನ್ನು ಮತ್ತು ಬೆಳ್ಳಿಯ ಯಾವತ್ತೂ ಒಡವೆಗಳನ್ನು ಖಾತ್ರಿಯಾಗಿ ಮನಸ್ಸಿಗೆ ಒಪ್ಪುವಂತೆ ತಯಾರಿಸಿ ಕೊಡಲಾಗುವುದು.

ಶ್ರೀ ಕೃಷ್ಣ ವೆರೈಟಿ ಸ್ಟೋರ್ಸ್
ತೆಂಕಪೇಟೆ, ಉಡುಪಿ. ಫೋನ್: 366
ರೇಡಿಯೋ ಮತ್ತು ಟ್ರಾನ್ಸಿಸ್ಟರುಗಳು, ಫ್ಯಾನುಗಳು,
ಸ್ಟೀಲು ಕವಾಟು, ಸೋಫಾ ಕಂಬೆಡ್, ಹೊಲಿಗೆ ಯಂತ್ರಗಳು, ಗಡಿಯಾರಗಳು,
ಎಲ್ಲಾ ತರದ ಸ್ಟೆಯಿನ್‌ಲೆಸ್ ಸ್ಟೀಲಿನ ಪಾತ್ರೆಗಳು,
ಇತ್ಯಾದಿ ಸಾಮಾನುಗಳಿಗಾಗಿ ಇಂದೇ ಸಂದರ್ಶಿಸಿರಿ!
ಮ್ಯಾನೇಜರು : ಯು. ರಾಘವೇಂದ್ರಕೃಷ್ಣ ಭಟ್

With Best Compliments From:

K. S. Abdullah & Co.

Merchants, Manufacturers, Commission Agents & Exporters,

KASARAGOD, (KERALA, S. INDIA)

Esso Dealers
Thalapady, (S.K.)
Phone:77 (Ullal)

Volga & Priya
Restaurants,
Bangalore.
Phones: 70040, 74342, 29363, 64 & 65

M/s. ISLAMIA TILE COMPANY
KASARAGOD.
Phone: 19

M/s. CONSOLIDATED ENGINEERING ENTERPRISES
MANGALORE.

M/s. SOUTHERN INDIA MARINE PRODUCTS CO., (P) LTD.

Managing Director & Directors: *K. S. Abdullah & Bros.*

KASARAGOD, (Kerala, S. India)

Sister Concerns: *MANGALORE SEA FOODS,*
Mangalore (India) Phone: 57 (Ullal)

Phones: 115, 119, 151, And 176 KASARAGOD.

NAVAYUGA
17-8-1972

REGD. No. 176
LICENCE No. 33
License to Post without Prepayment



ಸಿಂಡಿಕೇಟ್ ಬ್ಯಾಂಕ್

ಮೂರು ವರ್ಷಗಳಲ್ಲಿ (ಜುಲೈ 1969ರಿಂದ ಮೇ 1972ರ ವರೆಗೆ)
ಅಗ್ರಪ್ರಾಶಸ್ತ್ಯರಂಗಗಳಲ್ಲಿ ಸಾಧಿಸಿದ ಪ್ರಗತಿ

- ಕೃಷಿಗೆ ನೀಡಿದ ಆರ್ಥಿಕ ನೆರವಿನಲ್ಲಿ ಶೇಕಡಾ 137 ಹೆಚ್ಚಳ
- ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ನೀಡಿದ ಸಾಲಪಲ್ಲಿ ಶೇಕಡಾ 103 ಹೆಚ್ಚಳ
- ರಸ್ತೆ ಸಾರಿಗೆ ಸಂಚಾಲಕರಿಗೆ ನೀಡಿದ ಮುಂಗಡಗಳಲ್ಲಿ ಶೇಕಡಾ 99 ಹೆಚ್ಚಳ
- ಸ್ವಂತ ಉದ್ಯೋಗದ ವ್ಯಕ್ತಿಗಳಿಗೆ ಮತ್ತು ವೃತ್ತಿಪರರಿಗೆ ನೀಡಿದ ಆರ್ಥಿಕ ನೆರವಿನಲ್ಲಿ ಶೇಕಡಾ 215 ಹೆಚ್ಚಳ
- ಚಿಲ್ಲರೆ ವ್ಯಾಪಾರಿಗಳಿಗೆ ಮತ್ತು ಅಲ್ಪ ಪ್ರಮಾಣದ ವಹಿವಾಟುಗಳಿಗೆ ನೀಡಿದ ಮುಂಗಡಗಳಲ್ಲಿ ಶೇಕಡಾ 99 ಹೆಚ್ಚಳ
- ವ್ಯಾಸಂಗಕ್ಕೆ ನೀಡಿದ ಹಣದ ನೆರವಿನಲ್ಲಿ ಶೇಕಡಾ 217 ಹೆಚ್ಚಳ
- ರಫ್ತು ವ್ಯವಹಾರಕ್ಕೆ ನೀಡಿದ ಮುಂಗಡಗಳಲ್ಲಿ ಶೇಕಡಾ 143 ಹೆಚ್ಚಳ

ರಾಷ್ಟ್ರ ಜೀವನದ ಸೇವೆಯಲ್ಲಿ

ಸಿಂಡಿಕೇಟ್ ಬ್ಯಾಂಕ್

ಪ್ರಧಾನ ಕಚೇರಿ: ಮಣಿಪಾಲ (ಮೈಸೂರು ರಾಜ್ಯ)

ಶಾಖೆಗಳು 530ಕ್ಕೂ ಮಿಕ್ಕಿವೆ ಕೆ. ಕೆ. ಪೈ ಕಸ್ತೂರಿಯನ್

Edited, Printed & Published by K. H. Shetty at the Navayuga Press, S. India.

ವಿಶ್ವಾಸದಾಯಕ
ಆಯುರ್ವೇದ
ಔಷಧಗಳಿಗೆ
ವಿಶ್ವಾಸದ ಸಂಸ್ಥೆ:
ನಾಯಕ
ಆಯುರ್ವೇದಾಶ್ರಮ
ಕಟಪಾಡಿ. ದ. ಕ.



ಪೌಲ್ಟ್ರಿರಗತಿಯ
ಉಪಾಹಾರ
ಮಂದಿರ
ಉಡುಪಿ
ಶ್ರೀಕೃಷ್ಣ ವಿಲಾಸ
ಕಾರವಾರ

ಸಂಪುಟ ೫೧
ಸಂಚಿಕೆ ೫೦

NAVAYUGA

24-8-1972

ಪಾಕಿಸ್ತಾನದಿಂದ

ಮಾನವೀಯತೆಯ ದುರುಪಯೋಗವೆ?

ಭಾರತ ವ.ತ್ತು ಪಾಕಿಸ್ತಾನಗಳ ನಡುವೆ ನಡೆದ ರೃಂಗ ಸಮ್ಮೇಳನವೊಂದು ಶುಭಾರಂಭನೆಂದು ಹೇಳಲಾಯ್ತು, ಹಾಗೆ ತಿಳಿಯಲಾಯ್ತು. ಈ ಸಮ್ಮೇಳನದಲ್ಲಿ ಆದ ಸ್ವೀಕೃತ ಅಂಶಗಳ ಬಗೆಗೆ ಎರಡೂ ದೇಶಗಳಲ್ಲಿ ಭಿನ್ನಮತವಿದೆಯೆಂಬುದು ತೀರಾ ಸಹಜ. ವ್ಯಕ್ತಿ-ವ್ಯಕ್ತಿಯ ವಿಚಾರಧಾರೆಗೆ ವ್ಯತ್ಯಾಸವಿರುವಾಗ ಈ ವಿರೋಧಾಭಿಪ್ರಾಯವಿಲ್ಲವಾದರೇನೇ ಆಶ್ಚರ್ಯವೆನ್ನಿಸುತಿತ್ತು. ಪಾಕ್ ರಾಷ್ಟ್ರಪತಿ ಭುಟ್ಟೊ ಸಿಮ್ಲಾ ಒಡಂಬಡಿಕೆಗೆ ತನಗನುಕೂಲವೆನಿಸಿದ ವ್ಯಾಖ್ಯೆ ನೀಡಿದರು, ಉಳಿದುಕೊಂಡರು. ಆದರೆ, ಅಂತಹ ವ್ಯಾಖ್ಯೆ ನೀಡುವ ಅಗತ್ಯ ಪ್ರಧಾನಿ ಇಂದಿರಾ ಗಾಂಧಿಗೆ ಬರಲಿಲ್ಲ, ಸಂತೋಷ.

ಭಾರತದಲ್ಲಿ-ಸಿಮ್ಲಾ ಒಡಂಬಡಿಕೆಗೆ ತುಸು ವಿರೋಧ ತಲೆದೋರಿದೆ. ಭಾರತೀಯ ಜನಸಂಘವೇ ಈ ಗುಂಪಿನ ನೇತೃತ್ವ ವಹಿಸಿದೆ. ಈ ಒಡಂಬಡಿಕೆ ದೇಶದ ೬೦ ಕೋಟಿ ಜನತೆಗೆ ಮೂಡಿದ ವಂಚನೆಯೆನ್ನುವಷ್ಟರ ಮಟ್ಟಿಗೂ ಅದು ಮುಂದುವರಿದಿದೆ. ವಿಶ್ವಸಂಸ್ಥೆ ಮೂಡಿದ ಆರೋಪವನ್ನದು ರಕ್ಷಣಾ ಮಂತ್ರಿ ಶ್ರೀ ಜಗಜ್ಜೀವನ ರಾಮರ ಮತ್ತು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರ ಮೇಲೆ ಹೊರಿಸಿದೆ.

ಕಹಿ ಭಾವನೆಗಳಿಗೆ ಕಾರಣವಾದ ಅಂಶಗಳು ಮುಖ್ಯವಾಗಿ ಎರಡು. ಮೊದಲನೆಯದಾಗಿ ನಾವು ಸಮರಾವಧಿಯಲ್ಲಿ ಗೆದ್ದುಕೊಂಡ ಭೂಪ್ರದೇಶವನ್ನು (ಕಾಶ್ಮೀರದಲ್ಲಿ ಬಿಟ್ಟು) ಪಾಕಿಸ್ತಾನಕ್ಕೆ ಪುಕ್ಕಟೆಯಾಗಿ ಬಿಟ್ಟು ಕೊಡಲೊಪ್ಪಿದ್ದು ಮತ್ತು ಎರಡನೆಯದಾಗಿ ಯುದ್ಧದ ವೆಚ್ಚವೆಂದು ಪಾಕಿಸ್ತಾನದಿಂದ ಪರಿಹಾರ ಕೇಳದೆ ಬಿಟ್ಟದ್ದು. ಒಡಂಬಡಿಕೆಯನ್ವಯ ಅದು ಸ್ಥಿರೀಕರಣವಾದ ಮೇಲೆ ಉಭಯ ಸೇನೆಗಳೂ ತಂತಮ್ಮ ಹಿಂದಿನ ನೆಲೆಗೆ ಮರಳ ಬೇಕಾಗುವುದು. ಪಾಕ್ ಎಸೆಂಬ್ಲಿಯಲ್ಲಿ ಇದು ಈಗಾಗಲೇ ಚರ್ಚಿತವಾಗಿ ಬಿಟ್ಟಿದೆ. ಸಮ್ಮೆಲ್ಲಿ ಚರ್ಚೆಗೆ ಮೊದಲೇ ರಾಷ್ಟ್ರಪತಿಗಳು ಒಡಂಬಡಿಕೆಯನ್ನು ಸ್ಥಿರೀಕರಿಸಿ ಬಿಟ್ಟಿದ್ದಾರೆ.

ಈ ಅಸಮಾಧಾನದಲ್ಲಿ ಅರ್ಥವಿಲ್ಲವೆಂದು ಹೇಳುವಂತಿಲ್ಲ. ಸಂರಕ್ಷಣಾ ಸಚಿವರಾಗಲಿ, ಪ್ರಧಾನಿಯವರಾಗಲೀ "ಈ ಬಾರಿ ನಾವು ಶತ್ರುವಿನಿಂದ ಗೆದ್ದು ಕೊಳ್ಳುವ ಭೂಪ್ರದೇಶವನ್ನು ಮರಳಿ ಕೊಡಬೇಕೆನ್ನುವ ನಿರ್ಬಂಧವಿಲ್ಲ'ವೆಂದದ್ದು ನಿಜ. ಈ ಉದ್ಗಾರ ಜನತೆಯಲ್ಲೂ ಸೈನಿಕರಲ್ಲೂ ನಪೋತ್ಸಾಹ ಮೂಡಿಸಿತ್ತೆಂಬಂಶವನ್ನೂ ಒಪ್ಪಿಕೊಳ್ಳೋಣ. ಆದರೆ, ಒಡಂಬಡಿಕೆ 'ನಿರ್ಬಂಧ'ವಲ್ಲವೆಂಬ ವಾಸ್ತವಿಕಾಂಶವನ್ನು ನಾವು ನುರೆಯಬಾರದು. ಭಾರತದ ಮೇಲೆ ಯುದ್ಧ ಹೇರಲ್ಪಟ್ಟದ್ದು, ಇದರಿಂದಾಗಿ ಕೋಟ್ಯಂತರ ಹಾನಿ ಸಂಭವಿಸಿದ್ದು -ಇದೂ ಸತ್ಯವೇ. ಆದರೆ, ಇದಕ್ಕಾಗಿ ಪರಿಹಾರ ಕೇಳುವ ಪರಿಪಾಠ ಮಧ್ಯಯುಗದ್ದೆನಿಸುತ್ತದೆ.

ಭಾರತ-ಪಾಕ್ ಸಮರದಲ್ಲಿ ಪಾಕಿಸ್ತಾನ ಸೋತು ಹೋಗಿದೆ. ಇದನ್ನು ಅಧ್ಯಕ್ಷ ಭೂಟ್ಟೋರೂ ಒಪ್ಪಿಕೊಂಡಿದ್ದಾರೆ. ಈ ಒಪ್ಪಿಗೆ ತಾತ್ಕಾಲಿಕವಿರಬಹುದು, ಸಾರ್ವಕಾಲಿಕನಿರಲೂ ಬಹುದು ಆ ಮಾತು ಬೇರೆ. ಭಾರತದೊಡನೆ ಉತ್ತಮ ಸಂಬಂಧ ಸ್ಥಾಪಿಸುವ ಇರಾದೆಯಿಂದ ಭುಟ್ಟೋ ಒಡಂಬಡಿಕೆಗೆ ಬಂದಿದ್ದಾರೆ ಎಂದೇ ತಿಳಿಯೋಣ. ಭಾರತವೂ ವಿಜಯೋನ್ಮಾದದಿಂದ ಆದರೆಲ್ಲಿ ಭಾಗವಹಿಸುವುದಿಲ್ಲವೆಂಬ ಭರವಸೆ ನೀಡಿತ್ತು. ಸಮರವೆಚ್ಚ ಕೇಳುವುದಾಗಲೀ ವಶಪಡಿಸಿಕೊಂಡ ಭೂಪ್ರದೇಶವನ್ನು ಬಿಟ್ಟುಕೊಡುವುದಾಗಲೀ ಈ ಭರವಸೆಗೆ ಹೊರತಾದದ್ದು.

ಪಾಕ್ ನೆಲವನ್ನು ನಮ್ಮ ವೀರ ಸೈನಿಕರು ವಶಪಡಿಸಿಕೊಂಡಿದ್ದಾರೆ ನಿಜ. ನಮ್ಮ ಸಮರದ ಉದ್ದೇಶ್ಯವೇನು? ನಾವು ಈ ನೆಲವನ್ನು ಬಿಟ್ಟು ಕೊಡಲು ಒಪ್ಪದೆ ಹೋದರೆ, ಈ ಉದ್ದೇಶ್ಯದ ಬಗ್ಗೆ ಜಗತ್ತಿನಲ್ಲಿ ಶಂಕೆ ಮೂಡಬಲ್ಲದು. ಪಾಕಿಸ್ತಾನವನ್ನು ಆಕ್ರಮಿಸುವಾಗಲಿ, ಅದನ್ನು ನಿರ್ನಾಮ ಮಾಡುವುವಾಗಲಿ, ಅಥವಾ ಪಾಕ್ ನೆಲವನ್ನು ವಶಪಡಿಸುವುದಾಗಲಿ ನಮ್ಮ ಉದ್ದೇಶವಾಗಿರಲಿಲ್ಲ. ನಮ್ಮ ವೀಲಾಗಬಹುದಾದ ಆಕ್ರಮಣಗಳಿಂದ ರಕ್ಷಿಸಿಕೊಳ್ಳುವುದಷ್ಟೇ ನಮ್ಮ ಉದ್ದೇಶ್ಯವಾಗಿತ್ತು. ನಮಗೆ ಭೂಮಿ ದಾಹವಿರಲಿಲ್ಲ. ಪಾಕ್ ಹೊರಿಸಿದ ಸಮರದಲ್ಲಿ ನಾವು ಅನಿವಾರ್ಯವಾಗಿ ಪಾಲುಗೊಳ್ಳಲೇ ಬೇಕಾಯ್ತು. ಈಗ, ಅವರವರ ನೆಲವನ್ನು ಅವರವರು ಬಿಟ್ಟು ಕೊಡುವುದು ಸೌಹಾರ್ದಕ್ಕೆ ನಾಂದಿಯಾಗುತ್ತದೆ. ಇನ್ನು ಪರಿಹಾರವೆ ಮೂತೂ ಆಸ್ಪೆ. ಆದರೆ, ನಮಗಾದ ವೆಚ್ಚವನ್ನು ಪಾಕಿಸ್ತಾನ ಎಲ್ಲಿಂದ ಕೊಡಬೇಕು? ಈಗಾಗಲೇ ಆರ್ಥಿಕವಾಗಿ ಕಂಗೆಟ್ಟ ಪಾಕಿಸ್ತಾನ ಹಣವನ್ನೆಲ್ಲಿಂದ ತರಬೇಕು? ಸಮರವೆಚ್ಚ ಭಂಗಲಾರದ ಟಪ್ಪು ಸುಲ್ತಾನ ತನ್ನಿಬ್ಬರು ಮಕ್ಕಳನ್ನು ಬ್ರಿಟಿಷರಲ್ಲಿ ಗಿರವಿಯಿಟ್ಟ ಕಥೆ ಬಹಳ ಹಳೆಯದಲ್ಲ. ಆದರೆ, ಇದು ಇಂದಿಗೆ ನಾಗರಿಕವೂ ಅಲ್ಲ.

ಕಾಶ್ಮೀರದ ಸಂಬಂಧದಲ್ಲಿ ನಾವು ನಿಲುವನ್ನು ತ್ಯಜಿಸಿಲ್ಲ. ಅಲ್ಲಿ ನಾವು ನಮ್ಮ ವಶದಲ್ಲಿರುವ ನೆಲವನ್ನು ಬಿಟ್ಟು ಕೊಡುವುದಿಲ್ಲ. ಕಾಶ್ಮೀರ ಎಂದಿಗೂ, ನಮ್ಮದೇ. ಅದನ್ನು ಪಾಕಿಸ್ತಾನ ಆಕ್ರಮಿಸಿದೆಯೆಂಬ ನಿಲುಮೆಯೂ ಶಾಶ್ವತವೇ. ಇದೇ ತೆರನ ನೀತಿ ಪಾಕಿಸ್ತಾನದ್ದೂ ಇರಬಹುದು. ಆ ಮಾತು ಬೇರೆ.

ಸಿಮ್ಲಾ ಸಮ್ಮೇಳನ ಶುಭಾರಂಭ. ಶ್ರೀ ಭುಟ್ಟೊ ಮಹಾಶಯರಿಗೆ ಈ ಸಮ್ಮೇಳನದ ಫಲಶ್ರುತಿಯ ಮೇಲೆ ಅಪೆಷ್ಟು ಆಸ್ಥೆಯಿದೆಯೆಂಬುದು ನಮಗೆ ಮುಖ್ಯವಲ್ಲ. ನಮಗೆಷ್ಟಿದೆಯೆಂಬುದು ವಿಚಾರಣೀಯ. ಸರ್ವೇಸಾಮಾನ್ಯವಾಗಿ ಸಿಮ್ಲಾ ಒಡಂಬಡಿಕೆಗೆ ಹಾರ್ದಿಕ ಸ್ವಾಗತ ಭಾರತದಲ್ಲಿ ದೊರೆತಿದೆ. ಇದಕ್ಕೆ ರಾಜಕೀಯನೇ ಕಾರಣವೆಂದು ಗೊಣಗುವವರಿಗೆ ಇದರ ವಿರೋಧವೂ ರಾಜ್ಯಕೀಯವೇ ಎಂದು ಉತ್ತರಿಸಬೇಕಾಗುತ್ತದೆ.

ನಾವು ಉತ್ತಮ ನೆರೆ ಹೊರೆ ಬಯಸುವವರು, ಶಾಂತಿಯಿಂದ ನೆಮ್ಮದಿಯಿಂದ ಬದುಕಲೆಳಸುವವರು ಪರರ ಸುಖ ದುಃಖಗಳ ಬಗೆಗೆ ನಮಗೆ ಅನುಕಂಪವಿರಬೇಡವೆ? ಪರತೊಡವೆ ನಮಗೆ ಬೇಡ. ಪಂಚಶೀಲದ ಆದರ್ಶ ತತ್ವಗಳಿಂದ ಪ್ರೇರಿತವಾದದ್ದು ನಮ್ಮ ವಿದೇಶ ನೀತಿ. ಪಾಕಿಸ್ತಾನದ ರಾಜ್ಯಕೀಯ ಇದುವರೆಗೆ ತಪ್ಪು ದಾರಿಯಲ್ಲಿ ನಡೆದು ಬಂದಿರುವುದು ನಿಜವಾದರೂ ಇನ್ನು ಮುಂದಾದರೂ ಅದೇಕೆ ಸರಿದಾರಿಯಲ್ಲಿ ಪಾದಾರ್ಪಣ ಮಾಡಬಾರದು? ಇದುವರೆಗೂ ಭಾರತವನ್ನು ಕಹಿಯೂಗಿ ನೋ

(ಹನ್ನೆರಡನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
172 ಶಾಖೆಗಳಿಂದ ಹಬ್ಬರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಶೇವಣಾತಿಗಳ ಮೇಲೆ 7½ % ನರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
(ಸ್ಥಾಪನೆ: 1931)
ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1.
ಎಮ್. ಸುಂದರ್‌ರಾಮ್ ಶೆಟ್ಟಿ,
ಜೆಯರ್‌ಮೆನ್.

ಶ್ರೀ ಕಾರಂತ ಪಣಮ್ಬೂರ್

ಭಾರತೀಯ ಮತ್ತು ಭಾರತೀಯತೆ

'ಭಾರತೀಯ'ರೆನ್ನಲು, ಒಪ್ಪಲು ಸ್ವೀಕರಿಸಲು ಹಿಂಜರಿಯುವವರಿಂದ ಭಾರತೀಯತೆಯ ಸಂರಕ್ಷಣೆ ಹೇಗಾದೀತು? ನಮ್ಮ ಹೃದಯಕ್ಕೆ ಹಾಕಿದ ಪ್ರಶ್ನೆಯಿದು. ಉತ್ತರಿಸ ಬಲ್ಲಿರಾ?

ಹುಟ್ಟು ಭಾರತೀಯನಾಗ್ಯಾಗ್ಯೂ ಭಾರತೀಯನೆನ್ನಿಸಿಕೊಳ್ಳಲು ಎಷ್ಟು ಜನರಿಗೆ ಹೆಮ್ಮೆಯೆನಿಸುತ್ತದೆ ? ಹಾಗೆಯೇ ತಾನು ಅಮೇರಿಕಾ, ರಷ್ಯಾ ಮೊದಲಾದ ಹೊರ ರಾಷ್ಟ್ರಗಳಿಗೆ ಹೋಗಿ ಬಂದವನೆಂದು ಅದೆಷ್ಟು ಜನ ಕೊಚ್ಚಿ ಕೊಳ್ಳುವುದಿಲ್ಲ ? 'ಫಾರಿನ್ ರಿಟರ್ನ್ಡ್' ಎಂದೊಡನೆ ಅದೇನೋ ಆಸಮಾನ ಗೌರವ. ಹೊರ ರಾಷ್ಟ್ರಗಳಿಗೆ ಹೋದ ಬಗೆಯೆಂತು ಎಂಬುದನ್ನು ಯಾರೂ ಗಮನಕ್ಕೆ ತಂದುಕೊಳ್ಳುವುದಿಲ್ಲ. ಯಾವುದೇ ರೀತಿಯಲ್ಲಾಗಲೀ ಅಗಾಧವಾಗಿ ಶೇಖರಿಸಲ್ಪಟ್ಟ ಸಂಪತ್ತಿನ ಬಲ ಮಾತ್ರದಿಂದ ವಿದೇಶ ಯಾತ್ರೆ ಮುಗಿಸಿದವನಾಗಲೀ; ಮಂತ್ರಿಯಾಗಿಯೋ, ಉನ್ನತ ಸರಕಾರಿ ಹುದ್ದೆಯಲ್ಲಿಯೋ ಇರುವ ಮಾನವ, ಚಿಕ್ಕಪ್ಪ ದೊಡ್ಡಪ್ಪನವರ ಮಸಲತ್ತಿನಿಂದಾಗಿ ದಿಗ್ವಿಜಯ ನಡೆಸಿದವನಾಗಲೀ ಇನ್ನಿತರ ಸ್ಥಾನಿಕ ಬೆಲೆಗಳಿಂದಾದರೂ ವಿದೇಶ ಯಾತ್ರೆ ಸಾಧ್ಯ ಎನ್ನಿಸಿಕೊಂಡವನಾಗಲೀ ಆತನಿಗೆ ಅಪೂರ್ವ ಮರ್ಯಾದೆ ಶತಸಿದ್ಧ.

ಹಾಗೆಂದೊಡನೆ ಸಿಂಹಳ, ಪಾಕಿಸ್ತಾನ, ಬರ್ಮಾ ಮೊದಲಾದ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಭೇಟಿಕೊಟ್ಟಂತಹ ವ್ಯಕ್ತಿಗಳಿಗೆ ಆಂತಹ ಬೆಲೆಯಿಲ್ಲ. ಈ ಪ್ರತಿಕ್ರಿಯೆಗಳಿಂದ ಸ್ಪಷ್ಟವಾಗುವ ಒಂದೇ ಒಂದು ವಿಷಯವೆಂದರೆ 'ಗೆದ್ದ ಎತ್ತಿನ ಬಾಲ ಹಿಡಿಯುವ ಜನರು ನಾವು'. ಪ್ರತಿಷ್ಠಿತ ರಾಷ್ಟ್ರಗಳೆಂದರೆ ನಮಗೆ ಎಲ್ಲಿಲ್ಲದ ಅಭಿಮಾನ. ಆಂತೆಯೇ ಆ ರಾಷ್ಟ್ರಗಳಲ್ಲಿ ತಯಾರಿಸಲ್ಪಟ್ಟಂತಹ ವಸ್ತುಗಳೆಂದರೆ ಅವುಗಳ ಮೇಲೆ ನಮಗೆ ಅತೀ ಹೆಚ್ಚು ಪ್ರೀತಿ. 'ಭಾರತದಲ್ಲಿ ತಯಾರಿಸಲ್ಪಟ್ಟದ್ದು-Made in India' ಎಂಬ ಮುದ್ರೆ ಕಂಡೊಡನೆ ಮೂಗು ಮುರಿಯುವ ನಮ್ಮ ಜನ ಅಮೇರಿಕಾ ಇಂಗ್ಲೆಂಡ್‌ಗಳಲ್ಲಿ ತಯಾರಿಸಲ್ಪಟ್ಟಂತಹ ವಸ್ತುಗಳೆಂದರೆ ಒಂದಕ್ಕೆ ಹತ್ತರಷ್ಟು ಬೆಲೆ ಕೊಟ್ಟು ಕೊಳ್ಳಲು ಸದಾ ಸಿದ್ಧರಿರುತ್ತಾರೆ.

ಭಾರತದಲ್ಲೇ ತಯಾರಿಸಲ್ಪಟ್ಟಂತಹ ವಸ್ತುಗಳಲ್ಲಿ ಕೂಡಾ ವಿದೇಶಿ ಸಹಭಾಗಿತ್ವದ ಕಾರ್ಖಾನೆಗಳಿಂದ ಹೊರಬಂದ ಸಾಮಗ್ರಿಗಳಿಗೆ ಹೆಚ್ಚು ಬೆಲೆ ಮತ್ತು ಗೌರವ. ಆಂತಹ ನಿತ್ಯೋಪಯೋಗೀ ಸಾಧನಸಗಳ ಪೂರೈಕೆ ಮಾಡುವ ವಿದೇಶೀ ಸಹಭಾಗಿತ್ವದ ಕಂಪೆನಿಯ ಎದುರು ಸ್ಪರ್ಧೆಗೆ ನಿಲ್ಲಲಾರದೆ, ಅದೆಷ್ಟೋ ಬಾರಿ ಅಪ್ಪಟ ರಾಷ್ಟ್ರೀಯ ಉದ್ದಿಮೆಗಳು ಇಲ್ಲದಂತಾಗಿವೆ. ಇದರಲ್ಲೂ ಹೊಲಸು ರಾಜಕೀಯ ಇಲ್ಲದಿಲ್ಲ. ವರಿಷ್ಟ ಸ್ಥಾನದಲ್ಲಿರುವ ವ್ಯಕ್ತಿಗಳೇ ಸಂಪೂರ್ಣ ರಾಷ್ಟ್ರೀಯ ಉದ್ದಿಮೆಗಳಿಗೆ ಕಿರುಕುಳ ಕೊಟ್ಟು ಅವುಗಳ ವಿಳಾಸ ಇಲ್ಲದಂತೆ ಮಾಡುತ್ತಾರೆ.

ಇದೀಗ ದುಬಾರಿ ಬೆಲೆಯಲ್ಲಿ ಮಾರಲ್ಪಡುತ್ತಿರುವ ಅಂಬಾಸಿಡರ್ ಕಾರಿಗಿಂತಲೂ ಕಡಿಮೆ ಬೆಲೆಗೆ ಸೂಪರ್ಲು ಸಾಧ್ಯವಿರುವ ಉತ್ತಮ ಗುಣಮಟ್ಟದ ಕಾರುಗಳನ್ನು ಉತ್ಪಾದಿಸಲು ಸಾಧ್ಯವಿದ್ದರೂ ಅಂತಹ ಉತ್ಪಾದನಾ ಸಾಮರ್ಥ್ಯವುಳ್ಳ ಉರ್ಜಿತ ವ್ಯಕ್ತಿಗಳ ಆಪೇಕ್ಷೆ, ಜಿಜ್ಞಾಸೆಗೆ ನೀರೆರೆಯುವ ಬುದ್ಧಿ ನಮ್ಮ ಸರಕಾರೀ ಚುಕ್ಕಾಣಿ ಹಾಲಕರಿಗೆ ಹೊಳೆದೇಇಲ್ಲ.

ಆದ್ದರಿಂದ ನಿದೇಶೀ ವಸ್ತುಗಳ ಗೀಳು ಉಂಟಾಗಲು ಸಾಮಾನ್ಯ ಜನತೆ ಮಾತ್ರ ಕಾರಣರಲ್ಲ; ಸಾಮಾನ್ಯ ಜನತೆಯು ಏಳಿಗೆಯೇ ತಮ್ಮ ಸರ್ವಸ್ವವೆಂದು ಬಡಾಯಿ ಕೊಚ್ಚುವ ಮಾನ್ಯ ಸರಕಾರದ ವರಿಷ್ಠ ಹುದ್ದೆಗಳ ಗುತ್ತಿಗೆದಾರರು ಕೂಡಾ ಅಷ್ಟೇ ಕಾರಣರು.

ನಮ್ಮಲ್ಲಿ ರಾಷ್ಟ್ರೀಯ ಉಸಿರು ಎಷ್ಟು ಉಡುಗಿ ಹೋಗಿದೆಯೆಂದರೆ ಪೂರ್ತ ಭಾರತೀಯ ನೈಪುಣ್ಯದಿಂದಲೇ ಉತ್ಪಾದಿಸಲ್ಪಟ್ಟಂತಹ ಸಾಧನಗಳು ಕೂಡಾ ಜೆನ್ನಾಗಿದ್ದಲ್ಲಿ ಪರರಾಷ್ಟ್ರಗಳಿಂದ ಆಮದು ಮಾಡಲ್ಪಟ್ಟದ್ದು ಎಂಬ ಪ್ರಲೋಭನೆಯನ್ನು ಉಂಟುಮಾಡಲೂ ನಮ್ಮ ಜನತೆ ಹೇಸುವುದಿಲ್ಲ.

ಸುಮಾರು ಒಂದು ವರ್ಷದ ಮೊದಲು ಭಾರತದಲ್ಲೇ ತಯಾರಿಸಲ್ಪಟ್ಟ ಪ್ಲಾಟಿನೆಕ್ಸ್ (Platinex) ಬ್ಲೇಡ್ ಹೊರಬಂದಾಗ Foreign imported platinex blade ಬೇಕೆ? ಎಂಬ ಪ್ರಶ್ನೆ ಬಂದಿತ್ತು. ಅಂದರೆ ಒಳ್ಳೆಯದಾಗಿರುವುದೆಲ್ಲಾ ಪರರಾಷ್ಟ್ರ ನಿರ್ಮಿತವೆಂಬ ಭಾವನೆ ನಮ್ಮಲ್ಲಿ ಬೇರೂರಿದೆ.

ಭಾರತೀಯವೆಂದರೆ ಎಷ್ಟು ನಿಕೃಷ್ಟ ಭಾವನೆಯಿದೆ ಎಂಬುದಕ್ಕೆ ಒಂದೆರಡು ಉದಾಹರಣೆಗಳು ಇಲ್ಲಿವೆ. ಮೊದಕ ದ್ರವ್ಯಗಳನ್ನು ಭಾರತದಲ್ಲೇ ಇರುವ ಕಾರ್ಖಾನೆಗಳಲ್ಲಿ ಶುಚಿಯೊಗಿ, ವ್ಯವಸ್ಥಿತವಾಗಿ ತಯಾರಿಸಲ್ಪಟ್ಟಲ್ಲಿ ಕೂಡಾ, ಅವುಗಳನ್ನು ಫಾರಿನ್ ಲಿಕರ್ಸ್ ಎಂದು ಕರೆಯುವುದೂ, ಸ್ಥಳೀಯವಾಗಿ ಭಟ್ಟಿ ಇಳಿಸಲ್ಪಟ್ಟಂತಹ ಮೂದಕ ದ್ರವ್ಯಗಳನ್ನು ಯಾ ಮದ್ಯಗಳನ್ನು ಕಂಟ್ರಿಯೆಂದು ಕರೆಯುವುದು ನಾವಿಕೆಯೊಗಿದೆ. ಅಂದರೆ ಗುಣಮಟ್ಟದಲ್ಲಿ ಕಡಿಮೆ ಇರುವುದೆಲ್ಲಾ ಕಂಟ್ರಿ, ಉತ್ತಮವಾದುದೆಲ್ಲವೂ ಫಾರಿನ್ ಎಂದ ಹಾಗಾಯ್ತು.

ಒಮ್ಮೆ ಅಲ್ಸೇಶಿಯನ್ ತಳಿಯ ಹಾಗೂ ಸ್ಥಳೀಯ ತಳಿಯ ನಾಯಿಗಳಿರುವ ರಲ್ಲಿ ಭೀಕರ ಹೋರಾಟ ಆರಂಭವಾಗಿತ್ತು. ಬಹಳ ಹೊತ್ತಿನ ಹೋರಾಟದ ಅನಂತರ ಊರ ನಾಯಿಯೇ ವಿಜಯಿಯಾಯ್ತು. ಇದನ್ನು ವೀಕ್ಷಿಸಿದ ಪ್ರೇಕ್ಷಕರೊಬ್ಬರ ಉದ್ಗಾರ ಇಂತಿದೆ. "ಈ ಕಂತ್ರಿ ನಾಯೇ ಪರವಾಗಿಲ್ಲ. ಬುದ್ಧಿ ಕಂತ್ರಿಯಾದರೂ ಬಲಶಾಲಿಯಾಗಿದೆ." ಎಷ್ಟು ವಿಚಿತ್ರ ಟೀಕೆ! ಇಲ್ಲಿಯೂ ಕೀಳು ಮಟ್ಟದ್ದು ಎಂಬರ್ಥದಲ್ಲೇ ಕಂತ್ರಿ ಶಬ್ದ ಪ್ರಯೋಗವಾಗಿದೆ.

ಹಾಗಿದ್ದಲ್ಲಿ ಈ ರೋಗಕ್ಕೆ ಮದ್ದಿಲ್ಲವೆ? ಯಾವ ರೋಗಕ್ಕೂ ಮದ್ದಿಲ್ಲವೆಂದು ಹೇಳುವುದು ಹೆಡ್ಡತನ. ಆದರೆ ನೀಡುವ ಮದ್ದು ಸಂಜೀವಿನಿಯೆಂದು ಹೇಳುವುದೂ ಹುಚ್ಚುತನವಾದೀತು.

ಕಾರ್ಯದ ಪೂರಕವಾಗಿ ಸರಕಾರಿ ಚುಕ್ಕಾಣಿಯ ಜಾಲಗಳೆ ಕಾರ್ಯ ಉತ್ತಮ ರಾಷ್ಟ್ರೀಯ ಮನೋಭಾವನೆಯುಳ್ಳ ವ್ಯಕ್ತಿಗಳಿಂದಲೇ ನಡೆಯಬೇಕು. ಇದು ಹೇಗೆ ಸಾಧ್ಯ? ವಿಧಾನ ಸಭೆ, ಲೋಕಸಭೆಗಳಿಗೆ ನಡೆಯುವ ಚುನಾವಣೆಗಳಲ್ಲಿ ಸಮರ್ಥ, ಪ್ರಾಮಾಣಿಕ, ಅಪ್ಪಟ ರಾಷ್ಟ್ರೀಯ ಮನೋಭಾವನೆಯುಳ್ಳ ವ್ಯಕ್ತಿಗಳನ್ನೇ ಆರಿಸಬೇಕು. ಇದು ಸಾಧ್ಯವಾಗಬೇಕಾದಲ್ಲಿ ಜನರಲ್ಲಿ ಸಾಮಾಜಿಕ ಹಾಗೂ ಪರಿಸರದ ಪ್ರಜ್ಞೆ ಗಳಿರಬೇಕಾದುದು ಅವಶ್ಯ.

ಈಗ ನೀವೆನ್ನಬಹುದು-ಆ ಪ್ರಜ್ಞೆಗಳೆದ್ದಲ್ಲಿ ರಾಷ್ಟ್ರೀಯ ಮನೋಭಾವನೆ ಬೆಳೆಯುವುದಿಲ್ಲವೆ? ಇದು ಹೇಗಾಯ್ತೆಂದರೆ "ಮದುವೆಯೂಗದೆ ಹುಚ್ಚು ಬಿಡದು, ಹುಚ್ಚು ಬಿಡದೆ ಮದುವೆಯೂಗದು." ವಿದೇಶಿ ಹುಚ್ಚು ಹಿಡಿದ ಜನರಿಗೆ ರಾಷ್ಟ್ರೀಯ ಮನೋಭಾವನೆಯೆಂಬ ಪಥ್ಯವನ್ನು ತಂದು ಧಾರೆಯೆರೆಯಬೇಕು. ಇದು ಸಾಗಬೇಕಾಪರೆ ಈ ಪಥ್ಯ ಮನೆ ಮನೆಯ ನೆಟ್ಟಲನ್ನು ತುಳಿಯಬೇಕಾಗುತ್ತದೆ. ಮಹಮ್ಮದ್ ಬೆಟ್ಟಕ್ಕೆ ಹೋಗದಿದ್ದರೆ ಬೆಟ್ಟವಾದರೂ ಮಹಮ್ಮದನಲ್ಲಿಗೆ ಹೋಗಬೇಕಾಗುತ್ತದೆ. ಇದು ಅಷ್ಟೇನೂ ಸಮಸ್ಯಾತ್ಮಕವಾದ ಕಾರ್ಯವಲ್ಲ. ಓದು ಬಲ್ಲವರಲ್ಲಿ ಮತ್ತು ಓದುವ ಹವ್ಯಾಸವಿರುವವರಲ್ಲಿ ಜನ ಜಾಗೃತಿಯುಂಟು ಮಾಡಲು ರಾಷ್ಟ್ರಾಭಿಮಾನ ತುಂಬಿ ತುಳುಕುವ ಸಾಹಿತ್ಯ ಅವ್ಯಾಹತವಾಗಿ ಹೊರ ಹರಿಯಬೇಕು. ನಮ್ಮ ರಾಷ್ಟ್ರವೂ ಜಗತ್ತಿನಲ್ಲಿಯೇ ಹಿರಿಮೆವೆತ್ತ ರಾಷ್ಟ್ರವೆನ್ನಿಸಿಕೊಳ್ಳಬೇಕೆಂಬ ಬಯಕೆಯೂ ಸುಶಿಕ್ಷಿತ ಶ್ರೀಮಂತನಿಗಿದೆಯೋ, ಆತ ಸ್ವಲ್ಪ ಉದಾರ ಧನಸಹಾಯವನ್ನಿತ್ತು ಅಂತಹ ಸಾಹಿತ್ಯ ಬಡವರ ಕೈಗೂ ನಿಲುಕುವಂತೆ ಮಾಡಬೇಕು. ಉತ್ತಮ ಸಾಹಿತ್ಯ ನಿರ್ಮಾಣ ಮಾಡಲು ಸಾಧ್ಯವಿರುವ ವಿದ್ಯಾವಂತರಿಗೆ, ಬುದ್ಧಿ ಜೀವಿಗಳಿಗೆ ಹೆಚ್ಚಿನ ಪ್ರೋತ್ಸಾಹ ಸಿಗಬೇಕು,-ಉದಯೋನ್ಮುಖ ಸಾಹಿತಿಗಳ ಅನ್ವೇಷಣೆ ನಡೆಯಬೇಕು.

ಇವಿಷ್ಟು ಓದು ಬರಹ ಬಲ್ಲವರ ಕುರಿತಾದ ಮಾತಾಯಿತು. ವಾಚನಾಭಿರುಚಿಯಿಲ್ಲದ ಅಕ್ಷರಸ್ಥ ಹಾಗೂ ಅವಿದ್ಯಾವಂತರಲ್ಲಿ ಜಾಗೃತಿ ಹುಟ್ಟಿಸುವುದು ಹಿರಿದಾದ ಹಾಗೂ ಕಷ್ಟಕರವಾದ ಕಾರ್ಯ.

ಭಾರತೀಯರಲ್ಲಿ ಹೆಚ್ಚಿನವರು ಧರ್ಮಭೀರುಗಳು. ಆದ್ದರಿಂದ ಧಾರ್ಮಿಕ ಸಮಾರಂಭಗಳಲ್ಲಿ ಯಾ ಧಾರ್ಮಿಕ ಪ್ರವಚನ ಕಾಲಗಳಲ್ಲಿ ಜನರಲ್ಲಿ ರಾಷ್ಟ್ರೀಯ ಮನೋಭಾವನೆಯನ್ನು ಹುಟ್ಟಿಸುವುದು ಹೆಚ್ಚು ಕಡಿಮೆ ಸುಲಭ. ಹರಿಕಥೆಯೆಂದರೆ ಈಗ ಕೂಡಾ ಹಳ್ಳಿ ಜನ ಬಹಳ ಸಂಖ್ಯೆಯಲ್ಲಿ ಸೇರುತ್ತಾರಾದ್ದರಿಂದ, ಇಂತಹ ಹರಿ ಕಥಾ ಕಾಲಕ್ಷೇಪಗಳನ್ನು ಇಟ್ಟುಕೊಂಡು ಅವುಗಳ ಮೂಲಕ ಜಾಗೃತಿ ಹುಟ್ಟಿಸುವುದು ಹೆಚ್ಚು ಸಮಂಜಸ.

ಈಗೀಗ ಜನರಲ್ಲಿ ಸಿನೇಮಾ ನಾಟಕಗಳ ಗೀಳು ಹೆಚ್ಚಿರುವುದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ರಾಷ್ಟ್ರವೀರರ ಕುರಿತಾದ ಹೃದಯ ಸ್ಪರ್ಶಿ ನಿರೂಪಣೆಗಳನ್ನೊಳಗೊಂಡ ಚಲಚ್ಚಿತ್ರಗಳನ್ನು ಪ್ರದರ್ಶಿಸುವುದು

(ಮುನ್ನೊಂದನೇ ಪುಟ ನೋಡಿರಿ)

ಅರವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಕಾರಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರ್ಪೂರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,

ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಸ್ಥಾಪನೆ: 1921

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA

(Published every Thursday)

UDIPI, S. K.

ಸಂಪುಟ 51
ಸಂಚಿಕೆ 50

ಸಂಸ್ಥಾಪಕರು:
ಶ್ರೀ ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟ

ಮುದ್ರಕರು:
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 12
ಎರಡು ವರ್ಷಗಳಿಗೆ ರೂ. 20
(ವಿಶೇಷ ಸಂಚಿಕೆಗಳು ಸಹಿತ)
ಪ್ರತಿ ಪ್ರತಿ ೦–೫½

ಚಿಕ್ಕ ಜೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗ ಬೇಕಾದ ಯಾವುದೇ ಪ್ರಕಟಣೆಗಳು ಕನಿಷ್ಠ ವಾಲ್ಕು ದಿನ ಮುಂಚಿತ ವಾಗಿಯೇ ನಮ್ಮ ಕೈಸೇರಬೇಕು.

ದೀಪಾವಳಿ ತಿನ್ನುವ ಹಬ್ಬ; ಸ್ವಾತಂತ್ರ್ಯದಿನ ಆಡುವ ಹಬ್ಬ?

ಸ್ವಾತಂತ್ರ್ಯದ ರಜತೋತ್ಸವ ನಡೆಯಿತು. ಜನನಾಯಕರೆಂದು ಕರೆದು ಕೊಳ್ಳುವವರು ನಡುರಾತ್ರಿಯಲ್ಲೂ ಅಧಿವೇಶನ ಸೇರಿದರು; ಭಾಷಣಗಳನ್ನು ಮಾಡಿದರು; ತಮ ತಮಗೇ ಆಡಿಕೊಂಡರು; ವಾದ–ಪ್ರತಿವಾದಗಳ ವೇದಿಕೆಯಿದಾಗದೆ ಉಳಿದುದರಿಂದ ಇದು ಆತ್ಮ ಸಮರ್ಥನೆಯೆನ್ನೋಣ. ಇಪ್ಪತ್ತೈದು ವರ್ಷಗಳ ಕಾಲ ನಾವು ನಡೆದು ಬಂದ ದಾರಿ ಯಾವುದು ಎಂಬುದು ನಮಗೆ ಗೊತ್ತಿದೆ; ನಾವು ಮುಟ್ಟಬೇಕಾದ ಗುರಿಯೇನು? ಇದೂ ಗೊತ್ತಿದೆ. ಆದರೆ, ನಾವೀದಾರಿಯಲ್ಲಿ ಎಷ್ಟುದೂರ ನಡೆದಿದ್ದೇವೆ? ಈ ಪ್ರಶ್ನೆಗೆ ಆಳುವ ಪಕ್ಷದವರದ್ದೂ ವಿರೋಧ ಪಕ್ಷೀಯರಲ್ಲೂ ಒಂದೇ ಸಮನಾದ ಉತ್ತರ–ನಡೆದ ದಾರಿ ಅಲ್ಪ, ನಡೆಯಬೇಕಾದ ದಾರಿ ಅಧಿಕ. ಇನ್ನೂ ತುಸು ಕಠೋರವಾಗಿ ಹೇಳ ಬಹುದಾದರೆ, ಈ ಎರಡೂ ಪರಿಮಾಣವಾಚಕ ಪದಗಳಿಗೂ 'ಅತೀ' ಯೆಂಬ ನಿಶೇಷಣವನ್ನೂ ಸೇರಿಸಿ ಕೊಳ್ಳಬಹುದು. ಶಬ್ದದಾರಿದ್ರ್ಯದಿಂದ ಆ ಭವ್ಯತ್ಕೆಗೆ ಭಂಗವೆಂದು ಕನ್ನಡ ಮಾಧ್ಯಮದ ಉಪನ್ಯಾಸಕರು ಮಾತ್ರ ಗೊಣಗ ಬಹುದಷ್ಟೇ. ಹೊರತು ಪ್ರಜಾಪ್ರಭುಗಳಿಗೆ ಅಂದೆಂದೂ ಅಭಿವ್ಯಕ್ತಿಗೆ ಆಡ್ಡಿ ತಂದಿಲ್ಲ; ದಾರಿದ್ರ್ಯ ಬಡಿಸಲಿಲ್ಲ.

ಇಪ್ಪತ್ತೈದು ವರ್ಷಗಳಿಗೆ ಮೊದಲು ಆಂದಿನ ಪ್ರಧಾನಿ ಶ್ರೀ ಜವಾಹರಲಾಲರು ಕೆಂಪು ಕೋಟೆಯ ಪವಿತ್ರ ಪರಿಸರದಲ್ಲಿ ಭಾರತೀಯರ ಒಂದು ಬಯಕೆ, ರಾಜ್ಯಕೀಯ ಸಾತಂತ್ರ್ಯ, ಈಡೇರಿತೆಂದು ಸಂತೋಷಿಸಿ ಆರ್ಥಿಕ ಸ್ವಾತಂತ್ರ್ಯಕ್ಕಾಗಿ ಪರಿಶ್ರಮ ಮಿಸುವ ಕರೆ ನೀಡಿದ್ದರು. ಅವರ ಆಶಯದಂತೆ "ನಮ್ಮ ತಲೆಮಾಂ ತ್ಯಾಗ,ಪರಿಶ್ರಮಗಳಿಂದ ದೇಶವನ್ನು ಆರ್ಥಿಕವಾಗಿ ಸ್ವತಂತ್ರಗೊಳಿಸುವುದಕ್ಕಾಗಿ ಹುಟ್ಟಿದೆ. ನೆಚ್ಚಿನ ಪ್ರಧಾನಿ ನೀಡಿದ ಕರೆಯಂತೆ ತ್ಯಾಗ ಮಾಡಿದ್ದೂ ಮಾಡಿದ್ದೇ, ಶ್ರಮಿಸಿದ್ದೂ ಶ್ರಮಿಸಿದ್ದೇ. ಆದರೆ, ಒಂದು ತಲೆಮಾರಿನ ಅವಧಿ ದಾಟಿದಾಗ ಸಿಂಹಾವಲೋಕನ ಮಾಡಿದರೆ, ನಮಗೇನು ಗೋಚರವಾಗುತ್ತಿದೆ? ದಿನವಿಡೀ ನಡೆ ನಡೆದೂ ನಮ್ಮ ಕಾಲುಗಳು ಸೋತಿನೆ, ಪಾದಗಳು ಊದಿಕೊಂಡಿವೆ. ಅಂದು ಪ್ರಾತಃಕಾಲವಾಗಿತ್ತು, ದಾರಿಯೂ ಕಣ್ಣಿಗೆ ತೋರುತ್ತಿತ್ತು; ದೂರದಲ್ಲಿ ಗುರಿಯೂ ಗೋಚರವಾಗುತ್ತಿತ್ತು. ಹಿಂದೆ ಮುಂದೆ ನೋಡದೆ, ಕಲ್ಲು ಮುಳ್ಳುಗಳನ್ನು ಮೆಟ್ಟುತುಳಿದು ನಾವು ನಾವು ಧಾವಿಸಿದೆವು ನಿಜ. ಇಂದು ಕತ್ತಲೆ ಪರಡಿದೆ; ದಾರಿಯೂ, ಗುರಿಯೂ ಜ್ಞಾನೇಂದ್ರಿಯ ಗಮ್ಯವಾಗಿಲ್ಲ. ಗುರಿಮುಟ್ಟಿಲ್ಲವೆಂದು ಸ್ಪರ್ಶೇಂದ್ರಿಯದ ಸಹಾಯದಿಂದ ಅರಿತುಕೊಂಡಿದ್ದೇವೆ, ಎಷ್ಟು ದೂರನಡೆದಿದ್ದೇವೆ, ಇನ್ನೆಷ್ಟು ನಡೆಯಲಿಕ್ಕಿದೆ, ಮುಂದಿನ ದಾರಿ ಯಾವ ರೀತಿಯಿದೆ — ಎಂಬಿತ್ಯಾದಿ ಗಳಿಗೆ ಉತ್ತರವೇ ದೊರೆಯುತ್ತಿಲ್ಲ. ಕಾಲು ಶತಮಾನದ ಹಿಂದೆ ಪೂ. ನೆಹರು ಮತ್ತವರ ತಲೆಮಾರಿನವರು ತ್ಯಾಗ–ಪರಿಶ್ರಮಗಳ ಆವಶ್ಯಕತೆಯ ಬಗ್ಗೆ ಮಾತಾಡುತ್ತಿದ್ದರು, ಸಮಾಜವಾದ–ಕಲ್ಯಾಣ ರಾಷ್ಟ್ರದ ಬಗೆಗೆ ಕಲ್ಪನೆಯ ಚಿತ್ರ ತೋರಿಸುತ್ತಿದ್ದರು. ಇಂದು ಇದೇ ಕೆಲಸವನ್ನು ಅವರ ಮುಂದಿನ ತಲೆಮಾರಿನವರು ಆಡ–ತೋರಿಸ ಹೊರಟಿದ್ದಾರೆ. ಇದನ್ನು ಗಮನಿಸುವಾಗ, ನಾವು ಆರಂಭ ಬಿಂದುವಿನಿಂದ ಹೊರಟೇ ಇಲ್ಲವೇ ಎಂಬ ಸಂದೇಹ ತೋರಬಹುದು; ಆದರೆ ಇಷ್ಟು ಅನುಭವಕ್ಕೆ ವಿರೋಧ. ಆದುದರಿಂದ ನಾವು ನಡೆದಿದ್ದೇವೆ, ಆದರೆ ಯಾವುದು ನೇರವೋ ಆ ದಾರಿಯಲ್ಲಿ ಅಲ್ಲ, ಬಳಸು ದಾರಿಯನ್ನು ಹಿಡಿದುದರಿಂದಲೇ ಆರಂಭ ಬಿಂದುವಿನ ಆಸು ಪಾಸಿನಲ್ಲೇ ಭ್ರಮಿಸುತಿದ್ದೇವೆ ಎನಿಸುತ್ತದೆ.

ಕೆಲವೊಂದು ಕ್ಷೇತ್ರಗಳಲ್ಲಿ ನಾವು ಪ್ರಗತಿ ಸಾಧಿಸಿಕೊಂಡಿದ್ದೇವೆ. ಇದು ಹೆಮ್ಮೆಯ ಸಂಗತಿ. ಆದರೆ, ಒಬ್ಬ ವ್ಯಕ್ತಿಯ ವಿಕಾಸ ಕೆಲವೊಂದು ಕ್ಷೇತ್ರಗಳಲ್ಲೇ ಆದರೆ ಸಾಲದು. ವ್ಯಕ್ತಿಯ ಬೌದ್ಧಿಕ, ಶಾರೀರಿಕ, ಮಾನಸಿಕ, ಭಾವಾತ್ಮಕ ಮತ್ತು ಸಾಮಾಜಿಕ ವಿಕಾಸವಾದರೇನೇ ಆತನ ಸರ್ವತೋಮುಖ ಬೆಳವಣಿಗೆ ಸಾಧ್ಯವಾದೀತು. ಇವುಗಳಲ್ಲಿ ಒಂದೋ ಎರಡೋ ರಂಗಗಳಲ್ಲಿ ಅಲ್ಪ ಸ್ವಲ್ಪ ಸಿದ್ಧಿಯೊಯಿತೆಂದ ಮಾತ್ರಕ್ಕೆ ವ್ಯಕ್ತಿತ್ವ ಸುಂದರವಾಗುವುದಿಲ್ಲ. ಕಲ್ಯಾಣ ರಾಷ್ಟ್ರ ನಿರ್ಮಾಣಕ್ಕೆ ಅನಿವಾರ್ಯವಾದ ಎಲ್ಲ ಕ್ಷೇತ್ರಗಳಲ್ಲೂ ದೇಶ ಪ್ರಗತಿ ಹೊಂದಿದರೆ ಮಾತ್ರ ನಾವು ಸಿದ್ಧಿ ಪಡೆದಂತಾದೀತು. ಈ ಮಾತನ್ನು ಹೇಳುವ ಎಂಟೆದೆ ನಮಗೆ ಸಾಧಿಸಿದೆಯೆ? ಇಲ್ಲವೆಂಬುದು ಸುನಿಶ್ಚಿತ. ಆದುದರಿಂದಲೇ 'ನಮ್ಮ ದಾರಿ ಸುದೀರ್ಘವಾದುದು' ಎನ್ನುತ್ತೇವೆ. ಈ ದಾರಿಯ ದೂರವೆಷ್ಟು, ಅದನ್ನು ಕ್ರಮಿಸಲು ಇನ್ನೂ ಎಷ್ಟು ಸಮಯ ಬೇಕು ಎಂದು ಕೇಳಿದರೆ, ನಮ್ಮ ಬಳಿ ಉತ್ತರವಿದೆಯೆ? ಹಿರಿಯರು ಎಳೆಯರನ್ನು ಕಾಲ್ನಡೆಯಾಗಿ ಕರೆದೊಯ್ಯುವಲ್ಲಿ ಅವರಿಗಾದರೂ ದಾರಿಯ ಉದ್ದ ಗೊತ್ತಿರುತ್ತದೆ; ತಗಬುನ ಸಮಯವನ್ನಾದರೂ ಅವರು ಊಹಿಸಬಲ್ಲರು. ಮಗುವನ್ನು ತೃಪ್ತಿಪಡಿಸಲು, ಅದರಲ್ಲಿ ಹೊಸ ಹುಮ್ಮಸ್ಸು ಮೂಡಿಸಲು 'ಗುರಿ ತಲುಪಿತು, ನೋಡು, ಓ ಅದೇ' ಎಂದು ಪ್ರಲೋಭನೆ ಗೊಳಿಸುತ್ತಿರುವಂತೆ ನಮ್ಮ ಪ್ರಜಾಪ್ರಭುಗಳು ಪ್ರಜೆಗಳನ್ನು ಇದುವರೆಗೂ ವಂಚಿಸುತ್ತಲೇ ಬಂದಿವ್ದಾರೆನ್ನಿಸುವುದಿಲ್ಲವೆ? ಈ ಬಗೆಯ ವಂಚನೆ ನಡೆದಿದೆಯೆಂಬುದನ್ನು ಪ್ರಜಾಕೋಟಿಗೆ ಮನವರಿಕೆ ಮಾಡಿ ಶ್ರೀಮತಿ ಗಾಂಧಿಯವರು ತಮ್ಮದೊಂದು ಪಕ್ಷ ಕಟ್ಟಿದರು. ಆದರೆ ಈಗ ಅವರೂ ಹೇಳುತ್ತಾರೆ –ಪ್ರಗತಿಯೆಂಬುದು ರಾತ್ರೆ ಬೆಳಗಾಗುವಷ್ಟರಲ್ಲಿ ಸಾಧಿತವಾಗುವದಲ್ಲ; ಅದಕ್ಕೆ ಬಹು ದೀರ್ಘಕಾಲ ಬೇಕು. –ಅಂದರೆ, ಇವರೂ ಹಿಂದಿನವರು ಅಂದಿದ್ದ ಮಾತನ್ನೇ ಆಡತೊಡಗಿದ್ದಾರೆ; ಬಳಸಿಕೊಂಡ ತಂತ್ರ ಮಾತ್ರ ಬೇರೆಯಷ್ಟೆ. ರಜತೋತ್ಸವವನ್ನು ನಾವು ಆಚರಿಸಿದೆವು; ಕಛೇರಿ ಕಾರಖಾನೆಗಳಿಗೆ ರಜೆ ಮಾಡಿದೆವು; ಭಾಷಣ ಬಿಗಿದೆವು. ಕರೆ ಕೊಟ್ಟೆವು; ಪರಿಶ್ರಮಕ್ಕೆ ವಿರಾಮಕೊಟ್ಟು ಪರಿಶ್ರಮದ ಬಗ್ಗೆ ಮಾತಾಡಿದೆವು. ದೀಪಾವಳಿ ತಿಂದು ತೇಗುವ ಹಬ್ಬವಾಯ್ತು ರಜತೋತ್ಸವ ನಾಲಗೆ ತುರಿಕೆ ತೀರಿಸಿಕೊಳ್ಳುವ ಹಬ್ಬ. ಇದರಿಂದ ವಿಕಾಸ ಸಾಧ್ಯವಾಗುವುದಾದರೆ, ಅದೆಂದೋ ಆಗಿ ಹೋಗುತ್ತಿತ್ತು. ನಮ್ಮ ಆಲೋಜನೆ–ವಿಚಾರಗಳಲ್ಲೇ ಬ್ರಹತ್ಕ್ರಾಂತಿಯೊಗದೆ ಈ ಕುರಿತು ದಾರಿಯನ್ನು ಬಿಡುವುದು ಸಾಧ್ಯವಿಲ್ಲವಾಗಿದೆ.

ಸ್ಥಾನಬಲದ ಮೌಲ್ಯ

ಕರ್ನಾಟಕ ವಿಧಾನ ಮಂಡಳದ ಅನ್ಯ ರಾತ್ರಿ ಅಧಿವೇಶನದಲ್ಲಿ ವಿರೋಧಿ ಪಕ್ಷದ ನಾಯಕ (ಪರಿಷತ್) ಶ್ರೀ ರಾಮಕೃಷ್ಣ ಹೆಗ್ಗಡೆಯವರ ಭಾಷಣವೇ ನಡೆಯಬಿಲ್ಲಿ ಮಂತೆ. ಅನಂತರ್ದು ಕೊನೆಯ ಭಾಷಣವಿದ್ದು ಅದು ಹನ್ನೆರಡು ತಾಸಿಗೆ ಮುಗಿಸುಬೇಕಾಗಿತ್ತಂತೆ. ಪ್ರತಿಯೊಬ್ಬರಿಗೂ ಇಪ್ಪತ್ತೈದು ನಿಮಿಷಗಳ ಕಾಲಾವಧಿ ನೀಡಿದ್ದರೂ ಮುಖ್ಯಮಂತ್ರಿಗಳೇ ಹನ್ನೆರಡು ನಿಮಿಷ ಮಾತಾಡಿ ನಿಯಮ ಭಂಗ ಮಾಡಿದ್ದರೆಂಬ ಆರೋಪ ಬೇರೆ, ಹೆಗ್ಗೆಗೆ ಅಷನೂನ ಬೇರೆ. ಗಡಿಯಾರವನ್ನು ಏಮು ನಿಮಿಷ ಹಿಂದೆ ತಿರುಗಿಸಿತಲು ಭಾರಿ ಮರವ್ಪುವ್ಯವಸ್ಥಾಪಕರಿಗೆ ತಪ್ಪಿದ್ದಕ್ಕೆ ಮುಖ್ಯ ಮಂತ್ರಿಯವರು ಭಾರಿ ವಿಷಾದ ಸೂಚಿಸಿ ಪಾರಾದರು. ಶ್ರೀ ಅರಸು ಏತರ ಬದಲಿಗೆ ಹನ್ನೆರಡು ಮಾತಾಡಿದರು; ಇಷ್ಟು ಪ್ರಗತಿಯನ್ನು ಅವರಾದರೂ ಸಾಧಿಸಿದರೆಂದು ತೃಪ್ತಿ ಪಡಬಾರದೆ? ಒಂದು ವೇಳೆ ಶ್ರೀಗಳಾದ ಅರಸು ಹೆಗ್ಗಡೆ ಸ್ಥಾನ–ಮಾನಗಳು ಅದಲು ಬದಲಾಗಿದ್ದರೆ, ಶ್ರೀ ಹೆಗ್ಗಡೆಯವರೂ ಶ್ರೀ ಅರಸರು ನೂಡಿದ್ದನ್ನೇ ನೋಡುತ್ತಿರಲಿಲ್ಲವೆಂದೇನು ಭ್ರಮನಸೆ? ಅದುದರಿಂದಲೇ ಸ್ಥಾನ ಬಲಕ್ಕೂ ಒಂದು ಬೆಲೆಯಿದೆ. ಇದು ಅತ್ಯಧಿಕವಾದದ್ದು ಎಂದು ತಿಳಿಯ ಬಹುದಲ್ಲವೆ?

●●

ಮಂಗಳೂರಲ್ಲಿ ಸ್ವಾತಂತ್ರ್ಯ ರಜತ ಮಹೋತ್ಸವ

ದೇಶದ ಸ್ವಾತಂತ್ರ್ಯ ಬೆಳ್ಳಿ ಹಬ್ಬದ ಅಂಗವಾಗಿ ತಾ. 15ರಂದು ಸೋಮವಾರ್ಹ ಮಂಗಳೂರಿನ ನೆಪರೂ ಮೈದಾನದಲ್ಲಿ ಜಿಲ್ಲಾಧಿಕಾರಿ ಶ್ರೀ ಎಸ್. ಎ. ಮುತ್ತಣ್ಣನವರು ಧ್ವಜಾರೋಹಣಗೈದರು. ಆನಂತರ ಅಲ್ಲಿ ಸೇರಿದ್ದ ಬೃಹತ್ ಜನ ಸ್ತೋಮವನ್ನುದ್ದೇಶಿಸಿ ಮಾತಾಡುತ್ತಾ ಎಜ್ಜಿತ್ತ ರಾಷ್ಟ್ರ ಭಾರತದ ಮಹಾನಾಯಕರಾಗಿದ್ದ ಜವಹರಲಾಲ್ ನೆಪರೂ ಅವರು ಹೇಳಿದ ಹಾಗೆ ನಾವು ಪ್ರತಿಯೊಬ್ಬ ಪ್ರಜೆಯ ಕಣ್ಣೀನನ್ನೂ ಒರೆಸಬೇಕು ಆಗ ಮಾತ್ರ ಸ್ವರಾಜ್ಯ ಆರ್ಥಪೂರ್ಣ ಎಂದರು. ಭಾರತದ ಸುದೀರ್ಘವಾದ ಸ್ವಾತಂತ್ರ್ಯ ಹೋರಾಟವನ್ನವರು ವಿವರಿಸಿ ದಕ್ಷಿಣ ಕನ್ನಡಿಗರು ಈ ಸಂಗ್ರಾಮದಲ್ಲಿ ಗಣನೀಯ ಪಾತ್ರ ವಹಿಸಿದ್ದಾರೆ ಎಂದು ಹೇಳಿದ ಕ. ಜಿಲ್ಲೆಯಲ್ಲಾದ ವಿವಿಧ ಪ್ರಗತಿಗಳನ್ನು ವಿವರಿಸಿ ನುಡಿದ ಅವರು ಕಲ್ಯಾಣ ಕಾರ್ಯಕ್ರಮಗಳಲ್ಲಿ ಜನತೆಯ ಸಹಕಾರ ಕೋರಿದರು.

ಧ್ವಜಾರೋಹಣ, ಸಂದೇಶ ಕಾರ್ಯಕ್ರಮಗಳಾದ ಬಳಿಕ ರಾಷ್ಟ್ರಗೀತೆ ನಡೆಯಿತು. ಅಲ್ಲಿ ಸೇರಿದ್ದ ಶಾಲಾಬಾಲಕರಿಗೆ ಸಿಹಿತಿಂಡಿ ಹಂಚಲಾಯಿತು. ಅನಂತರ ಜಿಲ್ಲಾಧಿಕಾರಿಯವರೂ, ಇತರ ಇಲಾಖೆಗಳ ಅಧಿಕಾರಿಗಳೂ ಸಿಟಿಮಾರ್ಕೆಟ್ಟು, ಬಸ್ ನಿಲ್ದಾಣಗಳಿಗೆ ತೆಳಿ ನಗರ ನಿರ್ಮಲೀಕರಣ ಕಾರ್ಯದಲ್ಲಿ ಪಾಲುಗೊಂಡರು.

ಗೇಹರಾಜ್ಯದಲ್ಲಿ

ಮಾನಿರದ ನೀರು ಬೇಕೆಂದರೆ.....

'ಏನು?'

'ಏನೂಂತಸ್ನೋದು? ನಮ್ಮ ಸ್ವಾತಂತ್ರ್ಯದ ರಜತೋತ್ಸವ ಮುಗಿಯಿತೊನ್ನು.'

'ಇನ್ನಾಗ್ಗರೂ ಕಿವಿಗಳಿಗೆ ಇಟ್ಟಿದ್ದ ಹತ್ತಿ ಬಿರಡೆ ತೆಗೆಯಬಹುದು ...'

"ಏಳ್? ಸೋರುತ್ತೆಯಿ?"

"ಹ್ಞೂಂ....'

'ಎಲ್ಲಿ ನೋಡೋಣ'

'ಇದು ನೋಡೋದಲ್ಲ ಕೇಳೋದು....'

"ಏಂಬರೆ?"

'ನೋಡಿ, ರಜತೋತ್ಸವಾಂತ ಚೌಕಳಿಕೆಗಳ, ವೃತ್ತ ವೃತ್ತಗಳಲ್ಲಿ ಮೈಕಾಮಿರನ ದಡಿಗಂಟಲಿಂದ ಸೋರುತ್ತಿತ್ತಲ್ಲಾ ಸಿಸಿಮೂ ಸಂಗೀತ....'

'ಓ, ಹಾಗೆ, ಹ್ಞೂನ್ನು- ತಿಮೂ ಒಂದ್ರೀತಿ...'

'ಏಂದ್ರೆ?'

"ಅಲ್ವೆ, ಹಟ್ಟಿ-ಹರಿದಿನ, ಜಾತ್ರೆ ಯಾತ್ರೆ ಎಲ್ಲ ಇರುವುದೇತಕ್ಕೆ?"

'ಮಜಾ ಮಾಡೋಕೆ....'

'ಸರಿ. ಇಂದಿನ ದಿನಗಳಲ್ಲಿ ಇದೇ ಮಜಾ ಚರಣೆಯ ಏಕಮೇವ ಸಾಧನ...'

'ಆಯ್ತಪ್ಪ. ಆದರೆ, ಸ್ವಾತಂತ್ರ್ಯದ ಬಗ್ಗೆ....'

'ಅದಕ್ಕೇನಂತೆ, ಧ್ವಜಾರೋಹಣ, ದೇ. ಭ. ರ ಭಾಷಣ, ಸಿಹಿತಿಂಡಿ ಹಂಚೋಣ ಮತ್ತು ಜನಗಣಮನ — ಇನ್ನೇನಾಗ ಬೇಕು?'

'ಹೌದಪ್ಪ, ಸುಮ್ಮ ಸುಮ್ಮನೆ ಬೋರ್ ಮಾಡುವುದಕ್ಕೆಂತ ಯರಾಬೀ ಬಂಧನ್ ಡೈ ಏಸಾ ಎಂದು ಗುಣು ಗುಣು ಮಾಡುವುದರಲ್ಲೇ ಆನಂದದ ಸೆಲೆ ಉಕ್ಕೇರಿ ಹರಿಯುತ್ತದೆ....'

'ಹ್ಞೂಂ....ಅದು ನಮ್ಮ ಮುನೋನೃತ್ತಿಯನ್ನು ಪ್ರದರ್ಶಿಸುತ್ತದೆ. ಒಂದು ಕಾಲದಲ್ಲಿ ಲೈಲಾ—ಮಜನು, ಅರೇಬಿಯನ್ ನೈಟ್ಸ್‌ನ ಅಧ್ಯಯನವೇ ಉಚ್ಚ ಶಿಕ್ಷಣ ವೆಂದು ತಿಳಿಯಲಾಗಿತ್ತು. ನಮ್ಮಲ್ಲೂ ಇತ್ತಂತೆ—ಕುಮಾರವ್ಯಾಸನನ್ನು ಓದಿದ್ದೀಯೊ?, ಲಕ್ಷ್ಮೀಶನನ್ನು ನೋಡಿದ್ದೀಯೊ ಅಂತ. ಆದರೆ, ಈಗ ಅದೆಲ್ಲ ಅಶಾಸ್ತ್ರೀಯ ವಿಧಾನವೆನ್ನು....'

'ಅದೆಲ್ಲ ಈಗ ಯಾಕೆ?'

'ನೋಡು, ನಮ್ಮ ಶಾಲೆ ಕಾಲೇಜುಗಳಲ್ಲಿ ಮರುಳೊ ತುಂಸೆ ಪ್ಯಾರ್ ಹೈ ಎಂದು ಹೇಳಿಕೊಡದೆ ಇರುವುದರಿಂದಲೇ ಆದನ್ನು ಹೊರಗಡೆ ಕಲಿಯುತ್ತಾರೆ; ಅರ್ಥವಾಗದೆ ಹೋದರೂ ಕೇಳಿ ಗೊತಾಗಿ ತೃಪ್ತಿ ಪಡುತ್ತಾರೆ. ಅವರ ಸುಪ್ತ ಪ್ರಜ್ಞೆ ಕೆರಳಿ ಬ್ರಹ್ಮಾನಂದದಲ್ಲಿ ಪರ್ಯವಸಾನ ಹೊಂದುತ್ತದೆ....'

'ಆಯ್ತು, ಹೋಗಲಿ ಬಿಡಿ, ಅಲ್ರಿ ನಮ್ಮ ರಾಜ್ಯದ ಯುವಕ ಕಾಂಗ್ರೆಸಿಗರು ಮುಖ್ಯ ಮಂತ್ರಿಯವರಿಗೊಂದು ಮನವಿಯರ್ಪಿಸಿದರಂತೆ...'

"ಮನವಿಯರ್ಪಿಸುವುದಕ್ಕೇನಂತೆ ಯಾರು ಬೇಕಾದರೂ ಎಷ್ಟು ಬೇಕಾದರೂ ಅರ್ಪಿಸಬಹುದು, ಮತ್ತೆ ಹೂಮಾಲೆಗೆ ಕೊರಳೊಡ್ಡುವವರು ಮನವಿಗೆ ಅಂಜಿದ ಡೆಂತು?'

'ಸುರುವಾಯ್ತು, ನಿಮ್ದು ಅಲ್ರಿ, ಆ ಮನವಿಯಲ್ಲಿ....'

"ಏನಿತ್ತು ಹೇಳು?"

'ನಗತಗಳಲ್ಲಿನ ಅಸ್ತಿಗೆ ಮಿತಿ ಹೇ ಬೇಕು....'

'ಇದು ಹಳೆಯದ್ದೇ....'

"ವರಮಾನಕ್ಕೊಂದು ಮಿತಿ ಹೇರ ಬೇಕು...."

'ಇನ್ನು....'

"ವರ್ಷಕ್ಕೆ ಹನ್ನೆರಡು ಸಾವಿರ...."

"ಸರಿ..."

'ಏಕಸ್ವಾಮ್ಯ ಹೊಂದಿರುವ ಕೈಗಾರಿಕೆಗಳನ್ನು ರಾಷ್ಟ್ರೀಕರಿಸಬೇಕು....'

'ಆಯ್ತು....'

"ಖಾಸಗಿ ಶಾಲೆ ಕಾಲೇಜುಗಳ ರಾಷ್ಟ್ರೀಕರಣ...."

"ಆಗಲಿ..."

'ನಿರುದ್ಯೋಗ ಸಮಸ್ಯೆಯ ಪರಿಹಾರ.'

'ಅಗತ್ಯವೇ....'

'ಪದವೀಧರರಿಗೆ ಉದ್ಯೋಗ ಜೊರಕು ವವರೆಗೆ ಸಹಾಯ....'

'ಅಂದರೆ, ನಿರುದ್ಯೋಗ ಭತ್ತೆ....'

'ಹ್ಞೂಂ....'

'ಅಂದರೆ, ಈ ಭತ್ತೆಯನ್ನು ಪಡೆಯುವ 'ಉದ್ಯೋಗ' ನೀಡಬೇಕು....'

'....ಹೌದು....'

'ಪ್ಲಾಂಟೇಶನ್ನು ಮತ್ತಿತರ ಕೈಗಾರಿಕೆಗಳಲ್ಲಿ ಗಂಡಾಳುಗಳಿಗೆ ನೀಡುವಷ್ಟೇ ವೇತನವನ್ನು ಹೆಣ್ಣಾಳುಗಳಿಗೆ ಕೊಡಬೇಕು....'

'ನಿಜಕ್ಕೂ, ಉಳಿದೆಡೆ ಕೊಡುತ್ತಿಲ್ಲ ವೇನು?'

"ಪಕ್ಷ ಜನತೆಗೆ ನೀಡಿದ ಆಶ್ವಾಸನೆಗಳನ್ನು ತ್ವರಿತವಾಗಿ ಪೂರೈಸಲು ಸರಕಾರ ಸೂಕ್ತ ಕ್ರಮ ಕೈಕೊಳ್ಳಬೇಕು...."

"ಇದೀಗ ಸತ್ಯವಾದದ್ದು...."

"ಯಾವುದ?"

"ಉಳುವ ಕಾಂಗ್ರೆಸ್ಸು ಜನತೆಗೆ ನೀಡಿದ ಆಶ್ವಾಸನೆಗಳನ್ನು ತ್ವರಿತವಾಗಿ ಪೂರೈಸಲು ಸೂಕ್ತ ಕ್ರಮಗಳನ್ನು ಇನ್ನೂ ಸರಕಾರ ಕೈಕೊಂಡಿಲ್ಲ ನೆನ್ನುವುದು...."

"ಯಾಕೆ ಹಾಗಂತೀರಿ?"

"ಬಡತನವನ್ನು ತೊಲಗಿಸುವ ಆಶ್ವಾಸನೆಯಿನ್ನೂ ಹಾಗೇನೇ ಉಳಿದಿದೆ.'

'ಇದು ರಾಜ್ಯಕ್ಕೆಂದೇನು, ದೇಶಕ್ಕೇ ಸಂಬಂಧಪಟ್ಟದ್ದು...."

'ಹೌದು. ಈ ಘೋಷಣೆ ಬಂದೆಂದಿನಿಂದಲೂ ಜೀವನದ ಅವಶ್ಯಕ ವೆಚ್ಚವು ಮಿತಿ ಮೀರಿ ಬೆಳೆಯುತ್ತಲೇ ಇದೆ. ಮತ್ತೆ ಬಡತನ ನಿರ್ಮೂಲನೆಯಾಗುವ ಮಾತು ದೂರ, ಅದು ಬೆಳೆಯುತ್ತಲೇ ಇದೆ....'

'ಅಲ್ರಿ, ಹೆಚ್ಚಿನ ಉದ್ಯೋಗಗಳನ್ನು ಕಲ್ಪಿಸುವುದು, ಸುಟ್ಟುಂಬಕ್ಕೊಂದು ಉದ್ಯೋಗವೆಂಬ ತತ್ವವನ್ನು ಅನುಷ್ಠಾನಕ್ಕೆ ತರುವುದು....'

"ಹೆಚ್ಚಿನ ಉದ್ಯೋಗ ಕಲ್ಪಿಸಬಹುದೆಂದರೆ, ಸುಮ್ಮನಾಗುತ್ತದೆಯೇ ಬಡಜ್ಜಿ ಹೆಚ್ಚಿನ ಸಂಪನ್ಮೂಲ ಬೇಡವೇನು? ಇನ್ನು ಕುಟುಂಬಕ್ಕೊಂದು ಉದ್ಯೋಗವೆಂಬ ನಿಯಮ ಮಾಡಿದರೆ, ಕೆಲವಾರು ಕುಟುಂಬಗಳನ್ನು ಬಡತನಕ್ಕೆ ಗುರಿಮಾಡಿದಂತಾಗುವುದಿಲ್ಲವೆ? ಗರೀಬೀ ಹಟಾವೊ ಆಲ್ಲ ಗರೀಬೀ ಬಢಾವೊ....'

'ಹಾಗಲ್ಲರೀ. ಹೀಗೆ ಹೇಳಿದರೆ ಯಾರು ಓಟುಕೊಡುತ್ತಾರೆ?'

'ಮತ್ತೆ?'

'ಅಮೂರೀ ಹಟಾವೋ ಅನ್ನಿ, ಜಗ ಬದವರೆಲ್ಲರೂ ನಿಮ್ಮ ಬುಟ್ಟಿಗೆ ಬೀಳುತ್ತಾರೆ. ಶ್ರೀಮಂತ ವರ್ಗವನ್ನೂ ತಮ್ಮ ಹಾಗೆ ಬಡವರಾಗುವುದನ್ನು ಕಂಡಾಗ ಬಡವರಿಗೂ ನೂನಸಿಕ ತೃಪ್ತಿಯಾಗುತ್ತೇತು. ಮತ್ತೆ ನೋಡಿ, ತೊಂಬತ್ತು ಜನ ಬಡವರನ್ನು ಶ್ರೀಮಂತರಾಗಿಸುವುದಕ್ಕಿಂತ ಹತ್ತು ಜನ ಶ್ರೀಮಂತರನ್ನು ಬಡವರಾಗಿ ಮಾಡುವುದು ಎಷ್ಟು ಸುಲಭ'

'ಹ್ಞೂಂ ಒಂದೇ ಒಂದು ಕ್ಷಣದಲ್ಲಿ

(ಒಂಭತ್ತನೇ ಪುಟ ನೋಡಿರಿ)

ಪುತ್ತೂರು III ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

I. A. No.
in R. R. C. 2180/70

ವಿ. ಕೆ. ಸಂಜೀವಯ್ಯ —ಅರ್ಜಿದಾರ
Vs
ಪುತ್ತ ಗೌಡ —ಎದ್ರಿ

ನೋಟೀಸು

ಶ್ರೀ ಪುಬ್ಬಯ್ಯ ಗೌಡ, ಮುತ್ತ ಗೌಡರ ಮಗ, ಪುಳ್ಳ ತಾಲೂಕು ಸುಳ್ಯ ಕಸಬಾ ಗ್ರಾಮದ ದುಗ್ಗಲಡ್ಕ ಎಂಬಲ್ಲಿರುವವರು. ಪೋಸ್ಟು: ಸೋಣಂಗೇರಿ, ದ. ಕ. ಇವರಿಗೆ—

ಅರ್ಜಿದಾರನು, ಇತ್ತೀಚೆಗೆ ಮೃತಪಟ್ಟ ಪ್ರತಿವಾದಿ ಪುತ್ತಗೌಡರ ಮೇಲೆ ಗೇಣಿಜಾಕಿ ಬಗ್ಗೆ ದಾವೆ ಹಾಕಲು ಮಂಡಿದ್ದು, ಮೃತನಾದ ಸದ್ರಿ ಪ್ರತಿವಾದಿಯ ನ್ಯಾಯಾನುಸಾರವಾದ ಪ್ರತಿನಿಧಿ ನೀವೇ ಎಂಬುದನ್ನು ಆತನ ಬದಲಿಗೆ ನೀವೇ ಪ್ರತಿವಾದಿಯೊಗಬೇಕೆಂದು ಅಪೇಕ್ಷಿಸಿ ಈ ಕೋರ್ಟಿಗೆ ಸದ್ರಿ ಅರ್ಜಿದಾರನು ಅರ್ಜಿಯೊದಿರುವುದರಿಂದ ನೀವು ತಾ. 15.9.1972ನೇ ದಿನಸ ಹಗಲು 11ಗಂಟೆಗೆ ಮೇಲಿನ ಕೋರ್ಟಿನಲ್ಲಿ ಸ್ವತಹ ಯಾ ಪಕೀಲರ ಮುಖಾಂತರ ಹಾಜರಾಗಿ ಉದಯರಿಸಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರು ಹಾಜರಿಯಲ್ಲಿ ಕೋರ್ಟಿನವರಿಗೆ ಯುಕ್ತಕಂಡಂತೆ ಮುಂ ಪುವರಿಸಲಾದೀತು.

(ಕೋರ್ಟು ಹುಕುಂ ಪ್ರಕಾರ)
ಎ. ಸಿ. ಗೌರೀಶಂಕರ
ಅರ್ಜಿದಾರನ ಕಡೆ ಎಡ್ವಕೇಟ್

ಪುತ್ತೂರು, 17-8-1972

ಸಂಗ್ರಹಿಸಲೇಬೇಕಾದ ಉತ್ತಮ ಪುಸ್ತಕಗಳು

ಇಂದಿನ ವಿಜ್ಞಾನ ಮತ್ತು ಮಾನವ	(ಯು. ಎಲ್. ಆಚಾರ್ಯ)	ರೂ. 15=0
ನಡುಹಗಲಿನ ನಕ್ಷತ್ರಲೆ	(ಕು. ಶಿ. ಹರಿದಾಸ ಭಟ್ಟ)	,, 2=50
ಶಿಕ್ಷಣದ ಧ್ಯೇಯಗಳು	(ಕೆ. ಬಿ. ರಾಮಕೃಷ್ಣರಾವ್ & ಯು. ಎಲ್. ಆಚಾರ್ಯ)	,, 2=25
ಸ್ವಾತಂತ್ರ್ಯ ಮತ್ತು ಸಂಸ್ಕೃತಿ	(ಕು. ಶಿ. ಹರಿದಾಸ ಭಟ್ಟ)	,, 2=50
ಹಿರೋಶಿಮಾದಿಂದ ಜಿವೇವ	(ಯು. ರಾಘವೇಂದ್ರ ಆಚಾರ್ಯ)	,, 1=50
ಮೋಹದ ಮಹಾಜಾಲ	(ವೀರಪ್ಪ ಯಗಟಿ)	,, 1=75
ಭಾರತೀಯ ಮಹಾಪುರುಷರು	(ಎಸ್. ಗೋಪಿಚಂದ ರಾವ್)	,, 1=50
ಕಪ್ಪು ಕೌಮುದಿ	(,,)	,, 1=50
ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್ ವಾಶಿಂಗ್ಟನ್	(ಯು. ಎಲ್. ಆಚಾರ್ಯ)	,, 1=25
ಏಶಿಯದ ಸಂಪತ್ತು	(ಕು. ಶಿ. ಹರಿದಾಸ ಭಟ್ಟ)	,, 2=00
ಭಾವಾರ್ಚನೆ	(ನಚಿಕೇತ)	,, 1=25
ಅಮೆರಿಕದ ಆರು ಕಥೆಗಳು	(ಕು. ಶಿ. ಹರಿದಾಸ ಭಟ್ಟ)	,, 1=75
ಋಣಯಾತ್ರೆ	(ನಚಿಕೇತ)	,, 1=50
ಚಿತ್ರಾಂಗದೆ	(ಕೆ. ಕೆ. ಶೆಟ್ಟ)	,, 0=60
ರವೀಂದ್ರರ ಕಿರುಗತೆಗಳು	(ಹನುಮಂತರಾವ್ ಮಾಂಜ್ರೇಕರ್)	,, 0=90
ಹಸುರು ಹಂಸ	(ನಚಿಕೇತ)	,, 2=00
ಬಿರಿದ ಮುಗುಳು	(ಎಸ್. ಗೋಪಿಚಂದ ರಾವ್)	,, 1=50
ಭಾರತದ ನೀರಾಂಗನೆಯರು	(ಕೆ. ಎನ್. ಭಟ್ ಶಿರಾಡಿಘಾಲ್)	,, 1=50
ಮೇರಿ ಕೊಟ್ಟ ಬೆಂಡೋಲೆ	(ಎಸ್. ಸದಾಶಿವ ರಾವ್)	,, 1=80

ಪ್ರತಿಗಳು ಸಿಗುವ ಸ್ಥಳಗಳು:

1. **ನವಯುಗ ಪ್ರೆಸ್, ಉಡುಪಿ.**
2. **ನವಭಾರತ ಪುಸ್ತಕ ಭಂಡಾರ, ಉಡುಪಿ.**

ಪುತ್ತೂರು IIIrd ಎಡಿಶನಲ್ ಮುನ್ಸಿಫ್ ಕೋರ್ಟು

R. R. C. 209/1972

S. ತಿಮ್ಮಪ್ಪ ರೈ ಅರ್ಜಿದಾರ
ಮತ್ತು
ದೇವಪ್ಪ ಗೌಡ ಸಹಾ —ಎದ್ರಿರು

4ನೇ ಎದ್ರಿಯು ದುಗ್ಗಮ್ಮ, ನಾರಾಣ ಗೌಡರ ಹೆಂಡ್ತಿ, 5ನೇ ಎದ್ರಿ ವೆಂಕಪ್ಪ, ಗೌಡರ ಮಗ, ಇಬ್ಬರೂ ಪುತ್ತೂರು ತಾಲೂಕು, ಪುಣ್ಚಪಾಡಿ ಗ್ರಾಮದ ಬೆಪ್ರಡಾಡಿ ಎಂಬಲ್ಲಿ. P. O. ಸೇನ ಇಂಗೂರು (ದ. ಕ.)

ಸದ್ರಿ ಮೇಲೆ ಹೇಳಿರುವ ಅರ್ಜಿಯಲ್ಲಿ ಅರ್ಜಿದಾರನು 'ನ್ಯೂಸೂರು ಲೇಂಡ್ ರಿಫಾರ್ಮ್ಸ್ ಆಕ್ಟಿನ ಪ್ರಕಾರ ಗೇಣಿ ಬಾಕಿಗೆ ನಿಮ್ಮಬ್ಬರ ಮೇಲೆ ಅರ್ಜಿ ಮಾಡಿರುವುದರಿಂದ ನಿಮ್ಮ ಹಾಜರಾತಿ ಬಗ್ಗೆ ತಾ. 15-9-1972ಕ್ಕೆ ಬೆಳಿಗ್ಗೆ ಗಂಟೆ 10 ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಖುದ್ದು ಯಾ ಪಕೀಲರ ಮುಖಾಂತರವಾಗಲೀ ಹಾಜರಾಗದಿದ್ದಲ್ಲಿ ನಿಮ್ಮನ್ನು ಶಿಕ್ಷಾ ನೂಡಿ ಯುಕ್ತ ಕಂಡ ರೀತಿಯಲ್ಲಿ ತೀರ್ಮಾನಿಸಲಾಗುವುದು ಎಂತ ಕೋರ್ಟು ಹ್ಕುಂ ಪ್ರಕಾರ ತಿಳಿಸೋಣವಾಗಿದೆ.

(By order of the Court)
K. Raghunath Rai
Advocate for Petitioner
Puttur, S. K.
16-8-1972

ಭೂ ಶಾಸನದ ತಿದ್ದುಪಡಿಯಲ್ಲಿ

ಜ್ವಲಂತ ಸಮಸ್ಯೆಗಳಿಗೆ ಪರಿಹಾರವಿಲ್ಲ

ಶ್ರೀ ಕಡಿದಾಳ ಮಂಜಪ್ಪನವರ ನಿಶ್ಚಿತಾಭಿಪ್ರಾಯಗಳು

ಸಮೂಜವಾದವನ್ನು ಆಚರಣೆಗೆ ತರುವ ಸಲುವಾಗಿ ಮೂಡುವ ಸುಧಾರಣೆಗಳು ಸಮೂಜದಲ್ಲಿರುವ ಏರುಪೇರುಗಳನ್ನು ಸರಿಪಡಿಸುವಂತಿರಬೇಕು. ಅದರೊಂದಿಗೆ ಸಂಪತ್ತನ್ನೂ ಹೆಚ್ಚಿಸುವಂತಿರಬೇಕು. ಸುಧಾರಣೆಗಳು ನ್ಯಾಯವಾಗಿರಬೇಕು. ಆಸವಶ್ಯವಾದ ತೊಡಕುಗಳಿಗೆ ಅವಕಾಶ ನೀಡುವಂತಿರಬಾರದು; ಉತ್ಪಾದನೆಗೆ ಅಡ್ಡಿ ತರುವಂತಿರಬಾರದು; ಪಕ್ಷಪಾತ ಪೂರ್ಣವಿರಬಾರದು. ಈಗ ವಿಧಾನ ಸಭೆಯ ಮುಂದಿರುವ ಭೂಸುಧಾರಣಾ ತಿದ್ದುಪಡಿ ವಿಧೇಯಕದ ಕೆಲವಂಶಗಳು ಅನಾವಶ್ಯಕ ತೊಂದರೆ, ತೊಡಕುಗಳನ್ನು ಉಂಟು ಮಾಡುತ್ತವೆ ಎಂದು ನನ್ನ ಅಭಿಪ್ರಾಯ.

ಕುಟುಂಬ

ಗರಿಷ್ಠ ಇಸವಿಯ ಭೂ ಸುಧಾರಣಾ ಕಾಯಿದೆಯಂತೆ ಐದು ಜನವಿರುವ ಕುಟುಂಬವೊಂದಕ್ಕೆ ಅಥವಾ ಅವಿಭಕ್ತ ಕುಟುಂಬವೊಂದಕ್ಕೆ ಹದಿನೆಂಟು ಎಕ್ರೆಗಳ ಮಿತಿಯಿತ್ತು. ಈ ಶಾಸನ ಜಾರಿಗೆ ಬಂದ ದಿನದಲ್ಲಿಪ್ಪ ಹಿಡುವಳಿಗಳಿಗೆ ಇಪ್ಪತ್ತೈದು ಎಕ್ರೆಗಳು ಮಿತಿಯೂಗಿತ್ತು. ಕಂಪೆನಿ, ಧಾರ್ಮಿಕ ಅಥವಾ ಇತರ ಸಂಸ್ಥೆಗಳಿಗೂ ಈ ಮಿತಿ ಅನ್ವಯಿಸುವಂತಿತ್ತು. ಆ ಕಾಯಿದೆಯಲ್ಲಿ ಕುಟುಂಬದಲ್ಲಿ ಅಥವಾ ಅವಿಭಕ್ತ ಕುಟುಂಬದಲ್ಲಿ ತಕ್ಕ ಪ್ರಾಪ್ತ ವಯಸ್ಕರಿಗೂ ಅಪ್ರಾಪ್ತ ವಯಸ್ಕರಿಗೂ ಯಾವ ವ್ಯತ್ಯಾಸವನ್ನೂ ಮಾಡಿರಲಿಲ್ಲ.

ಆದರೆ, ಈಗಿನ ತಿದ್ದುಪಡಿ ವಿಧೇಯಕದಲ್ಲಿ ಕುಟುಂಬ ಮತ್ತು ವ್ಯಕ್ತಿ ಎಂಬ ಪದಗಳ ಅರ್ಥ ವಿವರಣೆಯನ್ನು ಬದಲಾಯಿಸಿದೆ. ಇದರಿಂದಾಗಿ ಅಪ್ರಾಪ್ತ ವಯಸ್ಸಿನ ಮಕ್ಕಳುಳ್ಳ ಕುಟುಂಬದವರು ಬರಿಯ ಹತ್ತು ಎಕರೆಗಳನ್ನು ಮಾತ್ರ ಇಟ್ಟುಕೊಳ್ಳಬಹುದು. ಆದರೆ, ಪ್ರಾಪ್ತವಯಸ್ಕ ಮಕ್ಕಳುಳ್ಳ ಕುಟುಂಬಗಳಿಗೆ ನಲವತ್ತು ಎಕ್ರೆಗಳನ್ನು ಹೊಂದುವ ಅವಕಾಶವಿದೆ. ಇಷ್ಟು ಮಾತ್ರವಲ್ಲದೆ ಕಂಪೆನಿ, ಧಾರ್ಮಿಕ ಸಂಸ್ಥೆ —ಮೊದಲಾದವುಗಳಿಗೆ ಈ ವಿಧೇಯಕದಲ್ಲಿನ ಮಿತಿಯು ಅನ್ವಯಿಸುವಂತೆ ತೋರುವುದಿಲ್ಲ. ಈ ಅಭಾಸವನ್ನು ಸರಿಪಡಿಸುವುದು ಅತ್ಯಂತ ಅವಶ್ಯವಾಗಿದೆ.

ಅನ್ಯಾಯದ ಪರಮಾವಧಿ

ತಿದ್ದುಪಡಿ ವಿಧೇಯಕವು ಜಮೀನು ಸಾಗುವಳಿ ಮಾಡುವವನು ತನ್ನ ಜಮೀನಿರುವ ಹಳ್ಳಿಯಿಂದ ೫ ಕಿಲೋಮೀಟರುಗಳ ಸರಹದ್ದಿನಲ್ಲಿ ವಾಸಿಸಬೇಕೆಂದು ನಿರ್ಬಂಧ ಹೇರಿದೆ. ಇದಕ್ಕೆ ತಪ್ಪಿದವರು ತಮ್ಮ ಜಮೀನನ್ನು ಸರಕಾರಕ್ಕೆ ಒಪ್ಪಿಸಬೇಕು. ಜಮೀನು ಹೊಂದಿರುವವರು ಇನ್ನಾವುದಾದರೂ ಉದ್ಯೋಗದಲ್ಲಿ ನಿರತರಾದ್ದು ಆ ಉದ್ಯೋಗದಿಂದ ವರ್ಷಕ್ಕೆ ಇನ್ನೈರಡು ಸಾವಿರ ರೂಪಾಯಿಗಳಿಗಿಂತ ಹೆಚ್ಚು ಸಂಪಾದಿಸಿದರೆ, ಅವರೂ ತಮ್ಮ ಭೂಮಿಯನ್ನು ಸರಕಾರಕ್ಕೆ ಒಪ್ಪಿಸಬೇಕು.

ಒಬ್ಬ ವ್ಯಕ್ತಿಗೆ ಒಂದು ಕಸುಬು ಎಂಬ ಸಿದ್ಧಾಂತವಿದು. ಇದನ್ನು ಎಲ್ಲ ಕಸುಬಿನವರಿಗೂ ಅನ್ವಯಿಸಬೇಕು. ಹಾಗೆ ನೂರಕ್ಕೆ ಬರಿಯ ಜಮೀನು ಹೊಂದಿದವರಿಗೆ ಮಾತ್ರ ಈ ನಿಯಮ ಹೇರುವುದರಲ್ಲಿ ನ್ಯಾಯವೆಂಬುದಿಲ್ಲ. ಬೆಂಗಳೂರಿನಲ್ಲಿ ವಾಸವಾಗಿರುವ ಕೈಗಾರಿಕೋದ್ಯಮಿಗಳು ಅಥವಾ ವ್ಯಾಪಾರಿಗಳು ಜೊಂಬಾಯಿಯಲ್ಲಿ ಕೈಗಾರಿಕೆಯನ್ನೋ ವ್ಯಾಪಾರವನ್ನೋ ನಡೆಸಲು ಸ್ವತಂತ್ರರಾಗಿರಬಹುದಾದರೆ, ವರ್ತಕನಾಗಿರುವವನು ಕೈಗಾರಿಕೆಗಳ ಮೂಲಿಕನಾಗಬಹುದು. ಆಜ್ಞೇ ಅಲ್ಲದೆ ಇನ್ನಾವುದಾದರೂ ಉದ್ಯೋಗವನ್ನು ಮಾಡಬಹುದು. ಸರಕಾರಿ ನೌಕರರ ಮಕ್ಕಳೂ ಬೇರೆ ಬೇರೆ ಉದ್ಯೋಗದಲ್ಲಿರಬಹುದು. ಆದರೆ, ಬೇಸಾಯಗಾರರು ಮಾತ್ರ ಯಾವ ಕಾಲಕ್ಕೂ ಭೂಮಿಗೆ ಅಂಟಿಕೊಂಡು ಹಳ್ಳಿಯಲ್ಲೇ ಬಿದ್ದು ಕೊಂಡಿರಬೇಕು. ಒಂದು ವೇಳೆ ಅವರು ಬೇರೆ ಉದ್ಯೋಗದಲ್ಲಿ ತೊಡಗಬೇಕಾದರೆ, ಭೂಮಿಯಿಂದ ಕೈತೊಳೆದುಕೊಳ್ಳಬೇಕು. ಬೇರೆ ಉದ್ಯೋಗದಲ್ಲಿರುವವರು ಎಷ್ಟು ಹಣವನ್ನಾದರೂ ಸಂಪಾದಿಸಲು ಅವಕಾಶವಿದೆ: ಆದರೆ ರೈತ ಕುಟುಂಬ ಮಾತ್ರ ಯಾವ ಕಾಲಕ್ಕೂ ಹತ್ತೆಕರೆಯಲ್ಲೇ ತೃಪ್ತಿಪಡಬೇಕು — ಇದು ಸಂಪೂರ್ಣ ಅನ್ಯಾಯ.

ಉತ್ಪಾದನೆಗೆ ಹಾನಿ

ತಿದ್ದುಪಡಿಯು ಕಾನೂನಾದ ನಂತರ ಸಣ್ಣ ಹಿಡುವಳಿಯಿರುವ ಸರ್ಕಾರಿ ನೌಕರರು, ಜವಾನರು, ಕಾರ್ಮಿಕರು, ಇತರ ಉದ್ಯೋಗಿಗಳಲ್ಲಿರತಕ್ಕ ಮಧ್ಯಮ ವರ್ಗದವರು ಜಮೀನನ್ನು ಬಿಟ್ಟು ಬಿಡಬೇಕು ಅಥವಾ ನೌಕರಿಯನ್ನು ಬಿಡಬೇಕು. ಉದ್ಯೋಗ ಮತ್ತು ಜವೀನುಗೆಲೆರಡರಿಂದಲೂ ಬರತಕ್ಕ ವರಮಾನಗಳಿಂದ ಹಾಗೂ ಹೀಗೂ ಜೀವನ ಸಾಗಿಸುತ್ತಿದ್ದವರು ಇನ್ನು ಮೇಲೆ ತ್ರಿಶಂಕುವಿಗೆ ಬೀಳುತ್ತಾರೆ.

ಬೇರೆ ಉದ್ಯೋಗದಲ್ಲಿದ್ದು ವಾರ್ಷಿಕ ರೂ. ೧೫,೦೦೦ಕ್ಕಿಂತ ಹೆಚ್ಚು ಗಳಿಸುವವರು ಒಂದೋ ತಮ್ಮ ಭೂಮಿಯನ್ನು ಬಿಡಬೇಕು, ಇಲ್ಲ ಹತ್ತೆಕರೆಗಳಿಂದಲೇ ತೃಪ್ತಿ ಹೊಂದಬೇಕು, ಅಂಥವರು ಬೇರೆಡೆ ಸಂಪಾದಿಸಿದ ಹಣವನ್ನು ಇದುವರೆಗೆ ನ್ಯಾಯ ಸಾಯದಲ್ಲೇ ತೊಡಗಿಸಿ ಆಧುನಿಕ ಪದ್ಧತಿಯಿಂದ ಅನುಷ್ಠಾನಕ್ಕೆ ತಂದು ಕೃಷಿ ಕ್ರಾಂತಿಗೆ ಕಾರಣರಾಗಿದ್ದರೆಂಬುದನ್ನು ಮರೆಯಬಾರದು. ಅಂಥವರಿಂದ ಜಮೀನನು ಕಸಗೊಂಡರೆ, ಅಥವಾ ಅವರ ಇತರ ಆಯವನ್ನು ತಪ್ಪಿಸಿದರೆ, ಉತ್ಪಾದನೆಗೆ ಹಾನಿ ತಟ್ಟುತ್ತದೆ ಸುಧಾರಣೆಗಳನ್ನು ಮಾಡುವಾಗ ಅವುಗಳ ಸಾಧಕ—ಬಾಧಕಗಳನ್ನು ಪರಿಶೀಲನೆ ಮಾಡುವುದು ಅತ್ಯಸ್ಯ.

ನಗೆಯು ಬರುತಿದೆ

ಭೂ ಸುಧಾರಣೆಯೊಗಬೇಕೆನ್ನುವವರಲ್ಲಿ ನಾನೂ ಮೊದಲಿಗನೇ. ಆದರೆ, ಬೇಸಾಯಗಾರರಿಗೆ ಮಾತ್ರ ಕೆಲವು ನಿರ್ಬಂಧ ಹೊರಿಸುವಾಗ, ಅದನ್ನು ಸಹಿಸುವುದೆಕ್ಕಾಗದು. ಇಂದು ಎಲ್ಲರೂ ಉಗ್ರಗಾಮಿಗಳೇ. ನ್ಯವಸಾಯ ರಂಗದ ಪ್ರಾಥಮಿಕ ಜ್ಞಾನವಿಲ್ಲದವರೂ, ನಾನಾವಿಧಾನಗಳಿಂದ ಆಕ್ರಮವಾಗಿ ಗಳಿಸಿಕೊಂಡಿರುವವರೂ ಪಣಿಕ ವರ್ಗದ ಆಶ್ರಯದಲ್ಲಿ ರಾಜ್ಯಕಾರಣವಾಡುತ್ತಿರುವವರೂ, ಅಪರಿವರ ಹೆಸರಿನಲ್ಲಿ ಆಸ್ತಿ ಮಾಡಿಕೊಂಡಿರುವವರೂ ಕ್ರಾಂತಿಕಾರಕ ಭೂಸುಧಾರಣೆಯೊಗಬೇಕೆಂದು ಘಂಟಾ ಘೋಷಣಾಗಿ ಸಾರುವಾಗ ನಗೆಯು ಬರುತ್ತದೆ.

ಸುಧಾರಣೆಯೊಗಬೇಕು. ಹಿಡುವಳಿಗಳಿಗೆ ಮಿತಿ ಹೇರಬೇಕು. ಆದರೆ, ಸುಧಾರಣೆಯ ಸೋಗಿನಲ್ಲಿ ಕೇವಲ ಒಂದು ವರ್ಗದ ಜನರಿಗೆ ತೊಂದರೆ ಮಾಡುವುದು ವಿವೇಕವೆ? ಉತ್ಪಾದನೆಗೆ ಧಕ್ಕೆ ತಂದುಕೊಳ್ಳುವುದು ಜಾಣ್ಮೆಯೆ?

ಮಂತ್ರಿಗಳಿಂದ ಆರಂಭವಾಗಲಿ

'ಒಂದು ವ್ಯಕ್ತಿ—ಒಂದು ಕೆಲಸ' ಎಂಬ ಸೂತ್ರ ಪೂರ್ತ ಪೊದಲು ರಾಜ್ಯಕಾರಣಿಗಳಿಗೆ ಅನ್ವಯಿಸಬೇಕು. ಇಂದು ಹೆಚ್ಚಿನ ರಾಜ್ಯಕಾರಣಿಗಳಿಗೆ ರಾಜ್ಯಕಾರಣವೇ ಖಾಯಂ ಕೆಲಸವಾಗಿದೆ. ಮಂತ್ರಿಗಳಿಗೂ ಈ ಸೂತ್ರ ಅನ್ವಯವಾಗಬೇಕು. ಅವರ ಆದಾಯ ವಾರ್ಷಿಕ ಹನ್ನೆರಡು ಸಾವಿರ ವಿಧಿಸುತ್ತದೆ. ಅವರು ೧೬ ಕಿ. ಮೀಟರು ಸರಹದ್ದಿನಲ್ಲಿ ವಾಸವಾಗಿಲ್ಲದಿರುವುದರಿಂದ ಭೂಮಿ ಹೊಂದಲು ಅವರೂ ಅನರ್ಹರಾಗುತ್ತಾರೆ. ತಮ್ಮ ಅಸಹಜತೆಯನ್ನು ಅವರು ಮೊದಲಿಗೆ ಸಾರಿಕೊಳ್ಳಬೇಕು.

ವಿಧೇಯಕದಲ್ಲಿ ಹಲವಾರು ನ್ಯೂನತೆಗಳಿವೆ. ಉದಾಹರಣೆಗೆ ಜಮೀನು ಹೊಂದಿರಲು ಅನರ್ಹರೆಂದವರು ವಿಧಾಯಕೆ ಕಾಲಾವಧಿಯೊಳಗೆ ತಹಸೀಲ್ದಾರರಿಗೆ ಡಿಕ್ಲರೇಶನ್ ಕೊಡಬೇಕು. ಇದಕ್ಕೆ ತಪ್ಪಿದರೆ, ತಥಾಪಿ ತಪ್ಪಾಗಿ ಡಿಕ್ಲರೇಶನ್ ಸಲ್ಲಿಸಿದರೆ, ತಹಸೀಲ್ದಾರರು ಜಮೀನನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದು. ಇಂತಹ ಅಧಿಕಾರ ತಹಸೀಲ್ದಾರರಿಗೆ ಕೊಟ್ಟಿರುವುದೇ ಒಂದು ಅಶ್ಚರ್ಯ.

ಮಿತಿ ಹೇರಿಕೆಯೇ ಪರಿಹಾರವಲ್ಲ

ಇದಲ್ಲದೆ ಕುಟುಂಬವೊಂದಕ್ಕೆ ೧೮ ಸ್ಟ್ಯಾಂಡರ್ಡ್ ಎಕ್ರೆಗಳ ಮಿತಿ ಹೇರುವುದಾಗಲಿ, ೨೭ ಸ್ಟ್ಯಾಂಡರ್ಡ್ ಎಕ್ರೆಗಳ ಮಿತಿ ಹೇರುವುದಾಗಲಿ ಇದು ಹೆಚ್ಚಾಯಿತೆಂದು ಸಕ್ಷಗಸಿಸಿತ್ತು. ಹೆದಿನೈದು ಎಕ್ರೆಗಳ ಮಿತಿ ಸರಿಯೆಂದು ನನಗನ್ನಿಸಿತ್ತು. ಆದರೆ, ರಾಸನ ಸಭೆಯು ಅಭಿಪ್ರಾಯಕ್ಕೆ ನಾನು ಮಣಿಯ ಬೇಕಾಯ್ತು. ಇಂದಿಗೂ ಹದಿನೈದು ಎಕ್ರೆಗಳ ಮಿತಿಯೇ ಸರಿಯೆಂದು ನನಗನ್ನಿಸುತ್ತದೆ. ಯಾವ ಕಾರಣಗಳಿಂದಾದರೂ ಈಗಿರುವ ಹಿಡುವಳಿಗಳು ಹನ್ನೆರಡಾವರೆ ಎಕ್ರೆಗಳಿಗೆ ಕಡಿಮೆಯಿರಬಾರದೆಂದು ನನ್ನ ಅಭಿಪ್ರಾಯ. ಇನ್ನು ಮುಂದೆ ಹತ್ತು ಎಕ್ರೆಗಳ ಮಿತಿ ಗೊತ್ತು ಪಡಿಸಲು ನನ್ನ ಆಕ್ಷೇಪವಿಲ್ಲ. ಆದರೆ, ಈ ಮಿತಿ ನಿರ್ಧಾರದಿಂದಲೇ ಭೂ ಸಮಸ್ಯೆ ಪರಿಹಾರವಾಗುವುದಿಲ್ಲ. ಐದು ಎಕ್ರೆ ಮಿತಿ ಗೊತ್ತು ಮಾಡಿದರೂ ಆ ಧ್ಯಾಂಶಕ್ಕಿಂತ ಹೆಚ್ಚು ಜನರು ಭೂ ಹೀನರಾಗಿಯೇ ಉಳಿಯುತ್ತಾರೆ. ಅಂತಿಮದಲ್ಲಿ ಹೊಸ ಕೈಗಾರಿಕೆಯೇ ಭೂಹೀನರ ಸಮಸ್ಯೆಗೆ ಪರಿಹಾರವಾಗಬೇಕು.

ಅನುಭವದ ಪಾಠ

ಗೇಣಿದಾರರ ವಿಚಾರವೂ ಬಂದಿದೆ. ಕೊನೆಗಾಣದ ಕೋರ್ಟು ವ್ಯವಹಾರವನ್ನು ತಪ್ಪಿಸುವ ಸಲುವಾಗಿ, ಆ ವ್ಯವಹಾರಗಳಿಂದ ಆಗುವ ತೊಂದರೆಗಳ ನುಕ್ತಿಗಾಗಿ ಆಪ್ರಾಪ್ತ ವಯಸ್ಕರು, ಸಣ್ಣ ಹಿಡುವಳಿದಾರರು, ವಿಧವೆಯರು, ಅಶಕ್ತರು, ಅವಿವಾಹಿತ ಹೆಮ್ಮಕ್ಕಳು ಸೈನಿಕರು, ನಾವಿಕರು ವಿನಾ ಉಳಿದ ಭೂಮಾಲಿಕರಿಗೆ ಗೇಣಿದಾರರಿಂದ ಜಮೀನು ಬಿಡಿಸಿಕೊಳ್ಳುವ ಅವಕಾಶವೀಯಬೇಕು. ಗೇಣಿದಾರನಿಂದಲೇ ತನುವರೆಗೆ ಜೀವನ ಸಾಗಿಸುತ್ತಿದ್ದವನಿಗೆ ಹೆಚ್ಚಿನ ಪರಿಹಾರ ದೊರೆಯಬೇಕು. ಜಮೀನನ್ನು ಹಿಂಪಡೆಯುವ ವಿಚಾರದಲ್ಲಿ ನನ್ನ ಅನುಭವದ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ನಾನು ಮಂತ್ರಿಯಾಗಿದ್ದ ಅವಧಿಯಲ್ಲಿ ಸುಮಾರು ಒಂಭತ್ತೂವರೆ ಸಾವಿರ ಎಕ್ರೆ ಭೂಮಿಯನ್ನು ಭೂಹೀನರಿಗೂ ಅಲ್ಪ ಸ್ವಲ್ಪ ಭೂಮಿ ಹೊಂದಿದವರಿಗೂ ಹಂಚಲಾಯ್ತು. ಅವರಲ್ಲಿ ಸುಮಾರು ಐದಾರು ಸಾವಿರ ಜನರು ತಾವು ಹೊಂದಿದ ಭೂಮಿಯನ್ನು ಶ್ರೀಮಂತರಿಗೆ ಪರಭಾರೆ ಮಾಡಿದರು. ಇದರಿಂದ ಶ್ರೀಮಂತರು ಇನ್ನೂ ಶ್ರೀಮಂತರಾ

(ಎಂಟನೇ ಪುಟ ನೋಡಿರಿ)

ಸೇಫ್ ಡಿಪಾಜಿಟ್
ಲಾಕರ್
ನಿಮ್ಮ ಆಭರಣಗಳಿಗೂ,
ಅತಿ ಮುಖ್ಯ ಪತ್ರಗಳಿಗೂ,
ಇತರ ಬೆಲೆಬಾಳುವ ವಸ್ತುಗಳಿಗೂ
ಇಲ್ಲಿದೆ
ESTD. 1906
ಕಾರ್ಪೊರೇಷನ್ ಬ್ಯಾಂಕ್
ಲಿಮಿಟೆಡ್
ಭೂತಪೂರ್ವ
(ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಲಿಮಿಟೆಡ್)
ರಥಬೀದಿ, ಮಂಗಳೂರು ಫೋನ್ ನಂ. 5057
ಕಂಕನಾಡಿ, ಮಂಗಳೂರು ಫೋನ್ ನಂ. 7312
ಪುತ್ತೂರು, ಫೋನ್ ನಂ. 164

ಬದಲಾದ ಸನ್ನಿವೇಶದಲ್ಲಿ–

ದೀರ್ಘಕಾಲದ ಒಡಂಬಡಿಕೆಗಳು

ಒಬ್ಬಳು ವಿಧವೆ. ಆಕೆಯ ಮೈದ ನಂದಿರು ಕುಟುಂಬದ ಆಸ್ತಿಯನ್ನು ಪಾಲು ಮಾಡಿಕೊಂಡರು. ಈ ವಿಭಜನೆಗೂ ನ್ಯಾಯವಾಗಿ ಹೊಂದಿಯಬೇಕಾಗಿದ್ದ ಪಾಲು ನೀಡಿದರು. ಒಂಭೊಂದು ಪಾಲಿಗೆ ಎಂಟೆಂಟು ಸೆಂಟು ಗ್ರೌಂಡ್ ಬರುವಷ್ಟು ಭೂಮಿ–ಕಾಣಿ ಮೌಲ್ಯವಿರುತ್ತದೆಂದು ಇಟ್ಟುಕೊಳ್ಳೋಣ. ವಿಧವೆಗೆ ತನ್ನ ಮೈದುನಂದಿರ ಮೇಲೆ ಅಪಾರ ಗೌರವ ಮೂಡಿತು. ಆದರೆ ಒಂದು ಚಿಂತೆ ಆಕೆಯನ್ನು ಬಾಧಿಸಿತು. ತಾನಿರುವುದು ಬೆಂಗಳೂರಲ್ಲಿ—ಅಣ್ಣನೊಂದಿಗೆ. ಈ ಭೂಮಿಯನ್ನು ಕಟ್ಟಿಕೊಂಡು ಏನು ಮಾಡಲಿ? ಇದನ್ನು ಬೇಸಾಯ ಮಾಡುವುದಾದರೂ ಹೇಗೆ? ಒಕ್ಕಲಿಗೆ ಕಟ್ಟಿಕೊಟ್ಟರೆ, ಅವನಿಂದ ಗೇಣಿ ವಸೂಲಿ ಮಾಡುವುದು ಯಾರು? ಇ. ಇ.

ಆಕೆಯ ಮನಸ್ಥೈರ್ಯವರಿತುಕೊಂಡ ಮೈದುನಂದಿರು ಸಲಹೆ ನೀಡಿದರು. 'ನೀನು ಹೆಂಗಸು; ದೂರದ ಶಹರದಲ್ಲಿದ್ದಿಯೇ. ಆದುದರಿಂದ ಈ ಭೂಮಿಕಟ್ಟಿಕೊಂಡು ಮಾಡುವುದೇನು? ಎಂದು ಯೋಚಿಸುತ್ತಿರುಬಹುದು..' ವಿಧವೆ ಅವರ ಕಲ್ಪನಾಶಕ್ತಿಗೆ ಮೆಚ್ಚಿದಳು. ಆವರು ಮುಂದುವರಿದರು. ಒಂದು ವೇಳೆ ನಿನಗೆ ಭೂಮಿ ಬೇಕಾಗಿಲ್ಲವಾದರೆ ಅದನ್ನು ನಾವೇ ಇಟ್ಟುಕೊಳ್ಳುತ್ತೇವೆ. ನಿನಗೆ ಎಂಟು ಮುಡಿ ಅಕ್ಕಿಯ ಬೆಲೆಯನ್ನು ಪ್ರತಿವರ್ಷವೂ ಸಂದಾಯ ಮಾಡುತ್ತೇವೆ.

ವಿಧವೆಯ ಮುಖದಲ್ಲಿ ಸಂತೋಷದ ಸೆಲೆ ಮಿಂಚಿತು. ಇದನ್ನು ಕಂಡುಕೊಂಡ ಮೈದುನಂದಿರು ಮುಂದಿನ ಸಲಹೆ ಮಾಡಿದರು. ಅಕ್ಕಿ ಮುಡಿಗೆ ದರ ಎರಡೂವರೆ ಅಂದರೆ ಎಂಟಕ್ಕೆ ಇಪ್ಪತ್ತಾಯ್ತು. ನಾವು ನಿನಗೆ ವಾರ್ಷಿಕ ಇಪ್ಪತ್ತೈದು ರೂಪಾಯಿ ಅಶನಾರ್ಥ ಕೊಡುತ್ತೇವೆ; ಭೂಮಿಯನ್ನು ನಾವೇ ಪಾಲು ಮಾಡಿ ಕೊಳ್ಳುತ್ತೇವೆ.

ವಿಧವೆಗೆ ಇನ್ನೂ ಸಂತೋಷ. ತನ್ನ ಮೈದುನಂದಿರು ದೇವತಾಸ್ವರೂಪಿಗಳೆಂದು ತಿಳಿದು ಆಕೆ ತನ್ನ ಹೃತ್ಪೂರ್ವಕ ಒಪ್ಪಿಗೆ ನೀಡಿದಳು. ವರ್ಷವೊಂದರ ಇಪ್ಪತ್ತೈದು ರೂಪಾಯಿಗಳ ಅಶನಾರ್ಥ ಪಡೆದು ಆಕೆ ಅಣ್ಣನೊಂದಿಗೆ ಇರತೊಡಗಿದಳು. ಮೈದುನಂದಿರು ರೂ. ಇಪ್ಪತ್ತೈದು ಕಳಿಸಲು ಎಂದೂ ತಳುವಿದವರಿಲ್ಲ; ಇಂದಿಗೂ ಅದು ಬರುತ್ತಲೇ ಇದೆ.

೧೯೪೦—೭೦ರ ನಡುವೆ ಅಜಗಜಾಂತರ. ವಿಜ್ಞಾನ ಪ್ರತಿ ಹತ್ತು ವರ್ಷಗಳಲ್ಲಿ ಇಮ್ಮಡಿಯಾಗುತ್ತದೆ; ಮಾನವಿಕತೆ ಪ್ರತಿ ಹದಿನೈದು ವರ್ಷಗಳಿಗೆ ಇಮ್ಮಡಿಯಾಗುತ್ತದೆ. ಆದರಂತೆ ೧೯೪೦ರಲ್ಲಿ ಒಂದು ಇದ್ದ ವಿಜ್ಞಾನ ೧೯೭೦ರಲ್ಲಿ ಎಂಟು ಆಗಿದೆ. ಮಾನವಿಕತೆ ಒಂದರಿಂದ ನಾಲ್ಕು ಆಗಿದೆ. ಇವೆರಡರ ವೇಗವನ್ನೂ ಮೆಟ್ಟಿನಿಂತು ಬೆಲೆಯೇರಿಕೆ ಸರಾಸರಿ ಇಪ್ಪತ್ತರಿಂದ ಮೂವತ್ತು ಆಗಿದೆ. ಅಂದರೆ ಬೆಲೆಯೇರಿಕೆ ಲಂಗುಲಗಾಮು ಇಲ್ಲದೆ ಒಂದೇ ಸವನೆ ನಾಗಾಲೋಟಕಿತ್ತಿದೆಯೆಂದೇ ಹೇಳಬೇಕು. ಆವಿ ಧನೆಗೆ ಅಂದು ಹತ್ತು ಮುಡಿ ಅಕ್ಕಿಯು ಬೆಲೆಯಷ್ಟು ಅಶನಾರ್ಥ ದೊರೆಯುತ್ತಿತ್ತು. ಒಪ್ಪಂದದಂತೆ ಇಂದು ಅರ್ಧ ಮುಡಿಯ ಬೆಲೆಯೂ ದೊರೆಯುತ್ತಿಲ್ಲವೆಂದರೆ, ಅವಳ ಕಥೆ ಗೋಳಿನದ್ದೇ, ಕಣ್ಣೀರಿನದ್ದೇ. ಅಕೆ ಅಸಹಾಯಕಳು. ಇಂದಿನ ಧಾರಣೆಯಲ್ಲಿ ಅಶನಾರ್ಥ ಕೇಳುವ ಅಧಿಕಾರ ಆಕೆಗಿಲ್ಲ. ಅಂದು ಅತಿನ್ಯಾಯವೆನಿಸಿದ್ದು ಇಂದು ತೀರ ಅನ್ಯಾಯವೆನಿಸುತ್ತಿದೆ; ಕಾನೂನಿನ ಬೆಂಬಲ ಮಾತ್ರ ಆಕೆಗಿಲ್ಲ.

ರಾಜ್ಯದ ವಿದ್ಯುನ್ಮಂಡಳಿಗೆ ಜೆಳಗಾಂವಿಯ ಅಲ್ಯೂಮಿನಿಯಂ ಕಾರಖಾನೆಗೆ ವಿದ್ಯುತ್ತು ಪೂರೈಸುತ್ತಿರುವುದರಿಂದ ಪ್ರತಿ ವರ್ಷ ಒಂದು ಕೋಟಿ ಇಪ್ಪತ್ತೈದು ಲಕ್ಷ ರೂಪಾಯಿಗಳು ನಷ್ಟವಾಗುತ್ತಿದೆಯೆಂದು ಕೇಳಿಪಾಗ ಮೇಲಿನ ಘಟನೆ ನೆನಪಾಯ್ತು. ಪ್ರತಿಯೊಬ್ಬ ಕನ್ನಡಿಗನೂ ಪ್ರತಿವರ್ಷ (ಸದ್ಯಕ್ಕೆ) ಐವತ್ತು ಪೈಸೆ ಕಾಣಿಕೆಯನ್ನು ಈ ನಷ್ಟ ತುಂಬಿಸಲು ತೆರಬೇಕಾಗುತ್ತದೆ. ವಿದ್ಯುನ್ಮಂಡಳಿ ಭೀಮಕಾಯ; ಅದರ ಹೊಟ್ಟೆ ತುಂಬಿಸಲು ಸರಕಾರಿ ಬೊಕ್ಕಸವೂ ಇದೆ; ಈ ಬೊಕ್ಕಸ ತುಂಬಿಸಲು ಜನತೆಯಿದೆ. ಗಾಬರಿಯೇನಿಲ್ಲ. ಆದರೆ ಇದೇ ಒಂದು ಖಾಸಗಿ ಸಂಸ್ಥೆಯಾಗಿದ್ದರೆ, ಅದರ ಎಲುಬುಗಳೂ ಉಳಿಯುತ್ತಿರಲಿಲ್ಲವೆಂದು ಹೇಳಬೇಕಾಗುತ್ತದೆ.

೧೯೬೬ರಲ್ಲಿ ನಮ್ಮ ರಾಜ್ಯದಲ್ಲಿ ವಿದ್ಯುತ್ತಿನ ಬಾಹುಲ್ಯವಿತ್ತು. ಬೇಡಿಕೆಯಿಲ್ಲದೆ ಅದು ಕೊಳೆಯುತ್ತಿತ್ತು. ಪ್ರತಿದಿನ ಒಂದು ಲಕ್ಷ ರೂಪಾಯಿಗಳ ನಷ್ಟವಾಗುತ್ತಿತ್ತು. ಈ ನಷ್ಟವನ್ನು ತಪ್ಪಿಸಲು ಬೆಳಗಾಂವಿಯ ಕಾರಖಾನೆಗೆ ರಿಯಾಯಿತಿ ದರದಲ್ಲಿ ಶಕ್ತಿ ಪೂರೈಸಲು ಒಡಂಬಡಕೆ ಮಾಡಿಕೊಳ್ಳಲಾಯ್ತು. ರಾಜ್ಯಕ್ಕೆ ಅದರಿಂದ ನಷ್ಟವಾಗುವುದು ತಪ್ಪಿತು. ಲಾಭವೂ ಆಗಿರಬಹುದು.

೬೬ರ ಒಡಂಬಡಿಕೆಯ ಅವಧಿ ೫೫ ವರ್ಷಗಳ ಕಾಲ. ಆನಂತರ ಕಂಪೆನಿಯು ಆ ನೇಕ್ಷೆಯ ಮೇರೆಗೆ ಒಡಂಬಡಿಕೆಯನ್ನು ನವೀಕರಿಸುವ ಅವಕಾಶ. ಆದುವರೆಗೆ ? ಈ ಪ್ರಶ್ನೆಗೆ ಉತ್ತರವಿಲ್ಲ. ಉತ್ಪನ್ನ ವೆಚ್ಚವು ದಿನದಿಂದ ದಿನಕ್ಕೆ ಏರುತ್ತಿರುವುದು ಇಂದು ನಿನ್ನೆಯ ಸೊಗತಿಯಲ್ಲ. ೧೯೬೬ಕ್ಕೆ ಮೊದಲೇ ಆದು ಆರೂಭವಾಗಿದೆ. ಹಾಗಿದ್ದರೂ ಸರಕಾರದ ಬುದ್ಧಿವಂತರು ಇಪ್ಪೊಂದು ದೀರ್ಘಕಾಲದ ಒಡಂಬಡಿಕೆ ಮಾಡಿಕೊಳ್ಳಲು ಮುಂದಾದರು ಏಕೆ? ದಿನವೊಂದರ ಲಕ್ಷರೂಪಾಯಿ ಉಳಿಸುವ ತಾತ್ಕಾಲಿಕ ಲಾಭ–(ಇದು ಕೇವಲ ತಾತ್ಕಾಲಿಕ. ಏಕೆಂದರೆ, ವಿದ್ಯುತ್ತಿಗೆ ಬೇಡಿಕೆ ಹೆಚ್ಚುತ್ತಿತ್ತು, ನಷ್ಟ ನಿಲ್ಲುತ್ತಿತ್ತು)ದ ಆಮಿಷದಲ್ಲಿ ಎರಡೂವರೆ ದಶಕಗಳಷ್ಟು ಕಾಲ ನಷ್ಟಿಸಲಾಗಲು ಅವರೇಕೆ ಸಿದ್ಧರಾದರು? ಒಡಂಬಡಿಕೆಯನ್ನು ಇಷ್ಟು ದೀರ್ಘಕಾಲದವರೆಗೆ ಮಾಡುವ ಅಗತ್ಯವೇನಿತ್ತು? ಬೆಲೆಯೇರಿಕೆಯ ಸ್ಥಿತಿಯನ್ನು ಆರಿತೂ ಆರಿತೂ ಹಾಗೆ ಮಾಡಿದ್ದೇಕೆ?

ಈ ಪ್ರಶ್ನೆಗಳು ಆಗ ಏಳಲಿಲ್ಲ; ಯಾರೂ ಎತ್ತಲೂ ಇಲ್ಲ. ಈಗ ಒಂದೂಕಾಲು ಕೋಟಿ ನಷ್ಟವಾಗುತ್ತಿದೆ ಎನ್ನುವಾಗ ಏಳುತ್ತವೆ. ಇದನ್ನು ತಪ್ಪಿಸಲು ಒಡಂಬಡಿಕೆಯನ್ನು ಪ್ರಜಲಿತ ಸನ್ನಿವೇಶಕ್ಕನುಸಾರವಾಗಿ ಪುನರ್ವಿಂತೀಲಿಸುವುದು ಸಾಧ್ಯವೆಂದು ನೋಡುವುದಾಗಿ ಮಂತ್ರಿ ಜೆನ್ನಬಸಪ್ಪ ಭರವಸೆ ನೀಡಿದ್ದಾರೆ. ಕಾಯದೆಯಲ್ಲಿ ಇದಕ್ಕೆ ಅವಕಾಶವಿಲ್ಲದೆ ಹೋದರೂ ತನಗಾಗಿರಲೇ ಬೇಕಾದ ಹೇರಳ ಲಾಭದಲ್ಲಿ ಒಂದು ಪಾಲು ರಾಜ್ಯ ವಿದ್ಯುನ್ಮಂಡಳಿಗೆ ಕೊಡಲು (ದರಗಳನ್ನು ತುಸು ಮಟ್ಟಿಗೆ ಹೆಚ್ಚಿಸಲು) ಕಾರಖಾನೆ ಒಪ್ಪಿಗೆ ನೀಡಬಹುದು; ಈ ಮಾತು ಬೇರೆ.

ಇಲ್ಲಿ ಒಂದು ಮಾತನ್ನು ಗಮನಿಸಬೇಕು. ದೀರ್ಘಕಾಲಾವಧಿಯವರೆಗೆ ಜ್ಯಾರಿಯಲ್ಲಿರ ಬೇಕಾದ ಕರಾರು ಪತ್ರಗಳಿಗೆ ಸಹಿ ಹಾಕುವಾಗ ತೀವ್ರ ಎಚ್ಚರಿಕೆ ಬೇಕು.

ಸ್ಥಿರ ಆಸ್ತಿಗಳ ಮೇಲಿನ ತೆರಿಗೆಯು ಪ್ರತಿ ಆರು ವರ್ಷಗಳಿಗೊಮ್ಮೆ ಪುನರ್ವಿಮರ್ಶೆಯಾಗುತ್ತಿದೆ. ಪ್ರತಿವರ್ಷವೂ ಹಲವು ಬಗೆಯ ತೆರಿಗೆಗಳು ಏರುತ್ತಿವೆ. ಬಜಾರು ಧಾರಣೆ ನಿಮಿಷಾರ್ಧದಲ್ಲಿ ಬದಲಾಗುತ್ತಿದೆ. ಹಾಗಿರುವಾಗ ಎರಡೂವರೆ ದಶಕಗಳ ಕಾಲ "ಈ ದರ"ದಲ್ಲಿ ವಿದ್ಯುತ್ ಪೂರೈಸುತ್ತೇವೆ ಎಂದು ಒಪ್ಪಿಕೊಂಡ ಭೂಪರಿಗೆ ನಿಜಕ್ಕೂ ಜಯಕಾರ ಹಾಕಲೇಬೇಕು.

ಕಾನೇರಿ ನೀರಿನ ಬಗೆಗೆ ೫೦ವರ್ಷಗಳ ಒಡಂಬಡಿಕೆ ಮಾಡಿದ್ದರಿಂದ ರಾಜ್ಯಕ್ಕೆ ಏನು ಹಾನಿ ತಟ್ಟಿತು? ಇನ್ನು ಎಲ್ಲರಿಗೂ ಗೊತ್ತು. ತಮಿಳುನಾಡು ಬದಲಾದ ಪರಿಸ್ಥಿತಿಯನ್ನು ಅರಿತುಕೊಂಡು ಕರ್ನಾಟಕಕ್ಕೆ ನ್ಯಾಯವಾಗಿ ಸಿಗಬೇಕಾದಷ್ಟು ನೀರು ಪಡೆಯಲು ಬಿಡುತ್ತಿಲ್ಲ. ದೀರ್ಘಾವಧಿಯ ಸರಕಾರಿ ಸಾಲಪತ್ರಗಳು ತಮ್ಮ ಮೌಲ್ಯವನ್ನು ಕಳೆದುಕೊಂಡು ನೂರಕಟ್ಟೆಯಲ್ಲಿ ಕೊಳೆಯುತ್ತಿವೆ.

ಅಶನಾರ್ಥ ಪಡೆದ ಆ ವಿಧವೆಗೂ ನಮಗೂ ಹೆಚ್ಚಿನ ವ್ಯತ್ಯಾಸವಿಲ್ಲವೆನಿಸುತ್ತದೆ.●

ಮಹಾಸಭೆ

ದಿ ಜಗನ್ನಾಥ ಎಜ್ಯುಕೇಶನ್ ಸೊಸೈಟಿ (ರಿ) ಗೋರೆಗಾಂ, ಬೊಂಬ್ಬಾ ಇದರ ಮೂರನೇ ವಾರ್ಷಿಕ ಮಹಾಸಭೆಯು ಇತ್ತೀಚೆಗೆ ಜರಗಿ ಶ್ರೀಗಳಾದ ವಿ. ಪಿ. ಕೋಟ್ಯಾನ್, ಯು. ಎಸ್. ಕಾರಂತ, ವಿ. ಎಲ್. ಅಪ್ಪೆ, ಎಂ. ಪಿ. ಭಟ್, ಶ್ರೀಮತಿ ವಿದ್ಯಾ ಭಟ್ ಮೊದಲಾದವರು ಸಂಘದ ಮುಂದಿನ ಕಾರ್ಯಕಲಾಪ ಹಾಗೂ ಆದರ ಏಳಿಗೆಯ ಕುರಿತು ಸಲಹೆ ನೀಡಿದರು. ಅಧ್ಯಕ್ಷ ಶ್ರೀ ಎಸ್. ಜಿ. ಶೆಟ್ಟಿ ಸಂಘದ ಚಟುವಟಿಕೆಗಳನ್ನು ಹೆಚ್ಚಿಸುವರೆ ಸದಸ್ಯರು ಮತ್ತು ಧನಸಂಗ್ರಹಣ ಅವಶ್ಯಕತೆಯನ್ನು ನಿವರಿಸಿ ಕಳೆದ ವರ್ಷಕ್ಕಿಂತಲೂ ಈ ವರ್ಷ ಬಡ ವಿದ್ಯಾರ್ಥಿಗಳಿಗೆ ನೀಡಿದ ಹೆಚ್ಚಿನ ಸಹಾಯವು ಸಂಸ್ಥೆಯ ಏಳಿಗೆಯನ್ನು ಸೂಚಿಸುತ್ತದೆಯೆಂದೂ, ಮುಂದಕ್ಕೆ ಇನ್ನೂ ಹೆಚ್ಚಿನ ಫಲಿತಗಳಿಗೆ ಸಹಾಯ ಕೊಡುವ ಉದ್ದೇಶವಿದೆಯೆಂದೂ ಹೇಳಿ ಪ್ರತಿಯೊಬ್ಬರ ಸಹಕಾರ ಕೋರಿದರು.

ಮುಂದಿನ ವರ್ಷಕ್ಕೆ ಶ್ರೀ ಎಸ್. ಜಿ. ಶೆಟ್ಟಿ, ಅಧ್ಯಕ್ಷ, ವಿ. ಎಲ್. ಅಪ್ಪೆ ಉಪಾಧ್ಯಕ್ಷ, ವಿ. ಪಿ. ಕೋಟ್ಯಾನ್ ಗೌರವ ಕಾರ್ಯದರ್ಶಿ, ಯು. ಎಸ್. ಕಾರಂತ ಗೌ. ಜತೆ ಕಾರ್ಯದರ್ಶಿ ಎಸ್. ಎಸ್. ಹೆಜಮಾಡಿ ಗೌ. ಕೋಶಾಧಿಕಾರಿ, ಮತ್ತು 12ಸದಸ್ಯರಿರುವ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು.

ಬಹುಮೂಲ್ಯ ವಿತರಣಾ ಸಲಹಾ ಸಮಿತಿಗೆ ಕೊರಂಕ್ರಪಾಡಿಯ ಕೆ. ಕೆ. ಕುಡ್ವ, ಕೆ. ಬಾಲಕೃಷ್ಣ ಶೆಟ್ಟಿ, ಕೆ. ಶ್ಯಾಮ ಶೆಟ್ಟಿ, ಕೆ. ಸುಂದರ ಶೆಟ್ಟಿ, ಇವರನ್ನು ಆರಿಸಲಾಯಿತು.

ಆಂತ್ಯದಲ್ಲಿ ಕಾರ್ಯದರ್ಶಿಗಳು ಧನ್ಯವಾದಗರ್ಪಿಸಿದರು.

ವಿದ್ಯಾರ್ಥಿ ವೇತನ

ಕರ್ನಾಟಕ ಫ್ರೀ ನೈಟ್ ಶೈಸ್ಕೂಲಿನ ಸಂಚಾಲಕರು, ಇಲ್ಲಿಯ ವಿಶ್ವವಿದ್ಯಾಲಯದಲ್ಲಿ ಕಲಿಯುವ, ಕಲಿಯಲಿಚ್ಚಿಸುವ ಸ್ವಜಾತಿ ಬಡ ವಿದ್ಯಾರ್ಥಿಗಳಿಗೆ ಎಂದಿನಂತೆ ವಿದ್ಯಾರ್ಥಿವೇತನ ರೂಪದಿಂದ ಸಾಲ ಕೊಡುವುದರಿಂದ ಧನ ಸಹಾಯ ಪಡೆಯಲಿಚ್ಚಿಸುವ ವಿದ್ಯಾರ್ಥಿಗಳು ಆಗೋಸ್ತು ತಿಂಗಳ 31ನೇ ತಾರೀಕಿನೊಳಗೆ ಕೆಳಗಿನ ವಿಳಾಸಕ್ಕೆ ಅರ್ಜಿ ಸಲ್ಲಿಸಬೇಕಾಗಿ ಅಪೇಕ್ಷಿಸಲಾಗಿದೆ.

THE HUNT ALIAS NADAVA SANGA, BOMBAY,
A-4/34, Navayug Nivas,
167, Dadasaheb Badkhamkar Marg,
(Lamington Road), Opp- Minerva Cinema,
BOMBAY-7.

ಶಿವ ವಿದ್ಯಾವರ್ಧಕ ಸಂಘಕ್ಕೆ ಧನ ಸಹಾಯ

ಹಿಂದೂ ಜ್ಯೂನಿಯರ್ ಕಾಲೇಜ್ ಮತ್ತು ಮೂರು ಹಯರ್ ಪ್ರೈಮರಿ ಶಾಲೆಗಳನ್ನು ನಡೆಸುತ್ತಿರುವ ವಿದ್ಯಾವರ್ಧಕ ಸಂಘಕ್ಕೆ ಹುಬ್ಬಳ್ಳಿಯ ಶ್ರೀ ಆರ್. ಎನ್. ಶೆಟ್ಟು ರೂ. 10,000 ಬೆಂಗಳೂರಿನ ಶ್ರೀ ಮೋಹನದಾಸ್ ಹೆಗ್ಡೆಯವರು ರೂ. 1,000 ಮೂಡುಬಿದ್ರಿಯ ಶ್ರೀ ಜಯರಾಜ ಬಲ್ಲಾಳರು ರೂ. 1,000 ಮೂಡುಬಿದ್ರಿಯ ಶ್ರೀ ಮೂಡ್ಕಯ್ಕರಾಜ ಬಲ್ಲಾಳರು ರೂ. 1,000 ಮತ್ತು ಹಿಂದೂ ಹಯರ್ ಸೆಕೆಂಡರಿ ಶಾಲಾ ಹಳೇ ವಿದ್ಯಾರ್ಥಿ ಸಂಘ ರೂ. ೩,೦೦೦ ಉದಾರ ದಾನವಿತ್ತಿದ್ದು, ಇತ್ತೀಚೆಗೆ ಜರಗಿದ ಕಾರ್ಯ ನಿರ್ವಾಹಕ ಮಂಡಳಿಯ ಸಭೆಯಲ್ಲಿ ದಾನಿಗಳಿಗೆ ಹಾರ್ದಿಕ ಕೃತಜ್ಞತೆಯನ್ನು ವ್ಯಕ್ತಪಡಿಸಲಾಯ್ತೆಂದು ಕಾರ್ಯದರ್ಶಿ ಶ್ರೀ ಕೆ. ವಾಸುದೇವ ಶೆಟ್ಟು ತಿಳಿಸಿರುತ್ತಾರೆ.

ಸಂದರ್ಶಿಸಿರಿ — ಸಂತೃಪ್ತರಾಗಿರಿ!!
ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫೇಶನ್ ಚಿನ್ನಾಭರಣಗಳಿಗೆ ಹೆಸರಾಂತ
ಎಸ್. ಎಲ್. ಶೆಟ್ಟಿ ಡೈಮಂಡ್ ಹೌಸ್
ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ
ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್
—ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ—
ಐಡಿಯಲ್ ಫೋಟೋ ಹೌಸ್ PHONE: 3131
ಅಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ
ಅಧಿಕೃತ ಮಾರಾಟಗಾರರು.
ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು–1
Tele: GOLDKING Estd: 1947 Phone: 3242 Res: 3272

ದೇವಮಾನವ - ಅರವಿಂದರು

'ಮಹರ್ಷಿ ಅರವಿಂದರು ಈ ಲೋಕದ ವ್ಯಕ್ತಿಯಲ್ಲ, ದಾರಿತಪ್ಪಿ ಧರೆಗಿಳಿದು ಬಂದ ದೇವತೆ' – ಖ್ಯಾತ ಬಂಗಾಳಿ ಲೇಖಕ ದಿನೇಂದ್ರ ಕುಮಾರ್ ರಾಯ್ ಅವರು ಆ ಮಹಾಪುರುಷರ ಬಗ್ಗೆ ಆಡಿದ ಮಾತಿದು. ಸ್ವತಃ ಭಾವಿಸಿದಂತೆ ಹಾಗು ಅಧ್ಯಾತ್ಮವಾದಿ ಅರವಿಂದರು ಬಾಲ್ಯದಲ್ಲಿ ಬರೋಡಾದಲ್ಲಿದ್ದರು. ಆಮೇಲೆ ಬಂಗಾಳಿ ಭಾಷೆಯ ಅಕ್ಷರಾಭ್ಯಾಸ ಮಾಡಿಸಿದ ಗುರು ದಿನೇಂದ್ರ ಕುಮಾರ್ ರಾಯ್. ಬಾಲಕ ಅರವಿಂದರ ಜೀವನಸಕ್ತಿಯ ಮೇಲೆ ಗಹನ ಪ್ರಭಾವ ಬೀರಿದ ಗುರುವರೇಣ್ಯ.

ಅರವಿಂದರು ಬರೋಡಾದಲ್ಲಿ ಹದಿಮೂರು ವರ್ಷಗಳವರೆಗೆ ಇದ್ದರು. ಅಧ್ಯಾತ್ಮಜೀವನದ ಸಸಿ ಮೊಳಕೆಯೊಡೆದದ್ದು ಇಲ್ಲಿಯೇ. ಬರೋಡಾದಲ್ಲಿ ಮೊದಲು ಪದಾರ್ಪಣ ಮಾಡಿದಾಗ ಅವರಿಗೆ 21ರ ಪ್ರಾಯ. ಇಂಗ್ಲೆಂಡಿನಲ್ಲಿ ಅಷ್ಟೇ ಆಗ ತಮ್ಮ ಶಿಕ್ಷಣವನ್ನು ಪೂರೈಸಿಕೊಂಡು ಬಂದಿದ್ದರು. ಐಸಿಎಸ್ ಪರೀಕ್ಷೆಯನ್ನು ಉನ್ನತ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದರು. ವಿದೇಶೀ ಸೇವೆಯ ಸಂಕೋಲೆಯಲ್ಲಿ ಸಿಕ್ಕುವ ಪ್ರವೃತ್ತಿ ಅವರದಾಗಿರಲಿಲ್ಲವಾದ್ದರಿಂದ ಈ ಸೇವೆಯ ನೌಕರಿಗೆ ಶರಣುಹೊಡೆದರು.

ಅರವಿಂದರು ಇಂಗ್ಲೆಂಡಿನಲ್ಲಿದ್ದಾಗ, ಆ ಸಿನ ಬರೋಡಾ ಸಂಸ್ಥಾನದ ಪ್ರಜ್ಞಾವಂತ ಮಹಾರಾಜ ಸರ್ ಸಯಾಜ್‌ರಾವ್ ಗಾಯಕವಾಡ್ ದೃಷ್ಟಿಗೆ ಬಿದ್ದರು. ಗಾಯಕವಾಡರು ತಮ್ಮ ಸರ್ಕಾರಿ ಸೇವೆಗೆ ಅರನ್ನು ನೇಮಿಸಿಕೊಂಡರು. ತಿಂಗಳಿಗೆ ಕೇವಲ 200 ರೂ. ಗಳ ವೇತನದ ತಮ್ಮ ಮೊತ್ತ ಮೊದಲನೆಯ ನೇಮಕವನ್ನು ವಹಿಸಿಕೊಳ್ಳಲು ಅರವಿಂದರು ಬರೋಡಕ್ಕೆ ಬಂದರು.

ಮಹರ್ಷಿ ಅರವಿಂದರು ಬರೋಡಾ ಕಾಲೇಜಿನಲ್ಲಿ ಫ್ರೆಂಚ್ ಹಾಗು ಇಂಗ್ಲೀಷ್ ಪ್ರಾಧ್ಯಾಪಕರಾಗಿ ನೇಮಕಗೊಳ್ಳುವ ಮೊದಲು ಸಂಸ್ಥಾನ ಸರ್ಕಾರದ ಅನೇಕ ಪ್ರಮುಖ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದರು. ಇಂಗ್ಲೀಷ್ ಭಾಷೆಯ ಮೇಲೆ ಅವರದು ಅಸಾಧಾರಣ ಪ್ರಭುತ್ವ. ಕೆಲಕಾಲ ಅವರು ಮಹಾರಾಜರ ಖಾಸಗೀ ಕಾರ್ಯದರ್ಶಿ (ಹುಜೂರ್ ಕಾಮದಾರ್) ಆಗಿದ್ದರು.

ಪ್ರಾಧ್ಯಾಪಕ ಅರವಿಂದರ ವಾಣಿಯಿಂದ ವಿದ್ಯಾರ್ಥಿಗಳು ಮಂತ್ರಮುಗ್ಧರಾಗುತ್ತಿದ್ದರು. ತಮ್ಮ ಪಾಂಡಿತ್ಯದಿಂದ ವಿದ್ಯಾರ್ಥಿಗಳ ಮೇಲೆ ಅವರು ಅಸಾಧಾರಣವಾದ ಪ್ರಭಾವ ಬೀರಿದರು. ಆಗಲದು ನಿರರ್ಗಳವಾದ ಶೈಲಿ, ಮನಾಕರ್ಷಕ ವಿಚಾರಧಾರೆ. ಯಾವುದೇ ವಿಷಯವನ್ನೇ ಆಗಲಿ ಸಮರ್ಥ ರೀತಿಯಿಂದ ನಿರೂಪಿಸುತ್ತಿದ್ದರು. ಅರ ಉಪನ್ಯಾಸಗಳನ್ನು ವಿದ್ಯಾರ್ಥಿಗಳು ಭಾವಹರವಶರಾಗಿ ಕೇಳುತ್ತಿದ್ದರು.

ವಿದೇಶೀ ಸಾಹಿತ್ಯದ ಅಧ್ಯಯನ:

ಕೆಲಸದ ವೇಳೆಯ ನಂತರ ಅರವಿಂದರು ಬಹುತೇಕ ಸಮಯವನ್ನು ಓದು ಹಾಗೂ ಬರೆಹದಲ್ಲಿ ಕಳೆಯುತ್ತಿದ್ದರು. ಅನೇಕ ಸಲ ಅವರು ಆಹಾರ-ನಿದ್ರೆಯನ್ನು ಮರೆತು ಮಧ್ಯರಾತ್ರಿಯವರೆಗೂ ಓದುತ್ತಿದ್ದರು.

ಫ್ರೆಂಚ್, ಇಂಗ್ಲೀಷ್ ಹಾಗೂ ಯುರೋಪಿಯನ್ ಭಾಷಾಗ್ರಂಥಗಳ ಅನ್ಯಯನದ ಜೊತೆಗೆ, ಭಾರತೀಯ ಭಾಷೆಗಳನ್ನು ಅವರು ಕಲಿಯತೊಡಗಿದರು. ದಿನೇಂದ್ರ ಕುಮಾರ ರಾಯ್ ಅವರು ಈ ಹೊತ್ತಿಗಾಗಲೇ ಅರವಿಂದರಿಗೆ ಬಂಗಾಳಿ ಭಾಷೆಯನುಡಿಗಟ್ಟಿನ ಪರಿಚಯ ಮಾಡಿಕೊಟ್ಟಿದ್ದರು. ಮಹರ್ಷಿ ಅರವಿಂದರು ಸಂಸ್ಕೃತ, ಮರಾಠಿ, ಗುಜರಾತಿ ಭಾಷೆಗಳಲ್ಲಿ ಪಾರಂಗತರಾದರು. ಮರಾಠಿ ಮತ್ತು ಗುಜರಾತಿ ಆಗ ಆಸ್ಥಾನದ ಭಾಷೆಗಳಾಗಿದ್ದವು. ಸಂಸ್ಕೃತದ ಅಧ್ಯಯನ, ಅರವಿಂದರಿಗೆ ಭಾರತೀಯ ವಿಚಾರಧಾರೆ ಹಾಗೂ ಆಧ್ಯಾತ್ಮಿಕ ಶ್ರೀಮಂತಿಕೆಯ ಕಲ್ಪನೆಯನ್ನು ಮೂಡಿಕೊಟ್ಟಿತು. ಗೀತಾ ಹಾಗೂ ಉಪನಿಷತ್ತುಗಳನ್ನೂ ಭಸಭೂತಿ ಹಾಗೂ ಕಾಳಿದಾಸರ ಮೇರು ಕೃತಿಗಳನ್ನೂ ಓದಿದರು ರಾಮಾಯಣ, ಮಹಾಭಾರತಗಳನ್ನು ಅರಿತುಕೊಂಡರು.

ಅರವಿಂದರು ಕವಿತೆಗಳನ್ನು ಬರೆದರು. ಆವರು ಇಂಗ್ಲೆಂಡಿನಲ್ಲಿ ಬರೆದ ಮೊದಲ ಕವನಸಂಗ್ರಹ "ಸಾಂಗ್ಸ್ ಟು ವಿಲಿಯಾ" ಬರೋಡಾದಲ್ಲಿ ಪ್ರಕಟವಾಯಿತು. 'ಲವ್ ಅಂಡ್ ಡೆತ್' ಕವನ ಸಂಕಲನವನ್ನು ಅವರು ಬರೆದರು. ಮುಂಬಯಿಯ ಅಂಗ್ಲೋ-ಮರಾಠಿ ಪತ್ರಿಕೆ 'ಇಂದು ಪ್ರಕಾಶ'ದ ಸಂಪಾದಕರ ಕೋರಿಕೆಯ ಮೇರೆಗೆ ಅಂದಿನ ರಾಜಕೀಯ ಸ್ಥಿತಿಯ ಬಗ್ಗೆ ಲೇಖನಗಳನ್ನು ಬರೆಯಲು ಒಪ್ಪಿಕೊಂಡರು.

ವಿದೇಶಿ ಆಳಿಕೆ ಅವರ ಮನಸ್ಸಿನಲ್ಲಿ ವಿಷ್ಲವಕ್ಕೆ ಎಡೆಕೊಟ್ಟಿತು. ಸಾಮ್ರಾಜ್ಯವಾದಿಗಳ ಸತ್ವಹೀನ ಕಾರ್ಯನೀತಿಗಳು ಹಾಗು ಕಾರ್ಯಕ್ರಮಗಳು ಅವರಿಗೆ ಹಿಡಿಸಲಿಲ್ಲ. ಹರಿತವಾದ ಲೇಖನಿಯಿಂದ ಈ ನೀತಿಗಳನ್ನು ಅವರು ಖಂಡಿಸಿದರು.

'ಇಂದು ಪ್ರಕಾಶ'ದಲ್ಲಿ ಪ್ರಕಟವಾದ ಅವರ ಮೊದಲ ಎರಡು ಲೇಖನಗಳು ರಾಜಕೀಯ ರಂಗದಲ್ಲಿ ಬಿರುಗಾಳಿಯನ್ನೇ ಎಬ್ಬಿಸಿದವು. ಸಂಪಾದಕರು ಖೈಲಿ ಕೊಂಚ ಸೌಮ್ಯವಾಗಿರಲೆಂದು ಅರವಿಂದರನ್ನು ಪ್ರಾರ್ಥಿಸಬೇಕಾಯಿತು.

ಅರವಿಂದರ ಮಟ್ಟಿಗೆ, ಬರೋಡಾದಲ್ಲಿನ ಅವರ ವಾಸ್ತವ್ಯ ಒಂದು ಭಾರೀ ಸಿದ್ಧತೆಯ ಕಾಲ. 'ವಂಗ ಭಂಗ'ದ ಕಾಲಕ್ಕೆ ಬೀಸಿದ ಜಂಜಮೂರುತ ಬರೋಡಾದಲ್ಲೇ ಶಕ್ತಿ ಸಂಚಯ ಪೂಡಿಕೊಂಡಿತು. ಅರವಿಂದರು ಕಲ್ಕತ್ತಾಕ್ಕೆ ಬಂದರು.

ಸಾಹಿತ್ಯ ಅಧ್ಯಯನದ ಜೊತೆಗೆ ಯೋಗಾಭ್ಯಾಸವನ್ನೂ ಮಾಡಿದರು. ಪ್ರಾಣಾಯಾಮ ಹಾಗೂ ಧ್ಯಾನವನ್ನೂ ಸಾಧಿಸಿದರು. ಯೋಗಸಾಧನೆ ಅವರ ಅಂತರಾತ್ಮನ ಉದ್ದಾರಕ್ಕೆ ಕಾರಣವಾಯಿತು. ಬರೋಡಾದಲ್ಲಿದ್ದಾಗ ಅರವಿಂದರಿಗೆ ಆಧ್ಯಾತ್ಮದ ದಿವ್ಯ ಅನುಭವವಾಯಿತು. ಆಧ್ಯಾತ್ಮ ಶಕ್ತಿಯಿಂದ ಆಕರ್ಷಿತರಾದ ಅವರು ಆಗ ಯೋಗಸಾಧನೆಗೆ ಹೆಸರಾಗಿದ್ದ ಬ್ರಹ್ಮಾನಂದ ಸ್ವಾಮಿಗಳನ್ನು ಕಾಣಲು ನರ್ಮದಾ ತೀರದಲ್ಲಿರುವ ಚಾನೋಡಿಗೆ ಹೋದರು.

ಆಧ್ಯಾತ್ಮದ ವಿನುಲ ಪ್ರಕಾಶ

ದೇಶಭಕ್ತಿ, ಆಧ್ಯಾತ್ಮದ ಬಯಕೆಯನ್ನೂ ವಿೂರಿ ವಿಜೃಂಭಿಸುತ್ತಿತ್ತು. ಅರವಿಂದರು ಸ್ವಾತಂತ್ರ್ಯ ಹೋರಾಟಕ್ಕೆ ಅಣಿಯಾಗಲು ಯುವಕರಿಗೆ ಕರೆ ನೀಡಿದರು.

ಬರೋಡಾದಲ್ಲಿದ್ದಾಗಲೇ ಅರವಿಂದರ ವಿವಾಹವಾಯಿತು. ಬರೋಡಾದ ಅವರ ವಾಸ್ತವ್ಯ—ಸೇವೆ, ರಾಜಕೀಯ ಕಾರ್ಯ ಚಟುವಟಿಕೆ, ಆಧಾತ್ಮ ಸಾಧನೆ ಹಾಗು ವೈವಾಹಿಕ ಜೀವನ ಸಂಗಮದ ಕಾಲವಾಗಿತ್ತು. ಅರವಿಂದರ ಬರೋಡಾ ವಾಸ್ತವ್ಯದ ದಿನಗಳನ್ನು ನೆನಪಿಗೆ ತರುವ ಪವಿತ್ರ ಹಾಗು ಸ್ಫೂರ್ತಿದಾಯಕ ವಸ್ತುಗಳನ್ನು ಅವರು ವಾಸಿಸುತ್ತಿದ್ದ ದಂಡಿಯಾ ಬಜಾರಿನ 15ನೆಯ ನಂಬರಿನ ಮನೆಯಲ್ಲಿ ಸಂಗ್ರಹಿಸಿಡಲಾಗಿದೆ. ಮಹರ್ಷಿ ಅರವಿಂದರ ನೆನಪಿಗೆ ಭವ್ಯ ವಸ್ತು ಸಂಗ್ರಹಾಲಯವನ್ನು ತೆರೆಯಲು ಗುಜರಾತ ಸರ್ಕಾರ ಕಳೆದ ವರ್ಷ ಈ ಮನೆಯನ್ನು ಅರವಿಂದ ಸಂಘಕ್ಕೆ ಸಮರ್ಪಿಸಿತು.

ದಾಂಡಿಯ ಬಜಾರಿನ ಈ ಮನೆಯ ಒಂದು ಕಡೆ ಗುಜರಾತಿನ ಮಹಾಕವಿ ನ್ಹೇಮಾನಂದರ ಸ್ಮಾರಕ ಪ್ರೇಮಾನಂದ ಭವನವಿದೆ. ಅರವಿಂದರ ಈ ಸ್ಮಾರಕ ಭವನಕ್ಕೆ ಎರಡು ಅಂತಸ್ತುಗಳಿವೆ. ಇಟ್ಟಿಗೆಯ ಈಕಟ್ಟಡಕ್ಕೆ ಮಂಗಳೂರು ಹಂಚಿನ ನೇಲ್ಛಾವಣಿ ಇದೆ. ನೆಲಕ್ಕೆ ಮರದ ಹಾಗೂ ಕಲ್ಲಿನ ಹಾಸಿಗೆ ಇದೆ. ಅರವಿಂದರ ಜನ್ಮಶತಾಬ್ದಿಯ ರಾಷ್ಟ್ರೀಯ ಸಮಿತಿ ಈ ಸ್ಮಾರಕ ಭವನಕ್ಕೆ ಒಂದು ಲಕ್ಷ ರೂ. ಗಳನ್ನು ನೀಡಿದೆ.

ಅರವಿಂದರು ಅಮರರು. ಅವರು ಸಮಾಕಾಲವು ಇರುತ್ತಾರೆ. ಪ್ರಾಮಾಣಿಕತೆ ಹಾಗೂ ನಿಷ್ಕೆಯಿಂದ ಮಾತ್ರ ಅವರನ್ನು ಅರ್ಥಮಾಡಿಕೊಳ್ಳಬಹುದು." ಅರವಿಂದಾಶ್ರಮದ ಮಾತೆಯವರ ಈ ನುಡಿ ಅರವಿಂದರ ತತ್ವಜ್ಞಾನ ಹಾಗೂ ಜೀವನಧರ್ಮ ಯೋಗವನ್ನು ತಿಳಿಯ ಬಯಸುವವರಿಗೆ ದಾರಿದೀಪ.

●●

ಚಂದಾದಾರರಲ್ಲಿ ವಿನಂತಿ

ಇದೇ ಆಗೋಸ್ತು ತಿಂಗಳಾಂತ್ಯಕ್ಕೆ 'ನವಯುಗ'ದ 51ನೆಯ ವರ್ಷ ಮುಗಿದು ಸಪ್ಟಂಬರ್ ತಿಂಗಳಿಂದ 52ನೆಯ ಹೊಸ ವರ್ಷಾರಂಭವಾಗುತ್ತದೆ. ಚಂದಾ ಅವಧಿ ಮುಗಿದ ಚಂದಾದಾರರೂ ಚಂದಾ ಬಾಕಿ ಇರುವವರೂ ದಯಮಾಡಿ ತಮ್ಮ ಬಾಕಿಯನ್ನು ಆದಷ್ಟು ತ್ವರಿತವಾಗಿ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ಅಪೇಕ್ಷಿಸುತ್ತೇವೆ. ಚಂದಾಹಣವನ್ನು ಮನಿಯಾರ್ಡರು ಮೂಲಕ, ಯಾ ಇಂಡಿಯನ್ ಪೋಸ್ಟಲ್ ಆರ್ಡರು ಮೂಲಕ ಕಳಿಸಬಹುದು. ಇಲ್ಲವೆ ಸಿಂಡಿಕೇಟ್ ಬ್ಯಾಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಪಾವತಿ ಮಾಡಬಹುದು. ಹಾಗೆ ಪಾವತಿ ಮಾಡುವಾಗ ತಮ್ಮ ಚಂದಾ ನಂಬ್ರ ಮತ್ತು ವಿಳಾಸವನ್ನು ತಿಳಿಸಬೇಕಾಗಿ ಕೋರುತ್ತೇವೆ.

ಮೆನೇಜರ್.

ಮೊತ್ತಿನ ಮುಲ್ಲರು ಮಾರ್ಕ್ಸ್‌ವಾದಿಗಳು

ರಾಜಕೀಯ ರಂಗಭೂಮಿಯಲ್ಲಿಳಿದವರು ಹೇಗೆ ಬೇಕಾದರೂ ನೂತಾಡುವ ರೂಢಿಯನ್ನು ಬೆಳೆಸಿಕೊಂಡಿರಬೇಕು. ಮೊತ್ತೇ ಅವರಿಗೆ ಆಯುಧ. ಮಾತಿನಲ್ಲೇ ಚಪ್ಪರ ಹಾಕಿ ಬಿಡುತ್ತಾರವರು. ನಿನ್ನೆಯ ನೂತು ಇಂದು ತ್ತು ಅವರಿಗೆ ಹಳೆಯಂಗಿ. ಅದನ್ನು ಬಿಚ್ಚಿಟು ಹೊಸ ಅಂಗಿಯನ್ನು ಅವರು ಸಂತೋಷದಿಂದ ಸಿಕ್ಕಿಸಿಕೊಳ್ಳುತ್ತಾರೆ. ಅದಕ್ಕೆ ನಿನ್ನೆ—ಇಂದು ಕೂಡಾ ಬೇಕಾಗಿಲ್ಲ.

ಬೆಂಗಳೂರಲ್ಲಿ ಇಂದಿರಾಜೀವುವರು ನಿಜಲಿಂಗಪ್ಪನವರಿಗೆ ಇಂಗು ಎನ್ನಿಸಿ ಡಿಲ್ಲಿಗೆ ಹೋದಾಗ ಅವರ ಸಮಾಯಕ್ಕೆ ಬಂದವು ಕಮ್ಯೂನಿಸ್ಟ್ ಪಾರ್ಟಿಯವರು, ಸಮಾಜವಾದಿ ಪಕ್ಷದವರು, ಪ್ರಾನಿಡ ಮುನ್ನೇಟ್ರ ಕ್ಷತ್ರಗಳು ಅಖಿಲ ಭಾರತದಿಗಳು ಇವೇಷಹ ಪಕ್ಷಗಳೆಂಬುವರ ವಿವರಣೆ ಇಲ್ಲಿ ಅನವಶ್ಯ. ಇಂದಿರಾಜೀಯವರ ಕೈ ಮೇಲಾಯಿತು. ಗಿತಿಯವರನ್ನು ಅಧ್ಯಕ್ಷಗಿರಿಗೇರಿಸಿ, ಲೋಕಸಭೆಯ ಮೂರನೇ ಎರಡರಷ್ಟೆಂಥಲೂ ಅಧಿಕ ಸ್ಥಳ ಪಡೆಮಕೊಂಡು, ವಿಧಾನ ಸಭೆಗಳಲ್ಲೂ ಜಯ ಭೇರಿ ಭಾರಿಸಿದ ಇಂದಿರಾಜಿಯವರನ್ನು ಕಂಡು ಮರುಗಿದವರು ಮಾರ್ಕ್ಸ್‌ವಾದಿಗಳು. ಲೋಕ ಸಭಾ ಚುನಾವಣೆಯಲ್ಲಾಗಲೀ, ವಿಧಾನ ಸಭೆಗಳ ಚುನಾವಣೆಯಲ್ಲಾಗಲೀ ಸಿಂಹಪಾಲು ಸಿಗಬಹುದೆಂದು ಅವರು ಭಾವಿಸಿಕೊಂಡಿದ್ದು ಸಹಜ. ಕನಸಾಯಿತು. ಇಂದಿರಾಜೀಯವರ ಭಟ್ಟಂಗಿಗಳಾದದ್ದೇ ಅವರಿಗೆ ಲಾಭ. ಇಂದಿರಾಜೀ ಅವರಿಗೆ ಚಳ್ಳೆಹಣ್ಣು ತಿನ್ನಿಸಿ ಬಿಟ್ಟರು. ಆದರೂ ಮಾರ್ಕ್ಸ್‌ವಾದಿಗಳು ಅವರನ್ನು ಬಿಡದಾದರು. ಇಂದಿರಾಜೀ ಅವರಿಗೆ ಬೊಕ್ಕೆ ಮೇಲೆ ಬರೆ ಎಳೆದದ್ದು ಬಂಗಾಲದಲ್ಲಿ. ಅಲ್ಲಿ ಅದ್ಯಾರೂ ಕಾಲಿಡುವಂತಿಲ್ಲವೆಂಬ ಮಾರ್ಕ್ಸ್‌ವಾದಿಗಳು ನಂಬಿಕೊಂಡಿದ್ದರು. ತಮ್ಮ ಅನಾಚಾರಗಳಿಗೆ ಇಂದಿರಾಜೀ ಅಡ್ಡಿ ಬರಲಾರರೆಂದು ಅವರು ಭಾವಿಸಿಕೊಂಡಿದ್ದರು. ಚುನಾವಣೆಯ ಫಲಿತಾಂಶ ಅವರ ಕಣ್ಣು ತೆರೆಯಿಸಿತು. ಇಂದಿರಾಜಯವರ ವಿಜಯೋ ವೈಜಯಂತಿ ಅಲ್ಲೂ ಮೇಳೈಸಿತು.

ಆಗ ಚುನಾವಣೆ ಟೆಸ್ಟ್‌ಗಾಗಿ ನಡೆದಿಲ್ಲವೆಂದು ಮಾರ್ಕ್ಸ್‌ವಾದಿಗಳೆನ್ನಲಾರಂಭಿಸಿದರು. ಲೋಕಸಭಾ ಚುನಾವಣೆಯು ಸಮಯ ಮತಸಂಗ್ರಹದಲ್ಲಿ ಮೋಸ ನಡೆದಿದೆಯೆಂದು ಭಾರತೀಯ ಜನಸಂಘದವರು ಸ್ವರವೆತ್ತಿದಾಗ ಅದನ್ನು ಅಪಸ್ವರವೆಂದಿದ್ದ ಮಾರ್ಕ್ಸ್‌ವಾದಿಗಳು ಬಂಗಾಲದಲ್ಲಿ ಮಧ್ಯಂತರ ಚುನಾವಣೆ ಮೋಸ ಪೂರ್ಣವೆಂದು ಹೇಳಿಕೆಲಾರಂಭಿಸಿದ್ದು ಮಾತ್ರವಲ್ಲ, ಈಗ ಕೂಡಾ ಅಲ್ಲಿಯ ಮಾರ್ಕ್ಸ್‌ವಾದಿ ವಿಧಾನ ಸಭಾ ಸದಸ್ಯರು ವಿಧಾನ ಸಭೆಗೆ ಹೋಗದೆ ಬಹಿಷ್ಕಾರ ಹಾಕಿದ್ದಾರೆ. ಮೂನವರ್ಷಗಳಿರುವ ಅಭ್ಯಾಸವೇ ಹಾಗೆಂದು ಕಾಣುತ್ತದೆ-ಜೇಡೆಯುವರಿಗೇನಾದರೂ ಸಂಭವಿಸಿದಾಗ ನಗುವುದು ಅದೇ ತನಗಾದಾಗ ಅಳುವುದು.

ಅದನ್ನು ಅಲ್ಲಿಗೇನೇ ನಿಲ್ಲಿಸುತ್ತಿದ್ದಲ್ಲಿ ಒಂದಿಷ್ಟು ಗೌರವ ಉಳಿಯ ಬಹುದಿತ್ತು. ಕೇರಳದಲ್ಲಿನ ರಾಜಕೀಯ ಕೇಳಿಗೆ ಹೊಸ

(ಒಂಭತ್ತನೇ ಪುಟ ನೋಡಿರಿ)

ರಜತ ಮಹೋತ್ಸವ

ನಮಸ್ಕಾರ.

ಭಾರತ ತನ್ನ ರಜತೋತ್ಸವ ಆಚರಿಸಿತು. ನವದೆಹಲಿಗೆ ವಿಶ್ವದ ನಾನಾ ಭಾಗಗಳಿಂದ ಬಂದು ಸುರಿದ ಸಾವಿರಾರು ಸಂದೇಶಗಳ ಜತೆಗೆ ನನ್ನ ಅಭಿನಂದನೆಯನ್ನೂ ಸಲ್ಲಿಸಲು ಹರ್ಷವಾಗುತ್ತದೆ.

ಭಾರತದಲ್ಲಿ ನನ್ನ ಉದ್ಯೋಗವೂ ಇದೇ ಅವಧಿಯಲ್ಲಿತ್ತು.

ನಿಮ್ಮಲ್ಲಿ ಅನೇಕರು ತಿಳಿದಿರುವಂತೆ ಎರಡನೇ ಮಹಾಯುದ್ಧದ ಕಾಲದಲ್ಲಿ ಸೈನಿಕ ಸುರುಷ ಪೌಂಟ್‌ಬೇಟನ್‌ರ ಸಹಾಯಕ ಜನರಲ್ ವೀಲರ್ ಅವರ ಸಿಬ್ಬಂದಿಯಲ್ಲಿ ನಾನು ಒಬ್ಬ ಆಧಿಕಾರಿಯಾಗಿದ್ದು ಭಾರತದಲ್ಲಿ ಸೇನೆ ಸಜ್ಜಿಸಿದೆ. ಆಗ್ಗೆ ಈ ದೇಶವನ್ನು ಜೆನ್ನಾಗಿ ಪರಿಚಯ ಮಾಡಿಕೊಂಡೆ

23 ವರ್ಷಗಳ ನಂತರ ಅಮೆರಿಕ ರಾಯಭಾರಿಯಾಗಿ ನಾನು ವಾಪಸು ಬಂದೆ. ಈ ನಡುನಡಣ ಅವಧಿಯಷ್ಟು ಮಹತ್ವಪೂರ್ಣವಾದ ಅವಧಿಗಳು ಇತಿಹಾಸದಲ್ಲಯೇ ಅಪರೂಪ. ಎರಡನೇ ಮಹಾಯುದ್ಧದಲ್ಲಿ ಗೆಲುವಾಯಿತು ಸುದೀರ್ಘ ಹೋರಾಟದ ನಂತರ ಭಾರತ ತನ್ನ ಸ್ವಾತಂತ್ರ್ಯ ಗಳಿಸಿಕೊಂಡಿತು, ಜಗತ್ತು ಪರಮಾಣು ಯುಗವನ್ನು ಪ್ರವೇಶಿಸಿತು ಮಾನವ ಅಂತರಿಕ್ಷವನ್ನು ಗೆಲ್ಲಲಾರಂಭಿಸಿದ.

ಆರ್ಮ್‌ಸ್ಟ್ರಾಂಗ್ ಚಂದ್ರ ಗ್ರಹದಲ್ಲಿ ನಡೆದಾಡಿದ.

ವಿಶ್ವಸಂಸ್ಥೆ ಜನಿಸಿತು.

ಭಾರತ ಗಾಂಧಿ, ನೆಹರೂ ಮತ್ತು ಶಾಸ್ತ್ರಿ ಅವರನ್ನು ಕಳೆದುಕೊಂಡಿತು.

ಅಮೆರಿಕ ಹೂವರ್, ಐಸೆಸ್‌ಹೋವರ್ ಮತ್ತು ಕೆನೆಡಿ ಅವರುಗಳನ್ನು ಕಳೆದುಕೊಂಡಿತು.

ಇವೆಲ್ಲ ಮಹತ್ವದ ಘಟನೆಗಳು. ಕೆಲವು ವಿಷಾದಕರ, ಕೆಲವು ಧೀರೋದಾತ್ತ. ಎಲ್ಲವೂ ಗಾಢವಾದ ಪರಿಣಾಮಕಾರೀ ಘಟನೆಗಳು.

ಬೇರೆ ಕೆಲವು ಘಟನೆಗಳೂ ಜರಗಿದವು.

ಭಾರತದಲ್ಲಿ ಜನರಿಗೆ ಸಾರ್ವತ್ರಿಕ ಚುನಾವಣೆಗಳು ಬಂದವು. 1951ರ ಜನಗಣತಿ ಪ್ರಕಾರ 2.5 ಕೋಟಿ ಜನ ಮಕ್ಕಳು ಶಾಲೆಗೆ ಹೋಗುತ್ತಿದ್ದರೆ ಇಂದು 7.4 ಕೋಟಿಗೂ ಹೆಚ್ಚು ಜನ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಹತ್ತರಲ್ಲಿ ಎಂಟು ಜನ ಮಕ್ಕಳು 6ರಿಂದ 11 ವರ್ಷದವರೆಗಿನ ವಯಸ್ಸಿನವರಾಗಿದ್ದು ವಿಧ್ಯುಕ್ತವಾಗಿ ಶಾಲೆಗಳಲ್ಲಿ ಓದುತ್ತಿದ್ದಾರೆ; 1950ರಲ್ಲಿ ಇವರಲ್ಲಿ ಅರ್ಧದಷ್ಟು ಜನರೂ ಓದುತ್ತಿರಲಿಲ್ಲ.

ಇದೊಂದು ಅಗಾಧ ಸಾಧನೆ. ಇತರ ಕೆಲವು ಸಾಧನೆಗಳೂ ಇವೆ.

ಪ್ರತಿ ಎಂಟು ಹಳ್ಳಿಗಳಲ್ಲಿ ಒಂದು ಗ್ರಾಮಕ್ಕೆ ಈಗ ವಿದ್ಯುಚ್ಛಕ್ತಿ ಸರಬರಾಜಿದೆ. 1950ರಲ್ಲಿ 100ಕ್ಕೆ ಒಂದು ಗ್ರಾಮದಲ್ಲಿ ವಿದ್ಯುತ್ತಿರುತ್ತಿತ್ತು.

ಹದಿನೈದು ವರ್ಷಗಳ ಹಿಂದೆ ಭಾರತೀಯರ ಸರಾಸರಿ ಆಯುಃಪ್ರಮಾಣ 32 ವರ್ಷಗಳಿತ್ತು.; ಇಂದು ಅದು 52 ವರ್ಷ.

ಹೊಸ ರಾಷ್ಟ್ರ ಉದಯಿಸಿದಾಗ ಜಗತ್ತು ಹರ್ಷಿಸಿತು. ತನ್ನ ದೃಢ ಸ್ಥಾಪನೆಗೆ ಭಾರತ ನೆರವನ್ನು ಕೇಳಿದಾಗ ಕೂಡಲೆ ಅದು ಲಭ್ಯವಾಯಿತು. ಅಧ್ಯಕ್ಷ ಟ್ರ್ಯಾರಿ ಎಸ್. ಟ್ರೂಮನ್ ಅವರು 1951ರ ಜೂನ್ 15ರಂದು ಭಾರತಕ್ಕೆ ತುರ್ತು ಆಹಾರ ನೀಡುವ ಶಾಸನಕ್ಕೆ ಸಹಿ ಹಾಕಿದರು. ಮೊದಲ ಬಾರಿಗೆ ಅಮೆರಿಕ ಭಾರತಕ್ಕೆ ನೆರವು ನೀಡಲು ಮುಂದೆ ಬಂದಿತು.

ಅಂದಿನಿಂದ ಪಶ್ಚಿಮ ಜರ್ಮನಿ, ಬ್ರಿಟನ್, ಸೋವಿಯತ್ ರಷ್ಯ, ಕೆನಡಾ, ಜಪಾನ್, ಫ್ರಾನ್ಸ್, ಇಟಲಿ, ಜೆಕೊಸ್ಲವಾಕಿಯ, ಆಸ್ಟ್ರೇಲಿಯ, ನೆದರ್‌ಲೆಂಡ್ಸ್, ಯುಗೊಸ್ಲಾವಿಯ, ಪೋಲೆಂಡ್, ಸ್ವಿಜರ್ಲೆಂಡ್, ಬೆಲ್ಜಿಯಂ, ಆಸ್ಟ್ರಿಯ, ಸ್ವೀಡನ್, ಡೆನ್ಮಾರ್ಕ್, ನಾರ್ವೆ, ನ್ಯೂಜಿಲೆಂಡ್, ವಿಶ್ವ ಬ್ಯಾಂಕ್, ಅಂತರರಾಷ್ಟ್ರೀಯ ಅಭಿವೃದ್ಧಿ ಏಜನ್ಸಿ (ಐ. ಡಿ. ಎ.) – ಎಲ್ಲವೂ ಭಾರತಕ್ಕೆ ನೆರವಾಗಿವೆ.

ಆದರೂ ಭಾರತ ಆರ್ಥಿಕ ಅಭಿವೃದ್ಧಿಯಲ್ಲಿ ತೊಡಗಿಸಿರುವ ಸಂಪನ್ಮೂಲಗಳಲ್ಲಿ ಶೇ. 80ರಷ್ಟನ್ನು ಭಾರತ ತಾನೇ ಒದಗಿಸಿಕೊಂಡಿದೆ.

ಉಳಿದುದರಲ್ಲಿ ಶೇ. 56.5 ರಷ್ಟನ್ನು ಅಮೆರಿಕ ನೀಡಿದ್ದು ಅದರಲ್ಲಿ ಶೇ. 20ರಷ್ಟು ಮರುಪಾವತಿ ಮಾಡುವ ಅಗತ್ಯವಿಲ್ಲದ ಗ್ರಾಂಟುಗಳ ರೂಪದಲ್ಲಿ ದೊರೆಯುತ್ತು. ಅಮೆರಿಕ ಪಿ.ಎಲ್. 480 ಮೂಲಾಟ ನಿಧಿಗಳಿಂದ 329.6 ಕೋಟಿ ರೂ.ಗಳಷ್ಟು ಗ್ರಾಂಟಿನ ರೂಪದಲ್ಲಿ ಬಂದಿದ್ದು ಕೃಷಿ, ಕೈಗಾರಿಕೆ, ಸಾರಿಗೆ, ಕಾರ್ಮಿಕರ ತರಬೇತು, ಆರೋಗ್ಯ ಮತ್ತು ಶಿಕ್ಷಣದ ಅಭಿವೃದ್ಧಿಗೆ ಬಳಸಲಾಗಿದೆ. ಇದಾವುದನ್ನೂ ಹಿಂದಿರುಗಿಸಬೇಕಾಗಿಲ್ಲ.

ಆರೋಪ-ಪ್ರತ್ಯಾರೋಪಗಳ ಈ ದಿನಗಳಲ್ಲಿ ಈ ಕಾರ್ಯಕ್ರಮಗಳೂ ಆಗಾಗ್ಗೆ ನಿಂದನೆಗೆ ಆಹಾರವಾಗುವುದುಂಟು. ಈ ಕೆಲವು ಕಾರ್ಯಕ್ರಮಗಳಿಂದ ಭಾರತೀಯ ಅಭಿವೃದ್ಧಿಗೆ ಉಂಟಾಗಿರುವ ಪ್ರಯೋಜನಗಳನ್ನು ಅಲಕ್ಷಿಸುವುದು ಸುಲಭ.

ಆದರೆ ಈ ಇಪ್ಪತ್ತೈದು ವರ್ಷಗಳ ಸ್ವಾತಂತ್ರ್ಯದಲ್ಲಿ ಭಾರತದ ಜನ ಅವರ ದೇಶಗಳಿಸಿರುವ ಸಾಧನೆಗಳನ್ನು ಯಾವುದೂ ಬದಲಿಸಲಾರದು, ತಗ್ಗಿಸಲಾರದು. ಇದರ ಕೀರ್ತಿ, ಸಮರ್ಪಣಗಳು ಅವರದೇ.

ಭಾರತದ ಸ್ವಾತಂತ್ರ್ಯದ ರಜತ ಮಹೋತ್ಸವದ ಸಂದರ್ಭದಲ್ಲಿ ಅಮೆರಿಕದ ರಾಯಭಾರಿಯಾಗಿ ನಾನು ನನ್ನ ಸರಕಾರದ ಅಮೆರಿಕದ ಜನತೆಯ ಹಾರ್ದಿಕ ಅಭಿನಂದನೆಗಳನ್ನು ಭಾರತಕ್ಕೂ ಜತರ ಪ್ರಜೆಗಳಿಗೂ ಸಲ್ಲಿಸಲು ಹರ್ಷಿಸುತ್ತೇನೆ; ಹೆಮ್ಮೆಪಡುತ್ತೇನೆ.

ಜೈಹಿಂದ್

ಕೆನೆತ್ ಬಿ. ಕೀಟಿಂಗ್

●●

ಜ್ವಲಂತ ಸಮಸ್ಯೆಗಳಿಗೆ ಪರಿಹಾರವಿಲ್ಲ

(ಐದನೇ ಪುಟದಿಂದ)

ದರು. ಬಡವರು ಬಡವರಾಗಿಯೇ ಉಳಿದರು. ಹೆಚ್ಚುವರಿ ಭೂಮಿಯನ್ನು ಹಂಚುವಾಗ, ಹಾಗಾಗದಂತೆ ಎಚ್ಚರಿಕೆ ಅಗತ್ಯ. ಬೇಸಾಯದಲ್ಲಿ ನಿಜವಾಗಿ ಶ್ರದ್ಧೆಯುಳ್ಳ ಬಡಬಗ್ಗರಿಗೆ ಮಾತ್ರ ಭೂಮಿ ನೀಡಬೇಕು. ಅವರು ಬೇಸಾಯಮಾಡಲು ಸಾಧ್ಯವಾಗುವಂತೆ ಎಲ್ಲ ವಿಧದ ಸಹಾಯ ಸವಲತ್ತುಗಳನ್ನು ನೀಡಬೇಕು. ಇಲ್ಲವಾದರೆ ಮತ್ತೆ ಅವರು ಭೂಹೀನರಾಗುತ್ತಾರೆ.

ಸಮಾಜವಾದದ ಅಡಿಗಲ್ಲು

ಕೆಲವರು ಕಾಫಿ ತೋಟಗಳ ರಾಷ್ಟ್ರೀಕರಣ ಬಯಸುತ್ತಾರೆ. ಆಡಳಿತ ಯಂತ್ರ ಈಗಿನಂತೆಯೇ ಮುಂದುವರಿದರೆ, ರಾಷ್ಟ್ರೀಕರಣದ ಲಾಭ ಲಂಚಕೋರ ಅಧಿಕಾರಿಗಳ ಕಿಸೆಗೆ ಹೋಗುತ್ತದೆ. ನಷ್ಟ ಮಾತ್ರ ಸರಕಾರದ ಹೆಗ್ಗಿಕ್ಕೆ ತಪ್ಪದೆ ಬರುತ್ತದೆ. ಆಡಳಿತ ಈಗಿನಂತೆಯೇ ಮುಂದುವರಿದರೆ, ಸಮಾಜವಾದ ಕೇವಲ ಕನಸಿನ ಮಾತು. ದುಡಿಮೆ, ನಿಷ್ಠೆ, ನಿಸ್ಪೃಹತೆಗಳಿಲ್ಲದೆ, ಸ್ವಚ್ಛವಾದ ಆಡಳಿತವಿಲ್ಲದೆ ಬರಿಯ ಘೋಷಣೆ ಕೂಗಿದರೆ ಸಮಾಜವಾದ ಅನುಷ್ಠಾನಕ್ಕೆ ಬರುವುದಿಲ್ಲ. ಕಾರ್ಲ್‌ಮಾರ್ಕ್ಸ್, ಲೆನಿನ್ ಸಹ ನಿಷ್ಠೆ, ಪ್ರಾಮಾಣಿಕ ದುಡಿಮೆ, ಸ್ವಚ್ಛ ಆಡಳಿತ– ಇವೇ ಸಮಾಜವಾದದ ಅಡಿಗಲ್ಲುಗಳೆಂದು ಹೇಳಿದ್ದಾರೆ.

●●

ಕನ್ನಡಾಂಬೆ

ವೀರ ಮಾತೆ ಕನ್ನಡಾಂಬೆ
ಜನ್ಮದಾತೆಯು
ಧೀರ ಸುತರ ಪಡೆವ ಆಕೆ
ಪುಣ್ಯ ಮಾತೆಯು
ನುತ್ತ ಮುತ್ತ ಜಿಲ್ಲ ನೋಟ
ಸಸ್ಯ ಶಾಮಲೆ
ಸೃಷ್ಟಿ ಮಾತೆ ಅವರು ಊರು
ನಮ್ಮ ನಾಡಿದೇ

ಬಸವ ಅಕ್ಕಮಹಾದೇವಿ
ಶರಣ ಭಕ್ತರು
ಕನ್ನಡಾಂಬೆ ಬಸಿರಿನಿಂದ
ಹುಟ್ಟಿ ಬಂದರು
ರನ್ನ ಪಂಪ ಪೊನ್ನ ಜನ್ನ
ನಾರಣಪ್ಪರು
ಎಂದು ಅಳಿದೂ ಹೋಗದಂತೆ
ಗ್ರಂಥ ಬಿಟ್ಟರವು.

ಚಿತ್ರ ಶಿಲ್ಪ ಕಲೆಗಳಿಂದ
ಮೆರೆದ ನಾಡಿದು
ಸತ್ಯ ಧರ್ಮ ಶಾಂತಿಯನ್ನು
ಪೊರೆದ ಬೀಡಿದು.
ಕೆಚ್ಚಿನಿಂದ ಕಾದಿದಂತ
ಕದನ ಕಲಿಗಳು
ರೊಚ್ಚಿಗೆದ್ದ ವೈರಿಗಳನು
ಸದೆಯ ಬಡಿದರು.

ತಾಯ ಮೇಲೆ ಭಕ್ತಿ ಇರಿಸಿ
ದೇಶ ಭಕ್ತರು
ದೇಶಕಾಗಿ ದೇಹ ಸವೆಸಿ,
ಅಮರರಾದರು
ಕನ್ನಡಾಂಬೆ ಪುಣ್ಯ ಮಾತೆ
ನಮ್ಮ ಪೊರೆವಳು
ಬೆನ್ನ ಬಿಡದೆ ಕುರಣೆ ದೋರಿ
ಅಭಯವೀವಳು

●●

HOTEL SATKAR

Boarding, Lodging & Restaurant

Behind Corporation Office,

9 Mission Road — **Bangalore—27.**

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.
Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden
Quiet, Calm Atmosphere
Personalised Service.

ಕಾರ್ಕಳ ಮುನ್ಸಿಫ್ ಕೋರ್ಟಿನಲ್ಲಿ

O. S. 404/1971 I. A. I.

ಸೋಪಿನಾ ಕರಾಸ್ತ ಬ್ಯಾ —ವಾದಿಳು
ಅರ್ಜಿದಾರಳು

ಜ್ಯಾನೂಂಡ ಡಿ' ಸೋಜಾ —ಪ್ರತಿವಾದಿ, ಎದ್ರಿ ಪ್ರತಿವಾದಿ. ಎದ್ರಿ ಜ್ಯಾನೂಂಡ ಡಿ' ಸೋಜಾ, ಪೀಟರ ಡಿ' ಸೋಜರ ಮಗ, ಮುಂಗ್ಲೂರು ತಾಲೂಕು ತಾಳಿಪಾಡಿ ಗ್ರಾಮದ ಕಿನ್ನಿಗೋಳಿ-ಇವರಿಗೆ ಈ ನೂಲಕ ತಿಳಿಯ ಪಡಿಸುವುದೇನೆಂದ್ರೆ,

ಮೇಲಿನ ದಾವೆಯಲ್ಲಿ ಆದ ಡ್ರೀತಿಯಿನರಿ ಡಿಕ್ರಿ ವಿಧಿ ಪ್ರಕಾರ ಡಿಕ್ರಿ ಅವೇದು ಅರ್ಜಿದಾರರಿಗೆ ನೀವು ತೆರುವಲೆ ತಪ್ಪಿಸ್ಥರಿಂದ ಪ್ರಿಲಿಯಿನರಿ ಡಿಕ್ರಿಯಲ್ಲಿ ಶಾಸ್ತ್ರದ ಸ್ಥಿರಾಸ್ತಿಗಳ ಕೂಡಾಬಿದಿಂದ ಆ ಅವೇದು ಸ್ವಲು ಮೂಡೂಳಿ ನಂಬು ಫ್ಯಾನಲ್ ಡಿಕ್ರಿ ಕೊಡಿಸಬೇಕಾಗಿ ಅರ್ಜಿದಾತಳು ಬಾಕ್ಲು ಮೂಡಿದ ಮೇಲಿನ ಫ್ಯಾನಲ್ ಡಿಕ್ರಿ ಅರ್ಜಿ ನಿಮ್ಮ ಹಾಜ್ರಾತಿ ಬಗ್ಗೆ ತಾರೀಕು 9-9-72ಕ್ಕೆ ಇಟ್ಟಿದೆ ಆ ಕುರಿತು ನಿಮಗೆ ಆಕ್ಷೇಪ ಇದ್ದಲ್ಲಿ ನೀವು ತಾ 9-9-72ಕ್ಕೆ ಪೂರ್ವಾಹ್ನ ಘಂಟೆ 10ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರಾಗಲೀ, ವಕೀಲರ ಮೂಲಕವಾಗಲೀ ಹಾಜ್ರಾಗಿ ಉಚಿತ ರಿಸತಕ್ಕದ್ದು. ತಪ್ಪಿದ್ದಲ್ಲಿ ಕೋರ್ಟಿನವರೀಗೆ ಯುಕ್ತ ಕಂಡ ರೀತಿ ತೀರ್ಮಾನಿಸಲಾದೀತು. ಕೋರ್ಟಿನ ಹುಕುಂ ಪ್ರಕಾರ ಈ ನೋಟೀಸು ಪ್ರಕಟಿಸಿಯದೆ.

D. Venkatesh Bhat
ಅರ್ಜಿದಾರಳ ಪರ ವಕೀಲ

ಕಾರ್ಕಳ, 10.8.72

ಶ್ರೀಸಾಮಾನ್ಯನ ಸಂಸತ್ತಿನಲ್ಲಿ

ನಕ್ಸಲೀಯರ ದಮನ

ಶತಮಾನಗಳಿಂದ ದೇಶಕ್ಕೆ ಛಾರೀ ಕಂಟಕವಾಗಿದ್ದ ಚಂಬಲ್ ಥಕಾಯಿತರನ್ನು ಸರ್ವೋದಯ ಸಕ್ಸದ ಜಯಪ್ರಕಾಶ್ ನಾರಾಯಣರು ನಿವಾರಿಸಿದರು. ಆದರೆ, ಭೋಕದ ಶಕ್ತ ಕ್ರಾಂತಿಯ ನಕ್ಸಲೀಯರ ಸ್ವ ಭ್ರಷ್ಟವು ನಿವಾರಿಸುತ್ತಾರೆ?

—ಎಂದು ಮುಬಂಡೆರೊಬ್ಬರು ಕೇಳಿ ದ್ದರೆ. ಹೌದು, ದೇಶವ್ಯಾಪ್ತ ನಕ್ಸಲೀಯರು ಎಬ್ಬಿಸಿದ ಘೋರ ಹಾವಳಿಗಳೇ ಇಷ್ಟು ಸಾಬಿಧಿಸ್ಯವೇ! ಇಂತಹ ವಿಚ್ಛಿದ್ರಕಾರಿ ಶಕ್ತಿಗಳ ದಮನದಲ್ಲಿ ನಾವು ಎಷ್ಟೊಂದು ಹಿಂದುಳಿಬಿದ್ದೇವೆಂದರೆ ನಮ್ಮ ಜನತೆ ಪಡುತ್ತಿದ್ದ ಬೀಭತ್ಸಕರ ಯಾತನೆಗೆ ತುದಿ ಮೊದಲಿರಲಿಲ್ಲ. ಬಂಗಾಲದ ಕಲ್ಕುತ್ತದಂಥ ಮಹಾ ನಗರಗಳಲ್ಲಿ ಗಂಗಾ, ಯಮುನಾ, ಸರಯೂಗಳು ಕಲಿಯಲಿಲ್ಲ. ನಿಷ್ಪಾಪಿಗಳ ನೆತ್ತರ ಹೊಳೆ ಹರ್ಯುತು. ಅಲ್ಲಿ ರಕ್ತದ ಮಳೆ ಬಂತು. ನಕ್ಸಲೀಯರ ಕುಕೃತ್ಯಕ್ಕೆ ಬಲಿಯಾಗಿ ತಮಂಖ್ಯ ಮುಂದಿ ಅಳಿದರು. ಸಿನಿಮಾ ನಡೆಯುತ್ತಿದ್ದಂತೆ ಫ್ಯೂಸ್ ಕಡಿಸಿ, ದೀಪವೆಲ್ಲಾ ಹೋದಾಗ ಕಂಗೆಟ್ಟು ರಾತ್ರಿಯಲ್ಲಿ ಓಡುತ್ತಿದ್ದ ಜನರ ಮೇಲೆ ಗುಂಡು, ಆಶ್ರುವಾಯು, ಕೆಂಡಗಳ ಸುರಿಮಳೆ ಹರಿಸಿದವರಿವ್ವಾರೆ. ಹತಾಶರಾಗಿ ಓಡುವ ಮಹಿಳೆಯರನ್ನು ಬರಬೆಳೆದು ಅವರ ನೇಲೆ ಸಾಪವೀ ಕೃತ್ಯ ಎಸಗಿದವರಿದ್ದಾರೆ. ನಗರಕ್ಕೆ ನಗರವೇ ದೀಪವಿಲ್ಲದೆ ಘೋರಾಂಧಕಾರದಲ್ಲಿ ಮುಳುಗಿರುತ್ತಿದ್ದಾಗ ಪೊಲೀಸರು ದಿಕ್ಕು ತಪ್ಪಿ, ಕೆರೆಗೋ ಬಾವಿಗೋ ಬಿದ್ದು ಸತ್ತುದಿದೆ.

ಧನಿಕರ ಕಪಾಟಿನಲ್ಲಿರುವ ಹಣಕ್ಕೆ ದಿನವು ದುಸ್ವಪ್ನಗಳು ಭೀಕರತೆಯ ಬರೆಸಿಡಿಲುಗಳು ದಿನವೂ ನಕ್ಸಲೀಯರಿಂದ ಬರುತ್ತಿರುವ ಹಣ ವಸೂಲಿಯು, ಕೊಲೆ ಬೆದರಿಕೆಯ ಕಾಗದಗಳನ್ನು ನೋಡಿ ಎಷ್ಟು ಮಂದಿಗೆ ಎದೆ ಒಡೆದಿಲ್ಲ! ರೈತರು ಕಷ್ಟಪಟ್ಟು ಬೆಳೆದ ಚಿನ್ನದಂತಹ ಭೈರು ಇನ್ನೇನು ಕೊಯ್ಲಿಗೆ ಬಂತೆನ್ನುವಾಗ ಕತ್ತಿಯೊಂದಿಗೆ ಕೊಯ್ಲಿಗೆ ನಕ್ಸಲ್‌ಬಾರಿಗಳು ಪ್ರತ್ಯಕ್ಷವಾಗಿದ್ದರು.

ಬಂಗಾಳದಲ್ಲಿ ವಂಚನೆ, ಕೊಲೆ, ಮೋಸದರೋಡೆಗಳಿಂದ ಶ್ರೀಸಾಮಾನ್ಯರನ್ನು ಬಲಿಗೊಂಡು ಲಕ್ಷಾಧೀಶರಾದ ನಕ್ಸಲೀಯರಿದ್ದಾರೆ. ಇಂಥವರನ್ನು ಎಷ್ಟೆಂದು ಬಂಧಿಸಿ ಜೈಲಿಗೆ ಹಾತಲಾದೀತು? ಪೋಲೀಸರಿಗೆ ಕೆಲಸವೇ ಇದೇ. ಮೂವೋ ಕ್ರಾಂತಿಯ ವಿಷ ದಾವಾನಲದ ರಕ್ತ ಪ್ರತಿ ಕ್ಷಣಕ್ಕೂ ವೈರಸ್‌ಗಳಂತೆ ಜನತೆಯು ದೇಹದೊಳಗೆ ಹೊಕ್ಕು, ಒದರ ದಳ್ಳುರಿ ಧಮನಿ ಧಮನಿಗಳಲ್ಲಿ ನಿಡಿಯುತ್ತಿದೆ.

ಇಂಥ ವಿಷಪ್ಪರಂಪರೆಯನ್ನು ನಾವು ಅಳಿಸದೆ ಉಳಿಸಿಕೊಂಡು ಬಂದಿದ್ದೇವೆ. ದೇಶದಲ್ಲಿ ನೇದ ಮಂಗಳ ಘೋಷಣೆ ಕೇಳಿ ಬರುವ ಕಾಲ ಹೋಗಿ ಮೂವೋ ಘೋಷಣೆಗಳು ನಿನದಿಸೆ ತೊಡಗಿದೆ. ಎಲ್ಲರೂ ಕಾರ್ಲ್ ಮಾರ್ಕ್ಸ್‌ನ ಸಿದ್ಧಾಂತ ಓದುವವರೇ. ಕ್ರಾಂತಿ ಮಾಡು; ಪದಾರ್ಥಗಳ ಧಾರಣೆ ಏರಿಸು; ಸರಕಾರದ ವಿರುದ್ಧ ಜನತೆಯ ಮನದೊಳಗೆ ವಿಷಮತೆಯನ್ನು ತುಂಬು; ಜನತೆಯನ್ನು ರೊಚ್ಚಿಗೆಬ್ಬಿಸು; ಇಂದಿರೆ ಕ್ರಾಂತಿಯೂ ಗುತ್ತದೆ. ಸರಕಾರ ಉರುಳುತ್ತದೆ. ಇದು ಮಾರ್ಕ್ಸ್‌ವಾದಿಗಳ ಅವ್ಯಾಹತ್ಯ. ಪಂಚಾಕ್ಷರಿ ಬೀಜ ಮಂತ್ರ.

ಪುರಾಣಗಳಲ್ಲಿ ದೈತ್ಯ ದಾನವರ ಕರಿತು ನಾವು ಕೇಳಿಲ್ಲವೇ? ಮನುಷ್ಯನಲ್ಲಿ ಹೇಗೆ ರಾಕ್ಷಸೀವಾಂಛೆ ಪೈರಾಚಿಕತೆ ಮೊಳೆಯುತ್ತದೆನ್ನುವುದಕ್ಕೆ ಉತ್ಕೃಷ್ಟ ಉದಾಹರಣೆಗಳಾದ ನಕ್ಸಲೀಯರ ತಾಲಿಬೈವತೆಯ ರುದ್ರ ತಾಂಡವದ ವಿರುದ್ಧ ಪ್ರತಿ ಕ್ಷಣಕ್ಕೂ ನಾವು ಹೋರಾಡಿದಂತೆ ಬೆಳೆದು ಹೆಮ್ಮರವಾಗುತ್ತಿರುವ ಆದಿ ರಾಕ್ಷಸದಲ್ಲಿ ಬಲವಾಗಿ ಬೇರೂರಿದೆ.

ನಕ್ಸಲೀಯರಂಥ ಪರಮ ಪಾತಕಿಗಳನ್ನು ಕಂಡಲ್ಲಿ ಗುಂಡು ಹೊಡೆದು ಕೊಲ್ಲಿ! ಎಂದು ಪಶ್ಚಿಮ ಬಂಗಾಳ ಸರಕಾರ ನೀಡಿದ ಆಜ್ಞೆ-ಇದು ಆಜ್ಞೆಯಲ್ಲ-ವೀರ ಘೋಷ. ಅಂಥ ದುರಾತ್ಮರಿಗೆ ಬಂಧನವೂ ಬೇಡ, ವಿಚಾರಣೆಯೂ ಬೇಡ. ನಿರ್ದಯತೆ ಬೇಕು. ನಕ್ಸಲ್ ಚಟುವಟಿಕೆಗಳ ಹತ್ಯಾಕಾಂಡ ನಿಲ್ಲಲೇ ಬೇಕಾದರೆ ಈ ಆಜ್ಞೆ ಈಡೇರುವುದು ಅತ್ಯಗತ್ಯ.

ಕನು ಸಂನ್ಯಾಲ್, ಚಾರು ಮುಜುಂದಾರನಂತಹ ಕಾಳೋರೆಗೆಗಳಿಂದ ದೇಶದ ಶಾಂತಿ, ಸುಭದ್ರತೆ ಎಷ್ಟೊಂದು ಕೆಟ್ಟಿದೆ ಯೆಂದರೆ ಕಲ್ಕುತ್ತದ ಜನಜೀವನ ಮುಳ್ಳಿನ ಮೇಲಿನ ಹಾಸಿಗೆಯಂತಿದೆ. ಈ ಭಯಂಕರ ನಕ್ಸಲ್ ಜಾಲದ ವಿರುದ್ಧ ಒಂದು ಪ್ರತಿಕಾರಕ ಶಕ್ತಿಯ ಸೃಷ್ಟಿ ಆದರೆ ಮಾತ್ರ ದೇಶಕ್ಕೊಂದು ಭಾಂತಿಯ ನೆಲೆ ಸಿಗಬಹುದು.

ಕೇರಳ ಮತ್ತು ಬಂಗಾಲದಲ್ಲಿ ನಕ್ಸಲ್‌ವಾದ ತುಂಬ ಮುಂದುವರಿದಿದೆ. ಯಾವ ಸರಕಾರದ ಆಡಳಿತದ ಚೌಕಟ್ಟು ಸಡಿಲವಾಗಿದೆಯೋ ಅಲ್ಲಿನ ಜನತೆಗೆ ಕೆರುಕುಳ ವೀಯುವ ವಿಶತ್ಕಾರಿ ಶಕ್ತಿಯೊಂದರ ಸೃಷ್ಟಿಯಾಗಿದೆಯೆಂದರ್ಥ ಎಂದಿದ್ದಾರೆ ಚರ್ಚಿಲ್. ನಕ್ಸಲ್ ಬಲ ನಮ್ಮ ಆಡಳಿತದ ವಿಫಲತೆ, ಅಶಕ್ತತೆಯ ಅಸಾಮರ್ಥ್ಯಗಳನ್ನು ಎತ್ತಿ ಹೇಳುತ್ತದೆ.

ಬಂಧಿತನಾಗಿ ಸೆರೆಮನೆ ಸೇರಿದ ನಕ್ಸಲ್ ಪಿತಾಮಹ ತಾಯಿಬೇರು ಚಾರು ಮುಜುಂದಾರ್ ಇದನ್ನು ಬರೆಯುತ್ತಿರುವಾಗ ಪಾರ್ಲಿಮೆಂಟಿಯು ಪೀಡಿತನಾಗಿದ್ದಾನೆ. ಆಸಂಖ್ಯ ಆಸಂಖ್ಯ ಪಾತಕಗಳನ್ನು ಗೈದಿರುವ ಆ ದುರಾತ್ಮ ಇಂತೂ ಸೆರೆ ಸಿಕ್ಕಿದ ನೆಂಬ ಅಲಾವಾಯಕ ನೋಟ ನಮ್ಮಲ್ಲಿದ್ದರೂ ಪರಿಸ್ಥಿತಿಯ ನಾಡಿಗಳಲ್ಲೆಲ್ಲ ಆತನ ವಿಷಾಗ್ನಿ ತುಂಬಿದೆ.

ನಕ್ಸಲೀಯರ ಹಿಂಸಾಚಾರಗಳಿಂದ ದೇಶಕ್ಕೆ ಕೋಟ್ಯಾಂತರ ರೂಪಾಯಿ ಪಾನಿಯಾಗಿದೆ. ಆರ್ಥಿಕ ಮುಗ್ಗಟ್ಟು, ದೊಂಬಿಗಳು ಬಾಂದಿವೆ. ವಾತಾವರಣ ಅಲ್ಲೋಲ ಕಲ್ಲೋಲವಾಗಿದೆ. ನಕ್ಸಲೀಯರ ಪೂರ್ಣ ದಮನದಿಂದ ಮಾತ್ರ ನಾವು ಉಳಿಯುತ್ತೇವೆ.

—ಶ್ರೀ ಪ. ರಾಮಕೃಷ್ಣ ಶಾಸ್ತ್ರಿ

ಮೂತಿನ ನುಲ್ಲರು ಮಾರ್ಕ್ಸ್‌ವಾದಿಗಳು

(ಸಂಜೇ ಪುಟದಿಂದ)

ರೂಪ ಬಂದಿದ್ದು ಅಲ್ಲಿನ ಕಾ.ಪ್ರದೇಶಾಧ್ಯಕ್ಷರು ನಂಬೂದರಿಪಾದರನ್ನು ಕುತ್ತಿದ್ದೇ ತಡ! ಅವರೊಳಗೆ ಅದೇನು ಮೂತುಕತೆ ನಡೆಯಿತೋ? ಮುಸ್ಲಿಂ ಲೀಗಿಗೆ "ತಲಕ್" ಅನ್ನುವ ವಿಚಾರ ಬಂತೋ, ಏನೋ!

ಕೇರಳಕ್ಕೆ ಮರಳಿ ಜನಾವಣೆ ಬರಬಹುದೇನೆಂದು ಕಲ್ಲಿಕೋಟೆಯಲ್ಲಿ ನೆಂಬೂದರಿ ಪಾದರನ್ನು ಕೇಳಿದಾಗ ಅವರು, 'ಇತರ ರಾಜ್ಯಗಳಲ್ಲಾದಂತೆ. ಇಲ್ಲೂ ಇಂದಿರಾಗಾಳಿ ಬೀಸಿ ಬಹುದೆಂಬ ಭರವಸೆ ಶ್ರೀಮತಿ ಇಂದಿರಾರವರಿಗೆ ಬಂತೆಂದರೆ ಆಗ ನಮಗಾಗಿ ಜನಾವಣೆ ಬರಬಹುದೆಂದು ಅಂದಿರುವರು.

ಹಾಗಾದರೆ ಬಂಗಾಲದಲ್ಲಿ ಮೋಸ, ನಷ್ಟವಿಲ್ಲ, ಇಂದಿರಾಗಾಳಿ ಬೀಸಿತ್ತೆಂಬುದನ್ನು ನಂಬೂದರಿ ಪಾದರು ನಂಬುತ್ತಾರೆಯಾಯಿತು. ಆದೇ ಗಾಳಿ ಕೇರಳವಲ್ಲೂ ಬೀಸಬಹುದೆನ್ನುವ ಭರವಸೆಯೂ ಅವರಿಗೆ ಇದೆ. ಹಾಗಾದರೆ ಬಂಗಾಲದಲ್ಲಿ ಬಹುಷ್ಕತ್ವ ವೇತಕ್ಕೆ? ಮೂತಿಗೆತ್ತೂ ಬರಗಾಲನಿಲ್ಲಿ ಬಂಗಾಲದ ಬಹಿಷ್ಕಾರವನ್ನು ಸಮರ್ಥಿಸಲು ಇನ್ನೇನಾದರೂ ಅವರಿಂದಾರು. ಇಂದಿರಾಗಾಳಿಯ ಪೊಳ್ಳನ್ನು ಸಮರ್ಥಿಸಲು ಬೇರೇ ನಾದರೂ ಆಡಿಯೂರು. ಮಾರ್ಕ್ಸ್‌ವಾದಿಗಳು ಮೂತಿನ ಮುಲ್ಲರೆಂಬುದನ್ನು ಅವರಲ್ಲಿ ಸಿದ್ಧಪಡಿಸಿರುವರು.

—ಶ್ರೀ ಶಿವಶಂಕರ

ಸ್ವಾತಂತ್ರ್ಯ ದಿನಾಚರಣೆ

ಪಾಪಬಿಟ್ಟು ಹಾರ್ಯರ್ ಪ್ರೈಮರಿ ಶಾಲೆಯಲ್ಲಿ ಭಾರತ ಸ್ವಾತಂತ್ರ್ಯ ದಿನಾಚರಣೆಯು ಬಿಳಿ ಪಟ್ಟನನ್ನು ಆಚರಿಸಲಾಯಿತು. ಬೆಳಿಗ್ಗೆ ಪಠೇಲ್ ಜೆಜು ಕೆಟ್ಟಿಯವರಿಂದ ಧ್ವಜಾರೋಹಣದ ಮಕ್ಕಳಿಂದ ವಿವಿಧ ಚಟುವಟಿಕೆ ನಡೆದ ನಂತರ ಶ್ರೀ ಪಿ. ಪಿ. ರಘುಪತಿರಾಯರಿಂದ ಸಿಹಿತಿಂಡಿ ಹಂಚಲಾಯಿತು. ಮಧ್ಯಾಹ್ನ ಊರಿನ ಪ್ರಮುಖರು ಹೆಡ್‌ಮಿಸ್ಟ್ರೆಸ್ ಶ್ರೀಮತಿ ಸದಸ್ಯರಾದ ಶ್ರೀ ವೈ. ಹಿರಿಯಣ್ಣಯ್ಯನವರ ಅಸ್ಪಷ್ಟತೆಯಲ್ಲಿ ಸಭೆ ಜರಗಿತು. ಶಾಲಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ದಿವಂಗತ ಪಾದಬಟ್ಟು ರಾಮಕೃಷ್ಣ ಭಾಗವತರವರ ಭಾವಚಿತ್ರ ಅನಾವರಣವನ್ನು ಶ್ರೀ ಲಕ್ಷ್ಮೀನಾರಾಯಣಾಯರವರು ಮಾಡಿದರು. ಬಳಿಕ ಪದುಬಿದ್ರಿ ಶ್ರೀ ಗೆ ಜಾನನ ಯಕ್ಷಗಾನ ಕಲಾಸಂಸ್ಥೆಯವರಿಂದ 'ಭೀಷ್ಮ ವಿಜಯ'ವೆಂಬ ಯಕ್ಷಗಾನವು ನಡೆಯಿತು. ಪ್ರಾರಂಭದಲ್ಲಿ ಶ್ರೀ ಕೆ. ರಾಜು ಕೆಟ್ಟು ಸ್ವಾಗತ ಭಾಷಣ ಮಾಡಿದರು. ಕೊನೆಯಲ್ಲಿ ಶ್ರೀ ಸಿ. ಜಗನ್ನಾಥ ಶೆಟ್ಟಿಯವರು ಧನ್ಯವಾದಗಳನ್ನು ಅರ್ಪಿಸಿದರು.

ಗುಡ್ಡೆಯ ಭೂತ

ಸುಮಾರು ಎರಡು ದಶಕಗಳಿಂದ ಮುಂಬಯಿ ಕನ್ನಡ ರಂಗಭೂಮಿಯಲ್ಲಿ ಹಲವಾರು ಉತ್ತಮ ನಾಟಕಗಳನ್ನು ಪ್ರದರ್ಶಿಸಿ ಜನಮನ್ನಣೆ ಪಡೆದಿರುವ ಕನ್ನಡ ಕಲಾಕೇಂದ್ರವು ಇತೀಗ ಇಬ್ಬಿನ ತುಳು ನಾಟಕ ಸ್ಪರ್ಧೆಗಳಿಗಾಗಿ 'ಗುಡ್ಡೆಯ ಭೂತ' ಎಂಬ ತುಳುನಾಟಕವನ್ನು ಸಿದ್ಧಗೊಳಿಸುತ್ತಲಿದೆ.

ಹಳ್ಳಿಯ ವಾತಾವರಣದಲ್ಲಿ, ಕುತೂಹಲ ಕರವಿಸುವ ಸನ್ನಿವೇಶಗಳೊಂದಿಗೆ ರಚಿತವಾದ ಈ ನಾಟಕ ಸದಾನಂದ ಸುವರ್ಣರು ತುಳು ರಂಗಭೂಮಿಗೆ ನೀಡುತ್ತಿರುವ ಪ್ರಥಮ ಕಾಣಿಕೆ.

ಪಾತ್ರವರ್ಗದಲ್ಲಿ ಮುಂಬಯಿಯ ಕನ್ನಡ ರಂಗಭೂಮಿಯ ಪ್ರಸಿದ್ಧ ಕಲಾವಿದರಿರುವ ಈ ನಾಟಕದ ಸೂರು ಪ್ರಯೋಗಗಳು ಸೆಪ್ಟೆಂಬರ್ 10, 17, ಮತ್ತು 24ರಂದು (ರವಿವಾರ) ಬೆಳಿಗ್ಗೆ 9.30ಕ್ಕೆ ಭವಲಾಯಿ ದೇಸಾಯಿ ಎಜುಕೇಶನಲ್ ಜರುಗಲಿವೆ.

ಶ್ರೀ ಕೆ. ಕೆ. ಶೆಟ್ಟಿ ಎಂ. ಪಿ., ಅವರ ಪುಸ್ತಕಗಳು

ಕುಶಲವ	(ನಾಟಕ)	0-50
ಸಂಕಯ ಪಿತಾಜೆ	,,	0-75
ವ್ಯಥೆಕಾರಿಣಿ ಪೊರು	,,	1-00
ದೇಶಭಕ್ತ	,,	1-25
ಸ್ಪೈನು ವಿಜಯ	,,	1-00
ಚಿತ್ರಾಂಗದೆ	,,	0-60
ಹೆಂಡ್ತಿ ಗೆದರಾರ್ದ (ಪ್ರಹಸನ)		0-25
ಪುರುಷವಧು	,,	0-25
ಮುಂದಿನ ದೇನು (ಪ್ರಬಂಧ)		0-25
ಸನ್ಯಾಸಿಯ ಸೋಗಲ್ಲಿ (ಕಥೆ)		0-75

ವಿ. ಪಿ. ಮೂಲಕ ಪುಸ್ತಕದ ಬೆಲೆ ಯೊಂದಿಗೆ 0-50 ಪೈಸೆ ಹೆಚ್ಚಿಗೆ ಸೇರಿಸಿ ಯಾರಾದರೂ ಮಾಡಿದರೆ ಪುಸ್ತಕವನ್ನು ಬುಕ್-ಪೋಸ್ಟ್ ಮೂಲಕ ಕಳುಹಿಸಲಾಗುವುದು.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್)
ಉಡುಪಿ, ದ. ಕ.

ಗೇಹರಾಜ್ಯದಲ್ಲಿ....

(ನಾಲ್ಕನೇ ಪುಟದಿಂದ)

ರಾಜ-ಮಹಾರಾಜರಾಗಿದ್ದವರೆಲ್ಲ ಲೆಂಕರಾಗಿ ಹೋಗಲಿಲ್ಲವೆ?'

'ಹಾಗೇನೇ. ಆಗ ಸಮಾನತೆ, ಸಮಾಜವಾದ ಎಲ್ಲಾನೂ ಜ್ಯಾರಿಗೆ ಬರುತ್ತದೆ....'

'ಆದರೆ ಹೋಡು, ಪ್ರಜಾಪ್ರಭುಗಳ ಗತಿಯೇನು? ಈ ಪ್ರಜಾಪ್ರಭುಗಳು ನಾರ್ಷಿಕ ಹನ್ನೆರಡು ಸಾವಿರ ರೂಪಾಯಿಗಳಿಂತ ಹೆಚ್ಚು ಕಮಾಯಿಸುತ್ತಿರುವುದರಿಂದ ಅವರಿಗೆ ಭೂಮಿ ಹೊಂದುವ ಅಧಿಕಾರವಿಲ್ಲವೆಂಬ ಕೂಗು ಬೇರೆ ಕಡಿದಾಳಲೆಬ್ಬಿಸಿದ್ದಾರೆ....'

'ಅದೇ ಈಗ ತೊಂದರೆಯೆಸಿನಿದ್ದು. ಆದರೆ, ನೋಡಿ. ಜವರ 'ಪ್ರಭುತ್ವ' ಖಾಯಂ ಅಲ್ಲ, ಪ್ಯೂರ್ಲಿ ಟೆಂಪರರಿ. ಆದ್ದರಿಂದ ವಿನಾಯಿತಿ ಕೊಡಬಹುದು.'

'ಮತ್ತೆ ನೋಡು, ವ್ಯಾಪಾರ-ವಹಿವಾಟು ಎಂದರೆ. ಲಾಭ-ನಷ್ಟ ಸೂಮೂಲಿ. ಒಂದೊಮ್ಮೆ ನಷ್ಟ ಸಂಭವಿಸಿದರೆ....'

'ಸರಿಯೇ, ಅವರಿಗೂ ವಿನಾಯಿತಿಯಿರಲಿ....'

'ಆಲ್ವೆ, ಹೀಗೆಲ್ಲ ವಿನಾಯಿತಿ ಕೊಟ್ಟರೆ, ಮತ್ತೆ ನಿಜಿ ಯಾರಿಗೆ? ನಿಯಮಿತ ರೂಪದಲ್ಲಿ ಸಂಬಳ ಪಡೆಯುವವರಿಗೆ ಮಾತ್ರವೇನು? ಅದರ ಮೇಲೆ ರೂಪಾಯಿಯ ಅಂತರಿಕ ಮೌಲ್ಯ ಒಂದೇ ಸವನೆ ಕುಸಿಯುತ್ತಿರುವಾಗ....'

'ಅದೇ ತಾಪತ್ರಯ. ಏನು ಮಾಡೋದು ಹೇಳಿ. ಮಿಸಿಸ್ಸಿಪಿ ನೀರನ್ನೆಲ್ಲ ಅರಸುವುದು?'

'ಇಲ್ಲ....'

'....ಅಲ್ಲೂ ಮಿನಿಸ್ಟ್ರೇ ಇದೆ.....'

'ಅವತ್ತೆ, ಇದು ಮಿನಿನಂತೆ ಹೊಳೆಯುತ್ತದೆ ಮಾತ್ರ, ಕಚ್ಚುವುದಿಲ್ಲ....'

'ನಮಗೆ ನೂತ್ರ....'

'ಹ್ಞೂಂ....'

—ಗೋರಾ

ಉಡುಪಿಯಲ್ಲಿ ಸ್ವಾತಂತ್ರ್ಯ ರಜತ ಮಹೋತ್ಸವ

ಇಂದೇ ಕಳೆದ ತಾ. 14ರಂದು ರಾತ್ರಿ ಉಡುಪಿ ಜನತಾ ಭವನದಲ್ಲಿ ಸ್ವಾತಂತ್ರ್ಯ ರಜತ ಮಹೋತ್ಸವದ ಅಂಗವಾಗಿ ಉಡುಪಿ ನಗರ ಸಭೆ, ತಾಲೂಕು ಬೋರ್ಡು ಮತ್ತು ತಹಶೀಲ್ದಾರರ ಸಹ ನೇತೃತ್ವದಲ್ಲಿ ಸಮಾರಂಭವೊಂದು ಜರಗಿತು.

11-45ಕ್ಕೆ ಸರಿಯಾಗಿ ಶ್ರೀ ಎಸ್. ಕೆ. ಶ್ರೀಪತಿ ಆಚಾರ್ಯರು ಸ್ವಾತಂತ್ರ್ಯ ಸಮರದಲ್ಲಿ ಜೀವತ್ಯಾಗ ಮಾಡಿದವರ ಸ್ಮರಣೆಯ ಕುರಿತೂ, ತಪಶೀಲ್ದಾರ್ ಮತ್ತು ಡಾ| ವಿ. ಎಸ್. ಆಚಾರ್ಯರು ಸ್ವಾತಂತ್ರ್ಯೋತ್ಪತ್ತಿಯ ಕುರಿತೂ ಭಾಷಣ ಮಾಡಿದರು.

ಹುತಾತ್ಮರ ಕುರಿತು ಮೌನವನ್ನಾಚರಿಸಿದ ತರುವಾಯ 25 ಕೂತಾಲು ತೋಪ್ರಗಳನ್ನು ಸಿಡಿಸಲಾಯಿತು. ಎಂ. ಜಿ. ಎಂ. ಕಾಲೇಜಿನ ವಿದ್ಯಾರ್ಥಿಗಳ ಯಕ್ಷಗಾನ ತಾಳಮದ್ದಳೆ ಕಾರ್ಯಕ್ರಮವು ನಡೆಯಿತ್ತು.

ತಾ. 15ರಂದು ಗಾಂಧಿ ಮೈದಾನದಲ್ಲಿ ಡಾ| ವಿ. ಎಸ್. ಆಚಾರ್ಯರಿಂದ ರಾಷ್ಟ್ರಧ್ವಜಾರೋಹಣ, ಪರ್ಯಾಯ ಶ್ರೀ ಅನಂತೂರು ಮುತಾಧೀಶರ ಪತಿಯಿಂದ ವಿದ್ಯಾರ್ಥಿಗಳಿಗೆ ಸಿಹಿತಿಂಡಿ ವಿತರಣೆ, ಮುನ್ಸಿಪಲ್ ಹೈಸ್ಕೂಲಿನಲ್ಲಿ ಸಭಾಂಗಣಕ್ಕೆ ಪ್ರಿನ್ಸಿಪಾಲ್ ಡಾ| ಪಿ ನಾರಾಯಣರಾವ್ ಅಧ್ಯಕ್ಷತೆಯಲ್ಲಿ ಡಾ| ಟಿ. ಎಂ. ಎ. ಪೈಯನವರಿಂದ ಶಂಕುಸ್ಥಾಪನೆ ಮೊದಲಾದ ಕಾರ್ಯಕ್ರಮಗಳು ಜರಗಿದವು. ಸಂಜೆ ಜನತಾ ಭವನದಲ್ಲಿ ಪ್ರೊ| ಎಸ್. ವಿ ಪರಮೇಶ್ವರ ಭಟ್ಟರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ, ರಂಗಭೂಮಿ ಆರ್ಕೆಸ್ಟ್ರಾ ಆವರಿಂದ ಸಂಗೀತ, ಭಾಷಣಸ್ಪರ್ಧೆ, ಬಹುಮಾನ ವಿತರಣೆ ಇತ್ಯಾದಿ ಕಾರ್ಯಕ್ರಮಗಳಾದುವು.

ಹಿರೇಬೆಟ್ಟುನಲ್ಲಿ ಭೂವಿಹೀನರಿಗೆ ವಸತಿ ನಿವೇಶನ ಹಂಚುವಿಕೆ

ಹಾಡುವಿಗೆ ಸಮೀಪದ ಹಿರೇಬೆಟ್ಟುನಲ್ಲಿ 46 ವೆಸತಿ ರಹಿತರಿಗೆ 5ಸೆಂಟ್ಸಿನಂತೆ ಭೂಮಿಯ ಪಟ್ಟಾ ಹಾಡುವ ಸಮಾರಂಭವೊಂದು ಶ್ರೀಮತಿ ಹುತೋರಮ ಮಧ್ವರಾಜರ ಅಧ್ಯಕ್ಷತೆಯಲ್ಲಿ ಜರಗಿತು. ಹಿರೇಬೆಟ್ಟು ಪಂಚಾತ್ ಅಧ್ಯಕ್ಷ ಶ್ರೀ ಎಚ್. ರಾಮಚಂದ್ರ ಹೆಗ್ಡೆಯವರು ಆರಂಭದಲ್ಲಿ ಸ್ವಾಗತಿಸಿದರು.

ಜಿಲ್ಲಾಧಿಕಾರಿ ಶ್ರೀ ಎಸ್. ಎ. ಮುತ್ತಣ್ಣನವರು ಪಟ್ಟಾ ನಿವೇಶನ ಹಂಚುತ್ತಾ ಬಡವರಿಗೆ ಇಷ್ಟು ಸುಲಿದ ಸರಾಸ್ರಯ ಆಗತ್ಯವಿಲ್ಲವೆಂದೂ ಅಲ್ಲದೆ ಈ ಪೌಕರ್ಯ ಅವರ ಮರಿಮಕ್ಕಳಿಗೂ ಉಳಿಯುವಂತಾಗಿದೆ ಎಂದು ಹೇಳಿದರು. ಅಲ್ಲದೆ ಈ ರೀತಿ ವಸತಿ ನಿವೇಶನ ಹಂಚುವುದರಲ್ಲಿ ರಾಜ್ಯದಲ್ಲಿ ಪ್ರಥಮ ಸ್ಥಾನ ಗಳಿಸಿದ ಕೀರ್ತಿ ದ. ಕ. ಜಿಲ್ಲೆಯದೆಂದು ತಿಳಿಸಿದರು.

ಉಡುಪಿ ತಾ. ಅ. ಮಂಡಳಿಯ ಅಧ್ಯಕ್ಷ ಶ್ರೀ ಎಂ. ಮಧ್ವರಾಜರು ಈ ಸಂದರ್ಭದಲ್ಲಿ ಮಾತಾಡಿ ತನ್ನ ಮೆಚ್ಚುಗೆ ವ್ಯಕ್ತಪಡಿಸಿದರು. ಶ್ರೀ ಸೂರಪ್ಪ ಹೆಗ್ಡೆಯವರು ವಸತಿ ನಿವೇಶನವನ್ನು ಸದುಪಯೋಗ ಪಡಿಸಿಕೊಳ್ಳಲು ಸರಕಾರವು ಸಹಾಯಧನ ನೀಡುವುದೆಂಬ ಭರವಸೆ ಇದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ಮಧ್ವರಾಜರು ತ್ವರಿತ ಪರಿಶ್ರಮದಿಂದ ತಮ್ಮ ಕಾಲ ಮೇಲೆ ತಾವು ನಿಲ್ಲುವಂತಾಗಬೇಕೆಂದು ಅಭಿಪ್ರಾಯ ಪಟ್ಟರು. ಶ್ರೀ ಎಚ್. ರಾಮಚಂದ್ರ ಹೆಗ್ಡೆಯವರು ಕೂನೆಯಲ್ಲಿ ವಂದಿಸಿದರು.

ಬಿಳಿ ಕಲೆಗಳು

'ಶ್ವೇತ ನಿವಾರಿಣಿ' ಎಂಬ ನೆಮ್ಮ ಪ್ರಸಿದ್ಧ ಭಾರತೀಯ ಉತ್ಪನ್ನ ಔಷಧವು ಎಷ್ಟೇ ಹಳೆಯ ಬಿಳಿ ಕಲೆಯಾದರೂ ಬಣ್ಣ ಬದಲಾಯಿಸಿ ಹೊಸ ಬಣ್ಣವನ್ನು ಕೊಡುತ್ತದೆ. ಬರೇ 24 ಗಂಟೆಗಳಲ್ಲಿ ಸ್ವಾಭಾವಿಕ ಚರ್ಮದ ಬಣ್ಣವನ್ನು ಎಂದೆಂದಿಗೂ ಬರಿಸುತ್ತದೆ. ಪ್ರಚಾರಾರ್ಥವಾಗಿ ಒಂದು ಪೂರ್ಣ ಔಷಧವನ್ನು ಪ್ರತಿರೋಗಿಗೆ ಉಚಿತವಾಗಿ ಕೊಡಲಾಗುವುದು.

ವಿಳಾಸ:

Gazetted Treatment Centre
P. O. Katri Sarai (Gaza)

ಮಂಗಳಗಂಗೋತ್ರಿಯ ಅಭಿವೃದ್ಧಿಗೆ ರೂ. 7ಲಕ್ಷ ಹೆಚ್ಚಿನ ಧನಸಹಾಯ

ಮಂಗಳೂರಿನ ಸ್ನಾತಕೋತ್ತರ ಶಿಕ್ಷಣ ಕೇಂದ್ರ—ಮಂಗಳಗಂಗೋತ್ರಿಯ 4ನೇ ವರ್ಷದ ಪದ ಪುಟ್ಟುತ್ಸವದ ಸಮಾರಂಭವು ಸ್ಥಳೀಯ ಕೆ. ಎಂ. ಸಭಾಭವನದಲ್ಲಿ ತಾ 19ರಂದು ಮೈಸೂರು ವಿ. ವಿ. ಫಿಲಸಫಿ ಕುಲಪತಿ ಪ್ರೊ| ಜವರೇಗೌಡರ ಅಧ್ಯಕ್ಷತೆಯಲ್ಲಿ ನೆರವೇರಿತು.

ಆರಂಭದಲ್ಲಿ ಪ್ರೊ| ಎಸ್. ವಿ. ಪರಮೇಶ್ವರ ಭಟ್ಟರು ಸ್ವಾಗತಿಸಿದರು. ಡಾ| ಎಲ್ಲಸ್ಸ, ಶ್ರೀಮತಿ ಡಾ| ಚಿಂತಾಯಮ್ಮ, ಡಾ| ಬಿ. ಟಿ. ನಟರಾಜ್, ಡಾ| ಅಬ್ದುಲ್ ರೆಹಮಾನ್ ಮತ್ತು ಪ್ರೊ| ಎಚ್. ಜಿ. ಲಕ್ಕಪ್ಪ ಗೌಡರು ಕ್ರಮವಾಗಿ ಭೌತಶಾಸ್ತ್ರ, ಜೀವಶಾಸ್ತ್ರ, ಗಣಿತ, ವಾಣಿಜ್ಯಶಾಸ್ತ್ರ, ಜೀವನಿಜ್ಞಾನ ಹಾಗೂ ಕನ್ನಡವಿ ಭಾಗಗಳ ಪ್ರಗತಿ ವರದಿಗಳನ್ನೋದಿದರು.

ಪ್ರೊ| ದೇ ಜ ಗೌ ಆವರು ಸೂಕಾಡುತ್ತಾ, ವಿ. ವಿ. ಧನಸಹಾಯ ಆಯೋಗದ ಅಧ್ಯಕ್ಷ ಡಾ| ಕೊಠಾರಿಯವರು ಇತ್ತೀಚೆಗೆ ಮಂಗಳಗಂಗೋತ್ರಿ ಕೇಂದ್ರಕ್ಕೆ ಭೇಟಿ ನೀಡಿ ನಡೆಸಿದ ಅಧ್ಯಯನದ ಫಲವಾಗಿ ಕೇಂದ್ರದ ಅಭಿವೃದ್ಧಿಗೆ ಮೊದಲು ಮಂಜೂರಾದ ಧನಸಹಾಯವನ್ನು ರೂ. 28 ಲಕ್ಷದಿಂದ 30ಲಕ್ಷಕ್ಕೆ ಏರಿಸಲಾಗಿದೆ ಎಂದು ಹೇಳಿ ಈ ರುಭ ಸಂದರ್ಭದಲ್ಲಿ ಹಿಂದಿನ ಉಪ ಕುಲಪತಿಗಳಿಂದ ಡಾ| ಶ್ರೀನಿವಾಸ ಹಾಗೂ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಶ್ರಮವನ್ನು ಸ್ಮರಿಸುವುದೆನ್ನತ್ಯಮೆಂದು ತಿಳಿಸಿ ಈ ಕೇಂದ್ರ ನುಂದೆ ಒಂದು ಪ್ರತ್ಯೇಕ ವಿಶ್ವವಿದ್ಯಾನಿಲಯ ವಾಗುವ ದಿನ ದೂರವಿರಲಾರದೆಂದು ಹಾರೈಸಿದರು. ಕೋಠಾರಿಯ ನಿವೇದನ ದೂರವಲ್ಲಿದೆ ಎಂಬ ಆಶ್ವೇಷನ್ನನ್ನು ಅಲ್ಲಗಳೆದು ಅದು ಅತ್ಯಂತ ಸೂಕ್ಷ್ಮಸ್ಥಳವೆಂದು ಹೇಳಿದರು. 'ಮುಂಗಾರು' ತ್ರೈಮಾಸಿಕದ ಬಿಡುಗಡೆಯನ್ನು ಪ್ರೊ| ಗೌಡರು ಈ ಸಂದರ್ಭದಲ್ಲಿ ನೆರವೇರಿಸಿದರು.

ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಚಟುವಟಿಕೆಗಳು ನಡೆದ ಬಳಿಕ ಡಾ| ಎಂ. ಎಸ್. ಮಧ್ಯಸ್ಥರು ಧನ್ಯವಾದಗಳನ್ನು ಅರ್ಪಿಸಿದರು.

ಮೋಡರ್ನ್ ಹಾಯರ್ ಸ್ಕೈಮರಿ ಶಾಲೆಯಲ್ಲಿ ನಳ್ಳಿ ನೀರಿನ ಉದ್ಘಾಟನೆ

ಉಡುಪಿ ಮೋಡರ್ನ್ ಹಾಯರ್ ಪ್ರೈಮರಿ ಶಾಲಾ ಹಳೇ ವಿದ್ಯಾರ್ಥಿ ಸಂಘದ ವತಿಯಿಂದ ಸ್ವಾತಂತ್ರ್ಯೋತ್ಸವದ ಬೆಳ್ಳಿಹಬ್ಬವನ್ನು ಸಂಘದ ಅಧ್ಯಕ್ಷ ಡಾ| ಕೆ. ಮೋಹನದಾಸ್ ಪೈಯವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು. ಶಾಲಾ ಮ್ಯಾನೇಜರ್ ಶ್ರೀ ಜಗನ್ನಾಥ ನಾಯಕರು ಸಂಘದ ಸದಸ್ಯರಿಗೆ ಈ ರುಭ ಸಂದರ್ಭದಲ್ಲಿ ತಮ್ಮ ಪಾರ್ಥಿಕ ಶುಭಾಶಯಗಳನ್ನು ಅರ್ಪಿಸಿ ಹರಸಿದರು ಹಳೇ ವಿದ್ಯಾರ್ಥಿಗಳು ಸ್ವಾತಂತ್ರ್ಯ ರಜತೋತ್ಸವದ ಸಮಸ್ಮಾರಕವಾಗಿ ಶಾಲೆಗೆ ಒದಗಿಸಿಕೊಟ್ಟ ಕುಡಿಯುವ ನೀರಿನ ನಳ್ಳಿಯನ್ನು ಸಿಂಡಿಕೇಟ್ ಬ್ಯಾಂಕಿನ ಅಧಿಕಾರಿ ಶ್ರೀ ಎಚ್. ಡಿ. ಎಸ್. ಪೈಯರು ಉದ್ಘಾಟಿಸಿ ಮಾತನಾಡುತ್ತಾ 'ಭಾರತದ ಸ್ವಾತಂತ್ರ್ಯ ಪೂರ್ವದ ಇತಿಹಾಸದ ಅಧ್ಯಯನವನ್ನು ತನ್ನು ಆಸಕ್ತಿಯನ್ನು ಹರಿಸುವಂತೆ ಯುವಜನಾಂಗಕ್ಕೆ ಕರೆಯಿತ್ತರು. ಉಡುಪಿಯ ಸ್ವಾತಂತ್ರ್ಯ ಹೋರಾಟಗಾರರಲ್ಲೂ ಬ್ಯರಾದ ಶ್ರೀ ಜಿ. ಎಸ್. ನ್ಯಾಕರರನ್ನೂ ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಶ್ರೀ ನಾಯಕರು ತಮ್ಮ ಭಾಷಣದಲ್ಲಿ ಜನರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದವರನ್ನು ಅಸಡ್ಡೆಯಿಂದ ನೋಡುವ ತಮ್ಮ ಸುತ್ತಮುತ್ತಲಿನ ವಾತಾವರಣವನ್ನು ಬದಲಾಯಿಸುವಂತೆ ವಿನಂತಿಸಿಕೊಂಡರು. ಅಧ್ಯಕ್ಷ ಡಾ| ಮೋಹನದಾಸ್ ಪೈಯವರೆ ಭಾಷಣದ ಬಳಿಕ ಕಾರ್ಯದರ್ಶಿ ಶ್ರೀ ನಾರಾಯಣ ಭಂಡಾರಿಯವರು ಧನ್ಯವಾದ ಅರ್ಪಿಸಿದರು. ಬಳಿಕ ಶಾಲಾ ಮಕ್ಕಳಿಂದ ವಿವಿಧ ವಿನೋದಾವಳಿಗಳು ಪ್ರದರ್ಶನಗೊಳ್ಳಟ್ಟವು.

ಕೊನೆಯಲ್ಲಿ ಶ್ರೀಮತಿ ಲೀಲಾ ಮೋಹನದಾಸ್ ಪೈಯವರು ಮಕ್ಕಳಿಗೆ ಸಿಹಿತಿಂಡಿ ವಿತರಣೆ ಮಾಡಿದರು.

ಟಿ. ಎ. ಪೈ ಸನ್ಮಾನ ಸಮಾರಂಭಕ್ಕೆ ಉಡುಪಿಯಲ್ಲಿ ಸಿದ್ಧತೆ

ಕೇಂದ್ರ ರೈಲ್ವೇ ಸಚಿವ ಪದ್ಮಭೂಷಣ ಶ್ರೀ ಟಿ. ಎ. ಪೈಯರು ಸಪ್ಟಂಬರ್ 14ರಂದು ಟೆಲ್ಲಿಗೆ ಅಧಿಕೃತ ಭೇಟಿ ನೀಡುವ ಸಂದರ್ಭದಲ್ಲಿ ಅವರನ್ನು ಸನ್ಮಾನಿಸಬೇಕೆಂದು ತಾ. 20ರಂದು ಉಡುಪಿಯ ಉದ್ಯೋಗಪತಿ ಬಾಗಿನಲ್ಲಿ ಶ್ರೀ ಕೆ.ಕೆ. ಪೈಯವರ ಅಧ್ಯಕ್ಷತೆಯಲ್ಲಿ ಆ ಕುರಿತು ಸೇರಿದ್ದ ಸಭೆಯಲ್ಲಿ ನಿರ್ಧರಿಸಲಾಯಿತು.

ಆರಂಭದಲ್ಲಿ ಶ್ರೀ ಎ. ಜೆ. ಅಲ್ಪೆಯವರು ಸಭೆ ಕರೆದುದರ ಉದ್ದೇಶವನ್ನು ವಿವರಿಸಿದರು.

ದೀರ್ಘ ಸಮಾರೋಚನೆಯ ಬಳಿಕ ಶ್ರೀ ಪೈಯವರ ಸನ್ಮಾನ ಸಮಾರಂಭವನ್ನು ಪಕ್ಷಾತೀತ ಮತ್ತು ಸಾರ್ವಜನಿಕ ನೆಲೆಯಲ್ಲಿ ಪ್ರಾತಿನಿಧಿಕ ಸ್ವರೂಪದಲ್ಲಿ ಉಡುಪಿಯಲ್ಲಿ ಸೆಪ್ಟಂಬರ 14ರಂದು ಸಂಜೆ ಜರಗಿಸಬೇಕೆಂದು ತೀರ್ಮಾನಿಸಲಾಯಿತು. ಸಮಾರಂಭ ಜರಗುವ ಬಯಲು ಮಂದಿರಕ್ಕೆ ಒಂದು ಪೈಲುದ್ದದ ಹಾದಿಯಲ್ಲಿ ಈ ಸಂದರ್ಭಕ್ಕಾಗಿಯೇ ಸಜ್ಜುಗೊಳಿಸಿದ ವಿಶಿಷ್ಟ ರೀತಿಯ ರೈಲಿನಲ್ಲಿ ಕರಕೊಂಡು ಬರಬೇಕೆಂದೂ ನಿರ್ಣಯಿಸಲಾಯಿತು. ಶ್ರೀ ಪೈಯವರನ್ನು ಕುರಿತು ಲೇಖನಗಳನ್ನು ಸಂಗ್ರಹಿಸಿ ಅಭಿನಂದನ ಗ್ರಂಥವನ್ನು ಪ್ರಕಟಿಸಿ ಅವರಿಗೆ ಅರ್ಪಿಸಬೇಕೆಂದೂ ನಿರ್ಣಯಿಸಲಾಯಿತು.

ಸಮಾರಂಭದ ವಿವಿಧ ಕಾರ್ಯಕ್ರಮಗಳನ್ನು ರೂಪಿಸುವ ಬಗ್ಗೆ ಒಂದು ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು. ಶ್ರೀ ಕೆ. ಕೆ. ಪೈ (ಅಧ್ಯಕ್ಷರು), ಶ್ರೀ ಎ. ಜೆ. ಅಲ್ಪೆ ಮತ್ತು ಶ್ರೀ ವಿಜಯನಾಥ ಶೆಣೈ (ಕಾರ್ಯದರ್ಶಿಗಳು), ಸದಸ್ಯರುಗಳಾಗಿ ಶ್ರೀಗಳಾದ ಬಿ ಯೋಗೀಶ್ವರ ಹೊಳ್ಳ, ಕೆ. ಮುದ್ದು ಸುವರ್ಣ, ಬಿ ಕಾಳಪ್ಪ ಶೆಟ್ಟಿ, ಜೆ ಮಂಜೋನ್ನಾ, ಎಸ್. ಧರ್ಮಸಾಮ್ರಾಜ್ಯ, ಎಂ ಸುಧ್ಯರಾಜ, ಡಾ| ವಿ ಎಸ್. ಆಚಾರ್ಯ, ಪಿ. ರಂಗನಾಥ ಶೆಣೈ, ವೈ. ಮಂಜಯ್ಯ ಶೆಟ್ಟಿ, ಡಾ| ಮೋಹನದಾಸ ಆಡ್ಯಂತಾಯ, ಎಂ. ಜಿ ಪ್ರಭು ಮತ್ತು ವಿ. ಗೋಕುಲದಾಸ ಪೈ.

ಶ್ರೀ ಪೈಯವರ ಅಭಿಮಾನಿಗಳನ್ನು ಸೇರಿಸಿ ಸ್ವಾಗತ ಸಮಿತಿಯೊಂತನ್ನು ಕೊಸಿಸಲು ನಿರ್ಧರಿಸಲಾಯಿತು. ಸ್ವಾಗತ ಸಮಿತಿಯ ಸದಸ್ಯತನ ಶುಲ್ಕವಾಗಿ ರೂ. 10, ರೂ. 25 ಯೂ ಹೆಚ್ಚಿನ ಮೊತ್ತದ ಧನಲತ್ತನ್ನು ತೆತ್ತವರಿಗೆ ಶ್ರೀ ಟಿ. ಎ. ಪೈ ಅಭಿನಂದನ ಗ್ರಂಥವನ್ನು ಉಚಿತವಾಗಿ ನೀಡಬೇಕೆಂದೂ ತೀರ್ಮಾನಿಸಲಾಯಿತು.

ಹಿಂದಿ ಸಾಹಿತ್ಯರತ್ನ ಪರೀಕ್ಷೆ

ಹಿಂದಿ ವಿಶ್ವವಿದ್ಯಾಲಯ, ಹಿಂದಿ ಸಾಹಿತ್ಯ ಸಮ್ಮೇಳನ, ಪ್ರಯೋಗಪದವು ನಡೆಸುವ ಪ್ರಥಮ, ಮಧ್ಯಮ (ಸಾಹಿತ್ಯ ವಿಶಾರದ) ಮತ್ತು ಸಾಹಿತ್ಯರತ್ನ ಪರೀಕ್ಷೆಗಳು ಈ ವರ್ಷದ ಡಿಸೆಂಬರ 31ರಂಗ ಕೊನೆಯ ವಾರದಲ್ಲಿ ನಡೆಯುತ್ತವೆ. ಈ ಮೇಲ್ಕಂಡ ಪರೀಕ್ಷೆಗಳಿಗೆ ಕೂರಲು ಬಯಸುವವರು ಈ ತಿಂಗಳ 30ರ ಒಳಗಾಗಿ ಅರ್ಜಿಗಳನ್ನು ಕಳುಹಿಸಿ ಕೊಡಬೇಯುಡು. ಅರ್ಜಿಗಳನ್ನು ಕೇಂದ್ರ ವ್ಯವಸ್ಥಾಪಕರಾದ ಶ್ರೀ ಕೆ 'ಆರ್. ಸುಶೀಲೇ ಗೌಡ, ಹಿಂದಿ ಉಪನ್ಯಾಸಕರು, ಸರಕಾರೀ ಕಾಲೇಜು, ಮಂಗಳೂರು, ಇವರಿಂದ 2 ರೂ. ಮಿ. ಒ. ಮೂಲಿ ತರಿಸಿಕೊಳ್ಳಬಹುದು. ಪರೀಕ್ಷೆಗೆ ಸಂಬಂಧಿಸಿದ ವಿವರಗಳನ್ನು ಶೇಂದ್ರ ವ್ಯವಸ್ಥಾಪಕರಿಂದ ಪಡೆಯಬಹುದು.

ಪ್ರೌಢಶಿಕ್ಷಣ ಸಂಸ್ಕೃತ ಪರೀಕ್ಷೆ

ಭೋಪಾಲ್‌ನ ವಿಶ್ವಭಾಷೆಯ, ಸುಂಬ್ಯಾ ಇವರು ನಡೆಸುವ ಪ್ರೌಢ ವಿಶೇಷ ಸಂಸ್ಕೃತ ಪರೀಕ್ಷೆಗಳು ಡಿಸೆಂಬರ್ 7 ಮತ್ತು 8ರಂದು ನಡೆಯುತ್ತವೆ. ಪರೀಕ್ಷೆಗೆ ಅರ್ಜಿಯನ್ನು ಕಳುಹಿಸಲು ಸಿ ತಿಂಗಳ 30 ಕೊನೆಯ ದಿನ. ಪ್ರಸ್ತುತ ಬಾ ಮೆಡಿಕಲ್ ಕಾಲೇಜಿನಲ್ಲಿ ಉಚಿತ ತರಗತಿಗಳು ನಡೆಯುತ್ತಿದ್ದು ಪರೀಕ್ಷೆಗೆ ಕುಳಿತುಕೊಳ್ಳಲು ಇಚ್ಛಿಸುವವರು ಈ ತಿಂಗಳ 30 ಕೊನೆಯ ದಿನ. ಹೆಚ್ಚಿನ ವಿವರಗಳನ್ನು ಶೇಂದ್ರ ವ್ಯವಸ್ಥಾಪಕರಿಂದ ಪಡೆಯಬಹುದು.

THE PRESS
for NEAT CLEAR ARTISTIC PRINTING
NAVAYUGA PRESS
Printers for—
NAVAYUGA Weekly
We undertake all kinds of Bookwork, jobwork, etc.
PROPRIETORS:
NAVAYUGA ENTERPRISE LTD.
Regd. Office: **Palukote, UDIPI, S.K.**

ತಿಳಿದಿರಬೇಕಾದ ಸಂಗತಿ —

ರಾಜ್ಯದ ಮುಖ್ಯಮಂತ್ರಿಗಳು

ಕರ್ನಾಟಕ —	ಡಿ ದೇವರಾಜ ಅರಸ್
ತಮಿಳುನಾಡು —	ಎಂ.ಕರುಣಾನಿಧಿ
ಕೇರಳ —	ಅಚ್ಯುತಮೆನನ್
ಆಂಧ್ರ —	ಪಿ.ವಿ.ನರಸಿಂಹ ರಾವ್
ಮಹಾರಾಷ್ಟ್ರ —	ವಿ.ಪಿ.ನಾಯಕ್
ರಾಜಸ್ತಾನ —	ಬರ್ಖಾತುಲ್ಲಾ ಖಾನ್
ಹಿಮಾಚಲ ಪ್ರದೇಶ —	ವೈ.ಎಸ್.ಪರ್ಮಾರ್
ಗುಜರಾತ್ —	ಘನಶ್ಯಾಮದಾಸ್ ಓ ಜಾ
ಪಂಜಾಬ್ —	ಗಿಯಾನಿ ಜೈಲ್ ಸಿಂಗ್
ಮೇಘಾಲಯ —	ವಿಲಿಯಂ ಸವ್ ಸಂಗ್ಮ
ಅಸ್ಸಾಂ —	ಶರತ್‌ಚಂದ್ರ ಸಿಂಹಾ
ಹರಿಯಾಣ —	ಬನ್ಸಿಲಾಲ್
ಗೋವಾ —	ದಯಾನಂದ ಬಾಂದೋಡ್ಕರ್
ಪಶ್ಚಿಮ ಬಂಗಾಳ —	ಸಿದ್ಧಾರ್ಥ ಶಂಕರ ರಾಯ್
ಬಿಹಾರ್ —	ಕೇದಾರ್ ಪಾಂಡೆ
ಒರಿಸ್ಸಾ —	ಶ್ರೀಮತಿ ನಂದಿನಿ ಸತ್ಪತಿ
ತ್ರಿಪುರ —	ಸಮರ್ಜಿಮೂರ್ ಸೇನ್ ಲೈಷ್ರಾ
ಕಾಶ್ಮೀರ —	ಷೇಖ್ ಅಬ್ದುಲ್ ಖಾಸಿಂ
ಉತ್ತರ ಪ್ರದೇಶ —	ಕಮಲಾಪತಿ ತ್ರಿಪಾಠಿ
ಮಧ್ಯಪ್ರದೇಶ —	ಪ್ರಕಾಶಚಂದ್ರ ಸೇಥಿ
ಮಣಿಪುರ —	ಮಹಮ್ಮದ್ ಅಲಿ ಮುಜ್ತೀನ್
ನಾಗಾಲ್ಯಾಂಡ್ —	ಷೈಕಿಸೆ ಶೇಮೊ
ಶ್ರೀ ಐ.ಎಚ್.ಶಾಂಗ್ಲಾಪ್ರಾವ —	ಫೆಟ್ಟ್, ಬ್ರಹ್ಮಾವರ

ಮಂಗಳೂರಿನ ಕಾಳಿಕಾಂಬಾ—ವಿನಾಯಕ ದೇವಾಲಯ

ಡಾ. ಪಿ. ಗುರುರಾಜ ಭಟ್

ದಕ್ಷಿಣ ಕನ್ನಡದ ಮುಖ್ಯ ಪಟ್ಟಣವಾದ ಮಂಗಳೂರಿನಲ್ಲಿ ಅಭ್ಯಾಸಕ್ಕೆ ಯೋಗ್ಯವಾದ ಹಲವಾರು ದೇವಾಲಯಗಳಿವೆ. ಕೆಲವು ದೇಗುಲಗಳಂತೂ ಎಲ್ಲರಿಗೆ ಎಂಬುದು ಮಂಗಳೂರಿನ ನಿವಾಸಿಗಳಿಗೂ ತಿಳಿಯದಾಗಿದೆ. ಇವುಗಳಲ್ಲಿ ಕೆಲವು ಉತ್ತಮ ಸ್ಥಿತಿಯಲ್ಲಿದ್ದರೂ ಕೆಲವಾರು ದೇವ ಮಂದಿರಗಳು ಐತಿಹಾಸಿಕ ನಿಷ್ಪಕ್ಷ ಪ್ರಾಮುಖ್ಯವಾದರೂ ಜನರಿಗೆ ಇವುಗಳ ವೈಶಿಷ್ಟ್ಯ ತಿಳಿಯದಾಗಿ ಬಹಳ ನೊಂದ ಸಂಗತಿಯಾಗಿದೆ.

ಮಂಗಳೂರಿನ ಒಂದು ಪ್ರಾಮುಖ್ಯ ದೇವಾಲಯ ಶ್ರೀ ಕಾಳಿಕಾಂಬಾ—ವಿನಾಯಕ ದೇಗುಲ. ಇದು ರಥಬೀದಿಯ ಪರಿಸರದಲ್ಲಿ ಎತ್ತರವಾದ ಸ್ಥಳದಲ್ಲಿ ನಿರ್ಮಿತವಾಗಿದೆ. ಈ ದೇಗುಲದ ಮೂಲ ಮೂರ್ತಿಗಳು ವಿಜಯನಗರ ಕಾಲಕ್ಕೆ ಅನ್ವಯಿಸುತ್ತವೆ.

ಕಾಳಿಕಾಂಬಾ ವಿನಾಯಕ ಗುಡಿಗಳು ಅಕ್ಕ ಪಕ್ಕದಲ್ಲಿವೆ. ಹಳೆಗಾಲದಲ್ಲಿ ಈ ಕ್ಷೇತ್ರದಲ್ಲಿ ವಿನಾಯಕ ಗುಡಿ ಇತ್ತೆಂದೂ ಕಾಳಿಕಾಂಬಾ ಮೂರ್ತಿಯನ್ನು ಮಂಗಳಾದೇವಿ ಮಂಗಳಾದೇವಿ ದೇವಾಲಯದ ಪರಿಸರದಿಂದ ಇಲ್ಲಿಗೆ ತಂದು ಪ್ರತಿಷ್ಠಿಸಿದರೆಂದೂ ತಿಳಿಯಲಾಗಿದೆ. ಹಿಂದಕ್ಕೆ ಈ ದೇವಾಲಯವು ಬ್ರಾಹ್ಮಣರ ಪೂಜೆಗೊಳಪಟ್ಟಿದ್ದರೂ ಈಗ ಇದು ಮಂಗಳೂರ ವಿಶ್ವಕರ್ಮ ಬ್ರಾಹ್ಮಣರ ಅಧೀನವಾಗಿದ್ದು ಅವರ ಆರ್ಚನೆಯಲ್ಲಿದೆ.

ಶ್ರೀ ಕಾಳಿಕಾಂಬಾ ಮೂರ್ತಿ ಎರಡಡಿ ಎತ್ತರವಾಗಿದ್ದು ವಿಜಯನಗರ ಕಾಲದ ಶಿಲ್ಪ ವೈಖರಿಯನ್ನು ಉತ್ಕೃಷ್ಟವಾದ ರೀತಿಯಲ್ಲಿ ತೋರಿಸುವ ಬಿಂಬ. ಕರಿಶಿಲೆಯಿಂದ ಪ್ರಮಾಣ ಮತ್ತು ಶಾಸ್ತ್ರಪೂರ್ವಕವಾಗಿ ಕೆತ್ತಿದ ಬಿಂಬ. ಇದು ಲಲಿತಾಸನಸ್ಥವಾಗಿ, ಕೊಳಗರೀತಿಯ ಕೀರ್ಟವನ್ನು ಧರಿಸಿ ಖಡ್ಗ, ಕರ್ತರಿ, ಫಲ ಮತ್ತು ಅಭಯ ಹಸ್ತವಾಗಿ, ನಂದಿಯ ಲಾಂಛನವನ್ನು ಹೊಂದಿ ಲಾವಣ್ಯವಾದ ಮುಖ ಕಮಲವನ್ನು ಪಡೆದ ವಿಗ್ರಹ. ನಂದಿಯ ಲಾಂಛನವುಳ್ಳ ದೇವಿ ವಿಗ್ರಹಗಳು ವಿರಳವೆನ್ನಬಹುದು. ಇದು ಈಶ್ವರ ಸಂಬಂಧಿಯೂದ ದೇವಿ ಶಕ್ತಿ ಎಂಬುದು ವಿದಿತವಾಗುತ್ತದೆ. ಈ ದೇವಾಲಯಕ್ಕೆ ಎರಡು ಬಲಿ ಮೂರ್ತಿಗಳಿವೆ. ಎರಡೂ ಸಂಚಲೋಹದ ಬಿಂಬಗಳು. 7" ಎತ್ತರವಾಗಿದ್ದು ಕ್ರಿ. ಶ. 15ನೇ ಶತಮಾನಕ್ಕೆ ಒಪ್ಪುತ್ತವೆ. ಅವುಗಳಲ್ಲಿ ಒಂದು ಸ್ಕಂದನ ಮೂರ್ತಿ. ಇದು ಇತರ ಸ್ಕಂದ ಬಿಂಬಗಳಂತಿಲ್ಲ. ಸಮ ಭಂಗಿಯಲ್ಲಿ ತಲೆಯ ಮೇಲ್ಗಡೆ ಆರು ಹೆಡೆಯ ಸರ್ಪನ ನಿರ್ದೇಶವುಳ್ಳ ಶಂಖ, ಚಕ್ರ ಧಾರಿಯಾಗಿ ಅಭಯ ವರದ ಹಸ್ತವುಳ್ಳ ಈ ಮೂರ್ತಿ ವಿಶೇಷ ತರದ ಸ್ಕಂದನ ನಿರ್ದೇಶನವಾಗಿದೆ. ದೇವಿಯು ಪಾಶ, ಕರ್ತರಿ, ಫಲ ಮತ್ತು ಖಡ್ಗಧಾರಿಣಿಯಾಗಿದ್ದಾಳೆ.

ಶ್ರೀ ಕಾಳಿಕಾಂಬಾ ಗುಡಿಯ ಬಲಭಾಗದಲ್ಲಿ ಒಂದಡಿ ಎತ್ತರದ ಗಣೇಶ ವಿಗ್ರಹವನ್ನೊಳಗೊಂಡ ವಿನಾಯಕನ ಗುಡಿ ಇದೆ. ಇದು ಸಹ ಬಹಳ ಮುದ್ದಾದ ಮೂರ್ತಿ. ಇತ್ತೀಚೆಗೆ ನವಗ್ರಹದ ಬಿಂಬಗಳನ್ನು ದೇವಾಲಯದ ಆಗ್ನೇಯ ದಿಕ್ಕಿನಲ್ಲಿ ಸ್ಥಾಪಿಸಿದ್ದಾರೆ. ದಕ್ಷಿಣ ಕನ್ನಡನಲ್ಲಿ ಪ್ರಾಯಃ ಇತರತ್ರ ನವಗ್ರಹದ ಬಿಂಬಗಳಿಲ್ಲ. ಈ ದೇವಾಲಯವು ಉತ್ತಮ ರೀತಿಯ ಆಡಳಿತೆಯಲ್ಲಿದೆ. ●

ಭಾರತೀಯ ಮತ್ತು ಭಾರತೀಯತೆ

(ಎರಡನೇ ಪುಟದಿಂದ)

ಹೆಚ್ಚು ಪರಿಣಾಮಕಾರಿ. ನಾರದ ಸಂತೆ, ಊರ ಜಾತ್ರೆ, ಸಮಾರಂಭಗಳಲ್ಲಿ ಊರ ಜನರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿರುವುದರಿಂದ, ಈ ಕಾರ್ಯಗಳಿಗೆ ಅವು ಪ್ರಶಸ್ತವಾದ ಅವಕಾಶಗಳು.

ಸಂಘ ಸಂಸ್ಥೆಗಳ ವಾರ್ಷಿಕೋತ್ಸವದ ದಿನಗಳಲ್ಲಿ ಉತ್ತಮ ನಾಟಕ ಪ್ರದರ್ಶನಗಳನ್ನು ಏರ್ಪಡಿಸುವ ಕಾರ್ಯ ಸುಲಭ ಹಾಗೂ ಹೆಚ್ಚು ಪರಿಣಾಮಕಾರಿ. ಯಕ್ಷಗಾನ ಬಯಲಾಟವನ್ನು ಕೂಡಾ ಕ್ರಿಯಾ ಮೂಧ್ಯಮವಾಗಿ ತೆಗೆದು ಕೊಳ್ಳಬಹುದು.

ಈ ಎಲ್ಲಾ ಕಾರ್ಯಗಳನ್ನು ಮಾತ್ರ ನೆಗೊಂಡರೆ ನಾವು ಯೋಜಿಸಿದ, ಯೋಜಿಸಿದ ಕಾರ್ಯಗಳು ಸಿದ್ಧಿಸುತ್ತವೆಯೆಂದರೆ ಉತ್ಪ್ರೇಕ್ಷೆಯಾಗಬಹುದು. ಈ ಪಥದಲ್ಲಿ ಯೋಚಿಸಲು, ಯೋಜಿಸಲು ಸಾಧ್ಯವಿರುವ ಪ್ರತಿಯೊರ್ವ ಭಾರತೀಯನೂ ಯೋಜಿಸಬೇಕು ಯೋಚಿಸಬೇಕು. ತಮ್ಮ ತಮ್ಮ ಅಳಿಲು ಸೇವೆಯನ್ನು ಸಲ್ಲಿಸಬೇಕು

ಎಂದು ಭಾರತದ ಜನತೆ ಸ್ವಾಮಿ ವಿವೇಕಾನಂದರ ಅಮೃತ ವಾಣಿಯನ್ನು ದಿನ ನಿತ್ಯ ಜ್ಞಾಪಿಸಿಕೊಳ್ಳುತ್ತಲೇ, ಸಾವರ್ಕರರ ರಾಷ್ಟ್ರಸ್ತೋತ್ರವನ್ನು ರೂಢಿಸಿಕೊಳ್ಳುತ್ತಲೇ, ತಿಲಕರ ಸೇವಾ ಮನೋಭಾವನೆಯನ್ನು ಮೈಗೂಡಿಸಿ ಕೊಳ್ಳುತ್ತಲೇ ಗಾಂಧೀಜಿಯವರ ಸರಳತೆಯನ್ನು ತನ್ನ ಜೀವನಗನ್ನಡಿಯಲ್ಲಿ ಪ್ರತಿಬಿಂಬಿಸುತ್ತಲೇ, ವಲ್ಲಭಭಾಯಿ ಪಟೇಲರ ಕಾರ್ಯ ಸಿದ್ಧತೆ ಹಾಗೂ ಯೋಜನಾ ಬದ್ಧನಾದ ಕಾರ್ಯಾರಂಭವನ್ನು ತನ್ನ ಜೀವನದಲ್ಲೂ ಕಾಣಿಸಿಕೊಳ್ಳಲೇಕೆಂದು ಯೋಜಿಸುತ್ತದೊ....ಒಟ್ಟನಲ್ಲಿ ಹೇಳಿದ್ದಾಯಿತು ನಾವು ಭಾರತೀಯರು— ಕುರಿಮರಿಗಳಲ್ಲ, ಸಿಂಹ ಪ್ರಸೂತಿಯೆಂಬ ಕಲ್ಪನೆ, ಧೈರ್ಯ, ಸ್ಥೈರ್ಯ, ಸಾಹಸ ನಮ್ಮಲ್ಲಿ ಉಂಟಾಗುತ್ತದೋ, ಅಂದು ನಮ್ಮ ಭಾರತ ಜಗತ್ತಿನ ನಕಾಶೆಯಲ್ಲಿ ಅತಿ ಮುಖ್ಯ ಸ್ಥಾನ ಪಡೆದು ಎಲ್ಲರೂ ನಮ್ಮತ್ತ ನೋಡುವಂತಾಗುತ್ತದೆ.

ನಾವು—ಭಾರತೀಯರು, ಯಾವುದೇ ಕಾರ್ಯವನ್ನು ಮಾಡ ಬಲ್ಲೆವು ಎಂಬ ಸ್ವಾಭಿಮಾನ—ಸಾತ್ವಿಕಾಭಿಮಾನ ನಮ್ಮಲ್ಲಿ ಅತಿಬೇಗನೆ ಬರಲಿ. ಆತ್ಮ ವಿಶ್ವಾಸದಿಂದ ಮುಂದುವರಿದು ಭಾರತಾಂಬೆಯ ಸುಪುತ್ರ ಸುಪುತ್ರಿಯರಾಗಿ ನುಡಿಯೋಣವೆಂದು ಹೇಳಿದೆ ಬೇರೇನು ಹೇಳಲಿ?

(ವಿಶೇಷ ಸಂಚಿಕೆಗೆ ಬಂದಿದ್ದು) ●

25 ವರ್ಷ ಹಿಂದೆ...

1947ನೇ ಆಗಸ್ಟ್ 14ರಂದು ಸಂವಿಧಾನ ಸಮಿತಿಯ ಮಧ್ಯರಾತ್ರಿ ಅಧಿವೇಶನದಲ್ಲಿ ನೆಹರೂ ಅವರು ಹೇಳಿದ್ದು:

'....ಇಂದಿನ ನಟ್ಟಿರುಳಲ್ಲಿ ಪ್ರಪಂಚವೆಲ್ಲ ಮಲಗಿರುವಾಗ ಭಾರತ ಜೀವಕಳೆ ತುಂಬಿ ಸ್ವತಂತ್ರ ರಾಷ್ಟ್ರವಾಗಿ ಎದ್ದೇಳುತ್ತಿದೆ. ಇತಿಹಾಸದಲ್ಲಿ ಕೆಲವೊಮ್ಮೆ ಅಪರೂಪವಾದ ಸಮಯ ಒದಗುವುದುಂಟು. ಇಂಥ ಹೊಸ್ತಿನಲ್ಲಿ ಹಳೆಯ ಯುಗವೊಂದು ಪರಿಸಮಾಪ್ತಿಗೊಂಡು ಹೊಸ ಯುಗ ಅರಂಭವಾಗುತ್ತದೆ. ಆಗ ಬಹುಕಾಲ ದಮನಗೊಂಡಿದ್ದ ದೇಶದ ಆತ್ಮಕ್ಕೆ ಜೈತನ್ಯತುಂಬಿ ಬರುತ್ತದೆ.

'....ನಾವೀಮ ಆಚರಿಸುತ್ತಿರುವ ಸಾಧನೆ ಒಂದು ಮೆಟ್ಟಲು ಮಾತ್ರ. ಮುಂದೆ ಬರಲಿರುವ ಮಹತ್ಸಾಧನೆಗಳಿಗೆ ಇದು ಮುನ್ಸೂಚನೆಯಷ್ಟೆ. ಅಂತೆಯೇ ಇದು ನಾಳಿನ ಭಾರತ ಗೆಲುವುಗಳಿಗೆ ಅವಕಾಶವೂ ಹೌದು.

'....ನಮ್ಮ ಜನಸುಗಳನ್ನು ಕಾರ್ಯರೂಪಕ್ಕೆ ತರಲಿಕ್ಕಾಗಿ ನಾವೆಲ್ಲ ಕಷ್ಟಪಟ್ಟು ದುಡಿಯಬೇಕಾಗಿದೆ .... ಕ್ಷುಲ್ಲಕ ಹಾಗೂ ವಿನಾಶಕಾರಿ ಟೀಕೆಗಳಿಗೆ ಇದು ಸಮಯವಲ್ಲ. ದ್ವೇಷ ಭಾವನೆ ಅಥವಾ ದೋಷಾರೋಪಣೆಗಳಿಗೂ ಇದು ಹೊತ್ತಲ್ಲ. ಭಾರತದ ಎಲ್ಲಾ ಮಕ್ಕಳು ವಾಸಿಸಲು ಅನುಕೂಲವಾಗುವಂತಹ ಸ್ವತಂತ್ರ ಭಾರತದ ಮಹಾಸೌಧವನ್ನು ನಾವೆ ನಿರ್ಮಿಸಬೇಕಾಗಿದೆ.

ಆದೇ ದಿನ ರಾಷ್ಟ್ರಪತ್ನಿಯನ್ನುದ್ದೇಶಿಸಿ ಮಾಡಿದ ಪ್ರಸಾರಭಾಷಣದಲ್ಲಿ ಅವರು ಹೇಳಿದ್ದು:

"....ಇದು ಭಾರತದ ಪರ್ವಕಾಲ. ಏಷ್ಯಾ ಹಾಗೂ ಇಡೀ ಪ್ರಪಂಚಕ್ಕೂ ಇದು ಅತ್ಯಂತ ಮಹತ್ವದ ಘಳಿಗೆ. ಪೂರ್ವದಲ್ಲಿ ಇಂದು ಸ್ವಾತಂತ್ರ್ಯದ ನವತಾರೆ ಉದಯವಾಗುತ್ತಿದೆ. ಅದರೊಂದಿಗೆ ಹೊಸ ಆಸೆಯೊಂದು ಗರಿಗೆದರುತ್ತಿದೆ. ಬಹಳ ದಿನಗಳ ಬಯಕೆ ನೆನ್ನೆಗೂಡುತ್ತಿದೆ. ಈ ತಾರೆ ಚಿರಂತನವಾಗಿ ಬೆಳಗಲಿ ಈ ನಿರೀಕ್ಷೆ ವಿಫಲವಾಗದಿರಲಿ.

"....ಭವಿಷ್ಯತ್ತು ನಮ್ಮನ್ನು ಕೈಬೀಸಿ ಕರೆಯುತ್ತಿದೆ. ನಾವೆತ್ತ ಹೋಗಬೇಕು? ಏನು ಮಾಡಬೇಕು? ಜನ ಸಾಮಾನ್ಯರಿಗೆ ರೈತರಿಗೆ ಹಾಗೂ ಕಾರ್ಮಿಕರಿಗೆ ಸ್ವಾತಂತ್ರ್ಯ ಹಾಗೂ ಅವಕಾಶಗಳು ಲಭಿಸುವಂತೆ ಮಾಡೋಣ. ಬಡತನ ಅಜ್ಞಾನ ಮತ್ತು ರೋಗರುಜೆಗಳ ವಿರುದ್ಧ ಹೋರಾಡಿಗೆ ಸ್ಪೋಣ. ಪ್ರಗತಿಶೀಲ ಸಮೃದ್ಧ ಹಾಗೂ ಪ್ರಜಾಸತ್ತಾತ್ಮಕ ರಾಷ್ಟ್ರವನ್ನು ನಿರ್ಮಿಸಲು ಪ್ರಯತ್ನಿಸೋಣ. ಗಂಡು ಹೆಣ್ಣೆನ್ನದೆ ಪ್ರತಿಯೊಬ್ಬರಿಗೂ ನ್ಯಾಯ ಹಾಗೂ ಪರಿಪೂರ್ಣ ಜೀವನ ಲಭಿಸುವಂತೆ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ವ್ಯವಸ್ಥೆಯನ್ನು ನಿರ್ಮಿಸೋಣ. ಈ ದಿಶೆಯಲ್ಲಿ ಮುನ್ನಡೆಯೋಣ.

"...ನಾಳಿನ ದಿನಗಳು ನಮ್ಮ ಪಾಲಿಗೆ ಸತತ ಸಂಶ್ರಮದ ದಿನಗಳು. ನಾವು ಕೈಗೊಂಡ ಪ್ರತಿಜ್ಞೆ ಈಡೇರುವವರೆಗೆ ಭಾರತದ ಎಲ್ಲಾ ಜನತೆಯ ಉದ್ಧಾರವಾಗುವವರೆಗೆ ನಮಗೆ ವಿಶ್ರಾಂತಿ ಇರಕೂಡದು ●

ಹನ್ನೊಂದನೇ

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಜನಪ್ರಿಯ ಆಂಗ್ಲ ಸ್ವಯಂಬೋಧಿನಿ ಬೆಲೆ : ರೂ. 2--00

Letter Writing Made Easy ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ನಾನಾ ತರದ ಪತ್ರವ್ಯವಹಾರ ನಡೆಸಲು ಸಹಕಾರಿಯಾದ, ವಿವಿಧ ಪತ್ರ ಸಂಕಲನ. ಬೆಲೆ : ರೂ. 1—50

ಮನೆ-ಮದ್ದು Home Remedies

ಡಾ| ವಿ. ಆರ್. ಕೊರಡ್ಕಲ್ಲಾರು ಬರೆದ, ಪ್ರತಿ ಮನೆಯಲ್ಲೂ ಇರಲೇಬೇಕಾದ ಅತ್ಯುಪಯುಕ್ತ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೆ ಮದ್ದು ಮಾಡುವ ಸುಲಭ ವಿಧಾನಗಳಿವೆ. ಹೆರಿಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಸಂಗ್ರಾಹ್ಯ ಪುಸ್ತಕ. ಬೆಲೆ : ರೂ. 2-00

ವಿ. ಸೂ. ವಿ. ಪಿ. ನೂಡುವುದಿಲ್ಲ. ಪುಸ್ತಕಪ ಬೆಲೆಯೊಂದಿಗೆ 80 ಪೈಸೆ ಆಂಚೆ ವೆಚ್ಚ ಸೇರಿಸಿ ಮನಿಯಾರ್ಡರು ಮಾಡಿದರೆ ಬುಕ್ ಪೋಸ್ಟ್ ಮೂಡಲಾಗುವುದು.

— ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ಪಾಲುಕೋಟೆ, ಉಡುಪಿ.

ಶ್ರೀ ಮೃತ್ಯುಂಜಯ

● ತಲೆ ಸಿಡಿತ ● ಪೈ ನೋವು
● ಉಳುಕು ತಿರುಕಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಆಮೃತಾಂಜನ ಲಿಮಿಟೆಡ್,
ಮದ್ರಾಸು-6

NAVAYUGA 24—8—1972
Registered with the Registrar of News Papers for India under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಅಪರಿಚಿತರ ಭೆಟ್ಟಿಯು ಇನ್ನೊಂದು ಅನುಭವ

ಅಪರಿಚಿತರು

ಶ್ರೀಮತಿ ಗೀತಾ ಕುಲಕರ್ಣಿ

ಒಂದು ರಜೆಯಲ್ಲಿ ಊರಿಗೆಂದು ಹೊರಟೆವು.

ಟೂರಿಸ್ಟ್ ಬಸ್ಸಿನಲ್ಲಿ ಒಂದು ಅಂಗುಲ ಜಾಗವಿಲ್ಲದಂತೆ ಜನರೇ ತುಂಬಿ ಕೊಂಡಿದ್ದ ಬಸ್ಸು ಭಂಡಿಪೂರ್ತಿಯ ನಿಸರ್ಗ ಸೌಂದರ್ಯದಲ್ಲಿ ಮುಳುಚ್ಚೆ ಹೋಗಿದೆ! ಜೆಲುವಿನ ಹಸಿರು ಕಣ್ಣು, ಮನಸ್ಸು ತಬ್ಬಿಕೊಂಡಿದೆ, ವನ್ಯಪ್ರಾಣಿಗಳು ಸ್ವೈರವಿಹಾರ ತಾವೇ ತಾವಾಗಿ ಅಲ್ಲಲ್ಲಿ ವಿಹರಿಸುವ ಮೈ ಮರೆಸುವ ರಮಣೀಯ ನೋಟ! ಕಣ್ಣಿನ ನೋಟ ಒಳಕ್ಕೆ ಓಡಿಹರೆ- ಜೊತೆವಕ್ಕಿಗಳಂತೆ ಅದೇ ಮೊದುವೆಯಾಗಿ ಮಧುಚಂದ್ರಮಕ್ಕೆ ಹೊರಟ್ಟಿದ್ದ ನಾಲ್ಕಾರು ಜೊತೆಗಳು- ಹಿಂದು, ಕ್ರೈಸ್ತ್, ಮುಸಲ್ಮಾನರು! ನಾಚಿಕೆಯೇ ಮೈವೆತ್ತಿ ಮುಖಕ್ಕೆ ಮುಸುಕು ಹಾಕಿ ಕಿವಿಯಲ್ಲಿ ಪಿಸುಗುಟ್ಟುವ ಅದೊಂದು ಕಣ್ ಸೆಳೆಯುವ ಚಿತ್ರ! ಬಸ್ಸಿಂದ ಸೋಲೆ ಎಲ್ಲ ತರಹ ಜನರೂ ಇರಲೇ ಬೇಕು. ಅದೇ ಬಸ್ಸಿನಲ್ಲಿ ಒಂದು ಕಾಲೇಜಿನ ಸಾಯಂಸ್ಸ್ ವಿದ್ಯಾರ್ಥಿಗಳ ತಂಡ Sight Seeing ಎಂದು ಬಹುಭಾಗ ಆಕ್ರಮಿಸಿಕೊಂಡಿತ್ತು. ವಿದ್ಯಾರ್ಥಿಗಳಿಂದ ಮೇಲೆ ಅದೊಂದು ಆನಂದ, ಉತ್ಸಾಹ, ಔನತ್ಯದಿಂದ ಪುಟಿಯುತ್ತಿತ್ತು. ಕಾಲೇಜಿನಲ್ಲಿ ಅವರನ್ನು ಹಿಡಿತದಲ್ಲಿ ಇಟ್ಟು ಕೊಳ್ಳುವುದೇ ಅಸಾಧ್ಯವೆಂದಿದ್ದಾಗ- ಇನ್ನು ಹೊರಗಿನ ಆವರಣದಲ್ಲಿ, ಕಟ್ಟು ಬಂಧನವಿಲ್ಲದೆ, ದೇವ ನಿರ್ಮಿತ ಹೊರಾಂಗಣದಲ್ಲಿ ಹಿಡಿಯುವವರಾರು? ಈಗ ಪ್ರೊಫೆಸರುಗಳೂ ಅವರೊಂದಿಗೆ ವಿದ್ಯಾರ್ಥಿಗಳೇ. ಅವರಿಗೂ ತಮ್ಮ ವಿದ್ಯಾರ್ಥಿ ಜೀವನದ ದಂಗಿನ ನೆನಪುಗಳ ಓಕುಳಿ ವೈಮನೆಲೆ ಜೆಲ್ಲಿಕೊಂಡಂತೆ! ಎಲ್ಲರ ಮುಖದಲ್ಲೂ ನಗು-ಸೀಟಿ!

ಇವರೆಲ್ಲರ ಹುಚ್ಚುಗಳು-ಪ್ರಾಯಸಂಪ್ರಯಾಣಿಕರಿಗೆ ತಲೆನೋವು! ಇನ್ನುಳಿದವರು ತಟಸ್ಥ ರಾಷ್ಟ್ರಗಳಂತೆ, ಯಂತ್ರಿಕವಾಗಿ ಬಸ್ಸಿನ ನೇರಕ್ಕೆ ಕಾಣುತ್ತಿರುವ ದಾರಿಯಲ್ಲಿ ಕಣ್ಣು ನೆಟ್ಟಿದ್ದಾರೆ. ಇಲ್ಲಿ ಪೀಕಲಾಟ ಬಂದದ್ದು ನವದಂಪತಿಗಳಿಗೆ!

ತನ್ನಿನಿಯ-ಕಾಲೇಜಿನ ಈ ಎರಡು ಜೆಡೆಯ ಹುಡುಗಿಯರ ನೋಡಿಗೆ ನಗುವ ಕೆಂದುಟಿಗಳಿಗೆ ಕಣ್ಣು ನೆಳೆದರೆ ? ತನ್ನವಳು-ಕಾಲೇಜು ಯುವಕರ ಹೇರ್ ಸ್ಟೈಲ್‌ಗೆ, ಫಿಟ್ ಪ್ಯಾಂಟಿಗೆ, ಕಣ್ಣಿನ ತುಂಟ ದೃಷ್ಟಿಯಲ್ಲಿ ತನ್ನ ವೈಮರೆತರೆ ? ಈ ಯೋಚನೆಗಳಿಂದಾಗಿ ಊಟಯಲ್ಲಿ ತಾವು ಕಳೆಯ ಬೇಕಾದ ಅಮೂಲ್ಯ ಕ್ಷಣಗಳಲ್ಲಿ ಎಲ್ಲಿ ಬಿರುಕು ಬಿಡಬಹುದೋ ? ಎನ್ನುವ ಚಿಂತೆ ಕೆಲವು ಕ್ಷಣ ಬಲವಾಗಿ ಕಾಡಿರಬೇಕು. ಆ ಮುಖಗಳಲ್ಲಿ ನಗು ಉತ್ಸಾಹ ಕಿವಿಯಲ್ಲಿ ಜೇನಿನ ಝೇಂಕಾರ ಎಲ್ಲವೂ ಸ್ಥಗಿತಗೊಂಡಂತಿದೆ. ಈ ವಿದ್ಯಾರ್ಥಿಗಳೆ ತಂಡ ಶತ್ರು ಕಂಡಂತೆ-ಟೂರಿಸ್ಟ್ ಬಸ್ಸು ತಮ್ಮೆಲ್ಲ ಸಂಭ್ರಮವನ್ನೇ ಕೊಚ್ಚಿಕೊಂಡು ಹೋಗುತ್ತಿದೆ ಏನೋ ಎನ್ನುವ ಭ್ರಮೆ ! ಆದರೆ ಇದನ್ನು ಯಾರಲ್ಲೂ ಬಾಯಿ ತೆರೆದು ಹೇಳಲೂ ಬಾರದು- ಬಾಯಲ್ಲೇ ನುಂಗಲೂ ಆಗದು !

ಈಗ ಸಿನೇಮಾದ ಪ್ರಣಯ ಗೀತೆಯೊಂದನ್ನು ವಿದ್ಯಾರ್ಥಿಗಳು ಜೊತೆ ಜೊತೆಯಾಗಿ ಹಾಡುತ್ತಿದ್ದಾರೆ. 'ಉಪಹಾರ'ವನ್ನು ಅದೇ ನೋಡಿದ ಪಸಿ ಹಸಿ ನೆನಪುಮದು ಮಕ್ಕಳ ಕಣ್ಣು-ಕಿವಿಯಿಂದ ಮೂಸಿಲ್ಲ ! ಹೃದಯದಲ್ಲಿ ಅರಳಿದ್ದ ಸುಹಾಸನೆಯ ಕಂಪು ಕರಗಿಲ್ಲ ! ಈಗ ಹಾಡಿನ ಹಿನ್ನೆಲೆಯಿಲ್ಲ. ಭಯಗೊಂಡಿದ್ದ ಮನಸ್ಸು ಉನ್ಮಾದದ ಗಾಳಿ ಹೆಡೆಯೊಡಿಸಿದೆ. ತುಟಿಯಲ್ಲಿ ನಗು ಅರಳಿ ಆ ಹಾಡುಗಳನ್ನು ತಾವೂ ಗುಣು ಗುಣಿಸಿದರೆ ಹೇಗೆ? ಎಂದುಕೊಳ್ಳುವಂತೆ ಇನ್ನೂ ಹತ್ತಿರ ಹತ್ತಿರಕ್ಕೆ ಸರಿಯುತ್ತಾರೆ! ಹಾಡು ಗಾಳಿಯೊಂದಿಗೆ ಕವಿಯಲ್ಲಿ ಹೊಕ್ಕು ಮನದ ಮಂದಾರವನ್ನು ಮೂಸಿದಂತಾಗಿದೆ.

"ಮೈ ಏಕ ರಾಜಾ ಹೂಂ| ತೂ ಏಕ ರಾನಿ ಹೈ| ಪ್ರೇಮ ನಗರಕಿ ಎ ಏಕ ಸುಂದರ ಪ್ರೇಮ ಕಹಾನಿ ಹೈ||

ಈಗ ತಟಸ್ಥ ರಾಷ್ಟ್ರಗಳೂ ಕವಿ ತಿರುಗಿಸಿ ಕೇಳುವ ಆಸೆಯೂದಂತಿದೆ! ಪ್ರಾಯ ಸಂದವರಿಗೂ, ಪ್ರಾಯ ಮರುಕಳಿಸುವ ಯೋಚನೆ ಬಂದಂತಿದೆ! ಪ್ರಯಾಣದ ಬೇಸರ, ಟೂರಿಸ್ಟ್ ಬಸ್ಸಿನ ನೆನಪೂ ಇಲ್ಲದೆ ಎಲ್ಲರೂ ಚಪ್ಪಾಳೆ ತಟ್ಟಿ ಹಾಡಿಗೆ ಸಾಥ್ ಕೊಡುತ್ತಿದ್ದಾರೆ. ದಾರಿ ಸಾಗುತ್ತಲೇ ಇದೆ. ಈಗ ಹಾಡು ಮುಗಿಯಿತು. ವಿದ್ಯಾರ್ಥಿಗಳ ಲೀಡರ್ ಪ್ಲಾಸ್ಟಿಕ್ ಬ್ಯಾಗಿನಲ್ಲಿದ್ದ ಪೆಪ್ಪರಮಿಂಟುತೆಗೆದು ಬಸ್ಸಿನಲ್ಲಿದ್ದ ಪ್ರಯಾಣಿಕರ ಕೈಯ್ಯಲ್ಲಿ ಎರಡೆರಡು ಇರಿಸುತ್ತಾ ಬಂದ. ಕೆಲವು ಕೈ ಮುಂದೆಬಂದರೆ ಇನ್ನೂ ಕೆಲವು ಹಿಂದಕ್ಕೆ ಉಳಿದವು. ಈಗ ವಿದ್ಯಾರ್ಥಿನಿಯರ ಟರ್ನ್. ಅವರೇಕೆ ತಾವು ಹಿಂದೆ ಎಂದುಕೊಂಡು, ತಾವು ತಂದಿದ್ದ ಹುರಿದ ನೆಲಗಡಲೆ ಗೇರುಬೀಜ ಹಂಚಲು ನಿಂತರೆ, ಯಾರ ಕೈಗಳೂ ಸಂಕೋಚದಿಂದಾಗಲೀ ಬೇಡವೆಂದಾಗಲೀ ಹಿಂದಕ್ಕೆ ಹೋಗಲೇ ಇಲ್ಲ!

ಒಂದೆರಡು ಗಂಟೆಯಲ್ಲಿ ಬಸ್ಸಿನ ಜನರೆಲ್ಲ ಒಂದೇ ಕುಟುಂಬದವರಾಗಿ ಬಿಟ್ಟದ್ದಾರೆ ನಗು ಮೂರು ಕೋರಸ್‌ನಲ್ಲಿ ಚಪ್ಪಾಳೆ ಹೊತ್ತು ಏರುತ್ತ ಹೊರಟಿದೆ. ನವದಂಪತಿಗಳ ಗುಂಪು ತಾವು ತಂದಿದ್ದ ಬಿಸ್ಕೀಟು, ಬಾಳೆಹಣ್ಣು, ಇನ್ನಿತರ ತಿಂಡಿಗಳಲ್ಲಿ ವಿದ್ಯಾರ್ಥಿಗಳಿಗೂ ಪಾಲುಕೊಟ್ಟಿದೆ. ಹಾಡಿನಿಂದ, ಕಥೆ, ಸುದ್ದಿಗಳ ಸುರಿಮಳೆಯಲ್ಲಿ "ಊಟಿ" ಬಂಪಾಗ ಬಸ್ಸು ಇಳಿಯುತ್ತಿದ್ದಂತೆ 'ಇನ್ನು ಯಾವಾಗ ಸಾವೆಲ್ಲ ಜೊತೆಯಾಗಿ ಕಳೆಯುವುದು' ಎಂಬು ಕೇಳುವ ವಿಶ್ವಾಸ ಉಂಟಾಗಿದೆ. ತಾವು ಒಂದೆರಡು ದಿನ ಇನ್ನೂ ಊಟಿಯಲ್ಲಿ ಇರಬೇಕಾಪೇಕ್ಷರು. ಆದರೆ ಈ ವಿದ್ಯಾರ್ಥಿಗಳು ಅದೇ ಸಂಜೆ ಮೈಸೂರಿಗೆ ಮರಳುವವರು. ಬೇಕೊಂಡುವ ಪ್ರಸಂಗದಲ್ಲಿ ಜೊತೆವಕ್ಕಿಗಳೂ ವಿದ್ಯಾರ್ಥಿಗಳೂ ಆಗಲಿಕೆಯ ನೋವು ಅನುಭವಿಸಿದ್ದೂ ನಿಜ!

ಮೂರು ದಿನಗಳ ಬಳಿಕ ಯಾವುದೋ ಟೂರಿಸ್ಟ್ ಬಸ್ಸು ಹೊರಟಿದೆ ಪುನಃ ಮೈಸೂರಿಗೆ! ಈ ಬಾರಿ ಸದ್ದು ಗದ್ದಲವಿಲ್ಲ! ಜೊತೆವಕ್ಕಿಗಳಿಗೆ ದಾರಿಯು ಇಕ್ಕೆಲಗಳಲ್ಲಿ ಕಾಣುವ ಜೆಲುವಿನ ಸೃಷ್ಟಿಯಲ್ಲೂ ಮನಸ್ಸು ರಂಜಿಸಲಿಲ್ಲ. ವಿದ್ಯಾರ್ಥಿಗಳು ಅಂದು ಹಾಡಿದ ಹಾಡನ್ನು ತಾನೇ ಮೆಲ್ಲನೆ ಗುಣಿಗುಣಿಸುತ್ತಿದ್ದಾರೆ. ಆಗ ಅವರ ಕಣ್ಣೆದುರು ಉತ್ಸಾಹದ ಬುಗ್ಗೆಗಳಂತೆ ವಿದ್ಯಾರ್ಥಿ ತಂಡ ಕಾಣುತ್ತಿದೆ. ಅವರ ಮುಗ್ಧ ಮನಸ್ಸಿನ ಸಿಹಿ ನೆನಪುಗಳು ನೆಲಗಡಲೆ, ಗೇರುಬೀಜ, ಪೆಪ್ಪರಮಿಂಟು ನೆನಪಾಗಿ ಬಾಯಿ ಚಪ್ಪರಿಸಿಕೊಳ್ಳುವಂತಾಗಿ ತಮ್ಮಲ್ಲೇ ನಗು ಹೊರ ಹೊಮ್ಮುತ್ತಿದೆ. ಏನೋ ಕಳೆದು ಕೊಂಡಂತೆ ಭಾಸವಾದಾಗ-ಆ ಮುಖಗಳು! ಮತ್ತೊಮ್ಮೆ ನೋಡಲು ಸಿಗಬಹುದೇ? ಅವರೆಲ್ಲರ ಪ್ರೀತಿ—ವಿಶ್ವಾಸ ತಮಗೆ ಮತ್ತೆ ದೊರೆಯಬಲ್ಲುದೇ? —ಅವರೆಲ್ಲ ಬಸ್ಸಿನಲ್ಲಿ ಕಂಡ ಅಪರಿಚಿತರಲ್ಲವೇ? ಎಂದು ಮನಸ್ಸು ನೊರೆಯುವುದನ್ನು ಯಾರೂ ಕೇಳಬಹುದು.

●●

ಮಾನವೀಯತೆಯ ದುರುಪಯೋಗವೆ?

(ಒಂದನೇ ಪುಟದಿಂದ)

ಡುತಿದ್ದುದು ವಾಸ್ತವಿಕಾಂಶವಾದರೂ ಈಗಿನ ಬದಲಾದ ಪರಿಸ್ಥಿತಿಯಲ್ಲಿ ಅದು ಹೊಸ ತಿರುವನ್ನೇಕೆ ಕಾಣಬಾರದು? ನೆರೆ ಕರೆ ಒಳ್ಳೆಯದಾದರೆ ನಮಗೂ ಒಳ್ಳೆಯದೇ ಆಲ್ಲವೆ?

ಆದುದರಿಂದ ಸಿಮ್ಲಾ ಸಮ್ಮೇಳನ ಪಾಕ್ ರಾಜ್ಯಕಾರಣಿಗಳಿಗೆ ತಮ್ಮ ಅಸತ್ ವರ್ತನೆಯನ್ನು ತಿದ್ದಿಕೊಳ್ಳಲಿರುವ ಕೊನೆಯ ಸದವಕಾಶ ನೀಡಿದೆ; ಭಾರತ ಸಂಪೂರ್ಣ ಸಹಾನುಭೂತಿಯಿಂದ ಇದರಲ್ಲಿ ವರ್ತಿಸಿದೆ. ಇದನ್ನು ಅದು ದುರುಪಯೋಗ ಪಡಿಸಿದರೆ, (ಇಂತಹ ಲಕ್ಷಣಗಳೀಗ ಗೋಚರವಾಗುತ್ತಿವೆ.) ನಾವದಕ್ಕೆ ಹೊಣೆಗಾರರಾಗಲಾರೆವು. ನಾಗರಿಕ ಜಗತ್ತೂ ಆಗ ನಮ್ಮನ್ನು ಬೊಟ್ಟು ಮಾಡಿ ತೋರಿಸಲು ಶಕ್ತವಾಗದು. ಆದುದರಿಂದ ಸಿಮ್ಲಾ ಸಮ್ಮೇಳನದ ಫಲಶ್ರುತಿಯನ್ನು ಪೂರ್ವಾಗ್ರಹಪೀಡಿತರಾಗಿ, ಏಕಪಕ್ಷೀಯವಾಗಿ ನೋಡುವುದನ್ನು ಬಿಟ್ಟು ನಿರ್ವಿಕಲ್ಪ ಮನಸ್ಸಿನಿಂದ, ದ್ವಿಪಕ್ಷೀಯವಾಗಿ ಮಾನವೀಯವಾಗಿ ಪರಾಂಬರಿಸಬೇಕು. ಆಗ ಪ್ರಧಾನಿ ಗಾಂಧಿಯವರ ನಿಲುಮೆ ಸಮರ್ಥನೀಯವೆನಿಸುತ್ತದೆ.

ಪಾಕ್ ರಾಜ್ಯಕಾರಣಿಗಳು ಭಾರತದ ಉದಾರತೆಯ ಬಗೆಗೆ ಭ್ರಮಪೂರ್ಣರಾಗಿ ಮುಂದೆಯೂ ವರ್ತಿಸಿದರೆ, ಆಗ ನಾವು ನಮ್ಮ ನಿಲುಮೆಯನ್ನು ಬದಲಾಯಿಸಲು ಸಂಪೂರ್ಣ ಸ್ವತಂತ್ರರಿದ್ದೇನೆ.

●●

ಕೂಡಪಕ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಶ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನೆ, ಸಕಲ ವಿಧದ ತಿಂಡಿತಿನಿಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ
ಬೆಲೆ 0-75 ಪೈಸೆ ಮಾತ್ರ.
ಒಂದು ರೂ. ಸ್ಟ್ಯಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.
ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್) ಉಡುಪಿ, ದ. ಕ.

Edited, Printed & Published by K. M. Shetty at the Navayuga Press, Udipi, S. India.

ವಿಶ್ವಾಸದಾಯಕ
ಆಯುರ್ವೇದ
ಔಷಧಗಳಿಗೆ
ವಿಶ್ವಾಸದ ಸಂಸ್ಥೆ:
ನಾಯಕ್ಸ
ಆಯುರ್ವೇದಾಶ್ರಮ
ಕಟಪಾಡಿ, ದ. ಕ.

ಮೇಲ್ದರ್ಜೆಯ
ಉಪಾಹಾರ
ಮಂದಿರ
ಉಡುಪಿ
ಶ್ರೀಕೃಷ್ಣ ವಿಲಾಸ
ಕಾರವಾರ

ಸಂಪುಟ ೫೧
ಸಂಚಿಕೆ ೫೧

NAVAYUGA

31-8-1972

ಶ್ರೀ ಕೆಂಗೆಲ್ಲರ ಬೆಂಗಳೂರು ವಾಸ

ದೇವರಾಜರಿಗೊಂದು ತಲೆಬೇನೆ

ಡಿಲ್ಲಿಯಿಂದ ಶ್ರೀ ಕೆಂಗೆಲ್ ಹನುಮಂತಯ್ಯನವರು ಬೆಂಗಳೂರಿಗೆ ಮರಳಿದರು ಎನ್ನುವುದು ಹೊರ ನೋಟಕ್ಕೆ ಸರಿ ಕಾಣುತ್ತದೆ. ಆದರೆ, ಶ್ರೀಮತಿ ಇಂದಿರಾ ಗಾಂಧಿಯವರೇ ಅವರನ್ನು ಕಳಿಸಿಕೊಟ್ಟರು ಎಂಬುದೇ ಸತ್ಯ ಸಂಗತಿ. ಶ್ರೀ ಕೆಂಗೆಲ್ಲರನ್ನು ಆಕೆ ಎಂದೋ ಕೈ ಬಿಡ ಬೇಕಾಗಿತ್ತು; ಆದರೆ ಅದೇಕೋ ಇಷ್ಟು ತಳುವಿನಲು. ಸಚಿವ ಸಂಪುಟದ ಪುನರ್ಘಟನೆಯ ನೆಪವನ್ನು ಆಕೆ ಮುಂದೆ ಮಾಡಿದ್ದರೂ, ಅದು ವಾಸ್ತವಿಕ ಕಾರಣವಲ್ಲವೆಂಬುದು ಎಲ್ಲರಿಗೂ ಗೊತ್ತು. ಏಕೆಂದರೆ ಮಹತ್ವಪೂರ್ಣ ಬದಲಾವಣೆಗಳಾವುವೂ ನಡೆಯಲೇ ಇಲ್ಲ. ಶ್ರೀಗಳಾದ ಹನುಮಂತಯ್ಯ ಮತ್ತು ಹಕ್ ಚೌಧುರಿಗಳನ್ನು ಉಳಿಸಿಕೊಂಡೇ ಶ್ರೀ ಧರ್ ಮತ್ತು ಶ್ರೀ ಪೈಯವರನ್ನು ಸಂಪುಟಕ್ಕೆ ಸೇರಿಸಿಕೊಳ್ಳುವುದು ಸಾಧ್ಯವಿತ್ತು.

ಕೆಂಗೆಲ್ಲರನ್ನು ಉದ್ದೇಶ್ಯ ಪೂರ್ವಕವಾಗಿಯೇ ಕೈಬಿಡಲಾಯ್ತೆಂಬುದು ನಿರ್ವಿವಾದ. ತೆರೆಯೊಳಗಿನಿಂದ ಬಂದ ಸುದ್ದಿಯಂತೆ ಶ್ರೀ ಕೆಂಗೆಲ್ ರಾಜಿನಾಮೆ ನೀಡಲು ಹಿಂದು ಮುಂದು ನೋಡಿದರೆಂದೂ, ಇದನ್ನು ಶ್ರೀಮತಿ ಗಾಂಧಿ ಪ್ರಧಾನವಾಗಿ ಗಮನಿಸಿ ಒಂದೊಮ್ಮೆ ಅವರು ರಾಜಿನಾಮೆ ನೀಡದೆ ಇದ್ದರೆ, ತಾನೇ ತನ್ನ ಸಂಪುಟದ ರಾಜಿನಾಮೆ ಸಲ್ಲಿಸಿ, ಹೊಸ ಸಂಪುಟವನ್ನು ಕೂಡಲೇ ರಚಿಸುವುದನ್ನು ಆಲೋಚಿಸಿದ್ದರೆಂದೂ ತಿಳಿಯುತ್ತದೆ. ಇದು ಸತ್ಯಕ್ಕೆ ಅತ್ಯಂತ ಸಮೀಪವಿದ್ದಿರುವುದರಿಂದ ಶ್ರೀ ಕೆಂಗೆಲ್ಲರನ್ನು ಉದ್ದೇಶ್ಯ ಪೂರ್ವಕವಾಗಿಯೇ ಆಕೆ ಕೈ ಬಿಟ್ಟರೆಂಬುದು ಒಪ್ಪತಕ್ಕ ಮಾತೇ.

ಶ್ರೀ ಕೆಂಗೆಲ್ ನಿಷ್ಕ್ರಿಯ ರಾಜ್ಯಕಾರಣವನ್ನು ಎಂದೂ ನೆಚ್ಚಿಕೊಂಡವರಲ್ಲ. ಅವರು ೧೯೩೬ರಲ್ಲಿ ಮೈಸೂರಿನ ಮುಖ್ಯ ಮಂತ್ರಿ ಸ್ಥಾನದಿಂದ ಉರುಳಿದ ಮೇಲೆ, ಮತ್ತೆ ಕೇಂದ್ರದಲ್ಲಿ ಮಂತ್ರಿಯಾದದ್ದು ೧೯೬೧ರಲ್ಲೇ. ಪಂ. ಜವಾಹರಲಾಲರೂ ಶ್ರೀಯುತರ ವ್ಯಕ್ತಿತ್ವ, ಜಾಣ್ಮೆ, ದಕ್ಷತೆಗಳನ್ನು ಪ್ರಶ್ನಾತೀತವೆಂದು ಒಪ್ಪಿಕೊಂಡರೂ ಅವರನ್ನು ಸಚಿವರಾಗಿ ತೆಗೆದುಕೊಳ್ಳಲೇ ಇಲ್ಲ. ಪ್ರಾಯಃ ಇವಕ್ಕೆಲ್ಲ ಶ್ರೀ ಕೆಂಗೆಲ್ ನಿಷ್ಠುರವಾದಿಗಳೂ ಸ್ಪಷ್ಟವಾದಿಗಳೂ ಆಗಿರುವುದೇ ಕಾರಣವಿರಬೇಕು. ಅಥವಾ, ರಾಜ್ಯದಲ್ಲಿ ಶ್ರೀಯುತರ ವಿರೋಧಿ ಗುಂಪು ಪ್ರಬಲವಾಗಿದ್ದುದರಿಂದ, ಈ ವಿರೋಧಿಗಳ ಒತ್ತಡದಿಂದ ಶ್ರೀ ಜವಾಹರರು ಶ್ರೀಯುತರನ್ನು ಕರೆಗಣಿಸಿದರೆಂದೂ ಹೇಳಬಹುದು. ಆದರೂ ಅಡಳಿತ ಸುಧಾರಣಾ ಆಯೋಗದ ಸದಸ್ಯರನ್ನಾಗಿ ಮಾಡಿ ಅವರು ಶ್ರೀ ಕೆಂಗಲ್ಲರನ್ನು ಸಕ್ರಿಯವಾಗಿರುವ ಅವಕಾಶ ನೀಡಿ ತಣ್ಣಗಾಗಿರಿಸಿದರು. ಆ ಬಳಿಕ ಲಾಲ ಬಹದ್ದೂರ್ ಮತ್ತು ಗಾಂಧಿ ಸಚಿವ ಸಂಪುಟಗಳಲ್ಲೂ ಶ್ರೀ ಕೆಂಗೆಲ್ಲರಿಗೆ ಸ್ಥಾನದೊರೆಯಲಿಲ್ಲ. ಶ್ರೀ ಮುರಾರ್ಜಿಯವರು ಸಚಿವರಾದ ಮೇಲೆ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷಪದ ಇವರಿಗೆ ದೊರೆಯಿತು. ಕಾಂಗ್ರೆಸ್ ಮಹಾವಿಘಟನೆಯ ನೇಳೆ ಶ್ರೀ ಕೆಂಗೆಲ್ ವ್ಯಕ್ತಿಗತ ಕಾರಣಗಳಿಂದ ತಮ್ಮ ಗುರು ಮುರಾರ್ಜಿಗೆ ತಿರುಮಂತ್ರ ನೀಡಿ ಶ್ರೀಮತಿ ಗಾಂಧಿಯ ಹಿಂದೆ ನಿಂತರು. ಆ ನೇಳೆ ರಾಜ್ಯದ ಎಂ ಪಿಗಳಲ್ಲಿ ತನ್ನ ಒಬ್ಬಬ್ಬರು ಸಮರ್ಥಕರಲ್ಲಿ ಆಕೆ ಕೆಂಗಲ್ಲರನ್ನು ಹತ್ತಿರ ಕರೆದು ಕೊಳ್ಳುವುದು ಅನಿವಾರ್ಯವಾಯ್ತು. ಮುಂದೆ ವಿಧಾನಸಭಾ ಚುನಾವಣೆಗಳಲ್ಲಿ ಶ್ರೀ ಕೆಂಗಲ್ಲರ ಬೆಂಬಲ ಬೇಕಾಗಿತ್ತು ಎಂಬುದರಿಂದಲೇ ೧೯೭೧ರಲ್ಲಿಯೂ ಮುಂತ್ರಿಯಾಗಿ ಅವರು ಮುಂದುವರಿದರು. ೧೯೭೨ರಲ್ಲಿ ಶ್ರೀ ಅರಸು ಅವರ ರಾಜ್ಯನಾಯಕತ್ವ ಪ್ರಶ್ನಾತೀತವೆಂದು ಚುನಾವಣೆ ಸಾರಿ ಹೇಳಿದ ಬಳಿಕ, ಕೆಂಗಲ್ಲರ ಅಪಮೌಲ್ಯವಾದದ್ದು ಸೋಜಿಗವೇನಲ್ಲ.

ತನ್ನನ್ನು ಸಚಿವಸ್ಥಾನ ಚ್ಯುತಗೊಳಿಸಿದ್ದು ಶ್ರೀ ಕೆಂಗಲ್ಲರಿಗೇ ಅಚ್ಚರಿಯ ಸಂಗತಿ. ತನ್ನ ಅನಿವಾರ್ಯತೆ ಆಕೆಗಿದೆಯೆಂದೇ ಇವರು ದೃಢವಾಗಿ ನಂಬಿದ್ದರು ತನ್ನನ್ನು ರಾಯಭಾರಿಯೋ, ರಾಜ್ಯಪಾಲನಾಗಿಯೋ ದೂರ ಕಳಿಸಲು ಆಕೆ ಯೋಚಿಸುತ್ತಿದ್ದಾಗ, ಇದೇ ಭಾವನೆಯನ್ನು ಆಕೆಗೆ ಮನವರಿಕೆ ಮಾಡಿಕೊಡುವ ಹಲವು ಪ್ರಯತ್ನಗಳನ್ನೂ ಮಾಡಿದರು. 'ನಾನು ಹೋಗೊಲ್ಲ ಎಂಬರೆ?' ಎಂಬ ಬೆದರಿಕೆಯನ್ನೂ ಹಾಕಿದರು. ತನ್ನನ್ನು ಉಳಿಸಿಕೊಳ್ಳಿ, ನಿಮಗೆ ಜಬರ್ದಸ್ತಾಗುತ್ತೆ ಎಂದು ಗೋಗರೆದರು. ಆದರೆ, ಶ್ರೀ ಕೆಂಗೆಲ್‌ರ ನಯ-ವಿನಯವೆಲ್ಲ ಪಾಪೆಯನ್ನು ತುಳಿಲ್ ಗೆಯ್ಯುಂತೆ ವ್ಯರ್ಥವಾಯ್ತು. ಕೊನೆಗೂ ಅವರಿಗೆ ಗೋಪಾಳ ಬುಟ್ಟಿಯನ್ನು ಶ್ರೀಮತಿ ಗಾಂಧಿ ಹಿಡಿಸಿಯೇ ಬಿಟ್ಟರು.

ಶ್ರೀ ಕೆಂಗೆಲ್ಲರ ಹುಟ್ಟುಗುಣ ಕ್ರಿಯಾಶೀಲತೆ. ಅವರು ಒಂದು ಕ್ಷಣವೂ ಸುಮ್ಮನುಳಿಯಲಾರರು. ಈ ಕಾರಣದಿಂದಲೇ ಅವರು ಕೊಡಮಾಡಿದ ರಾಜ್ಯಪಾಲ ಪದವಿಯನ್ನೋ ರಾಯಭಾರಿ ಹುದ್ದೆಯನ್ನೋ ತಿರಸ್ಕರಿಸಿದರು. ಈ ಗುಣದಿಂದಲೇ ರೇಲ್ವೆ ಶಾಖೆಯಲ್ಲಿ ಹೊಸ ಚೇತನ ಮೂಡಿಸುವ ಪ್ರಯತ್ನ ನಡೆಸಿದರು. ಗಾಂಗೂಲಿ ಪ್ರಕರಣವನ್ನೇ ತನ್ನ ಕಾಲುಗಳಿಗೆ ಎಳೆದುಕೊಂಡರು; ದಿಟ್ಟತನ ತೋರಿಸಿದರು. ಅವರು ಮಾಡಲು ಉದ್ಯೋಗವಿಲ್ಲದೆ ಕೈಕಟ್ಟಿ ಕೂತಿರುವುದನ್ನು ಅರಿಯರು. ನಿರುದ್ಯೋಗಿ ಸುತಿಪ್ಪಿನಿಗಿಂತ ನಿರುದ್ಯೋಗಿ ರಾಜಕಾರಣಿ ಅತ್ಯಂತ ಅಪಾಯಕಾರಿಯೆಂಬುದನ್ನು ನಮ್ಮ ರಾಜ್ಯಕಾರಣ ಸಾರಿ ಹೇಳುತ್ತಲೇ ಬಂದಿದೆ. ಆದುದರಿಂದಲೇ ಕೆಂಗೆಲ್ಲರಂತಹ ಸಮರ್ಥ ನಾಯಕರು ತೆಪ್ಪಗೆ ಕುಳಿತಿರುವುದು ಸಾಧ್ಯವಾಗದು. ಅವರು ಶ್ರೀಮತಿ ಗಾಂಧಿಯವರ ಪ್ರಬಲ ಸಮರ್ಥಕರೆಂಬುದರಿಂದ ಗಾಂಧಿ ನಾಯ್ಯವೀಗ ಚಲಾವಣೆಯಲ್ಲಿರುವುದರಿಂದ, ಅವರು ಡಾಳವುರುಳಿಸಿ ಹೊರಟರೆ ರಾಜ್ಯದ ರಾಜ್ಯಕೀಯವು ರುಳಿದರೂ ಉರುಳಬಹುದು.

ತಾನು ರಾಜ್ಯದ ರಾಜ್ಯಕೀಯದಲ್ಲೇ ಶೇಷಾಯುಷ್ಯ ಕಳೆಯುತ್ತೇನೆಂದು ನಿರ್ಧರಿಸಿದ ಶ್ರೀ ಕೆಂಗೆಲ್ಲರು ಆಳುವ ಕಾಂಗ್ರೆಸ್ಸಿನ ಶುದ್ಧೀಕರಣಕ್ಕೆ ಸೊಂಟ ಕಟ್ಟಿದ್ದಾರೆ. ಈ ಕಾರ್ಯ ನಡೆದಾಗ, ಸಚಿವ ಸಂಪುಟ ನೆಲಸಮವಾದರೂ ಅದೀತೆಂದು ಬೇರೆ ಹೇಳಿದ್ದಾರೆ. ಆದುದರಿಂದ ತನ್ನ ವ್ಯಕ್ತಿಗತ ಶಕ್ತಿಯಿಂದ ತನ್ನ ಅನುಯಾಯಿಗಳ ಬಲದಿಂದ ಶ್ರೀ ಕೆಂಗೆಲ್ ತನ್ನ ಬಣವನ್ನು ಬಲಗೊಳಿಸುವುದು, ಸಾಧ್ಯವಾದರೆ ತನ್ನವರನ್ನೋ ತನ್ನನ್ನೋ ಮುಖ್ಯಮಂತ್ರಿಯಾಗಿ ಆರಿಸಿಕೊಳ್ಳುವುದು ಆಶ್ಚರ್ಯವಲ್ಲ. ಶ್ರೀ ಅರಸರನ್ನು ತೋರಿಕೆಗೆ ನವತ್ರ ನಾಯಕರೆಂದು ಒಪ್ಪಿಕೊಂಡವರು ಹಲವರಿದ್ದಾರೆಂಬುದು ಸತ್ಯ. ಶ್ರೀ ಸಿದ್ಧವೀರಪ್ಪನವರು ತನಗಾದ ಗಾಯವನ್ನು ಮರೆತು ಸುಮ್ಮನುಳಿಯುವುದು ಕೊನೆಯವರೆಗೂ ಸಾಧ್ಯವಾಗದು. ಅಲ್ಪಸಂಖ್ಯಾಕರನ್ನೇ ಎತ್ತಿ ಕಟ್ಟಿರುವರೆಂಬ ಆರೋಪ ಶ್ರೀ ಅರಸರ ಮೇಲೆ ಬಹು ಸಂ

(ಎಂಟನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತೆರನ ಬ್ಯಾಂಕಿಂಗ್ ವ್ಯವಹಾರಗಳಿಗೆ
172 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಶೇವಣಾತಿಗಳ ಮೇಲೆ 7½ % ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4 % ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
(ಸ್ಥಾಪನೆ: 1931)
ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1.

ಎಮ್. ಸುಂದರ್‌ರಾಮ್ ಶೆಟ ್ಟಿ,
ಚೆಯರ್‌ಮೆನ್.

ಶ್ರೀ ಯ. ನಾ. ಉಡುಪ.

ಗೀತಾವಾಕ್ಯ

(ಚಿಕ್ಕ ದೃಶ್ಯ)

ಪಾತ್ರಪರ್ಚ –

ವಿಠಲೋಪಾಧ್ಯಾಯರು – ಗೀತಾನುಯಾಯಿ ಮತ್ತು ಹಿನಿವಿಜ್ಞಾಂಸರು.

ಜಾನಕಮ್ಮ – ಉಪಾಧ್ಯಾಯಂಗ ಪತ್ನಿ.

ಕೃಷ್ಣ ಮತ್ತು ಶ್ರೀನಿವಾಸ – ಶಿಷ್ಯರು.

ಶ್ರೀ ಕೃಷ್ಣ.

ಹಾಲು ಮಾರುವ ಹುಡುಗ, ಹೊರೆಯಾಳುಗಳು, ಸಾಹುಕಾರ ಮತ್ತು ಶ್ರೀಮಂತ.

ದೃಶ್ಯ ೧

(ಪಂಡರ ಪುರವ ನಿಟ್ಟಲೋಪಾಧ್ಯಾಯರ ಸಾಮಾನ್ಯತರನ ಮನೆಯ ಒಂದು ಕೊಠಡಿ. ಗೋಡೆಗಳೆಲ್ಲಾ ಶ್ರೀಕೃಷ್ಣನ ಚಿತ್ರ ವೈವಿಧ್ಯಗಳಿಂಪಲಂಕೃತವಾಗಿವೆ. ಪಾತ್ರ ಪರಿಚಯಗಳನ್ನೆಲ್ಲಾ ವ್ಯವಸ್ಥೆಯಿಂದಿರಿಸಿದ್ದಾರೆ. ಒಂದು ಮೂಲೆಯಲ್ಲಿ ಮಣೆಯ ಮೇಲೆ ಓಲೆಯ ಪುಸ್ತಕಗಳ ಹೊರೆ ಇಡಲ್ಪಟ್ಟಿದೆ. ಉಪಾಧ್ಯಾಯರ ಹೆಂಡತಿ ಜಾನಕಮ್ಮನು ದಾಸರ ಕೀರ್ತನೆ ಹಾಡುತ್ತಾ ಮನೆಕೆಲಸದಲ್ಲಿ ತತ್ಪರರಾಗಿದ್ದಾರೆ. ಒಬ್ಬ ಹುಡುಗನು ಒಂದು ಬಿಂದಿಗೆ ಹಾಲು ಹಿಡಿದುಕೊಂಡು ರಂಗ ಪ್ರವೇಶಿಸುತ್ತಾನೆ.)

ಹುಡುಗ– ತಾಯಿ, ಹಾಲು ತೆಗೆದು ಕೊಳ್ಳಿ.

(ಜಾನಕಮ್ಮನು ಕೀರ್ತನೆಯಲ್ಲಿ ತನ್ಮಯರಾಗಿಯೇ ಇದ್ದಾರೆ. ಹುಡುಗನು ಇನ್ನೂ ಗಟ್ಟಿಯಾಗಿ)

ಹುಡುಗ– ತಾಯಿ, ಹಾಲು ತೆಗೆದು ಕೊಳ್ಳಿರಿ ಹಾಲು (ಕೀರ್ತನೆ ನಿಲ್ಲುವುದು)

ಜಾನಕಮ್ಮ– ಯಾರದು ಹೊರಗೆ? (ಸ್ವಲ್ಪ ದನಿಏರಿಸಿ) ಕರೆದಿರಾ? ಮಗೂ ಕೃಷ್ಣಾ, ಹೊರಗೆ ಯಾರು ನೋಡು, (ನಿಶ್ಶಬ್ದ) ಶ್ರೀನಿವಾಸನೂ ಇಲ್ಲವೆ?

ಹುಡುಗ– ತಾಯಿ, ಹಾಲು ತಂದಿದ್ದೇನೆ. ತೆಗೆದು ಕೊಳ್ಳುವಿರಾ?

ಜಾನಕಮ್ಮ– ಹಾಲುತಂದೆಯೊ? ಬಂದೆ ಮಗೂ, (ಜಾನಕಮ್ಮನು ಹೊರಬಂದು ಹಾಲು ಪಡಚಿಕೊಳ್ಳುವರು. ಹುಡುಗನು ಬಿಂದಿಗೆಯೊಡನೆ ಹೊರಟು ಹೋಗುವನು ಆಳೊಬ್ಬನು ಬಂದು ದೊಡ್ಡ ಹೊರೆಯನ್ನು ತಂದು ಉಪಾಧ್ಯಾಯರ ಮನೆಯಲ್ಲಿ ಇಳಿಸುವನು. ಜಾನಕಮ್ಮನು ಬೆರಗು ದೃಷ್ಟಿಯಿಂದ ನೋಡುತ್ತಿದ್ದಾರೆ.)

ಜಾನ– ದೊಡ್ಡ ಹೊರೆ ಹೊತ್ತು ದಣಿದಿರುವೆ. ಬಾಯಾರಿಕೆಗೆ ಮಜ್ಜಿಗೆ ನೀರಿದೆ. ತೆಗೆದು ಕೊಳ್ಳಬಹುದೇ? ಅಥವಾ ಅಮೃತ ಪಾನಕ ಮಾಡಿ ತರಲೆ?

ಆಳು–ಬೇಡ ತಾಯಿ. ನಮಗೆ ನಿಮ್ಮಂತಹ ಭಾಗ್ಯಲಕ್ಷ್ಮಿಯರ ಮತ್ತು ಉಪಾಧ್ಯಾಯರಂತಹ ದೇವತಾ ಮೂರ್ತಿಗಳ ದರ್ಶನ-ಛಾಪಣಕ್ಕಿಂತ ಅಪ್ಯಾಯನಕರವಾದುದು ಯಾವುದು?

ಜಾನ– ಇದನ್ನು ಯಾರು ಕಳುಹಿಸಿದರು?

ಆಳು– ನಮ್ಮ ಸಾಹುಕಾರರಾದ ಕೃಷ್ಣಪ್ಪನವರು ತಾಯಿ. ಒಂದು ವಾರಕ್ಕೆ ಕಡಿಮೆ ಬೀಳದಷ್ಟು ಸಾಮಗ್ರಿಗಳಿವೆಯಂತೆ. ಆಕ್ಕೆ ಮೂಟೆಯನ್ನು ಈಗಲೇ ಕಳುಹಿಸಿಕೊಡುತ್ತಾರೆ. (ಆಳು ಹೋಗುವನು)

ಜಾ– ಪತಿದೇವರು ನಿಜವಾಗಿಯೂ ದೇವತಾ ಸ್ವರೂಪಿಗಳು. ಇಲ್ಲದಿದ್ದರೆ ನೂರಾರು ವಿದ್ಯಾರ್ಥಿಗಳ ಉದರಭರಣ ಕಾರ್ಯವು ದಟ್ಟದರಿದ್ರರಾದ ನಮ್ಮಿಂದ ಹೇಗೆ ಸಾಗಬೇಕು? ಇವರ ವಿದ್ಯಾದಾನವು ಹೇಗೆ ಸಮರ್ಪಕವಾಗಿ ನಡೆಯಬೇಕು? ನಮ್ಮವರ ಬಾಯಿಯಿಂದ ಹೊರಹೊಮ್ಮುವ ಮಾತುಗಳೆಲ್ಲಾ ಜನರಿಗೆ ಸುಧಾಬಿಂದುಗಳೇ. ಹಾಗಾಗದಿದ್ದರೆ ಇಂದಿನ ಪಂಡರಪುರವೇ ಉಪಾಧ್ಯಾಯರ ವಾಡೆಯ ಖರ್ಚುವೆಚ್ಚಗಳನ್ನು ಹೊರುವುದೆಂತು? ಅನಸ್ಯಗತಿಕರಿಗೆ ಆಶ್ರಯ ಗತಿಯೆಂಬುದು ಸತ್ಯ. ಕರ್ಮದಲ್ಲಿ ಫಲದಾನೆಯನ್ನು ಬಿಟ್ಟು ಕರ್ತವ್ಯಕ್ಕಾಗಿ ಕರ್ತವ್ಯನೂಡಬೇಕೆಂಬುದೂ ಸತ್ಯ. ಹಾಗಾದರೆ ಅವರ ದಿವ್ಯವಾಣಿಗಳಲ್ಲಿ ವಿಷ್ಯವೂವುದು? ಎಲ್ಲಾ ಸತ್ಯ ಶುಭ,ಮಂಗಳ. (ಶಿಷ್ಯರಿಬ್ಬರೂ ಹೊರೆಯನ್ನು ಹಿಡಿದುಕೊಂಡು ಒಳಗೆ ಸಾಗಿಸುವರು. ಜಾನಕಮ್ಮನು ಕೃಷ್ಣಮೂರ್ತಿಯ ಪಟವನ್ನು ನೋಡುತ್ತಾ)

ಜಾನ– (ಸ್ವ) ನನಗಂತೂ ಮಕ್ಕಳಿಲ್ಲ; ಉಪಾಧ್ಯಾಯರೊಡನೆ ಈ ಪ್ರಸ್ತಾಪವೆತ್ತಿದೆ. 'ಅಪುತ್ರಸ್ಯ ಗತಿರ್ನಾಸ್ತಿ' ಎನ್ನುವಾಗ ನನ್ನ ಕಣ್ಣಲ್ಲಿ ನೀರು ತುಂಬಿತು. ಅವರು ಅಳುತ್ತಿದ್ದೀಯೊ ಎಂದು ಕೇಳಿದರು. ಆಗ ಅವರ ಸ್ವರದಲ್ಲಿ ಸ್ಥಿರತೆಯ ಕೌತೂಹಲವಿತ್ತು. ಅವರು ಅಗ್ನಿಕುಂಡದ ನಡುವಿನಲ್ಲಿದ್ದೂ ಕರಗದ ನವನೀತ! ಗೃಹದಲ್ಲಿ ವಾಸ ಮಾಡುವ ಪಾವನ ಸನ್ಯಾಸಿ!ನಾನು ಕಣ್ಣೀರನ್ನು ಒರೆಸಿಕೊಂಡು–'ಏಕೋ ಅಳು ಬಾತು. ಇನ್ನು ಅಳುವುದಿಲ್ಲ' ಎಂದೆ. ಆಗ ಅವರು 'ಜಾನಕಿ, ನಮ್ಮ ಸಂಸಾರವು ಹೊರಗಿದೆ ನೋಡು. ಜ್ಞಾನಾರ್ಜನೆಗಾಗಿ ಶ್ರಮಪಡುತ್ತಿರುವ ವಿದ್ಯಾರ್ಥಿಗಳು ಯಂದೆಂದು ತಿಳಿದಿದ್ದಿ? ಅವರೆಲ್ಲಾ ನನ್ನ ನಿನ್ನ ಮಕ್ಕಳಲ್ಲವೆ? ನಿನ್ನನ್ನವರು 'ಅಮ್ಮಾ' ಎಂದು ಕರೆದಾಗ ನಿನಗೆ ಮಾತೃ ಸ್ನೇಹವು ಹಸಿಯುದಿಲ್ಲವೆ? ಅಲ್ಲದೆ, ನಮಗೆ ಪಾನು ಬರೆದ ಬರಹಗಳು ಅಜರಾಮೃತ ಪುತ್ರರತ್ನಗಳು. ಈ ವಿದ್ಯಾರ್ಥಿಗಳು ಅವಕ್ಕಿಂತ ಕಡಿಮೆಯವರಲ್ಲ. ಗೀತೆಯಲ್ಲಿ ಭಗವಂತನಾದರೂ ಸಂಸಾರ ವ್ಯಾಪಾರಕ್ಕೆ ಪ್ರೋತ್ಸಾಹ ಕೊಟ್ಟಿಲ್ಲ. ಮಾಂಸಪಿಂಡಗಳು ಮಾತ್ರ ಪುತ್ರರೆಂದು ಭಾವಿಸಬೇಡ. ಚಿರ ಯಶ ಪ್ರದಾಯಕವಾದ ಕಾರ್ಯಗಳ ಸತ್ಫಲಗಳೆಲ್ಲಾ ಅಮರ ಶಿಶುಗಳೇ. ನಾನೇನು ಮೂಡಲಿ? ಗೀತೆಯೇ ನನ್ನನ್ನು ಸಿರು; ಗೀತೆಯೇ ನನ್ನ ಪಂಚಪ್ರಾಣ; ಗೀತಾ ವಾಕ್ಯವೇ ನನ್ನ ಬಾಳ್ವೆಯ ಬೆಳಕು. ನೀನು ನನ್ನ ಸಹಧರ್ಮಿಣಿ'—ಎಂದರು. ನನ್ನ ಪತಿಗಳು ನಿಜವಾಗಿಯೂ ದೇವರು. ನಾನು ಹೆಂಗಸು. ಹೆಂಗಸಾದ ನನ್ನಲ್ಲಿ ಆಗಾಗ ಹೆಂಗರುಳು ಅದುಮುತ್ತಿರುವುದೇಕೆ? ಪತಿದೇವರ ದಿವ್ಯ ವಾಣಿಗಳು ನನಗಿನ್ನೂ ಔಷಧವಾಗಿಯೇ ಇದೆಯಲ್ಲದೆ ಆಹಾರವಾಗಿಲ್ಲ. ಪತಿಗಳ ಸಾರಮೂರ್ತಿಕವೇನೋ ನಿಗೂಢವಾದುದು. ಆದರೆ ಬೈನಿಕ ಬಾಳ್ವೆಯನ್ನೂ ಪರಮಾತ್ಮಾವಲಂಬನದಿಂದಲೇ ಸಾಗಿಸಬೇಕೆಂದರೆ ಅದೆಷ್ಟು ದಿನ ಸಾಗೀತು? (ಮೌನದಿಂದ ಯೋಚಿಸುವಳು. ಶಿಷ್ಯನೊಬ್ಬನು ಪ್ರವೇಶಿಸುವನು.)

ಶಿಷ್ಯ—ತಾಯಿ, ಉಪಾಧ್ಯಾಯರು ಆಹ್ನಿಕ ಮುಗಿಸಿ ದೇವತಾರ್ಚನೆಗೆ ಬರುತ್ತಿದ್ದಾರೆ.

(ಜಾನಕಮ್ಮ ಮತ್ತು ಶಿಷ್ಯರು ಒಳಗೆ ಹೋಗುವರು.)

ದೃಶ್ಯ– ೨

(ಉಪಾಧ್ಯಾಯರ ದೇವಪೂಜಾ ಮಂದಿರ. ಪಾರ್ಥ ಸಾರಥಿಯ ದಿವ್ಯ ಮೂರ್ತಿಯು ತುಲಸಿ, ಪುಷ್ಪ ಮತ್ತು ಗಂಧಗಳಿಂದ ಥಳಾಗಿ ತೋರುತ್ತಿದೆ. ಉಪಾಧ್ಯಾಯರು ಸ್ಪಷ್ಟವಾಗಿ ಮಂತ್ರೋಚ್ಚಾರ ಮಾಡುತ್ತಾ ಮಂಗಳಾರತಿ ಮಾಡುತ್ತಿದ್ದಾರೆ. ಶಿಷ್ಯರು ಗಂಟೆ, ಜಾಗಟೆ, ತಾಳಗಳನ್ನು ಬಾರಿಸುತ್ತಿದ್ದಾರೆ. ಶಂಖ ಕೇಳಿಸುತ್ತಿದೆ. ಜಾನಕಮ್ಮನು ಕೈ ಮುಗಿದು ನಿಂತಿದ್ದಾರೆ. ಉಪಾಧ್ಯಾಯರು ವಿದ್ಯಾರ್ಥಿಯೊಬ್ಬನ ಕೈಗೆ ಆರತಿಯನ್ನು ಕೊಟ್ಟು ದೇವ ದೇವನ ಮುಂದೆ ಸಾಷ್ಟಾಂಗ ನಮಸ್ಕಾರ ಮಾಡುವರು. ಆರತಿಯನ್ನು ಪಡೆದ ಜಾನಕಮ್ಮನೂ ಶಿಷ್ಯರೂ ಪರಮಾತ್ಮನಿಗೆ ನಮಸ್ಕರಿಸುವರು. ಮುಂದೆ ಕ್ರಮವಾಗಿ ಜಾನಕಮ್ಮ ಮತ್ತು ಶಿಷ್ಯರು ಉಪಾಧ್ಯಾಯರಿಂದ ತೀರ್ಥ ಪ್ರಸಾದವನ್ನು ಪಡೆದು ಅವರಿಗೆ ನಮಸ್ಕರಿಸಿ ಹೋಗುತ್ತಾರೆ.)

ವಿಟ್ಠಲೋಪಾಧ್ಯಾಯರು. ಕೃಷ್ಣಾ, ನುನೆಯ ಹಜಾರದಲ್ಲಿ ನಿಂತವರಿಗೆ ತೀರ್ಥ ಪ್ರಸಾದಗಳನ್ನು ಹಂಚಿಯಾಯಿತೆ?

ಕೃಷ್ಣ—ಗುರುಗಳೇ ಇಂದು ತೀರ್ಥಪ್ರಸಾದ ಪಡೆಯಲು ಹಜಾರದಲ್ಲಿ ಒಂದು ನರ ಹುಳವೂ ಇಲ್ಲ.

ಉಪಾ—ಒಬ್ಬರೂ ಇಲ್ಲ?

ಕೃ —ಒಬ್ಬರೂ ಇಲ್ಲ ಗುರುಗಳೆ!

ಉಪಾ—ಆಶ್ಚರ್ಯ, ಪರಮಾಶ್ಚರ್ಯ! ವಿಟ್ಠಲನ ನಾನ್ನಿಧ್ಯದಿಂದ ಭೂ ವೈಕುಂಠವೆನ್ನಿಸಿದ ಈ ಕ್ಷೇತ್ರದಲ್ಲೂ ದೇವರಲ್ಲಿ ತಾತ್ಸಾರವೆ?

ಶ್ರೀನಿವಾಸ—ನಿನ್ನೆಯ ನಿಷ್ಕು ಹೊಲೆಯರ ಕೂಸಿನ ಸಂಸ್ಪರ್ಶವು ಬ್ರಾಹ್ಮಣ ಮತ್ತು ಆಸ್ತಿಕ ವರ್ಗಕ್ಕೇ ಅಸಹ್ಯವನ್ನುಂಟು ಮಾಡಿದೆ. ಹೊಲೆಯರ ನೆರಳಿನ ಸಂಸ್ಪರ್ಶವೂ ನಿಷೇಧವೆಂದಿರುವಾಗ ಮುಳುಗುತ್ತಿರುವ ಆ ಶೂದ್ರ ಬಾಲಕನನ್ನು ಕೈಯಿಂದ ಎತ್ತಿ ತರಬಹುದೆ?

ಉಪಾ—ಯಾಕಾಗದು? ನಡಿಯಲ್ಲಿ ಮುಳುಗಿ ಸಾಯುತ್ತಲಿದ್ದ ಅಂತ್ಯಜರ ಕುಮಾರನನ್ನು ಮೇಲಕ್ಕೆತ್ತಿದುದಿ?

ಶ್ರೀ—ಹೌದು ಹೌದು ಅದೇ. ನೀವು ಆಚಾರ್ಯರಾಗಿದ್ದು–ಅದೂ ಮಿಂದ ಮೇಲೆ ಆಹ್ನಿಕ ಮಾಡುವ ಕಾಲದಲ್ಲಿ—ಹೊಲೆಯನನ್ನು ಮುಟ್ಟಿದುದು ಶಾಸ್ತ್ರಕ್ಕೆ ಹಿತವಲ್ಲದ ವಿಚಾರವಂತೆ. ಕೆಲವರು ನಿಮ್ಮ ಕುರಿತು–ಓದುವುದು ಶಾಸ್ತ್ರ; ಹಾಕುವುದು ಗಾಳ ಎನ್ನುತ್ತಿರುವುದನ್ನು ಕವಿಯೂರಿ ಕೇಳಿದ್ದೇನೆ.

ಉಪಾ— ಮಗೂ, ಜನತೆಗಿನ್ನೂ ಜನಾರ್ದನನ ಹೃದಯ ತಿಳಿದಿಲ್ಲ. ಸಾಯುತ್ತಿದ್ದ ಹೊಲೆಯ ಬಾಲನಿಗಾಗಿ ಆತನ ತಾಯಿಯ ಭೀಕರ ಕರುಣ ಆಕ್ರಂದನವು ನನ್ನ ಕಿವುಳನ್ನು ಕರಗಿಸಿತು. ಮಾನವನ ರೋದನಕ್ಕೆ ಮಾನವನು ಮರುಗಬಾರದೆಂದು ಶಾಸ್ತ್ರವು ವೈಶಾಚಿಕ ಹೃದಯವನ್ನು ಬೋಧಿಸುವುದೆ? ಆಗ ಮರಣೋನ್ಮುಖನಾದ ಹಸುಳೆಯನ್ನು ಶಿಲಾಪ್ರತಿಷ್ಠಾಯಂತೆ ನೋಡುತ್ತಾ ನುಮ್ಮನೆ ಕುಳ್ಳಿರ ಬೇಕಿತ್ತೆ? ಹೀಗೆ ಯಾಪ ಶಾಸ್ತ್ರವು ಪೇಳುವುದು? ಶಾಸ್ತ್ರವು ಹೊಲೆಯಪ್ಪ ಜೀವಿತವನ್ನು ಒಂದು ವ್ಯಾಣಿ ಜೀವನಕ್ಕಿಂತ ಕಡಿಮೆಯೆಂದು ಹೇಳಿದರೆ ಅದು ಶಾಸ್ತ್ರವಲ್ಲ; ಶಸ್ತ್ರ. ಹಾಗೆ ಹೇಳುವವನು ಶಾಸ್ತ್ರಿಯಲ್ಲ; ಶಸ್ತ್ರಿ. ಹೊಳೆಯಲ್ಲಿ ಮುಳುಗುತ್ತಿರುವ ಒಂದು ನಾಯಿ ಮರಿ, ಒಂದು ಬೆಕ್ಕಿನ ಕಂದನನ್ನು ಕಂಡು ಮನುಷ್ಯನು–ಅಯ್ಯೋ!ಪಾಪ, ಎಂದು ಕನಿಕರಿಸಿ ಅದರ ಬಾಳ್ವೆಯನ್ನು ಬಚಾಯಿಸಲು ಯತ್ನಿಸುತ್ತಾನೆ. ಹಾಗೆಂದ ಮೇಲೆ ಚಂಡಾಲ ಬಾಲನ ಜೀವನವು ಅಡಕ್ಕಿಂತ ಹಗುರವಾದುದೇ? ಆ ಬಾಲನ ಮರಣದಿಂದ ಆತನ ತಾಯಿಯು ಎಷ್ಟು ಗೋಳಿಡ ಬಹುದು? ಇದನ್ನು ನೆನೆಸಿಕೊಂಡರೆ ಈಗ ನನಗೆ ಕಣ್ಣೀರು ತುಂಬುತ್ತದೆ; ಎದೆ ಸೀರು ಬಿಟ್ಟಂತಾಗುತ್ತದೆ. ಗೀತೆಯಲ್ಲಿ 'ವಿದ್ಯಾವಿನಯ ಸಂಪನ್ನನಾದ ಬ್ರಾಹ್ಮನನ್ನೂ, ಗೋವನ್ನೂ, ಆನೆಯನ್ನೂ, ನಾಯಿಯನ್ನೂ, ಹೊಲೆಯ ನನ್ನೂ, ಪಂಡಿತನನ್ನೂ ಸಮದೃಷ್ಟಿಯಿಂದ

(ಹನ್ನೊಂದನೇ ಪುಟ ನೋಡಿರಿ)

ಸಂದರ್ಶಿಸಿರಿ! — ಸೌತ್ಯಪ್ಪನಾಗಿರಿ!!
ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಜಿನ್ನಾಭರಣಗಳಿಗೆ ಹೆಸರಾಂತ
ಎಸ್. ಎಲ್. ಶೇಟ್ಸ್ ಡೈಮಂಡ್ ಹೌಸ್
ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ
ಅಶೋಕ ಸ್ಟೈನ್‌ಲೆಸ್ ಸ್ಟೀಲ್ಲು ಸೆಂಟರ್
=ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ=
ಏಡಿಯಲ್ ಫೋಟೋ ಹೌಸ್ PHONE: 3131
ಆಗ್ಫಾ ಕೊಡಕ್, ಇಲ್‌ಫೋರ್ಡ್ ಗೆನರ್ಸ್ ಮತ್ತು ಹಿಂದು ಫಿಲ್ಮುಗಳ
ಅಧಿಕೃತ ಮಾರಾಟಗಾರರು.
ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು–1
Tele: GOLDKING Estd: 1947 Phone: 3242 Res: 3272

ಸ್ಥಾಪನೆ: 1931

ಶ್ರೀ

ನವಯುಗ

ಶ್ರೀ

ಪ್ರತಿ ಗುರುವಾರ ಪ್ರಕಟವಾಗುವ
ಸಾರಪತ್ರಿಕೆ
ಉಡುಪಿ, ಪಿ. ಕೆ.

NAVAYUGA

(Published every Thursday)

UDIPI, S. K.

ಸಂಪುಟ 51
ಸಂಚಿಕೆ 51

ಸಂಸ್ಥಾಪಕರು:
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು:
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 12
ಎರಡು ವರ್ಷಗಳಿಗೆ ರೂ. 20
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ ೦–೨೫

ಚಿಕ್ಕ ಜೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗ ಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ಸಾಲ್ಕು ದಿನ ಮುಂಚಿತ ವಾಗಿಯೇ ನಮ್ಮ ಕೈಸೇರಬೇಕು.

ವ್ಯಾಪಾರಿ ವರ್ಗದ ಧರ್ಮವ್ಯಾಖ್ಯೆ ಜಾಗ್ರತೆ ಬದಲಾಗಬೇಕು

ಆಹಾರದಷ್ಟು ಅವಶ್ಯಕ ವಸ್ತುವಿನ್ನೊಂದಿಲ್ಲವೆಂಬುದು ಹಿಂದಿನಿಂದಲೂ ನುಡಿದು ಬಂದ ಮಾತು. ಇಂದಿಗೂ ತಾತ್ತ್ವಿಕವಾಗಿ ಆಹಾರವೇ ಅವಶ್ಯಕವಲ್ಲವೆನ್ನುವವರು ಕೆಲವರಿರಬಹುದಾದರೂ ಅದೂ ಅವಶ್ಯಕವೆನ್ನುವುದನ್ನು ಯಾರೊಬ್ಬರೂ ನಿರಾಕರಿಸುವುದಿಲ್ಲ. ನಮ್ಮ ದೇಶ ಸ್ವಾತಂತ್ರ್ಯ ಪಡೆದಂದಿನಿಂದ ಆಹಾರೋತ್ಪಾದನೆಯನ್ನು ಹೆಚ್ಚಿಸುವತ್ತ ಪ್ರಯತ್ನ ನಡೆಸಿದೆ; ಇತ್ತೀಚೆಗಿನ ಐದು ವರ್ಷಗಳಲ್ಲಿ ಅತ್ಯದ್ಭುತವಾದ ಹಸಿರು ಕ್ರಾಂತಿಯನ್ನೂ ಸಾಧಿಸಿದೆ. 'ಆಹಾರ ಧಾನ್ಯಗಳ ಉತ್ಪಾದನೆ ಹೆಚ್ಚಿದ್ದನ್ನು ನಾವೀ ದೆಸೆಯಲ್ಲಿ ಸ್ವಾವಲಂಬಿಗಳೆಂದೂ ಹೇಳಲಾಯ್ತು. ವಿದೇಶಗಳಿಂದ ಆಯಾತನನ್ನೂ ನಿಲ್ಲಿಸಲಾಯ್ತು. ಅಪಶ್ಚಿತ ಸಮುಯಕ್ಕೊದಗಲೆಂದು ರಾಜ್ಯ ಸರಕಾರಗಳೂ ಆಹಾರ ಧಾನ್ಯಗಳ ಮಹಾ ಮಂಡಳಿಯೂ ಧಾನ್ಯ ಸಂಗ್ರಹಿಸುವುದು ಪರಿಪಾಠವಾಯ್ತು. ಇದೆಲ್ಲಾ ಹೆಸ್ಸಾಗಿಯೇ ನಡೆಯುತ್ತಿರುವಾಗ, ಈಗ ಅಕಸ್ಮಾತ್ತಾಗಿ ನಿವಂಚನೆ ತಲೆದೋರಿರುವುದು ಆಶ್ಚರ್ಯವೇ. ದೇಶದ ಕೆಲವೆಡೆ ಮಳೆಯೂಗಲಿಲ್ಲ. ಇನ್ನು ಕೆಲವೆಡೆ ಅಲ್ಪಮಾತ್ರ ಮಳೆಯೂಯ್ತು. ಬೆಳೆ ಕೈಕೊಡುವ ಸಂಭವ; ಇದರ ದುರ್ಲಾಭ ಪಡೆಯುವ ಲಾಭ ಬಡಕ ವರ್ತಕ ವರ್ಗ ಇದರಿಂದಾಗಿ ಆಹಾರ ಧಾನ್ಯಗಳ ಬೆಲೆ ನಾಗಾಲೋಟದಿಂದ ಏರ ತೊಡಗಿದವು. ಜನತೆಯಲ್ಲಿ ತೀವ್ರ ಕಳವಳ ಮೂಡಿತು.

ಇದು ದೇಶದ ಕತೆ. ರಾಜ್ಯಗಳಲ್ಲೂ ಈ ಕತೆ ತಪ್ಪಲಿಲ್ಲ. ನಮ್ಮ ರಾಜ್ಯದ ಎಲ್ಲೆಡೆಗಳಲ್ಲೂ ಬೆಲೆಯೇರಿಕೆ ಗಣನೀಯವಾಗೇ ನಡೆಯಿತು ಸರಕಾರದ ವಕ್ತಾರರು ಬೆಲೆಯೇರಿಕೆಯ ಬಗೆಗೆ ಅಥವಾ ಆಹಾರ ಧಾನ್ಯಗಳ ಕಾಪು ಸಂಗ್ರಹದ ಬಗೆಗೆ ಏನೇನೋ ವಿವರಣೆ ನೀಡುತ್ತಾರೆ. ಆದರೆ ಈ ವಿವರಣೆಗಳು ಬೆಲೆಯೇಳಿಸಲು ಜನತೆಯ ಕಳವಳವನ್ನು ದೂರ ಮಾಡಲು ಸಮರ್ಥವಾಗಲಿಲ್ಲ. ಸರಕಾರ ಅಥವಾ ಆಹಾರ ಧಾನ್ಯಗಳ ಮಹಾ ಮಂಡಳಿಯು ಮೂರುಕಟ್ಟೆಗೆ ಧಾನ್ಯಗಳನ್ನು ಧಾರಾಳ ಪ್ರಮಾಣದಲ್ಲಿ ಬಿಡುಗಡೆ ಮಾಡುತ್ತಿದ್ದರೆ, ಬೆಲೆಗಳು ಏರುತ್ತಿರಲಿಲ್ಲ. ಅಥವಾ ಒಂದೊಮ್ಮೆ ಏರಿದರೂ ಅವು ಕೊಡಲೇ ಜ್ಞಾಯುತ್ತಿದ್ದವು. 'ಸಂಗ್ರಹ ಸಾಕಷ್ಟಿದೆ; ಕಳವಳಕ್ಕೇನೂ ಕಾರಣವಿಲ್ಲ' ಎಂದು ಮುಂತಾಗಿ ಬರಿಯ ಬಾಯುಪಚಾರದಿಂದಲೇ ಪರಿಸ್ಥಿತಿ ಹತೋಟಿಗೆ ಬರುವುದು ಸಾಧ್ಯವಿಲ್ಲ. ದೇಶದಲ್ಲೂ ರಾಜ್ಯದಲ್ಲೂ ಆಹಾರ ಧಾನ್ಯಗಳ ಅಭಾವವಿದೆಯೆಂಬ ಮಾತು ಎಂದಿಗೂ ಒಪ್ಪತಕ್ಕದ್ದಲ್ಲ. ಪರಿಸ್ಥಿತಿಯಿಂದ ಅನುಚಿತ ಲಾಭ ಪಡೆದುಕೊಳ್ಳುವ ವರ್ತಕರ ಲಾಭ ಧಡಕ ತನವೇ ಕೃತಕ ಅಭಾವವನ್ನುಂಟು ಮಾಡಿದೆಯೆನ್ನಬೇಕು. ಇನು ಹಿಂದಿನಿಂದಲೂ ನಡೆದು ಬಂದ ದಾರಿಯೇ ಆದರೆ, ಈ 'ವ್ಯಾಪಾರಿ ಮನೋವೃತ್ತಿ' ಪ್ರಜಾಪ್ರಭುತ್ವಕ್ಕೂ ಬದಲಾಗುತ್ತಿರುವ ಸಾಮಾಜಿಕ ಸನ್ನಿವೇಶಕ್ಕೂ ಎಂದಿಗೂ ಹೊಂದಿಕೊಳ್ಳುವುದಿಲ್ಲವೆಂಬುದನ್ನು ಹೇಳಲೇ ಬೇಕಾಗಿದೆ. ಇಂದು ವ್ಯಾಪಾರದ ಉದ್ದೇಶವೂ ಆದರ ವ್ಯಾಪ್ತಿಯೂ ಬದಲಾಗಿದೆ. ಸಮಾಜದ ಅವಶ್ಯಕತೆಗಳನ್ನು ಪೂರಯ್ಸುವ ಮೂಗ ಮಾತ್ರ ವ್ಯಾಪಾರ. ಇಲ್ಲಿ ಸ್ವಾರ್ಥಕ್ಕಾಗಲೀ ಲಾಭ ಧಡಕತನಕ್ಕಾಗಲೀ ಸಮಾಜದ ಶೋಷಣೆಗಾಗಲೀ ಅವಕಾಶ ಇಲ್ಲವೇ ಇಲ್ಲ. ನ್ಯಾಯವಾದ ಬೆಲೆಯಲ್ಲಿ ಸರಕುಗಳನ್ನು ವ್ಯಾಪಾರಿಯು ಪೂರಯ್ಸಬೇಕು; ಇದು ಅವನ ಧರ್ಮವಾಗಬೇಕು. ರಾಜ್ಯ ಸರಕಾರವು ಹಲವೆಡೆ ಮೂಡಿದ ಹತ್ತಾರ್ ಧಾಳಿಯ ನೇಳೆ ವ್ಯಾಪಾರಿಗಳು ತಮ್ಮ ಹಿಂದಿನ ನಿರಂಕುಶ ಮನೋಭಾವನೆಯನ್ನೂ ಸಮಾಜ ಸುಲಿಯುವ ದುರ್ಭಾವನೆಯನ್ನೂ ಬಿಟ್ಟುಕೊಟ್ಟಲ್ಲವೆಂಬುದು ವೇದ್ಯವಾಗಿದೆ. ಆಹಾರ ಧಾನ್ಯಗಳು ಮಾತ್ರವಲ್ಲ, ವಾಹನಗಳಲ್ಲಿ ಟಯರುಗಳು, ಮಕ್ಕಳ ಆಹಾರ ಮೊದಲಾದವುಗಳ ಅಕ್ರಮ ಸಂಗ್ರಹದಲ್ಲಿ ವ್ಯಾಪಾರಿಗಳು ತೊಡಗಿರುವುದು ಬೆಳಕಿಗೆ ಬಂದಿವೆ. ಅಂದರೆ ಈ ಸಂಗ್ರಹದ ಉದ್ದೇಶ ದುಬಾರಿ ಬೆಲೆಗೆ ಮಾರುವುದು; ಲಾಭಗಳಿಸುವುದೇ ಆಗಿದೆ. ಧಾಳಿಯಲ್ಲಿ ಸಿಕ್ಕ ಅಕ್ರಮ ಸಂಗ್ರಹವನ್ನು ಸರಕಾರ ಮುಟ್ಟುಗೋಲು ಹಾಕಿಕೊಂಡರೂ ದೃತಿಗೆಡದ ವ್ಯಾಪಾರಿಗಳೂ ಇರಬಹುದು. ವ್ಯಾಪಾರವೆಂಬುದು ಸಮಾಜೋಪಯೋಗಿ ಉದ್ಯಮವಾಗ ಬೇಕಲ್ಲದೆ, ಸಮಾಜ ಶೋಷಕ ಉದ್ಯಮವಾಗ ಬಾರದು. ಬದಲಾದ ವಾತಾವರಣಕ್ಕೆ ಭೂಮಿಲಿಕರು ಉದ್ಯಮ ಮತಿಗಳು, ಸರಕಾರಿ ನೌಕರರು, ಶ್ರೀ ಸಾಮಾನ್ಯರು ಸಹ ಹೊಂದಿಕೊಂಡು ಹೋಗುವಂತೆ ಈ ವ್ಯಾಪಾರಿ ವರ್ಗವೂ ಹೊಂದಿಕೊಂಡು ಹೋಗ ಬೇಕಾಗುತ್ತದೆ.

ರಾಜ್ಯ ಸರಕಾರವು ಧಾಳಿ ನಡೆಸಿ ಅಕ್ರಮ ಸಂಗ್ರಹವನ್ನು ಬಯಲಿಗೆಳೆವ ಮಾತ್ರದಿಂದಲೇ ಪರಿಸ್ಥಿಗೆ ಹತೋಟಿಗೆ ಬರುತ್ತದೆಂದು ಹೇಳಲಾಗುವುದಿಲ್ಲ. ಧಾನ್ಯಗಳ ಬೆಲೆ ತುಸು ಇಳಿದಂತೆ ಕಂಡರೂ ಧಾಳಿಯ ತೀವ್ರತೆ ಕಡಿಮೆಯಾಗುತ್ತ ಬಂದಂತೆ ಮತ್ತೆ ಏರತೊಡಗುತ್ತದೆ. ಇಲ್ಲಿ ಸರಕಾರ ಮೊದಲನೆಯವಾಗಿ ಮುಂಗಾರು ಬೆಳೆ ಕೈಗೆ ಬರುವವರೆಗೆ ಕಾಯಬೆ. ಇದುವರೆಗಿನ ಮಧ್ಯಾವಧಿಗಾಗಿ ತಾನು ಸಂಗ್ರಹಿಸಿರುವ ಲೆವಿ ಧಾನ್ಯಗಳನ್ನು ಬಿಡುಗಡೆ ಮಾಡಬೇಕು; ಮತ್ತು ಆಹಾರ ಧಾನ್ಯಗಳ ಕಾರ್ಮೇರೆಶನ್ನಿನಿಂದಲೂ ಅವಶ್ಯಕ ನೆರವು ಪಡೆಯುವುದು ಬೇಕು. ಇನ್ನೊಂದು ದೀರ್ಘಕಾಲೀನ ಕಾರ್ಯ ನಡೆಯಬೇಕು. ಇದು ವ್ಯಾಪಾರಿಗಳು ಸಾಮಾಜಿಕ ಪರಿವರ್ತನೆಗೆ ಒಗ್ಗಿಕೊಂಡು ಹೋಗುವಂತೆ ಮಾಡುವುದು. ಇದಕ್ಕೆ ಕೂಡ್ಲ ತರಬೇತಿ ನೀಡುವುದು. ಇವೆಲ್ಲಾ ವೈಜ್ಞಾನಿಕ ಶಾಸ್ತ್ರೀಯವಾಗಿ ರೂಪಿಸುವುದು ಅಗತ್ಯ. ಸಮಾಜಕ್ಕೆ ಅತಿ ಹತ್ತಿರವ ಸೂರೆಯಿಡಾರರಾದ ವ್ಯಾಪಾರಿಗಳ ಮನೋಭಾವ ಬದಲಾಗದೆ ಕೃತಕ ಅಭಾವ-ಬೆಲೆಯೇರಿಕೆಗಳಿಗೆ ಕೊನೆಯೂಗುವುದಿಲ್ಲ. ಜನ ಕಲ್ಯಾಣವೆ, ಸಮಾಜವಾದವೆ ದೀಕ್ಷೆ ಹೊತ್ತ ಸರಕಾರ ತಲೆತಲಾಂತರಗಳಿಂದ ವ್ಯಾಪಾರಿ ವರ್ಗದಲ್ಲಿ ಆಸುರಿಂತಿಕವಾಗಿ ಹುಟ್ಟಿ ಬಂದಿರುವ ಸ್ವಾರ್ಥ-ಸಂಕುಚಿತ ಮನೋಭಾವಗಳನ್ನು ಆಮೂಲಾಗ್ರ ಬದಲಾಯಿಸದೆ ಹೋದರೆ, ಅದು ಸಮಾಜದ ಮೇಲೆ ಸವಾರಿ ಮಾಡುವ ತನ್ನ ಚಟವನ್ನು ಬಿಡಲಾರದು. ಸರಕಾರ ಈ ದಿಸೆಯಲ್ಲೂ ಕಾರ್ಯ ಪ್ರವೃತ್ತವಾಗಬೇಕು.

ನವಯುಗ ಐವತ್ತೈದರಲ್ಲು

"ನವಯುಗ"ಕ್ಕೆ ಈ ಸಂಚಿಕೆಯೊಂದಿಗೆ ಐವತ್ತೊಂದು ವರ್ಷಗಳು ತುಂಬಿದುವು. ಮುಂದಿನ ಸಂಚಿಕೆಯು ಐವತ್ತೆರಡನೆಯ ವರ್ಷದ ಮೊದಲ ಸಂಚಿಕೆ. ಈ ವರ್ಷ "ನವಯುಗ" ಕುಲಪತಿ ಪ್ರೊ| ಡಿ. ಜನರೇ ಗೌಡರ ಅಧ್ಯಕ್ಷತೆಯಲ್ಲಿ ತನ್ನ ಸುವರ್ಣ ಮಹೋತ್ಸವವನ್ನು ಆಚರಿಸಿತ್ತು. ದೇಶ ತನ್ನ ಸ್ವಾತಂತ್ರ್ಯದ ರಜತೋತ್ಸವವನ್ನು ಆಚರಿಸುವಾಗ ಅದರಲ್ಲೂ ಪಾಲ್ಗೊಂಡಿತ್ತು. ಕನ್ನಡದ ನಾಪ್ತಾಹಿಕಗಳಲ್ಲಿ ಸುವರ್ಣ ಮಹೋತ್ಸವವನ್ನು ಆಚರಿಸಿದ ಪತ್ರಿಕೆಗಳಲ್ಲಿ ನವಯುಗವೊಂದೆನಿಸಿತ್ತು. ಅಂತೆ ಹಿತೈಷಿಗಳಾದ ಸಿನ್ಮೈಲ್ಲರ ಸಹಕಾರದಿಂದಲೇ.

ಲೇಖಕ ಬಳಗವೆಲ್ಲರು, ಚಾಹೀನಾತುದಾರರು, ಜಂಘಾಬಾರರು, ಸಹಾಯಕರು, ಸಲಹೆಗಾರರು ಮತ್ತು ಅನೇಬ್ಯಾತ ಅಭಿಮಾನಿಗಳ ಬೆಂಬಲದಿಂದ 'ನವಯುಗ' ಇಷ್ಟಕಾಲ ನಡೆದು ಬಂದಿದೆ. ಮುಂದೆಯೂ ನಡೆಯುವ ಉತ್ಸಾಹದಿಂದಿದೆ.

ಪತ್ರಿಕೆಯ ಜೀವಾಳ ಚಂದಾದಾರರು ಎಂಬುದನ್ನು ನಾವು ನಮ್ಮ ಚಂದಾದಾರರ ಗಮನಕ್ಕೆ ತೊರಬೇಕಾದ ಅಗತ್ಯವಿಲ್ಲ. ಪತ್ರಿಕೆಗಾಗಿ ತೆರುವ ಹಣ ವ್ಯರ್ಥವೆನ್ನುವದು ಸರಿಯಲ್ಲ. ಪತ್ರಿಕೆಯಲ್ಲೇನಿದೆ—ಎಂದು ಪ್ರಶ್ನಿಸುವುದಕ್ಕೆ ತಕ್ಕ. ಆದರಲ್ಲಿ ಏನಿದೆಯೋ ಅದನ್ನು ಓದಿ ಗ್ರಹಿಸಿದರೆ, ತಾವು ತೆತ್ತ ಬೆಲೆಗೆ ಹೆಚ್ಚಿನ ಪ್ರತಿಫಲ ದೊರೆತಂತಾಗುವುದು. ಆದುದರಿಂದ, ಈ ನಿಟ್ಟಿನಲ್ಲಿ ನಾವು ನಮ್ಮ ಚಂದಾದಾರರ ಪೂರ್ಣ ಹೃದಯದ ಸಹಕಾರ ಬಯಸುತ್ತೇವೆ. ಚಂದಾಹಣ ಬಾಕಿಯಿರುವವರು ಜಾಗ್ರತೆಯೊಂದಿ ಅದನ್ನು ಈಳಿಸಿಕೊಡಬೇಕೆಂದು ಅತ್ಯಂತ ಕಳಕಳಿಯಿಂದ ವಿನಂತಿಸುತ್ತೇನೆ.

ಇಮವರೆಗೆ 'ನವಯುಗ'ದ ಬಗ್ಗೆ ಸಹಾನುಭೂತಿ ತೋರಿಸಿರುವ ತಮಗೆ ಅಭಿನಂದನೆ ಹೇಳಿ ಈ ಅಭಿಮಾನ ಮುಂದೆಯೂ ಉಳಿಮ ಬೆಳೆಯುಲೆಂದು ಪ್ರಾರ್ಥಿಸುತ್ತೇನೆ. ●

ಟಿ. ಎ. ಪೈ ಸನ್ಮಾನ ಸಮಿತಿಯ ಸಭೆ

ಶ್ರೀ ಟಿ. ಎ. ಪೈ ಸನ್ಮಾನ ಸಮರಂಭಕ್ಕೆ ಸಂಬಂಧಿಸಿದ ವಿವಿಧ ಕಾರ್ಯಗಳನ್ನು ನಿರ್ವಹಿಸಲು ಉಪಸಮಿತಿಗಳನ್ನು ರಚಿಸಲು ಉಡುಪಿಯಲ್ಲಿ ಶ್ರೀ ಕೆ. ಕೆ. ಪೈಯವರ ಅಧ್ಯಕ್ಷತೆಯಲ್ಲಿ ಜರಗಿದ ಸನ್ಮಾನ ಸಮಿತಿಯ ಸಭೆಯಲ್ಲಿ ರಚಿಸಲಾಯಿತು. ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಶ್ರೀ ಪಿ. ಶ್ರೀಪತಿ ಆಚಾರ್ಯರು ಆಯ್ಕೆಯಾದರು. ಶ್ರೀ ಪೈಯವರನ್ನು ಸ್ವಾಗತ ಸಮಿತಿಯವರ ಸಕ್ಕಾರಕ್ಕಾಗಿ ಸಭೆಯಿಂದ ಸ್ಥಳಕ್ಕೆ ಕರೆದುಕೊಂಡು ಬರಲು ಸಾರ್ವಜನಿಕ ಸನ್ಮಾನ ಸಮರಂಭ ಜರಗುವಲ್ಲಿಗೆ ಮರಳಿಸಲು ಕೆಲವರನ್ನು ಆರಿಸಲಾಯಿತು. ಜಿಲ್ಲೆಯ ಸಂಘ ಸಂಸ್ಥೆಗಳು ಸುತ್ತು ಸಾರ್ವಜನಿಕರಿಗೆ ಸಮರಂಭದ ವೇಳೆ ಶ್ರೀ ಪೈಯವರಿಗೆ ಹಾರಾರ್ಪಣೆ ಮಾಡಲು ಮತ್ತು ಮಾನಪತ್ರಗಳನ್ನು ಅರ್ಪಿಸಲು ಅವಕಾಶ ಕಲ್ಪಿಸಬೇಕೆಂದು ತೀರ್ಮಾನಿಸಲಾಯಿತು. ಜಿಲ್ಲೆಯ ಎಲ್ಲಾ ಸಂಘ ಸಂಸ್ಥೆಗಳು ಸ್ವಾಗತಸಮಿತಿಯ ಸದಸ್ಯರಾಗುವಂತೆ ಸಭೆ ಕೋರಿಕೊಳ್ಳಲಾಯಿತು.

ಮುಂದು

ಗೇಹರಾಜ್ಯದಲ್ಲಿ

ಕುರುಕ್ಷೇತ್ರ ಧರ್ಮಕ್ಷೇತ್ರ ತಾನೆ?

'ಏ, ಕೇಳಿದ್ಯೇನೆ?'

'ಏನು?'

'ನಮ್ಮ ಆರಸು ಸಂಪುಟದ ಕೀರ್ತಿಪ ತಾಕೆ ಧುರಿ ಎತ್ತರಕ್ಕೆ ಹಾರಿತು....'

'ಥೂಕಿ ಹಾಗಂತೀರಿ?'

'ಅಲ್ಟೆ, ಸ್ವಾತಂತ್ರ್ಯದ ರಜತೋತ್ಸವ ದೊಳಗೆ ಜವತ್ತು ಸಾವಿರ ನಿವೇಶನಗಳನ್ನು ವಸೆತಿಷ್ಟರಿಗೆ ಹಂಚಿ ಬಿಡಬೇಕು ಎಂಬ ಗೊತ್ತು ಮಾಡಿದ್ದ ಸರಕಾರ ಇದರ ಮೂಲೊವರೆ ಬೆಟ್ಟು ಸಾಧಿಸಿದೆ.....'

'ಇಂದ್ರೆ?'

'ಐವತ್ತು ಸಾವಿರದ ಬದಲಿಗೆ ಗಜಸಾವಿರ ನಿವೇಶನಗಳನ್ನು ಹಂಚಿದೆ.'

'ಅಲ್ರಿ, ಇದ್ರಲ್ಲೇನು ಮಹಾಂತ....'

'ಯಂಕೆ?'

'ನೋಡಿ ನಿನ್ಮ ಕೈಯಲ್ಲಿ ಯೂರ್ಯಾರ ದ್ದೋ ಜಾಕಲೆಟ್ ಡಬ್ಬಿ ಇದ್ರೆ, ಇದರಿಂದ ನಿಮಿಷಾರ್ಧದಲ್ಲಿ ಹಂಚಿ ಬಿಡಬಹುದು...'

'ಛೆ ಛೆ....ಹಂಚೋದು ಅಂದ್ರೆ ಅಷ್ಟು ಸುಲಭವಲ್ಲ ಕಾಣೇ....'

'ಅದ್ಯಾಕೆ?'

'ನೋಡು, ಉಚಿತ ವಸತಿ ಹೀನರನ್ನು ಆರಿಸಿ ಅವರಿಗೆ ಇಷ್ಟು ಕ್ಷಿಪ್ರವಾಗಿ ನಿವೇಶನ ಹಂಚುವಷ್ಟು ಸರಕಾರದ ಯಂತ್ರ ಕ್ರಿಯಾತ್ಮಕ ಚಸಕ್ತಿ ತೋರಿದ್ದು ಆಶ್ಚರ್ಯವೇ ತಾಪ್ಪೆ?'

'ಹೌದು ಸರಿನ್ನಿ. ಆದರೆ, ಈ ಕ್ರಿಯಾತ್ಮಕ ಮನೋಭಾವ ಕೇವಲ ತಾತ್ಕಾಲಿಕ.'

'ಯಂಕೆ?'

'ನೋಡಿ, ಸಂಪುಟಕ್ಕೆ ಕೀರ್ತಿಯ ಆಸೆ. ಹೊಸ ಹೊಸ ಸಾಧನೆ ಮಾಡುವ ಹೆಬ್ಬಯಕೆ. ಇರಬೇಕೂನ್ನಿ. ಅದನ್ನು ಪೂರಯ್ಸುಡರಿ ಸಾಕೇನು?'

'ಮತ್ತೆ?'

'ಮೋಡಿ, ಸರಕಾರದ ಯಂತ್ರಕ್ಕೆ ಎಣ್ಣೆ ಸುರಿಯುವ ಕೆಲಸವಾಗಬೇಕು ಈಗ ಏನಾಗಿಧೆ ಅಂದರೆ, ಅದು ನಡೆಯುತ್ತಲೇ ಇಲ್ಲ; ಕೆಲವೊಮ್ಮೆ ನಡೆದರೂ ಕಿರ್ ಕಿರ್ ಎಂದು ಮಂದವಾಗಿ ನಡೆಯುತ್ತಿದೆ. ಇನ್ನು ಕೆಲವೊಮ್ಮೆ ದೂಡಿದಷ್ಟಾದರೂ ಮುಂದುವರಿಯುತ್ತದೆ ಮತ್ತೆ ಹೆಚ್ಚಿನದೆ ದೂಡಿದರೂ ಮುಂದೆ ಹೋಗೋದೇ ಇಲ್ಲ....'

'ಇರಬಹುದು....'

'ಇರಬಹುದು ಅಲ್ಲ; ಇದೆ. ಸಾವಿರ ಗಟ್ಟಲೆ ನಿವೇಶಕ್ಕೆ ಸುರಿದು, ಕನ್‌ವರ್ಷನ್ ಮಾಡಲೆಂದು ಅರ್ಜಿ ಗುಜರಾಯಿಸಿದರೆ, ಪಂಚಾಯತು, ತಾಲೂಕು, ಸಬ್‌ಡಿವಿಜನ್ನು, ಜಿಲ್ಲೆ ಹೀಗೆಲ್ಲಾ ಕಛೇರಿ ಕಂಡು ಬರುವಾಗ ಪ್ರಾಯ: ಗದ್ದ ನರೆತು ಹೋಗುತ್ತೆ. ಅಪ್ಪ ಅರ್ಜಿ ಗುಜರಾಯಿಸಿದರೆ, ಮಗನ ಕಾಲಕ್ಕೆ ಏನಾದರೂ ಕುಂಟುನೆಪವೊಡ್ಡಿ ನಾಮಂಜೂರಾಗಿ ಬರುತ್ತೆ....'

'ಎಲ್ಲೋ ಕೆಲವೆಡೆ ಹಾಗಾಗಬಹುದೆನ್ನು....'

'ಅಲ್ರಿ, ಇಂತಹ ಕೆಲಸಗಳೆಲ್ಲ ನಾಲ್ಕಾರು ತಿಂಗಳ ಕಾಲ ತೆಗೆದುಕೊಳ್ಳುವುದಾದ್ರೆ ವಸತಿ ಹೀನರನ್ನು ದೂರವಾಗುವುದಾದರೂ ಹೇಗೆ?'

"ನಿವೇಕನ ಹಂಚಿಯೂಯ್ತಲ್ಲ? ನೋಡೋಣ ಯಾವಾಗ ಮನೆ ಎದ್ದು ನಿಲ್ಲುತ್ತೇಂತ..."

"ಮನೆಯೂಗ ಬೇಕಾದರೆ ನಿವೇಕನ ನೀಡಿದವರೇ ಕಟ್ಟಿಕೊಡಬೇಕಾದೀತು...."

'ಆಗಲಿ, ಹಾಗಾದರೆ ಹಾಗೆ. ಒಮ್ಮೆಗೆ ಸಮಸ್ಯೆಯೂದರೂ ತುಸು ಹಗುರವಾಗಲಿ..."

'ಅಲ್ರಿ, ಸರಕಾರವೇನೋ ಒಂದು ಮಾಡು ಎಬ್ಬಿಸಿ ಕೊಟ್ಟಿತ್ತೂನ್ನಿ. ಮುಂದಿನ ಮೆಗಾಲಕ್ಕೆ ಅದನ್ನು ಹೊದಿಸುವವರಾರು?'

'ಮತ್ತಾರು? ಯಾರು ಮನೆಯಲ್ಲಿ ನೆಲಸಿದ್ದಾನೆಯೋ ಅವನೇ....'

'ಅಂತಹ ಮನೋಭಾವವಿಲ್ಲದವರೂ ಇದ್ದಾರೆಂಬುದನ್ನು ನೆನಪಿಡಿ....'

'ಅದೆಲ್ಲ ಆಗಣ್ಣಿ.'

"ನೋಡೋಣ. ನೋಡಿ, ಗುಜರಾತದ ಒಬ್ಬ ಪಾದ್ರಿ ಯೂವುದೋ ಒಂದು ವಿಧೇಯಕ ವಿಧಾನ ಸಭೆಯಲ್ಲಿ ತರಲು ರಾಜ್ಯ ಪಾಲ ಶ್ರೀಹುನ್ನಾರಾಯಣರೇ ಕಾರಣವೆಂದು ಆರೋಪಿಸಿದನಂತೆ..."

"ಹ್ಞೂಂ, ಅದೆ? ಬಲಾತ್ಕಾರದ ಮತಾಂತರದ ಸಂಬಂಧದಲ್ಲಿ...."

"ಹ್ಞೂಂ....ಅಲ್ರಿ, ಪಾದ್ರಿ ಮೂತ್ರವಲ್ಲ, ಅವನ ಹಿಂದೆ ಸಿಕ್ಕರು, ಬೌದ್ಧರು, ಮುಸ್ಲಿಮರು....ಹೀಗೆ ಅಲ್ಪಸಂಖ್ಯಾಕ ಮತದ ಮುಂದಾಳುಗಳಿದ್ದಾರಂತೆ...."

"ಇರಲಿ ಬಿಡು. ಈ ವಿಧೇಯಕ ಅಲ್ಪ ಸಂಖ್ಯಾಕರನ್ನು ಬಗ್ಗು ಬಡೆಯುವುದಕ್ಕೆಂದೇ ಬರುತ್ತಿದೆಯೆಂಬುದಿವನ ಆರೋಪ. ಆದರೆ ನೋಡು...."

"ಯಾರು ಬೇಕಾದರೂ ತನಗೆ ಇಷ್ಟ ಬಂದ ಮತವನ್ನು ಅವಲಂಬಿಸಲು ಸ್ವಾತಂತ್ರ್ಯ ನಮ್ಮಲ್ಲಿದೆ."

'ಮತ್ತೆ ಮತಾಂತರಕ್ಕೆ ವಿರೋಧ?'

"ಮತಾಂತರಕ್ಕೆ ವಿರೋಧವಿಲ್ಲ; ವಿರೋಧವಿರುವುದು ಬಲಾತ್ಕಾರದ ಮತಾಂತರಕ್ಕೆ ಮಾತ್ರ...."

'ಅಂದರೆ, ನಾನು ನನ್ನ ಸ್ವೇಚ್ಛೆಯಿಂದ ಮತಾಂತರ ಮಾಡಿದ್ದೇನೆಂದು ಬರೆಸಿ ಹೆಬ್ಬೆಟ್ಟು ಒತ್ತಬೇಕು-ಗಜೆಟೆಡ್ ಅಧಿಕಾರಿಗಳ ಮುಂದೆಯೋ ಮ್ಯಜಿಸ್ಟ್ರೇಟರ ಮುಂದೆಯೋ....'

'ಇದೂ ತ್ರಾಸವಾಗುತ್ತೆ. ಬಲಾತ್ಕಾರ ಪಾಗಿಯೇ ತನ್ನ ಹೆಬ್ಬೆಟ್ಟು ಒತ್ತಿಸಿದರೂಂತ ಆತ ಹೇಳ ಬಹುದಲ್ಲಾ?"

"ಅಂತಹ ಮೂತು ಬರ ಬಾರದೂಂತಲೇ ಆಶೆ-ಆಮಿಶೆ ತೋರಿಸಿ ಮತಾಂತರದ ಕಾರ್ಯ ನಡೆಯುತ್ತ ಬಂದಿಕುವುದು. ಈ ಕೆಲಸ ಇಂದಿಗೂ ಕೆಲವೆಡೆ ನಡೆಯುತ್ತಿದೆ."

"ಅಲ್ರಿ, ಆಶೆ-ಆಮಿಶಗಳನ್ನು ನೀಡಿದರೂನ್ನಿ. ಆಗ ಆತ ಆವುಗಳಿಂದಾಗಿಯೇ ಸ್ವೇಚ್ಛೆಯಿಂದ ಮತಾಂತರ ಹೊಂದುವಾಗ ಬಲಾತ್ಕಾರವೇನು ಬಂತು?"

"ಇದು ಕೂಡಗೂಂತ. ತಾನೇ ಯೋಚಿಸಿ ತನಗಿಷ್ಟ ಬಂದ ಮತಕ್ಕೆ ಸೇರಬಹುದು...."

"ಅಲ್ರಿ, ಯೋಜನೆ ಇಲ್ಲದೆ ಆಶೆಗೆ ಅವನು ಒಲಿ ಬೀಳುತ್ತಾನೆಯೆ?"

"ಸರಿ. ಆಲೋಚನೆಯು ಸ್ವಯಂ ಪ್ರೇರಿತವಾಗಬೇಕು...."

'ಆಯ್ತಪ್ಪ....ಆದಿರ್ಲಿ. ನೋಡಿ, ಅಮೆರಿಕೆಯ ರಿಪಬ್ಲಿಕನ್ ಪಕ್ಷ ಅಧ್ಯಕ್ಷ ಪದಕ್ಕೆ ಮತ್ತೊಮ್ಮೆ ರಿಚರ್ಡ್ ನಿಕ್ಸನ್ನರನ್ನೇ ನಾಮಕರಣ ಮಾಡಿತಂತೆ...."

'ಹ್ಞೂಂ....ಅವರನ್ನು ಆರಿಸಿದ್ದಕ್ಕಿಂತ ಅವರ ಆಯ್ಕೆಗೆ ನೀಡಿದ ಕಾರಣಗಳು ಬಹಳ ಸಮರ್ಪಕವಲ್ಲವೆ?'

'ಮಹಾ ಶಾಂತಿಸೂತರಂತೆ....'

'ಅಬ್ಬನೇ ಹುತ್ತೆ?'

'ಅಲ್ರಿ, ವಿಯತ್ನಾಮಲ್ಲಿ ಇಷ್ಟೂ ರಕ್ತದ ಕಾರಂಜಿ ಹಾರಿಸುತ್ತಿರುವವನೆಲ್ಲ ಶಾಂತಿದೂತರು....'

'ನೋಡಮ್ಮ ಕುರುಕ್ಷೇತ್ರ ಧರ್ಮ ಕ್ಷೇತ್ರವಾಗುತ್ತದೆಂದಾದರೆ, ನಿಕ್ಸನ್ನರು ಶಾಂತಿ ದೂತರಾಗುವುದರಲ್ಲಿ ಆಶ್ಚರ್ಯವೇಕು?'

"ಆಯ್ತಪ್ಪ, ಆಗಂ ಅವನವರ ದೃಷ್ಟಿ ಭೇದ. ನೋಡಿ. ನಿಕ್ಸನರು 'ಈ ಹೂಡ್ಡೆನೆ ಪಕ್ಷದ ಪ್ರತಿನಿಧಿಯಾಗಿ ಆಯ್ಕೆಯಾಗುವುದೀಗ ಮೂರನೇ ಬಾರಿಗೆಯಂತೆ...."

'ಹೌದು. ಮೊದಲು ಗಾಂಧಿರಲ್ಲಿ ಆಮೇಲೆ ಗಾಂಧರಲ್ಲಿ ಮತ್ತೀಗ ಗಾಂಧರಲ್ಲಿ..'

'ಮೊದಲಬಾರಿ ಅವರು ಜಾಕ್ಸ್ ಕನಡಿಯುಂದ ಸೋತು ಹೋದರು.'

"ಹ್ಞೂಂ....ಆಗ ಡೆಮೊಕ್ರೆಟಿಕ್‌ಗೆ ಗೆಲುವಾಯ್ತು."

'ಈಬಾರಿಯ ಡೆಮೊಕ್ರೆಟಿಕರ ಅಭ್ಯರ್ಥಿಯಾರು?"

'ಅಯ್ಯೊ, ಅದು ಮೆಕ್ ಗವರ್ನ್ ಎಂದು ಎಂದೋ ಪ್ರಕಟವಾಗಿದೆ...'

'ಅಲ್ರಿ, ಈಜಾರಿ ಹೇಗೆ?'

'ನಿಕ್ಸನ್ನನ್ನು ಶಾಂತಿ ದೂತನೆಂಬ ವರ್ಣಿಸುವವರು ಇನ್ನೂ ಬದುಕಿರುವಾಗ ಅವರಿಗೇ ಜಯವಾದರೂ ಆಗಬಹುದು....'

'ಅದರ ಮೇಲೆ ಅವರು ಚೀಫಾ ರಕ್ಷಗಳನ್ನು ಭೆಟ್ಟನೂಡಿ ಇತಿಹಾಸವನ್ನು ಬೇರೆ ನಿರ್ಮಿಸಿದ್ದಾರೆ....'

'ಹ್ಞೂಂ....ಇವೆಲ್ಲರೂ ಅವರಿಗೆ ಅನುಕೂಲವಾಗಿ ಪರಿಣಮಿಸಬಹುದು....'

'ರಾಜ್ಯಕಾರಣದ ಬಗ್ಗೆ ಏನೂ ನಿಶ್ಚಯ ಹೇಳ ಬಾರದು. ಅಷ್ಟು ಪೂರಕ್ಕೆಮ ನೋಡಿಜ್ಞಾನವಿನ್ನೂ ಬೆಳೆದು ಬಂದಿಲ್ಲ. .'

'ಹ್ಞೂಂ...'

'ಏನು?'

'ಏನು ಅನ್ನೋದು?'

'ಅನ್ನೋದು ಏನೂ ಜೋಡ....'

'ಅಲ್ರಿ, ಅಂದು ಕೊಂಡರೂ ಏನು ಪ್ರಯೋಜನ?'

'ಅಹೂ ಹೌದು ...'

'ಯೂವುಹು'

'ಇದೂ .....'

-ಗೋಪಾ.

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ — **English Made Easy**

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಜನಪ್ರಿಯ ಆಂಗ್ಲ ಸ್ವಯಂಬೋಧಿನಿ ಬೆಲೆ : ರೂ. 2--00

Letter Writing Made Easy — **ಸುಲಭದಲ್ಲಿ ಪತ್ರಲೇಖನ**

ಇಂಗ್ಲಿಷಿನಲ್ಲಿ ನಾನಾ ತರದ ಪತ್ರವ್ಯವಹಾರ ನಡೆಸಲು ಸಹಕಾರಿಯಾದ, ವಿವಿಧ ಪತ್ರ ಸಂಕಲನ. ಬೆಲೆ : ರೂ. 1—50

ಮನೆ-ಮದ್ದು — **Home Remedies**

ಡಾ| ವಿ. ಆರ್. ಕೊರಡ್ಕಲ್‌ರು ಬರೆದ, ಪ್ರತಿ ಮನೆಯಲ್ಲೂ ಇರಲೇಬೇಕಾದ ಅತ್ಯುಪಯುಕ್ತ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೆ ಮದ್ದು ಮಾಡುವ ಸುಲಭ ವಿಧಾನಗಳಿವೆ. ಹೆಚ್ಚಿಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಸಂಗ್ರಾಹ್ಯ ಪುಸ್ತಕ. ಬೆಲೆ : ರೂ. 2-00

ವಿ. ಸೂ. ವಿ. ಪಿ. ಮಾಡುವುದಿಲ್ಲ. ಪುಸ್ತಕದ ಬೆಲೆಯೊಂದಿಗೆ 80 ಪೈಸೆ ಆಂಚೆ ವೆಚ್ಚ ಸೇರಿಸಿ ಮನಿಯೂರ್ಡರು ಮಾಡಿದರೆ ಬುಕ್ ಪೋಸ್ಟ್ ಮೂಲಕವಾಗುವುದು.

— ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕಭಂಡಾರ, ಪಾಲುಕೋಟಿ, ಉಡುಪಿ.

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕಮ್ಮು ಮತ್ತು ಸೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಕವಲು ದಾರಿ ಕೆಂಪು ದೀಪ

ಪ್ರತಿಭೆ - ರಾಣಿ ಕಾಲದ ನೋಟು

ಕೆಲವು ದಿನಗಳಿಗೆ ಮೊದಲೊಬ್ಬ ಯುವಕ ಸಿಕ್ಕಿದ. ಆತ ವಿಶ್ವ ವಿದ್ಯಾಲಯದಲ್ಲಿ ರ್ಯಾಂಕನ್ನೂ ಗಳಿಸಿದ್ದ. ಪರಿಚಿತನಾದುದರಿಂದ, ಅಭಿನಂದನೆ ಸಲ್ಲಿಸುವ ಶಿಷ್ಟ ಸಂಪ್ರದಾಯವನ್ನು ಪಾಲಿಸಿದೆ.

'ಹೌದು ಸಾರ್–ರ್ಯಾಂಕ್ ಏನೋ ಬಂತು. ಆದರೆ...'–ಆತ ಮಾತು ನಿಲ್ಲಿಸಿದ. ತನ್ನನ್ನು ಅಭಿನಂದಿಸಿದುದಕ್ಕೆ ಪ್ರತಿಯಾಗಿ ಒಂದು ಥ್ಯಾಂಕ್ಸ್ ಎಂದಾದರೂ ಹೇಳ ಬೇಡವೆ? ಪದವೀಧರರಾದ ಮಾತ್ರಕ್ಕೆ, ರ್ಯಾಂಕ್ ಗಿಟ್ಟಿಸಿಕೊಂಡ ಋಣಕ್ಕೆ ಶಿಷ್ಟಾಚಾರವನ್ನೂ ಮರೆತು ಬಿಡುವಷ್ಟು ಒರಟು ಸ್ವಭಾವದವರಾಗುವುದೆ?

ಆದರೆ, ಅವನ ಎರಡು ತಿಂಗಳ–ಎರುವತ್ತು ದಿನಗಳ–ಬವಣೆಯ ಕತೆ ಕೇಳಿದ ಮೇಲೆ ಅವನು ಶಿಷ್ಟಾಚಾರ ಮರೆತದ್ದೇ ತೃಪ್ತಿಕರವೆನಿಸಿತು. ಹುಚ್ಚೇ ಹಿಡಿಯ ಬಹುದಾಗಿತ್ತವನಿಗೆ.

ಅದೇಕೆ ಹಾಗೆ?

ಹೆತ್ತವರು ಗೊಣಗುತ್ತಾರೆ. ಸಾಲ–ಸೋಲ ಮಾಡಿ ಕಲಿಸಿದೆವು; ಬೇಡ, ಕಾಲೇಜು ಮೆಟ್ಟಲು ಹತ್ತುವುದು ನಮ್ಮಂಥವರಿಗೆ ಹೇಳಿಸಿದ್ದಲ್ಲ, ಏನಾದರೂ ಹೊಟ್ಟೇ ಪಾಡಿಗೆ ಈಗಲೇ ಪ್ರಯತ್ನಿಸು ಎಂದರೆ ಕೇಳಲಿಲ್ಲ. ಈಗ ಭೂಮಿಗೆ ಭಾರ–ಅನ್ನಕ್ಕೆ ದಂಡ, ಸಾಲ ಬೇರೆ ತಲೆಯ ಮೇಲೆ. ರ್ಯಾಂಕು ಡಿಗ್ರಿ ಎಂದು ಕೊಂಡಡೇನು ಬಂತು? ಯಾರು ನಿನಗೆ ಕೂತುಣ್ಣುವ ನೌಕರಿ ಕೊಡುತ್ತಾರೆ?

ಉದ್ಯೋಗಾಪೇಕ್ಷಿಯಾಗಿ ಉದ್ಯೋಗಪತಿಗಳನ್ನು ಕಾಣ ಹೋದರೆ, ಒಬ್ಬೊಬ್ಬರದು ಒಂದೊಂದು ಮರ್ಜಿ. ಹೆಚ್ಚಿನವರು ಭೇಟಿಯನ್ನೇ ನಿರಾಕರಿಸುತ್ತಾರೆ. ಯಾರು ಯಾರನ್ನೋ ಹಿಡಿದು ಭೇಟಿ ದೊರಕಿಸಿಕೊಂಡರೆ, ಕೆಲವರು ಅಮೂಲ್ಯ ಸಲಹೆ ನೀಡುತ್ತಾರೆ–ರ್ಯಾಂಕು ಬಂದಿದೆ.ಚಾಣಾಕ್ಷರಾದ ನೀವು ಇಲ್ಲಿಗೆ ಶಿಕ್ಷಣ ನಿಲ್ಲಿಸುವುದರಿಂದೇನು ಬಂತು? ಮುಂದುವರಿಸಬೇಕು, ಮುಂದು ಬರಬೇಕು. ಆಗ ಅವನಿಗೆ ಈಗಾಗಲೇ ಸಾಲದ ಹೊರೆಯಿಂದ ಬೆನ್ನು ಮೂಳೆ ಮುರಿಸಿಕೊಂಡ ತಾಯ್ತಂದೆಯರ ಚಿತ್ರ ಕಾಣುತ್ತದೆ; ಕಣ್ಣುಗಳು ತನಗರಿವಿಲ್ಲದಂತೇ ಒಸರುತ್ತವೆ.

ಇನ್ನು ಕೆಲವರು ನಮ್ಮಲ್ಲಿ ಸದ್ಯ ಕೆಲಸ ಖಾಲಿಯಿಲ್ಲ, ಅರ್ಜಿಕೊಡಿ ಎಂದೋ ಜಾಹೀರಾತು ಕೊಡುತ್ತೇವೆ ಆಗ ಅರ್ಜಿ ಹಾಕಿ ಎಂದೋ ಇನ್ನು ಏನೇನೋ ಹೇಳಿಯೋ ಕಳಿಸಿಕೊಡುತ್ತಾರೆ.

ಇದಕ್ಕಿಂತಲೂ ಬೇಸರದ ಸಂಗತಿಯೆಂದರೆ ಅವನಿಗೆ ಎಲ್ಲಿ ನಿರಾಸೆಯ ಉತ್ತರ ಬಂತೋ ಅಲ್ಲಿಯೇ ಅವನಿಗಿಂತ ಕಡಿಮೆ ಅರ್ಹತೆಯುಳ್ಳವರಿಗೆ ಉದ್ಯೋಗ ದೊರೆಯುತ್ತಲೇ ಹೋಗುತ್ತದೆ.

'ನನ್ನ ಅಪ್ಪನಿಗೋ ಮಾವನಿಗೋ ಬ್ಯಾಂಕ್ ಇರುತ್ತಿದ್ದರೆ, ಅದಕ್ಕೆ ನಾನೇ ಮೆನೇಜರನಾಗುತ್ತಿದ್ದೆ ಸಾರ್. ಆದರೇನು ಮಾಡೋದು? ನನ್ನಪ್ಪ ಸಣ್ಣ ಬೀಡಿಬೀಡ ಅಂಗಡಿ ಸಾವುಕಾರ. ಮಾವ ಈ ಲೋಕ ಬಿಟ್ಟಿಟ್ಟ.'

–ಇದು ಅವನ ಅನುಭವ; ಎದೆಯೊಳಗಿಂದ ಏರಿಬಂದದ್ದು.

'ಈಗ ಅಪ್ಪ ಹೇಳಿದ್ದು ನಿಜ ಅನ್ನಿಸುತ್ತದೆ ಸಾರ್. ಆಗಲೇ ಒಂದು ಅಂಗಡಿಯೋ ಇನ್ನೇನೋ ಹಾಕಿಕೊಂಡಿದ್ದರೆ, ಸಾಲದ ಹೊರೆಯೇ ಇರುತ್ತಿರಲಿಲ್ಲ, ಹೊಟ್ಟೆಬಟ್ಟೆಯನ್ನೂ ಕಟ್ಟಬೇಕಾಗುತ್ತಿರಲಿಲ್ಲ.'

ಈಗಲಾದರೂ ಏನು? ಏನಾದರೂ ಸ್ವತಂತ್ರ ವ್ಯಾಪಾರ ಮಾಡಬಹುದಲ್ಲ? ಎಂದರೆ ಅವನ ಸಂಕೋಚ–ಅದು ಛೇ! ಸಾರ್! ನಾನು ಪದವೀಧರ, ಮೇಲೆ ರ್ಯಾಂಕ್ ಹೋಲ್ಡರ್. ಉದ್ದ ಚಲ್ಲಣ ಬಿಳಿ ಆಂಗಿ ಹಾಕಿ ಕೊಳ್ಳುವುದು ರೂಢಿಯಾಗಿ ಹೋಯ್ತು.'

ಇದೇ ಮೊದಲಾದ ಚಿಂತೆ. ಅವನ ಅಭಿಪ್ರಾಯ–ಪದವಿ-ರ್ಯಾಂಕು ಒಂದೂ ಬೇಡ; ಪ್ರತಿಭೆ–ಯೋಗ್ಯತೆ–ಅರ್ಹತೆಯಲ್ಲ ನಡೆಯದ ರಾಣಿಕಾಲದ ನೋಟುಗಳು. (ನಾಣ್ಯಗಳಲ್ಲ!) ಈಗ ಬೇಕಾಗಿರುವುದು ನಿಟ್ ಮಿನ್ ಐ. ಆಥವಾ ವಶೀಲಿ.

ಇದು ಒಬ್ಬನ ಅನುಭವ. ಇದೇ ರೀತಿಯ ಅಥವಾ ಇದಕ್ಕೂ ಕರುಣಾಜನಕವಾದ ಅನುಭವಗಳು ಹಲವರಿಗೆ ಆಗಿರಲೇಬೇಕು; ಆಗುತ್ತಲೇ ಇರುತ್ತವೆ.

ಇವು ನಮ್ಮ ಶಿಕ್ಷಣದ ಗೊತ್ತುಗುರಿಗಳನ್ನು ಅಣಕವಾಡುತ್ತವೆ. ಯಾವ ಶಿಕ್ಷಣದಿಂದ ಜೀವನೋಪಾಯವಾಗುವುದಿಲ್ಲವೋ ಇಂದು ಅದು ನಿರರ್ಥಕ. ಶ್ರಮ ಗೌರವವನ್ನು ವಿದ್ಯಾರ್ಥಿಯಲ್ಲಿ ಮೂಡಿಸಲಾರದ ಶಿಕ್ಷಣ ಅಪ್ರಯೋಜಕ.

ಪ್ರತಿಭಾ ತರಂಗಿಣಿ ದೇಶದಲ್ಲಿ ಹರಿಯಬೇಕೆಂದು ಬಯಸುವ ಸಮಾಜ ಪ್ರತಿಭಾವಂತರನ್ನು ಉಳಿಸಿಕೊಳ್ಳಲು ಅವರ ಪ್ರತಿಭೆಯನ್ನು ಬಳಸಿಕೊಳ್ಳಲು ಮತ್ತು ಬೆಳೆಸಿಕೊಳ್ಳಲು ಎಷ್ಟು ಉತ್ಸಾಹ ತೋರುತ್ತಿದೆ?

ನಮ್ಮ ಶಿಕ್ಷಣ ಕ್ರಮ, ಸಮಾಜದ ದೃಷ್ಟಿಕೋಣ ಎರಡೂ ಕೆಟ್ಟು ಹೋಗಿವೆ. ಅವು ಅಕಾಲಿಕವಾಗಿವೆ, ಅಸತ್ಯಾರ್ಥಕವಾಗಿವೆ.

ಇದು ಗಂಭೀರ ಆರೋಪ. ಪದವಿ ಯಾಕೆ, ರ್ಯಾಂಕ್‌ಯಾಕೆ? ವಶೀಲಿಯೊಂದಿದ್ದರೆ ಸಾಕು ಎಷ್ಟೆನ ಮನೋಭಾವ ದೇಶದ ಪ್ರಗತಿಗೆ ಪರಿಪೋಷಕವಲ್ಲ; ಅದು ಮಾರಕ.

ಈ ಮಹಾಪೂರ ಈಗಾಗಲೇ ಅಪಾಯಂತ್ರವಾಗಿ ಹೆಬ್ಬಿದೆ. ಇದನ್ನು ಈಗ ಲಾಡಿರೂ ನಿರ್ವಾಮಗೊಳಿಸದೆ ಹೋದರೆ, ನಮ್ಮ ದೇಶದ ನಿರ್ಯಾತವಾಗುವ ವಸ್ತುಗಳಲ್ಲಿ ಪ್ರತಿಭೆಯೇ ಅಗ್ರಸ್ಥಾನ ಪಡೆಯುತ್ತದೆ.

—ಗೋ.

●●

ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ವಿಶೇಷ ಯೋಜನೆ

ಪಾಲ್ಘಾಟ್ ಯೋಜನೆಯಲ್ಲಿ 480 ಬಡಕಟ್ಟು ಜನಾಂಗದ ಕೈಗಾರಿಕಾಭಿವೃದ್ಧಿ ಘಟಕಗಳಿಗೆ ಕೇಂದ್ರ ಸರ್ಕಾರವು 32.50 ಕೋಟಿ ರೂಪಾಯಿ ನೀಡಿದೆ. ನಿರುದ್ಯೋಗ ಮತ್ತು ಹಿಂದುಳಿದ ಪ್ರದೇಶದ ಅಭಿವೃದ್ಧಿಗೆ ತಗಲುವ ಪೂರ್ಣ ವೆಚ್ಚವನ್ನು ಕೇಂದ್ರ ಸರ್ಕಾರ ವಹಿಸಿಕೊಂಡಿದೆ.

ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕೈಗಾರಿಕೀಕರಣವಿಲ್ಲದೆ ಹಿಂದುಳಿದಿರುವ 221 ಜಿಲ್ಲೆಗಳನ್ನು ಕೇಂದ್ರ ಸರ್ಕಾರ ಆಯ್ಕೆಮಾಡಿದೆ. ಈ ಜಿಲ್ಲೆಗಳಲ್ಲಿ ಹೊಸ ಕೈಗಾರಿಕೆಗಳನ್ನು ಆರಂಭಿಸಲು ಸರ್ಕಾರಿ ವಲಯದ ಹಣಕಾಸು ಮತ್ತು ಸಾಲನೀಡಿಕೆ ಸಂಸ್ಥೆಗಳಿಂದ ರಿಯಾಯಿತಿ ದರದಲ್ಲಿ ಬಂಡವಾಳ ಮುಂಗಡ ನೀಡಲಾಗುತ್ತದೆ.

ಗ್ರಾಮಾಂತರ ಪ್ರದೇಶದ ನಿರುದ್ಯೋಗ ನಿವಾರಣೆಗೆ ವಾರ್ಷಿಕ 30 ಕೋಟಿ ರೂಪಾಯಿಯ ತ್ವರಿತ ಯೋಜನೆ ಆರಂಭಿಸಲಾಗಿದೆ. ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಲು ವಿಶೇಷ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ

ಹಿಂದುಳಿದ ಪ್ರದೇಶಗಳಲ್ಲಿ ರಾಜ್ಯ ವಿದ್ಯುತ್ ಮಂಡಳಿಗಳು ಗ್ರಾಮೀಣ ವಿದ್ಯುತ್ ಕಾರ್ಯಕ್ರಮಗಳಿಗೆ ನೆರವಾಗಲು ಕೇಂದ್ರ ಸರಕಾರವು ಗ್ರಾಮೀಣ ವಿದ್ಯುದೀಕರಣ ಕಾರ್ಪೊರೇಷನ್ನನ್ನು ರಚಿಸಿ ಆದರ ಮೂಲಕ ರಿಯಾಯಿತಿ ಬಡ್ಡಿದರದಲ್ಲಿ ಬಂಡವಾಳ ನೀಡುತ್ತಿದೆ.

ತೆಲಂಗಾಣ ಪ್ರದೇಶದ ವಿಶೇಷ ಅಭಿವೃದ್ಧಿ ಕಾರ್ಯಕ್ರಮಗಳಿಗೆಂದು ಕೇಂದ್ರ ಸರ್ಕಾರವು ಆಂಧ್ರ ಸರ್ಕಾರಕ್ಕೆ 45 ಕೋಟಿ ರೂಪಾಯಿಯ ವಿಶೇಷ ನೆರವು ನೀಡಿದೆ. ಈ ಮೊತ್ತ ಯೋಜನಾ ಕಾರ್ಯಕ್ರಮದಲ್ಲಿ ನೀಡಿರುವ ಹಣಕ್ಕಿಂತ ವ್ಯತ್ಯೇಕವಾದುದು.

ವಿವಿಧ ರಾಜ್ಯಗಳ ಸಮತೆಯನ್ನು ನಿರ್ಮೂಲನಮಾಡಿ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಯನ್ನು ಕೈಗೊಳ್ಳಲೆಂದು ನಾಲ್ಕನೇ ಯೋಜನೆಯಲ್ಲಿ ಹಂಚಿದ್ದ ಮೊತ್ತದ ಶೇಕಡಾ 10ರಷ್ಟು ಹಣವನ್ನು ವ್ಯಕ್ತಿ ಆದಾಯ ರಾಷ್ಟ್ರೀಯ ಸರಾಸರಿ ಆದಾಯಕ್ಕಿಂತ ಕಡಿಮೆಯಿರುವ ಬಿಹಾರ, ಒರಿಸ್ಸಾ, ರಾಜಾಸ್ತಾನ್, ಕೇರಳ, ಮಧ್ಯಪ್ರದೇಶ ಮತ್ತು ಉತ್ತರ ಪ್ರದೇಶ ರಾಜ್ಯಗಳಿಗೆ ಹಂಚಲಾಗಿದೆ. ●

ಚಂದಾ ಹಣ ಬಾಕಿ ಇರುವವರು ದಯಮಾಡಿ ಆದಷ್ಟು ತ್ವರ್ಯಗಳುಹಿಸಿಕೊಡುವಂತೆ ವಿನಂತಿ.

ಅರವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,

ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಕುಂದಾಪುರ ಮುನ್ಸೀಫ್ ಕೋರ್ಟಿನಲ್ಲಿ

S. C. 91/1959

ಪಾದಿ —ಬುಗ್ಗಪ್ಪ ಸೆಟ್ಟಿ

ಪ್ರತಿವಾದಿರು — 1 ರಾಮ, 2. ಲಕ್ಷ್ಮಣ

ಕುಂದಾಪುರ ತಾಲೂಕು ಶಿರೂರು ಗ್ರಾಮದಲ್ಲಿರುವ ದೇವಡಿಗ ದುರ್ಗಿ ಕೊಂಗ್ಸಿನ ಮಕ್ಕಳು ರಾಮ 1 ಲಕ್ಷ್ಮಣ 1 ಕೂಡಾ 2ಜನರಿಗೆ ಈ ಮೂಲ್ಕ ತಿಳಿಯಪಡಿಸುವುದೇನೆಂದರೆ—

ಪ್ರತಿವಾದಿರು ವಾದಿಗೆ ತಾ. 3.3.1966 ರಲ್ಲು ರೂಪ್ಯಾ 150.00ಕ್ಕೆ ಬರೆಕೊಟ್ಟ ಡಿಮಾಂಡು ನೋಟಿನ ಹಣ ಬಡ್ಡಿ ಬರಮಾಡಿಕೊಳ್ಳುವಲೆ ವಾದಿಯು ಪ್ರತಿವಾದಿರ ಮೇಲೆ ದಾಖ್ಲು ನೂಡಿದ ಮೇಲಿನ ದಾವೆಯು ತಾ. 23.9.1972 ಕ್ಕೆ ತಪ್ಪಿಗೆ ಇರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವ್ಸ ಮೇಲಿನ ಕೋರ್ಟು ಮುಂದೆ ಹಗಲು 11ಗಂಟೆಗೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲ್ಕ ತಿಳಿಯಪಡ್ಸಿಯದೆ.

N. S. Parameshwariah
Advocate for Plff

Date 21—8—72
Coondapur.

ರಾಷ್ಟ್ರೀಯ ಸ್ವಾತಂತ್ರ್ಯ ಸಮರಕ್ಕೆ

ದಕ್ಷಿಣ ಕನ್ನಡದ ಅಮೋಘ ಕೊಡುಗೆ

[ಸ್ವಾತಂತ್ರ್ಯ ಸಂಚಿಕೆಯಲ್ಲಿ ದಿ|ಕಾರ್ನಾಡು ಸದಾಶಿವರಾಯರ ಪರಿಚಯ ಪ್ರಕಟವಾಗಿದೆ. ಇನ್ನೂ ಕೆಲವರ ಸಂಕ್ಷಿಪ್ತ ಪರಿಚಯ ಇಲ್ಲಿ ಮಾಡಿಕೊಡಲಾಗಿದೆ]

ದಿ| ಪ್ರೊ. ಉಮೇಶರಾಯರು
(1898–1962)

ಬೇಳಭಟ್ಟ ಕಾರ್ನಾಡು ಸದಾಶಿವರಾಯರಂಥೆ ಹೋರಾಟಕ್ಕಾಗಿ ಮುಡಿದ ಸಾರಸ್ವತ ಪರಿಮಳದ ಇನ್ನೊಬ್ಬರ ಮುಖಂಡರೆಂದರೆ ದಿ| ಎಂ. ಉಮೇಶರಾಯರು. ಅವರು 1898ನೇ ಇಸ್ವೀ ಜುಲೈ 25ರಂದು ಕಾಸರಗೋಡಿನಲ್ಲಿ ಜನಿಸಿದರು. ಅವರ ತಂದೆ ಜಿಲ್ಲೆಯ ಮುನ್ಸಿಫ್ ಕೋರ್ಟಿನಲ್ಲಿ ಗುಮಾಸ್ತರಾಗಿದ್ದವರು. ಅವರ ಹಿರಿಯರು ಮೂಡಬಿದಿರೆಯ ಜೈನಮನೆತನದ ಕರಣೀಕರಾಗಿದ್ದುದರಿಂದ ಉಮೇಶರಾಯರ ಹೆಸರಿನ ಮೊದಲ 'ಎಂ' ಆ ಹಿರಿಯರ ನೆನಪಿಗಾಗಿ (ಮೂಡಬಿದಿರೆ) ಇತ್ತು.

ಮುಂಬ್ಯಾನಲ್ಲಿ ಕಾರ್ನಾಡು ಸದಾಶಿವರಾಯರ ಭೇಟಿಯಾದುದೇ ತಡ 'ಲಾ' ವಿದ್ಯಾಭ್ಯಾಸವನ್ನು ಅರ್ಧಕ್ಕೇ ನಿಲ್ಲಿಸಿ ಶ್ರೀ ಉಮೇಶರಾಯರು (1921) ಮಂಗಳೂರಿಗೆ ಬಂದರು. 1929ರಿಂದ 1962ರ ತನಕ ಕಾಸರಗೋಡಿನಲ್ಲಿ ವಕೀಲವೃತ್ತಿ ನಡೆಸುತ್ತಾ ಮಧ್ಯೆ ಮಧ್ಯೆ ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುತ್ತಾ ಬಂದರು. 1930ರ ಉಪ್ಪಿನ ಸತ್ಯಾಗ್ರಹದ ಮೊದಲನೇ ದಳದ ನಾಯಕನಾಗಿ ಹೊರಟ ಶ್ರೀ ಉಮೇಶರಾಯರು ದಸ್ತಗಿರಿ ಹೊಂದಿ ಆರು ತಿಂಗಳ ಸಶ್ರಮ ಸೆರೆಮನೆವಾಸದ ಶಿಕ್ಷೆಗೊಳಗಾದರು. ಆಗ ಅವರ ಎರಡು ವರ್ಷದ ಮಗು ಕಠಿಣ ಕಾಮಿಲೆಗೀಡಾಗಿತ್ತು. ತಿರುಚಿರಾಪಳ್ಳಿ ಸೆರೆಮನೆಗೆ ಹೋಗುವ ಮುನ್ನ ಅವರಿಗೆ ತಮ್ಮ ಪತ್ನಿ ನುತ್ತು ಮಗುವಿನ ಭೇಟಿಗೆ ಅನುಮತಿ ನೀಡಿದರು. ಶ್ರೀ ಉಮೇಶರಾಯರು ತಿರುಚಿರಾಪಳ್ಳಿಗೆ ಹೋದ ಕೆಲವೇ ದಿನಗಳಲ್ಲಿ ಆ ಮಗುವು ಅಸುನೀಗಿತು. 1931ರ ಸಮಯ ಸುಮಗೂರಿನಲ್ಲಿ ಶ್ರೀ ಪ್ರಕಾಶರ ಅಧ್ಯಕ್ಷತೆಯಲ್ಲಿ ಜರಗಿದ ರಾಜಕೀಯ ಸಮ್ಮೇಳನದ ಸಂಘಟಕರಾಗಿದ್ದರು. 1942ರ 'ಕ್ವಿಟ್ ಇಂಡಿಯಾ' (ಭಾರತದಿಂದ ತೊಲಗಿರಿ) ಚಳವಳದಲ್ಲಿ ದಿಗ್ಬಂಧನಕ್ಕೊಳಗಾಗಿ 1944ರವರೆಗೆ ಸೆರಮನೆಯಲ್ಲಿದ್ದರು. ಅವರ ಮಗ ನೋಹನರಾವ್ ಸಹ 1942ರ ಅಂದೋಲನದಲ್ಲಿ ಆರು ತಿಂಗಳ ಸೆರಮನೆ ಶಿಕ್ಷೆಗೀಡಾದರು. 1956ರ ಫ್ರಾಂಕ್ಯ ಪುನರ್ ವಿಂಗಡನೆಯು ಸಂದರ್ಭದಲ್ಲಿ ಕಾಸರಗೋಡು–ಅದರಲ್ಲೂ ಚಂದ್ರಗಿರಿಯ ಉತ್ತರದ ಉಪತಾಲೂಕು—ಕೇರಳಕ್ಕೆ ಸೇರಿಸಲ್ಪಟ್ಟಿತು. 1957ರ ಚುನಾವಣೆಯಲ್ಲಿ ಕರ್ನಾಟಕ ಸಮಿತಿಯ ಉಮೇದ್ವಾರರಾಗಿ ಅವರು ಅವಿರೋಧವಾಗಿ ಆಯ್ಕೆಗೊಂಡರು. ಕಾಸರಗೋಡಿನ ಜನತಾ ಪ್ರತಿನಿಧಿಯಾಗಿ ಉತ್ತಮ ಸೇವೆ ಸಲ್ಲಿಸಿದರು.

ಶ್ರೀ ಕೋಟ ರಾಮಕೃಷ್ಣ ಕಾರಂತರು
(1894–)

ಉಡುಪಿ ತಾಲೂಕಿನ ಕೋಟದಲ್ಲಿ ಜನಿಸಿದ ಶ್ರೀ ರಾಮಕೃಷ್ಣ ಕಾರಂತರು ಕುಂದಾಪುರ, ಮಂಗಳೂರು ಮತ್ತು ಮದ್ರಾಸುಗಳಲ್ಲಿ ಶಿಕ್ಷಣ ಮುಗಿಸಿದ ನೇಲೆ ಮುಂಬಾಯಿ ವಿಶ್ವವಿದ್ಯಾನಿಲಯದ ಎಲ್. ಎಲ್. ಬಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ 1919ರಲ್ಲಿ ಮಂಗಳೂರಲ್ಲಿ ವಕೀಲವೃತ್ತಿಯನ್ನು ಆರಂಭಿಸಿದರು. 1920ರಲ್ಲಿ ಕಾಂಗ್ರೆಸ್ ಸೇರಿದರು; ಮಹಾತ್ಮಾಜಿಯ ಕರೆ ಬಂದೊಡನೆ 1922ರ ಅಸಹಕಾರ ಚಳವಳಿ ಕಾಲದಲ್ಲಿ ತನ್ನ ವಕೀಲವೃತ್ತಿಯನ್ನು ನಿಲ್ಲಿಸಿದರು. ಮಂಗಳೂರು ನಗರ ಸಭೆಯ ಸದಸ್ಯರಾಗಿ ಹತ್ತು ವರ್ಷ ಸಲ್ಲಿಸಿದ ಸೇವೆ ಉಲ್ಲೇಖನೀಯ. 1926ರ ಚುನಾವಣೆಯಲ್ಲಿ ಆಗಿನ ಮದ್ರಾಸು ಶಾಸನಸಭೆಯ ಸದಸ್ಯರಾಗಿ ಆಯ್ಕೆಯಾದರು. 1930ರ ಉಪ್ಪಿನ ಸತ್ಯಾಗ್ರಹ ಕಾಲದ ಕಾಂಗ್ರೆಸ್ ಅಧೀಕ್ಷಕತ್ವಕ್ಕೆ ರಾಜೀನಾಮೆಯಿತ್ತು ಹೊರಬಂದರು. ಜಿಲ್ಲೆಯ ರೆವಿನ್ಯೂ ಸೆಟಲ್‌ಮೆಂಟ್ ಮತ್ತು ಅರಣ್ಯ ಇಲಾಖೆಗಳಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಅವರದು ಎತ್ತಿದ ಕೈ ಜಿಲ್ಲಾ ಭೂಸೂಲಿಕರ ಸಂಘದ ಕಾರ್ಯದರ್ಶಿಯೂಗಿಯೂ ಒಂದು ದಶಕದ ಕಾಲ ದುಡಿಯುತ್ತಿದ್ದಾಗ ಅವರು ಮದ್ರಾಸು ಸರಕಾರಕ್ಕೆ ಅನೇಕ ವರದಿ, ಮನವಿಗಳನ್ನು ರೈತರ ಪರವಾಗಿ ಸಲ್ಲಿಸಿದರು.

1937ರ ಚುನಾವಣೆಯಲ್ಲಿ ಮದ್ರಾಸು ಶಾಸನ ಸಭೆಗೆ ಪುತ್ತೂರು—ಕಾಸರಗೋಡು ಕ್ಷೇತ್ರದ ಪ್ರತಿನಿಧಿಯಾಗಿ ಆರಿಸಿ ಬಂದರು. ಆಗಿನ ಶ್ರೀ ಸಿ. ರಾಜಗೋಪಾಲಾಚಾರಿಯವರ ಮಂತ್ರಿ ಮಂಡಲದಲ್ಲಿ ಪಾರ್ಲಿಮೆಂಟರಿ ಕಾರ್ಯದರ್ಶಿ ಸ್ಥಾನವನ್ನಲ್ಲಿದ್ದರು. 1940–41ರ ವೈಯಕ್ತಿಕ ಸತ್ಯಾಗ್ರಹದಲ್ಲೂ, 1942 ಆಗಸ್ಟಿನ (ಕ್ವಿಟ್ ಇಂಡಿಯಾ) ಕಾಂಗ್ರೆಸ್ ನಿರ್ಣಯದಂತೆ ನಡೆದ ಚಳವಳದಲ್ಲೂ ಭಾಗವಹಿಸಿ ಬಂಧಿಸಲ್ಪಟ್ಟು ಕಾರಾಗೃಹವಾಸವನ್ನನುಭವಿಸಿದರು. ಮುಂದೆ 1946ರ ಚುನಾವಣೆಯಲ್ಲಿ ಹಿಂದಿನ ಕ್ಷೇತ್ರದಿಂದಲೇ ಆಯ್ಕೆಗೊಂಡ ಶ್ರೀ ಕಾರಂತರು ಶ್ರೀ ಪ್ರಕಾಶರವರ ಮಂತ್ರಿ ಮಂಡಲದಲ್ಲಿ ರೆವಿನ್ಯೂ ಸಚಿವರಾಗಿದ್ದರು. 1951ರ ತನಕ ಶಾಸನ ಸಭಾ ಸದಸ್ಯರಾಗಿದ್ದರು.

ಕರ್ನಾಟಕ ಏಕೀಕರಣ ಚಳವಳದಲ್ಲೂ ಶ್ರೀ ರಾಮಕೃಷ್ಣ ಕಾರಂತರು ಅಗ್ರ ಪಂಗ್ತಿಯಲ್ಲಿದ್ದರು. ಅವರು 1951ರಲ್ಲಿ ಕಾಂಗ್ರೆಸ್ಸನ್ನು ತ್ಯಜಿಸಿ, ಪ್ರಜಾ ಸಮಾಜವಾದಿ ಪಕ್ಷದ ಸದಸ್ಯರಾಗಿಯೂ, ಅದರ ಉಪಾಧ್ಯಕ್ಷರಾಗಿಯೂ ಇದ್ದರು. ಈಗ ಅವರು ಯಾವ ರಾಜಕೀಯ ಪಕ್ಷದಲ್ಲೂ ಇಲ್ಲ. 1956ರ ತನಕ ಮಂಗಳೂರಿನಲ್ಲಿ ಪ್ರಸಿದ್ಧ ವಕೀಲರಾಗಿದ್ದು ಕೊಂಡು ಜನಸೇವೆಸಲ್ಲಿಸಿದ ಶ್ರೀ ಕೋಟ ರಾಮಕೃಷ್ಣ ಕಾರಂತರು ಆನಂತರ ಬೆಂಗಳೂರಿಗೆ ಹೋಗಿ ನೆಲಸಿ ಅಲ್ಲಿ ಆ ವೃತ್ತಿಯಲ್ಲಿ ಮುಂದರಿಯುತ್ತಿರುವರು.

ಶ್ರೀಮತಿ ಕಮಲಾದೇವಿ
ಚಟ್ಟೋಪಧ್ಯಾಯ

ಇವರು 1903ರಲ್ಲಿ ಮಂಗಳೂರಿನಲ್ಲಿ ಜನಿಸಿದರು. ಕೆಂಬ್ರಿಜ್ ಮತ್ತು ಲಂಡನ್ ವಿಶ್ವವಿದ್ಯಾಲಯಗಳಲ್ಲಿ ಸಮಾಜ ಶಾಸ್ತ್ರ ಮತ್ತು ಅರ್ಥಶಾಸ್ತ್ರಗಳನ್ನು ವ್ಯಾಸಂಗಮಾಡಿ ಪದವೀಧರರಾದರು. ಭಾರತೀಯ ಸ್ವಾತಂತ್ರ್ಯಾಂದೋಲನದಲ್ಲಿ ಪಾಲ್ಗೊಂಡು 1930ರ ಉಪ್ಪಿನ ಸತ್ಯಾಗ್ರಹದ ವೇಳೆ ಸಂಘಟಕರಾಗಿ ಮಿಡಿದರು. ಹಲವು ಸಲ ಬಂಧನಕ್ಕೊಳಗಾಗಿ ಸೆರಮನೆ ಸೇರಿದ್ದಾರೆ. ಒಟ್ಟು ಐದು ವರ್ಷಗಳ ಕಾಲ ಕಾರಾಗೃಹ ವಾಸನವನ್ನು ಅನುಭವಿಸಿದರು. ಇವರು ಅಖಿಲ ಭಾರತ ಕಾಂಗ್ರೆಸ್ ಸಮಿತಿ, ಕಾರ್ಯಕಾರಿ ಸಮಿತಿಗಳ ಸದಸ್ಯರಾಗಿದ್ದರು. ಸಮಾಜವಾದ, ಕಾರ್ಮಿಕರ ಚಳವಳಗಳಲ್ಲಿ ಭಾಗವಹಿಸಿದರಲ್ಲದೆ ಭಾರತ ಸಮಾಜವಾದೀ ಪಕ್ಷದ ಸಂಸ್ಥಾಪಕರಲ್ಲೊಬ್ಬರಾಗಿದ್ದರು. ಲಲಿತಕಲೆ–ನಾಟಕ ಕಲೆಗಳು ವಿಶೇಷವಾಗಿ ಅವರ ಮೆಚ್ಚಿನ ವಿಷಯ. ಸಮಾಜ ಸೇವೆ ಮತ್ತು ಮಹಿಳೆಯರ ಪ್ರಗತಿ ಕಾರ್ಯಗಳಲ್ಲಿ ಅವರ ನೇತೃತ್ವವು ಸಕಲರಿಂದಲೂ ಪ್ರಶಂಸೆ ಗಳಿಸಿದೆ.

ಶ್ರೀ ಕೆ. ಕೆ. ಶೆಟ್ಟಿಯವರು

ಇವರು 1901 ಎಪ್ರಿಲ್ 18ರಂದು ಬಂಟರ ಯಾನೆ ನಾಡವರ ಹೆಸರಾಂತ "ಕೋಟೆ ಬೀಡು" ಎಂಬ ಮನೆತನದಲ್ಲಿ ಜನಿಸಿದರು. ಇವರ ತಂದೆ ಶ್ರೀಮಾನ್ ಸಂಕಯ್ಯ ಶೆಟ್ಟರು. ಇವರ ಮಾತೃಶ್ರೀಯವರ ಮನೆ ಕೆಮ್ಮೂರು. ಇವರ ಪೂರ್ತಿ ಹೆಸರು ಕೆಮ್ಮೂರು ಕಾಂತಪ್ಪ ಶೆಟ್ಟಿ ಎಂದು. ಕಟಪಾಡಿಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿ ಮುಂದಿನ ಶಿಕ್ಷಣಕ್ಕಾಗಿ ಉಡುಪಿಯ ಕ್ರಿಶ್ಚಿಯನ್ ಹೈಸ್ಕೂಲು ಸೇರಿದರು. ಆದಾಗಲೇ ಚರಿತ್ರಾರ್ಹವಾದ 1920ರ ಅಸಹಕಾರ ಚಳವಳದ ಕಾಲ. ಪದವಿಯ ಫಾರ್ಮಿನಲ್ಲಿ ಓದುತ್ತಿದ್ದ 19ವರ್ಷ ಪ್ರಾಯದ ತರುಣ ಕೆ.ಕೆ. ಶೆಟ್ಟರು ಗಾಂಧೀಜಿಯವರ ಆದೇಶದಂತೆ ತನ್ನ ಹೈಸ್ಕೂಲು ವಿದ್ಯಾಭ್ಯಾಸಕ್ಕೆ ಶರಣು ಹೊಡೆದು ರಾಷ್ಟ್ರೀಯ ಹೋರಾಟದಲ್ಲಿ ಧುಮುಕಿದರು. ಜಿಲ್ಲೆಯ ಗ್ರಾಮಾಂತರ ಪ್ರದೇಶಗಳನ್ನು ಸಂಚರಿಸಿ ಖಾದಿಪ್ರಚಾರ, ಚರಕ ಪ್ರಚಾರ, ಮದ್ಯಪಾನ ನಿಷೇಧ ಮೊದಲಾದ ರಚನಾತ್ಮಕ ಕಾರ್ಯದಲ್ಲಿ ಒಂದು ವರ್ಷ ಕಾಲ ಶ್ರಮಿಸಿದರು. ಉಡುಪಿಯ "ತಿಲಕ ವಿದ್ಯಾಲಯ"ದಲ್ಲಿ ಸೇವೆ ಸಲ್ಲಿಸಿದರು.

1935ರಲ್ಲಿ ಹುಟ್ಟುಹಬ್ಬವನ್ನು ಶ್ಲಾಘಿಸಿ ಶ್ವ ಕವಿ ರವೀಂದ್ರನಾಥ ಠಾಗೂರರ "ವಿಶ್ವ ಭಾರತಿ"ಯಲ್ಲಿದ್ದು ಬಂಗಾಳಿ ಭಾಷೆಯನ್ನು ಕಲಿತರು. ಮರಳಿ ಊರಿಗೆ ಬಂದಿಕರು 1920ರ ಹೋರಾಟದ ಪ್ರೇರಣೋತ್ಸಶ್ರೀ ಸಾಂತ್ಯಾರ್ ಅನಂತ ಪದ್ಮನಾಭ ಭಟ್ಟರು ಸಾಂತ್ಯಾರ್‌ನಲ್ಲಿ ಪ್ರಾರಂಭಿಸಿದ್ದ "ರಾಷ್ಟ್ರೀಯ ಪಾಠಶಾಲೆ"ಯ ಮುಖ್ಯೋಪಾಧ್ಯಾಯರಾಗಿ ಕೆಲಸಮಾಡಿದರು. 1930–31ರಲ್ಲಿ ದೇಶವಿಡೀ ಹಬ್ಬಿದ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿ ಬಂಧನಕ್ಕೊಳಗಾದರೂ ಶ್ರೀ ಎ.ಬಿ. ಶೆಟ್ಟರ ಪ್ರಭಾವದಿಂದ ಇವರಿಗನಿವಾರ್ಯವೇನೆ ಬಂಧಮುಕ್ತರಾದರು. ಮುಂದೆ 'ನವಯುಗ'ದ ಸಂಪಾದಕರಾಗಿ 1942ರ ವರೆಗೆ ಶ್ರಮಿಸಿದರಲ್ಲದೆ, ಉಡುಪಿ ತಾಲೂಕು ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯೂದರು. ಭಾರತೀಯ ಸ್ವಾತಂತ್ರ್ಯ ಸಮರದ ಕಟ್ಟ ಕಡೆಯ ಹೋರಾಟವಾದ 'ಕ್ವಿಟ್ ಇಂಡಿಯಾ' ಚಳವಳದಲ್ಲಿ ಶ್ರೀ ಶೆಟ್ಟರು ಭಾಗವಹಿಸಿದುದಕ್ಕೆ 1½ವರ್ಷ ಕಠಿಣ ಸಜೆಗೊಳಗಾದರು.

ಅಘಟಿತರ ಸಮೂರು ಆರು ವರ್ಷಕಾಲ ಜಿಲ್ಲಾ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಯಾಗಿಯೂ ಮೂರು ಅವಧಿಯಲ್ಲಿ ಅಧ್ಯಕ್ಷರಾಗಿಯೂ ತುಂಬಾ ಸೇವೆ ಸಲ್ಲಿಸಿದರು. ಅನಂತರ 15ವರ್ಷಗಳ ಕಾಲ ವೈಸೂರಿನ ವಿಧಾನ ಪರಿಷತ್ ಸದಸ್ಯರಾಗಿದ್ದು ಆಮೇಲೆ ಅದರ ಉಪಾಧ್ಯಕ್ಷ ಮತ್ತು ಅಧ್ಯಕ್ಷ ಪದವಿಯಲ್ಲಿದ್ದರು ಆಗಲೇ ಅವರು ಮೈಸೂರು ರಾಜ್ಯ ಸರ್ಕಾರದ ಪ್ರತಿನಿಧಿಯಾಗಿ ವಿದೇಶ ಪ್ರವಾಸ ಕೈಗೊಂಡು ಪಾರ್ಲಿಮೆಂಟರಿ ಕಾರ್ಯ ವಿಧಾನಗಳ ಅನುಭವ ಗಳಿಸಿದರು. ಹ್ಯು ದೇಶ ಕಾಂಗ್ರೆಸ್, ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸದಸ್ಯರಾದರು. ಕಳೆದ ಲೋಕಸಭಾ ಚುನಾವಣೆಯಲ್ಲಿ (ಆ)ಕಾಂಗ್ರೆಸ್ ವತಿಯಿಂದ ಮಂಗಳೂರು ಕ್ಷೇತ್ರದಿಂದ ಸ್ಪರ್ಧಿಸಿ ವಿಜಯಿಗಳಾದರು. ಲೋಕ ಸಭೆಯಲ್ಲಿ 'ಶಿಕ್ಷಣ ಸಾರಿಗೆ' ಸಲಹಾ ಸಮಿತಿಗಳ ಸದಸ್ಯರಾಗಿರುವರು. ಜಿಲ್ಲಾ ರಾಜಕೀಯ ಸಂತ್ರಸ್ತರ ಸಂಘದ ಅಧ್ಯಕ್ಷರಾಗಿರುವರು.

●●

In the Court of the Munsif of Buntwal, South Kanara.

R. R. C. No. 2503/71

Between:

K. M. Parameshwara Bhat —Applicant

and

Batya Gowda and two others —Opponents

To

(1) Shivappa Gowda, (Opponent No. 3)

(2) Choma (Opponent No. 5)

Both are children of Gangayya Gowda, residing at Balikodi of Kanyana Village, Post: Kanyana.

Please take notice that the above R. R. C. stands posted for your appearance before the above court at 11 A. M. on 4—9—72. Should you fail to appear before the court on the appointed date and hour either in person or through an advocate you will be declared exparte and the matter will be decided in your absence. Please note.

(By the order of the court)

B. A. Somayaji
Advocate for Petitioner

Buntwal, S. K.
Date 15–8—72

ರಷ್ಯಾದ ರಥಕ್ಕೆ ಕಮ್ಯೂನಿಸ್ಟ್ ಕುದುರೆಗಳು

ಪ್ರಸಂಚದಲ್ಲಿರುವ ಕಾರ್ಮಿಕರನ್ನು ರಷ್ಯಾದಡಿಗೆ ತರಲು ಅಲ್ಲಿಯ ಕಮ್ಯೂನಿಸ್ಟ್ ಪಕ್ಷವು ಪರಿಶ್ರಮಿಸುತ್ತಿದೆ. ರಷ್ಯಾ–ಬ್ರಿಟನ್ ಒಪ್ಪಂದದ ಅನುಕೂಲ ವಾತಾವರಣದಲ್ಲಿ ರಷ್ಯಾದ ದಲ್ಲಾಳಿ ಬ್ರಿಟಿಷ್ ಕಮ್ಯೂನಿಸ್ಟರು ಇಲ್ಲಿಗೆ ಪ್ರಚಾರಕ್ಕಾಗಿ ಬಂದು, ಕಮ್ಯೂನಿಸಮಿನ ಬೀಜವನ್ನು ಬಿತ್ತಿದರು. ಆ ಬೀಜ ಇಂದು ವೃಕ್ಷವಾಗಿದೆಯೊದರೂ ಅದು ರಷ್ಯಾವನ್ನು ಮರೆತಿರುವದಿಲ್ಲ.

ರಷ್ಯದಲ್ಲಿ ಕಮ್ಯೂನಿಸ್ಟರ ಸಮ್ಮೇಳನ ನಡೆಯಿಲ್ಲಿ ಭಾರತದಿಂದ ಪ್ರತಿನಿಧಿಗಳು ಅಲ್ಲಿಗೆ ಹೋಗುತ್ತಾರೆ. ಅವಶ್ಯಕ್ಕೆ ಪ್ರೇಕ್ಷಕರಾಗಿರಬೇಕು, ಅಷ್ಟೇ ಅಲ್ಲ, ಚಿಲ್ಲಿಯ ಕಮ್ಯೂನಿಸ್ಟ್ ಪಕ್ಷ ಹೇಳುವದನ್ನು ಕೇಳಿ ಅದರಂತೆ ಇಲ್ಲಿ ನಡೆಯಬೇಕು. ಅದು ಸಾಲದೆನ್ನುವಂತೆ, ಇಲ್ಲಿ ಕಮ್ಯೂನಿಸ್ಟರ ಕಾಂಗ್ರೆಸ್ ನಡೆದಲ್ಲಿ ರಷ್ಯಾದ ಕಮ್ಯೂನಿಸ್ಟರು ಬಂದು ದೆಂತೆಗಳಂತೆ ವರ್ತಿಸಿ ಆಜ್ಞೆಗಳನ್ನಿತ್ತು ಹೋಗುವದು ನಡೆದು ಬಂದಿರುವ ರೂಢಿ ಇದೆ.

ಅದರಂತೆ ಇದೇ ಜೂನಿನಲ್ಲಿ ರಷ್ಯಾ ಕಮ್ಯೂನಿಸ್ಟರ ಮಹಾ ಸಮ್ಮೇಳನ ನಡೆದಾಗ ಚಿಲ್ಲಿಂವ ಡಾಂಗೆಯವರ ನೇತೃತ್ವದಲ್ಲಿ ಒಂದು ಗುಂಪು ಅಲ್ಲಿಗೆ ಹೋಯಿತು. ಡಾಂಗೆ ಇಲ್ಲಿಯ ಕಮ್ಯೂನಿಸ್ಟ್ ಪಾರ್ಟಿಯ ಅಧ್ಯಕ್ಷರಿದ್ದಾರೆ. ಆ ಪಾರ್ಟಿಯ ಮಹಾಕಾರ್ಯದರ್ಶಿ ರಾಜೇಶ್ವರ ರಾಯರೊಂದಿಗೆ ಭೂಸೇಶ ಗುಪ್ತ ಮತ್ತು ತೈಪ್ಪಣ್ಣ ಕೂಡಾ ಅಲ್ಲಿಗೆ ಹೋಗಿದ್ದರು.

ರಷ್ಯಾದಲ್ಲಿ ಕಮ್ಯೂನಿಸ್ಟ್ ಪಾರ್ಟಿಯಲ್ಲದೆ ಬೇರಾವ ಪಕ್ಷವೂ ಇರುವದಿಲ್ಲ. ಅಲ್ಲಿ ಪಕ್ಷ ಪ್ರತ್ಯೇಕ ಸರಕಾರ ಬೇರೆ ಅಲ್ಲ. ಪಕ್ಷದ ಪ್ರಮುಖನಿಗೇನೇ ಅಲ್ಲಿ ಅಧಿಕಾರ ಅಧಿಕವಿದೆ. ಹಾಗಿರುವದರಿಂದ ಅಲ್ಲಿನ ಪಕ್ಷದ ಪ್ರಮುಖನು ಇಲ್ಲಿಯ ಪಕ್ಷದ ಕುರಿತೇನಾದರೂ ಹೇಳಿದಲ್ಲಿ ಅದು ಅಲ್ಲಿಯ ಸರಕಾರ ಹೇಳಿದಂತೆಯೇ ಸರಿ. ಅಲ್ಲಿನ ಪತ್ರಿಕೆಗಳು ಸರಕಾರದ ವಶದಲ್ಲಿರುವದರಿಂದ ಆ ಪತ್ರಿಕೆಗಳಲ್ಲಿ ಬಂದ ಸಮಾಚಾರ ಸರಕಾರೀ ಸಮಾಚಾರವೇ ಸರಿ. ಅಲ್ಲಿಯ ಕಮ್ಯೂನಿಸ್ಟ್ ಮುಖಂಡರು ಇಲ್ಲಿಯ ಕಮ್ಯೂನಿಸ್ಟ್ ಪಾರ್ಟಿಯನ್ನು ಬಹಳವಾಗಿ ಹೊಗಳಿರಬೇಕು. ರಷ್ಯಾ ತಿಳಿಸಿರುವಂತೆ, ಆ ಮಾರ್ಗದಲ್ಲಿ ಇಲ್ಲಿಯ ಕಮ್ಯೂನಿಸ್ಟರು ಜೆನ್ನಾಗಿ ಮುನ್ನಡೆಯುತ್ತಿದ್ದಾರಂತೆ.

ಇಲ್ಲಿಗೆ ಕ್ರುಶ್ಚೇವ್, ಬುಲ್ಗೇನಿನ್ ಬಂದು ಹೋದ ಮೇಲೆ ಇಲ್ಲಿಯ ಕಮ್ಯೂನಿಸ್ಟರು ಹೊಸ ಮುಖವಾಡ ಹಾಕಿಕೊಂಡಿರುವರು.ಅದರಂತೆ ಅಂದು ಜವಾಹರಲಾಲ ನೆಹ್ರೂರನ್ನು ಇಂದು ಇಂದಿರಾ ಗಾಂಧಿಯವರನ್ನು ಹೊಗಳಿ ಅವರ ಮಂತ್ರಿಮಂಡಲದೊಳಗೆ ವಿಸಿ ಒಳಗೆ ಕಳುಹಿಸಿದ್ದಾರೆ. ಈ ಕೆಲಸ ಜೆನ್ನಾಗಿ ತೃಪ್ತಿಕರವಾಗಿ ನಡೆದಿದೆಯೆಂದು ರಷ್ಯಾದ ಕಮ್ಯೂನಿಸ್ಟ್ ಪಾರ್ಟಿ ಇಲ್ಲಿಯವರಿಗೆ ಉತ್ತಮ ಪ್ರಶಸ್ತಿ ಪತ್ರವನ್ನಿತ್ತಿರುತ್ತದೆ.

ಇನ್ನು ಈ ಕೆಲಸವನ್ನು ಮುಂದರಿಸಲು ಈ ಮೈತ್ರಿ ಮುಂದುವರಿಯಬೇಕಂತೆ. ಅದಕ್ಕೆ ಅಲ್ಲಿಯ ಕಮ್ಯೂನಿಸ್ಟ್ ಪಾರ್ಟಿಯ ಪೂರ್ಣ ಬೆಂಬಲವಿದೆಯಂತೆ. ಅಂದರೆ ಇಲ್ಲಿಯ ಕಮ್ಯೂನಿಸ್ಟರಿಗೆ ರಷ್ಯಾ ಸರಕಾರದ ಸಂಪೂರ್ಣ ಮಾರ್ಗದರ್ಶನದೊಂದಿಗೆ ಸಹಕಾರವಿದೆಯೆಂದಾಯಿತು. ಆದರ ಸಹಾಯವನ್ನು ಸರಿಯೊಗಿಸಿಕೊಂಡು ಅವರಿಗೆದುರಿರುವ ಶಕ್ತಿಯನ್ನು ಸದೆಬಡಿಯಬೇಕಂತೆ.

ಹಂಗೇರಿ, ಪೋಲೇಂಡ್, ಝೆಕಸ್ಲೊವೇಕಿಯೂದಿ ದೇಶಗಳಲ್ಲಿ ನಡೆದದ್ದೂ ಅದೇ. ಈ ಕಮ್ಯೂನಿಸ್ಟರಿಗೆ ಸಹಾಯ ಮಾಡಲು ಅಂದರೆ ರಷ್ಯಾದ ರಥಕ್ಕೆ ಕುದುರೆಗಳಾಗಲು ಇಲ್ಲಿಯವರು ಮುಂದಕ್ಕೆ ಬರುತ್ತಿರುವುದನ್ನು ಕಾಣುವಾಗ ನಾಗರಸಂಚಮಿಯನ್ನಾಚರಿಸುತ್ತಿರುವವರು ಕಣ್ಮುಂದೆ ಬರುತ್ತಾರೆ. ಪಾವಿಗೆ ಹಾಲೆರೆಯುವ ಸಂಪ್ರದಾಯ ಇಟ್ಟುಕೊಂಡಿರುವವರು ಕಮ್ಯೂನಿಸ್ಟ್ ವಿಷ ಜಂತುಗಳಿಗೆ ಸಹಾಯಮಾಡಲು ಮುಂದಕ್ಕೆ ಬಂದಿರುವದುಂಟೇ? ಆ ಸರ್ಪಕ್ಕೂ ರಷ್ಯಾದ ಕರಡಿಗೂ ಬಹಳ ವ್ಯತ್ಯಾಸವಿದೆಯೆನ್ನುವದನ್ನು ಮರೆಯುವಂತಿಲ್ಲ.

ರಷ್ಯಾದ ರಥವನ್ನೆಳೆದುಕೊಂಡು ಇಲ್ಲಿಯ ಕಮ್ಯೂನಿಸ್ಟ್ ಕುದುರೆಗಳು ಹಿಂತಿರುಗಿವೆ. ಅವು ಇಂದಿರಾಜೀಯವರ ಮಂತ್ರಿಮಂಡಲದೊಳಗೆ ಇನ್ನಷ್ಟು ಪ್ರಮಾಣದಲ್ಲಿ ನುಸುಳಿಕೊಂಡು ಹೊರಗೆ ತಮ್ಮ ಜಾಲವನ್ನು ಹೆಬ್ಬಿ. ಭಾರತವನ್ನು ರಷ್ಯಾದ ಗುಲಾಮ ರಾಷ್ಟ್ರವನ್ನಾಗಿ ಮಾಡಲು ಹವಣಿಸುತ್ತಿರುವುದನ್ನು ಸಹಿಸಿಕೊಳ್ಳಲು ಸಾಧ್ಯವೇನು? ರಷ್ಯಾದ ಕೆಂಪುನೊಗವನ್ನಿಚ್ಛಿಸಿ ಬ್ರಿಟನಿನ ಬಿಳಿ ನೊಗವನ್ನು ಕಿತ್ತೊಗೆದೇನೇನು? ಇಲ್ಲ. ಭಾರತೀಯರು ಇದಕ್ಕೆ ಬಗ್ಗಲಾರರು. ಭಾರತದ ಸ್ವಾತಂತ್ರ್ಯವನ್ನು ಸಂರಕ್ಷಿಸಲು ಅವರು ರಕ್ಷೆಯನ್ನು ಕಟ್ಟಿಕೊಂಡಿರುವರು.

—ಶ್ರೀ ಶಿವಶಂಕರ

ಚುಟುಕುಗಳು

ನಮ್ಮೂರ ಲೈಬ್ರೇರಿ

ನಮ್ಮೂರ ಲೋಕಲ್ ಲೈಬ್ರೇರಿ
ಒಳಗೆ ಬೀಳುವರು ಕಾಲು ಜಾರಿ
ತುಂಡು ಹಂಚಿನ ಮಾಡು, ಒದ್ದೆಗೋಡೆ
ಸಾಲದ್ದಕ್ಕೆ ಕೊಡೆಗಳ್ಳರ ಪೀಡೆ.

ಬಿ. ಇ. ಕಾಲೇಜು

ಬೂಟು ಚಪ್ಪಲಿಗಳ ಒದೆತ ತಿಂದು
'ಆಯ್ಯೋ' ಎಂದಿತ್ತು ಬಿ. ಇ. ಕಾಲೇಜು ಅಂದು.
ಇಷ್ಟೂ ಸೆಂಪೂರ್ಣ ಗುಣವಾಗಿಲ್ಲ ಅದರ ಗಾಯ
ಅಂತೂ ಹೆಜ್ಜುತ್ತಿದೆಯದರ ಬದುಕುವ ಪ್ರಾಯ.

ನೋಟಿನ ವ್ಯಸನ

"ಹೇಳೇ, ನನ್ನನೇಕೆ ಮನ್ನಿಸುತ್ತಿಲ್ಲ ಜನ,
ಹೋಟಲು ಆಂಗಡಿಯಲ್ಲೂ ನಿನ್ನನೇ ಧ್ಯಾನ!
ನಾನೇನು ಮೂಡಿದೆ? ನಿನ್ನ ಈ ಭಾಗ್ಯ ಹೇಗೆ:
ಸುಮ್ಮನಿರುವಿ ಏಕೆ? ಹೇಳೇ"—
ಎಂದಿತು ನೋಟು ಚಿಲ್ಲರೆಗೆ

—ಶ್ರೀ ಬಿ. ವಿ. ನಾಯಕ್

ಪ್ರಿಯದರ್ಶಿನಿ ಕಂಡ ಭವ್ಯ ಭಾರತ

(ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿ ಅವರು ನಾನಾ ಸಂದರ್ಭಗಳಲ್ಲಿ ಮಾಡಿದ ಭಾಷಣಗಳಿಂದ ಆಯ್ದು ಕೊಂಡ ಸುಮಿಮುತ್ತುಗಳನ್ನು ಇಲ್ಲಿ ಕೊಡಲಾಗಿದೆ. ಇಂದಿರಾಪಾಣಿಯಲ್ಲಿ ಭಾರತದ ಸಮಗ್ರತೆಯು ಸ್ಪಂದಿಸಿದೆ. ಭಾರತದ ಭವ್ಯ ವ್ಯಕ್ತಿತ್ವದ ನಿರೂಪಣೆಯಿದೆ.)

* 'ಭಾರತ' ದೊಡ್ಡದಾದರೆ ನಾವೆಲ್ಲರೂ ದೊಡ್ಡವರಾಗುತ್ತೇವೆ. ಭಾರತ ದೊಡ್ಡದಾಗದೇ ಹೋದರೆ ನಮ್ಮ ದೇಶದಲ್ಲಿ ಯಾರೂ ದೊಡ್ಡವರೆನಿಸಿಕೊಳ್ಳುವುದಿಲ್ಲ. ಆವರ ಸ್ಥಾನ ಮಾನಗಳೇನೇ ಇರಲಿ. ಇದು ಮಾತ್ರ ನಿಜ. ಭಾರತ ಎಷ್ಟು ಮಟ್ಟಿಗೆ ವಿದೇಶೀ ನೆರವನ್ನು ಅವಲಂಬಿಸುವುದೋ ಅಷ್ಟು ಮಟ್ಟಿಗೆ ಅದು ಶಕ್ತಿಶಾಲಿಯಲ್ಲ. ದುರ್ಬಲ ಭಾರತ ಎಂದೂ ದೊಡ್ಡ ರಾಷ್ಟ್ರವೆನಿಸುವುದಿಲ್ಲ.

* ಸ್ವಯಂ ಬುದ್ಧಿಕೌಶಲ, ಹಾಗೂ ಸ್ವ ಸಂಪನ್ಮೂಲಗಳ ಮೇಲೆ ಅವಲಂಬಿಸುವ ಸಾಮರ್ಥ್ಯವೇ, ರಾಷ್ಟ್ರ ಶಕ್ತಿಯ ತಿರುಳು.

* ನಮ್ಮ ಸಾಮಾಜಿಕ ಆರ್ಥಿಕ ಧ್ಯೇಯಗಳ ಸಾಧನೆಗಾಗಿ ಉದ್ಯೋಗಾವಕಾಶಗಳನ್ನು ಸಾಕಷ್ಟು ಹೆಚ್ಚಿಸುವುದರ ಅವಶ್ಯಕತೆಯನ್ನು ನಾವು ಅರಿತುಕೊಂಡಿದ್ದೇವೆ. ಆರ್ಥಿಕ ವ್ಯವಸ್ಥೆಯ ಚೈತನ್ಯದಿಂದ ಕೆಲವೊಂದು ಸುಸಂಘಟಿತ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶಗಳು ಹೆಚ್ಚುತ್ತವೆ. ಇದು ನಿಸ್ಸಂದೇಹ. ಆದರೂ ಕಾರ್ಮಿಕರೇ ಅಧಿಕವಾಗಿರುವ ಕೃಷಿ, ಕಟ್ಟಡ ನಿರ್ಮಾಣ ಮತ್ತು ಇತರ ಕ್ಷೇತ್ರಗಳಲ್ಲಿ ಕೆಲವೊಂದು ಕ್ರಮಗಳನ್ನು ಕೈಗೊಳ್ಳುವುದು ನಮ್ಮ ಕಾರ್ಯನೀತಿಯೂಗ ಬೇಕು. ಒಂದು ಪ್ರದೇಶ ಮತ್ತು ಇನ್ನೊಂದು ಪ್ರದೇಶದ ನಡುವೆ ಉದ್ಯೋಗಾವಕಾಶಗಳ ಅಭಿವೃದ್ಧಿ ಒಂದೇ ತೆರನಾಗಿಲ್ಲ. ನಾವು ಉದ್ಯೋಗ ಸಂಬಂಧವಾಗಿ ಅನುಸರಿಸುವ ಕಾರ್ಯನೀತಿ ಈ ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸುವಂತಾಗಬೇಕು. ಅಭಿವೃದ್ಧಿಯ ಗತಿ ಮಂದವಾಗಿರುವ ಪ್ರದೇಶಗಳತ್ತ ನಾವು ಗಮನಹರಿಸಬೇಕು.

* ಆರ್ಥಿಕ ವ್ಯವಸ್ಥೆಯ ಕಾರ್ಯನೀತಿಯನ್ನು ರೂಪಿಸುವಾಗ ನಾವು ಮುಖ್ಯವಾಗಿ ಮೂರು ಸಂಗತಿಗಳನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ಸ್ವಾವಲಂಬನೆಯ ಗುರಿಯನ್ನು ಅದಷ್ಟುಬೇಗ ಸಾಧಿಸುವುದು; ಸರ್ಕಾರದ ಸಾಮಾಜಿಕ ಆರ್ಥಿಕ ಗುರಿಗಳ ಸಾಧನೆಯ ಅವಶ್ಯಕತೆ; ಹಾಗೂ ಬಾಂಗ್ಲಾ ದೇಶಕ್ಕೆ ನೆರವು ನೀಡುವ ಅಗತ್ಯ ಇವೇ ಆ ಮೂರು ಸಂಗತಿಗಳು.

* ಮಿಲಿಟರಿ ಬಲ ಮುಖ್ಯವಾಗಿ ಆರ್ಥಿಕ ವ್ಯವಸ್ಥೆಯ ಬಲವನ್ನೇ ಅವಲಂಬಿಸಿರುತ್ತದೆ. ದೇಶದ ಸರ್ವತೋಮುಖ ಉತ್ಕರ್ಷ ಸಮಾಜದ ನಾನಾ ಸ್ತರಗಳಲ್ಲಿ ಸಮನಾಗಿ ಸಾಧ್ಯವಾಗುವಂತೆ ನಾವು ನೋಡಿಕೊಳ್ಳಬೇಕು.

* ವಿದೇಶಿ ನೆರವನ್ನು ನಿಲ್ಲಿಸುವ ಬೆದರಿಕೆ ನಮ್ಮ ದೇಶದ ಮೇಲೆ ಏನೇನೂ ಪರಿಣಾಮ ಮಾಡಲಾರದು. ತಾನು ಆರಿಸಿಕೊಂಡಿರುವ ಶಾಂತಿ ಹಾಗೂ ಪ್ರಜಾಪ್ರಭುತ್ವ ಪಥದಿಂದ ಭಾರತ ವಿಮುಖವಾಗುವಂತೆ ಮಾಡುವುದು ಪ್ರಪಂಚದ ಯಾವುದೇ ಶಕ್ತಿಗೂ ಸಾಧ್ಯವಿಲ್ಲ.

* ನಮ್ಮ ಸ್ವಯಂ ದೇಶವನ್ನು ಮುನ್ನಡೆಸಬೇಕು. ನಮ್ಮ ದೇಶದ ಜನತೆಯ ಆರ್ಥಿಕ ಸ್ಥಿತಿ–ಗತಿಗಳನ್ನು ಸುಧಾರಿಸಬೇಕು. ನಾವು ಆರ್ಥಿಕವಾಗಿ ಬಲಿಷ್ಠರಾಗಬೇಕು. ಸ್ವತಂತ್ರ ಭಾರತದ ಎಲ್ಲಾ ಪ್ರಜೆಗಳಿಗೆ ಅಭಿವೃದ್ಧಿಕರವಾದ ಅನುಕೂಲಗಳನ್ನು ಒದಗಿಸಲು ಸಾಧ್ಯವಾಗಬಲ್ಲುದು.

* ಯುದ್ಧಾನಂತರ ನಮ್ಮ ಬಲ ಹೆಚ್ಚಿದೆ. ನಾವಿಲ್ಲ ಒಂದು ಶೂರ ರಾಷ್ಟ್ರವೆಂದು ಜಗತ್ತಿಗೆ ತೋರಿಸಿಕೊಟ್ಟಿದ್ದೇವೆ.

"ಕೇವಲ ಪ್ರಬಲ ಸೈನ್ಯದಿಂದಲೇ ಯುದ್ಧಗಳಲ್ಲಿ ಗೆಲ್ಲುವುದಕ್ಕಾಗುವುದಿಲ್ಲ. ಸಮರ್ಥ ಜನತೆ ತತ್ವದಗಳು ಹಾಗೂ ನೈತಿಕ ಪ್ರಬಲ್ಯದ ಆಧಾರದ ಮೇಲೆ ಯುದ್ಧದಲ್ಲಿ ಜಯ ಸಾಧ್ಯವಾಗುತ್ತದೆ.

*ಭಾರತ ನಿರ್ಮಿಸುತ್ತಿರುವ ನವ ಸಮಾಜ ಧರ್ಮ ಪ್ರಧಾನವಾದುದಲ್ಲ. ಮತ ಧರ್ಮ ಶಾಸ್ತ್ರದ ಆಧಾರದ ಮೇಲೆ ಯಾವುದೇ ದೇಶವನ್ನು ಕಟ್ಟುವುದಕ್ಕಾಗುವುದಿಲ್ಲ. ಭಾರತದಲ್ಲಿ ಜಾತ್ಯಾತೀತ ಶಕ್ತಿಗಳ ವಿಜಯದಿಂದ ಇದು ಸ್ಪಷ್ಟಪಟ್ಟಿದೆ.

*ಭಾರತ ಒಂದು ಬೃಹತ್ ರಾಷ್ಟ್ರ. ಸವಾಲನ್ನೇ ಸಾಧಿಸಬಲ್ಲ ಸಂಪನ್ಮೂಲಗಳು ಹಾಗೂ ಸಾಮರ್ಥ್ಯ ಅದಕ್ಕಿದೆ. ಇದು ವಿಶ್ವದ ಇತರರ ಕಲ್ಪನೆಗೂ ನಿಲುಕದ ವಿಷಯವಾಗಿದೆ. ನಾವು ಆಘಾತಗಳನ್ನು ಸಹಿಸಿಕೊಳ್ಳಬಲ್ಲೆವು. ನಮ್ಮ ಹಿತರಕ್ಷಣೆ ಮಾಡಿಕೊಳ್ಳಲು ನಾವು ಸಮರ್ಥರಾಗಿದ್ದೇವೆ.

*ಪಾಕಿಸ್ತಾನದ ವಿರುದ್ಧ 14 ದಿನಗಳ ಯುದ್ಧದಲ್ಲಿ, ಇಡೀ ದೇಶವೇ ಒಂದಾಗಿ ಎದ್ದು ನಿಂತಿತು. ದೇಶದಲ್ಲಿ ಸಮಾಜವಾದಿ ಸಮಾಜ ಸ್ಥಾಪನೆಗೆ ಹಾಗೂ ದಾರಿದ್ರ್ಯ, ನಿರುದ್ಯೋಗ ಮತ್ತು ಹಸಿವು ನಿವಾರಣೆಗೆ ಇದು ತೆರನಾದ ಸ್ಫೂರ್ತಿ ಕಂಡುಬರಬೇಕು.

*1972 ಸ್ವಪರಿಪೂರ್ಣತೆ ಸಾಧನೆಯ ವರ್ಷವಾಗಬೇಕು. ಕುಟುಂಬ ಯೋಜನೆಗಳು, ಬಾಕಿ ಬಿದ್ದಿರುವ ಮತ್ತಿತರ ಜಲಸಂಪನ್ಮೂಲಗಳನ್ನು ಕೆಲವು ಕಾಲ ನಿಲ್ಲಿಸಬೇಕು. ಅಂದರೆ ಉತ್ಪಾದನೆ ಹೆಚ್ಚಿಸಲು ಸಾಧ್ಯವಾಗುವುದೆ. ಅಧಿಕ ಪರಿಶ್ರಮ, ಅಧಿಕ ಉತ್ಪಾದನೆ ಹಾಗೂ ತನ್ಮೂಲಕ ಸ್ವಪರಿಪೂರ್ಣತೆ ಸಾಧನೆಗೆ ಒಗಿದಿನ ಅವಶ್ಯಕತೆ. ಆರ್ಥಿಕ ರಂಗದಲ್ಲಿ ಪಾಸ್ತವವಾಗಿ ಹೋರಾಟ ಈಗಾಗಲೇ ಆರಂಭವಾಗಿದೆ.

*ನೀವು ದೃಢ ಸಂಕಲ್ಪ ಮಾಡಿದರೆ ನಿಮಗೆ ಅಸಾಧ್ಯ ಯಾವುದೂ ಇಲ್ಲ. ಪ್ರತಿಯೊಂದು ಸಾಧನೆಗೂ ಅದರ ಬೆಲೆ ತೆರಬೇಕಾಗುತ್ತದೆ. ನಮ್ಮ ಕಾಲ ಮೇಲೆ ನಾವು ನಿಂತುಕೊಳ್ಳಬೇಕಾದರೆ. ಸ್ವಯಂ ಪರಿಪೂರ್ಣತೆ ಸಾಧಿಸಬೇಕಾದರೆ ನಾವು ಕಷ್ಟಸಹಿಸಬೇಕಾಗುತ್ತದೆ.

೨●

ದೇವರಾಜರಿಗೊಂದು ತಲೆಬೇನೆ

(ಒಂದನೇ ಪುಟದಿಂದ)

ವ್ಯಾಕರಣದ್ದು. ಮಂತ್ರಿ ಮಂಡಲಲ್ಲಿವೆಂಬ ಕೊರಗು ಮತ್ತೆ ಕೆಲವರದ್ದು. ತಮ್ಮ ಸಂಪುಟದಲ್ಲಿ ಅಲ್ಲ ಮೆಟ್ಟಿನ ಭಿನ್ನಮತವಿದೆ ಎಂಬ ಚಿಂತನೆಯೇ ಒಪ್ಪಿಕೊಂಡು, ಅಮ ಚಾರಯಿಸುವಷ್ಟು ಸಬಲವಾಗಿಲ್ಲವೆನ್ನುತ್ತಾ ವೆ. ಜೆಡ್ಡೆ ಮೂಲ ಶ್ರೀ ನೀಲೇಂದ್ರ ಪಾಟೀ ಲರ ಬಗೆಯಿಂದಲೂ ಬಂದಿತ್ತು. ರಾತ್ರೆ ಬೆ ಳಗಾಗುವಷ್ಟರಲ್ಲಿ ಅನೇಕರನ್ನು ಜ್ವರ ಪಕ್ಷ ವವೇ ಆವರಿಸಿಕೊಂಡಿತ್ತು. ರಾಜ್ಯಕೀಯದಲ್ಲಿ ಸರ್ವೇ ಸಂಘಾನ್ಯತೇ

ಶ್ರೀಯುತ ಇಂದಿರಾಗಾಂಧಿಯವರು ಶ್ರೀ ಕೆಂಗಲ್ಲ ರನ್ನು ಈ ಅಭಿಪ್ರಾಯದಿಂದಲೇ ಬೆಂಗಳೂರಿ ಗೆ ಕಳುಹಿಸಿರಬೇಕೆಂಬುದು ಕೇವಲ ಕುತರ್ಕವೆನಿ ಸೀತು. ಶ್ರೀ ಕೆಂಗಲ್ಲರ ದಿಟ್ಟತನವನ್ನು ಆ ಕೆ ಪಟುವಲಾರದಾದರೆಂಬುದರಲ್ಲಿ ಸತ್ಯಾಂಶ ವಿದ್ದೇ ಇದೆ. ಆಕೆ ಪ್ರಧಾನ ಮಂತ್ರಿಗಿರುವ ಪ್ರಶ್ನಾತೀತ ಅಧಿಕಾರವನ್ನು ಮತ್ತೊಮ್ಮೆ ತೋರಿಸುವ ಇರಾದೆಯಿತ್ತು! ಆಫಿವಾ ಶ್ರೀ ಗಳಾ ಜವಾ. ರಾಮ. ಇಷ್ಟೆಲ್ಲ ಮೇಲಾದವರಿಗೊಂದು ಪೂರ್ವ ಸೂಚನೆಯೆ ಒಂದೊಂದೇ ಇದಕ್ಕೆ ಕಾರಣವಾಗಿರಲಾರ ದು. ಎಲ್ಲವೂ ಒಂದೊಂದು ಕಾರಣಕ್ಕು ಪ್ರ ಭಾವ ಬೀರಿ ಶ್ರೀ ಕೆಂಗಲ್ಲರಿಗೆ ಅರ್ಧಚಂ ದ್ರ ಪ್ರಯೋಗ ಕಾರ್ಯವೆಂಬುದೇ ಸತ್ಯ. ಇ ದರಿಂದ ದೇವರಾಜ ಅರಸು ಸಂಪುಟ ಉರುಳುತ್ತಿದೆಯೆಂದು ಹೇಳಲಾಗದಾದರೂ ಅವರ ಬಲವರ್ಧನೆಯ ಅವಶ್ಯಕತೆಯನ್ನೂ ಅಯುಷ್ಯವನ್ನೂ ಕೊರೆಯುತ್ತಿದೆಂಬುದು ಮಾತ್ರ ನಿಜ. ಆದುದರಿಂದ ಶ್ರೀ ಕೆಂಗಲ್ಲರಿಗೆ ಏನಾ ದರೂ ಇತರ ಉದ್ಯೋಗ ನೀಡಿ ಅವರ ಮ ನಸ್ಸು ಅದರಲ್ಲಿ ಕೇಂದ್ರೀಕೃತವಾಗುವಂತೆ ಮಾಡುವ ಪ್ರಯತ್ನ ಉನ್ನತ ಬಲಯುದಲ್ಲಿ ನಡೆಯುತ್ತಿದೆಯೆಂಬ ಕೆಂವದಂತಿಯಲ್ಲೂ ಸತ್ಯವಡಗಿರಬಹುದು.

●●

ಅಭಿಪ್ರಾಯ-

ಅಸಮಾನತೆ ತೊಲಗಲಿ

ಸಮಾಜದಲ್ಲಿ ಜಾತೀಯತೆಯ ವೈಷ್ಯಮ್ಯ ಯಿಂದ ಹಿಂದುಳಿದವರೆಂಬ ನೆಪದಿಂದ ಹರಿ ಜನ, ಗಿರಿಜನರೆಂಬ ಪ್ರತ್ಯೇಕ ಸಂಗಡಗಳ ನ್ನು ಸೃಷ್ಟಿಸಿ ಅವರಿಗೆ ಅನೇಕ ಸಹಾಯ ಸೌಲಭ್ಯಗಳನ್ನೊದಗಿಸಿ ಅವರ ಉದ್ಧಾರ ಹಾಗೂ ಏಳಿಗೆಗಾಗಿ ಅನೇಕ ಯೋಜನೆಗ ಳನ್ನು ರಚಿಸಿ ಶ್ರಮಿಸುತ್ತಿರುವ ಸರಕಾರದ ಫಲ ಉದ್ದೇಶವನ್ನು ಮೆಚ್ಚ ಬೇಕಾದ್ದು ನ್ಯಾಯೋಚಿತ. ಕೆಳಗೆ ಬಿದ್ದವರನ್ನು ಮೇಲ ಕ್ಕೆತ್ತಬೇಕಾದ್ದು ಮಾನವ ಸಹಜ ಧರ್ಮ ಎನ್ನುವುದನ್ನು ಯಾರೂ ಅಲ್ಲಗಳೆಯುವಂ ತಿಲ್ಲ. ಆದರೆ ಸಮಾನತೆಯನ್ನು ಸಾಧಿಸಬೇ ಕೆಂಬ ಆದರ್ಶದ ಆಮಲಿನಲ್ಲಿ ಭೇದ ಭಾವ ವನ್ನು ನುತ್ತಷ್ಟು ಬೆಳೆಸುವುದು ಅತ್ಯಂತ ಅವಿವೇಕದ ಕಾರ್ಯ. ಪ್ರಾಥಮಿಕ ಶಾಲೆ ಯಲ್ಲಿಯೇ ಈ ಹಿಂಮಳೆದ ಜನರನ್ನು ಮುಂದೆ ತರುವ ಕಾರ್ಯ ಆರಂಭನಾಗು ತ್ತದೆ ಹರಿಜನ, ಗಿರಿಜನ ಮಕ್ಕಳಿಗೆ ಉ ಚಿತ ಪುಸ್ತಕಗಳೊಂದಿಗೆ ಧನ ಸಹಾ ಯವನ್ನು ಕೊಡುವುದು ಅವರ ವಿದ್ಯಾಭ್ಯಾ ಸಕ್ಕೆ ಪ್ರೋತ್ಸಾಹವನ್ನು ಕೊಟ್ಟಂತಾಗು ತ್ತದೆ. ಎಂಬುದು ನಿಜ. ಆದರೆ ಅಂತಹ ಸಂದರ್ಭಗಳಲ್ಲಿ ಸಹಾಯ ಪಡೆಯುವ ಹಿಂ ದುಳಿದ ವರ್ಗಗಳಲ್ಲೇ ಮತ್ತು ಇತರರಿಗಿಂ ತಲೂ ಕಡು ಬಡತನದಿಂದ ಇತರ ಜಾತಿಯ ಎಳೆಯ ಮಕ್ಕಳ ಮೃದು ಮನಸ್ಸಿನ ಮೇ ಲೆ ಅಘಾತವನ್ನುಂಟು ಮಾಡುವುದು ಸ ಮಾನತೆಯ ಲಕ್ಷಣವೆಂದರೆ ಹಾಸ್ಯಾಸ್ಪದ ವಲ್ಲವೇ?

ಮಕ್ಕಳಿಗೆ ಜಾತಿಬೇಧವನ್ನು ತೊ ರೆಯಬೇಕೆಂದು ಸಾರಿ ಹೇಳಿ ಹರಕು ಅಂಗಿಯ ಬಡ ಬಾಲಕನಿದಿರು ಅವ ನಿಗಿಂತ ಉತ್ತಮ ಮಟ್ಟದಲ್ಲಿರುವ ಹರಿಜ ನ ಹುಡುಗನಿಗೆ ವಿದ್ಯಾರ್ಥಿವೇತನವನ್ನು ವಿತರಣೆ ಮಾಡುವುದು ವಿಶಾಲ ಮನೋ ವೃತ್ತಿಯೆಂದರೆ ಮೂರ್ಖತನವಾಗದೇ? ಎ ಷ್ಟೋ ಮಂದಿ ಆತಿ ಬುದ್ಧಿವಂತ ವಿದ್ಯಾ ರ್ಥಿಗಳು ಬಡತನದ ದೆಸೆಯಿಂದ ಹೈಸ್ಕೂ ಲು ಮೆಟ್ಟಿಲನ್ನೂ ಹತ್ತಲಾರದ ಹೀನಸ್ಥಿತಿ ಯಲ್ಲಿರುವುದನ್ನು ನಾವು ಕಣ್ಣಾರೆ ಕಾಣು ತ್ತಿರುವಾಗ, ಸಾಕಷ್ಟು ಅನುಕೂಲತೆ, ಸರ ಕಾರದ ಕೃಪೆಯಿಂದ ಸ್ವಂತ ಮನೆ, ಭೂ ಮಿ, ತಂದೆಗೆ ಒಳ್ಳೆಯ ಉದ್ಯೋಗ ಇವೆಲ್ಲ ವೂ ಇದ್ದೂ ಉನ್ನತ ವ್ಯಾಸಂಗದ ಫೀಸು, ಪರೀಕ್ಷೆಯ ಫೀಸು, ಇವುಗಳೆಲ್ಲ ಇಲ್ಲದೆ ಯೂ ವಿದ್ಯಾರ್ಥಿ ವೇತನವನ್ನು ಪಡೆಯು ನ ಹರಿಜನ, ಗಿರಿಜನರು ಅವರಿಗಿಂತ ಹಿಂ ದುಳಿದವರೇ? ಹಾಗಾದರೆ ಯಾವುದರಲ್ಲಿ? ಹುಟ್ಟಿನೊಡನೆ ಬಂದ ಜಾತಿಯಿಂದ ಮಾ ತ್ರ. ಉತ್ತಮ ಉದ್ಯೋಗ, ಮನೆ, ಭೂಮಿ ಇರುವ ಹರಿಜನರಿಗಿಂತ ಮರದ ನೆರಳಲ್ಲಿ ಆಶ್ರಯ ಪಡೆಯುವ ಬಡಪಾಯಿಗಳು ಮುಂದಿರುವರೇ? ಕೇವಲ 'ಮೇಲ್ಜಾತಿ' ಎಂಬ ಹರಣದಿಂದಾಗಿ ಸರಕಾರದ ಯಾವ ಸಹಾಯ, ಸೌಲಭ್ಯಗಳೂ ಸಿಗದೆ ಬಡತನ ದಿಂದ ತೊಳಲಾಡುವ ಮಂದಿ ವಿದ್ಯೆ ಉ ದ್ಯೋಗಗಳಿಲ್ಲದೆ ನರಳುವ ಮಂದಿ ನಮ್ಮಲ್ಲಿ ಲ್ಲವೇ? ತಿಂಗಳಿಗೆ ನೂರು ರೂಪ್ಯಾಗಳನ್ನೂ ಸಂಪಾದಿಸಲಾರದ 'ಬ್ರಾಹ್ಮಣ'ನ ಬುದ್ಧಿ ವಂತ ಮಗನಿಗೆ ಬಡತನದ ದೆಸೆಯಿಂದ ಪ್ರಾಥಮಿಕ ವಿದ್ಯಾಭ್ಯಾಸವನ್ನೂ ಪೂರೈ ಸುವುದೇ ಪ್ರಯಾಸವೆನಿಸುವಾಗ ಐನೂರು ರೂಪ್ಯಾಗಳಿಗೂ ಮಿಕ್ಕಿ ಉತ್ಪತ್ತಿಯಿರುವ ಹರಿಜನ ಕುವರ ದಡ್ಡನಾದರೂ ಡಿಗ್ರಿ ಪ ಡೆಯಲು ಸಹಾಯ, ಸೌಲಭ್ಯಗಳನ್ನೊದ ಗಿಸುವುದು ಸಮಾನತೆಯ ವಿರೋಧಾಭಾಸ ವಲ್ಲವೇ?

ಇಲ್ಲಿಗೇ ಮುಗಿಯಿತೇ ಸಮಸ್ಯೆ? ಹೇ ಗಾದರೂ ಮಾಡಿ ಸಾಲ ಮಾಡಿ ಕಷ್ಟಪಟ್ಟು ಕಲಿತ ಮೇಟಿಯೂ ಹಿಂದುಳಿದವರಿಗೆ ಸುಲಭದಲ್ಲಿ ಸಿಗುವ ಉದ್ಯೋಗ ಉಳಿ ದವರಿಗೆ ಕಷ್ಟದಿಂದಲೂ ಸಿಗಲಾರದೆಂದರೆ ಇದೆಂತಹ ವಿಚಿತ್ರ ಜಗತ್ತು!

ಹರಿಜನರಿಗೆ, ಗಿರಿಜನರಿಗೆ ಮನೆ, ಭೂ ಮಿ, ಧನಸಹಾಯ ಎಲ್ಲವೂ ಹೇಳು, ಸಿ ಗುತ್ತದೆ. ಆದರೂ ಇಂದು ಅಲ್ಲಲ್ಲಿ ಹಿಂದು ಳಿದವರಿಗೆ ಸಿಗುವ ಸವಲತ್ತುಗಳು ಸಾಲ ದು ಎಂಬ ಕೂಗು ಕೇಳಿಸುತ್ತಿದೆ. ಇತರ ಜಾತಿಯಲ್ಲಿ ಎಷ್ಟೋ ಬಡವರಿದ್ದರೂ ಆತ ನ ಮೊರೆಯನ್ನು ಯಾರೂ ಕೇಳುವವರಿಲ್ಲ. ಎಷ್ಟೋ ಮಂದಿ ಗಿರಿಜನ, ಹರಿಜನರು ತ ಮ್ಮ ಕುಟುಂಬವೆರಲ್ಲರ ಹೆಸರಿನಲ್ಲಿ ಭೂ ಮಿ, ಮನೆ ಮಾಡಿ ಅದನ್ನು ಬಡಪಾಯಿಗೆ ಕೊಟ್ಟು ಶ್ರೀಮಂತರಾಗುವುದರೊಂದಿಗೆ 'ಧನಿ'ಗಳಾಗಿ ಮೆರೆದಾಡುವುದನ್ನೂ ನಾವು ಆಲ್ಲಲ್ಲಿ ನೋಡುತ್ತಿದ್ದೇವೆ. ಅಂತಹ ಘನ ಗಳಲ್ಲಿ ಮುಂದಿರಿದ 'ಜನಾಂಗವಷ್ಟಯ ಒಕ್ಕ ಲಾಗಿ 'ಧನಿ'ಗಳ ಕೆರುಳುಗಳಲ್ಲಿದ ಬನ್ನಿ ಪ ಡುವವರೂ ಅಪರೂಪವಾಗಿದ್ದಾರೆ ಎಂಬ ರೆ ಅತಿಶಯೋಕ್ತಿಯಲ್ಲ. ಮೇನೇಜ್ಯರೆಲ್ಲರೂ ಸಮಾನರು. ಎಲ್ಲರಿಗೂ ಸಮಾನ ಸ್ಥಾನ ಮಾನಗಳೂ ದೊರೆಯಲಿ. ಆದರೆ ಯಾರು ನಿಜವಾಗಿಯೂ ಆರ್ಥಿಕವಾಗಿ ಹಿಂದುಳಿದಿ ದ್ದಾರೆ, ಯಾರಿಗೆ ಸಹಾಯದ ಅವಶ್ಯಕತೆ ಯಿದೆಯೋ, ಅಂತಹವರಿಗೂ ಭೇದಭಾವವ ಲ್ಲದೆ ಸಹಾಯ ಸಲ್ಲಿಸುವುದು ಅತ್ಯಗತ್ಯ. ಆದರೆ ಕೇವಲ ಹಿಂದುಳಿದ ವರ್ಗ ಎಂಬ ಒಂದೇ ಕಾರಣಕ್ಕಾಗಿ ಅವರ ಸ್ಥಿತಿ; ಗತಿಯನ್ನೂ ಗಣನೆಗೆ ತಾರದೆ ಧನವನ್ನು ವಿನಿ ಯೋಗಿಸುವುದು ಸಾರ್ವಜನಿಕ ಬೊಕ್ಕಸ ದ ಅಪವ್ಯಯ.

— ಸಹನಾ.



ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

E. C. No. 1/72

ಶೇಷಮ್ಮ —ಅರ್ಜಿದಾರರು

Vs

ಪುತ್ತು ರೆಬೆಲ್ಲೊ ಮತ್ತು ಪಿಯೂನೆ ರೆಬೆಲ್ಲೊ —ಎದ್ರಿರು

2ನೇ ಎದ್ರಿಗೆ—

ಪಿಯೂನೆ ರೆಬೆಲ್ಲೊ

W/o ಮ್ಯಾನ್ಯುಯೆಲ್ ರೆಬೆಲ್ಲೊ

ಓಡಿಲ್ನಾಳ ಗ್ರಾಮ, ಬೆಳ್ತಂಗಡಿ ತಾಲೂಕು.

ಆಂಜ: ಗೇರುಕಟ್ಟೆ

ಅರ್ಜಿದಾರರು ನಿಮ್ಮ ಮೇಲೆ ಕೇಂಡ್ ರಿ ಫೋರ್ಸ್ಡ್ ಆಕ್ಟಿನ ಸೆಕ್ಷನ್ 22, 112ರ ಪ್ರ ಕಾರ ಅರ್ಜಿ ಹಾಕಿದ್ದು, ನಿಮ್ಮ ಹಾಜರಾತಿ ಬಗ್ಗೆ ತಾ. 3-10-72ಕ್ಕೆ ವ್ಯಾದೆ ಇಟ್ಟಿರುತ್ತದೆ. ಆ ದಿನ ಬೆಳಿಗ್ಗೆ ನೀವು ಖುದ್ದಾಗಿ ಯಾ ವಕೀಲರ ಮುಖಾಂತರ ಹಾಜರಾಗಿ ಉದಾಹರಿಸಿಕೊಳ್ಳದಿ ದ್ದಲ್ಲಿ, ಈ ಮೇಲಿನ ಅರ್ಜಿಯನ್ನು ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲಾಗುವುದು. ನಿಮಗೆ ಕೋರ್ಟು ಹುಕುಂ ಪ್ರಕಾರ ತಿಳಿಸೋಣವಾ ಗಿದೆ.

K. R. K. Bhat
B. Sc. B. L.
Advocate for Petitioner

Belthangady,
23—3—72

ಕುಂದಾಪುರ II ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

R. R. C. 34/1972

ಅರ್ಜಿದಾರ —V. ಸುಂಜುನಾಥ ಹೊಳ್ಳ

ಎದ್ರಿ —ರಾಮ ನಾವಡ

ಕುಂದಾಪುರ ತಾಲೂಕು ವಡೇರಹೋಬಳಿ ಗ್ರಾಮದ ಕಾಡ ಯಾನೆ ಕೇಶವ ನಾವಡರ ಮಗ V. ರಾಮ ನಾವಡರಿಗೆ ತಿಳಿಯಪಡಿಸಿದ್ದು.

ಅರ್ಜಿದಾರನಿಗೆ ಕಳೆದ ತಾ. 31-3-71ಕ್ಕೆ ಬಹಾ ಮೂಲಗೇಣಿ ಬಾಕಿ ಬರಮಾಡಿಕೊಳ್ಳುವರೆ ನಿಮ್ಮ ಮೇಲೆ ದಾಕಲುಮಾಡಿದ ಮೇಲಿನ ಅರ್ಜಿ ಮೇಲಿನ ಕೋರ್ಟಿನಲ್ಲಿ ತಾ. 8-9-1972ಕ್ಕೆ ತನ್ನಿಗೆ ಇರುತ್ತದೆ. ನಿಮ್ಮ ಆಕ್ಷೇಪಣೆಗಳಿದ್ದರೆ ಸದ್ರಿ ದಿನ ಪ್ರಕಟಲು ಗಂಟೆ 11ಕ್ಕೆ ಮೇಲಿನ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿ ಕೊಳ್ಳತಕ್ಕದ್ದು.

(ಕೋರ್ಟು ಹುಕುಂ ಪ್ರಕಾರ)

G. V. Aithal
Advocate for Applicant

ಕುಂದಾಪುರ, 12.8.72

ಮಿತ ಕುಟುಂಬ ಯೋಜನೆಗೆ ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನ ಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0-75 ಪೈಸೆ ಮಾತ್ರ.

ಒಂದು ರೂ. ಸ್ಟಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ

(ನವಯುಗ ಪ್ರೆಸ್) ಉಡುಪಿ, ದ. ಕ.

ಶ್ರೀ ಸಾಮಾನ್ಯನ ಸಂಸತ್ತಿನಲ್ಲಿ—

ಕಲ್ಯಾಣಿ ಕುದುರೆಗಳು ಕೆಸರು ತಿನ್ನುತ್ತಿವೆ

ಸ್ವಾತಂತ್ರ್ಯ, ಪ್ರಜಾಸತ್ತೆಗಳೆಂಬ ಮೂಢ ಬೀಜ ನುಂಗ್ರವನ್ನು ಹರಿಹರಿಸುತ್ತಿರುವ ಭಾರತದ ಜಡತೆಯ ಮುಗ್ಧತೆಯ ಮುಂಪರು ಹರಿದಾಗ ವಿಷತಜ್ಞರೀ ಬೇತಾಳವೊಂದು ಭೂ ನಭೋಂತರಾಳ ವ್ಯಾಪಿಯೂ ಅವರನ್ನು ನುಂಗುತ್ತದೆ. ಭಾರತದ ಸಿಂಹಗಳೇ ಎದ್ದೇಳಿ! ಎಂದು ಸ್ಫೈರ್ಯ ಮುಂದುಳಿ ಮೊಳಗಿಸಿದರು ವಿವೇಕಾನಂದರು. ಇಲ್ಲ, ಭಾರತೀಯರು ಇಂದು ಸಿಂಹಗಳಲ್ಲ, ಹೊಲೆ ನಾಯಿಯಂಥ ತುಚ್ಛ ಬಾಳು ಅವರಾಗಿದೆ.

ದೇಶದಲ್ಲಿಂದು ಪ್ರಬಲವಾಗಿ ಜೆಳೆಯುತ್ತಿರುವ ಹಿಟ್ಲರನ ಸರ್ವಾಧಿಕಾರದ ಮೂರಿಯನ್ನು ದೂರ ಅಟ್ಟಲು ಶ್ರೀ ಸಾಮಾನ್ಯ ನೆಂದಿಗೆ ಅಸಮರ್ಥನಾಗಿರುವನೋ ಅಂದಿನಿಂದ ಭೀಕರ ಉತ್ಪಾತದ ಸಿಡಿಲೊಂದು ಎರಗಲು ಪರಿವರ್ತನೆ ಬಕ್ಕನೆತ್ತಿಯನ್ನೊಡ್ಡಿಡಂತಾಗಿದೆ. ನೂರು ಕುಶಕ ನಗೆಗಳನ್ನು, ಅಸಂಖ್ಯ ಅಣಕಗಳನ್ನೆದುರಿಸಬೇಕಾಗಿದೆ.

ಪ್ರಶ್ನಾತೀತ ಬಹುಮತದ ಕೇಂದ್ರ ಸರಕಾರದ ಸಿಡಿಲು ದೇಶದ ಕೋಶದ ನೀತಿ ಪರಂಪರೆಯ ಲಕ್ಷ್ಮಣ ಸೀಮೂ ಕೇಪೆಯ ಬೇಲಿಯನ್ನು ಮುರಿದು ಪ್ರವಾಹದಂತೆ ಮುನ್ನುಗ್ಗುತ್ತಿದೆ. ಇದು ದೇಶದ ಅವನತಿಯ ಕುರುಹೇ? ರಕ್ತ ಕ್ರಾಂತಿಯು ಮುನ್ಸೂಚನೆಯೇ? ಅಸಂಖ್ಯ ಅಸಂಖ್ಯ ನಿಷ್ಪಾಪಿಗಳ ಬಡ ಕುಕಾಯದ ಮೇಲೆ ಅರಮನೆ ಕಟ್ಟಿಸುವುದಕ್ಕೆ ಚಿಪ್ಪೆಯೇ? ದಾಸಿಗಳು, ಧರ್ಮಿಷ್ಠರು ಸ್ವಶಿಸಿ, ಪಶಮ ಪಾವಿತ್ರ್ಯ ಗೊಳಿಸಿದ ಈ ಭರತವರ್ಷವಲ್ಲಿಂದು ಸರ್ವಾಧಿಕಾರಿ ಸಮಾಜಘಾತಕ ಹಂತಕರೇ ತುಂಬಿದ್ದಾರೆ.

ದೇಶದ ಹಿತಾಸಕ್ತಿಗಳಿಗೆ ಮಾರಕವಾಗಿ ಇಂದಿರಾ ಗಾಂಧಿಯವರು ನಿಮ್ಲಿ ಒಪ್ಪಂದ ಮಾಡಿದರು. ಅವರಿಗೆ ಅನುಭವವಿಲ್ಲ, ಅನುಕಂಪವಿಲ್ಲ, ಸಹೃದಯತೆಯಿಲ್ಲವೆಂದು ಶ್ರೀ ಸಾಮಾನ್ಯ ಹೇಳುವುದಲ್ಲ. ನೆನಪಿನ ಶಕ್ತಿ ಮಾತ್ರ ಅವರಿಗೆ ಕಮ್ಮಿ ಎನ್ನಬೇಕು. ವಿಭಜನೆಯಾದ ಇಪ್ಪತ್ತೈದು ವರುಷಗಳಿಂದಲೂ ಪಾಕ್, ಭಾರತ ಅಣ್ಣ-ತಮ್ಮ ಎಂಬ ಆತ್ಮೀಯತೆಯ ಕಪಟ ಮುಖವಾಡ ಧರಿಸಿ, ಬಗ್ಗಿದ ಬೆನ್ನಿಗೆ ಶೂಲದಿಂಪ ಇರಿದುದನ್ನು ಅವರು ಮರೆತಿದ್ದಾರೆಯೇ? ಹಿಂದಿ ಚೀನಿ ಭಾಯಿ ಭಾಯಿ ಆಗಿದ್ದ ಕಾಲವೊಂದಿದ್ದರೆ ಅದೇ ಚೀನ ಹಾಕಿಗೆ ದುಷ್ಪ್ರೇರಣೆಯನ್ನಿತ್ತುದು ನೆನಪಿಲ್ಲವೆ? ಭುಟ್ಟೋ ಏನಂದಿದ್ದ— ಸಾವಿರ ವರುಷ ಯುದ್ಧ ಮಾಡುತ್ತೇನಂದಿದ್ದ. ಭಾರತೀಯರನ್ನು ಮಣ್ಣು ಮುಕ್ಕಿಸುವೆನೆಂದು ಪಣ ತೊಟ್ಟಿದ್ದ. ಬಂಗ್ಲಾ ಪ್ರಜೆಗಳನ್ನು ಒಂಟಿ ಲಂಗೋಟಿಯಲ್ಲಿ ಭಾರತಕ್ಕಟ್ಟಿ ಅವರಿಗೆ ಅನ್ನ ಹಾಕುವ ಘೋರ ಪ್ರಾರಬ್ಧಕ್ಕೆ ಪ್ರಾಯಶ್ಚಿತ್ತವಾಗಿ ದೀನ ದುರ್ಬಲ ಭಾರತೀಯರು ತಮ್ಮ ರಕ್ತದ ಕಣ ಕಣಗಳನ್ನು ಇಂದಿಗೂ ತೆರಿಗೆಯಾಗಿ ಕೊಡುವಂತೆಸಗಿದ್ದ. ತಾಷ್ಕೆಂಟ್ ಒಪ್ಪಂದವನ್ನು ಮಣ್ಣಾಗೂಡಿಸಿದ್ದ. ಅದು ನಮಗಿಂದು ನೆನಪಿಲ್ಲ. ನಾವು ಕ್ಷಮಾಶೀಲರು, ಶಾಂತಿಪ್ರಿಯರು, ಸ್ನೇಹ ಪ್ರಿಯರು — ಸೌಹಾರ್ದ ಹಸ್ತರು — ನಮಗೆ ಪ್ರತಿಷ್ಠೆ ಬೇಕು. ಈ ಶಾಂತಿ ಹಸ್ತದ ಹಿನ್ನೆಲೆಯಲ್ಲಿ ಪಾಕಿನ ಅಕಾರಣ ಕದನದ ರೌದ್ರ ಶೂಲಕ್ಕೆ ಆಹುತಿಯೊದ ಬಲಿದಾನದ ಪಾಪವರಿಯದ ಯೋಧನ ಕರುಳಿನ ಕೂಗಿನ ಮೊಳಗು ಕೇಳುವವರಿದ್ದಾರೆಯೇ?

ಸಿಮ್ಲಾ ಒಪ್ಪಂದದಲ್ಲಿ-ಜೆವರು ಹರಿಸಿಗಳಿಸಿದ-ಸೇನವನ್ನು ದಾನ ಕೊಡುತ್ತಿದ್ದೇವೆ. ಕಾಶ್ಮೀರದ ಕಂಟಕವನ್ನು ಮುರಿಯಬಹುದೆಂದರೆ ಆ ತೃಪ್ತಿಯೂವರೂ ನಮಗಿದೆಯೇ? ಕಾಶ್ಮೀರದ ಜನತೆ ಕ್ರಾಂತಿಯೆಬ್ಬಿಸಲಿ-ಅದಕ್ಕೆ ನಮ್ಮ ಸಹಕಾರ ಹಸ್ತವಿದೆ ಎನ್ನುತ್ತಿದ್ದಾನೆ ಭುಟ್ಟೋ! 'ಕಾಶ್ಮೀರದ ಹುಲಿಗಳೇ, ಬಂಡಾಯವೆದ್ದು ಭಾರತದಿಂದ ಬೇರ್ಪಡಿರಿ' ಎಂದು ದೇಶ ಕ್ರಾಂತಿಯ ಕಿಡಿ ಹತ್ತಿಸುತ್ತಿದ್ದಾನೆ ಷೇಕ್ ಅಬ್ದುಲ್ಲಾ. ಕೇರ್ತಿ ಕಾಮುಕತೆಯ ಈ ಸರ್ವಾಧಿಕಾರದ ವಿರುದ್ಧ ಬಂಡೆದ್ದು, ಎಲ್ಲದಕ್ಕೂ ಪ್ರಜೆಗಳ ತೀರ್ಮಾನವೇ ಏಕಸ್ವಾಮಿತ್ವ ಪಡೆಯುವಂತಾಗಲು ನಾವು ಕಟಿಬದ್ಧರಾಗಬೇಕು.

ಅಧಿಕಾರದ ಅನೀತಿಯನ್ನು ಪ್ರಶ್ನಿಸುವವರು ಒಬ್ಬರಾದರೂ ಇದ್ದಾರೆಯೇ? ಕೇಂದ್ರದಲ್ಲಿ ಇಂದಿರಾ ಗಾಂಧಿಗೆ ಎದುರಾಡಬಲ್ಲರೆಂಬ ಅಭಿಪ್ರಾಯವಿದ್ದ ಮರಿಯಾನೆ ಕೆಂಗಲ್ ಹನುಮಂತಯ್ಯ ರೈಲ್ವೇ ಸಚಿವ ಪದವಿಗೆ ರಾಜೀನಾಮೆ ಕೊಡುವಂತಾಗಲು ಅವರು ಏನು ಅಪರಾಧ ಮಾಡಿದರು? ಕೆಂಗೆಲ್ ಹೋದಲ್ಲೆಲ್ಲ ಮಂಗಳ ಮಾಡಿದುದೇ? ಅವರು ರೈಲ್ವೇ ಖಾತೆ ವಹಿಸಿಕೊಂಡ ಮೊದಲ ವರುಷದಲ್ಲೇ ಹಿಂದಿನಿಂದಲೇ ಭಾರೀ ನಷ್ಟದ ಜಾಗತಿಕ ದಾಖಲೆ ಸ್ಥಾಪಿಸಿದ್ದ ರೈಲ್ವೇಯ ಇತಿಹಾಸದಲ್ಲಿ ಆದಾಯದ ಹೊಸ ಅಧ್ಯಾಯ ಬರೆಯಿದೆ? ಆಳುವ ಪಕ್ಷ ಪರಾಮರ್ಶಿಸಲಿ. ಹನುಮಂತಯ್ಯ ಕನ್ನಡಿಕ್ಕೆ ಬಹಳ ಒಳ್ಳೆಯದು ಮಾಡಿದ್ದರು. ಕಂನಾಡಿಗೆ ಹೆಮ್ಮೆಯ ಕಾಣಿಕೆ. ವಿಧಾನ ಸೌಧದ-ಮೂಲ ಪ್ರಯತ್ನ ಯಾರದು? ಒಂದು ವಿಚಾರಣೆಯಿಲ್ಲದೆ, ಆರೋಪವಿಲ್ಲದೆ ತವರನ್ನು ಕೇಳಬೇಕಾದರೆ ಒಬ್ಬನಿಗೆ ಮೂಡುವ ಪ್ರತ್ಯಕ್ಷ ಅಪವಾನವಲ್ಲವೇ? ಒಬ್ಬನನ್ನು ಜೀವಂತವಾಗಿರುವಾಗ ಗೆರಗಸದಿಂದ ಕೊಯ್ದುಂತಲ್ಲವೇ? ಓ ನಿರ್ವೀರ್ಯ ಭಾರತೀಯ, ಈ ಜೆಟ್ಟುಗಳಿಂದಲೂ ನಿನ್ನ ಸ್ವಾಭಿಮಾನ ಕೆರಳದೇ? ಆತ್ಮ ವಿಶ್ವಾಸ-ಭವ್ಯ ಪರಂಪರೆಯ ಸಿಡಿಗೊಂಡು ಪುಟಿಯುವುದಿಲ್ಲವೇ?

ನಮ್ಮ ಗೌರವ ಪ್ರತಿಜ್ಞೆಗಳು ಮಣ್ಣಾಗೂಡಿ, ದೇಶದ ಭವಿಷ್ಯದ ಹೊನಲು ಕಗಾಳತೆಯ ಘೋರಾಂಧಕಾರದಲ್ಲಿದೆ. ಇಹಂ ಭಾವಿ, ದುರಹಂಕಾರಿ ವಿಚ್ಛಿದ್ರಕಾರಕ ಬೇತಾಳ ಮಂತ್ರಿಗಳು ಅವರ ಪರಿಸರದಲ್ಲಿ ಸುಡುಗಾಡಿನ ಪಿಶಾಚಿಗಳಂತೆ ಬಾಯಿಗೆ ಬಂದಂತೆ ಅಡಿತ್ತಿದ್ದರೂ ಕೇಳುವವರಿಲ್ಲ. ಭಾರತದ ಪಂಚಕಲ್ಯಾಣಿ ಕುದುರೆಗಳೆಲ್ಲಾ ಇಂದು ಕೆಸರು ತಿನ್ನುವ ದರಿದ್ರ ಕತ್ತೆಗಳಾಗಿ ಹೋಗಿವೆ. ವೀರ ಭಾರತದಲ್ಲಿ ಇಂದು ಬುದ್ಧಿ ಜೀವಿಗಳ ಅಭಾವವಾಗಿದೆ. ಈ ಕತ್ತೆಗಳಿಗೆಲ್ಲಾ ಒಂದು ಕಡಿವಾಣ ಹಾಕಿ, ಸಚಿವ ಸಂಪುಟದಲ್ಲಿ ತುಂಬಿರುವ ಹುಚ್ಚು ನಾಯಿಗಳನ್ನು ಹೊಡೆದೋಡಿಸುವ ಜಾಣರು ಅವಿರ್ಭವಿಸಲಿ.

—ಶ್ರೀ ಪ. ರಾಮಕೃಷ್ಣ ಶಾಸ್ತ್ರಿ.

●

ಭದ್ರಾ ಕಾಲೇಜು ವಿದ್ಯಾರ್ಥಿ ಸಂಘ ಪ್ರನುಖ ದ್ವಯರಿಗೆ ಸನ್ಮಾನ

ಭದ್ರಾವತಿಯ ಭದ್ರಾಕಾಲೇಜು ವಿದ್ಯಾರ್ಥಿ ಸಂಘವತರು ತಾ. 16ರಂದು ಭದ್ರಾ ವಿದ್ಯಾಸಂಸ್ಥೆಯ ಅಧ್ಯಕ್ಷ ಶ್ರೀ ಕೆ. ಎಂ. ಜವರಯ್ಯನವರ ಅಧ್ಯಕ್ಷತೆಯಲ್ಲಿ ಜರಗಿದ ವಿಶೇಷ ಸಮಾರಂಭದಲ್ಲಿ ಭದ್ರಾವತಿ ನಗರ ಹಾಗೂ ತಾಲ್ಲೂಕಿನ ಸರ್ವತೋಮುಖ ಅಭಿವೃದ್ಧಿಗೆ ಚಿರಸ್ಮರಣೀಯ ಸೇವೆ ಸಲ್ಲಿಸಿದ ಶ್ರೀ ಬಿ. ಪೂಥವಾಚಾರ್ ಹಾಗೂ ಪುರಸಭೆಯ ಮೂಲಕ ಶೈಕ್ಷಣಿಕ ಅಭಿವೃದ್ಧಿಗಾಗಿ ಪಡಿಪಿಡಿದ ಶ್ರೀ ಬಿ. ಕೃಷ್ಣ ಭಟ್ ಇವರುಗಳನ್ನು ಸನ್ಮಾನಿಸಿ ಗೌರವಿಸಿದರು.

ಆರಂಭದಲ್ಲಿ ಕಾಲೇಜು ಎನ್. ಸಿ. ಸಿ. ದಳದವರು ಅತಿಥಿಗಳ ಗೌರವಾರ್ಥ ಪೆರೇಡ್ ನಡೆಸಿದರು. ಅತಿಥಿಗಳು ವಂಪನೆ ಸ್ವೀಕರಿಸಿದ ಬಳಿಕ ವಿದ್ಯಾರ್ಥಿ ಸಂಘದ ಉಪಾಧ್ಯಕ್ಷ ಶ್ರೀ ಸಿದ್ಧಯ್ಯನವರು ವಿದ್ಯಾರ್ಥಿಗಳ ಪರವಾಗಿಯೂ ಪ್ರಿನ್ಸಿಪಾಲ್ ಕೆ. ಎಂ. ನಾಯ್ಡುರವರು ಸಂಸ್ಥೆಯ ಪರವಾಗಿಯೂ ಸ್ವಾಗತಿಸಿದರು. ವಿದ್ಯಾರ್ಥಿನಿಯರಿಂದ ದೇಶಭಕ್ತಿ ಗೀತೆಗಳ ಗಾಯನದ ನಂತರ ಆಧ್ಯಾಪಕ ಶ್ರೀ ಬಿಜಾಪ್ರ ಕೃಷ್ಣಮೂರ್ತಿಯವರು ಅತಿಥಿಗಳ ಪರಿಚಯ ಮಾಡಿಸಿದರು.

ಸ್ಥಳೀಯ ಸಂಘಸಂಸ್ಥೆಗಳ ಪರವಾಗಿ ಅತಿಥಿಗಳಿಗೆ ಹೂಹಾರ ಹಾಕಲಾಯಿತು. ವಿದ್ಯಾರ್ಥಿ ಸಂಘದ ಪರವಾಗಿ ಅಧ್ಯಕ್ಷರು ಅತಿಥಿಗಳಿಬ್ಬರಿಗೆ ಖಾದಿ ಶಾಲು ಹೊದಿಸಿ ಫಲಪುಷ್ಪ ಹಾರವನ್ನು ಅರ್ಪಿಸಿದರು.

ಸನ್ಮಾನಿತರಿಬ್ಬರೂ ಸ್ವಾತಂತ್ರ್ಯ ಹೋರಾಟದ ತಮ್ಮ ಚಿರ ನೆನಪುಗಳನ್ನು ವಿವರಿಸಿ ವಿದ್ಯಾರ್ಥಿಗಳು ಶಿಸ್ತಿನ ಜೀವನ ನಡೆಸಬೇಕೆಂದೂ ಅಧ್ಯಾಪಕರೆಲ್ಲ ಗೌರವ ಭಾವನೆ ಬೆಳೆಸಿಕೊಳ್ಳಬೇಕೆಂದೂ ಉಪದೇಶಿಸಿದರು.

ಅಧ್ಯಕ್ಷರು ಮಾತಾಡಿದ ಬಳಿಕ ಶ್ರೀ ಸಿದ್ಧಯ್ಯನವರು ಕೃತಜ್ಞತೆ ಅರ್ಪಿಸಿದರು.

ಸ್ವಾತಂತ್ರ್ಯೋತ್ಸವ

ಯಲ್ಲಾಪುರ ತಾಲೂಕಿನ ಬಾಗಿನಕಟ್ಟೆ, ಕ. ಗಂ. ಪಾಲೆಯಲ್ಲಿ ಸ್ವಾತಂತ್ರ್ಯೋತ್ಸವಕ್ಕೆ ಅಂಗವಾಗಿ ಗ್ರಾಮೋದಯ ಯುವಕ ಸಂಘ ಹಾಗೂ ಶಾಲಾ ಅಭಿವೃದ್ಧಿ ಸಮಿತಿಯ ಸಂಯುಕ್ತ ಆಶ್ರಯದಲ್ಲಿ ವಿವಿಧ ಕಾರ್ಯಕ್ರಮವನ್ನು ಆಚರಿಸಲಾಯಿತು. ದಿನಾಂಕ: 14-8-72ರ ರಾತ್ರಿ ಸ್ವಾತಂತ್ರ್ಯ ಯೋಧರಾದ ಶ್ರೀ ಎನ್. ಎಸ್. ವೈದ್ಯ ದಂಪತಿಗಳ ಜೀವನ 'ಡಾಕ್ಟರ್ ದಂಪತಿಗಳ ಮಹಾಪುರುಷರ ಸರ ಸಡದೇಲಿ' ಎಂಬ ಉಪನ್ಯಾಸವನ್ನಿತ್ತರು. ಸ್ವಾತಂತ್ರ್ಯ ಯೋಧರಾದ ಶ್ರೀ ಪಿ. ಎಸ್. ಬಾಗಿನಕಟ್ಟೆ ಇವರು ಅಧ್ಯಕ್ಷತೆ ವಹಿಸಿದ್ದರು. ಸಾಯಂಪ್ರಕಾಲ ಕಾರ್ಯಕ್ರಮವನ್ನು ಕೊಡಸ್ತ ಡೆಸಲಾಯಿತು.

ತಾ. 15-8-72ರ ಬೆಳಗ್ಗೆ ಶ್ರೀ ಎನ್. ಎಸ್. ವೈದ್ಯ ಬರೆದಿಟ್ಟ ಇವರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯ ಯೋಧರಾದ ಶ್ರೀಮತಿ ಪಿ. ಎಸ್. ಭಟ್ಟ ಹಾಗೂ ಶ್ರೀ ಎನ್. ಎಸ್. ವೈದ್ಯ ಇವರನ್ನು ಗ್ರಾಮೋದಯ ಯುವಕ ಸಂಘದ ಪರವಾಗಿ ಸತ್ಕರಿಸಲಾಯಿತು. ಸ್ವಾತಂತ್ರ್ಯ ದಿನಾಚರಣೆಯ ಪ್ರಾಸಂಗಿಕವಾಗಿ ಆರಂಭದ ಮಕ್ಕಳಿಗೆ ಜನ್ಮದ ತಾಯಿ ಕುಳಿತು ಶ್ರೀ ಜಿ. ವಿ. ಗಾಂಧಾರೆ, ಶ್ರೀ ಟಿ. ವಿ. ಕೋನೂರ ಮೊದಲಾದವರು ಸೂತಾಡಿದರು. ಪ್ರಾರಂಭದಲ್ಲಿ ಸಂಘಟಕ ಕಾರ್ಯದರ್ಶಿ ಶ್ರೀ ಟಿ ವಿ. ಕೋನೂರ ಸ್ವಾಗತ ಬಯಸಿದರು. ಕೊನೆಯಲ್ಲಿ ಶಾಲಾ ಸಹ ಮಾ. ಶ್ರೀ ಆರ್. ಎಚ್. ನಾಯ್ಕರು ಆಧಾರ ಹುನ್ನಿಸಿದರು.

ಶಿರ್ವ ರೋಟರಿ ಕ್ಲಬ್‌ಗೆ ಸಂದರ್ಶನ

ರೋಟರಿ ಗವರ್ನರರ ಗ್ರಾಮ್ ವಿಸ್ಟ್ ಅಫಿಶಿಯಲ್ ವಿಸಿಟ್ ರೊ| ಡಾ। ಬಿ. ಬಿ ಹೆಗ್ಡೆ ಉಡುಪಿ ರೊ| ಎ. ನಾರಾಯಣ ರಾವ್ ಮತ್ತು ರೊ| ಅಬ್ದುಲ್ ಖಾದರ್ ಯುಸೂಫ್‌ರವರೊಂದಿಗೆ ತಾ. 19-8-72ರಂದು ಶಿರ್ವ ರೋಟರಿ ಕ್ಲಬ್ಬಿಗೆ ಸಂದರ್ಶನನಿತ್ತು ಕ್ಲಬ್ಬಿನ ಪ್ರಗತಿಗೆ ಸಲಹೆಗಳನ್ನಿತ್ತರು.

ಕ್ಲಬ್ಬಿನ ಉಪಾಧ್ಯಕ್ಷ ರೊ| ಡಾ। ಕೆ. ಆರ್. ಪೆಂಕಟಕೃಷ್ಣರವರಿಂದ ಪ್ರಾರ್ಥನೆಯೊಡನೆ ಆನಂತರ ಅಧ್ಯಕ್ಷ ರೊ| ಪಿ ನಿತಲ ಶೆಣೈಯವರು ಅತಿಥಿಗಳನ್ನು ಸ್ವಾಗತಿಸಿ ಪರಿಚಯ ಮಾಡಿದರು. ರೋ| ಜೆ. ಎಸ್. ಡಿಸೋಜರು ಅತಿಥಿಗಳ ಭಾಷಣವನ್ನು ಭಾಷಾಂತರಿಸಿದರು. ಕಾರ್ಯದರ್ಶಿ ರೊ| ವಾಸುದೇವ ಶೆಟ್ಟಿ ಧನ್ಯವಾದವಿತ್ತರು.

ಶ್ರೀ ಕೆ. ಕೆ. ಶೆಟ್ಟಿ ಎಂ. ಪಿ., ಅವರ ಪುಸ್ತಕಗಳು

ಕುಶಲವ	(ನಾಟಕ)	0-50
ಸಂಶಯ ಪಿಶಾಚಿ	,,	0-75
ವ್ಯಭಿಚಾರಿಣಿ ಯೊರು	,,	1-00
ದೇಶಭಕ್ತ	,,	1-25
ಪ್ರೇಮ ವಿಜಯ	,,	1-00
ಚಿತ್ರಾಂಗದೆ	,,	0-00
ಹೆಂಡ್ತಿ ಗೆಂಪನಾದರೆ (ಪ್ರಹಸನ)		0-25
ಪುರುಷನಭು		0-25
ಮುಂದಿನ ದೇವರು (ಪ್ರಹಸನ)		0-25
ಸನ್ಯಾಸಿಯ ಸೋಗಿನಲ್ಲಿ (ಕಥೆ)		0-75

ವಿ. ಪಿ. ಮಾಡುವುದಿಲ್ಲ; ಪ್ರಶ್ನೆಯ ಜೆತೆಯೊಂದಿಗೆ 0-50 ಪೈಸೆ ಹೆಚ್ಚುವರಿ ಕಳಿಸಿ ಮುಂಪಾರ್ವರು ಮಾಡಿದರೆ ಪುಸ್ತಕವನ್ನು ಟಾಕ್ ಪೋಸ್ಟ್ ಮೂಲ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್)
ಉಡುಪಿ, ದ. ಕ.

ಚಂದಾದಾರರಲ್ಲಿ ವಿನಂತಿ

ಇದೇ ಅಗೋಸ್ತು ತಿಂಗಳಾತ್ಯಕ್ಕೆ 'ನವಯುಗ'ದ 31ನೆಯ ವರ್ಷ ಮುಗಿದು ಸಪ್ಟಂಬರ ತಿಂಗಳಿಂದ 32ನೆಯ ಹೊಸ ವರ್ಷಾರಂಭವಾಗುತ್ತದೆ. ಚಂದಾ ಅವಧಿ ಮುಗಿದ ಚಂದಾದಾರರೂ ಚಂದಾ ಬಾಕಿ ಇರುವವರೂ ದಯಮಾಡಿ ತಮ್ಮ ಬಾಕಿಯನ್ನು ಅದಷ್ಟು ತ್ವರಿತವಾಗಿ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ಅಪೇಕ್ಷಿಸುತ್ತೇನೆ. ಚಂದಾಹಣವನ್ನು ಮನಿಯಾರ್ಡರು ಮೂಲಕ, ಯಾ ಇಂಡಿಯನ್ ಪೋಸ್ಟಲ್ ಆರ್ಡರು ಮೂಲಕ ಕಳಿಸಬಹುದು ಇಲ್ಲವೆ ಸಿಂಡಿಕೇಟ್ ಬ್ಯಾಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಪಾವತಿ ಮಾಡಬಹುದು. ಹಾಗೆ ಪಾವತಿ ಮಾಡುವಾಗ ತಮ್ಮ ಚಂದಾ ನಂಬ್ರ ಮತ್ತು ವಿಳಾಸವನ್ನು ತಿಳಿಸಬೇಕಾಗಿ ಕೋರುತ್ತೇವೆ.

ಅಂತೂ ಚಂದಾಹಣವು ಸಕಾಲದಲ್ಲಿ ಪಾವತಿಯಾಗದಿದ್ದರೆ ಸಪ್ಟಂಬರದಿಂದ ಕ್ರಮಶಃ ವಿ. ಪಿ. ಮಾಡುತ್ತೇವೆ. ದಯಮಾಡಿ ಅದನ್ನಾಹರೂ ಸ್ವೀಕರಿಸಿ ಹಣ ಪಾವತಿ ಮಾಡುವಂತೆ ವಿನಂತಿ.

ಮೆನೇಜರ್.

ಉರುಡು ಕಾಂಚಾಣ —

ಧಾರಣೆ ಏರಿದ್ದು ಕಡಮೆ- ಇಳಿದದ್ದು ಹೆಚ್ಚು

ಸರಕಾರ ಆಹಾರ ಧಾನ್ಯಗಳ ಉತ್ಪತ್ತಿಯ ಸಂಗ್ರಹಣೆಯನ್ನು ತಡೆಯಲು ಧಾಳಿ ಮಾಡಿಸಿದ್ದರಿಂದ ಬಹಿರಂಗ ಮಾರುಕಟ್ಟೆಯಲ್ಲಿ ಧಾರಣೆವಾಸಿ ಇಳಿದಿದೆಯೆಂದು ಮುಖ್ಯ ಮಂತ್ರಿ ದೇವರಾಜ ಅರಸು ನುಡಿದಿದ್ದಾರೆ.

— ಹೀಗೆ ನುಡಿಯುವಾಗ ಅವರ ತುಟಿಗಳ ಮೇಲೆ ಮುಗುಳ್ನಗೆಯಿತ್ತೋ ಇಲ್ಲವೋ ಎಂದು ನರದಿಯೂಗಿಲ್ಲ. ಪ್ರಾಯಃ ಅವರ ತುಟಿಗಳ ನಡುವಣಿಂದ ದಂತಪಂಕ್ತಿ ಕಾಣಿ ಹೊರಹೊಮ್ಮಿರಲೇ ಬೇಕು.

—ಶ್ರೀ ಅರಸು ಸಾಮಾನ್ಯವಾದ ಹಲವು ಸಾಧನೆಗಳನ್ನಿಡಿದು ಒಂದು ಮಹಾ ಸಾಧನೆಯೇ ಎಂದು ಅರಸು ಪರರು ಜಯಕಾರ ಮಾಡಬೇಕು.

—ಇದೇನು ನುಡಿಯಾ? ಧಾರಣೆವಾಸಿ ಏನೋ ಕತ್ತೋ ಸೈದೆ ಕೆಲೋಗೆ ಇಳಿಮಿತಿಂದಲೆ. ಇದೇತಕೆ ಸಾಧನೆ? ಒಂದೂಕಾಲು ರೂಪಾಯಿಗೆ ಕೆಲೋ ಇದ್ದದ್ದು ಒಂದೊಪ್ಪುಕ್ಕಾಲು ರೂಪಾಯಿಗೆ ಕೆಲೋ ಆಯಿತೆಂದರೆ. ಬೆಲೆ ಇಳದದ್ದೆಷ್ಟೆ ಎಂದು ಅವರ ವಿಶೋಧಿ ಶ್ರೀನಾಮಸ್ಥರು ಅನಮೂಧಾನ ಸೂಚನೆ ಬಡಿದು.

—ನಮ್ಮನ್ನು ಕೇಳುವುದಾದರೆ. ಇವರಿಗೆ ಅರ್ಥಶಾಸ್ತ್ರದ ಅಆಇ ಯೂ ಗೊತ್ತಿಲ್ಲ. ಸಂಖ್ಯಾಶಾಸ್ತ್ರದ ಗಂಧಗಾಳಿಯೂ ಇವರಿಗಿಲ್ಲ. ಜೋಕೆಂತ ಕೇಳುತ್ತೀರಾ?

—ಧಾರಣೆ ಏರಡು ರೂಪಾಯಿ ಕೆಲೋ ಏಂಕ ಒಂಭೂಮುಕ್ಕಾಲಿಗೆ ಕೆಲೋ ಆಗಿ ಇಳಿದಿರಬಹುದು. ಅಂದರೆ, ಒಂದೂಕಾಲಿಂದ ಏರಡಕ್ಕೆ ಏರಿ ಒಂದೂಮುಕ್ಕಾಲಕ್ಕೆ ಬಂದು ನಿಂತಿತು. ಅಂದರೆ ಏರಿದ ಧಾರಣೆಯಲ್ಲಿ ಸೇ. ೬೭.೬ ಹಾಗೆಯೇ ಉಳಿದಿದೆಯೆಂದು ಅವರು ತಪ್ಪು ತಿಳಿದಿದ್ದಾರೆಂದು ವಿಷಾದದಿಂದ ಜೇಳಬೇಕಾಗುತ್ತದೆ.

—ಒಂದು ವೇಳೆ ಸರಕಾರ ಧಾಳಿಮಾಡದೆ ಇರುತಿದ್ದರೆ ಏರಡೇ ರೂಪಾಯಿಗಳಿಗೆ ಕೆಲೋ ಹೊರಿಯುತಿತ್ತು ಎಂದು ನಂಬಲೆಕ್ಕಾಚಾರ ಮಾಡುವ ಇವರನ್ನು ಮಂಡಬರಿಸ್ಸಲೇ ಬೇಕಾದೆ?

—ಧಾರಣೆವಾಸಿ ಏರುವುದು ೧ – ಪಿ. – ೬ – ೯ – ೧೯ – ಈ ಪ್ರಮಾಣದಲ್ಲಿ ಇಳಿಯಬವುದು ೧ – ೨ – ಪಿ – ೪ ಈ ಪ್ರಮಾಣದಲ್ಲಿ ಎಂಬುದನ್ನು ನಮ್ಮ ಗಾಲ್ಕು ಸಂಖ್ಯಾಶಾಸ್ತ್ರಜ್ಞರು ಮೂರು ಗಾರ್ಡಿಕೆ ಜೋಡಿಸಿಗಳು ಸಾಧಿಸಿ ತೋರಿಸಿವೆ.

—ಹಾಗಿರುವಾಗ, ಸರಕಾರದ ಧಾಳಿ ನಡೆಯದಿರುತ್ತಿದ್ದರೆ, ಕೆಲೋ ಏರಮೂರೆರಡೂ ಆಗುತ್ತಿತ್ತು. ಈಗ ಒಂದೂಮುಕ್ಕಾಲಕ್ಕೆ ಹೊರಿಯುತ್ತವೆಂದಾದರೆ, ಕೆಲೋ ಮೇಲೆ ಏರಿದ್ದು ಐವತ್ತು ಪೈಸೆಯಷ್ಟು ಮಾತ್ರ.

—ಮೊದಲೇ ಒಂದೂಕಾಲಿದ್ದ ಬೆಲೆಯ ಏಕಿಕೆ ಈಗ ಸೇ. ೪೦ರಷ್ಟು ಮಾತ್ರ ತಾನೆ?

—ಒಂದೊಮ್ಮೆ ಸರಕಾರ ಧಾಳಿ ಕೈಕೊಳ್ಳದೆ ಹೋಗಿದ್ದರೆ, ಈ ಏರಿಕೆ ಸೇ. ೧೦೦ ರಷ್ಟು ಆಗುತ್ತಿತ್ತು ಎಂಬಾಗ ಇಳಿದ ಧಾರಣೆ ಸೇ. ೬೦ಆಯ್ತು ತಾನೆ?

—ಸೇ. ೬೦ರಷ್ಟು ಧಾರಣೆವಾಸಿ ಇಳಿಸಿದ ಸರಕಾರಕ್ಕೆ ಜಯಕಾರ ಹಾಕದೆ ಮತ್ತಾರು ಧಾರಣೆ ಏರಿಸಿದ ವರ್ತಕರಿಗೆ ಹಾಕುವುದೇನು ?

—ಈ ಮಹಾ ಸಾಧನೆಯನ್ನು ಕಡೆಗಣಿಸುವವರು ಅರಸು ಸಂಪುಟದ ಪ್ರಗತಿ ವಿರೋಧಿ ಗರ್ಭಗುಡಿ ಹತಾರೋ ಪ್ರಿಯತೆ, ಅರ್ಥಾಸಾ ಪೂರೈಕೆಯಲ್ಲಿನ ಕಳಕಳಿಯ ಕಾರ್ಯಕ್ರಮಗಳನ್ನು ಮೆಚ್ಚದವರೇ ಸರಿ

—ಸಂಪುಟದ ಸಾಧನೆಗಳಿಗಾಗಿ ಅಸೂಯೆ ಪಡುವವರೇ ಸರಿ. ಅವರು ವಕ್ಷದಲ್ಲಿ ನ್ಯರೆ. ಪಕ್ಷದ್ರೋಹಿಗಳು. ರಾಜ್ಯದವ್ಲದ್ದೆ ರೆ ರಾಷ್ಟ್ರ ದ್ರೋಹಿಗಳು.

—ಸುಗ್ಗಿಯ ಕಾಲದಲ್ಲಿ ಇದೇ ಧಾರಣೆಯನ್ನುಳಿಸಿಕೊಳ್ಳದೆ ಹೋದರೆ. ಬೇಸಾಯಗಾರರಿಗೆ ಮಹಾ ಅನ್ಯಾಯ ಮಾಡಿದಂತಾಗುತ್ತದೆ.

—ಆನ್ವರಿಂದ ಈ ವರ್ಷದ ಕ್ಲೋಜಿಂಗ್ ಗೂ ಮುಂಚಿನ ವರ್ಷದ ಓಪನಿಂಗ್‌ಗಿಂದ ಈ ವರ್ಷದ ಓಪನಿಂಗ್‌ನಿಂದ ಸೇ. ೪೦ ಹೆಚ್ಚು– ಭೈತೇ. ತೃಪ್ತಿಗೊಳ್ಳಿರಿ.

—ಆಂದರೆ. ಸೇ. ೫೦ಕ್ಕೆಂತ ಎಷ್ಟೋ ಕಡಿಮೆ. ಶ್ರೀ ನಾಮಸ್ಥರೇ, ಇದೇನೂ ಗಾಬರಿಯ ಸಂಗತಿಯಲ್ಲ.

●●

ಹೆಗ್ಗ ಅಗ್ರಹಾರ ವಿಷ್ಣುಮೂರ್ತಿ

(ಹೊಯ್ಸಳ ಶಿಲ್ಪ)

"ಕಳೆದ ಒಂದು ಶತಕದಿಂದ ದಕ್ಷಿಣ ಕನ್ನಡ ಚಿತ್ರಿಯಲ್ಲಿ ಸ್ಪಂದೇಶಕಾಗಿ ಹೇಳಬಲ್ಲ ಒಂದು ಹೊಯ್ಸಳ ಶಿಲ್ಪವನ್ನು ಕಂಡು ಹುಡುಕಬೇಕೆಂದು ಜಿಲ್ಲೆಯ ಹಲವಡೆ ಹುಡುಕಿದ್ದೆವು. ಆದರೆ ಅಂತಹ ಒಂದು ಶ್ರೇಷ್ಠ ಶಿಲ್ಪವು ಉಪಯೋಗಿಸಲಪಡೆ ಇದೆ ಎಂಬ ಕಲ್ಪನೆ ಸಹ ಹಾ ೨೦.೬.೭೨ರ ತನಕ ನನಗಾಗಲಿಲ್ಲ ತಾ. ೨೦ರಂದು ಮಧ್ಯಾಹ್ನ ಪರ್ಕಳದ ಸಮೀಪದಲ್ಲಿರುವ ಅಗ್ರಹಾರ ಪಿಲ್ಲಮೂರ್ತಿ ದೇಗುಲವನ್ನು ಸಂದರ್ಶಿಸಿದೆ. ಶಿಲ್ಪ ವೈಭವ ಮತ್ತು ಪಾಸ್ಪರ ದೃಷ್ಟಿಯಿಂದ ಪರೀಕ್ಷಿಸಿದಾಗ ಈ ಮೂರ್ತಿಯು ಹೊಯ್ಸಳರ ಕಾಲದ 'ಪಿಲ್ಲಿ' ಬಿಂಬವೆಂಬುದು ನ್ಪಷ್ಟವಾಯಿತು. ಈ ಮೂರ್ತಿಯು ೪½' ಎತ್ತರವಾಗಿದ್ದು ವೇಣಾಲಯದ ಮೂಲಸ್ಥಾನದಲ್ಲಿ ಪ್ರತಿಷ್ಠಾಪಿಸಲ್ಪಟ್ಟಿದೆ. ವಿಷ್ಣುಮೂರ್ತಿ ಎಂಬ ಹೆಸರಿನಿಂದ ನೂರಾರು ಮೂರ್ತಿಗಳು ಜಿಲ್ಲೆಯ ದೇವಾಲಯಗಳಲ್ಲಿರುವುದಾದರೂ ಶಾಸ್ತ್ರೀಯವಾಗಿ ಅವು ಜನಾರ್ಧನ ಮೂರ್ತಿಗಳಾಗಿವೆ. ಸದ್ಯ, ಶಂಖ, ಚಕ್ರ, ಗದಾಧಾರಿಯೂದ ಭೂಸುತ್ತು ಶ್ರೀಯನ್ನು ಬೆರೆಸಿಕೊಂಡು ಪ್ರಭುವಿನೆಯಲ್ಲಿ ವಿಶಾಸಕಾರದ ಇರ್ದೇವನುವುಳ್ಳ ಈ ಮೂರ್ತಿಯು ಕ್ರಿ. ಶ. 1150-1200ರ ಕಾಲದ ಶಿಲ್ಪವಾಗಿದೆ. ಈ ಅಗ್ರಹಾರ ಹೊಯ್ಸಳರ ಕಾಲದ ಬ್ರಾಹ್ಮಣ ಕೇಂದ್ರವೆನ್ನುವುದು ವಿದಿತವಾಗುತ್ತದೆ. ಬೈಂದೂರು ಸೇನೇಶ್ವರ ದೇವಾಲಯದ ಶಿಲ್ಪವು ಹೊಯ್ಸಳ ಶಿಲ್ಪವೆನ್ನುವಂತಿದ್ದರೂ ಅದು ಕಲ್ಯಾಣಿ ಚಾಲುಕ್ಯರ ಕಾಲದ್ದಾಗಿದೆ. ಗಿಳಿಯೂರು ವಿಷ್ಣುಮೂರ್ತಿಯೂ ಕಲ್ಯಾಣಿ ಚಾಲುಕ್ಯರ ಕಾಲದ್ದಾಗಿದೆ." ಎಂಬುದಾಗಿ ಶಾ. ಪಿ. ಸುಬ್ರಾಯ ಭಟ್ಟರು ಪತ್ರಿಕಾಕರ್ತರೊಡನೆ ಮಾತನಾಡುತ್ತ ತಿಳಿಸಿದರು.

ರೈಲ್ವೇ ಸಚಿವ ಶ್ರೀ ಟಿ. ಎ. ಪೈ ಯವರ ಜಿಲ್ಲಾ ಸಂಚಾರ

ಕೇಂದ್ರ ರೈಲ್ವೇ ಸಚಿವ ಶ್ರೀ ಟಿ. ಎ. ಪೈ ಯವರು ಸೆಪ್ಟೆಂಬರ 12ರಂದ 19ರ ವರೆಗೆ ಉ. ಕ. ಮತ್ತು ದ. ಕ. ಜಿಲ್ಲೆಗಳಿಗೆ ಭೇಟಿ ನೀಡಲಿದ್ದಾರೆ. ಶ್ರೀ ಪೈಯವರು ತಾ. 9ರಂದು ದೆಹಲಿಯಿಂದ ಹೊರಟು ತಾ. 12ಕ್ಕೆ ಗೋವಾಕ್ಕೆ ಬರುವ ಅಲ್ಲಿಂದ ಉ. ಕ. ಜಿಲ್ಲೆಯ ಸಂದರ್ಶನ ಕಾರ್ಯ ಮುಗಿಸಿ ತಾ. 14ಕ್ಕೆ ಮಂಗಳೂರಿಗೆ ಆಗಮಿಸಲಿರುವರು. ಅಲ್ಲೇ ದಿನ ಸಂಜೆ 4.30 ಕ್ಕೆ ಉಡುಪಿಯಲ್ಲಿ ನಾಗರಿಕರಿಂದ ಸನ್ಮಾನ ಸ್ವೀಕಾರ.

ತಾ. 15ರಂದು ಕಾರ್ಕಳ, ಮೂಡುಬಿದಿರೆ, ಧರ್ಮಸ್ಥಳ, ಬೆಳ್ತಂಗಡಿಗಳ ಸಂದರ್ಶನ. ಸಂಜೆ ಜಂಟ್ಲಾಳದಲ್ಲಿ ವೆಂಕಟ್ರಮಣ ಸ್ವಾಮಿ ಕಾಲೇಜಿನ ಹೊಸ ಬ್ಲಾಕ್‌ಗೆ ಶಿಲಾನ್ಯಾಸ.

ತಾ. 16ರಂದು ಮುಲ್ಕಿ ಪಣಂಬೂರು ಹಾರ್ಬರ್ ಪ್ರದೇಶಗಳ ಸಂದರ್ಶನ ಸಂಜೆ ಮಂಗಳೂರು ನಗರ ಸಭೆಯ ಪೌರ ಸನ್ಮಾನ ಸ್ವೀಕಾರ. ಜಿಲ್ಲಾ ಕಾಂ. ಅಧ್ಯಯದಲ್ಲಿ ನೆಹರೂ ಮೈದಾನಿನಲ್ಲಿ ಸಾರ್ವಜನಿಕ ಸಭೆ ತಾ 17ರಂದು ಬ್ರಹ್ಮಾವರ, ಕುಂದಾಪುರ, ಗಂಗೊಳ್ಳಿ ಸಂದರ್ಶನ. ತಾ. 18ರಂದು ಪುತ್ತೂರು, ಸುಳ್ಯ ಮತ್ತು ಮಡಿಕೇರಿಗಳ ಸಂದರ್ಶನ. ತಾ. 19ರಂದು ಸುರತ್ಕಲ್ ಇಂಜಿನಿಯರಿಂಗ್ ಕಾಲೇಜಿಗೆ ಭೇಟಿ. ಮಂಗಳೂರಿಗೆ ತೆರಳಿ ಅಲ್ಲಿಂದ ಮುಂಬಯಿಗೆ ಪಯಣ

ಮಹಾಸಭೆ

ತಾ. 28-೨-72ರಂದು ಪಾದೆಬೆಟ್ಟು ಶ್ರೀ ಸುಬ್ರಹ್ಮಣ್ಯ ದೇವಸ್ಥಾನ ಜೀರ್ಣೋದ್ಧಾರ ಸಮಿತಿಯ ಸರ್ವಸಾಧಾರಣ ಸಭೆಯು ಜರಿಗಿ ದೇವಸ್ಥಾನದ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷರಾಗಿದ್ದು ಹಾಗೂ ಗೌರವ ಲೆಕ್ಕ ಪರಿಶೋಧಕರಾಗಿಸ್ಸು ಬಹುಮುಖ ಸೇವೆಯನ್ನು ಸಲ್ಲಿಸಿದ ದಿವಂಗತರಾದ ರಾಮಕೃಷ್ಣ ಭಾಗವತರ ಮತ್ತು ವಾಸು ಶೆಟ್ಟರ ಸುಗುಣಕ್ಕೂ ಮೂಡಿ ಅವರ ಆತ್ಮಕ್ಕೆ ಚಿರಶಾಂತಿ ಕೋರಲಾಯಿತು.

ಮುಂಡಿನ ವರ್ಷಕ್ಕೆ ಶ್ರೀಗಳಾದ ಪಾಂಡ್ಯಾರುಬರ್ಷಣಿ ಕೆ. ಮಹಾಬಲ ಶೆಟ್ಟಿ ಅಧ್ಯಕ್ಷರು, ಪಿ. ರಾಘವೇಂದ್ರ ಸಾಮಗ ಉಪಾಧ್ಯಕ್ಷರು, ಪಿ. ರಘನಾಯಂದ್ರೆ ಆಜಾರ್ಯ/ ಕಾರ್ಯದರ್ಶಿ, ಕರಿಯಣ್ಣ ಶೆಟ್ಟಿ, ಒಮಣ್ಣ ಶೆಟ್ಟಿ ಜೊತೆಕಾರ್ಯದರ್ಶಿಗಳು, ವೈ. ಜಗನ್ನಾಥ ಶೆಟ್ಟಿ ಕೋಶಾಧ್ಯಕ್ಷರು, ಪಿ. ನರಹರಿರಾವ್ ಪತ್ರಿಕ ಪರಿಶೋಧಕರಾಗಿಯೂ ಸರ್ವಾನುಮತದಿಂದ ಆಯ್ಕೆಯಾದರು. ಸ್ವಾಗತಸಮಿತಿಯ ಪ್ರಧಾನ ಕಾರ್ಯದರ್ಶಿ ಜಗನ್ನಾಥ ಶೆಟ್ಟಿಯವರು ಕೊನೆಯಲ್ಲಿ ವಂದನೆಗಳನ್ನರ್ಪಿಸಿದರು.

ಕನ್ನಡ ಸಾಹಿತ್ಯ ಮತ್ತು ಸ್ವಬಂಧ ಸ್ಪರ್ಧೆ

ಸ್ವಾತಂತ್ರ್ಯ ಪ್ರಬಂಧ ಸ್ಪರ್ಧೆಯ ಬಗ್ಗೆ ಜಬ್ಬಾದ ಸಂಘಟನೆಗಾಗಿ ಸಂ. ಕೈಲಿಗಿನ ಸಮಿತಿಯ ಸ್ಪರ್ಧೆಗಳನ್ನು ನಿರ್ವಹಿಸಲು ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯು ನಿರ್ಧರಿಸಿದೆ.

ಪ್ರಬಂಧ ಸ್ಪರ್ಧೆ – ಈ ಸ್ಪರ್ಧೆಗಿನ ವಿಷಯಗಳಲ್ಲಿ ಯಾವುದೇವೆಯೋ ನಿಶ್ಚಯಕ್ಕೆ ಪ್ರಾಧಿಧ್ಯವನ್ನು ಕನ್ನಡದಲ್ಲಿ, ಸಂಖ್ಯೆಯಲ್ಲಿದ್ದು 12ರಿಂದ 19ನೆ ಯಸ್ಸಿನವರಿಗೆ ಜೈಸ್ಕೂಲಿನ ಮತ್ತು, 1960ರ ಒಳಿರ ವರಿಗಿನ ವಯಸ್ಸಿನ ಕಾಲೇಜು ವಿದ್ಯಾರ್ಥಿಗಳಿಗಾಗಿ ಸ್ವಾತಂತ್ರ್ಯ ನಂತರ ಜನಿಸಿದ ಯುವಜನರಿಗಾಗಿ ಎರಡು ವರ್ಗಗಳನ್ನು ಮಾಡಲಾಗಿದೆ. ಪ್ರತಿ ವರ್ಗದ ಪ್ರಬಂಧಗಳಿಗೆ ಕ್ರಮವಾಗಿ ರೂ. 500, ರೂ. 300ರ ಪ್ರಥಮ ಮತ್ತು ದ್ವಿತೀಯ ಬಹುಮಾನಗಳಲ್ಲದೆ ಪ್ರತಿ ವರ್ಗಕ್ಕೆ ರೂ. 100ರ ಇತರ ಎಂಟು ಪುರಸ್ಕಾರ ಬಹುಮಾನಗಳನ್ನು ಕೊಡಲಾಗುವುದು.

ಪ್ರಬಂಧಗಳು 31ನೇ ಡಿಸೆಂಬರ್ 1972ರ ಒಳಗಾಗಿ ಕಾರ್ಯದರ್ಶಿ, ರಜತ ಮಹೋತ್ಸವ ಸಮಿತಿ, ಎಂ ಪಿ. ಪಿ. ಪಿ. ಸಂ 6, ಎಡ್ವರ್ಡ್ ರಸ್ತೆ, ಬೆಂಗಳೂರು— 1ಬಿ. ಇವರಿಗೆ ತಲುಪಿಬೇಕು. ತಜ್ಞರ ಸಮಿತಿಯು ಪ್ರಬಂಧಗಳನ್ನು ಪರಿಶೀಲಿಸಿ ಶಿಫಾರ್ಸು ಕೊಡಲಿದೆ. ಫಲಿತಾಂಶ ಪ್ರಕಟಣೆ 1973ರ ಜುಲೈ ತಿಂಗಳು ಮತ್ತು ಬಹುಮಾನ ವಿತರಣೆ 1973ರ ಆಗಸ್ಟ್ 15ರ ದಿನ.

1. ಸ್ವಾತಂತ್ರ್ಯ ಚಳುವಳಿಯ ಧ್ಯೇಯ ಸಾಧನೆಯಲ್ಲಿ ಪಂಡಿತ ನೆಹರೂ ಅವರ ಸೇವೆ 2. ಗಾಂಧೀಜಿಯ ದೃಷ್ಟಿ ಮತ್ತು ಸ್ವಾತಂತ್ರ್ಯ ಹೋರಾಟ, 3. ಕ್ರಾಂತಿಕಾರರು ಮತ್ತು ಸ್ವಾತಂತ್ರ್ಯ ಸಮರ, 4. ನಮ್ಮ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರ ಪಾತ್ರ. 5. ನಮ್ಮ ಸ್ವಾತಂತ್ರ್ಯ ಹೋರಾಟದಲ್ಲಿ (ಚಳವಳಿ) ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ನಾಯಕತ್ವ 6. ಭಾರತೀಯರ ಸ್ವಾತಂತ್ರ್ಯ ಹೋರಾಟವು ಸಾಮ್ರಾಜ್ಯ ಶಾಹಿ ನಿರುದ್ಧ ವಿಶ್ವದ ಹೋರಾಟದ ಅಂಗವಾಗಿದೆ 7. ಸ್ವಾತಂತ್ರ್ಯ ಹೋರಾಟದಲ್ಲಿ ಅಜಾದ್ ಹಿಂದ್ ಸೇನೆಯ ಪಾತ್ರ. 8. ಆಫ್ರೋ-ಏಷ್ಯಾ ರಾಷ್ಟ್ರಗಳ ಸ್ವಾತಂತ್ರ್ಯ ಹೋರಾಟಗಳ ಮೇಲೆ ಭಾರತದ ಸ್ವಾತಂತ್ರ್ಯ ಹೋರಾಟದ ಪ್ರಭಾವ. 9 ಸ್ವಾತಂತ್ರ್ಯ ಸಮರದಲ್ಲಿ ಕ್ವಿಟ್ ಇಂಡಿಯಾ ಚಳವಳಿಯ ಮಹತ್ವ.

ನಾಟಕ ಮತ್ತು ಕಾದಂಬರಿ

ಸ್ವಾತಂತ್ರ್ಯ ಸಮರದ ಹಿನ್ನೆಲೆಯಲ್ಲಿ ಕನ್ನಡದಲ್ಲಿ ಬರೆದಿರಬಹುದಾದ ನಾಟಕಗಳಿಗೆ ರೂ 500, ರೂ 300 ಮತ್ತು ರೂ 200ರ ಕೊಡುಗೆ ಬಹುಮಾನಗಳನ್ನು ಕೊಡಲಾಗುವುದು. ನಾಟಕಗಳನ್ನು ಕಳುಹಿಸಲು ಕೊನೆಯ ದಿನಾಂಕ 1972 ಡಿಸೆಂಬರ್ 31.

ಅಲ್ಲದೆ ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯಲ್ಲಿ ಕನ್ನಡದಲ್ಲಿ ಬರೆದ ಕಾದಂಬರಿಗೆ ರೂ. 1000ಗಳ ಬಹುಮಾನ ಕೊಡಲಾಗುವುದು. ಕಾದಂಬರಿಗಳ ಪ್ರತಿಗಳನ್ನು ಕಳುಹಿಸುವ ಕೊನೆಯ ದಿನಾಂಕ 31ನೇ ಡಿಸೆಂಬರ್ 1972.

(ವಿಯಮಗಳನ್ನು ಬರೆದು ತಿಳಿದುಕೊಳ್ಳಿಸಿ ಹುಮ.)

ರಾಘವೇಂದ್ರಾಚಾರ್ ಜಾ.ಟೀಳಿಡಾಡ್
ಪ್ರಧಾನ ಕಾರ್ಯದರ್ಶಿ
ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ
6, ಎಡ್ವರ್ಡ್ ರಸ್ತೆ, ಬೆಂಗಳೂರು-1'ಟಿ.
ಬೆಂಗಳೂರು, 15—8—72

THE PRESS
for
NEAT
CLEAR
ARTISTIC PRINTING
NAVAYUGA PRESS
Printers for—
NAVAYUGA Weekly
We undertake all kinds of Bookwork, jobwork, etc.
PROPRIETORS:
NAVAYUGA ENTERPRISE LTD.
Regd. Office: **Palukote, UDIPI, S.K.**

ಗೀತಾವಾಕ್ಯ

(ಎರಡನೇ ಪುಟದಿಂದ)

ನೋಡಬೇಕು, (ಗೀತೆ.ಅ. ೫, ಶ್ಲೋ.೧೮) ಎಂದಿದೆ. ಇಂದಿನ ಜಗತ್ತಿನ ಹೃದಯವು ಎಷ್ಟು ಸಂಕೋಚವೆಂಬುದಕ್ಕೂ, ಭಗವಂತನ ನ್ಯಾಪ್ತಿಯು ಎಷ್ಟು ವಿಶಾಲವೆಂಬುದಕ್ಕೂ ಇದೊಂದೇ ದೃಷ್ಟಾಂತವು ಸಾಕು. ಹೊಲೆಗೇರಿಯ ನಡುವೆ ಬಿಂಬಿಸುವ ರವಿಯು ಯಾವಾಗಲೂ ಹೊಲೆಯನಾಗನು. ಕಾರಣ, ಹೊಲೆಯನ ಆತ್ಮವೂ ಪರಮಾತ್ಮನಿಂದ ಚಿಗಿದ ಒಂದು ಕಿಡಿ. 'ವಾಸಾಂಸಿ ಜೀರ್ಣಾನಿ ಯಥಾ ವಿಹಾಯ–' (ಗೀತೆ. ಅ. ೨. ಶ್ಲೋ. ೨೨.) ಮೆಸ್ಸಿನ ಗೀತಾ ಶ್ಲೋಕದಲ್ಲಿ ಬ್ರಾಹ್ಮಣ ಪುತ್ತು ಹೊಲೆಯರ ರೂಪ ರೇಖೆಗಳನ್ನು ಪರಮಾತ್ಮನು ಸೂಕ್ಷ್ಮವಾಗಿ ರೇಖಿಸಿದ್ದಾನೆ. ಮುಲಿನ ಉಡುಗೆಯನ್ನು ಕಳಚಿ ಹಾಕಿ ನಿರ್ಮಲವಾದ ಉಡುಗೆಯನ್ನು ಧರಿಸಿದವನೇ ಬ್ರಾಹ್ಮಣ. ಈ ಬ್ರಾಹ್ಮಣ—ಹೊಲೆಯರ ಭೇದವು ಕೇವಲ ಜೀರ್ಣವಾಗುವ ದೇಹದ ವ್ಯತ್ಯಾಸದಲ್ಲಿ ಮಾತ್ರ. ದೇಹಾತ್ಮಗಳಲ್ಲಿ ಚಿಜ್ಞಾನಿಗಳು ದೇಹಕ್ಕೆ ಗೌಣಪ್ರಾಶಸ್ತ್ಯವನ್ನು ಕೊಡುತ್ತಾರೆ. ಅದರ ಮೇಲೂ ಸಮಾಜಕ್ಕೆ ಹೊಲೆಯನ ಹೊಲೆತನಕ್ಕಿಂತ ಬ್ರಾಹ್ಮಣನ ಹೊಲೆತನವು ತೀರಾ ಕೆಡುಕನ್ನುಂಟು ಮಾಡುವುದು. ಇನ್ನು ಚಂಡಾಲರ ಹೊಲೆತನವಾದರೂ ಅವರಿಗೆ ಸುಸಂಸ್ಕೃತರ ಅಲಕ್ಷ್ಯದಿಂದಲೇ ಪ್ರಾಪ್ತವಾದುದು. ವಾಲ್ಮೀಕಿ, ವೇದವ್ಯಾಸ, ಕಾಳಿದಾಸ—ಇವರೆಲ್ಲ ಹೊಲೆಯರಿಗಿಂತ ಖಚಿತ ಮೇಲಿನವರಲ್ಲ. ವೇದಕಾಲದಲ್ಲಿ ಶೂದ್ರನು ಮಂತ್ರ ರಚಿಸುವಷ್ಟು ಪವಿತ್ರನಾಗಿದ್ದನು. ಇನ್ನು ಮುಂದಾದರೂ ನಾವು ಅವರನ್ನು—ಸೆಮೂಜದಿಂದ ದೂರ ಒಗೆದವರನ್ನು—ಶಕ್ತಿರಕ್ಕೆ ಕಕ್ಕಿಯದಿದ್ದರೆ ಭಗವಂತನೇ ಅವನ್ನೆತ್ತಲು ಕೈಗೊಡ ಬೇಕಾಗುವುದು. ದೇವನಿಗೆ ಇವ ಬ್ರಾಹ್ಮಣ, ಇವ ಹೊಲೆಯನೆಂಬಿಲ್ಲ. ಜನರೇ ಅಂಧಶ್ರದ್ಧೆಗೆ ಜೋತು ಬಿದ್ದು ರೂಢಿಯ ದಾಸರಾಗಿ ಜನಾಂಗಕ್ಕೆ ಒಂದು ಅಂಶವನ್ನು ನಂಡು ಮಾಡುತ್ತಾ ಬಂದರೆ ದೇವ ದೇವನು ಎಷ್ಟು ದಿನ ತಾಳ್ಮೆಯನು? ಕಾಲ ಕ್ರಮೇಣ ಆವನೇ ಅವತರಿಸಿ ಹೊಲೆಯರನ್ನು ಹರಿಜನರಂತಾಗಿ ಪರಿವರ್ತಿಸಲು ಭುಷ್ಟಿ ಸದಿರನು.

ಶ್ರೀ—ಗುರುಗಳೇ ನಿಮ್ಮ ವಿಶಾಲ ಹೃದಯ–ಪವಿತ್ರ ಭಾವವು ಸಂಕೋಚ ಹೃದಯದ ಕೋಪುಟಿಗ ಜನಾಂಗಕ್ಕೆ ಹೇಗೆ ಗೊತ್ತಾಗಬೇಕು? ಕಾಯಿ ತಿನ್ನುವುದೆನ್ನು ಮರೆತು ಗರಟೆ ಹೆರೆಯುವ ಸಮಾಜಕ್ಕೆ ಹೇಗೆ ತಿಳಿಯಬೇಕು? (ಜಾನಕಮ್ಮನ ವೈ ಹೇಶ)

ಜಾ—(ಉಪಾಧ್ಯಾಯರನ್ನು ನೋಡುತ್ತಾ) ಇಂದು ಆಹಾರ ಸಾಮಗ್ರಿಗಳಾವುವೂ ಬರಲಿಲ್ಲ. ಒಳಗೆ ಒಂದು ಸೊಪ್ಪಿಗೆ ಹಾಲೂ ಇಲ್ಲ. ಒಲೆಯ ಮೇಲೆ ಎಸರನ್ನಿಟ್ಟು ಎಷ್ಟೋ ಹೊತ್ತಾಯಿತು. ನೀರು ಕುದಿದು ಬತ್ತುತ್ತಿದೆ. ಬೆಂಕಿಯನ್ನು ನೊಂದಿಸಲೇ?

ಉಪಾ—ಏನು? ಏನೂ ಬರಲಿಲ್ಲವೆ? ಹೀಗೇಕಾಯಿತು? ನನ್ನ ಅನನ್ಯ ಶರಣಾಗತಿಯಲ್ಲಿ ಏನಾದರೂ ಸ್ವಾರ್ಥದ ಸಿವುರಿದೆಯೇ (ಸ್ವಲ್ಪ ಯೋಚಿಸಿ) ಛೇ ಛೇ ಇಲ್ಲವೇ ಇಲ್ಲ.

ಶ್ಲೋ॥ ಅನನ್ಯಾಶ್ಚಿಂತಯಂತೋಮಾಂ
ಯೇ ಜನಾಃ ಪರ್ಯುಪಾಸತೇ |
ತೇಷಾಂ ನಿತ್ಯಾಭಿಯುಕ್ತಾನಾಂ ಯೋ
ಗಕ್ಷೇಮಂ ವಹಾಮ್ಯಹಮ್ ॥ ಗೀತೆ ॥

ಹಾಗಾದರೆ ಈ ಶ್ಲೋಕವು ಕೃತಕವೆ? ಅಥವಾ ನಿನ್ನಿನ ಘಟನೆಗೂ ಇಂದಿನ ಚಮತ್ಕಾರಕ್ಕೂ ಏನಾದರೂ ಸಂಬಂಧವಿರಬಹುದೆ? ಇದೂ ಅಸಂಭವ. ಅಂದ ಮೇಲೆ ಇಂದಿನ ಸಮಸ್ಯೆಗೆ ಕಾರಣವೇನಿರಬಹುದು?

ಜಾನ–ನಿನ್ನೆಯ ನಿಮ್ಮ ಪಿಕಲಾಟವೇ ಇದರ ಕಾರಣ. ದೇವರು ಮುಖಿಯುವ ಕೆಲಸ ಮಾಡಬಾರದು. ಆ ಶೂದ್ರ ಬಾಲಕನಿಗೆ ನೀರಿನಲ್ಲಿ ಮುಳುಗಿ ಸಾಯುವ ಯೋಗವಿತ್ತಾಗ, ನೀವು ಅದಕ್ಕೆ ಅಡ್ಡ ಬಂದಿರಿ.

ಉ – ಜಾನಕಿ, ಹಾಗೆನ್ನಬೇಡ. ನಮ್ಮ ಸಮಸ್ತರ ಭಾರವನ್ನು ಇಂದಿನವರೆಗೆ ಹೊತ್ತವರು ಈ ಕ್ಷೇತ್ರವಾಸಿಗಳೇ? ಇದು ನಿಜವೇ?

ಜಾ— ಲಕ್ಷಣ ನೋಡಲು ನೂಕಾಟ ವೇಕೆ? ಈಗ ಗೊತ್ತಾಗುವುದಿಲ್ಲವೇ?

ಉಪಾ — ಹಾಗಾದರೆ ಆ ಗೀತಾವಾಕ್ಯ? "ಯಾರು ನನ್ನನ್ನೇ ಗತಿಯೆಂದು ಉಪಾಸನೆ ಮಾಡುತ್ತಾರೋ, ಯಾವಾಗಲೂ ಧ್ಯಾನಿಸುವ ಅವರ ಯೋಗಕ್ಷೇಮವನ್ನು ನಾನು ವಹಿಸುತ್ತೇನೆ' ಇದರ ಅರ್ಥವೇನು?

ಜಾ–ನಿನಗೆ ಹೇಳುವಷ್ಟು ನನಗೆ ತಿಳಿವಳಿಕೆ ಇಲ್ಲ; ಆದರೆ ಪಶುಪಕ್ಷಿಗಳೂ ಸುಲಭದಿಂದ ಸಾಗಿಸುವ ಉದರ ವ್ಯಾಪಾರವನ್ನು ಪ್ರಾಣಿ ಜಗತ್ತನ್ನು ಮೀರಿದ ಮನುಷ್ಯನು ದೇವರ ಮೇಲೆ ಹೊರಿಸ ಬೇಕೆ?

ಉಪಾ– ಮನುಷ್ಯತ್ವ ವಿಂಗಡಿಸುವುದು ಪರಮಾತ್ಮತತ್ವವನ್ನು ಬಲವಾಗಿ ಅಂಟಿಕೊಳ್ಳುವುದರಿಂದಲೇ ಆಗಿದೆ. ಪ್ರಾಣಿ ಜಗತ್ತು ಇವನ್ನು ತಿಳಿಯಬೆ ಮೋಸ ಹೋಗುವುದು.

ಜಾ–ನೀವು ಪರಮಾತ್ಮನನ್ನು ನೆರೆನಂಬಿ ಈಗ ಉದ್ಧಾರವಾದುದಾದರೂ ಏನು. ಪಟ್ಟಣಿಗರ ಅಪಹಾಸ್ಯಕ್ಕೆ ಗುರಿಯಾಗುವ ಕಾಲಬಂದಿದೆ. ಈಗಲೇ ಕೆಲವರು ನಮ್ಮ ಮನೆಯ ಮುಂದೆ ನಡೆಯುವಾಗ 'ಮಿಟ್ಟಿಲ ವಿಟ್ಟಲ' ಎನ್ನುತ್ತಾರೆ. ಏಕೆ ಗೊತ್ತೆ?

ಉಪಾ—ಜಾನಕಿ, ನಿನ್ನ ಮಾತುಗಳು ನನ್ನ ತಿರಸ್ಕಾರವಲ್ಲ. ಆ ಭಗವದ್ಗೀತೆ–ಭಗವಾನ್ ಶ್ರೀ ಕೃಷ್ಣನ ತಿರಸ್ಕಾರವಾಗಿರುವುದು.

ಜಾ– ಹಾಗಾದರೆ ಪರಮಾತ್ಮನ ಭಕ್ತರಾದ ನಿಮ್ಮ ಸಂಸಾರ ಭಿಕಾರಿಗಳ ಸಂಸಾರಕ್ಕಿಂತ ಉತ್ತಮವಿಲ್ಲವೇಕೆ?

ಉ– ನಾನು ಯಾವ ವಿಷಯ–ವಸ್ತುಗಳಲ್ಲಿ ಭಿಕಾರಿಯಾಗಿದ್ದೇನೆ?

ಜಾ– ನನ್ನ ಬಾಯಿಯಿಂದಲೇ ಹೇಳಬೇಕೆ? ಈ ಮಂಗಳ ಸೂತ್ರವನ್ನು ಬಿಟ್ಟು ನನ್ನ ದೇಹದಲ್ಲಿ ಒಂದು ಗುಂಜಿ ತೂಕ ಬಂಗಾರವುಂಟೆ? ನನ್ನ ಸೀರೆ ಹೇಳಬೇಕೆ (ಕಣ್ಣಿನಲ್ಲಿ ನೀರು ತುಂಬಿಕೊಳ್ಳುವರು.)

ಉ– (ಸ್ವ)ಗೀತೆಯ ಈ ಒಂದು ವಾಕ್ಯವು ಕೃತಕವಿರಬಹುದೆ? ಯಾಕಿರಬಾರದು? ಇದು ಪ್ರಾಚೀನ ಪ್ರತಿಯನ್ನು ಸಂಪ್ರತಿಸುವ ವಿದ್ವಾಂಸನ ಕೈವಾಡವಿರಬಹುದು. ಇಂದಿನ ದೃಶ್ಯವೇ ಇದಕ್ಕೆ ಪ್ರಬಲ ಸಾಕ್ಷಿಯೂ ಆಗಿದೆ. ಗೀತೆಯಲ್ಲಿ ಇಂತಹ ಇನ್ನೆಷ್ಟು ಜಳ್ಳು ವಾಕ್ಯಗಳವೆಯೆಂದು ಸಂಶೋಧನೆ ನಡೆಸಿ ಬಿಟ್ಟರೆ ಭಾವೀ ಜನಾಂಗಕ್ಕಾದರೂ ಉಪಯೋಗವಾದೀತು. (ಉಪಾಧ್ಯಾಯರು ಆ ಲ್ಲೇ ನಾಗೊಂದಿಗೆಯಲ್ಲಿದ್ದ ಅರಿವಾಳವನ್ನು ಹಿಡಿದುಕೊಂಡು ಗೀತಾ ಪುಸ್ತಕವನ್ನು ಬಿಚ್ಚಿ 'ಅನನ್ಯಾಶ್ಚಿಂತಯಂತೋಮಾಂ..'ಎಂಬ ಶ್ಲೋಕದ ಮೇಲೆ ನಾಲ್ಕು ಬಲವಾದ ಗೆರೆ ಎಳೆದು) ಗೀತೆಯು ಜಳ್ಳುಮೂಹೊಂದು ಹಾರಿಹೋಯಿತು. ಇದೊಂದು ಶ್ಲೋಕ ಮಾತ್ರ ಧರ್ಮ ಕ್ಷೇತ್ರವಾದ ಕುರುಕ್ಷೇತ್ರದಲ್ಲಿ ಪ್ರತಿಧ್ವನಿಸಿದುದಲ್ಲ. ಜಾನಕಿ ನೀನು ನ್ನುವಂತೆ ಹೊಟ್ಟೆಯ ಪಾಡನ್ನೂ ದೇವರ ಮೇಲೆ ಹಾಕುವುದು ತೀರಾ ಹೇಡಿತನ. ನಾಲ್ಕು ಶ್ರೀಮಂತರ ಮಕ್ಕಳಿಗೆ ಹೋಗಿ ತಿರುಪೆ ಎತ್ತಿಕೊಂಡಾದರೂ ಬರುತ್ತೇನೆ. ಒಲೆಯ ಬೆಂಕಿ ನೊಂದಿಸಬೇಡ.

ವಿದ್ಯಾರ್ಥಿಗಳು–ಬೇಡ, ಗುರುಗಳೇ. ನಿಮ್ಮಂತಹ ಘನವಿದ್ವಾಂಸರೂ, ಜೀವಿತಾ ಪುರುಷರೂ ತಿರುಪೆಯೆತ್ತುವುದು ಖಾಂಭ ನೀಯವಾದುದು. ನಾನೇ ಹತ್ತಾರು ಮನೆಗೆ ಹೋಗಿ ಭಿಕ್ಷಾಟನೆ ಮಾಡಿಕೊಂಡು ಬರುತ್ತೇವೆ. ಮಾಧುಕರಿ ವೃತ್ತಿಯು ವಿದ್ಯಾರ್ಥಿಗಳಿಗೆ ಹೇಳಿದುದು.

ಉಪಾ— ಮಕ್ಕಳೇ ನನಗಾಗಿ ನೀವು ಭಿಕ್ಷಾಟನೆ ಮಾಡುವುದನ್ನು ಈ ಕಣ್ಣಿನಿಂದ ಕಾಣಲಾರೆ. ಮನುಷ್ಯನು ಎಲ್ಲಾ ಅಪ್ರಯತ್ನಪರಿಗೂ ಆಶ್ರಯ ಕೊಡಲು ಸಮರ್ಥನಾದರೇನೆ ಗೃಹಸ್ಥಾಶ್ರಮವನ್ನು ಸ್ವೀಕರಿಸಬೇಕು. ಅಬಲೆಯಾದ ನಿಮ್ಮಂತಹ ನಿರ್ಮಲ ಜ್ಞಾನೇಚ್ಛುಗಳಾದ ನಿರ್ಮಲ ಬ್ರಹ್ಮಚಾರಿಗಳನ್ನು ಪೋಷಿಸ ಬೇಕಾದುದು ನನ್ನ ಆದ್ಯ ಕರ್ತವ್ಯ. ಇದು ಅಸಾಧ್ಯವಾದಪಕ್ಷದಲ್ಲಿ ಗೃಹಸ್ಥಾಶ್ರಮಕ್ಕೆ ಅಂಜಲಿಬಿಟ್ಟು ಸನ್ಯಾಸವನ್ನು ಸ್ವೀಕರಿಸಬೇಕಾಗುವುದು.

ವಿದ್ಯಾರ್ಥಿಗಳು– ಗುರುಗಳೇ, ನೀವು ಈಗಲೇ ಸನ್ಯಾಸ ಜೀವನವನ್ನು ನಡೆಸುತ್ತಿದ್ದೀರಿ. ಇನ್ನು ಕಾನೂನಾಬೆಯುಟ್ಟು ಜುಬ್ಬ ಪಂಚೆಯಾಗಳನ್ನು ಕಳಚಿ ಗೃಹಸ್ಥಾಶ್ರಮಿಗಳಾದರೆ ಅಜ್ಜನ ಗತಿ ನಿನು? ನಷ್ಟಕ್ಕೆ ಆಶ್ರಯ ಕೊಡುವವರಾರು? ಹೆಬ್ಬಿಣದ ಕಡಲೆ ಬೊಂಬೆಗಳನ್ನು ಸುಮಜಾ ಕೊಂಡರೆ ಪ್ರತಿಮೆಗಳನ್ನಾಗಿ ಕೆತ್ತುವವರಾರು? ನೀವೇ ನಮ್ಮ ಮಾತಾಪಿತೃಗಳು. ಮಕ್ಕಳಾದ ನಾವಿರುವಾಗ ನೀವು ಇಷ್ಟೆಲ್ಲಾ ಹಚ್ಚಿಕೊಳ್ಳಬಾರದು.

ಉಪಾ– ಮಕ್ಕಳೇ, ಇಂದಿನವರೆಗೆ ನಮಗೆ ಪ್ರಸ್ಥಾನ ತ್ರಯಿಯ ಪಾಠ ಹೇಳಿದೆ. ಗೀತೆಯ ಅಕ್ಷರಕ್ಷರವನ್ನೂ ಭಗವಂತನ ಬಾಯಿಯಿಂದಲೇ ಬಂದುದೆಂದು ಸಾರಿದೆ. ಇಂದು ಅದರ ಪರೀಕ್ಷಾಕಾಲ. ನಾವು ಧರ್ಮದ ಪ್ರಭಾವವನ್ನು ಇಂತಹ ಸಂಕಟ ಕಾಲದಲ್ಲಿ ಒರೆಗೆ ಹಚ್ಚದೆ ಹೇಗಮ್ಮಜಿಗಳಾಗಿದ್ದಾಗ ಅದು ಸಾಧ್ಯವೆ? 'ನಮೇ ಭಕ್ತಃ ಪ್ರಣಶ್ಯತಿ' ಈ ಗೀತಾವಾಕ್ಯವು ಸುಳ್ಳಾದರೆ ಸತ್ಯ ಯಾವುದು? 'ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ನಾಂ ನಮಸ್ಕುರು| ಮಾಮೇ ವೈಷ್ಯಸಿ ಯುಕ್ತ್ವೈವ ಮಾತ್ಮಾನಂ ಮತ್ಪರಾಯಣಃ" ಇದು ಸುಳ್ಳಾದರೆ ಭಗವಂತನಿದ್ದುದೇ ಸುಳ್ಳು. ಪ್ರಾಚೀನ ಋಷಿ ಮುನಿಗಳ ಮಾತುಗಳೆಲ್ಲಾ ತೀರಾ ಅಸತ್ಯ! (ಉಪಾಧ್ಯಾಯರು ಜೋಳಿಗೆಯನ್ನು ಬಗಲಿಗೆ ಹಾಕಿಕೊಂಡು ಬೀದಿಗಿಳಿದರು. ವಿದ್ಯಾರ್ಥಿಗಳೂ ಜಾನಕಮ್ಮನೂ 'ಕಷ್ಟ ಕಷ್ಟ' ಎನ್ನುತ್ತಿರುವಾಗಲೇ ತೆರೆಬೀಳುವುದು)

ದೃಶ್ಯ–೩

(ಉಪಾಧ್ಯಾಯರು ಬೀದಿಯಲ್ಲಿ ಹೋಗುತ್ತಿದ್ದಾರೆ. ಸಾಹುಕಾರಪೊಟ್ಟರು ಅವರನ್ನು ಸಂಧಿಸಿ ಆಶ್ಚರ್ಯವನ್ನು ಅಭಿನಯಿಸಿ)

ಸಾಹುಕಾರರು — ಉಪಾಧ್ಯಾಯರೇ, ಈ ನಡು ಮಧ್ಯಾಹ್ನದಲ್ಲಿ ಎಲ್ಲಿಗೆ ಚಿತ್ತ ಯಿಸುವಿರಿ?

ಉಪಾ—(ಸ್ವ) ಹೇಗೆ ಇವರಿಂದನೆ ಪ್ರಶ್ನೆವಾದ ಹೊಟ್ಟೆಯ ಪಾಡನ್ನು ತೋಡಿಕೊಳ್ಳಲಿ? ನಾಲಗೆ ಹಿಂದೆ ಸರಿಯುವುದಲ್ಲ! ಹೃದಯ ನಿರ್ಬಲ್ಯದಿಂದ ವೈಚಿತ್ರವಾಗುತ್ತದಲ್ಲ! ನಾರಿದ್ರ್ಯವು ಕಷ್ಟತಮವಾದುದು. (ಪ್ರ.) ಹೊತ್ತಾರೆಯಿಂದ ಶಿಷ್ಯರಿಗೆ ಪಾಠ ಹೇಳಿ ಆಲಸ್ಯ ಬಂದುದರಿಂದ ನಾಲ್ಕು ಚೆಚ್ಚೆ ನಡೆಯುವ ಎಂದು ಬೀದಿಗಿಳಿದೆ. ಬಿಸಿಲು ವಿಶೇಷವಾಗಿದೆ.

ಸಾಹು– ನಿಮಗೂ ನಿಮ್ಮ ಗುರುಳ್ಳುಳ

HOTEL SATKAR

Boarding, Lodging & Restaurant

Behind Corporation Office,

9 Mission Road — **Bangalore—27.**

Phone No.— 1 (72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry. Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

NAVAYUGA 31—8—1972
Registered with the Registrar of News Papers for India under No. R. N. 3546/'57

REGD. No. B. G. 193
LICENCE No. 33
Licensed to Post without Prepayment

ಕ್ಕೂ ಕ್ಷೇಮ ತಾನೆ?

ಉಪಾ– ಜಿಗನೇತನ ಕೃಪಾಭಿವೃದ್ಧಿಯಿಂದ ನಿಮ್ಮಂಥವರಿಂದಲೇ ಜಗತ್ತಿನಲ್ಲಿ ಕಾಲ ಕಾಲಕ್ಕೆ ಮಳೆ ಬಂದು ಬೆಳೆ ಬೆಳೆದು ಧರೆ ಕಣಜವಾಗುತ್ತಿದೆ. (ಸ್ವ.) ಈ ಮಹಾ ವ್ಯಕ್ತಿಗಳು ಆ ಚೋರಾಲ ಬಾಲನನ್ನು ನ್ಯಾಯ ಮೂರ್ತಿಗಳಿದ್ದರೆ ಜೀನ್ಯಾಗಿತ್ತು. ಇವರ ನೋಗವ ಧೈರ್ಯ ತೇಜಸ್ಸು ಇವುಗಳೆ ಪಾಣಾಳಿ ಸುಂದಿಸ ಮೂಡಲು ಒತ್ತಾಯಿಸುವುದಿಲ್ಲ. ಮಹಾವ್ಯಕ್ತಿಗಳ ಚರಿತ್ರೆಯು ನಿಮರ್ಶನಕ್ಕೆ ತಕ್ಕುದಲ್ಲ; ಅನುಸರಣೆಗೆ ಯೋಗ್ಯವಾದುದು. (ನಾಚುಕ್ಕಾವನು ಉಪಾಧ್ಯಾಯರಿಗೆ ಅಭಿವಾದನ ಗೈದು ಮುಂದೆ ನಾಗುವನು. ಮುಂಮೊಟ್ಟ ಶ್ರೀಮಂತನು ಡೋಲಿಯಲ್ಲಿ ಬರುವನು. ಉಪಾಧ್ಯಾಯರ ಬಳಿಯಲ್ಲಿ ಡೋಲಿ ನಿಲ್ಲುವುದು. ಶ್ರೀಮಂತನು ಡೋಲಿಯಿಂದ ಹೊರಬಂದು ಉಪಾಧ್ಯಾಯರಿಗೆ ಪಾದಮುಟ್ಟಿ ನಮಸ್ಕರಿಸುವನು.)

ಶ್ರೀ.— ಮಹಾತ್ಮರೇ, ಈ ಮಟ ಮಟ ಮಧ್ಯಾಹ್ನದಲ್ಲಿ ಎಲ್ಲಿಗೆ ಗಮಿಸುವಿರಿ ?

ಉಪಾ– ನಿತ್ಯದ ಕ್ರಮವಾದ ವಿಟ್ಟಲನ ದರ್ಶನವಿನ್ನೂ ಆಗಿಲ್ಲ. ಅದಕ್ಕಾಗಿ ದೇವ ಸ್ಥಾನದ ಕಡೆಗೆ ಹೊರಟ್ಟಿದ್ದೇನೆ.

ಶ್ರೀ.— ಉಪಾಧ್ಯಾಯರೂ ಈ ವಾ ಹನದಲ್ಲಿ ಕುಳಿತುಕೊಂಡಲ್ಲಿ ನನ್ನ ಸೇವಕರು ದೇವಸ್ಥಾನಕ್ಕೆ ಮುಟ್ಟಿಸಿ ಬರುವರು.

ಉಪಾ– ಬೇಡ. ನನ್ನಂತರಿಂದ ಮನುಷ್ಯನಿಂದ ನನ್ನನ್ನು ಕೊಂಡಿಸಿಕೊಂಡು ಹೋಗಲಾರೆ.

ಶ್ರೀ– ಪೂಜ್ಯರಿಗೆ ಇಮಸಹಜ ಸ್ವಭಾವ; ಪ್ರಾಪಂಚಿಕರಿಗೆ ಜೀಳಸಿಮಿವಲ್ಲ.–(ಸ್ವ.) ಈ ಕರಡ ಕರುಣೆಯೇ ಇವರನ್ನು ಜನತೆಯಲ್ಲಿ ಕೆಳಮಟ್ಟಕ್ಕಿಳಿಸುತ್ತದೆ. ವಿದ್ವಾಂಸರಿಗೆಷ್ಟು ಗಾಂಭೀರ್ಯವಿರಬೇಕು. ! ಆದರೂ ರವಿಬೇಕು. ! ಚಿಂತಾಲ ಬಾಲಕನೊಬ್ಬನು ನಾಯುಬ್ಬಿಸ್ಸರೆ ಇವರು ತಮ್ಮ ಬಾಹ್ಯಣಿಕೆಯನ್ನು ಮರೆತು ಅವನನ್ನು ಪಡಕ್ಕೆ ಎಳೆದು ತರಬೇಕೆ ? (ಶ್ರೀಮಂತನು ಉಪಾಧ್ಯಾಯರಿಗೆ ಪುನಃ ನಮಸ್ಕಾರವನ್ನು ಸಲ್ಲಿಸಿ, ಡೋಲಿಯಲ್ಲಿ ಕುಳಿತು ಕೊಂಡಾಗ ಡೋಲಿ ನಾಗುವುದು. ಉಪಾಧ್ಯಾಯರು ಮುಂಗುವರಿಯುವರು.)

ಂ ಂ ಂ

(ಉಪಾಧ್ಯಾಯರ ಮನೆ. ವಿದ್ಯಾರ್ಥಿಗಳೆಲ್ಲಾ ಜಗಲಿಯಲ್ಲಿ ತಲೆಗೆ ಕೈಕೊಟ್ಟು ಕುಳಿತಿದ್ದಾರೆ. ಜಾನಕಮ್ಮನು ಒಳಗೆ ಹೊರಗೆ ಹೋಗಿ ಬರುತ್ತಿದ್ದಾರೆ. ಒಬ್ಬ ಸೇವಕನು ಒಂದು ದೊಡ್ಡ ಹೊರೆ ಹೊತ್ತುಕೊಂಡು, ಹೊರ ನೀಡಿದ ನಾಲಗೆಯಿಂದ ರಕ್ತವನ್ನು ತಟಕಿಸುತ್ತಾ ಮನೆಯ ಜಗಲಿಯ ಕಡೆಗೆ ಸಾಗುವನು. ಹೊರೆಯನ್ನು ಜಗಲಿಯ ಮೇಲೆ ಹಾಕುವನು.)

ಜಾನ– (ಸೇವಕನೊಡನೆ) ನಿನ್ನ ನಾಲಿಗೆಗೇನಾಯಿತಣ್ಣಾ? ರಾಮೂರುಡಿ ರಕ್ತ ಸುರಿಯುತ್ತಿದೆ! ಅಯ್ಯೋ ಪಾಪ, (ಶಿಷ್ಯರೆಲ್ಲಾ ಆ ಸೇವಕನನ್ನು ಮುತ್ತಿಕೊಳ್ಳುವರು.)

ಸೇವಕ– (ಅಸ್ಪಷ್ಟವಾಗಿ) ತಾಯಿ, ನಿಮ್ಮ ಯಜಮಾನರ ಕೆಲಸವಿದು.

ಜಾನ– (ಗಾಬರಿಯಿಂದ) ಏನು ಮಾಡಿದರು?

ಸೇವಕ– ನನಗೆ ಬಸಳ ಕೆಲಸವಿದ್ದುದರಿಂದ ನಿನ್ಮಮ್ಮನಿಗೆ ಬೇಗನೆ ಆಹಾರ ನಸ್ತು ಗಳನ್ನು ತಂದು ಹಾಕಲಾಗಲಿಲ್ಲ. ಅದಕ್ಕಾಗಿ ನಾಲಿಗೆಯನ್ನು ಸೀಳಿದರು.

ಜಾನ–ಬುಳ್ಳ. ಹೂಂ ಸುಳ್ಳು. ಇವರ ಕರುಣೆಯು ದೇವಭೂಮಿಯನ್ನೂ ದಾಟಿರುವಾಗ ಇಂಥ ಅನರ್ಥಕ್ಕೆ ಕೈ ಹಾಕುವರೆ?

ಸೇವ– ತಾಯಿ, ನಿಮ್ಮ ಕೊರಳಾಣೆ ಸತ್ಯ.

ಜಾನ– ಕಷ್ಟ. ಕಷ್ಟ ತೀರಾಕಷ್ಟ.

ಸೇವ–ತಾಯಿ. ಹೋಗಿ ಬರಲಾ? ಆ ಪ್ಪಣೆ ಕೊಡುವಿರಾ?

ಜಾನ– ಅವರು ಈಗ ತಾನೇ ಬಂದಾರು. ಅವರಿಂದಲೇ ಈ ಅನರ್ಥಕ್ಕೆ ಚಿಕಿತ್ಸೆ ಮಾಡಿಸುತ್ತೇನೆ ಸ್ವಲ್ಪ ಕೂತುಕೊ.

ಸೇನ– ಬೇಡ ತಾಯಿ. ನಿಮ್ಮ ಯಜಮಾನರನ್ನು ಕಾಣಲು ನನಗೆ ನಾಚಿಕೆಯಾಗುತ್ತದೆ. ನಾನು ನನ್ನ ಕರ್ತವ್ಯಕ್ಕೆ ಲೋಪ ತಂದವ.

ಜಾನ– ಛೀ ಛೀ ಹಾಗೆನ್ನಬೇಡ. ಒಂದು ಗಳಿಗೆ ಕಡವಾದರೆ ಕರ್ತವ್ಯಕ್ಕೆ ಲೋಪ ಬಂತೇ ? ಅದಕ್ಕೆ ಈ ಯಮಶಿಕ್ಷೆಯೇ ?

ಸೇ– ತಾಯಿ, ಬರುವೆನು. ನಿಮ್ಮ ಯಜಮಾನರನ್ನು ಕಾಣಲು ನನಗೆ ಭಯವಾಗುತ್ತದೆ.

ಜಾನ– ಈಗ ಆಡುಗೆಯಾಗುತ್ತದೆ. ಒಂದು ಮುಷ್ಟಿ ಉಂಡುಕೊಂಡಾದರೂ ಹೋಗು.

ಸೇವ– ಬೇಡ ತಾಯಿ.

ಜಾನ– ಪಾಗಾದರೆ ಸ್ವಲ್ಪ ನಿಲ್ಲು. ನಿನ್ನ ನಾಲಿಗೆಗೆ ಸ್ವಲ್ಪ ತುಪ್ಪದ ಪಸೆಯನ್ನಾದರೂ ಒರಸುತ್ತೇನೆ.

ಸೇವ– ತಾಯಿ ಪುಣ್ಯಮಯಿ, ನಿಮ್ಮ ಮಾತುಗಳು ಕಿವಿಗೆ ಎಷ್ಟು ಇಂಪಾಗಿವೆ ! ನನಗೆ ಇಂತಹ ಕಾರ್ಯಬಾಹುಳ್ಯವು ಹಲವಿವೆ ತಾಯಿ. ಇನ್ನು ಸ್ವಲ್ಪ ಆಲಸ್ಯ ಮಾಡಿದರೆ ಇನ್ನಾರಿಂದ ಯಾವ ಶಿಕ್ಷೆ ಹೊಂದ ಬೇಕಾಗುವುದೋ ?

ಜಾನ– ಹಾಪ, ಹೋಗಪ್ಪ ಹೋಗು. (ಸೇವಕನು ಹೋಗುವನು. ಜಾನಕಮ್ಮನು ಒಳಹೋಗುವರು. ಉಪಾಧ್ಯಾಯರು ಪ್ರವೇಶಿಸುವರು)

ಉಪಾ– (ಸ್ವ.) ಹೋದಂತೆಯೇ ಬರಿಗೈಯಿಂದ ಬಂದೆ. ಮುಂದಿನ ಮಾರ್ಗವು ಯಾವುದು ? ಸೂರ್ಯನು ಪಶ್ಚಿಮಕ್ಕೆ ಇಳಿಯ ತೊಡಗಿದ್ದಾನೆ. (ಮುಂದೆ ನೋಡಿ) ಜಗಲಿಯಲ್ಲಿ ಈ ಪುಟಿಯನ್ನು ಕೆಡೆದು ಹೋದವರಾರು ? (ಪ್ರ.) ಕೃಷ್ಣಾ, ಇದನ್ನಾರು ಹೊತ್ತು ತಂದರು ?

ಕೃ– ನೀವು ಕಳುಹಿಸಿದ ಸೇವಕ, ಗುರುಗಳೇ.

ಉ– ನಾನು ಕಳುಹಿಸಿದ ಸೇವಕ! ನಾನು ಯಾರನ್ನೂ ಕಳುಹಿಸಿಲ್ಲ!

ಜಾನ– (ಹೊರ ಬಂದು) ಸಾಕು, ಪೂತಾದ ಬೇಡಿ. ನೀವು ಹೀಗೆ ಪಾಷಾಣ ಹೃದಯಿಗಳಾದುದು ಹೇಗೆ?

ಉಪಾ– ಏನು? ವಿಷಯ ತಿಳಿಯಲಿಲ್ಲ.

ಜಾನ– ಸಾಕು, ನಿಮ್ಮಹಗಲು ವೇಷ! ಊಟಕ್ಕೆ ಇಷ್ಟು ಹೊತ್ತೆಂತೂ ಆಯಿತು. ಇನ್ನೆರಡು ಗಳಿಗೆಯಲ್ಲಿ ಕೆಡುವುದೇನು? ಆ ಪ್ಪಕ್ಕಾಗಿ ಆ ಆಳಿನ ನಾಲಗೆ ಸೀಳ ಬೇಕಿತ್ತೆ?

ಉಪಾ– (ಆಶ್ಚರ್ಯದಿಂದ) ಯಾವ ಆಳು? ನೀನು ಹೇಳುವುದೇನೆಂದು ನನಗೆ ಅರ್ಥವಾಗುವುದೇ ಇಲ್ಲ. ಜನರೊಡನೆ ಯೂ ಚಿಸಲು ಅಸಾಧ್ಯವಾಗಿ ಹೋದಂತೆಯೇ ನಾನು ಹಿಂದಿರುಗಿದೆ.

ಜಾ– ನಿತ್ಯವಾಗಿ?

ಉ– ಇದರಲ್ಲಿನ್ನೂ ಸಂದೇಹವೆ?

ಜಾ– (ಶಿಷ್ಯರ ಮೊಗ ನೋಡುತ್ತಾ) ಈಗ ಆ ಸೇವಕನು ಹೇಳಿ ಹೋದುದೇನು?

ಶ್ರೀ– ಆಮ್ಮನು ಹೇಳಿದ ಮಾತು ಅಕ್ಷರಶಃ ಸತ್ಯ ಗುರುಗಳೇ.

ಉ — ನಿಜವಾಗಿಯೂ ಆ ಆಳಿನ ನಾಲಗೆಯು ಸೀಳಲ್ಪಟ್ಟಿತ್ತೆ? ರಕ್ತ ಸೋರುತ್ತಿತ್ತೆ?

ಜಾ— ಕಂಡಿತವಾಗಿ. ನೋಡಿದರೆ ಜೂರಿಗೂ ಕರುಣೆ ಹುಟ್ಟುವಂತಿತ್ತು. ದೃಶ್ಯವು ಭಯಂಕರವಾಗಿತ್ತು.

ಉಪಾ– ಆತನು ಮತ್ತೇನು ಹೇಳಿದ?

ಜಾನ– ನಾನು ಅವನೊಡನೆ, ನೀವು ಬರುವವರೆಗೆ ನಿಲ್ಲುವಂತೆಯೂ, ಆವನು ನಿಮ್ಮ ಮೊಗವನ್ನು ನೋಡಲು ಇಚ್ಛಿಸಿರುವುದಾಗಿಯೂ ಹೇಳಿದೆ. ಅದಕ್ಕವನು ನಿಮಗೆ ಎಷ್ಟೋ ಕಾರ್ಯಭಾರದಿಂದ ಬಳಲಿ ಬಂದಿರುವುದರಿಂದ ಲಗುಬಗೆಯಿಂದ ಹೊರಟುಹೋದ.

ಉಪಾ– ಹಾ ಕೃಷ್ಣಾ! ಕರುಣಾ ಸಾಗರ! ಭಕ್ತ ಬಂಧು. (ನೂರ್ಧೆಹೋಗುವರು. ಜಾನಕಮ್ಮ ಮತ್ತು ಶಿಷ್ಯರು ಗಾಬರಿಗೊಳ್ಳುವರು. ಅವರೆಲ್ಲರ ಉಪಚಾರದಿಂದ ಉಪಾಧ್ಯಾಯರು ಕಣ್ದೆರೆಯುವರು.)

ಉಪಾ– ಶಿಷ್ಯರೇ, ನೀನೇ ಭಾಗ್ಯಶಾಲಿಗಳು. ಜಾನಕಿ, ನೀನೇ ಪುಣ್ಯವಂತೆ! ಆ ಮೂಟೆ ಹೊತ್ತು ತಂದವನೇ ಗೋಪಾಲನಂದನ! ನಾನು ಅವನ ದಿವ್ಯವಾಣಿಯ ಮೇಲೆ ಅರಿದಾಳಿದಿಂದ ಗಿಟ್ಟಿಳೆದು ಅತನ ನಾಲಗೆಯನ್ನು ಸೀಳುವಂತಹ ಕರಾಳ ಕಾರ್ಯಕ್ಕೆ ಕೈಹಾಕಿದೆ. ಭಗವಂತಾ, ತಿಳಿಗೇಡಿಯ ಈ ಅಕ್ಷನ್ಯ ಅಪರಾಧವನ್ನು ಕ್ಷಮಿಸು.

(ಉಪಾಧ್ಯಾಯರ ಕೊರಳು ಕಟ್ಟಿತು; ಕಣ್ಣು ಕಣ್ಣೀರಿನಿಂದ ತುಂಬಿತು. ಅವರು ನೀಲಾಕಾಶವನ್ನು ನೋಡುತ್ತಾ ಮೈಮರೆತರು. ಜಗ ಕಾರ್ಮೋಡದಲ್ಲಿ ಕಿಡಿಗೆದರುವ ಮಿಂಚಿನಂತೆ ಮಿರುಗುತ್ತಾ ಗೀತಾಮೂರ್ತಿಯು ಪ್ರತ್ಯಕ್ಷನಾಗುವನು. ಉಪಾಧ್ಯಾಯರು ಓಡಿಹೋಗಿ ಆ ದಿವ್ಯ ಮೂರ್ತಿಯನ್ನು ಆಲಂಗಿಸುವರು. ಜಾನಕಮ್ಮನು ಆ ದಿವ್ಯ ಶಕ್ತಿಯ ಪಾದಗಳ ಮೇಲೆ ತಲೆ ಇಡುವರು. ಶಿಷ್ಯರು ಶ್ರೀ ಕೃಷ್ಣನ ಯಶೋಗಾನವನ್ನು ಹಾಡುತ್ತಾ ಭಕ್ತವತ್ಸಲನ ಸುತ್ತಲೂ ಕುಣಿಯುತ್ತಿರುವಾಗ ತೆರೆ ಬೀಳುವುದು.)

ಸೂ– ಕಥಾಬೀಜವು ಕಲ್ಪಿತವಲ್ಲ ಈ ಚಿಕ್ಕ ದೃಶ್ಯವು ಕ್ರಿ. ಶ. ೧೯೧೧ರ ಆಶ್ವಿಜ ಮಾಸದಲ್ಲಿ ಧಾರವಾಡದ ಮಹಾಸಭೆಯಲ್ಲಿ ನಿಬ್ಯಾಭೂಷಣ, ವೇದಾಂತ ವಾಚಸ್ಪತಿ P. ಟಿ. D. F. R. S. A., M. R. A. S., ಳ್ ತ್ಯಾದಿ ಬಿರುದಾಂಕಿತರಾದ ಕುರ್ತು ಕೋಟಿನು ಶ್ರೀ ನುಪಾಧಾನವರು 'ಗೀತೆಯು ಕೃತಕ ಡಿಂಪನಲ್ಲ' ಎಂಬುದಕ್ಕೆ ಕೊಟ್ಟ ಉಪಾಹರಣೆಯನ್ನು ಅನುಸರಿಸಿ ಈ ಚಿಕ್ಕ ದೃಶ್ಯವನ್ನು ಬರೆದುದು. ಈ ದೃಶ್ಯದ ನಾಯಕರಾದ ನ್ರೀ ವಾ ವಿ ಪ್ಪಟೋಪಾಧ್ಯಾಯರು ಸು. ೨ ಶತಮಾನಗಳ ಈಚಿನವರು.

(ವಿಶೇಷ ಸಂಚಿಕೆಗೆ ಬಂದುದು)

ಂ ಂ

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ಸೇರಿದಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಶ್ರೀಕ್ಷೇತ್ರಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುದ್ಧ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾಶ್ಚಿಮಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

READ & ADVERTISE IN NAVAYUGA Weekly

Edited, Printed & Published by K. M. Shetty at the Navayuga Press, Udipi, S. Kanara.

KARNATAKA STATE ARCHIVES

KARNATAKA STATE ARCHIVES

ARS 34 APP 82

NAVAYUGA KANNADA WEEKLY

END

'NAVAYUGA'

KANNADA WEEKLY

FROM: 3:9:1936

TO: 31:8:1972

END

'NAVAYUGA'

KANNADA WEEKLY

FROM: 3:9:1936

TO: 31:8:1972

END

'NAVAYUGA'

KANNADA WEEKLY

FROM: 3:9:1936

TO: 31:8:1972